ಮಹೀಶೂರ

ಶ್ರೀಮನ್ಮಹಾರಾಜ

ಚಾಮರಾಜೇಂದ್ರ ಒಡೆಯರವರ

ವಂಶರತ್ನಾಕರ.

ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ.ಸಿ.ಎಸ್.ಐ.
ಯವರ ಆಜ್ಞಾನುಸಾರವಾಗಿ ಪ್ರಕಟಿಸಲ್ಪಟಿತು.

ಮೈಸೂರು; [illegible]ಲರಾ
ಅರಮನೆಯ ಜಗನ್ಮೋಹನ ಮುದ್ರಾಕ್ಷರಶಾಲೆಯಲ್ಲಿ ಮುದ್ರಿಸಲ್ಪಟ್ಟಿತು.
೧೮೯೬.

ಆಸ್ಥಾನದ ಪೂರ್ವದ ವಿದ್ವಾಂಸರು ಬರೆದು ಇಟ್ಟಿದ್ದ ಮೂಲಪ್ರತಿಯಲ್ಲಿ, ಆಳಿದ ಮಹಾಸ್ವಾಮಿಯವರಾದ ಕೃಷ್ಣರಾಜ ಒಡೆಯರವರ ರಾಜ್ಯಭಾರವು ಸಂಪೂರ್ಣವಾಗಿ ಇಲ್ಲದ್ದರಿಂದ, ಈ ಆಳಿಕೆಗೆ ಸೇರಿದ ಅನೇಕ ವಿಷಯುಗಳನ್ನು ಮೆ॥ ಬಿ. ಎಲ್. ರೈಸ, ಸಿ. ಐ. ಇ, ಯವರ ಗೆಜೆಟಿಯರಿನಿಂದ ಸಂಗ್ರಹಿಸಿ ಬರೆದು ಇದೇವೆ. ಈ ಪುಸ್ತಕವನ್ನು ಮುದ್ರಿಸುವದಕ್ಕೆ ದರಬಾರ್ ಭಕ್ಷಿಯವರಾದ ರಾಯಬಹದೂರ್ ಅಂಬಿಲ್ ನರಸಿಂಹ ಅಯ್ಯಂಗಾರ್ಯರವರು ಬಹಳವಾಗಿ ಸಹಾಯ ಮಾಡಿರುತ್ತಾರೆ. ಇದಕ್ಕಾಗಿ ನಾವು ಅವರಿಗೆ ಅತ್ಯಂತ ಕೃತಜ್ಞರಾಗಿದೇವೆ.

ಎಮ್. ಶಿ. ಕೆ. ಮತ್ತು ಎಮ್. ಎಲ್. ಏ.

ವಿಷಯ ಸೂಚಿಕೆ

೧ ನೇ ಅಧ್ಯಾಯ.

೨ ನೇ ಅಧ್ಯಾಯ.

೩ ನೇ ಅಧ್ಯಾಯ.

೪ನೇ ಅಧ್ಯಾಯ

೭ನೇ ಅಧ್ಯಾಯ.

೮ನೇ ಅಧ್ಯಾಯ.

ಪುಟಸಂಖ್ಯೆ

೯ನೇ ಅಧ್ಯಾಯ.

೧೦ನೇ ಅಧ್ಯಾಯ.

ಪುಟಸಂಖ್ಯೆ.

೧೧ನೇ ಅಧ್ಯಾಯ.

೧೨ನೇ ಅಧ್ಯಾಯ.

ಪುಟಸಂಖ್ಯೆ.



ಶ್ರೀರಸ್ತು.

ಶ್ರೀ ಮನ್ಮಹಾರಾಜ

ಚಾಮರಾಜೇಂದ್ರ ಒಡೆಯರವರ

ವಂಶ ರತ್ನಾಕರ

ಶ್ರೀಶ ಬ್ರಹ್ಮಾದಿ ಮುಖ್ಯೈಸ್ಸಕಲಸುರವರ್ಯೈ ಸ್ಸೇವ್ಯಮಾನಾಂಘ್ರಿಪದ್ಮಾ ।
ಕರ್ಣಾಟಕ್ಷೋಣಿಪಾಲಾನ್ವಯ ಜಲಧಿ ಶರಚ್ಚಂದ್ರಿಕಾ ಚಂದ್ರಭೂಷಾ ॥
ಶ್ರೀಕಂಠಾನಂದ ದಾತ್ರೀ ಶ್ರಿತಜನವರದಾ ಸಚ್ಚಿದಾನಂದರೂಪಾ ।
ಶ್ರೀಮಚ್ಚಾಮುಂಡಿಕಾಂಬಾ ಕಲಯತು ಕುಶಲಂ ಚಾಮರಾಜಕ್ಷಿತೀಂದೋಃ ॥

೧ ನೇ ಅಧ್ಯಾಯ.

ಚಂದ್ರವಂಶದ ದೊರೆಗಳು.

ಪೂರ್ವದಲ್ಲಿ ಮಹಾವಿಷ್ಣುವಿನ ನಾಭಿಕಮಲದಿಂದ ಬ್ರಹ್ಮನು ಹುಟ್ಟಿದನು. ಆ ಬ್ರಹ್ಮನಿಗೆ ಮಾನಸಪುತ್ರನಾದ ಅತ್ರಿಮುನೀಶ್ವರನ ನೇತ್ರದಿಂದ ಹುಟ್ಟಿದ ಚಂದ್ರನಿಂದ ಬುಧನು ಹುಟ್ಟಿದನು. ಆ ಬುಧನ ಪುತ್ರನಾದ ಪುರೂರವಸ್ಸಿಗೆ ಆಯುಮಹಾರಾಯನೆಂಬ ಸುತನು ಉಂಟಾದನು. ಆತನ ಪುತ್ರನಾದ ನಹುಷಮಹಾರಾಯನಿಗೆ ಯಯಾತಿರಾಯನೆಂಬ ತನುಜನು ಜನಿಸಿದನು, ಆ ಯಯಾತಿರಾಯನಿಗೆ ದೇವಯಾನಿ, ಶರ್ಮಿಷ್ಠೆ ಎಂಬ ಇಬ್ಬರು ಪತ್ನಿಯರು ಇದ್ದರು. ಅವರಿಬ್ಬರಲ್ಲಿ ದೇವಯಾನಿ ಎಂಬುವಳಿಗೆ ಯದು, ತುರ್ವಸು ಎಂಬ ಇಬ್ಬರು ಪುತ್ರರೂ, ಮಾಧವಿ ಎಂಬ ಒಬ್ಬ ಪುತ್ರಿಯೂ ಸಹ ಜನಿಸಿದರು. ಶರ್ಮಿಷ್ಠೆ ಎಂಬುವಳಿಂದ ಅನು, ದ್ರುಹ್ಯು, ಪೂರು

ಎಂಬದಾಗಿ ಮೂರು ಮಂದಿ ಪುತ್ರರು ಹುಟ್ಟಿದರು. ಆ ಮೂರನೇ ಪೂರು ಎಂಬುವನ ವಂಶದಲ್ಲಿ ಹುಟ್ಟಿದವರು ಪೌರವರು ಎಂಬದಾಗಿ ಪ್ರಸಿದ್ಧರಾಗಿ ಇದ್ದರು. ದೇವಯಾನಿಯ ಜ್ಯೇಷ್ಠಪುತ್ರನಾದ ಯದುಮಹಾರಾಯನ ಪತ್ನಿಯಾದ ಧರ್ಮವತಿಯಲ್ಲಿ ಸಹಸ್ರಜಿತ್, ಕ್ರೋಷ್ಟು, ಅನಲ, ರಿಪು, ಎಂಬದಾಗಿ ನಾಲ್ಕುಜನ ಸುತರು ಜನಿಸಿದರು. ಆ ನಾಲ್ವರಲ್ಲಿ ಎರಡನೇಯವನಾದ ಕ್ರೋಷ್ಟುಮಹಾರಾಯನಿಗೆ ವೃಜಿನವಾನ್ ಎಂಬ ಸುತನುಂಟಾದನು. ಆತನ ಪುತ್ರನಾದ ಶ್ವಾಹೀ ಎಂಬುವನಿಗೆ ರೂಪಕನೆಂಬ ಪುತ್ರನು ಉದ್ಭವಿಸಿದನು. ಆತನ ಪುತ್ರನಾದ ಚಿತ್ರರಥನೆಂಬುವನಿಗೆ ಶಶಿಬಿಂದುರಾಯನೆಂಬ ತನಯನುಂಟಾದನು. ಆ ಶಶಿಬಿಂದುರಾಯನ ಮಗನಾದ ಪೃಥುಶ್ರವಸ್ಸು ಎಂಬುವನಿಗೆ ಧರ್ಮನೆಂಬ ಮಗನು ಹುಟ್ಟಿದನು. ಆತನ ಪುತ್ರನು ಉಶನಸ್ಸು. ಈತನಿಗೆ ಸಿತನೆಂದು ನಾಮಾಂತರ ಉಂಟು. ಆ ಸಿತನ ಪುತ್ರನು ರುಚಕನು. ಆ ರುಚಕನ ಪುತ್ರನು ರುಕ್ಮಕವಚನು. ರುಕ್ಮಕವಚನ ಮಗನು ಪರಾಜಿತ್ ಎಂಬುವನು. ಆ ಪರಾಜಿತ್ ಎಂಬುವನ ಸುತನು ಜ್ಯಾಮಘನು. ಆತನ ಸುತನು ವಿದರ್ಭನು. ಆ ವಿದರ್ಭನ ತನಯನು ಕ್ರಥನು. ಕ್ರಥನ ಪುತ್ರನು ಕುಂತಿಭೋಜನು. ಆ ಕುಂತಿಭೋಜನ ಮಗನು ವೃಷ್ಣಿ ಎಂಬುವನು. ಆತನ ಪುತ್ರನು ನಿರ್ವೃತಿಯು. ಆತನ ಪುತ್ರನು ದಶಾರ್ಹನು. ದಶಾರ್ಹನಿಂದ ವ್ಯೋಮಕನು. ವ್ಯೋಮಕನಿಂದ ಜೀಮೂತನು. ಜೀಮೂತನಿಂದ ವಿಕೃತಿಯು. ವಿಕೃತಿಯಿಂದ ಭೀಮರಥನು. ಭೀಮರಥನಿಂದ ನವರಥನು. ನವರಥನಿಂದ ದಶರಥನು. ದಶರಥನಿಂದ ಶಕುನಿಯು. ಶಕುನಿಯಿಂದ ಕರಂಭಿಯು. ಕರಂಭಿಯಿಂದ ದೇವರಾತನು. ದೇವರಾತನಿಂದ ದೇವಕ್ಷತ್ರನು. ದೇವಕ್ಷತ್ರನಿಂದ ಮಧು ಎಂಬುವನು. ಮಧು ಎಂಬುವನಿಂದ ಕುಕುರನು. ಕುಕುರನಿಂದ ಅನು ಎಂಬುವನು. ಅವನಿಂದ ಪುರುಹೂತನು. ಪುರುಹೂತನಿಂದ ಅಂಶನು. ಆ ಅಂಶನಿಂದ ಸಾತ್ವತನು. ಸಾತ್ವತನಿಂಧ ಭಜಮಾನನು. ಭಜಮಾನನಿಂದ ವಿಡೂರಥನು. ಆತನಿಂದ ಶೂರಾಗ್ರನು. ಶೂರಾಗ್ರನಿಂದ ಶಮಿ. ಶಮಿಯಿಂದ ಪ್ರತಿಕ್ಷತ್ರನು. ಪ್ರತಿಕ್ಷತ್ರನಿಂದ ಸ್ವಯಂಭೋಜನು. ಸ್ವಯಂಭೋಜನಿಂದ ಹೃದೀಕನು. ಹೃದೀಕನಿಂದ ದೇವಮೀಢನು. ದೇವಮೀಢನಿಂದ ಶೂರನು. ಶೂರನಿಂದ ವಸು



ದೇವನು. ಆ ವಸುದೇವನ ಪತ್ನಿಯಾದ ದೇವಕೀದೇವಿಯು ಗರ್ಭದಲ್ಲಿ ಶ್ರೀಕೃಷ್ಣನು ಅವತರಿಸಿದನು. ಆ ಕೃಷ್ಣನ ಪಟ್ಟಮಹಿಷಿಯರಲ್ಲಿ ಮುಖ್ಯೆಳಾದ ರುಕ್ಮಿಣೀದೇವಿಯಲ್ಲಿ ಪ್ರದ್ಯುಮ್ನನು ಜನಿಸಿದನು. ಆ ಪ್ರದ್ಯುಮ್ನನ ಪುತ್ರನು ಅನಿರುದ್ಧನು. ಅನಿರುದ್ಧನ ಮಗನು ವಜ್ರನು. ಆ ವಜ್ರನ ಸುತನು ಪ್ರತಿಬಾಹು ಎಂಬುವನು. ಪ್ರತಿಬಾಹುತನಯನು ಸುಬಾಹು. ಸುಬಾಹು ಪುತ್ರನು ಉಗ್ರಸೇನನು. ಉಗ್ರಸೇನನ ಮಗನು ಶ್ರುತಸೇನನು.

ಈ ರೀತಿಯಲ್ಲಿ ಮಹಾವಿಷ್ಣು ಮೊದಲುಗೊಂಡು ಶ್ರುತಸೇನರಾಯನ ವರಿಗೆ ಹುಟ್ಟಿದ ದೊರೆಗಳು ೬೩ ಮಂದಿ. ಮುಂದೆ ಕಲಿಯುಗದಲ್ಲಿ ಈ ಶ್ರುತಸೇನರಾಯನ ವಂಶದಲ್ಲಿ ಅನೇಕಜನ ಕ್ಷತ್ರಿಯೋತ್ತಮರು ಜನಿಸಿ ಭೂಮಿಯನ್ನು ರಕ್ಷಿಸುತ್ತಿದ್ದರು. ಇದೇವಂಶದಲ್ಲಿ ಹುಟ್ಟಿದ ಒಬ್ಬಾನೊಬ್ಬ ಅತ್ಯಂತ ಪರಾಕ್ರಮಶಾಲಿಯಾದ ಯದುವೀರರಾಯನೆಂಬ ದೊರೆಯು ಧರ್ಮದಿಂದ ಪ್ರಜೆಗಳನ್ನು ರಕ್ಷಿಸುತ್ತಿದ್ದನು. ಆ ಯದುವೀರರಾಯನಿಗೆ ಭದ್ರಸೇನನೆಂಬ ಪುತ್ರನುಂಟಾದನು. ಆ ಭದ್ರಸೇನನ ಮಗನು ಸಹಸ್ರಜಿತ ಎಂಬುವನು. ಸಹಸ್ರಜಿತ ಎಂಬುವನ ಪುತ್ರನು ಬೃಹತ್ಸೇನನು. ಬೃಹತ್ಸೇನನ ಮಗನು ಬೃಹದ್ಭಾನುವು. ಬೃಹದ್ಭಾನುಪುತ್ರನು ಅಪರಾಜಿತ ಎಂಬುವನು. ಅಪರಾಜಿತನ ಮಗನು ಪ್ರದ್ಯೋತನನು. ಪ್ರದ್ಯೋತನನ ಸುತನು ಸುಮಿತ್ರನು. ಸುಮಿತ್ರನ ಪುತ್ರನು ವಸುಮಿತ್ರನು. ವಸುಮಿತ್ರನ ತನುಜನು ಭದ್ರಾಸ್ಯನು. ಭದ್ರಾಸ್ಯನ ಮಗನು ರಾಜದೇವನು. ಆ ರಾಜದೇವನೆಂಬುವನಿಗೆ ಯದುರಾಯ ಕೃಷ್ಣರಾಯರೆಂಬ ಇಬ್ಬರು ಪುತ್ರರು ಜನಿಸಿದರು. ಅವರಿಬ್ಬರಲ್ಲಿ ಜ್ಯೇಷ್ಠಪುತ್ರರಾದ ಯದುರಾಯರು ಮಹಾದಾತೃಗಳಾಗಿ, ತೇಜಶ್ಶಾಲಿಗಳಾಗಿ ದಿಕ್ಕುಗಳಲ್ಲಿ ಪ್ರಸಿದ್ಧಗಳಾದ ಸದ್ಗುಣಗಳುಳ್ಳವರಾಗಿ, ತಮ್ಮ ಭುಜಬಲದಿಂದ ಅನೇಕ ಶತ್ರುಗಳನ್ನು ಜಯಿಸಿ, ಕರ್ಣಾಟಕ ದೇಶಾಧೀಶ್ವರರಾದ ಈ ಮಹೀಶೂರ ಮಹಾರಾಜರ ವಂಶಕ್ಕೆ ಮೂಲಪುರುಷರಾದರು.

೨ನೇ ಅಧ್ಯಾಯ.

೧. ಯದುಮಹಾರಾಯರು.

ಜನನ.—ಶಾಲೀವಾಹನಶಕ ೧೨೯೪ನೇ ಸಾಧಾರಣಸಂವತ್ಸರದ ಮಾಘ ಶುದ್ಧ ತೃತೀಯೆ.
ಪಟ್ಟಾಭಿಷೇಕ.— ,, ೧೩೨೨ನೇ ಪ್ರಮಾಥಿ ,, ವೈಶಾಖ ಶುದ್ಧ ಪಂಚಮಿ.
ಸಂತಾನ.—ದೇವಾಜಮ್ಮಣ್ಣಿಯವರಲ್ಲಿ (೧) ಹಿರೀಬೆಟ್ಟದಚಾಮರಾಜ ಒಡೆಯರವರು, (೨) ಚಾಮರಾಜ ಒಡೆಯರವರು.

ಈ ಯದುಮಹರಾಯರು ಮಹೀಶೂರ ಮಹಾರಾಜರ ವಂಶಕ್ಕೆ ಮೂಲಪುರುಷರಾದ ಪರಿಯಾವದೆಂದರೆ :—ಯದುಮಹಾರಾಯರು ವಿಂಧ್ಯವಾಸಿನಿಯರಾದ ಅಮ್ಮನವರ ಪ್ರಸಾದವನ್ನು ಸಂಪಾದಿಸಿಕೊಳ್ಳಬೇಕೆಂದು ತಮ್ಮ ತಮ್ಮಂದಿರಾದ ಕೃಷ್ಣರಾಯರೊಡನೆ ದ್ವಾರಕಾನಗರ ಪ್ರಾಂತ್ಯವನ್ನು ಬಿಟ್ಟು, ವಿಂಧ್ಯಪರ್ವತಕ್ಕೆ ಹೋಗಿ, ಅಮ್ಮನವರನ್ನು ಕುರಿತು ತಪಸ್ಸುಮಾಡುತ್ತಿದ್ದರು. ಆಗ ಆ ಅಮ್ಮನವರು ಪ್ರಸನ್ನರಾಗಿ, ಈ ಯದುರಾಯರನ್ನು ಕುರಿತು "ಅಯ್ಯಾ ರಾಜಪುತ್ರನೆ, ನಾನು ಕರ್ಣಾಟಕ ದೇಶದಲ್ಲಿ ಕಾವೇರೀ ಕಪಿಲಾ ಮಧ್ಯದಲ್ಲಿರುವ *ಮಹಾಬಲಪರ್ವತದಲ್ಲಿ ಆವಿರ್ಭವಿಸಿ ಸಮಸ್ತ ಲೋಕಗಳನ್ನೂ ರಕ್ಷಿಸುತ್ತಲಿರುವೆನು. ನನ್ನಿಂದ ಸಂಹೃತನಾದ ಮಹಿಷಾಸುರನು ಆ ಮಹಾಬಲಪರ್ವತದ ಸಮೀಪದಲ್ಲಿಯೇ ಪೂರ್ವದಲ್ಲಿ ಮಹೀಶೂರ ನಗರವೆಂಬದಾಗಿ ಒಂದಾನೊಂದು ಪಟ್ಟಣವನ್ನು ಕಟ್ಟಿಕೊಂಡಿದ್ದನು. ಆ ಪಟ್ಟಣವು ಬಹುಜನ ಶೂರರಿಂದ ಸೇವಿತವಾಗಿಯೂ, ಸಕಲೈಶ್ವರ್ಯಸಂಪನ್ನವಾಗಿಯೂ ಇರುವದು. ಅಯ್ಯಾ ಬಾಲಕನೆ, ಈಗ ನೀನು ಆ ಮಹಾಬಲ ಪರ್ವತಕ್ಕೆ ಹೋಗಿ ಭಕ್ತಿಯಿಂದ ನನ್ನನ್ನು ಸೇವಿಸು. ನಾನು ನಿನಗೆ ಆ ಪಟ್ಟಣವನ್ನೂ, ಅದಕ್ಕೆ ಸೇರಿದ ದೇಶಗಳನ್ನೂ, ಜಯಲಕ್ಷ್ಮಿಯನ್ನೂ ಸಹ ಕೊಟ್ಟು, ಅನೇಕ ವಿಧವಾದ ಶ್ರೇಯಸ್ಸುಗಳನ್ನುಂಟುಮಾಡಿ ಸಂರಕ್ಷಿಸುವೆನು" ಎಂದು ಆಜ್ಞಾಪಿಸಿ ಅಂತರ್ಧಾನಹೊಂದಿದರು.

ಅನಂತರದಲ್ಲಿ ಆ ಯದುರಾಯರು ತಮ್ಮ ತಮ್ಮನಿಂದೊಡಗೂಡಿ, ವಿಂಧ್ಯಪರ್ವತದಿಂದ ಹೊರಟು, ಮಾರ್ಗಮಧ್ಯದಲ್ಲಿ ವಿಜಯನಗರವನ್ನು

*ಈಗ ಇದನ್ನು ಚಾಮುಂಡೀ ಬೆಟ್ಟವೆಂದು ಕರೆಯುತ್ತಾರೆ.

ಸೇರಿ, ಪಂಪಾಸರೋವರವನ್ನು ಕಂಡು, ತುಂಗಭದ್ರಾನದೀ ತೀರದಲ್ಲಿರುವ ವಿರೂಪಾಕ್ಷೇಶ್ವರನನ್ನು ಭಕ್ತಿಯಿಂದ ಪೂಜಿಸಿ, ಅಲ್ಲಿಂದ ಹೊರಟು *ಯಾದವಗಿರಿಗೆ ಬಂದರು. ಆ ಯಾದವಗಿರಿಯು ಬಗೆಬಗೆಯಾದ ವನಪಙ್ಕ್ತಿಗಳಿಂದಲೂ, ಆದಿವರಾಹಸ್ವಾಮಿಯ ಕೋರೆದಾಡೆಯಿಂದ ಹುಟ್ಟಿದ ಕಲ್ಯಾಣಿ ಎಂಬ ತೀರ್ಥದಿಂದಲೂ ಪ್ರಕಾಶಮಾನವಾಗಿಯೂ, ನಾರಾಯಣಸ್ವಾಮಿ ಚಲುವರಾಯಸ್ವಾಮಿಯವರಿಗೆ ಆವಾಸಸ್ಥಾನವಾಗಿಯೂ ಇರುವದು; ಈ ಪರ್ವತದ ಉನ್ನತ ಶಿಖರಾಗ್ರದಲ್ಲಿ ಶ್ರೀ ಯೋಗನೃಸಿಂಹಸ್ವಾಮಿಯು ಅವತರಿಸಿ ಇರುವನು; ಇದಲ್ಲದೆ ಈ ಪರ್ವತವು ಗಂಧರ್ವ ಕಿನ್ನರ ಕಿಂಪುರುಷರಿಂದ ಸೇವಿತವಾಗಿ ಋಷಿಗಳಿಗೆ ತಪಸ್ಸಿದ್ಧಿಯನ್ನು ಉಂಟುಮಾಡುತ್ತಾ ಆಶ್ಚರ್ಯಕರವಾಗಿರುವದು. ಆ ಯದುರಾಯರು ಈ ಗಿರಿಯಲ್ಲಿ ಯೋಗನೃಸಿಂಹಸ್ವಾಮಿಯನ್ನೂ, ಯಾದವವಂಶಕ್ಕೆ ಕುಲಧನವಾದ ಚಲುವರಾಯಸ್ವಾಮಿಯನ್ನೂ, ನಾರಾಯಣಸ್ವಾಮಿಯನ್ನೂ ಸಹ ಭಕ್ತಿಯಿಂದ ಪೂಜಿಸಿ, ಅಲ್ಲಿಂದ ಹೊರಟು, ಪುಣ್ಯಕರಗಳಾದ ತೀರ್ಥಕ್ಷೇತ್ರಗಳಿಂದ ಅಲಂಕೃತವಾದ ಕಾವೇರೀನದಿಯನ್ನು ಸೇರಿದರು. ಆ ಕಾವೇರೀನದಿಯು ಹ್ಯಾಗಿರುವಳೆಂದರೆ—ಗೌತಮಾದಿ ಮಹರ್ಷಿಗಳ ಪುಣ್ಯಾಶ್ರಮಗಳಿಂದಲೂ, ಉಭಯ ತೀರಗಳಲ್ಲಿಯೂ ಪ್ರಕಾಶಮಾನಗಳಾದ ಅನೇಕ ಶಿವಾಲಯಗಳಿಂದಲೂ, ವಹ್ನಿಪುಷ್ಕರ ಅರ್ಕಪುಷ್ಕರ ಚಂದ್ರಪುಷ್ಕರಗಳೆಂಬ ಮೂರು ಪುಷ್ಕರಕ್ಷೇತ್ರಗಳಿಂದಲೂ ಅಲಂಕೃತಳಾಗಿರುವಳು; ದರ್ಶನಸ್ಪರ್ಶನಸ್ನಾನಗಳಿಂದ ಸಕಲ ಕಲಿದೋಷಗಳನ್ನೂ ಹೋಗಲಾಡಿಸುತ್ತಿರುವಳು; ಕವೇರರಾಯನೆಂಬ ರಾಜರ್ಷಿಯ ಭಾಗ್ಯಸ್ವರೂಪಳಾಗಿರುವಳು; ಇದಲ್ಲದೆ ಸಹ್ಯಪರ್ವತದಲ್ಲಿ ಉದ್ಭವಿಸಿ, ಲೋಪಾಮುದ್ರಾವತಾರರೂಪಳಾಗಿ ಪ್ರವಹಿಸುತ್ತಾ, ಸರ್ವಕಾಲದಲ್ಲಿಯೂ ಎಲ್ಲಾ ಪೈರುಗಳಿಗೂ ಫಲಸಮೃದ್ಧಿಯನ್ನುಂಟುಮಾಡಿ ಭಕ್ತರಿಗೆ ಭಕ್ತಿ ಮುಕ್ತಿ ಫಲಗಳನ್ನು ಕೊಡುತ್ತಿರುವಳು. ಆ ಯದುರಾಯರು ಈಪರಿಯಾದ ಕಾವೇರೀನದಿಯನ್ನು ಸೇರಿ, ಸಂತೋಷದಿಂದ ಸ್ನಾನವನ್ನು ಮಾಡಿ, ಆನ್ಹಿಕಗಳನ್ನು ನೆರವೇರಿಸಿಕೊಂಡು, ಅಲ್ಲಿಂದ ಹೊರಟು, ಕಾವೇರೀ ಕಪಿಲಾ ನದಿಗಳ ಮಧ್ಯದಲ್ಲಿರುವ ಮಹಾಬಲಪರ್ವತಕ್ಕೆ ಬಂದರು. ಆ ಪರ್ವತವು ಹ್ಯಾಗಿರುವ

*ಈಗ ಇದನ್ನು ಮೇಲುಕೋಟೆ ಎಂದು ಕರೆಯುತ್ತಾರೆ.

ದಂದರೆ—ವ್ಯಾಘ್ರವರಾಹಮೊದಲಾದ ಮೃಗಗಳಿಂದಲೂ, ಬಗೆಬಗೆಯಾದ ಪಕ್ಷಿಗಳಿಂದಲೂ, ಶ್ರೀಗಂಧ ಸಂಪಿಗೆ ಮೊದಲಾದ ವೃಕ್ಷಗಳಿಂದಲೂ, ಅನೇಕ ಗುಹಾ ಗೃಹಗಳಿಂದಲೂ, ಮೇಘಮಂಡಲವನ್ನು ಸೋಂಕುವಂತಿರುವ ಶಿಖರಗಳಿಂದಲೂ, ಅನೇಕ ಗಿರಿನದಿಗಳಿಂದಲೂ, ದೊಣೆಗಳಿಂದಲೂ, ಪರಿ ಪರಿಯಾದ ಗೈರಿಕಾದಿ ಧಾತುಗಳಿಂದಲೂ, ಅನೇಕ ಪುಣ್ಯತೀರ್ಥಗಳಿಂದಲೂ ಪ್ರಕಾಶಿಸುತ್ತಲಿರುವದು. ಆ ಯದುರಾಯರು ಈ ಮಹಾಬಲಪರ್ವತದಲ್ಲಿ ನೆಲೆಗೊಂಡಿರುವ, ಮಹಿಷಾಸುರಮರ್ದಿನಿಯಾದ, ಮೂಲಪ್ರಕೃತಿ ಸ್ವರೂಪ ಳಾದ, ಅನೇಕ ಯೋಗಿನೀಗಣಗಳಿಂದ ಪೂಜಿತಳಾದ, ಸಮಸ್ತ ದೇವರ್ಷಿಗ ಳಿಗೆ ಪೂಜಾಯೋಗ್ಯಳಾದ, ಭಕ್ತರಿಗೆ ಸಕಲ ಸಂಪತ್ತುಗಳನ್ನು ಕೊಟ್ಟು ಸಂರಕ್ಷಿಸುತ್ತಿರುವ ಶ್ರೀಚಾಮುಂಡೇಶ್ವರೀ ಅಮ್ಮನವರನ್ನು ಕಂಡು ನಮ ಸ್ಕರಿಸಿ, ಜಗಜ್ಜನನಿಯಾದ ಶ್ರೀಚಾಮುಂಡೇಶ್ವರಿಯೇ ನನ್ನನ್ನು ರಕ್ಷಿಸೆಂದು ಸ್ತೋತ್ರವನ್ನು ಮಾಡಿ ಧ್ಯಾನಮಾಡುತ್ತಾ ಆರಾತ್ರಿ ಅಲ್ಲಿಯೇ ಸುಖದಿಂದ ಇದ್ದರು.

ಅನಂತರದಲ್ಲಿ ಶ್ರೀಚಾಮುಂಡೇಶ್ವರೀ ಅಮ್ಮನವರು ಆ ರಾತ್ರಿಯ ನಾಲ್ಕನೇ ಜಾವದ ಕೊನೇ ಭಾಗದಲ್ಲಿ ಸುಖನಿದ್ರೆಯನ್ನು ಮಾಡುತ್ತಿ ರುವ ಆ ರಾಯರ ಸ್ವಪ್ನದಲ್ಲಿ ಪ್ರತ್ಯಕ್ಷವಾಗಿ ಬಂದು ಪ್ರೇಮದಿಂದ ಹೇಳಿ ದ್ದೇನೆಂದರೆ:— “ ಅಯ್ಯಾ ಮಹಾಭಾಗ್ಯಶಾಲಿಯಾದ ಯದುರಾಯನೆ, ನಿನ್ನ ಪೂರ್ವಪುಣ್ಯವೆಂಬ ವೃಕ್ಷವು ಫಲವನ್ನು ಹೊಂದಬೇಕೆಂದು ಉದ್ಯುಕ್ತ ವಾಗಿರುವದಾದಕಾರಣ ನಿನಗೆ ರಾಜ್ಯಲಾಭವಾಗುವದು. ಅದಕ್ಕೆ ನೀನು ಮಾಡತಕ್ಕದ್ದೇನೆಂದರೆ—ನಾನು ಪೂರ್ವದಲ್ಲಿ ರಕ್ತಬೀಜಾಸುರನನ್ನು ಸಂಹ ರಿಸಿ ಜ್ವಲಜ್ಜಿಹ್ವಾ ಎಂಬ ಹೆಸರನ್ನು ಪಡೆದು ಮತ್ತೊಂದು ರೂಪದಿಂದ ಈ ಪರ್ವತದ ಆಗ್ನೇಯದಿಗ್ಭಾಗದಲ್ಲಿ ಇರುವೆನು. ನೀನು ನಾಳೆ ಪ್ರಾತಃಕಾಲ ದಲ್ಲಿ ಈ ಪರ್ವತದಿಂದ ಇಳಿದು, ಅಲ್ಲಿಗೆ ಹೋಗಿ, ಆ ದೇವಿಯನ್ನು ಕಂಡು, ನನ್ನನ್ನು ಪೂಜಿಸಿದಂತೆ ಭಕ್ತಿಯಿಂದ ಪೂಜಿಸಿ, ಅನುಗ್ರಹವನ್ನು ಸಂಪಾದಿಸಿ ಕೊಂಡು, ಅಲ್ಲಿಂದ ಶೀಘ್ರವಾಗಿ ಹೊರಟು, ಮಹೀಶೂರ ನಗರಕ್ಕೆ ಹೋಗಿ ಸೇರು. ಆ ಬಳಿಕ ಮಾರ್ಗದಲ್ಲಿ ಬಬ್ಬಾನೊಬ್ಬ ತೇಜಸ್ವಿಯಾದ ಪುರು



[illegible]

ಷನು ಕಾವೀವಸ್ತ್ರವನ್ನು ಉಟ್ಟುಕೊಂಡು, ಶಿವಲಿಂಗಧಾರಿಯಾಗಿ, ನಿನ್ನ ಸಮೀಪಕ್ಕೆ ಬಂದು, ಹಿತಕರವಾದ ಮಾತುಗಳನ್ನು ಹೇಳಿ, ನಿನಗೆ ಶ್ರೇಯಸ್ಸನ್ನುಂಟುಮಾಡುವನು. ನೀನು ನನ್ನಲ್ಲಿ ಭಕ್ತಿಮಾಡಿದಂತೆ ಆ ಪುರುಷನಲ್ಲಿಯೂ ಭಕ್ತಿಯನ್ನು ಮಾಡುವದಲ್ಲದೆ ಆತನು ಹ್ಯಾಗೆ ಹೇಳುವನೋ ಆ ಪರಿಯಾಗಿ ಕೇಳು. ಅದರಿಂದ ನಿನಗೆ ಸಕಲಕಾರ್ಯಗಳೂ ಕೈವಶವಾಗುವವು. ಈ ಪುರುಷನ ಸ್ವರೂಪವೂ ಮಹಿಮೆಯೂ ಸಹ ಮುಂದೆ ಪ್ರಕಟವಾಗುವವು" ಎಂದು ಹೇಳಿ ಅಮ್ಮನವರು ಅಂತರ್ಧಾನವಾದರು.

ಆ ಬಳಿಕ ಯದುರಾಯರು ಎಚ್ಚತ್ತು ಈ ಸ್ವಪ್ನವೃತ್ತಾಂತವನ್ನು ತಮ್ಮ ತಮ್ಮನೊಡನೆ ಹೇಳಿ, ಅತ್ಯಂತ ಸಂತೋಷಭರಿತರಾಗಿ, ಅಮ್ಮನವರು ಹೇಳಿದಂತೆ ಮರುದಿನ ಪ್ರಾತಃಕಾಲದಲ್ಲಿ ವುತ್ತನಹಳ್ಳಿಯಲ್ಲಿರುವ ಜ್ವಾಲಾಮುಖೀಅಮ್ಮನವರನ್ನು ಕಂಡು, ಭಕ್ತಿಯಿಂದ ಆರಾಧಿಸಿ, ಅಲ್ಲಿಂದ ಹೊರಟು, ಮಹೀಶೂರ ತ್ರಿನಯನೇಶ್ವರ ದೇವಸ್ಥಾನದ ಹಿಂಭಾಗದಲ್ಲಿ ತೃಣಬಿಂದು ಋಷೀಶ್ವರನಿಂದ ಆರಾಧಿತವಾದ ತಟಾಕದ *ಕೋಡೀ ಭೈರವನ ಗುಡಿಯಲ್ಲಿ ವಿಶ್ರಮಿಸಿಕೊಳ್ಳುತ್ತಲಿದ್ದರು. ಆ ಸಮಯದಲ್ಲಿ, ಶ್ರೀಚಾಮುಂಡೇಶ್ವರೀ ಅಮ್ಮನವರು ಸ್ವಪ್ನದಲ್ಲಿ ಅಜ್ಞಾಪಿಸಿದ ಲಕ್ಷಣಗಳಿಂದೊಡಗೂಡಿ ಜಟಾಧಾರಿಯಾದ ಬಬ್ಬಾನೊಬ್ಬ ಪುರುಷನು ಆಯದುರಾಯರ ಸಮೀಪಕ್ಕೆ ಬಂದನು. ಆ ರಾಯರು ಆ ಪುರುಷನನ್ನು ಕಂಡು ಬಹಳ ಸಂತೋಷಪಟ್ಟು, ತ್ವರೆಯಿಂದ ಎದ್ದು ಕರಗಳನ್ನು ಜೋಡಿಸಿಕೊಂಡು, ನಮಸ್ಕಾರವನ್ನು ಮಾಡಿ, ಕುಳ್ಳಿರಿಸಿ, ಸನ್ಮಾನವನ್ನು ಮಾಡಿ, ವಿನಯದಿಂದ "ಅಯ್ಯಾ ಮಹಾನುಭಾವರೆ, ನಿಮ್ಮ ದರ್ಶನದಿಂದ ಕೃತಾರ್ಥನಾದ ನಾನು ಶ್ರೀಕಂಠೇಶ್ವರನೇ ಪ್ರತ್ಯಕ್ಷವಾಗಿ ಬಂದಿರುವನೆಂದು ತಿಳಿದಿರುವೆನಾದಕಾರಣ ನೀವು ಹ್ಯಾಗೆ ಅಜ್ಞಾಪಿಸುವಿರೋ ಅದೇ ಪರಿಯಾಗಿ ನಡೆಯುವೆನು. ಅಯ್ಯಾ ಯೋಗೀಶ್ವರರೆ, ನೀವು ಬಂದ ಕಾರಣವನ್ನು ನನಗೆ ತಿಳಿಹಿಸಬೇಕು" ಎಂದು ಕೇಳಿದರು. ಆ ಮಾತನ್ನು ಕೇಳಿ ಆ ಪುರುಷನು ರಾಯರ ಭಕ್ತಿಗೆ ಮೆಚ್ಚಿ ಪ್ರೇಮದಿಂದ ಅವರನ್ನು ಕುರಿತು "ಅಯ್ಯಾ ರಾಜಪುತ್ರನೆ, ನಾನು ನಿನ್ನ ಮುಖಕಮಲವನ್ನು ನೋಡಿ ದ್ವಾತ್ರಿಂಶಲ್ಲಕ್ಷಣ

* ಈ ಗುಡಿಯು ಈಗ ತ್ರಿನಯನೇಶ್ವರನ ಗುಡಿಗೂ ಸೋಮೇಶ್ವರನ ಗುಡಿಗೂ ಮಧ್ಯದಲ್ಲಿದೆ.

ಗಳಿಂದ ಒಡಗೂಡಿದ ಮಹಾರಾಜನೆಂಬದಾಗಿ ಊಹಿಸುವೆನು. ನೀನು ಶ್ರೀಚಾ
ಮುಂಡೇಶ್ವರೀ ಅಮ್ಮನವರ ಪೂರ್ಣಾನುಗ್ರಹಕ್ಕೆ ಪಾತ್ರನಾಗಿ ಬಂದು
ಇದ್ದೀಯೆಂದು ತಪೋ ಮಹಿಮೆಯಿಂದ ತಿಳಿದು ನಿನ್ನ ಸಮೀಪಕ್ಕೆ ಬಂದೆನು.
ಅಯ್ಯಾ ರಾಜಕುಮಾರನೆ, ನಾನು ನಿನಗೆ ಮುಂದೆ ಉಂಟಾಗತಕ್ಕ ಶುಭವ
ನ್ನು ಹೇಳುವೆನು ಕೇಳು. ಏನೆಂದರೆ—ಈ ಮಹೀಶೂರನಗರದ ಸಾಮ್ರಾಜ್ಯವು
ನಿನಗೆ ದೊರೆಯುವದು. ಅದಕ್ಕೆ ಸಾಧಕವಾಗಿ ಮತ್ತೊಂದು ರಹಸ್ಯವುಂಟು.
ಪೂರ್ವದಲ್ಲಿ ತೇಜಸ್ಸಾಹಸ ಶೌರ್ಯಸಂಪನ್ನನಾದ, ಗೌತಮಗೋತ್ರದಲ್ಲಿಹುಟ್ಟಿದ
ಭೋಜವಂಶೋತ್ಪನ್ನನಾದ ಶೂರದೇವರಾಯನೆಂಬ ಒಬ್ಬ ಧೊರೆಯು
ಬಂದಾನೊಂದು ಕಾರಣದಿಂದ ಮಥುರಾನಗರವನ್ನು ಬಿಟ್ಟು, ತನ್ನ ಬಂಧುಜನ
ಗಳಿಂದೊಡಗೂಡಿ, ಈ ಕರ್ಣಾಟಕ ದೇಶಕ್ಕೆ ಬಂದು, ಶ್ರೀಚಾಮುಂಡೇಶ್ವರೀ
ಅನುಗ್ರಹದಿಂದ ಬಹಳ ದ್ರವ್ಯವುಳ್ಳ ನಿಧಿಯನ್ನು ಪಡೆದು, ಈ ಮಹೀಶೂರ
ನಗರದ ಧೊರೆತನವನ್ನು ಸಂಪಾದಿಸಿ, ಸುಖದಿಂದ ರಾಜ್ಯಭಾರವನ್ನು ಮಾಡು
ತ್ತಿದ್ದನು. ಆ ಶೂರದೇವರಾಯನ ವಂಶದಲ್ಲಿ ಚಾಮರಾಜನೆಂಬ ಧರ್ಮಾ
ತ್ಮನಾದ ಒಬ್ಬಾನೊಬ್ಬ ಧೊರೆಯು ಹುಟ್ಟಿ, ಬಹು ಕಾಲಪರ್ಯಂತವೂ ರಾಜ್ಯ
ಭಾರವನ್ನು ಮಾಡುತ್ತಿರುವ ಕಾಲದಲ್ಲಿ ಒಂದು ಕನ್ಯಾರತ್ನವನ್ನು ಪಡೆದು,
ಪುತ್ರಸಂತಾನವಿಲ್ಲದೆ, ಮುಪ್ಪಿನಿಂದೊಡಗೂಡಿ ಕಾಲಧರ್ಮವನ್ನು ಹೊಂದಿದನು.
ಅನಾಯಕವಾದ ಈ ರಾಜ್ಯವನ್ನು ಈಗ ಸ್ವಾಮಿದ್ರೋಹಿಯಾದ ಮಾರ
ನಾಯಕನೆಂಬ ಸೇನಾಪತಿಯು ತನ್ನ ವಶಮಾಡಿಕೊಳ್ಳಬೇಕೆಂದು ಪ್ರಯತ್ನ
ಮಾಡುತ್ತಲಿರುವನು. ಈ ಸಮಯದಲ್ಲಿ ನೀನು ಆ ದುರ್ಬುದ್ಧಿಯುಳ್ಳ
ಸೇನಾಪತಿಯನ್ನು ಸಂಹರಿಸಿ, ದುಷ್ಟರಾದ ಅವನ ಸಹಾಯಕರನ್ನು ನಿಗ್ರ
ಹಿಸಿ, ಜಯಲಕ್ಷ್ಮಿಯನ್ನು ಹೊಂದಿ ವಂಶಾಭಿವೃದ್ಧಿಯನ್ನುಂಟುಮಾಡುವ
ಆ ರಾಜಪುತ್ರಿಯನ್ನು ವಿವಾಹ ಮಾಡಿಕೊಳ್ಳುತ್ತಲಿದ್ದೀಯೆ. ನಿನಗೆ ಆ
ಉಪಾಯಗಳನ್ನು ಹೇಳುವದಕ್ಕೆ ಈ ಪಟ್ಟಣದ ಧೊರೆಯ ಆಶ್ರಿತನಾದ,
ಅಂತಃಪುರದ ರಹಸ್ಯಗಳನ್ನು ತಿಳಿದಿರುವ, ಬುದ್ಧಿಶಾಲಿಯಾದ, ವಾಕ್ಚಾತುರ್ಯ
ವುಳ್ಳ ಒಬ್ಬಾನೊಬ್ಬ ಪುರುಷನು ಕಾವೀವಸ್ತ್ರವನ್ನು ಉಟ್ಟು ಕೊಂಡು,
ಶಿವಲಿಂಗಧಾರಿಯಾಗಿ, ನಿನ್ನ ಸಮೀಪಕ್ಕೆ ಬಂದು ಸಕಲವೃತ್ತಾಂತಗಳನ್ನೂ
ಯಥಾರ್ಥವಾಗಿ ಹೇಳುವನು. ಆ ಪುರುಷನು ಯಾವಕಾರ್ಯಗಳನ್ನು

ಹೇಳುವನೋ ಅವುಗಳನ್ನೆಲ್ಲಾ ನೀನು ನೆರವೇರಿಸು. ಈ ರೀತಿಯಾಗಿ ಮಾಡಿದರೆ ಸುಖವನ್ನು ಹೊಂದುತ್ತೀಯೆ. ನಿನ್ನ ಕಾರ್ಯಗಳನ್ನು ಸಾಧಿಸಿ ಕೊಟ್ಟ ಆ ಪುರುಷನಿಗೆ ಇಷ್ಟವಾದ ಯಾವಕಾರ್ಯಗಳನ್ನು ನೆರವೇರಿಸುತ್ತೀಯೋ ಅವುಗಳಿಂದ ನನಗೆ ಸಂತೋಷ ವುಂಟಾಗುವದು. ಅಯ್ಯಾ ರಾಜಕುಮಾರನೆ, ಈಗ ನಾನು ಅಂತಃಪುರಕ್ಕೆ ಹೋಗಿ, ನಿನ್ನ ಕಾರ್ಯಸಿದ್ಧಿಗೆ ಅನುಕೂಲ್ಯವನ್ನುಂಟುಮಾಡಿ, ನನ್ನ ಪಟ್ಟಣವಾದ ನಂಜನಗೂಡಿಗೆ ಹೋಗುವೆನು" ಎಂದು ಹೇಳಿ, ಸ್ವಲ್ಪದೂರ ಮುಂದಕ್ಕೆ ತೆರಳಿ ಅಂತರ್ಧಾನವಾದನು. ಅನಂತರದಲ್ಲಿ ಆ ಅಣ್ಣತಮ್ಮಂದಿರಿಬ್ಬರೂ ಆಶ್ಚರ್ಯಕರವಾದ ಆ ಪುರುಷನ ಅಂತರ್ಧಾನವನ್ನು ನೋಡಿ, ಆತನೇ ಶ್ರೀಕಂಠೇಶ್ವರನೆಂದು ನಿಶ್ಚಯಿಸಿಕೊಂಡು, ಸಂತೋಷಪಟ್ಟು, ಶ್ರೀಕಂಠೇಶ್ವರನು ಹೇಳಿದ ಪುರುಷನ ಆಗಮನವನ್ನು ನಿರೀಕ್ಷಿಸುತ್ತಾ, ಉಳಿದ ಹಗಲಿನಿಂದ ಕೂಡಿ ಆ ರಾತ್ರಿಯನ್ನು ಕಳೆಯುತ್ತಿದ್ದರು.

ಇತ್ತಲಾ ದುಷ್ಟನಾದ ಮಾರನಾಯಕನ ಬಾಧೆಯನ್ನು ತಾಳಲಾರದೆ ಚಿಂತಿಸುತ್ತಿದ್ದ ಆ ಚಾಮರಾಜಪತ್ನಿಯನ್ನು ಕುರಿತು, ಪರಮೇಶ್ವರನು ಉಷಃಕಾಲದಲ್ಲಿ ಸ್ವಪ್ನದಲ್ಲಿ ಅಜ್ಞಾಪಿಸಿದ್ದೇನೆಂದರೆ:—"ಎಲೈ ರಾಜಪತ್ನಿಯೇ, ನೀನು ಮನದಲ್ಲಿ ವ್ಯಥೆಯನ್ನು ಬಿಟ್ಟು, ಸ್ವಸ್ಥಚಿತ್ತಳಾಗಿ, ಶ್ರೇಯಸ್ಕರವಾದ ನನ್ನ ಮಾತುಗಳನ್ನು ಕೇಳು. ಏನೆಂದರೆ—ಈಗ ಆತ್ರೇಯಸಗೋತ್ರೋತ್ಪನ್ನರಾದ, ಯದುವಂಶದಲ್ಲಿ ಹುಟ್ಟಿದ, ಅಣ್ಣತಮ್ಮಂದಿರಾದ ಇಬ್ಬರು ರಾಜಕುಮಾರರು ಈ ಮಹೀಶೂರಪಟ್ಟಣದ ಸಮೀಪದಲ್ಲಿರುವ ಭೈರವ ದೇವಸ್ಥಾನಕ್ಕೆ ಬಂದು ಇರುವರು. ಅವರು ಶೌರ್ಯಧೈರ್ಯಾದಿ ಗುಣಗಳಿಂದಲೂ, ಸಕಲ ರಾಜಲಕ್ಷಣಗಳಿಂದಲೂ ಪ್ರಕಾಶಿಸುತ್ತಲಿರುವರು. ಅವರಿಬ್ಬರಲ್ಲಿ ಜ್ಯೇಷ್ಠನಾದ ರಾಜಕುಮಾರನು ನಿನ್ನ ಮಗಳಿಗೆ ಸದೃಶನಾದ ವರನಾಗಿರುವನು. ಆದಕಾರಣ ಅವರ ಸಮೀಪವನ್ನು ಕುರಿತು ಆಪ್ತನೂ ಕುಶಲನೂ ಸ್ಫುಟವಾಕ್ಕುಳ್ಳವನೂ ಹಿತವನಿಚ್ಛಯಿಸುವವನೂ ಆದ ಒಬ್ಬ ಪುರುಷನನ್ನು ಕಳುಹಿ, ಅವನ ಮುಖವಚನದಿಂದ ಇಲ್ಲಿನ ವೃತ್ತಾಂತಗಳೆಲ್ಲವನ್ನೂ ತಿಳಿಯಪಡಿಸಿ, ಅವನ ಸಂಗಡಲೇ ಆರಾಜಪುತ್ರರನ್ನು ಪಟ್ಟಣಕ್ಕೆ ಕರೆತರಿಸಿ, ಜ್ಯೇಷ್ಠನಾದ ರಾಜಕುಮಾರನಿಗೆ ನಿನ್ನ ಮಗಳನ್ನು

ಕೊಟ್ಟು ವಿವಾಹ ಮಾಡಿಸು. ಅದರಿಂದ ನಿನಗೆ ಕ್ಷೇಮವುಂಟಾಗುವದು. ಆತನು ತನ್ನ ಭುಜಬಲಪರಾಕ್ರಮದಿಂದ ನಿನ್ನ ಶತ್ರುಗಳನ್ನು ಸಂಹರಿಸಿ, ನಿನ್ನ ರಾಜ್ಯವನ್ನು ಧರ್ಮದಿಂದ ಪರಿಪಾಲನೆಮಾಡಿ, ವಂಶಾಭಿವೃದ್ಧಿಯನ್ನು ಉಂಟುಮಾಡುವನು" ಎಂದು ಆಜ್ಞಾಪಿಸಿ ಪರಮೇಶ್ವರನು ಅಂತರ್ಧಾನ ವಾದನು.

ಅನಂತರದಲ್ಲಿ ಆ ರಾಜಪತ್ನಿಯು ಆ ಕ್ಷಣದಲ್ಲಿ ಎಚ್ಚತ್ತು ಸಂತೋಷ ವೆಂಬ ಸಮುದ್ರದಲ್ಲಿ ಓಲಾಡುವ ಮನಸ್ಸುಳ್ಳವಳಾಗಿ ತನ್ನ ಮಗಳನ್ನು ಎಚ್ಚ ರಿಸಿ, ಸ್ವಪ್ನವೃತ್ತಾಂತವನ್ನು ತಿಳುಹಿ ಸಂತೋಷಭರಿತಳಾದ ಆ ಮಗಳೊ ಡನೆ ಆಲೋಚಿಸಿ, ಸ್ವಪ್ನದಲ್ಲಿ ಹೇಳಿದ ಲಕ್ಷಣಗಳುಳ್ಳ ಆಶ್ರಿತನಾದ ಲಿಂಗಧಾರಿ ಯಾದ ಪುರುಷನನ್ನು ಕರೆದು, ಹೇಳತಕ್ಕ ಮಾತುಗಳನ್ನು ಹೇಳಿ, ಆ ರಾಜ ಕುಮಾರರ ಸನ್ನಿಧಿಗೆ ಕಳುಹಿಸಿದಳು. ಆ ರಾಜಪುತ್ರಿಯು ಸಂತೋಷ ಉತ್ಸಾಹಗಳಿಂದೊಡಗೂಡಿ ಆಪ್ತರಾದ ಇಬ್ಬರು ಅನ್ವೇರುಗಳನ್ನು ಕರೆದು "ಎಲೈ ಅನ್ವೇರುಗಳಿರಾ, ನೀವು ಈ ಪಟ್ಟಣದ ಕೆರೆಯ ಕೋಡಿಯಲ್ಲಿ ಇರುವ ಭೈರವದೇವಸ್ಥಾನಕ್ಕೆ ಹೋಗಿ, ಅಲ್ಲಿ ಇರತಕ್ಕ ಪುರುಷರ ರೂಪಲಾವಣ್ಯ ಚಾತುರ್ಯಾದಿ ಗುಣಗಳನ್ನೂ, ಅವರ ರೀತಿಗಳನ್ನೂ, ಮತ್ತು ಅವರು ಯಾರಸಂಗಡ ಮಾತುಗಳು ಏನು ಆಡುತ್ತಾ ಇದ್ದಾರೆಂಬ ವೃತ್ತಾಂತವನ್ನೂ ಸಹ ಒಬ್ಬರೂ ಅರಿಯದಂತೆ ಹೋಗಿ ತಿಳಿದುಕೊಂಡು ಬರುವದು" ಎಂದು ಹೇಳಿ ಕಳುಹಿಸಿದಳು. ಆ ಅನ್ವೇರುಗಳು ಶೀಘ್ರದಿಂದ ಭೈರವದೇವಸ್ಥಾನದ ಸಮೀಪಕ್ಕೆ ಹೋಗಿ, ಅಲ್ಲಿ ತಮ್ಮನಿಂದೊಡಗೂಡಿ, ಲಿಂಗಧಾರಿಯಾದ ಒಬ್ಬ ಪುರುಷನೊಡನೆ ಮಾತನಾಡುತ್ತಿರುವ ಯವ್ವನಸ್ಥರಾದ, ನೇತ್ರಗಳಿಗೆ ಆನಂದ ಕರರಾದ ಆ ಯದುರಾಯರು ಅರಿಯದಂತೆ ಸಮೀಪದಲ್ಲಿ ನಿಂತುಕೊಂಡು ನೋಡಿ, ಮೊದಲಿಂದ ಇವರು ಆಡತಕ್ಕಮಾತುಗಳನ್ನೆಲ್ಲಾ ಕೇಳಿ, ಇವರು ಶೌರ್ಯ ಧೈರ್ಯ ಕೌಶಲ್ಯ ಮುಂತಾದ ಸಕಲಗುಣಸಂಪನ್ನರಾದವರೆಂದು ಮನದಲ್ಲಿ ನಿಶ್ಚಯಿಸಿಕೊಂಡು, ಅತ್ಯಂತ ಸಂತೋಷದಿಂದ ಅಲ್ಲಿಂದ ಹೊರಟು, ರಾಜಪುತ್ರಿಯ ಸಮೀಪಕ್ಕೆ ಬಂದು, ಅಲ್ಲಿ ನಡೆದ ಸಕಲ ವೃತ್ತಾಂತಗಳನ್ನೂ ತಿಳಿಯಪಡಿಸಿ ಅತ್ಯಂತವಾಗಿ ಸಂತೋಷ ಪಡಿಸಿದರು.

ಇತ್ತಲಾ ರಾಜಪುತ್ರರು ಆ ಜಂಗಮಯ್ಯನನ್ನು ಕಂಡು ಸಂತೋಷದಿಂದ ಬಹುಮಾನವನ್ನುಮಾಡಿ ಕುಳ್ಳಿರಿಸಿಕೊಂಡರು. ಆಗ ಚತುರನಾದ ಆ ಜಂಗಮಯ್ಯನು ಆ ರಾಜಕುಮಾರರ ಕುಲಶೀಲ ನಾಮ ಗೋತ್ರಗಳನ್ನು ವಿಚಾರಿಸಿ, ಯೋಗಕ್ಷೇಮಗಳನ್ನು ಕೇಳಿ, ಈ ರಾಯರು ಬಹು ಬುದ್ಧಿಶಾಲಿಗಳೆಂದು ನಿಶ್ಚಯಿಸಿ, ಮಹೀಶೂರನಗರದಲ್ಲಿ ನಡೆದಿರತಕ್ಕ ವೃತ್ತಾಂತವನ್ನೂ, ತನ್ನ ಒಡತಿಯ ಮನದ ಅಭಿಲಾಷೆಯನ್ನೂ, ಮುಂದೆ ಇವರು ಸಾಧಿಸತಕ್ಕ ಕಾರ್ಯಗಳನ್ನೂ ಸಹ ಸಂಕ್ಷೇಪವಾಗಿ ಹೇಳಿ, ನಾನು ಮರಳಿ ಬಂದು ನಿಮ್ಮನ್ನು ಪಟ್ಟಣಕ್ಕೆ ಕರೆದುಕೊಂಡು ಹೋಗುವೆನೆಂದು ನುಡಿದು, ತನ್ನ ಒಡತಿಯ ಸಮೀಪಕ್ಕೆ ಹೋಗಿ "ಎಲೈ ದೇವಿಯರಾ, ನಿಮ್ಮ ಪೂರ್ವಪುಣ್ಯವೆಂಬ ವೃಕ್ಷವು ಆಮೂಲಾಗ್ರವಾಗಿ ಫಲಿತವಾಗಿರುವದು. ಅದು ಹ್ಯಾಗಂದರೆ, ಮಹಾತ್ಮರಾದ ಆ ರಾಜಕುಮಾರರು ತಮ್ಮನಿಂದೊಡಗೂಡಿ ಬಂದಿರುವದು ಯಥಾರ್ಥವು. ಅವರು ಯದುವಂಶದಲ್ಲಿ ಹುಟ್ಟಿದವರು ; ಸಕಲ ರಾಜಲಕ್ಷಣಗಳಿಂದ ಒಡಗೂಡಿರುವವರು ; ಮಾಡಿದ ಉಪಕಾರಗಳನ್ನು ನೆನೆಯತಕ್ಕವರು. ಸತ್ಯವಾದ ಮಾತುಗಳನ್ನು ನುಡಿಯತಕ್ಕವರು ; ಮತ್ತು ನೀತಿಶಾಸ್ತ್ರದಲ್ಲಿ ನಿಪುಣರಾಗಿರುವರು ; ತೇಜೋವಂತರು ; ಕೀರ್ತಿವಂತರು ; ರೂಪಲಾವಣ್ಯ ಧೈರ್ಯೌದಾರ್ಯ ಚಾತುರ್ಯ ಗಾಂಭೀರ್ಯ ಸಾಹಸ ವಿದ್ಯಾಬುದ್ಧಿ ವಿನಯ ಸಂಪನ್ನರಾಗಿರುವರು. ಇದಲ್ಲದೆ ಅವರು ಯವ್ವನಸ್ಥರಾಗಿಯೂ ದೃಢಮನಸ್ಸುಳ್ಳವರಾಗಿಯೂ ಇರುವರು. ಅವರು ನಿಮ್ಮ ಪೂರ್ವಪುಣ್ಯದ ಪರಿಪಾಕದಿಂದಲೇ ಇಲ್ಲಿಗೆ ಬಂದಿರುವರು. ಇದರಲ್ಲಿ ಎಷ್ಟುಮಾತ್ರವೂ ಸಂದೇಹವಿಲ್ಲವೆಂದು ನಿಶ್ಚಯಿಸಿ ಅವರನ್ನು ಪಟ್ಟಣಕ್ಕೆ ಕರೆಯಿಸಿ, ಸಕಲಕಾರ್ಯಗಳನ್ನೂ ಸಾಧಿಸು" ಎಂದು ಹೇಳಿದನು.

ಅನಂತರದಲ್ಲಿ ಆ ರಾಜಪತ್ನಿಯು ಮಗಳಿಂದೊಡಗೂಡಿ ಬಹಳ ಸಂತೋಷಪಟ್ಟು ತಮ್ಮ ವಂಶಪಾರಂಪರ್ಯದಿಂದ ಆಶ್ರಿತಪರಂಪರೆಯಲ್ಲಿ ಹುಟ್ಟಿರುವ ಅತ್ಯಂತ ಆಪ್ತರೂ ಬುದ್ಧಿಶಾಲಿಗಳೂ ಬ್ರಾಹ್ಮಣಶ್ರೇಷ್ಠರೂ ಆದ ತಿಮ್ಮರಸಯ್ಯ ನಾರಣಯ್ಯರೆಂಬ ಇಬ್ಬರು ಕರಣೀಕರನ್ನು ಕರೆಯಿಸಿ, ಈ ವೃತ್ತಾಂತವನ್ನು ಹೇಳಿ, ಮರಳಿ ನುಡಿದ ಪರಿ ಯಾವದಂದರೆ:—" ಅಯ್ಯಾ ಕರಣೀಕರುಗಳಿರಾ, ನಾವು ನಿಮ್ಮನ್ನು ಬಹುಕಾಲದಿಂದ ಪೋಷಣೆ ಮಾಡಿದ್ದಕ್ಕೆ

ಈಗ ಪ್ರಕೃತದಲ್ಲಿ ನೀವು ಅನೇಕ ಉಪಾಯಗಳನ್ನು ಮಾಡಿ ನಮಗೆ ಅವಶ್ಯಕವಾದ ಈ ಮಹಾಕಾರ್ಯಸಿದ್ಧಿಯನ್ನು ಪ್ರವಾದವಿಲ್ಲದೆ ನಿರ್ವಿಘ್ನವಾಗಿ ನೆರವೇರಿಸಿಕೊಟ್ಟು, ಮಾಡಿದ ಉಪಕಾರಗಳನ್ನು ನೆನೆಯತಕ್ಕವರೆಂಬ ಖ್ಯಾತಿಯನ್ನು ಹೊಂದುವದಕ್ಕೆ ಇದೇ ಸಮಯವು" ಎಂದು ಹೇಳಿ ತನ್ನ ಕಾರ್ಯಗಳನ್ನೆಲ್ಲಾ ಅವರಿಗೆ ತಿಳಿಸಿದಳು. ಆಗ ಆ ಕರಣೀಕರಿಬ್ಬರೂ ಪರಸ್ಪರವಾಗಿ ಆಲೋಚಿಸಿ, ಅದಕ್ಕೆ ಸಾಧನಾರ್ಥವಾಗಿ ಆಪ್ತರಾಗಿಯೂ, ಅತ್ಯಂತ ಶೂರರಾಗಿಯೂ, ಸ್ವಾಮಿಕಾರ್ಯ ಧುರಂಧರರಾಗಿಯೂ, ಸೇನಾಪತಿಯಾದ ಮಾರನಾಯಕನಲ್ಲಿ ದ್ವೇಷವುಳ್ಳವರಾಗಿಯೂ ಇರತಕ್ಕ ಕೆಲವು ಮಂದಿ ಆಯುಧಪಾಣಿಗಳಾದ ಜನಗಳನ್ನು ಕರೆದು, ರಹಸ್ಯದಲ್ಲಿ ಅವರೊಡನೆ ಹೇಳಿದ್ದೇನಂದರೆ:—"ಎಲೈ ಶೂರರೇ, ನಮ್ಮ ಧೊರೆಗಳು ಕಾಲಾಧೀನವಾದ ಬಳಿಕ ಈ ದುರಾತ್ಮನಾದ ಮಾರನಾಯಕನು ಅವರ ರಾಜ್ಯಕೋಶಗಳನ್ನು ಆಕ್ರಮಿಸಿಕೊಂಡು, ದುರಾಲೋಚನೆಯನ್ನು ಮಾಡುತ್ತಾ, ಜನಗಳನ್ನು ಉಪದ್ರಪಡಿಸುತ್ತಾ, ದುಷ್ಕಾರ್ಯಗಳನ್ನು ಮಾಡುತ್ತಾ ಇರುವದು ನಿಮಗೂ ತಿಳಿದೇ ಇದೆಯಷ್ಟೆ. ನಾವು ಇವನ ದುರ್ಗುಣಗಳನ್ನು ನೋಡುತ್ತಿದ್ದಾಗ್ಯೂ ಬಲವತ್ತರವಾದ ಸಹಾಯವಿಲ್ಲದೆ, ಇದುವರಿಗೂ ಚಿಂತಾಕ್ರಾಂತರಾಗಿ ಅವನನ್ನು ನಿಗ್ರಹಿಸುವದಕ್ಕೆ ಅಶಕ್ತರಾಗಿದ್ದೆವು. ಈಗ ನಮ್ಮ ಪೂರ್ವಪುಣ್ಯದಿಂದ ಶೂರಾಗ್ರೇಸರರೂ, ನಮ್ಮ ಧೊರೆಗಳಿಗೆ ಬಂಧುಗಳೂ, ಯವ್ವನಸ್ಥರೂ ಆದ ಒಬ್ಬರು ರಾಯರು ತಮ್ಮ ನಿಂದೊಹಗೊಡಿ ದ್ವಾರಕಾನಗರಪ್ರಾಂತ್ಯದಿಂದ ಬಂದು ಈ ಪಟ್ಟಣದ ಹೊರಗೆ ಇರುವರು. ದುರ್ಬುದ್ಧಿಯುಳ್ಳ ಈ ಮಾರನಾಯಕನನ್ನು ನಿಗ್ರಹಿಸುವದಕ್ಕೆ ಸಮರ್ಥರಾದ ಆ ರಾಯರನ್ನು ಈಗ ನಾವು ಇಲ್ಲಿಗೆ ಕರೆದುಕೊಂಡು ಬರುವೆವು. ನಿಮ್ಮ ವಂಶಪಾರಂಪರ್ಯವಾಗಿ ನಮ್ಮ ಧೊರೆಗಳಿಂದಲೇ ಪೋಷಿತರಾದಕಾರಣ, ನೀವು ಕರದಲ್ಲಿ ಆಯುಧಗಳನ್ನು ಹಿಡಿದುಕೊಂಡು, ಸರ್ವಪ್ರಕಾರದಲ್ಲಿಯೂ ಆ ರಾಯರಿಗೆ ಸಹಾಯ ಮಾಡುವದಕ್ಕೆ ಉದ್ಯುಕ್ತರಾಗಿರಬೇಕು" ಎಂದು ಹೇಳಿದರು. ಆ ಮಾತುಗಳನ್ನು ಕೇಳಿ ಅವರೆಲ್ಲರೂ ಮನದಲ್ಲಿ ಸಂತೋಷಪಟ್ಟು ಆ ಕರಣೀಕರನ್ನು ಕುರಿತು "ಅಯ್ಯಾ ಕರಣೀಕರುಗಳಿರಾ, ಈ ಪ್ರಕಾರವಾದ ಸಮಯ ಬಂದೀತೆ ಎಂಬದಾಗಿ ನಾವು ಬಹುಕಾಲದಿಂದ ನಿರೀಕ್ಷಿಸುತ್ತಿದ್ದೆವು. ಈಗ

ನಿಮ್ಮ ಆಜ್ಞೆಯಿಂದ ನಾವು ಆ ರಾಯರ ಸಹಾಯಾರ್ಥವಾಗಿ ಆಯುಧಪಾಣಿಗಳಾಗಿ ಜಾಗರೂಕರಾಗಿ ಇದ್ದು ಪ್ರಾಣಗಳನ್ನಾದರೂ ಕೊಡುತ್ತೇವೆ. ಈವಿಷಯದಲ್ಲಿ ನಿಮಗೆ ಎಷ್ಟುಮಾತ್ರವೂ ಸಂಶಯಕೆಲಸವಿಲ್ಲ" ಎಂದು ಹೇಳಿ ಶಸ್ತ್ರವನ್ನು ಮುಟ್ಟಿ ಪ್ರಮಾಣಮಾಡಿಕೊಟ್ಟು, ಯುದ್ಧಸನ್ನದ್ಧರಾಗಿ ಇದ್ದರು.

ಆಬಳಿಕ ಕರಣೀಕರಿಬ್ಬರೂ ಅರಮನೆಗೆ ಹೋಗಿ ಈ ವೃತ್ತಾಂತವನ್ನೆಲ್ಲಾ ತಮ್ಮ ಒಡತಿಗೆ ಬಿನ್ನವಿಸಿ, ಕೆಲವುಮಂದಿ ಶೂರರನ್ನು ಅಂತಃಪುರಕ್ಕೆ ಕಾವಲಿಟ್ಟು, ಒಡತಿಯ ಆಜ್ಞೆಯನ್ನು ಪಡೆದು, ಆಶ್ರಿತನಾದ ಆ ಜಂಗಮಯ್ಯನಿಂದೊಡಗೂಡಿ, ಭೈರವದೇವಸ್ಥಾನಕ್ಕೆ ಹೋಗಿ, ತಮ್ಮ ಒಡತಿಯು ಹೇಳಿದ ಲಕ್ಷಣಗಳಿಂದ ಒಡಗೂಡಿರುವ ತೇಜಶ್ಶಾಲಿಗಳಾದ ಆ ಯದುರಾಯರನ್ನು ಕಂಡು, ಸಂತೋಷಪಟ್ಟು, ಇಲ್ಲಿನ ವೃತ್ತಾಂತಗಳನ್ನೆಲ್ಲಾ ಬಿನ್ನವಿಸಿ, ಅವರನ್ನು ಕುರಿತು "ಅಯ್ಯಾ ರಾಜಪುತ್ರರೇ, ನಿಮಗೆ ಶುಭವಾಗುವದು. ನಮ್ಮ ಒಡತಿಯಾದ ರಾಜಪತ್ನಿಯು ನಿಮ್ಮನ್ನು ಕಾಣಬೇಕೆಂದು ಅಪೇಕ್ಷಿಸುವಳು. ಆದಕಾರಣ ನೀವು ತಮ್ಮನಿಂದೊಡಗೂಡಿ, ಜಾಗರೂಕರಾಗಿ, ಖಡ್ಗಪಾಣಿಗಳಾಗಿ, ಪಟ್ಟಣಕ್ಕೆಬಂದು, ನಮ್ಮ ಶತ್ರುಗಳನ್ನೆಲ್ಲಾ ಸಂಹರಿಸಿ, ನಮ್ಮ ಒಡತಿಯ ದರ್ಶನವನ್ನು ತೆಗೆದುಕೊಂಡು, ಆಕೆಗೂ ನಮ್ಮ ರಾಜಪುತ್ರಿಗೂ ಮನೋರಥವನ್ನು ಪೂರಯಿಸಬೇಕು" ಎಂದು ಯಥಾರ್ಥವಾದ ಮಾತುಗಳನ್ನು ಹೇಳಿದರು. ಅನಂತರದಲ್ಲಿ ಶೌರ್ಯೋತ್ಸಾಹ ಬಲಸಂಪನ್ನರಾದ ಆ ಯದುರಾಯರು ಅವರ ಮಾತುಗಳನ್ನು ಕೇಳಿ, ಆ ಮೂರು ಜನಗಳನ್ನೂ ಕರೆದುಕೊಂಡು, ತಮ್ಮನಿಂದೊಡಗೂಡಿ, ಅಲ್ಲಿಂದ ಹೊರಟು, ಪಟ್ಟಣದ ಬಾಗಿಲಲ್ಲಿ ಬರುವಕಾಲದಲ್ಲಿ "ನೀವು ಯಾರು ಹೊಸದಾಗಿ ಬಂದಿರುವಿರಿ? ಒಳಕ್ಕೆ ಹೋಗಕೂಡದು" ಎಂದು ಮಾರನಾಯಕನ ಕಡೆಯವರಾದ ಕೆಲವರು ಕಾವಲುಗಾರರು ಅವರನ್ನು ತಡೆದರು. ಆಗ ಯದುರಾಯರು ಅವರನ್ನು ಶೀಘ್ರದಿಂದ ಸಂಹರಿಸಿ ಪಟ್ಟಣಕ್ಕೆ ಪ್ರವೇಶಮಾಡಿದರು. ಆಗ ಕರಣೀಕರು ಆ ರಾಜಕುಮಾರರು ಬಂದ ವೃತ್ತಾಂತವನ್ನು ತಮ್ಮ ಒಡತಿಗೆ ತಿಳಿಯಪಡಿಸಿ ಆಕೆಯ ಅಪ್ಪಣೆಯಿಂದ ಅವರನ್ನು ಅರಮನೆಯಲ್ಲಿ ಒಂದಾನೊಂದು ತೋಟ್ಟಿಯಲ್ಲಿ ಇಳಿಸಿ, ಕೆಲವುಮಂದಿ ಸೇವಾಜನರನ್ನು ನಿಯಮಿಸಿ, ರಾಜೋಪಚಾರದಿಂದ ಅವರನ್ನು ಪೋಷಿಸುತ್ತಿದ್ದರು.

ಇತ್ತಲಾ ಮಾರನಾಯಕನು ಚಾರರ ಮುಖದಿಂದ ಈ ವೃತ್ತಾಂತವನ್ನು ಕೇಳಿ, ತನಗೂ ತನ್ನ ಜನಗಳಿಗೂ ಇದೇನೋ ಮಹತ್ತರವಾದ ಆಪತ್ಕಾಲವು ಪ್ರಾಪ್ತವಾಯಿತೆಂದು ನಿಶ್ಚಯಿಸಿ, ಯುದ್ಧಸನ್ನದ್ಧನಾಗಿ ತನ್ನ ಗ್ರಾಮದಿಂದ ಬರುತ್ತಿದ್ದನು. ಯದುರಾಯರು ತಮ್ಮನಿಂದೊಡಗೂಡಿ ಸ್ನಾನಸಂಧ್ಯಾವಂದನೆಗಳನ್ನು ತೀರಿಸಿಕೊಂಡು, ಶ್ರೀಚಾಮುಂಡೇಶ್ವರೀ ಅಮ್ಮನವರನ್ನು ಪೂಜಿಸಿ, ಪೂರ್ವದಲ್ಲಿ ಆ ಕರಣೀಕರು ರಹಸ್ಯದಲ್ಲಿ ಇಟ್ಟಿದ್ದ ಶೂರರ ಸಹಾಯವನ್ನು ಮಾಡಿಕೊಂಡು, ಶತ್ರುಸೇನೆಯೊಡನೆ ಮಹತ್ತರವಾದ ಯುದ್ಧವನ್ನು ಮಾಡಿ, ಸೇನಾಪತಿಯಾದ ಮಾರನಾಯಕನನ್ನೂ, ಅವನ ಬಂಧುಮಿತ್ರ ಸಮೂಹವನ್ನೂ ಸಹ ಲೀಲೆಯಿಂದ ಸಂಹರಿಸಿ, ಶ್ರೀಚಾಮುಂಡೇಶ್ವರೀ ಅಮ್ಮನವರ ಅನುಗ್ರಹದಿಂದ ಸ್ಥಿರವಾದ ಜಯಲಕ್ಷ್ಮಿಯನ್ನು ಹೊಂದಿದರು.

ರಾಜಪತ್ನಿಯು ಶತ್ರುಸಂಹಾರವಾಯಿತೆಂಬ ವೃತ್ತಾಂತವನ್ನು ಕೇಳಿ, ಮನೋವ್ಯಥೆಗಳನ್ನೆಲ್ಲಾ ತ್ಯಜಿಸಿ, ಸಂತೋಷವನ್ನು ಧರಿಸಿ, ತಮ್ಮ ಪಟ್ಟಣದ ಜನರನ್ನು ಕಳುಹಿಸಿ, ಯುದ್ಧಾಂಗಣದಿಂದ ಆ ರಾಜಪುತ್ರರನ್ನು ಕರೆಯಕಳುಹಿಸಿದಳು. ಆಗ ಯದುರಾಯರು ಪಟ್ಟಣದ ಜನರಿಂದ ಹೊಗಳಿಸಿಕೊಳ್ಳುತ್ತಾ ಹೊರಟು, ಅರಮನೆಯ ಬಾಗಲಿಗೆ ಬಂದು, ಅಲ್ಲಿ ವೃದ್ಧರಾದ ಸುವಾಸಿನಿಯರಿಂದ ಆರ್ತಿಯನ್ನೆತ್ತಿಸಿಕೊಂಡು, ಒಳಕ್ಕೆ ಚಿತ್ತಯಿಸಿ, ಆಸ್ಥಾನಮಂಟಪಕ್ಕೆ ಬಂದು, ತಮ್ಮ ಸೇನಾಜನ ಮುಂತಾದ ಜನರಿಗೆ ಸನ್ಮಾನಮಾಡಿ ಕಳುಹಿಸಿ, ರಾಜಪತ್ನಿಯ ಆಜ್ಞೆಯಿಂದ ತಮ್ಮನಿಂದೊಡಗೂಡಿ, ಆ ಕರಣೀಕರನ್ನೂ ಜಂಗಮಯ್ಯನನ್ನೂ ಸಹ ಕರೆದುಕೊಂಡು ಅಂತಃಪುರಕ್ಕೆ ಹೋಗಿ, ಅಲ್ಲಿ ತೆರೆಯ ಮರೆಯಲ್ಲಿರುವ ರಾಜಪತ್ನಿಗೆ ನಮಸ್ಕರಿಸಿ, ಮಂಗಳಕರವಾದ ಪೀಠದಲ್ಲಿ ಕರಗಳನ್ನು ಕಟ್ಟಿಕೊಂಡು ಕೂತುಕೊಂಡರು. ಆಗ ರಾಜಪತ್ನಿಯು ಯದುರಾಯರನ್ನು ನೋಡಿ, ಅತ್ಯಂತವಾಗಿ ಸಂತೋಷಪಟ್ಟು ಪ್ರೇಮದಿಂದ ಹೇಳಿದ್ದೇನೆಂದರೆ:— "ಅಯ್ಯಾ ರಾಜಕುಮಾರರೆ, ಶ್ರೀಚಾಮುಂಡೇಶ್ವರೀ ಅಮ್ಮನವರ ಅನುಗ್ರಹದಿಂದ ದುಷ್ಟರಾದ ನಮ್ಮ ಶತ್ರುಗಳನ್ನು ಯುದ್ಧದಲ್ಲಿ ಸಂಹರಿಸಿ ಜಯಲಕ್ಷ್ಮಿಯನ್ನು ಪಡೆದು ಕೃತಾರ್ಥರಾಗಿ ಬಂದಿರುವ ಬುದ್ಧಿಶಾಲಿಗಳಾದ ನಿಮ್ಮನ್ನು ಕಂಡು ನಾವೆಲ್ಲರೂ ಅತ್ಯಂತವಾಗಿ ಸಂತೋಷಪಟ್ಟೆವು. ಅಯ್ಯಾ ಪರಾಕ್ರಮಶಾಲಿಗಳಾದ ರಾಜಕುಮಾರರೆ, ನೀವು

ನಿಷ್ಕಂಟಕವಾಗಿ ಮಾಡಿರುವ ನಮ್ಮ ವಂಶಕ್ರಮವಾಗಿ ಬಂದ ಈ ರಾಜ್ಯವನ್ನು ರಕ್ಷಿಸುವದಕ್ಕೆ ನೀವೇ ಯೋಗ್ಯರು. ಮತ್ತು ನಮ್ಮ ರಾಜ್ಯಲಕ್ಷ್ಮಿಯನ್ನು ಹೋಲುವಂತೆ ದೇವಾಜಮ್ಮಣ್ಣಿಯೆಂಬ ನಮ್ಮ ಪುತ್ರಿಯನ್ನು ಯಥಾಶಾಸ್ತ್ರವಾಗಿ ಪಾಣಿಗ್ರಹಣ ಮಾಡಿಕೊಂಡು, ರಾಜ್ಯವನ್ನು ರಕ್ಷಿಸುತ್ತಾ, ಸುಖವಾಗಿರುವದು" ಎಂದು ಹೇಳಿ, ವಸ್ತ್ರಾಭರಣ ಪುಷ್ಪಾಹಾರಗಳಿಂದ ಮರ್ಯಾದೆ ಮಾಡಿ, ಅಂಕರಣೀಕರನ್ನು ಕರೆದು, ಇನ್ನು ಮೇಲೆ ನೀವೆಲ್ಲರೂ ಈ ಯದುರಾಯರ ಆಜ್ಞಾನುಸಾರವಾಗಿ ಇರುವುದೆಂದು ಅವರಿಗೆ ಕಟ್ಟುಮಾಡಿ, ಆ ರಾಜಕುಮಾರರಿಬ್ಬರನ್ನೂ ತಮ್ಮ ಅರಮನೆಯಲ್ಲಿ ಪೂರ್ವದಲ್ಲಿ ಇಳಿದಿದ್ದ ತೋಟ್ಟಿಯಲ್ಲಿಯೇ ಇರುವಂತೆ ನಿಯಮಿಸಿದಳು. ಅನಂತರದಲ್ಲಿ ಆ ರಾಜಪತ್ನಿಯು ಪಟ್ಟಣವನ್ನು ಶೃಂಗಾರ ಮಾಡಿಸಿ, ಅರಮನೆಯಲ್ಲಿ ಚಪ್ಪರ ಮೇಲುಕಟ್ಟುಗಳನ್ನು ಕಟ್ಟಿಸಿ, ವಿವಾಹಪ್ರಸ್ತಕ್ಕೆ ಬೇಕಾದ ವಸ್ತ್ರಾಭರಣ ಮುಂತಾದ ಸಕಲ ಪದಾರ್ಥಗಳನ್ನೂ ಸಿದ್ಧಪಡಿಸಿ, ತಮ್ಮ ಬಂಧುಜನ ಮುಂತಾದ ಸಕಲರನ್ನೂ ಕರೆಯಿಸಿ, ಜೋಯಿಸರು ಹೇಳಿದ ಸುಮುಹೂರ್ತದಲ್ಲಿ ಅರಮನೇ ಸಂಪ್ರದಾಯದಮೇರೆಗೆ ಕುಲದೇವತೆಯಾದ ಶ್ರೀಚಾಮುಂಡೇಶ್ವರೀ ಅಮ್ಮನವರನ್ನೂ, ಶ್ರೀಕಂಠೇಶ್ವರಸ್ವಾಮಿಯವರನ್ನೂ ಸಹಾ ಪೂಜಿಸಿ, ಸಮಾವರ್ತನೆ ಕಾಶೀಯಾತ್ರೆಯನ್ನು ಮಾಡಿಕೊಂಡು ಸರ್ವಾಲಂಕಾರ ಭೂಷಿತರಾದ ಯದುರಾಯರಿಗೆ ತಮ್ಮ ಪುತ್ರಿಯರಾದ ದೇವಾಜಮ್ಮಣ್ಣಿಯವರನ್ನು ತಮ್ಮ ಜ್ಞಾತಿಯರಾದ ಕೆಂಚಲಗೂಡು ನಂಜರಾಜಯ್ಯನಿಂದ ಧಾರೆಯನ್ನೆರಸಿ, ದೇಶಕೋಶಗಳನ್ನು ಸ್ವಾಧೀನಮಾಡಿ, ಮುದ್ರೇ ವುಂಗುರವನ್ನು ಕೊಟ್ಟು ವಿವಾಹ ಮಹೋತ್ಸವವನ್ನು ಬೆಳೆಯಿಸಿದಳು.

ಅನಂತರದಲ್ಲಿ ಶಾಲೀವಾಹನಶಕ ೧೩೨೨ಕ್ಕೆ ಸಲ್ಲುವ ಪ್ರಮಾಥಿ ಸಂವತ್ಸರದ ವೈಶಾಖ ಶುದ್ಧ ಪಂಚಮೀ ಸೋಮವಾರ ಶುಭ ಮುಹೂರ್ತದಲ್ಲಿ ಯದುರಾಯರಿಗೆ ಪಟ್ಟಾಭಿಷೇಕವಾಯಿತು. ಅನಂತರದಲ್ಲಿ ಮಹಾಬಲಿಷ್ಠರಾದ ಆ ಯದುಮಹಾರಾಯರು ಬಂದಾನೊಂದು ಕಾರಣದಿಂದ ತಮ್ಮ ಮಾವನವರ ಜ್ಞಾತಿಯರಾದ ಕಾಂತರಾಜಯ್ಯನೆಂಬ ರಾಜನನ್ನು ನಿಗ್ರಹಿಸಿ, ಅವನ ಪಟ್ಟಣವನ್ನು ತಮ್ಮ ತಮ್ಮಂದಿರಾದ ಕೃಷ್ಣರಾಯರಿಗೆ ಕೊಟ್ಟು, ಪೂರ್ವಕ್ಕಿಂತಲೂ ಅತಿಶಯವಾಗಿ ರಾಜ್ಯಭಾರವನ್ನು ಮಾಡುತ್ತಿದ್ದರು.

ಹೀಗಿರುವಲ್ಲಿ ಆ ಯದುರಾಯರ ಪತ್ನಿಯಾದ ದೇವಾಜಮ್ಮಣಿಯವರು ಒಂದಾನೊಂದುದಿನ ಕೈಗಳನ್ನು ಜೋಡಿಸಿಕೊಂಡು ತಮ್ಮ ಪತಿಯನ್ನು ಕುರಿತು ಪ್ರಾರ್ಥಿಸಿದ್ದೇನೆಂದರೆ:—"ಸ್ವಾಮಿ, ಶ್ರೀಚಾಮುಂಡೇಶ್ವರೀ ಅಮ್ಮನವರ ಕಟಾಕ್ಷದಿಂದ ನಮ್ಮಿಬ್ಬರಿಗೂ ಸಂಘಟನೆ ಆಯಿತು. ಲಿಂಗಧಾರಿಯಾದ ಈ ಜಂಗಮಯ್ಯನೂ, ತಿಮ್ಮರಸಯ್ಯ ನಾರಣಯ್ಯರೆಂಬ ಈ ಕರಣೀಕರೂ ಸಹ ನಮಗೆ ಆಪ್ತರಾದ್ದರಿಂದಲೂ, ಆ ಸಂಘಟನೆಗೆ ಸಾಧಕರಾದ ಕಾರಣದಿಂದಲೂ, ತಾವು ಈ ಮೂರು ಜನಗಳಿಗೂ ಇಷ್ಟವಾದ ಕಾರ್ಯಗಳನ್ನು ನೆರವೇರಿಸಿಕೊಟ್ಟು ಶಾಶ್ವತವಾದ ಕೀರ್ತಿಯನ್ನು ಪಡೆಯಬೇಕು. ಇವರು ಪ್ರಾರ್ಥಿಸತಕ್ಕ ಇಷ್ಟವಾದ ಕಾರ್ಯಗಳು ಯಾವವೆಂದರೆ—ನಮ್ಮ ವಂಶದಲ್ಲಿ ಹುಟ್ಟಿದ ಧೊರೆಗಳೆಲ್ಲರೂ ತಮ್ಮ ಧ್ವಜದಲ್ಲಿ ತನ್ನ ಗುರುತಾದ ಕಾವೀವಸ್ತ್ರವನ್ನು ಕಟ್ಟಿ, ತನ್ನ ನಿಜನಾಮಧೇಯವಾದ ಒಡೆಯರೆಂಬ ಹೆಸರನ್ನು ಪಡೆಯಬೇಕೆಂದು ಈ ಜಂಗಮಯ್ಯನು ಪ್ರಾರ್ಥಿಸುವನು; ಈ ಕರಣೀಕರಿಬ್ಬರೂ ತಮ್ಮ ವಂಶಪಾರಂಪರ್ಯವಾಗಿ ನಮ್ಮ ವಂಶದಲ್ಲಿ ಹುಟ್ಟಿದ ಧೊರೆಗಳ ಸನ್ನಿಧಿಯಲ್ಲಿ ರಾಯಸದ ಅಧಿಕಾರವನ್ನು ಪ್ರಾರ್ಥಿಸುವರು. ಈ ರೀತಿಯಿಂದ ಈ ಜನರ ಇಷ್ಟಾರ್ಥಗಳನ್ನು ನೆರವೇರಿಸಬೇಕು" ಎಂದು ಪ್ರಾರ್ಥಿಸಲು, ಆ ಯದುರಾಯರು ಅದೇರೀತಿಯಲ್ಲಿ ಅವಳ ಮನೋರಥವನ್ನು ಪೂರ್ತಿಮಾಡಿದರು.

ಆ ಬಳಿಕ ಕೆಲವು ಕಾಲದವರಿಗೂ ಸಂತಾನವಿಲ್ಲದೆ ಶ್ರೀಚಾಮುಂಡೇಶ್ವರೀ ಅಮ್ಮನವರನ್ನು ಪ್ರಾರ್ಥನೆಮಾಡಿ ಅವರ ಅನುಗ್ರಹದಿಂದ ತಮ್ಮ ಧರ್ಮಪತ್ನಿಯಾದ ದೇವಾಜಮ್ಮಣ್ಣಿಯವರಲ್ಲಿ ಹಿರೀಬೆಟ್ಟಚಾಮರಾಜ ಒಡೆಯರವರು ಚಾಮರಾಜ ಒಡೆಯರವರು ಎಂಬ ಇಬ್ಬರು ಪುತ್ರರನ್ನು ಪಡೆದು, ಸಂತೋಷಭರಿತರಾಗಿ ಪೂರ್ವದಲ್ಲಿ ಪುತ್ರಾರ್ಥವಾಗಿ ಪ್ರಾರ್ಥನೆ ಮಾಡಿದ್ದ ಮೇರೆಗೆ ಶ್ರೀಚಾಮುಂಡೇಶ್ವರೀ ಅಮ್ಮನವರ ದೇವಸ್ಥಾನದಲ್ಲಿರುವ ಸಂಪಿಗೇಮರದ ಕೊನೆಯಲ್ಲಿ ರತ್ನದ ತೊಟ್ಟಿಲನ್ನು ಕಟ್ಟಿ, ಅಮ್ಮನವರನ್ನು ಸಂತೋಷಪಡಿಸಿ, ನಂಜನಗೂಡಿಗೆ ಹೋಗಿ, ಇಷ್ಟದೇವರಾದ ಶ್ರೀಕಂಠೇಶ್ವರನ ದರ್ಶನಮಾಡಿ ಬಂದು, ಯಾದವಗಿರಿಯಲ್ಲಿ ನಾಲ್ಕು ಬಾಗಿಲುಗಳುಳ್ಳ ಕೋಟೆಯನ್ನು ಕಟ್ಟಿಸಿ, ಮೇಲುಕೋಟೆ ಎಂಬದಾಗಿ ಹೆಸರನ್ನಿಟ್ಟು

ಕೆಲವು ದಿವಸ ಧರ್ಮದಿಂದ ರಾಜ್ಯಪರಿಪಾಲನೆಯನ್ನು ಮಾಡುತ್ತಿದ್ದರು: ಅನಂತರದಲ್ಲಿ ತಮ್ಮ ಎರಡನೇ ಕುಮಾರರಾದ ಚಾಮರಾಜ ಒಡೆಯರಿಗೆ ತಮ್ಮ ಮಾವನವರ ಜ್ಞಾತಿಯಾದ ಕೆಂಚಲಗೋಡು ನಂಜರಾಜ ಅರಸಿನವರಿಗೆ ಪುತ್ರಸಂತಾನವಿಲ್ಲದ್ದರಿಂದಲೂ, ಅವರು ವೃದ್ಧರಾದ್ದರಿಂದಲೂ, ಅವರ ಸಂರಕ್ಷಣಾರ್ಥವಾಗಿ ಆಗ್ರಾಮಾಧಿಪತ್ಯ ಮುಂತಾದ ವಿಚಾರಣೆಯನ್ನು ಮಾಡಿಕೊಂಡು ಸುಖದಿಂದಿರುವಂತೆ ನಿಬಂಧನೆಯನ್ನು ಮಾಡಿ, ಯದುರಾಯರವರು ಶಾಲೀವಾಹನ ಶಕ ೧೩೪೫ಕ್ಕೆ ಸಲ್ಲುವ ಶೋಭಕೃತು ಸಂವತ್ಸರದ ಶ್ರಾವಣ ಶುದ್ಧ ದಶಮಿಯಲ್ಲಿ ತಮ್ಮ ಹಿರೀಮಕ್ಕಳಾದ ಹಿರೀಬೆಟ್ಟಚಾಮರಾಜ ಒಡೆಯರವರಿಗೆ ಮಹೀಶೂರನಗರದಲ್ಲಿ ಪಟ್ಟಾಭಿಷೇಕವನ್ನು ಮಾಡಿಸಿ, ಅದೇ ದಿವಸ ರಾತ್ರಿ ಸ್ವರ್ಗಸೋಪಾನವನ್ನು ಅಡರಿದರು.

೩ ನೇ ಅಧ್ಯಾಯ.

೨. ಹಿರೀಬೆಟ್ಟಚಾಮರಾಜ ಒಡೆಯರವರು.

ಜನನ.—ಶಾಲೀವಾಹನ ಶಕ ೧೩೩೧ನೇ ಸರ್ವಧಾರಿ ಸಂವತ್ಸರದ ಮಾಘ ಶುದ್ಧ ೬.
ಪಟ್ಟಾಭಿಷೇಕ.— ,, ೧೩೪೫ನೇ ಶೋಭಕೃತು ,, ಶ್ರಾವಣ ಶುದ್ಧ ೧೦.
ಸಂತಾನ.—ಗೋಪಾಜಮ್ಮಣ್ಣಿಯವರಲ್ಲಿ ೧ನೇ ತಿಮ್ಮರಾಜ ಒಡೆಯರವರು.

ಈ ಹಿರೀಬೆಟ್ಟಚಾಮರಾಜ ಒಡೆಯರವರು ಧರ್ಮದಿಂದ ರಾಜ್ಯಪರಿಪಾಲನೆಯನ್ನು ಮಾಡಿ, ಶಾ|| ಶಕ ೧೩೮೦ನೇ ಬಹುಧಾನ್ಯ ಸಂವತ್ಸರದ ಪುಷ್ಯ ಬಹುಳ ೧೩ಯಲ್ಲಿ ಸದ್ಗತಿಯನ್ನು ಪಡೆದರು.

೩. ಮೊದಲನೇ ತಿಮ್ಮರಾಜ ಒಡೆಯರವರು.

ಜನನ.—ಶಾಲೀವಾಹನ ಶಕ ೧೩೫೫ನೇ ಪ್ರಮಾದೀಚ ಸಂವತ್ಸರದ ಆಶ್ವಯುಜ ಬ|| ೫.
ಪಟ್ಟಾಭಿಷೇಕ.— ,, ೧೩೮೦ನೇ ಬಹುಧಾನ್ಯ ,, ಮಾಘ ಬಹುಳ ೫.
ಸಂತಾನ.—ಕಳಲೇ ಅರಸಿನವರ ಮಕ್ಕಳು ಕಾಂತಾಜಮ್ಮಣ್ಣಿಯವರಲ್ಲಿ ಹಿರೀಚಾಮರಾಜರಸ ಒಡೆಯರವರು.

ಇವರು ಧರ್ಮದಿಂದ ರಾಜ್ಯವನ್ನಾಳಿ ಶಾ|| ಶಕ ೧೪೦೦ನೇ ವಿಳಂಬಿ ಸಂವತ್ಸರದ ವೈಶಾಖಬಹುಳ ತದಿಗೆಯಲ್ಲಿ ಸ್ವರ್ಗವನ್ನು ಐದಿದರು.

೪. ಹಿರೀಚಾಮರಾಜರಸ ಒಡೆಯರವರು.

ಜನನ.—ಶಾಲೀವಾಹನ ಶಕ ೧೪೮೬ನೇ ಸ್ವಭಾನು ಸಂವತ್ಸರದ ಜ್ಯೇಷ್ಠ ಶುದ್ಧ ೮.

ಪಟ್ಟಾಭಿಷೇಕ.— ,, ೧೫೦೧ನೇ ವಿಳಂಬಿ ,, ಜ್ಯೇಷ್ಠ ಶುದ್ಧ ೫.

ಸಂತಾನ.—ಬಿಳಿಕೆರೇ ಅರಸಿನವರ ಮಕ್ಕಳು ಪದ್ಮಾಜಮ್ಮಣ್ಣಿಯವರಲ್ಲಿ ಬೆಟ್ಟಚಾಮ ರಾಜ ಒಡೆಯವರು.

ಇವರು ಸುಖದಿಂದ ರಾಜ್ಯವನ್ನು ಪಾಲಿಸುತ್ತಿದ್ದು, ಕೀರ್ತಿಯನ್ನು ಪಡೆದು ೧೫೪೬ನೇ ಶ್ರೀಮುಖ ಸಂವತ್ಸರದ ಚೈತ್ರ ಬಹುಳ ತದಿಗೆಯಲ್ಲಿ ಸ್ವರ್ಗ ಸೋಪಾನವನ್ನು ಐದಿದರು.

---

೫. ಬೆಟ್ಟಚಾಮರಾಜ ಒಡೆಯರವರು.

ಜನನ.—ಶಾಲೀವಾಹನ ಶಕ ೧೫೧೫ನೇ ಪರೀಧಾವಿ ಸಂವತ್ಸರದ ಆಶ್ವಯುಜ ಶುದ್ಧ ೮.

ಪಟ್ಟಾಭಿಷೇಕ.— ,, ೧೫೪೬ನೇ ಶ್ರೀಮುಖ ,, ವೈಶಾಖ ಶುದ್ಧ ೩.

ಸಂತಾನ.—ಕೋಟೆತೊರವಳ್ಳಿ ಚನ್ನರಾಜಯ್ಯನವರ ಮಕ್ಕಳು ಅಳಗಾಜಮ್ಮಣ್ಣಿಯ (ಗೋಪರಸಮ್ಮನ) ವರಲ್ಲಿ ಪುತ್ರರು—(೧) ೨ನೇ ತಿಮ್ಮರಾಜ ಒಡೆಯರವರು; (೨) ಕೃಷ್ಣರಾಜ ಒಡೆಯರವರು; (೩) ಬೋಳಚಾಮರಾಜ ಒಡೆಯರವರು. ಪುತ್ರಿಯರು—(೧) ದೊಡ್ಡದೇವೀರಮ್ಮಣ್ಣಿಯವರು; (೨) ಚಿಕ್ಕದೇವೀರಮ್ಮಣ್ಣಿಯವರು; (೩) ನಂಜಮ್ಮಣ್ಣಿಯವರು.

ದೇಶಗಳನ್ನು ಕಟ್ಟಿದ್ದು.—ಇವರು ಹರವು ಮುಂತಾದ ಸ್ಥಳಗಳಲ್ಲಿದ್ದ ಪಾಳ್ಯಗಾರರನ್ನು ಜಯಿಸಿ ಅವರ ಸೀಮೆಗಳನ್ನು ಕಟ್ಟಿಕೊಂಡು ಶೃಂಗಾರ ಹಾರರೆಂಬ ಬಿರುದನ್ನು ಸಂಪಾದಿಸಿದರು.

ಮುಖ್ಯ ವಿಷಯಗಳು.—ಇವರು ಧರ್ಮದಿಂದ ರಾಜ್ಯಪರಿಪಾಲನೆಯನ್ನು ಮಾಡುತ್ತಾ ಬೆಟ್ಟದಲ್ಲಿ ಶ್ರೀಚಾಮುಂಡೇಶ್ವರೀ ಅಮ್ಮನವರ ದೇವಸ್ಥಾನದ ಹಿಂಭಾಗದಲ್ಲಿ ಹಿರೀಕೆರೆ ಎಂಬ ಒಂದು ತಟಾಕವನ್ನು ನಿರ್ಮಿಸಿದರು. ತಮ್ಮ ೨ನೇ ಪುತ್ರರಾದ ಕೃಷ್ಣರಾಜ ಒಡೆಯರವರಿಗೆ ಕೆಂಬಲ್ಲು ಮುಂತಾದ ಕೆಲವು ಗ್ರಾಮಗಳನ್ನೂ, ತಮ್ಮ ಹಿರೀಕುಮಾರರು ೨ನೇ ತಿಮ್ಮರಾಜ ಒಡೆಯರವರ ಪುತ್ರರಾದ ಬೆಟ್ಟದ ಒಡೆಯರವರಿಗೆ ಹೆಮ್ಮನಹಳ್ಳಿ ಮುಂತಾದ ಕೆಲವು ಗ್ರಾಮಗಳನ್ನೂ ಸಹಾ ಕೊಟ್ಟು, ಸುಖದಿಂದಿರುವಂತೆ ಕಟ್ಟು ಮಾಡಿದರು. ಅನಂತರದಲ್ಲಿ ತಮ್ಮ ಹಿರೀಕುಮಾರರಾದ ೨ನೇ ತಿಮ್ಮರಾಜ ಒಡೆಯರವರಿಗೆ

ಮಹೀಶೂರನಗರದಲ್ಲಿ ಮೊದಲು ಪಟ್ಟಾಭಿಷೇಕ ಮಾಡುವಂತೆಯೂ, ಅನಂತರದಲ್ಲಿ ಬೋಳಚಾಮರಾಜ ಒಡೆಯರವರಿಗೆ ಪಟ್ಟಾಭಿಷೇಕ ಮಾಡುವಂತೆಯೂ ನಿಬಂಧನೆಮಾಡಿ, ಶಾಲಿವಾಹನ ಶಕ ೧೪೫೪ನೇ ಪರೀಧಾವಿ ಸಂವತ್ಸರದ ಮಾಘ ಬಹುಳ ನವಮಿಯಲ್ಲಿ ಸ್ವರ್ಗಸೋಪಾನವನ್ನು ಅಡರಿದರು.

---

೬. ಎರಡನೇ ತಿಮ್ಮರಾಜ ಒಡೆಯರವರು.

ಜನನ.—ಶಾಲೀವಾಹನ ಶಕ ೧೪೧೩ನೇ ಪ್ರಜೋತ್ಪತ್ತಿ ಸಂವತ್ಸರದ ಭಾದ್ರಪದ ಬ॥ ೧೦.
ಪಟ್ಟಾಭಿಷೇಕ.— ,, ೧೪೫೪ನೇ ಪರೀಧಾವಿ ,, ಫಾಲ್ಗುಣ ಶುದ್ಧ ೧೩.
ಸಂತಾನ.—ತೊರವಳ್ಳಿ ಮಂಗಪ್ಪ ಒಡೆಯರವರ ಮಕ್ಕಳು ಕೆಂಪಮ್ಮಣ್ಣಿಯವರಲ್ಲಿ ಒಬ್ಬ ಒಡೆಯರು.

ದೇಶಗಳನ್ನು ಕಟ್ಟಿದ್ದು.—ಈ ತಿಮ್ಮರಾಜ ಒಡೆಯರವರು ಧೊರೆತನಮಾಡುವ ಕಾಲದಲ್ಲಿ ಸಿಂಧುವಳ್ಳೀ ಪಾಳ್ಯಗಾರ, ಹುಣಸನಾಳು ಪಾಳ್ಯಗಾರ ಮುಂತಾದವರನ್ನು ಸಂರಕ್ಷಣೆ ಮಾಡಿಕೊಂಡು ಇರುವಾಗ, ನಂಜನಗೂಡಿನ ರಥೋತ್ಸವವು ಪ್ರಾಪ್ತವಾದ್ದರಿಂದ, ಧೊರೆಗಳವರು ಅಲ್ಲಿಗೆ ದಯಮಾಡಿರುವಾಗ, ಕೆಲವು ಪಾಳ್ಯಗಾರರು ದೇವರ ಸೇವಾರ್ಥವಾಗಿ ಬಂದಿದ್ದರು. ಆಗ ಅವರು ಬಿರುದೆಂತೆಂಬರಗಂಡನೆಂಬದಾಗಿ ಹೊಗಳಿಸಿ ಕೊಳ್ಳುತ್ತಿರಲಾಗಿ, ಅಲ್ಲಿಗೆ ಬಂದಿದ್ದ ಮಹೀಶೂರ ಸೆಟ್ಟಿಯು ಬಿರುದೆಂತೆಂಬರಗಂಡನೆಂಬ ಬಿರುದು ನಮ್ಮ ಧೊರೆಗಳಾದ ತಿಮ್ಮರಾಜ ಒಡೆಯರಿಗಲ್ಲದೆ ಇತರರಿಗೆ ಸಲ್ಲತಕ್ಕದ್ದಲ್ಲವೆಂದು ಹೇಳಲು, ಪಾಳ್ಯಗಾರರೆಲ್ಲರೂ ಕೂಡಿ, ಆ ಸೆಟ್ಟಿಯನ್ನು ಶಿಕ್ಷೆ ಮಾಡಬೇಕೆಂಬದಾಗಿ ಹಿಡಿದುಕೊಂಡು ಹೋದರು. ತಿಮ್ಮರಾಜ ಒಡೆಯರವರು ಈ ಮಾತನ್ನು ಕೇಳಿ, ಅವರನ್ನೆಲ್ಲಾ ಜಯಿಸಿ, ಆ ಸೆಟ್ಟಿಯನ್ನು ಬಿಡಿಸಿಕೊಂಡು, ಬಿರುದೆಂತೆಂಬರಗಂಡನೆಂಬ ಬಿರುದನ್ನು ಪಡೆದು ಮಹೀಶೂರ ನಗರಕ್ಕೆ ದಯಮಾಡಿಸಿದರು. ಅನಂತರದಲ್ಲಿ ಇವರು ಉಮ್ಮತ್ತೂರು ಮುಂತಾದ ಪಾಳ್ಯಗಾರರನ್ನು ಜಯಿಸಿ, ಆನೆ ಕುದುರೆ ಓಂದಳ ಮುಂತಾದವುಗಳನ್ನು ತಮ್ಮ ಸ್ವಾಧೀನ ಮಾಡಿಕೊಂಡು, ರಾಯರಲ್ಲೆಲ್ಲಾ ಹೊನೆಗಾರರು ಎಂದು ಪ್ರಸಿದ್ಧಿಯನ್ನು ಪಡೆದು, ಸುಖದಿಂದ ರಾಜ್ಯವನ್ನು ಆಳುತ್ತಿದ್ದು ಶಾಲೀವಾಹನ ಶಕ ೧೪೭೩ನೇ ಪ್ರಜೋತ್ಪತ್ತಿ ಸಂವತ್ಸರದ ಪುಷ್ಯ ಬಹುಳ ಬಿದಿಗೆಯಲ್ಲಿ ಸ್ವರ್ಗವನ್ನೈದಿದರು.

---

೩. ಬೋಳಚಾಮರಾಜ ಒಡೆಯರವರು.

ಜನನ.—ಶಾಲೀವಾಹನ ಶಕ ೧೪೪೧ನೇ ಬಹುಧಾನ್ಯ ಸಂವತ್ಸರದ ವೈಶಾಖ ಶುದ್ಧ ೩.
ಪಟ್ಟಾಭಿಷೇಕ.— ,, ೧೪೨೪ನೇ ಪ್ರಜೋತ್ಪತ್ತಿ ,, ಮಾಘ ಶುದ್ಧ ೫.
ಪತ್ನಿಯರು.—(೧) ಹಿಂಧುವಳ್ಳಿ ವೀರರಾಜಯ್ಯನವರ ಮಕ್ಕಳು ವೀರಾಜಮ್ಮಣ್ಣಿಯವರು ; (೨) ಕೋಟೇ ತಿಮ್ಮಪ್ಪ ಒಡೆಯರ ಮಕ್ಕಳು ದೇವಾಜಮ್ಮಣ್ಣಿಯವರು.
ಸಂತಾನ.—ವೀರಾಜಮ್ಮಣ್ಣಿಯವರಲ್ಲಿ ಪುತ್ರರು—(೧) ಬೆಟ್ಟದಚಾಮರಾಜ ಒಡೆಯರವರು ; (೨) ರಾಜಒಡೆಯರವರು. ಪುತ್ರಿಯರು—(೧) ದೊಡ್ಡದೇವೀರಮ್ಮಣ್ಣಿಯವರು; (೨) ಚಿಕ್ಕದೇವಮ್ಮಣ್ಣಿಯವರು ; (೩) ಚಿಕ್ಕದೇವೀರಮ್ಮಣ್ಣಿಯವರು. ದೇವಾಜಮ್ಮಣ್ಣಿಯವರಲ್ಲಿ (೧) ಮುಪ್ಪಿನದೇವರಾಜ ಒಡೆಯರವರು; (೨) ಚನ್ನರಾಜ ಒಡೆಯರವರು.

ದೇಶಗಳನ್ನು ಕಟ್ಟಿದ್ದು.—ಇವರು ರಾಮರಾಜಯ್ಯನ ದಳವಾಯಿಯಾದ ತೊರೆಮಾವಿನಹಳ್ಳೀ ವೆಂಕಟಾದ್ರಿನಾಯಕನನ್ನು ಯುದ್ಧದಲ್ಲಿ ಜಯಿಸಿ, ಅವನಲ್ಲಿದ್ದ ದಾಳ ದಮಾಣ ಅಂದಳ ಮುಂತಾದನ್ನು ಕಿತ್ತುಕೊಂಡು, ಅವನು ಹೊಗಳಿಸಿಕೊಳ್ಳುತ್ತಿದ್ದ ಸುಗುಣಗಂಭೀರನೆಂಬ ಬಿರುದನ್ನು ಸಂಪಾದಿಸಿದರು.

ಮುಖ್ಯ ವಿಷಯಗಳು.—ಇವರು ರಾಜ್ಯವನ್ನು ಆಳುತ್ತಿದ್ದಾಗ ಶ್ರೀಚಾಮುಂಡೇಶ್ವರೀ ಬೆಟ್ಟಕ್ಕೆ ಅಮ್ಮನವರ ದರ್ಶನಾರ್ಥವಾಗಿ ಚಿತ್ತಯಿಸಿದ್ದರು. ಆಗ ಇವರ ಮಂಡೇಮೇಲೆ ಸಿಡಿಲು ಬಿದ್ದು ಅಮ್ಮನವರ ಕೃಪೆಯಿಂದ ಮಂಡೇಕೂದಲು ಮಾತ್ರ ಉದುರಿಹೋಗಿ ಶರೀರವು ರವೆ ಕೊಂಕದಿತ್ತು. ಆದ್ದರಿಂದ ಇವರಿಗೆ ಬೋಳಚಾಮರಾಜರೆಂಬ ಹೆಸರು ಪ್ರಸಿದ್ಧವಾಯಿತು. ಇವರು ಧರ್ಮದಿಂದ ರಾಜ್ಯವನ್ನಾಳುತ್ತಿದ್ದು ಸತ್ಕೀರ್ತಿಯನ್ನು ಪಡೆದು ಶಾ॥ ೧೪೯೮ನೇ ಧಾತು ಸಂವತ್ಸರದ ಜ್ಯೇಷ್ಠ ಬಹುಳ ೧೦ಲ್ಲಿ ಸ್ವರ್ಗಸೋಪಾನವನ್ನೈದಿದರು.

---

೪. ಬೆಟ್ಟದಚಾಮರಾಜ ಒಡೆಯರವರು.

ಜನನ.—ಶಾಲಿವಾಹನ ಶಕ ೧೪೭೧ನೇ ಸೌಮ್ಯ ಸಂವತ್ಸರದ ಫಾಲ್ಗುಣ ಬ॥ ೧೦.
ಪಟ್ಟಾಭಿಷೇಕ.— ,, ೧೪೯೮ನೇ ಧಾತು ,, ಆಷಾಢ ಬ॥ ೨.
ಪತ್ನಿಯರು.—(೧) ಬಾಗೂರೆ ದೇಶೀ ಅರಸಿನವರ ಮಕ್ಕಳು ಲಿಂಗಾಜಮ್ಮಣ್ಣಿಯವರು,
(೨) ಹಳೇಬೀಡು ದೇವರಾಜ ಅರಸಿನವರ ಮಕ್ಕಳು ದೇವಾಜಮ್ಮಣ್ಣಿಯವರು,
(೩) ನೀಲಸೋಗೆ ನೀಲಕಂಠ ಅರಸಿನವರ ಮಕ್ಕಳು ನಂಜಮ್ಮಣ್ಣಿಯವರು,
(೪) ಕಳಲೇ ಹಿರೀತಿಮ್ಮರಾಜ ಅರಸಿನವರ ಮಕ್ಕಳು ದೇವೀರಮ್ಮಣ್ಣಿಯವರು,
(೫) ಹುರದ ಕೃಷ್ಣೇ ಅರಸಿನವರ ಮಕ್ಕಳು ಗುರುವಾಜಮ್ಮಣ್ಣಿಯವರು,



ರಾಜಒಡೆಯರವರು.

ಸಂತಾನ.—(೧)ಲಿಂಗಾಜಮ್ಮಣ್ಣಿಯವರಲ್ಲಿ ರಾಜಒಡೆಯರವರು [ವೆಂಕಟೇಶ್ವರ ಸ್ವಾಮಿಯ ಪ್ರಾರ್ಥನೆ ಮಾಡಿ ಇದ್ದದ್ದನ್ನು ಮರೆತು ಉಪದ್ರವವಾದ ಕಾರಣ, ಇವರಿಗೆ ತಿಮ್ಮರಾಜ ಒಡೆಯರೆಂದು ನಾಮಕರಣವನ್ನು ಮಾಡಿದರು]; (೨) ಹುರದ ಗುರುಮ್ಮಾಜಮ್ಮಣಿಯವರಲ್ಲಿ ರಣಧೀರ ಕಂಠೀರವ ನರಸರಾಜಒಡೆಯರವರು.

ಮುಖ್ಯವಿಷಯಗಳು.—ಈ ಬೆಟ್ಟದಚಾಮರಾಜ ಒಡೆಯರವರು ಸುಖದಿಂದ ರಾಜ್ಯವನ್ನಾಳುತ್ತಿದ್ದು, ವೈರಾಗ್ಯಭಾಗ್ಯವನ್ನು ಅಪೇಕ್ಷಿಸಿ, ತಪಸ್ಸಿನಲ್ಲಿ ಆಸಕ್ತರಾಗಿ, ಶಾ॥ ಶಕ ೧೪೭೫ನೇ ಪರೀಧಾವಿ ಸಂವತ್ಸರದ ಜ್ಯೇಷ್ಠ ಶುದ್ಧ ೭ ಮಂಗಳವಾರದಲ್ಲಿ ಜನಿಸಿದ, ತಮ್ಮತಮ್ಮಂದಿರಾದ ರಾಜಒಡೆಯರವರಿಗೆ, ಶಾ॥ ಶಕ ೧೫೦೧ನೇ ಬಹುಧಾನ್ಯಸಂವತ್ಸರದ ವೈಶಾಖ ಶುದ್ಧ ೧೫ ಶುಕ್ರವಾರದಲ್ಲಿ, ಮಹೀಶೂರನಗರದಲ್ಲಿ ಪಟ್ಟಾಭಿಷೇಕವನ್ನು ಮಾಡಿಸಿ, ಸರ್ವತಂತ್ರ ಸ್ವತಂತ್ರರಾಗಿ ರಾಜ್ಯಭಾರವನ್ನು ಮಾಡುವಂತೆ ಕಟ್ಟುಮಾಡಿ, ತಾವುಸ್ವೇಚ್ಛೆಯಾಗಿ ಮನೋಹರವಾದ ಗುಂಡ್ಲು ತೆರಕಣಾಂಬಿ ಎಂಬ ಬಂದಾನೊಂದು ಗ್ರಾಮದಲ್ಲಿ ಪತ್ನೀಪುತ್ರರೊಡನೆ ಸುಖದಿಂದ ವಾಸಮಾಡುತ್ತಾಇದ್ದರು.

೪ನೇ ಅಧ್ಯಾಯ.

೯. ರಾಜಒಡೆಯರವರು.

ಜನನ.—ಶಾಲೀವಾಹನ ಶಕ ೧೪೭೫ನೇ ಪರೀಧಾವಿ ಸಂವತ್ಸರದ ಜ್ಯೇಷ್ಠ ಶುದ್ಧ ೭.

ಪಟ್ಟಾಭಿಷೇಕ.— „ ೧೫೦೧ನೇ ಬಹುಧಾನ್ಯ „ ವೈಶಾಖ ಶುದ್ಧ ೧೫.

ಪತ್ನಿಯರು.-(೧)ಸಿಂಧುವಳ್ಳೀ ಮಲ್ಲರಾಜ ಅರಸಿನವರ ಮಕ್ಕಳು ವೀರಾಜಮ್ಮಣ್ಣಿಯವರು, (೨) ಯಡವನಹಳ್ಳೀ ತಿಮ್ಮರಾಜ ಅರಸಿನವರ ಮಕ್ಕಳು ತಿಮ್ಮಾಜಮ್ಮಣ್ಣಿಯವರು, (೩) ಬಿಳುಗುಲೀ ದೊಡ್ಡ ತಿಮ್ಮರಾಜ ಅರಸಿನವರ ಮಕ್ಕಳು ನೀಲಾಜಮ್ಮಣ್ಣಿಯವರು, (೪) ಬೀಕೆರೇ ದೇವರಾಜ ಅರಸಿನವರ ಮಕ್ಕಳು ದೇವೀರಮ್ಮಣ್ಣಿಯವರು, (೫) ತಿಪ್ಪೂರು ಮುದ್ದಾಜಮ್ಮಣ್ಣಿಯವರು.

ಸಂತಾನ.— ವೀರಾಜಮ್ಮಣ್ಣಿಯವರಲ್ಲಿ (೧) ನರಸರಾಜ ಒಡೆಯರವರು, (೨) ಬೆಟ್ಟದಒಡೆಯರವರು, (೩) ನಂಜರಾಜಒಡೆಯರವರು. ದೇವೀರಮ್ಮಣ್ಣಿಯವರಲ್ಲಿ ಪುತ್ರರು—(೪) ಚಾಮರಾಜ ಒಡೆಯರವರು; ಪುತ್ರಿಯರು—ಅಕ್ಕಾಆಯಮ್ಮಣ್ಣಿಯವರು. ತಿಮ್ಮಾಜಮ್ಮಣ್ಣಿಯವರಿಗೆ (೫) ದೌರಸಪುತ್ರರು ಇಮ್ಮಡಿರಾಜ ಒಡೆಯರವರು, (೬) ಸ್ವೀಕೃತಪುತ್ರರು ರಣಧೀರ ಕಂಠೀರವ ನರಸರಾಜ ಒಡೆಯರವರು.

ದೇಶಗಳನ್ನು ಕಟ್ಟಿದ್ದು.—ರಾಜಒಡೆಯರವರು ಮಹಿಶೂರ ಪುರದಲ್ಲಿ ರಾಜ್ಯಭಾರಮಾಡುವ ಕಾಲದಲ್ಲಿಯೂ, ಶ್ರೀರಂಗಪಟ್ಟಣದಲ್ಲಿ ರಾಜ್ಯಭಾರ ಮಾಡುವ ಕಾಲದಲ್ಲಿಯೂ, ಅನೇಕ ಪಾಳ್ಯಗಾರರನ್ನು ಜಯಿಸಿ ಅವರ ದೇಶಗಳನ್ನು ಕಟ್ಟಿಕೊಂಡರು. ಅವುಗಳು ಯಾವವೆಂದರೆ:—

ಶಾಲೀವಾಹನ ಶಕ ೧೫೦೬ನೇ ತಾರಣ ಸಂವತ್ಸರದ ಚೈತ್ರ ಬಹುಳ ೨ಲ್ಲಿ ನರಸೀಪುರದ ನರಸಿಂಹನಾಯಕನಿಂದ ಅಕ್ಕೀ ಹೆಬ್ಬಾಳು.

೧೫೦೭ನೇ ಪಾರ್ಥಿವ ಸಂವತ್ಸರದ ಫಾಲ್ಗುಣ ಶುದ್ಧ ೧ಲ್ಲಿ, ತಿರುಮಲ ರಾಜಯ್ಯನಿಂದ ರಂಗಸಮುದ್ರವನ್ನು ಸ್ವಾಧೀನ ಮಾಡಿಕೊಂಡು, ಅಲ್ಲಿಗೆ ಹೊಸದಾಗಿ ಕೋಟೆಯನ್ನು ಕಟ್ಟಿಸಿದರು.

೧೫೧೭ನೇ ಮನ್ಮಥ ಸಂವತ್ಸರದ ಶ್ರಾವಣ ಶುದ್ಧ ೫ಲ್ಲಿ ಮಲ್ಲರಾಜಯ್ಯನಿಂದ ನರನಲ್ಲಿ.

೧೫೨೨ನೇ ಶಾರ್ವರಿ ಸಂವತ್ಸರದ ಚೈತ್ರ ಶುದ್ಧ ೧ಲ್ಲಿ ಜಗದೇರಾಯನಕಡೆ ಅಧಾಟರಾಯನಿಂದ ಅರಕೆರೆ.

೧೫೨೮ನೇ ಪರಾಭವ ಸಂವತ್ಸರದ ಶ್ರಾವಣ ಬಹುಳ ೫ಲ್ಲಿ ತಲಕಾಡು ನಂಜರಾಜಯ್ಯನಿಂದ ಸೋಸಲೆ ಮತ್ತು ಈ ಮಾಘ ಶುದ್ಧ ೧ಲ್ಲಿ ಬನ್ನೂರು.

೧೫೨೯ನೇ ಪ್ಲವಂಗ ಸಂವತ್ಸರದ ಪುಷ್ಯ ಬಹುಳ ೧ಲ್ಲಿ ಗೋಪಾಲ ರಾಜಯ್ಯನಕಡೆ ದೊಡ್ಡ ಹೆಬ್ಬಾರವನಿಂದ ಕನ್ನಂಬಾಡಿ.

೧೫೩೦ನೇ ಕೀಲಕ ಸಂವತ್ಸರದಲ್ಲಿ ಕೃಷ್ಣಪ್ಪನಾಯಕನಿಂದ ಜೇಲೂರು, ವೀರಾಜಯ್ಯನಿಂದ ಗ್ರಾಮ, ಇಮ್ಮಡಿ ರಾಮರಾಜನಾಯಕನಿಂದ ಯಳಂದೂರು, ಅಲಂಬಾಡಿ ಕರಾಚೂರಿ ನಂಜರಾಜಯ್ಯನಿಂದ ಸತ್ಯಾಗಾಲ.

೧೫೩೧ನೇ ಸೌಮ್ಯ ಸಂವತ್ಸರದಲ್ಲಿ ಲಕ್ಷ್ಮಪ್ಪನಾಯಕನಿಂದ ನರಸೀಪುರ.

೧೫೩೨ನೇ ಸಾಧಾರಣ ಸಂವತ್ಸರದ ವೈಶಾಖ ಶುದ್ಧ ೧೫ಲ್ಲಿ ಪೆರಿಪಟ್ಟಣದ ನಂಜೇಅರಸಿನಿಂದ ಸಿರಿಯೂರು.

೧೫೩೪ನೇ ಪರೀಧಾವಿ ಸಂವತ್ಸರದ ಆಷಾಢ ಶುದ್ಧ ೨ಲ್ಲಿ ಶ್ರೀಕಂಠರಾಜಯ್ಯನಿಂದ ಸರಗೂರು.

೧೫೩೫ನೇ ಪ್ರಮಾದೀಚ ಸಂವತ್ಸರದ ಫಾಲ್ಗುಣ ಶುದ್ಧ ೧ಲ್ಲಿ ಪಡಿನಾಡು ನಂಜರಾಜಯ್ಯನಿಂದ ತೆರಕಣಾಂಬಿ, ಮತ್ತು ಈ ಬಹುಳ ೫ಲ್ಲಿ ಉಮ್ಮತ್ತೂರು.

೧೫೩೬ನೇ ಆನಂದ ಸಂವತ್ಸರದ ಪುಷ್ಯಶುದ್ಧ ೫ಲ್ಲಿ ಲಿಂಗಪಾದಯ್ಯನ ಮಕ್ಕಳು ನಂಜರಾಜಯ್ಯ ಶ್ರೀಕಂಠಯ್ಯನಿಂದ ಹುರ ಮತ್ತು ಫಾಲ್ಗುಣ ಶುದ್ಧ ೬ ಶುಕ್ರವಾರದಲ್ಲಿ ನಂಜರಾಜಯ್ಯನಿಂದ ಹರದನಹಳ್ಳಿ.

೧೫೩೭ನೇ ರಾಕ್ಷಸ ಸಂವತ್ಸರದ ಚೈತ್ರ ಶುದ್ಧ ೧ಲ್ಲಿ ಬಸವರಾಜಯ್ಯನಿಂದ ಚಾಳ ಲೋಚನನಾಯಕನು ಕಟ್ಟಿಕೊಂಡು ಇದ್ದದ್ದನ್ನು ಜಯಿಸಿದ್ದು ಮೂಗೂರು,

ಜಗದೇರಾಯನಿಂದ ಕಾರ್ತಿಕ ಬಹುಳ ೧೧ಲ್ಲಿ ಕಿಕ್ಕೇರಿ, ಮತ್ತು ೧೧ಲ್ಲಿ ಹೊಳಲು, ಫಾಲ್ಗುಣ ಶುದ್ಧ ೫ಲ್ಲಿ ಹದಿನಾಡು, ಚಂದ್ರಶೇಖರನಾಯಕನಿಂದ ರಾಮಸಮುದ್ರ, ವೀರಾಜಯ್ಯನಿಂದ ಕಾರಗಳ್ಳಿ, ಶ್ರೀರಂಗರಾಯನಿಂದ ಉಚಿತವಾಗಿ ಬಂದದ್ದು ಶ್ರೀರಂಗಪಟ್ಟಣ.

೧೫೪೦ನೇ ಪ್ಲವಂಗ ಸಂವತ್ಸರದ ಚೈತ್ರ ಶುದ್ಧ ೧ಲ್ಲಿ ಕರಿಪಟ್ಟಣದ ನಂಜುಂಡ ಅರಸಿನಿಂದ ಮಾವತ್ತೂರು.

ಆನಂದ ಸಂವತ್ಸರದ ಫಾಲ್ಗುಣ ಶುದ್ಧ ೭ ಶುಕ್ರವಾರದಲ್ಲಿ ಪ್ರಭುವಳಿತೆವಾದ ರಾಜ್ಯಗಳನ್ನು ಸ್ವಾಧೀನ ಮಾಡಿಕೊಂಡು ಪಗದೀಹಣ ಬರುವಂತೆ ಗೊತ್ತು ಮಾಡಿದ ರಾಜ್ಯಗಳು.—

ಸೋಮರಾಜಯ್ಯನಿಂದ ತಲಕಾಡು, ಶ್ರೀಕಂಠಯ್ಯನಿಂದ ಹುಲ್ಲಹಳ್ಳಿ, ಕರಿಕಾಲ ಮಲ್ಲರಾಜಯ್ಯನಿಂದ ಕಳಲೆ, ಚನ್ನರಾಜಯ್ಯನಿಂದ ಹೆಗ್ಗಡದೇವನಕೋಟೆ, ಗೋಪಾಲ ರಾಜಯ್ಯನಿಂದ ಮಳಲವಾಡಿ, ಶಾಂತರಾಜಯ್ಯನಿಂದ ಬಿಳಿಕೆರೆ.


ಕಾರಗಳ್ಳಿಯನ್ನು ಕಟ್ಟಿಕೊಂಡ ವಿವರ.—ರಾಜಒಡೆಯರವರು ಧರ್ಮದಿಂದ ರಾಜ್ಯಪರಿಪಾಲನೆಯನ್ನು ಮಾಡುತ್ತಿದ್ದು, ಶ್ರೀಕಂಠೇಶ್ವರ ಸ್ವಾಮಿಯ ರಥೋತ್ಸವ ನಿಮಿತ್ತವಾಗಿ ನಂಜನಗೂಡಿಗೆ ಚಿತ್ತಯಿಸಿದರು. ಆಗ ಮಾರ್ಗದಲ್ಲಿ ಇವರ ಜ್ಞಾತಿಯಾದ ಕಾರಗಳ್ಳಿ ವೀರಾಜಯ್ಯನೆಂಬುವನು ತನಗೆ ಉಂಬಳಿಯಾಗಿ ಕೊಟ್ಟಿದ್ದ ತಂಡ್ಯವೆಂಬ ಗ್ರಾಮಕ್ಕೆ ಹೋಗಿ, ಬಿಲಗ ತಾಳ ಮೇಳಗಳೊಡನೆ ಅಂದಳವನ್ನು ಏರಿ, ಅಹಂಕಾರದಿಂದ ಇವರ ಎದುರಿಗೆ ಅಟ್ಟಹಾಸದಿಂದ ಬರುತ್ತಿದ್ದನು. ಅದನ್ನು ಕಂಡು, ರಾಜಒಡೆಯರವರ ಸೇನಾಜನರು, ನಮ್ಮ ಧೊರೆಗಳೆದುರಿಗೆ ಈಪರಿಯಾಗಿ ಬರತಕ್ಕದ್ದು ಅಯುಕ್ತವೆಂದು ತಿಳಿದು, ಅಂದಳವನ್ನು ಕಿತ್ತುಕೊಂಡು ಅವನನ್ನು ನೂಕಿಬಿಟ್ಟರು. ಆ ವೀರಾಜಯ್ಯನು ಇವರೊಡನೆ ಯುದ್ಧಮಾಡಿ ಜಯಿಸುವದಕ್ಕೆ ಸಾಮರ್ಥ್ಯವಿಲ್ಲದೆ, ದುಷ್ಟರೊಡನೆ ಆಲೋಚನೆ ಮಾಡಿ, ರಾಜಒಡೆಯರವರಿಗೆ ವಿಷವನ್ನು ಕೊಟ್ಟು ಕೊಲ್ಲಿಸಬೇಕೆಂದು ನಿಶ್ಚಯಿಸಿ, ಮಹೀಶೂರ ಲಕ್ಷ್ಮೀರಮಣಸ್ವಾಮಿಯ ಗುಡಿಯ ಅರ್ಚಕನಾದ ಶ್ರೀನಿವಾಸಯ್ಯನೆಂಬುವನಿಗೆ ಸ್ವಲ್ಪ ದ್ರವ್ಯವನ್ನು ಕೊಟ್ಟು, ರಾಜಒಡೆಯರವರಿಗೆ ವಿಷಮಿಶ್ರವಾದ ತೀರ್ಥವನ್ನು ಕೊಡು ಎಂದು ಬೋಧಿಸಿದನು. ಯುಕ್ತಾಯುಕ್ತ

ಪರಿಜ್ಞಾನವಿಲ್ಲದೆ ದ್ರವ್ಯದಮೇಲೆ ಆಸೆಯುಳ್ಳ, ಸ್ವಾಮಿದ್ರೋಹಿಯಾದ ಆ ಅರ್ಚಕನು ದ್ರವ್ಯವನ್ನು ತೆಗೆದುಕೊಂಡು, ತೀರ್ಥದಲ್ಲಿ ವಿಷವನ್ನು ಹಾಕಿ, ಧೊರೆಗಳ ಹಸ್ತಕ್ಕೆ ಒಪ್ಪಿಸಿ, ಭೀತನಾಗಿ ನಡುಗುತ್ತಾ ನಿಂತುಕೊಂಡನು. ರಾಜಒಡೆಯರವರು ತೀರ್ಥವನ್ನು ಹಸ್ತದಲ್ಲಿರಿಸಿಕೊಂಡು ಅವನನ್ನು ಕುರಿತು "ನೀನು ಎಂದಿನಂತೆ ಅಲ್ಲ. ಯಾತಕ್ಕೆ ನಡುಗುತ್ತಲಿದ್ದೀಯೆ? ಭಯಪಡಬೇಡ. ನೀನು ಏನು ಅಪರಾಧವನ್ನು ಮಾಡಿ ಇದ್ದರೂ ನಿನ್ನನ್ನು ಸಂರಕ್ಷಿಸುತ್ತಲಿದ್ದೇವೆ. ಯಥಾರ್ಥವಾಗಿ ಹೇಳು" ಎಂದು ಕೇಳಿದರು. ಆ ಬ್ರಾಹ್ಮಣನು "ನಿಮ್ಮ ಜ್ಞಾತಿಯಾದ ಕಾರಗಳ್ಳಿ ವೀರರಾಜಯ್ಯನು ನಿಮ್ಮನ್ನು ಕೊಲ್ಲಬೇಕೆಂದು, ಈ ಮೇರೆಗೆ ಮಾಡು ಎಂದು ಹೇಳಿದ್ದರಿಂದ, ವಿಷಮಿಶ್ರವಾದ ತೀರ್ಥವನ್ನು ಒಪ್ಪಿಸಿ ಇದ್ದೇನೆ" ಎಂದು ಹೇಳಲು, ರಾಜಒಡೆಯರು "ನೀನು ವಿಷವೆಂಬದಾಗಿ ಕೊಟ್ಟು ಇರುವೆಯೋ, ಲಕ್ಷ್ಮೀರಮಣಸ್ವಾಮಿಯ ತೀರ್ಥವೆಂಬದಾಗಿ ಕೊಟ್ಟಿರುವೆಯೋ" ಎಂಬದಾಗಿ ಕೇಳಿದರು. "ಲಕ್ಷ್ಮೀರಮಣಸ್ವಾಮಿಯ ತೀರ್ಥವೆಂಬದಾಗಿ ಒಪ್ಪಿಸಿದ್ದೇನೆ" ಎಂದು ಅರ್ಚಕನು ನುಡಿಯಲು, ಆ ಮಾತನ್ನು ಕೇಳಿ ಅತ್ಯಂತ ಭಕ್ತಿಯುಳ್ಳ ರಾಜಒಡೆಯರವರು ತೀರ್ಥಪ್ರಾಶನವನ್ನು ಮಾಡಿದರು. ಆಗ ಇವರು ಪರಮೇಶ್ವರಾಂಶದಲ್ಲಿ ಹುಟ್ಟಿದವರಾದಕಾರಣ, ತೀರ್ಥಾಂಶವು ಉದರವನ್ನು ಪ್ರವೇಶಿಸಿ, ವಿಷಾಂಶವು ಪೂರ್ವದಲ್ಲಿ ಪರಮೇಶ್ವರನ ಕಂಠದಲ್ಲಿ ಕಾಲಕೂಟವು ನಿಂತಂತೆ, ಹಸ್ತದಲ್ಲಿ ಕಪ್ಪಾಗಿ ನಿಂತಿತು.

ಅನಂತರದಲ್ಲಿ ರಾಜಒಡೆಯರವರು ಶತ್ರುಶೇಷವು ಇರಬಾರದೆಂದು ಯೋಚಿಸಿ, ಆ ಕಾರಗಳ್ಳಿ ವೀರರಾಜಯ್ಯನನ್ನು ಹಿಡಿತರಿಸಿ, ಕಿವಿಮೂಗುಗಳನ್ನು ಕುಯಿಸಿ ಅವನನ್ನು ಓಡಿಸಿ, ಸರ್ವಸ್ವವನ್ನೂ ತರಿಸಿ, ಶ್ರೀಚಾಮುಂಡೇಶ್ವರೀ ಅಮ್ಮನವರಿಗೆಸಮರ್ಪಿಸಿ, ಆ ಕಾರಗಳ್ಳಿ ಕೋಟೆಯನ್ನು ಕೆಡಹಿ ಹರಳುಬಿತ್ತಿಸಿದರು. ಅನಂತರದಲ್ಲಿ, ಅರ್ಚಕ ಶ್ರೀನಿವಾಸಯ್ಯನಿಗೆ ತಾವು ಅಭಯವನ್ನು ಕೊಟ್ಟಿದ್ದಂತೆ, ಅವನಿಗೆ ಇಲ್ಲಿನ ಅರ್ಚಕತನವನ್ನು ತೆಗೆದು, ಕನ್ನಂಬಾಡಿ ಗೋಪಾಲಕೃಷ್ಣಸ್ವಾಮಿಯ ದೇವಸ್ಥಾನದ ಅರ್ಚಕತನವನ್ನು ನೇಮಕಮಾಡಿ ಕಳುಹಿಸಿಕೊಟ್ಟು, ಆ ದೇವಸ್ಥಾನಕ್ಕೆ ಮತ್ತೊಬ್ಬ ಅರ್ಚಕನನ್ನು ನೇಮಿಸಿದರು.



ಲಕ್ಷ್ಮೀರಮಣಸ್ವಾಮಿಯ ದೇವಸ್ಥಾನದಲ್ಲಿ ಅರ್ಚಕನು ರಾಜಒಡೆಯರವರಿಗೆ ವಿಷ್ಣು
ಶ್ರೀಪಾದತೀರ್ಥವನ್ನು ಒಪ್ಪಿಸಿದ್ದು.



ಇವರ ಆಳಿಕೆಯಲ್ಲಿ ಮತ್ತೊಂದು ಆಶ್ಚರ್ಯ ನಡೆದಿರುವದು ಏನೆಂದರೆ:— ಜಾತ್ಯಂಧನಾದ ಒಬ್ಬ ಬ್ರಾಹ್ಮಣನು, ತನಗೆ ಕಣ್ಣು ಬರಬೇಕೆಂದು, ತಿರುಪತಿ ವೆಂಕಟಾಚಲಪತಿ ಸ್ವಾಮಿಯ ದೇವಸ್ಥಾನದಲ್ಲಿ ಬಹುಕಾಲ ಸೇವೆಯನ್ನು ಮಾಡಿಕೊಂಡಿದ್ದು, ರಥೋತ್ಸವ ಕಾಲವು ಪ್ರಾಪ್ತವಾಗಲು, ನಾಳೆದಿನ ನನಗೆ ವೆಂಕಟಾಚಲಪತಿಯ ರಥೋತ್ಸವ ದರ್ಶನವು ಆಗದಿದ್ದರೆ ಪ್ರಾಣವನ್ನು ಸ್ವಾಮಿಗೆ ಒಪ್ಪಿಸುತ್ತೇನೆಂದು ನಿಶ್ಚಯಿಸಿ ಮಲಗಿಕೊಂಡನು. ಮರುದಿನ, ರಥೋತ್ಸವ ದರ್ಶನವಾಗುವಂತೆ ಒಂದು ಕಣ್ಣು ಕಾಣಿಸಲು, ಆತನು ಆದಿನ ಒಂದು ಕಣ್ಣಿನಿಂದಲೇ ಸ್ವಾಮಿ ದರ್ಶನವನ್ನು ಮಾಡಿ, ಮತ್ತೊಂದು ಕಣ್ಣೂ ಕಾಣಬೇಕೆಂದು ಆದಿನ ಪುನಃ ಪ್ರಾರ್ಥನೆಯನ್ನು ಮಾಡಿ ಮಲಗಿಕೊಂಡನು. ಆಸಮಯದಲ್ಲಿ "ಇನ್ನೊಂದು ಕಣ್ಣು ಕಾಣಬೇಕಾದರೆ ಈಶ್ವರಾಂಶದಿಂದ ಹುಟ್ಟಿರುವ ಮಹೀಶೂರ ಪುರದ ಧೊರೆಗಳಾದ ರಾಜಒಡೆಯರವರ ಬಳಿಗೆ ಹೋಗಿ, ಇನ್ನೊಂದು ಕಣ್ಣೂ ಕಾಣುವಂತೆ ತಾವು ಹೇಳಬೇಕೆಂದು ಅವರನ್ನು ಕೇಳಿದರೆ, ಅವರು ನಿನಗೆ ಇನ್ನೊಂದು ಕಣ್ಣೂ ಕಾಣುವದೆಂದು ಹೇಳಿದರೆ, ಎರಡು ಕಣ್ಣೂ ಕಾಣುವವು" ಎಂದು ವೆಂಕಟಾಚಲಪತಿಯು ಸ್ವಪ್ನದಲ್ಲಿ ಬಂದು ಹೇಳಿದನು.

ಮರುದಿನ ಆ ಬ್ರಾಹ್ಮಣನು ಅಲ್ಲಿಂದ ಹೊರಟು ರಾಜಒಡೆಯರವರ ಬಳಿಗೆ ಬಂದು, ಈ ವೃತ್ತಾಂತವನ್ನೆಲ್ಲಾ ಹೇಳಿ, ಇನ್ನೊಂದು ಕಣ್ಣೂ ಕಾಣುವಂತೆ ತಾವು ಅಪ್ಪಣೆ ಕೊಡಬೇಕೆಂದು ಅವರನ್ನು ಪ್ರಾರ್ಥಿಸಿದನು. ರಾಜಒಡೆಯರವರು ದೇವತಾಮಹಿಮೆ ಎಂತಿರುವದೋ ತಿಳಿಯಕೂಡದೆಂದು ಯೋಚಿಸಿ, ನಾಳೆದಿನ ನೀನು ಲಕ್ಷ್ಮೀರಮಣಸ್ವಾಮಿಯ ದೇವಸ್ಥಾನಕ್ಕೆ ಬಾ ವೆಂದು ಹೇಳಿದರು. ಅದೇಪ್ರಕಾರ, ಆ ಬ್ರಾಹ್ಮಣನು ಮರುದಿನ ಗುಡಿಗೆ ಹೋಗಿ, ರಾಜಒಡೆಯರವರ ಸಮೀಪದಲ್ಲಿ ನಿಂತಿರುವ ಸಮಯದಲ್ಲಿ, ಎರಡುಕಣ್ಣುಗಳಿಂದಲೂ ದೇವರ ದರ್ಶನವನ್ನು ಮಾಡೆಂದು ರಾಜ ಒಡೆಯರವರು ಹೇಳಲು, ಆ ಬ್ರಾಹ್ಮಣನು ಎರಡು ಕಣ್ಣುಗಳಿಂದಲೂ ದೇವರ ದರ್ಶನವನ್ನು ಮಾಡಿ, ಕೃತಾರ್ಥನಾಗಿ ಹೊರಟುಹೋಗಿ, ವೆಂಕಟಾಚಲಪತಿಯ ಸನ್ನಿಧಿಯಲ್ಲಿ ಬಿನ್ನವಿಸಿದನು. ಅಲ್ಲಿದ್ದ ಜನರೆಲ್ಲರೂ ಅತ್ಯಂತವಾಗಿ ಆಶ್ಚರ್ಯಪಟ್ಟರು.

ಶ್ರೀರಂಗರಾಯರನ್ನು ಜಯಿಸಿದ್ದು.—ಮಧುರೇ ವೆಂಕಟಪತಿ ನಾಯಕನು ಶ್ರೀರಂಗಪಟ್ಟಣವನ್ನು ತೆಗೆದುಕೊಳ್ಳಬೇಕೆಂದು ಬರುವ ವರ್ತಮಾನವನ್ನು ಶ್ರೀರಂಗರಾಯರು ಕೇಳಿ, ಮಹಿಶೂರ ರಾಜಒಡೆಯರವರ ಬಳಿಗೆ ನಮಗೆ ಸಹಾಯವಾಗಿ ಬರಬೇಕೆಂದು ಕೆಲವು ವಸ್ತ್ರಾಭರಣಗಳನ್ನು ಕೊಟ್ಟು ಹೇಳಿ ಕಳುಹಿಸಿದರು. ಆಗ ರಾಜಒಡೆಯರವರು, ನಾವು ಬರುವದಿಲ್ಲ ಎಂದು ಆ ಮರ್ಯಾದೆಯನ್ನು ಹಿಂತಿರುಗಿ ಕಳುಹಿಸಲು, ಶ್ರೀರಂಗರಾಯರು ಕೋಪ

ದಿಂದ ತಲಕಾಡು ಮಾಲಂಗಿ ಪ್ರಾಂತ್ಯದಿಂದ ತಮ್ಮ ಸಂಬಂಧಿಕರನ್ನು ಸೇನಾಸಮೇತವಾಗಿ ಕರೆಯಿಸಿ, ಮಹಿಶೂರಪುರವನ್ನು ತೆಗದುಕೊಳ್ಳಬೇಕೆಂದು ಕೆಸರೆಯೆಂಬ ಗ್ರಾಮದ ಬಳಿಯಲ್ಲಿ ಇಳಿದುಕೊಂಡರು. ಈ ವರ್ತಮಾನವನ್ನು ಕೇಳಿ, ರಾಜಒಡೆಯರವರು, ತಮ್ಮ ಪರಾಕ್ರಮದಿಂದ ಅವರನ್ನು ಹೊಡೆದು ಓಡಿಸಿಬಿಟ್ಟರು.

ಇತರಪಾಳ್ಯಗಾರರನ್ನು ಜಯಿಸಿದ್ದು.—ಅನಂತರದಲ್ಲಿ ಕೆಲವು ದಿವಸದ ಮೇಲೆ ಬೇಲೂರು ಕೃಷ್ಣಪ್ಪನಾಯಕ, ಗ್ರಾಮದ ವೀರರಾಜಯ್ಯ, ಮೂಗೂರು ಚಾಳಲೋಚನನಾಯಕ, ಯಳಂದೂರು ಇಮ್ಮಡಿ ಚಾಮರಾಜನಾಯಕ, ಉಮ್ಮತ್ತೂರು ಮಲ್ಲರಾಜಯ್ಯ, ಕುಣಿಗಲು ಮುಂತಾದವುಗಳ ಪಾಳ್ಯಗಾರರು ಶ್ರೀರಂಗಪಟ್ಟಣವನ್ನು ಸಾಧಿಸಬೇಕೆಂದು ಗುಂಪುಕೂಡಿ ಕುಣಿಗಲು ಬಳಿಯಲ್ಲಿ ಇಳಿದು ಕೊಂಡಿದ್ದರು. ಈ ವರ್ತಮಾನವನ್ನು, ಮಹೀಶೂರ ರಾಜಒಡೆಯರವರು ಕೇಳಿ, ಅವರು ಶ್ರೀರಂಗಪಟ್ಟಣವನ್ನು ತೆಗೆದುಕೊಂಡರೆ ಮಹೀಶೂರ ನಗರಕ್ಕೆ ತೊಂದರೆ ಬರುವದೆಂದು ತಿಳಿದು, ಕುಣಿಗಲಬಳಿಗೆ ಸೇನಾಸಮೇತರಾಗಿ ಹೋಗಿ, ಅವರನ್ನು ಯುದ್ಧದಲ್ಲಿ ಜಯಿಸಿ, ಅವರ ವಸ್ತ್ರಾಭರಣಹಸ್ತ್ಯಶ್ವ ಮುಂತಾದವುಗಳನ್ನು ತೆಗದುಕೊಂಡರು. ಶ್ರೀರಂಗರಾಯರು ಈ ವರ್ತಮಾನವನ್ನು ಕೇಳಿ ಬಹಳ ಸಂತೋಷಪಟ್ಟರು.

ಉಮ್ಮತ್ತೂರಿಗೆ ಸೇರಿದ ಗ್ರಾಮಗಳು ಬಂದದ್ದು.—ಶ್ರೀರಂಗಪಟ್ಟಣದ ಶ್ರೀರಂಗರಾಯರ ಸಂಬಂಧಿ ಆನೇಗೊಂದಿ ಸಂಸ್ಥಾನದ ವೆಂಕಟಪತಿರಾಯರ ದಳವಾಯಿ ತಿರುಮಲರಾಜಯ್ಯನೆಂಬುವನು, ನರಸೀಪುರದ ಮಾರ್ಗವಾಗಿ ಶ್ರೀರಂಗಪಟ್ಟಣದ ಶ್ರೀರಂಗರಾಯರ ಬಳಿಗೆ ಬರುವ ಸಮಯದಲ್ಲಿ, ನರಸೀಪುರದ ಪಾಳ್ಯಗಾರ ಲಕ್ಷ್ಮಪ್ಪನಾಯಕನು ಆ ತಿರುಮಲರಾಜಯ್ಯನನ್ನು ಕೈಸೆರೆ ಹಿಡಿದುಕೊಂಡನು. ಶ್ರೀರಂಗರಾಯರು ಈ ವರ್ತಮಾನವನ್ನು ಕೇಳಿ, ಆ ಲಕ್ಷ್ಮಪ್ಪ ನಾಯಕನನ್ನು ಜಯಿಸುವದಕ್ಕೆ ತಮಗೆ. ಸಾಮರ್ಥ್ಯವಿಲ್ಲದ್ದರಿಂದ, ತಮಗೆ ಪರಮ ಮಿತ್ರರೂ ಮಹಾಪರಾಕ್ರಮಶಾಲಿಗಳೂ ಆದ ರಾಜಒಡೆಯರವರ ಬಳಿಗೆ ಈ ವರ್ತಮಾನವನ್ನು ಹೇಳಿ ಕಳುಹಿಸಿದರು. ರಾಜ ಒಡೆಯರವರು ನರಸೀಪುರದ ಪಾಳ್ಯ

ಗಾರ ಲಕ್ಷ್ಮಪ್ಪನಾಯಕನನ್ನು ಜಯಿಸಿ, ಅವನಲ್ಲಿದ್ದ ವಸ್ತ್ರಾಭರಣ ವಾಹನ
ಮುಂತಾದ ಪದಾರ್ಥಗಳನ್ನು ತೆಗೆದುಕೊಂಡು, ಈ ತಿರುಮಲರಾಜಯ್ಯನನ್ನು
ಬಿಡಿಸಿಕೊಂಡು ಶ್ರೀರಂಗಪಟ್ಟಣಕ್ಕೆ ಕಳುಹಿಸಿದರು. ಇದಕ್ಕಾಗಿ ಆ ಶ್ರೀ
ರಂಗರಾಯರು ಪರಮ ಸಂತೋಷಪಟ್ಟು, ಸುಖದಿಂದ ಇರುತ್ತಿದ್ದರು. ಅನಂ
ತರ ಈ ವರ್ತಮಾನವನ್ನು ಕೇಳಿದ ಆನೆಗೊಂದಿ ವೆಂಕಟಪತಿರಾಯರು, ಈ
ರಾಜಒಡೆಯರೊಡನೆ ಸ್ನೇಹವನ್ನು ಬೆಳಸಬೇಕೆಂದು, ತಮಗೆ ಸೇರಿರುವ
ಉಮ್ಮತ್ತೂರಿಗೆ ವಳಿತವಾದ ತಾಯೂರು ನಾಡಿಗೆ ಸೇರಿದ ಅಲದೂರು ನವ
ಲೂರು ಮುಂತಾದ ಕೆಲವು ಗ್ರಾಮಗಳನ್ನೂ, ಬನ್ನೂರಿಗೆ ವಳಿತವಾದ
ಸೋಸಲೇ ಸ್ಥಳದ ಕೋಣಗಳ್ಳಿ ಮುಂತಾದ ಕೆಲವು ಗ್ರಾಮಗಳನ್ನೂ ಕೊಡು
ವಂತೆ, ತಮ್ಮ ಕಡೇ ಉಮ್ಮತ್ತೂರು ಪಾಳ್ಯಗಾರ ನಂಜರಾಜಯ್ಯನ ಬಳಿಗೆ
ಕೈಗಾಣಿಕೆಯಾಗಿ ಒಪ್ಪಿಸೆಂದು ಪತ್ರವನ್ನು ಬರೆದು ಕಳುಹಿಸಿದರು. ಆ
ಉಮ್ಮತ್ತೂರು ನಂಜರಾಜಯ್ಯನು ರಾಜಒಡೆಯರಿಗೆ ಬಹಳ ಸನ್ಮಾನಮಾಡಿ
ಆಗ್ರಾಮಗಳನ್ನು ಕೈಗಾಣಿಕೆಯಾಗಿ ಒಪ್ಪಿಸಿದನು.

ಶ್ರೀರಂಗಪಟ್ಟಣವೂ ಸಿಂಹಾಸನವೂ ಬಂದದ್ದು.—ಅನಂತರದಲ್ಲಿ ಶ್ರೀರಂಗ
ರಾಯರಿಗೆ ಚಿಕಿತ್ಸೆಗೆ ಅಸಾಧ್ಯವಾದ ಬೆನ್ನುಫಣಿ ಎಂಬ ವ್ರಣಬಾಧ್ಯವು ಸಂಭ
ವಿಸಿದ್ದರಿಂದ, ಅವರು ಇನ್ನುಮೇಲೆ ತಮ್ಮ ದೇಹವು ನಿಲ್ಲುವದಿಲ್ಲವೆಂದು
ತಿಳಿದು, ತಮ್ಮ ಸಾಮಾಜಿಕರನ್ನು ಕುರಿತು "ಎಲೈ ಸಾಮಾಜಿಕರೇ, ನಮಗೆ
ಪರಮ ಮಿತ್ರರಾಗಿಯೂ ಪರಾಕ್ರಮಶಾಲಿಗಳಾಗಿಯೂ ಇರುವ ರಾಜ ಒಡೆ
ಯರವರು, ನಮಗೆ ಒಂದೆರಡುಸಾರಿ ಅವ್ಯಾಜವಾಗಿ ಉಪಕಾರ ಮಾಡಿರುವದ
ಲ್ಲದೆ, ಇವರು ಯದುವಂಶದಲ್ಲಿ ಹುಟ್ಟಿದವರಾದ್ದರಿಂದ, ಈ ಸಿಂಹಾಸನ
ವನ್ನೂ ಈ ರಾಜ್ಯವನ್ನೂ ಸಹಾ ಆಳುವದಕ್ಕೆ ಇವರೇ ಯೋಗ್ಯರು. ಇದ
ಲ್ಲದೆ ಇವರು ಅನೇಕ ಪಾಳ್ಯಗಾರರನ್ನು ಜಯಿಸಿ ರಾಜ್ಯಗಳನ್ನು ಕಿತ್ತಿ
ದ್ದಾರೆಯಾದಕಾರಣ, ನಾವು ಇನ್ನ್ಯಾರಿಗಾದರೂ ಈ ಶ್ರೀರಂಗಪಟ್ಟಣ
ವನ್ನು ಕೊಟ್ಟರೂ, ಈ ರಾಜಒಡೆಯರವರು ಅವರನ್ನು ಜಯಿಸಿ ತೆಗೆದು
ಕೊಳ್ಳುತ್ತಲಿದ್ದಾರೆ" ಎಂದು ಅವರೊಡನೆ ಆಲೋಚನೆಮಾಡಿ, ರಾಜಒಡೆ
ಯರವರನ್ನು ಕರೆಯ ಕಳುಹಿಸಿ, ತಮ್ಮ ಪೂರ್ವಿಕರಿಗೆ ಶ್ರೀರಂಗಪಟ್ಟಣವೂ
ಸಿಂಹಾಸನವೂ ಸಹ ಬಂದ ವಿವರಗಳನ್ನು ಹೇಳಿ, ೧೬೧೦—ನೇ ಸ್ವಾಮ್ಯ

ಸಂವತ್ಸರದ ಮಾಘ ಬಹುಳ ದಶಮಿಯಲ್ಲಿ, ದೇಶಕೋಶಗಳಿಂದ ಕೂಡಿದ ಶ್ರೀರಂಗಪಟ್ಟಣವನ್ನೂ ಸಿಂಹಾಸನವನ್ನೂ ಸಹಾ ಕೊಟ್ಟು, ಪತ್ನಿಯರಾದ ಅಲಮೇಲಮ್ಮನವರು ರಂಗಮ್ಮನವರಿಂದೊಡಗೂಡಿ, ತಲಕಾಡು ಸಮೀಪದಲ್ಲಿರುವ ಮಾಲಂಗಿಗೆ ಹೋಗಿ, ಅಲ್ಲಿ ಕೆಲವು ದಿನಗಳಿದ್ದು, ಕೀರ್ತಿನಾರಾಯಣ ಸ್ವಾಮಿಯವರ ಪಾದಾರವಿಂದದಲ್ಲಿ ಐಕ್ಯವಾದರು.

ಶ್ರೀರಂಗರಾಯರಿಗೆ ಶ್ರೀರಂಗಪಟ್ಟಣವೂ ಸಿಂಹಾಸನವೂ ಬಂದ ವಿವರ.—

ಕಲಿಯುಗದ ಆದಿಯಲ್ಲಿ ಯುಧಿಷ್ಠಿರ ಶಕದಲ್ಲಿ ಪ್ರಮಾಥಿ ಸಂವತ್ಸರ ಮೊದಲುಗೊಂಡು ಪ್ರಮೋದೀಚ ಸಂವತ್ಸರದವರೆಗೆ ಧರ್ಮರಾಯನ ಮೊಮ್ಮಗನಾದ ಪರೀಕ್ಷಿತರಾಯನು ಆದಿಯಾಗಿ ಪ್ರವೀಕರಾಯನವರೆಗೆ ೨೧ ಮಂದಿ ಧೊರೆಗಳು ಈ ಧರ್ಮರಾಯನ ಸಿಂಹಾಸನವನ್ನು ಏರಿ ಧರ್ಮದಿಂದ ರಾಜ್ಯಭಾರವನ್ನು ಮಾಡಿದ ವರ್ಷಗಳು	೧೧೧೫
ಆನಂದ ಸಂವತ್ಸರ ಮೊದಲುಗೊಂಡು ಪ್ರಭವ ಸಂವತ್ಸರದವರೆಗೆ ಮಗಧ ದೇಶಾಧಿಪತಿಗಳಾದ ಸುಮಾಲಿ ಮೊದಲುಗೊಂಡು ಕದಂಬರಾಯನವರೆಗೆ ೩೦ ಮಂದಿ ರಾಜರು ಆಳಿದ ವರ್ಷಗಳು	೪೯೪
ವಿಭವ ಸಂವತ್ಸರದ ಆರಭ್ಯ ಸರ್ವಜಿತು ಸಂವತ್ಸರದವರೆಗೆ ಮಯೂರವರ್ಮ ಮೊದಲಾಗಿ ಲೋಕಾದಿತ್ಯ ಕದಂಬರಾಯನವರೆಗೆ ೪ ಮಂದಿ ರಾಯರು ಆಳಿದ ವರ್ಷಗಳು	೮೦
ಸರ್ವಧಾರಿ ಸಂವತ್ಸರದ ಮೊದಲುಗೊಂಡು ವಿರೋಧಿ ಸಂವತ್ಸರದವರೆಗೆ ಜಯಂತಿಕದಂಬರಾಯನಿಂದ ಈ ವಂಶದ ೨೧ ಮಂದಿ ಧೊರೆಗಳು ಆಳಿದ ವರ್ಷಗಳು	೨೩೦
ವಿಕೃತಿ ಸಂವತ್ಸರ ಮೊದಲುಗೊಂಡು ಕ್ರೋಧನ ಸಂವತ್ಸರದವರೆಗೆ, ವೃಷಳರಾಯ ಆದಿಯಾಗಿ ದುರ್ಮಿತ್ರರಾಯನವರೆಗೆ ೩೦ ಮಂದಿ ಅರಸುಗಳು ರಾಜ್ಯವನ್ನಾಳಿದ ವರ್ಷಗಳು	೪೫೬
ಅಕ್ಷಯ ಸಂವತ್ಸರದಿಂದ ಸಿದ್ಧಾರ್ಥಿ ಸಂವತ್ಸರದವರೆಗೆ ಕದಂಬರಾಯ ಮೊದಲುಗೊಂಡು ಈತನ ವಂಶಸ್ಥರು ೨೧ ಮಂದಿ ಆಳಿದ ವರ್ಷಗಳು ...	೫೯೪
ರೌದ್ರಿಸಂವತ್ಸರದಿಂದ ಧುಂದುಭಿಸಂವತ್ಸರದವರೆಗೆ ವೀರಸೇನರಾಯನ ಮಗಳು ಗೋವಿಂದ ಭಗವಾನ್ನರ ಹೆಂಡತಿ ಕ್ಷತ್ರಿಯಸ್ತ್ರೀಯ ಪುತ್ರನಾದ ವಿಕ್ರಮರಾಯನು ರಾಜ್ಯಭಾರವನ್ನು ಮಾಡಿದ ವರ್ಷಗಳು	೭೫
ಹೀಗೆ ಯುಧಿಷ್ಠಿರ ಶಕದಲ್ಲಿ ೧೨೮ ಮಂದಿ ರಾಜರು ಆಳಿದ ಒಟ್ಟು ವರ್ಷಗಳು ...	೩೦೪೪

ಅನಂತರ ವಿಕ್ರಮಶಕದಲ್ಲಿ, ರುಧಿರೋದ್ಗಾರಿ ಸಂವತ್ಸರ ಮೊದಲುಗೊಂಡು ಶೋಭಕೃತು ಸಂವತ್ಸರದವರಿಗೆ ಮಾಳವದೇಶಾಧಿಪತಿಯಾದ ವಿಕ್ರಮರಾಯನು ಆಳಿದ ವರ್ಷಗಳು ೪೧

ಕ್ರೋಧಿ ಸಂವತ್ಸರದಿಂದ ಶ್ರೀಮುಖ ಸಂವತ್ಸರದವರಿಗೆ ಮಂತ್ರಿಯಾದ ಭಟ್ಟಿಯು ಆಳಿದ ವರ್ಷಗಳು ೩೦

ಭಾವ ಸಂವತ್ಸರದಿಂದ ಈಶ್ವರ ಸಂವತ್ಸರದವರಿಗೆ ಅವಂತಿದೇಶಾಧಿಪತಿಯಾದ ಭೋಜರಾಯನು ಆಳಿದ ವರ್ಷಗಳು ೬೪

ಹೀಗೆ ವಿಕ್ರಮ ಶಕದಲ್ಲಿ ಧೊರೆಗಳು ಆಳಿದ ವರ್ಷಗಳು ೧೩೫

ಆ ಬಳಿಕ ಶಾಲೀವಾಹನ ಶಕ ಬಹುಧಾನ್ಯ ಸಂವತ್ಸರದಿಂದ ಸರ್ವಜಿತು ಸಂವತ್ಸರದವರಿಗೆ ಶಾಲೀವಾಹನ ಆದಿಯಾಗಿ ಆಬೀರಕುಲದ ಅರಸರು ಮೌನರಾಯನವರಿಗೆ ಈ ವಂಶಸ್ಥರು ಆಳಿದ ವರ್ಷಗಳು ೬೩೦

ಸರ್ವಧಾರಿ ಸಂವತ್ಸರಾರಭ್ಯ ಕ್ರೋಧನ ಸಂವತ್ಸರದ ಪರ್ಯಂತರ ಹಳೇಬೀಡು ನವಬಳ್ಳಾಳರು ಆಳಿದ ವರ್ಷಗಳು ೯೮

ಅಕ್ಷಯಸಂವತ್ಸರ ಮೊದಲು ಸಿದ್ಧಾರ್ಥಿ ಸಂವತ್ಸರದವರಿಗೆ, ಆನೇಗೊಂದಿ ಮುಂತಾದ ದೇಶಗಳನ್ನು ಡಿಳ್ಳೀಪಾದಷಹಾನ ಕಡೆಯ ಮ್ಲೇಂಛರು ಆಕ್ರಮಿಸಿ, ಈ ಸಿಂಹಾಸನವನ್ನು ಏರುವದಕ್ಕೆ ಒಬ್ಬರಿಗೂ ಯೋಗ್ಯತೆಯಿಲ್ಲವಾದಕಾರಣ, ಇದು ಅವರ ಸ್ವಾಧೀನದಲ್ಲಿ ಇದ್ದ ವರ್ಷಗಳು ... ೫೪

ರೌದ್ರಿ ಸಂವತ್ಸರಾರಭ್ಯ ರೌದ್ರಿ ಸಂವತ್ಸರದವರಿಗೆ ಬಿದರೇ ಸುರಿತಾಳ ಮೊದಲಾದ ತುಂಡು ಅರಸುಗಳು ಪ್ರಬಲವಾಗಿ ದೇಶಗಳನ್ನು ಕಟ್ಟಿ ಸಿಂಹಾಸನವು ಅವರ ಸ್ವಾಧೀನದಲ್ಲಿರುವಾಗ, ಆಕಾಲದಲ್ಲಿ ಪ್ರಬಲನಾದ ಆನೇಗೊಂದಿ ಒರಗಲ್ಲು ಪ್ರತಾಪರುದ್ರರಾಯನು ಅವರನ್ನು ಜಯಿಸಿ ಸಿಂಹಾಸನವನ್ನು ಸ್ವಾಧೀನಮಾಡಿಕೊಂಡು ಆಳುತ್ತಿದ್ದ ವರ್ಷಗಳು ೪೧೮

ದುರ್ಮತಿ ಸಂವತ್ಸರದಿಂದ ಶ್ರೀಮುಖ ಸಂವತ್ಸರದವರಿಗೆ ಪೆನಗೊಂಡೇ ಕಂಪಲರಾಯನು ಪ್ರಬಲನಾಗಿ ಸಿಂಹಾಸನವನ್ನು ಆಳುತ್ತಿದ್ದ ವರ್ಷಗಳು .. ೧೪

ಕಂಪಲರಾಯನು ರಾಜಕಾರ್ಯ ನಿಮಿತ್ತವಾಗಿ ಭಾವ ಯುವ ಸಂವತ್ಸರಗಳಲ್ಲಿ ಜನರು ಅರಿಯದಂತೆ ಈ ಸಿಂಹಾಸನವನ್ನು ನೆಲಮಾಳಿಗೆಯಲ್ಲಿ ಇರಿಸಿ ಇದ್ದ ವರ್ಷಗಳು ೨

ಧಾತು ಸಂವತ್ಸರದಿಂದ ಹಕ್ಕರಾಯು ಮೊದಲುಗೊಂಡು ನರಪತಿ ಕೃಷ್ಣರಾಯನವರಿಗೆ ಅರಸುಗಳು ಆಳಿದ ವರ್ಷಗಳು ೧೯೯

೫

ನರಪತಿ ಕೃಷ್ಣರಾಯನು ತನಗೆ ಸಂತಾನವಿಲ್ಲದ್ದರಿಂದ ತನ್ನ ಅಳಿಯನಾದ ರಾಮರಾಯನಿಗೆ ಸಿಂಹಾಸನವನ್ನು ಕೊಟ್ಟು, ಪಟ್ಟಾಭಿಷೇಕವನ್ನು ಮಾಡಿಸಿ, ತಾರಣ ಸಂವತ್ಸರದ ಜ್ಯೇಷ್ಠ ಶುದ್ಧ ಪಂಚಮೀ ಭಾನುವಾರ ಮಧ್ಯಾಹ್ನದಲ್ಲಿ ದೈವಾಧೀನವಾದನು. ಅನಂತರ ಆ ರಾಮರಾಯನೂ ಇವನ ತಮ್ಮ ತಿರುಮಲರಾಯನೂ ಸಹ ಆಳಿದ ವರ್ಷಗಳು ೧೬

ತಿರುಮಲರಾಯನು ತನ್ನ ಅವಸಾನಕಾಲದಲ್ಲಿ ತನ್ನ ನಾಲ್ಕು ಜನ ಮಕ್ಕಳನ್ನು ಕರೆದು, ಹಿರೀಮಗ ಶ್ರೀರಂಗರಾಯನಿಗೆ ಶ್ರೀರಂಗಪಟ್ಟಣವನ್ನೂ ಆನೇಗೊಂದಿಯಲ್ಲಿದ್ದ ಸಿಂಹಾಸನವನ್ನೂ, ಎರಡನೇ ಮಗ ರಘುನಾಥ ರಾಯನಿಗೆ ಪೆನಗೊಂಡೇ ರಾಜ್ಯವನ್ನೂ, ಮೂರನೇ ಮಗ ರಾಮರಾಯನಿಗೆ ರಾಯವೇಲೂರು ಸಂಸ್ಥಾನವನ್ನೂ, ನಾಲ್ಕನೇ ಮಗ ವೆಂಕಟಪತಿ ರಾಯನಿಗೆ ಚಂದ್ರಗಿರಿ ದುರ್ಗದ ರಾಜ್ಯವನ್ನೂ ಕೊಟ್ಟನು. ಅನಂತರದಲ್ಲಿ ವಿಕಾರಿ ಸಂವತ್ಸರದ ಆರಭ್ಯ ಶಾ॥ ಶಕ ೧೪೩೨ನೇ ಸಾಮ್ಯ ಸಂವತ್ಸರದವರೆಗೆ ಆ ಶ್ರೀರಂಗರಾಯ ಆದಿಯಾಗಿ ರಾಜಒಡೆಯರವರಿಗೆ ಶ್ರೀರಂಗಪಟ್ಟಣವನ್ನೂ ಸಿಂಹಾಸನವನ್ನೂ ಕೊಟ್ಟ ೩ನೇ ಶ್ರೀರಂಗರಾಯರವರಿಗಿನ ಧೊರೆಗಳು ಆಳಿದ ವರ್ಷಗಳು ... ೧೩೧

ಹೀಗೆ ಶಾಲಿವಾಹನ ಶಕದಲ್ಲಿ ಧೊರೆಗಳು ಆಳಿದ ವರ್ಷಗಳು ೧೪೩೨

ಈರೀತಿಯಲ್ಲಿ ಯುಧಿಷ್ಠಿರ ಶಕ ಪ್ರಮಾಥಿ ಸಂವತ್ಸರ ಮೊದಲುಗೊಂಡು ಶಾ॥ ಶಕ ಸಾಮ್ಯ ಸಂವತ್ಸರದವರೆಗೆ ಪರೀಕ್ಷಿತರಾಯನು ಆದಿಯಾಗಿ ೩ನೇ ಶ್ರೀರಂಗರಾಯರವರಿಗಿನ ಧೊರೆಗಳು ಆಳಿದ ವರ್ಷಗಳು ೪೩೧೧

ಹಕ್ಕರಾಯರಿಗೆ ಸಿಂಹಾಸನವು ಬಂದವಿಚಾರ.—ಶಾ॥ ಶಕ ೧೨೫೬ನೇ ಭಾವಸಂವತ್ಸರದ ಕಾರ್ತಿಕಶುದ್ಧ ಭಾನುವಾರದ ಮಧ್ಯಾಹ್ನದಲ್ಲಿ ವಿದ್ಯಾರಣ್ಯಸ್ವಾಮಿಗಳು ಪೂರ್ವಾಶ್ರಮದಲ್ಲಿ ಶ್ರೀಲಕ್ಷ್ಮೀದೇವಿಯನ್ನು ಕುರಿತು ತಪಸ್ಸು ಮಾಡಿದ್ದರಿಂದ ಆಕೆಯು ಅಶರೀರವಾಕ್ಕಿನಿಂದ ಹೇಳಿದ್ದೇನೆಂದರೆ:—"ನೀನು ಮಾಡಿದ ತಪಸ್ಸಿಗೆ ಮೆಚ್ಚಿದೆನು. ಇನ್ನೊಂದು ಜನ್ಮಕ್ಕೆ ನಾನು ನಿನಗೆ ಪ್ರಸನ್ನಳಾಗುತ್ತೇನೆ. ನಿನಗೆ ಭೋಗವಿಲ್ಲ ; ಆದರೆ ಅಖಂಡಪೃಥ್ವೀ ಸಾಮ್ರಾಜ್ಯವು ನೀನು ಕೊಟ್ಟವರಿಗೆ ಉಂಟು. ಈ ಕಲಿಯುಗದಲ್ಲಿ ನೀನು ಮಾಡಿದ ಭಾಷ್ಯಾದಿಗಳು ಇರುವವರೆಗೂ ನಿನ್ನ ಹೆಸರು ನಡೆಯುವದು" ಎಂದು ಹೇಳಿ ಅಂತರ್ಧಾನವಾದಳು. ಆಗ ವಿರೂಪಾಕ್ಷಯ್ಯನ ಹಿಂದಣ ಪರಂಪರೆಯಲ್ಲಿ ನಾರಣಯ್ಯನೆಂಬುವನು ಸ್ವಾಮಿಗಳ ಪೂರ್ವಾಶ್ರಮದಲ್ಲಿ ಶುಶ್ರೂಷೆಯನ್ನು ಮಾಡಿಕೊಂಡಿರಲಾಗಿ, ವಿದ್ಯಾರಣ್ಯರು ಮತ್ತೊಂದು ಜನ್ಮಕ್ಕೆ ಪ್ರಸನ್ನಳಾಗುತ್ತೇನೆಂಬ ಲಕ್ಷ್ಮೀದೇವಿಯ ವಾಕ್ಯವನ್ನು ನೆನೆದು, ಯತ್ಯಾಶ್ರಮ



ಹಕ್ಕರಾಯನ ತಲೇಮೇಲೆ ಸರ್ಪವು ಆಡಿದು.

ವನ್ನು ಸ್ವೀಕರಿಸಿದರು. ಆಗ ಲಕ್ಷ್ಮೀದೇವಿಯು ಪ್ರಸನ್ನಳಾಗಿ, ಒಂದು 'ಹರದಾರಿಪರ್ಯಂತರಕ್ಕೂ ಲಕ್ಷ್ಮೀನಾರಾಯಣಸ್ವಾಮಿ ವಿಗ್ರಹದ ಸುವರ್ಣವೃಷ್ಟಿಯಾಯಿತು. ಆಗ ವಿದ್ಯಾರಣ್ಯಸ್ವಾಮಿಗಳು ಗ್ರಾಮದ ಮನೆಗಳಲ್ಲಿ ಬಿದ್ದದ್ದು ಮನೆಯವರದು ಎಂತಲೂ, ಬೀದಿಗಳಲ್ಲಿಯೂ, ಊರಿನ ಹೊರಗಡೆಯೂ ಬಿದ್ದದ್ದು ಅರಮನೆಯವರದು ಎಂತಲೂ ನಿಬಂಧನೆಯನ್ನು ಮಾಡಿ, ಈ ದ್ರವ್ಯವನ್ನು ಅನುಭವಿಸಿ ರಾಜ್ಯಪರಿಪಾಲನೆಯನ್ನು ಮಾಡುವದಕ್ಕೆ ಯೋಗ್ಯರು ಯಾರೆಂದು ಆಲೋಚಿಸುತ್ತಿದ್ದರು. ಆ ಕಾಲದಲ್ಲಿ ಓರಗಲ್ಲು ಪ್ರತಾಪರುದ್ರರಾಯನ ಬಂಡಾರದ ಅಧಿಕಾರಿಗಳನ್ನು ಮಾಡುತ್ತಿದ್ದ ಹಕ್ಕಬುಕ್ಕರೆಂಬುವರು ಅಧಿಕಾರವಿಲ್ಲದೆ ಶ್ರಮಪಡುತ್ತಿರಲು, ಇವರ ಪೂರ್ವಜನ್ಮಸುಕೃತ ವಿಶೇಷದಿಂದ, ಒಂದಾನೊಂದುದಿನ, ಈ ಹಕ್ಕನೆಂಬುವನು ಮಾರ್ಗಾಯಾಸದಿಂದ ವಿಶ್ರಮಿಸಿ ಕೊಳ್ಳುತ್ತಿದ್ದ ಸಮಯದಲ್ಲಿ, ಒಂದು ಸರ್ಪವು ಮಧ್ಯಾಹ್ನಕಾಲದಲ್ಲಿ ಅವನ ಶಿರೋಭಾಗದಲ್ಲಿ ಆಡಿ ಹೊರಟುಹೋಯಿತು. ಈ ವೃತ್ತಾಂತವು ಸ್ವಾಮಿಗಳಿಗೆ ತಿಳಿದದ್ದರಿಂದ ಇವರು ಆ ಹಕ್ಕಬುಕ್ಕರನ್ನು ಕರಿಸಿ, ಇವರ ಕುಲಶೀಲಗಳನ್ನು ವಿಚಾರಿಸಿ, ಇವರು ಚಂದ್ರವಂಶದವರೆಂದು ತಿಳಿದು, ಇವರಿಗೆ ಪಟ್ಟವನ್ನು ಕಟ್ಟಬೇಕೆಂದು ಆಲೋಚಿಸಿ, ಪೂರ್ವದಲ್ಲಿ ಧರ್ಮರಾಯ ಆದಿಯಾಗಿ ಆಳುತ್ತಿದ್ದ ಸಿಂಹಾಸನವು ಎಲ್ಲಿರುವುದೆಂದು ವಿಚಾರಣೆಯನ್ನು ಮಾಡಲು, ಪೆನಗೊಂಡೇ ಕಂಪಲರಾಯನು ನೆಲಮಾಳಿಗೆಯಲ್ಲಿ ಇರಿಸಿ ಇದ್ದಾನೆಂದು ಜನರು ತಿಳಿಸಿದರು. ಆಗ ವಿದ್ಯಾರಣ್ಯಸ್ವಾಮಿಗಳು ಷಣ್ಮುಖಾಂಶದಿಂದ ಹುಟ್ಟಿದವರಾದ ಕಾರಣ, ಸಿಂಹಾಸನವು ಅದೇ ವೃಕ್ಷದ ಕೆಳಗೆ ಇರುವುದೆಂದು ತಿಳಿದು, ಅಲ್ಲಿ ಕಾವಲಾಗಿ ಇದ್ದ ಸರ್ಪವೇ ಇವನ ತಲೆಯ ಮೇಲೆ ಆಡಿತೆಂದು ನಿಶ್ಚಯಿಸಿ, ಆ ಸಿಂಹಾಸನವನ್ನು ತರಿಸಿ, ಶಾ॥ ಶಕ ೧೨೫೮ನೇ ಧಾತುಸಂವತ್ಸರದ ವೈಶಾಖ ಶುದ್ಧ ಸಪ್ತಮಿ ಗುರುವಾರ ಮಖಾನಕ್ಷತ್ರ ಅಭಿಜನ್ಮಹೂರ್ತ ಸಿಂಹಲಗ್ನದಲ್ಲಿ, ಹಕ್ಕನಿಗೆ ಹರಿಹರರಾಯನೆಂಬ ಹೆಸರನ್ನಿಟ್ಟು, ಆನೇಗೊಂದಿಯಲ್ಲಿ ಪಟ್ಟಾಭಿಷೇಕವನ್ನು ಮಾಡಿ, ಬುಕ್ಕನಿಗೆ ಬುಕ್ಕರಾಯನೆಂದು ಹೆಸರನ್ನಿಟ್ಟು ಯೌವರಾಜ್ಯಾಭಿಷೇಕವನ್ನು ಮಾಡಿದರು. ಅವರಿಬ್ಬರೂ ೫೫ ಲಕ್ಷ ಕಾಲ್ಬಲವನ್ನೂ, ೧೭೦೦ ಆನೆಗಳನ್ನೂ ಸಹಾ ಕೂಡಿಹಾಕಿಕೊಂಡು ಆಸೇತುಹಿಮಾಚಲಪರ್ಯಂತವಾಗಿ ಧರ್ಮದಿಂದ ರಾಜ್ಯಪರಿಪಾಲನೆಯನ್ನು ಮಾಡುತ್ತಿದ್ದರು.

ಅಲಮೇಲಮ್ಮನವರು ಮಾಲಂಗೀ ಮಡುವನ್ನು ಪ್ರವೇಶಿಸಿದ ವಿಚಾರ.— ರಾಜಒಡೆಯರವರು, ಶ್ರೀರಂಗರಾಯರು ಮೃತರಾದ ವೃತ್ತಾಂತವನ್ನು ಕೇಳಿ, ಅತ್ಯಂತವಾಗಿ ವ್ಯಸನಪಟ್ಟು, ಲೋಕರೀತಿಯನ್ನು ಅನುಸರಿಸಿ, ಸಮಾಧಾನ ಮಾಡಿಕೊಂಡು, ಶಾಲೀವಾಹನ ಶಕ೧೫೩೨ನೇ ಸಾಧಾರಣ ಸಂವತ್ಸರದ ಚೈತ್ರಶುದ್ಧ ಸಪ್ತಮಿಯಲ್ಲು, ಶ್ರೀರಂಗಪಟ್ಟಣದಲ್ಲಿ ಸಿಂಹಾಸನಾರೋಹಣವನ್ನು ಮಾಡಿ, ಪಟ್ಟಾಭಿಷಿಕ್ತರಾಗಿ, ಪಾಳ್ಯಗಾರರು ಮೊದಲಾದ ವಿಶಿಷ್ಟಜನರಿಂದಲೂ ಕಾಣಿಕೆ ಕಪ್ಪಗಳನ್ನು ತೆಗೆದುಕೊಂಡು, ತನ್ನ

ಹಿರೀ ಕುಮಾರರಾದ ನರಸರಾಜ ಒಡೆಯರವರಿಗೆ ಯೌವರಾಜ್ಯಾಧಿಪತ್ಯವನ್ನು ಕೊಟ್ಟು, ಇವರಿಂದ ರಾಜ್ಯ ವಿಚಾರಣೆಯನ್ನು ಮಾಡಿಸುತ್ತಾ, ಸುಖದಿಂದ ಪೃಥ್ವೀಸಾಮ್ರಾಜ್ಯವನ್ನು ಗೈಯ್ಯುತ್ತಿದ್ದರು. ಆಗ ರಂಗಸ್ವಾಮಿದೇವಸ್ಥಾನದ ಅಧಿಕಾರಿಯು ರಾಜಒಡೆಯರವರ ಬಳಿಗೆ ಬಂದು, ಪೂರ್ವದಿಂದಲೂ ರಂಗನಾಯಕೀ ಅಮ್ಮನವರಿಗೆ ಶುಕ್ರವಾರ ಮಂಗಳವಾರಗಳಲ್ಲಿ ಅಲಂಕಾರವನ್ನು ಮಾಡುತ್ತಿದ್ದ ದೊಡ್ಡಮುತ್ತಿನ ಮೂಗುತಿ ಮುಂತಾದ ರತ್ನಪದಿನಗಗಳನ್ನು ಶ್ರೀರಂಗರಾಯರ ಪತ್ನಿಯಾದ ಅಲಮೇಲಮ್ಮನವರು ಕೊಟ್ಟು ಅಲಂಕಾರವನ್ನು ಮಾಡಿಸಿ ಪುನಃ ತರಿಸಿಕೊಳ್ಳುತ್ತಿದ್ದರೆಂತಲೂ, ಅವುಗಳನ್ನು ಈಗಲೂ ಅಪ್ಪಣೆಕೊಡಿಸಬೇಕೆಂತಲೂ ಬಿನ್ನವಿಸಿದನು. ರಾಜಒಡೆಯರವರು ಬೊಕ್ಕಸದ ಅಧಿಕಾರಿಯನ್ನು ಕರೆಯಿಸಿ ವಿಚಾರಿಸಲಾಗಿ, ಅಲಮೇಲಮ್ಮನವರು ಸಂಗಡಲೇ ತೆಗೆದುಕೊಂಡುಹೋಗಿ ಇದ್ದಾರೆಂದು ಅವನು ಶೃತಪಡಿಸಿದನು. ಅನಂತರದಲ್ಲಿ ರಾಜಒಡೆಯರು ರಂಗನಾಯಕಿ ಅಮ್ಮನವರಿಗೆ ಅಲಂಕಾರಾರ್ಥವಾಗಿ ಕೊಟ್ಟಿದ್ದ ಆಭರಣಗಳನ್ನು ಈಗಲೂ ಕೊಟ್ಟುಕಳುಹಿಸಬೇಕೆಂದು ಅಲಮೇಲಮ್ಮನವರಿಗೆ ಅಪ್ಪಣೆಕೊಟ್ಟು ಕಳುಹಿಸಿದರು. ಆಕೆಯು ಕೊಡುವದಿಲ್ಲವೆಂದು ಹೇಳಿಕಳುಹಿಸಲು, ರಾಜಒಡೆಯರವರು, ರಂಗನಾಯಕೀ ಅಮ್ಮನವರಿಗೆ ಆ ಆಭರಣಗಳು ಶಾಶ್ವತವಾಗಿ ಇರಬೇಕೆಂದು ಯೋಚಿಸಿ, ತಮ್ಮ ಅಧಿಕಾರಿಗಳನ್ನು ಕರೆದು "ಈಗ ನಿಮಗೆ ಆಭರಣಗಳಿಂದ ಉಪಯುಕ್ತವಿಲ್ಲ. ರಂಗನಾಯಕೀ ಅಮ್ಮನವರಿಗೆ ಕೊಟ್ಟರೆ, ನಿಮ್ಮ ಯಶಸ್ಸು ಬಹುಕಾಲ ಪರ್ಯಂತವೂ ಇರುವದು. ಇದಕ್ಕೂ ಕೊಡದೆ ಇದ್ದ ಪಕ್ಷದಲ್ಲಿ ಬಲಾತ್ಕಾರದಿಂದ ತರಿಸತಕ್ಕದ್ದು ಸ್ವಧರ್ಮವಾಗಿದೆ" ಎಂದು ಆಕೆಯೊಡನೆ ಖಂಡಿತೋಕ್ತಿಯನ್ನು ಹೇಳಿ ತೆಗೆದು ಕೊಂಡುಬನ್ನಿ ಎಂದು ಪುನಃ ಅಪ್ಪಣೆಯನ್ನು ಕೊಟ್ಟು ಕಳುಹಿಸಿದರು. ಆ ಮಾತನ್ನು ಕೇಳಿ, ಅಲಮೇಲಮ್ಮನವರು, ದೇವತಾ ವಿಷಯವಾಗಿ ಹೇಳಿ ಕಳುಹಿಸಿದರೆಂದು ತಿಳಿಯದೆ, ಯುಕ್ತಾಯುಕ್ತ ಪರಿಜ್ಞಾನವಿಲ್ಲದೆ, ಸ್ತ್ರೀಚಾಪಲ್ಯಾಸೂಯಾಬುದ್ಧಿಯಿಂದ, ರಾಜಒಡೆಯರ ವಿಷಯವಾಗಿ ಸಹಿಸಲಶಕ್ಯವಾದ ಕಠಿನೋಕ್ತಿಯನ್ನು ಹೇಳಿ, ಮೂಗುತಿ ಮಾತ್ರ ಕೊಟ್ಟು, ಕಡಿಮೇ ಒಡವೆಗಳನ್ನೆಲ್ಲಾ ಮಡಿಲಿನಲ್ಲಿ ಕಟ್ಟಿಕೊಂಡು ಮಾಲಂಗೀಮಡುವಿನಲ್ಲಿ ಪ್ರವೇಶ ಮಾಡಿದರು.

ಅನಂತರದಲ್ಲಿ ರಾಜಒಡೆಯರವರು ಈ ವೃತ್ತಾಂತವನ್ನು ಕೇಳಿ, ನಾವು ದೇವತಾವಿಷಯವಾಗಿ ಹೇಳಿಕಳುಹಿಸಿದ್ದಕ್ಕೆ, ಈಕೆಯು ಇಂಥಾ ಅಕೃತ್ಯವನ್ನು ಮಾಡಿದಳಲ್ಲಾ ಎಂದು ಚಿಂತಿಸುತ್ತಿದ್ದರು. ಹೀಗಿರುವಲ್ಲಿ ಆದಿನರಾತ್ರಿ, ಅಲಮೇಲಮ್ಮನವರು, ರಾಜಒಡೆಯರವರ ಸ್ವಪ್ನದಲ್ಲಿ ಪ್ರತಿಬಂಧರೂಪವಾಗಿ ಕಾಣಿಸಿಕೊಳ್ಳಲು, ರಾಯರು ಆಕ್ಷಣವೇ ಎದ್ದು, ತಮ್ಮ ಪತ್ನಿಯರಾದ ವೀರಾಜಮ್ಮಣ್ಣಿಯವರು ಮುಂತಾದವರೊಡನೆ ಸ್ವಪ್ನ ವೃತ್ತಾಂತವನ್ನು ಹೇಳಿ, ಪ್ರತಿಬಂಧದ ಬಾಧೆಯನ್ನು ತಪ್ಪಿಸಿಕೊಳ್ಳುವದ ಕ್ಕೋಸ್ಕರ ಅಲಮೇಲಮ್ಮನವರ ರೂಪದಿಂದ ಒಂದು ಚಿನ್ನದ ಪ್ರತಿಮೆಯನ್ನು ಮಾಡಿಸಿ, ಪ್ರತಿನಿತ್ಯದಲ್ಲಿಯೂ ಆ ಪ್ರತಿಮೆಗೆ ಪೂಜೆನಡೆಯುವಂತೆ ಕಟ್ಟು ಮಾಡಿಸಿದ್ದಲ್ಲದೆ ಮಹಾನವಮಿಯ ದಿನ ಅರಮನೆಯಲ್ಲಿ ಆ ಸ್ತ್ರೀ ಪ್ರತಿಮೆಗೆ ಆಭರಣಗಳನ್ನು ಧರಿಸಿ, ಅತಿನೇಮದಿಂದ ಪೂಜೆಮಾಡಿ, ಅನೇಕ ಶಾಕಪಾಕ ಭಕ್ಷ್ಯ ಭೋಜ್ಯ ನೈವೇದ್ಯಗಳನ್ನು ಮಾಡಿಸಿ, ಎಲ್ಲರೂ ಕಾಣಿಕೆಗಳನ್ನು ಕೊಟ್ಟು, ಭಯಭಕ್ತಿಗಳಿಂದ ನಡೆಯುತ್ತೇವೆಂದು ಪ್ರಾರ್ಥನೆಯನ್ನು ಮಾಡಿ, ಆದಿನ ಕಾಣಿಕೆಯನ್ನು ಕಟ್ಟಿ, ಈ ಸಾಧಾರಣ ಸಂವತ್ಸರದ ಮಹಾನವಮಿ ಮೊದಲು ನಮ್ಮ ವಂಶ ಪಾರಂಪರ್ಯವಾಗಿ ಇದೇ ಮೇರೆಗೆ ನಡೆಯುತ್ತಿರಲಿ ಎಂದು ನಿಬಂಧನೆಯನ್ನು ಮಾಡಿದರು.

ನರಸರಾಜ ಒಡೆಯರವರ ಮರಣ.—ರಾಜಒಡೆಯರವರ ಕುಮಾರರಾದ ನರಸರಾಜ ಒಡೆಯರವರು ಧರ್ಮದಿಂದ ಯೌವರಾಜ್ಯಾಧಿಪತ್ಯವನ್ನು ಮಾಡುತ್ತಲಿರುವ ಸಮಯದಲ್ಲಿ, ಕನ್ನಂಬಾಡಿಗೆ ಹೋಗಿ, ರಾಜ್ಯ ವಿಚಾರಣೆಯನ್ನು ಮಾಡಿ, ಗೋಪಾಲ ಕೃಷ್ಣಸ್ವಾಮಿಗೆ ದೇವಸ್ಥಾನ ಗೋಪುರಗಳನ್ನು ವಿಸ್ತಾರವಾಗಿ ಕಟ್ಟಿಸಿ, ಅನೇಕರಿಗೆ ವಸ್ತ್ರಾಭರಣ ಗ್ರಾಮಭೂಮಿಗಳನ್ನು ಕೊಟ್ಟು ಧರ್ಮದಿಂದ ಪ್ರಜಾ ಪರಿಪಾಲನೆಯನ್ನು ಮಾಡುತ್ತಾ, ಸಾಧಾರಣ ಸಂವತ್ಸರದ ಭಾದ್ರಪದ ಬಹುಳ ಅಮಾವಾಸ್ಯೆಯದಿನ ಸ್ವರ್ಗಸ್ಥರಾದರು. ಈ ವರ್ತಮಾನವು ಶ್ರೀರಂಗಪಟ್ಟಣಕ್ಕೆ ಬಂದು ಮುಟ್ಟುತ್ತಲೇ ರಾಜಒಡೆಯರವರು ಕೇಳಿ, ಪುತ್ರಶೋಕದಿಂದ ಬಹಳ ವ್ಯಸನಪಟ್ಟು, ನರಸರಾಜಒಡೆಯರವರ ಪತ್ನೀಪುತ್ರರನ್ನೂ, ಉತ್ತರ ಕ್ರಿಯಾದಿಗಳನ್ನು

ಮಾಡುವದಕ್ಕೆ ತಮ್ಮ ಜ್ಞಾತಿಯಾದ ಹೆಮ್ಮನಹಳ್ಳೀ ನಂಜರಾಜಯ್ಯನನ್ನೂ ಕನ್ನಂಬಾಡಿಗೆ ಕಳುಹಿಸಿಕೊಟ್ಟರು.

ನವರಾತ್ರಿಯಲ್ಲಿ ಆಶೌಚನಿರ್ಣಯ.—ಅನಂತರ ಸಮುಖದ ವಿದ್ವಾಂಸರು ಧೊರೆಗಳಿಗೆ ಸಹಿಸಲಶಕ್ಯವಾದ ವ್ಯಸನವು ಸಂಭವಿಸಿ ಆಶೌಚವು ಪ್ರಾಪ್ತವಾಗಿ ಇರುವದರಿಂದಲೂ, ಇದೇ ಸಂವತ್ಸರದಲ್ಲಿ ಧರ್ಮರಾಯರು ಆಳುತ್ತಿದ್ದ ಸಿಂಹಾಸನವು ಬಂದು ಇರುವದರಿಂದಲೂ ಈ ನವರಾತ್ರಿಯಲ್ಲಿ ಸಿಂಹಾಸನಾರೋಹಣಾದಿ ಶುಭಕಾರ್ಯಗಳು ನಡೆಯತಕ್ಕದ್ದು ಹ್ಯಾಗೆ ಎಂದು ಆಲೋಚಿಸಿ, ವಿಜ್ಞಾನೇಶ್ವರಿ ಮನುಸ್ಮೃತಿ ಮೊದಲಾದ ಧರ್ಮಶಾಸ್ತ್ರಗಳನ್ನು ತರಿಸಿ, ಸಿಂಹಾಸನಾಧಿಪತಿಗಳಿಗೆ ನವರಾತ್ರಿಯಲ್ಲಿ ಜಾತಾಶೌಚ ಮೃತಾಶೌಚಗಳು ಬಂದಾಗ್ಯೂ ಆಚರಣೆ ಮಾಡಕೂಡದೆಂದು ಇರುವ ವಚನಗಳನ್ನು ಪರಿಶೋಧಿಸುತ್ತಿದ್ದರು. ಆಗ ರಾಜಒಡೆಯರವರು ಲೋಕರೀತಿಯನ್ನು ಅನುಸರಿಸಿ, ತಮ್ಮ ವ್ಯಸನವನ್ನು ತಾವೇ ಸಮಾಧಾನ ಮಾಡಿಕೊಂಡು, ಪುರೋಹಿತ ರಾಮಾಭಟ್ಟರು ಜೋಯಿಸ ಅನಂತಯ್ಯಂಗಾರ್ಯರು ರಾಮಸೋಮಯಾಜಿಗಳು ಮುಂತಾದ ವಿದ್ವಾಂಸರನ್ನು ಕರೆತರಿಸಿ "ಈಗ ನಮಗೆ ಆಶೌಚವು ಪ್ರಾಪ್ತವಾಗಿರುವದ್ದರಿಂದ, ನವರಾತ್ರಿಯಲ್ಲಿ ಸಿಂಹಾಸನಾರೋಹಣಾದಿ ಶುಭಕಾರ್ಯಗಳು ಹ್ಯಾಗೆ ನಡೆಯಬೇಕು ?" ಎಂದು ಅಪ್ಪಣೆಯನ್ನು ಕೊಟ್ಟರು. ಆಗ ಆ ವಿದ್ವಾಂಸರು "ಮೂರ್ಧಾಭಿಷಕ್ತರಿಗೆ ಜಾತಾಶೌಚ ಮೃತಾಶೌಚಗಳು ನವರಾತ್ರಿಗೆ ಪೂರ್ವದಲ್ಲಿ ಪ್ರಾಪ್ತವಾದರೆ, ಪಾಡ್ಯದ ದಿನ ಸ್ನಾನಮಾಡಿ, ಯಜ್ಞೋಪವೀತವನ್ನು ಧರಿಸಿಕೊಂಡು, ಸಿಂಹಾಸನಾರೋಹಣಾಂಗ ಮಂಗಳಸ್ನಾನ ಮುಂತಾದ ಶುಭಕಾರ್ಯಗಳನ್ನು ನೆರವೇರಿಸಿ, ಕಂಕಣಬದ್ಧರಾಗಿ, ಕಾಳಿಕಾಪುರಾಣೋಕ್ತವಾಗಿರುವ ಸಿಂಹಾಸನ ಪೂಜಾಪುರಸ್ಸರ ಆರೋಹಣವನ್ನೂ, ಗಜಾಶ್ವಾಯುಧ ಶಮೀ ಪೂಜಾದಿಗಳನ್ನೂ ನೆರವೇರಿಸಿ, ಮಲ್ಲಯುದ್ಧಾದಿಗಳನ್ನು ಮಾಡಿಸಿ, ಕಂಕಣವಿಸರ್ಜನೆ ಮಾಡಬೇಕು. ಅನಂತರವೂ ಆಶೌಚಶೇಷವು ಇದ್ದರೆ ಆದಿವಸವನ್ನು ಕಳೆದು ಪೂರ್ವದಂತೆ ಶುದ್ಧರಾಗಬೇಕು. ಇದಲ್ಲದೆ ಈ ನವರಾತ್ರಿಯು ಮಧ್ಯದಲ್ಲಿ ಆಶೌಚವು ಪ್ರಾಪ್ತವಾದರೆ, ತಮ್ಮ ನಿತ್ಯಕರ್ಮಾದಿ ಆಹ್ನಿಕಗಳನ್ನು ನೆರವೇರಿಸಿಕೊಂಡು, ಈ ಉತ್ಸವಾಂಗ ಶಮೀಪೂಜಾನಂತರ ಆಶೌಚ

ಶೇಷಾನುಷ್ಠಾನವನ್ನು ಮಾಡಬೇಕು ಎಂದು ವಿಜ್ಞಾನೇಶ್ವರಿ ಮೊದಲಾದ ಧರ್ಮಶಾಸ್ತ್ರಗಳಲ್ಲಿ ವಚನಗಳಿವೆ" ಎಂಬದಾಗಿ ವಿಜ್ಞಾಪನೆಮಾಡಿದರು. ಅದಕ್ಕೆ ರಾಜಒಡೆಯರವರು ಅವರನ್ನು ಕುರಿತು "ಸಿಂಹಾಸನಾಧಿಪತಿಗಳಿಗೆ ಮಾತಾ ಪಿತೃವಿಯೋಗವು ಪ್ರಾಪ್ತವಾದರೆ ಹ್ಯಾಗೆ ನಡೆಯತಕ್ಕದ್ದು" ಎಂದು ಅಪ್ಪಣೆಯನ್ನು ಕೊಡಲು, ಅವರು "ಮೂರ್ಧಾಭಿಷಿಕ್ತರಿಗೆ ನವರಾತ್ರಿಯಲ್ಲಿ ಸಿಂಹಾಸನಾರೋಹಣವನ್ನು ಮಾಡಿ ರಾಜತಂತ್ರಗಳನ್ನು ನಡೆಯಿಸತಕ್ಕದ್ದೇ ಮುಖ್ಯ ಕಾರ್ಯವಾದ್ದರಿಂದ, ಸತ್ತವರಿಗೆ ತಮ್ಮ ಜ್ಞಾತಿಗಳ ಕಡೆಯಿಂದ ಅಕಾರ್ಯಾದಿಗಳನ್ನು ಮಾಡಿಸಿ, ತಾವು ಸಿಂಹಾಸನಾರೋಹಣ ಮೊದಲಾದ ಶುಭಕಾರ್ಯಗಳನ್ನು ನೆರವೇರಿಸಬಹುದು" ಎಂದು ಬಿನ್ನವಿಸಿದರು. ರಾಜ ಒಡೆಯರವರು ನಾಳೆದಿವಸ ನವರಾತ್ರಿಯ ಉತ್ಸವವನ್ನು ನೆರವೇರಿಸುತ್ತಿದ್ದೇವೆಂದು ಅಪ್ಪಣೆಯನ್ನು ಕೊಟ್ಟು, ಮುಂದೆ ಹೀಗೆ ಏನಾದರೂ ಬಂದರೆ ಈಗ ನಾವು ನಿಬಂಧನೆ ಮಾಡಿರುವ ಮೇರೆಗೆ ನಮ್ಮ ವಂಶಪಾರಂಪರ್ಯವಾಗಿ ನಡೆಯಬೇಕೆಂದು ಕಟ್ಟಲೆಮಾಡಿಸಿದರು.

ನವರಾತ್ರಿಯ ಉತ್ಸವಕ್ರಮ.—ಆಶ್ವಯುಜ ಶುದ್ಧ ಪಾಡ್ಯದಲ್ಲಿ ಧೊರೆಗಳು ಪ್ರಾತಃಕಾಲದಲ್ಲಿ ಶುದ್ಧಸ್ನಾನವನ್ನು ಮಾಡಿ, ಯಜ್ಞೋಪವೀತವನ್ನು ಧರಿಸಿಕೊಂಡು, ನವರಾತ್ರಿಯ ಉತ್ಸವಾರ್ಥವಾಗಿ ದೇವಸ್ಥಾನಗಳಿಂದ ಬಂದ ಎಣ್ಣೆ ಅರಿಸಿನಗಳಿಂದ ಮಂಗಳಸ್ನಾನವನ್ನು ಮಾಡಿ, ದೀಕ್ಷಾ ವಸ್ತ್ರವನ್ನುಟ್ಟು, ಅರಮನೆಯಲ್ಲಿರುವ ಶ್ರೀಚಾಮುಂಡೇಶ್ವರೀ ಅಮ್ಮನವರ ಸನ್ನಿಧಿಯಲ್ಲಿ ಕಂಕಣವನ್ನು ಧರಿಸಿಕೊಂಡು, ಸರ್ವಾಲಂಕಾರ ಭೂಷಿತರಾಗಿ, ಪಟ್ಟದಕತ್ತಿಯನ್ನು ಹಿಡಿದು, ಸಜ್ಜೇಮೇಲಕ್ಕೆ ಚಿತ್ತಯಿಸಿ, ಪುಣ್ಯಾಹ ನವಗ್ರಹ ಮುಂತಾದ ದೇವತೆಗಳನ್ನು ಕಲಶದಲ್ಲಿ ಪೂಜಿಸಿ, ಕಾಳಿಕಾಪುರಾಣೋಕ್ತವಾಗಿ ಸಿಂಹಾಸನದ ಪೂಜೆಯನ್ನು ನೆರವೇರಿಸಿ, ಪ್ರಾರ್ಥನೆಮಾಡಿ, ಸುಮುಹೂರ್ತದಲ್ಲಿ ಸಿಂಹಾಸನಾರೋಹಣವನ್ನು ಮಾಡಿದರು. ಆಕಾಲದಲ್ಲಿ, ಅರಮನೆಯ ಮುಂದಿರುವ ಕೆಮ್ಮಣ್ಣು ಮಟ್ಟಿಯ ಮೇಲೆ, ಒಂದು ಕಡೆಯಲ್ಲಿ ಆನೆ ಕುದುರೆ ಒಂಟೆ ಕಾಲಾಳುಗಳು ಸಾಲುಸಾಲಾಗಿ ನಿಂತು ಇದ್ದರು; ಮತ್ತೊಂದು ಕಡೆಯಲ್ಲಿ ಮಹಾರಾಜರವರು ತಮ್ಮ ಭುಜಬಲದಿಂದ ಸಂಪಾ

ದಿಸಿದ ಹನುಮದ್ಧ್ವಜ, ಗರುಡಧ್ವಜ, ಮಕರಟಕ್ಕೆ, ಸತ್ತಿಗೆ, ಸೂರೇಪಾನ, ಚವರಿ, ಏಟಪಾವಡೆ, ಮುಂತಾದ ಬಿರುದುಗಳನ್ನು ಹಿಡಿದಿದ್ದರು; ಮತ್ತೊಂದು ಕಡೆಯಲ್ಲಿ ಗಾನ ನರ್ತನದಲ್ಲಿ ಕುಶಲರಾದ ವೇಶ್ಯಾಸ್ತ್ರೀಯರು ನಾಟ್ಯವಾಡುತ್ತಿದ್ದರು; ಒಂದು ಕಡೆಯಲ್ಲಿ ಮೃದಂಗ ಕಹಳಾ ಭೇರಿ ಮೊದಲಾದ ವಾದ್ಯಗಳು ಮೊರೆಯುತ್ತಿದ್ದವು; ಇದಲ್ಲದೆ ಮತ್ತೊಂದು ಕಡೆಯಲ್ಲಿ "ಶ್ರೀಮತ್ಸ್ವಾಮಿ ರಂಗನಾಥ ಪಾದಾರವಿಂದ ಬಂಭರಾಯಿತ ಚಿತ್ತ ಮತ್ತರಿಪು ಷಂಡಖಂಡನೋದ್ದಂಡದೋರ್ದಂಡ ಅರ್ಥಿಜನೇಪ್ಸಿತಾರ್ಥದಾನಶೌಂಡ ಅಂಗಜಾಜನ ಕುಸುಮ ಕೋದಂಡ ಬಾಹುದಂಡ ಧೃತ ವಿವಿಧಾಯುಧಕಾಂಡ ಬಿರುದೆಂತೆಂಬರ ಗಂಡ ಮಿತ್ರಕುಲಕಮಲ ಮಾರ್ತಾಂಡ ರಾಜಕಂದರ್ಪ ರಾಜಾಧಿರಾಜ ಮಹಾರಾಜ" ಎಂದು ಭಟರು ಹೊಗಳುತ್ತಿದ್ದರು. ಆ ಸಮಯದಲ್ಲಿ ರಾಜ ಒಡೆಯರವರು ಪುರೋಹಿತರು ಮೊದಲಾದ ಬ್ರಾಹ್ಮಣರಿಂದ ಕಲಶೋದಕಮಾರ್ಜನೆಯನ್ನು ಮಾಡಿಸಿಕೊಂಡು, ಕುಲದೇವತೆಯಾದ ಶ್ರೀಚಾಮುಂಡೇಶ್ವರೀ ಅಮ್ಮನವರ ಸನ್ನಿಧಿಯಲ್ಲಿ ನಡೆಯತಕ್ಕ ಜಪ ಪೂಜಾದಿಗಳಿಗೆ ವರಣವನ್ನು ಕೊಟ್ಟು, ದೇವಸ್ಥಾನಗಳಿಂದ ಬಂದ ಪ್ರಸಾದವನ್ನು ಸ್ವೀಕರಿಸಿ, ತಮ್ಮ ಗುರುಗಳು ಮುಂತಾದ ವಿದ್ವಾಂಸರು ಒಪ್ಪಿಸಿದ ಫಲಮಂತ್ರಾಕ್ಷತೆಗಳನ್ನೂ, ತಮ್ಮ ಪುತ್ರರು ಅರಸುಗಳು ಪಾಳ್ಯಗಾರರು ಅಧಿಕಾರಸ್ಥರು ಮೊದಲಾದವರು ತಮ್ಮ ತಮ್ಮ ಮಾನಾನುಗುಣವಾಗಿ ಒಪ್ಪಿಸಿದ ಕೈಗಾಣಿಕೆಗಳನ್ನೂ ತೆಗೆದುಕೊಳ್ಳುತ್ತಿದ್ದರು.

ಆ ಸಮಯದಲ್ಲಿ ಪಟ್ಟದ ಅನೆಕುದುರೆಗಳು ವೇಶ್ಯಾಸ್ತ್ರೀಯರು ಹಿಡಿದಿರುವ ಕನ್ನಾಕನ್ನಡಿಗಳಿಂದಲೂ, ವೀರಭದ್ರನ ಹಲಗೆಯನ್ನು ಹಿಡಿದಿದ್ದ ಲಿಂಗಧೀರರಿಂದಲೂ, ಸತ್ತಿಗೆ ಸೂರೇಪಾನ ಚಾಮರ ಮೊದಲಾದ ಬಿರುದುಗಳಿಂದಲೂ ಕೂಡಿ, ಅರಮನೆಯಿಂದ ಹೊರಟು, ಕೆಮ್ಮಣ್ಣುಮಟ್ಟಿಯಲ್ಲಿ ಮಹಾರಾಜರಿಗೆ ನಮಸ್ಕರಿಸಿ, ನದೀತೀರಕ್ಕೆ ಬಂದವು. ಹಾಗೆ ಬಂದ ಅನೆಕುದುರೆಗಳಿಗೆ ಎಣ್ಣೇಶಾಸ್ತ್ರವನ್ನು ಮಾಡಿ, ಅರಿಸಿನ ಕುಂಕುಮಗಳನ್ನು ಧರಿಸಿ, ಕೊರಳಿಗೆ ಐದುಬಗೇ ಧಾನ್ಯಗಳನ್ನು ಕಟ್ಟಿ, ಪುಷ್ಪಗಳಿಂದಲೂ ಆಭರಣಗಳಿಂದಲೂ ಸಹ ಅಲಂಕರಿಸಿ, ನೊಸಲಪಟ್ಟೆಯನ್ನು ಕಟ್ಟಿ



ಶ್ರೀರಂಗಪಟ್ಟಣದಲ್ಲಿ ರಾಜಒಡೆಯರವರು ನವರಾತ್ರಿ ಮಹೋತ್ಸವವನ್ನು ಬೆ[illegible] ದರ್ಬಾರು ಶೋಂ ||

ರುವ ಆನೆಕುದುರೆಗಳನ್ನೂ, 'ಮಹಾಕಾಳಿ ಮಹಾಲಕ್ಷ್ಮಿ ಮಹಾಸರಸ್ವತಿ' ಎಂಬ ಮೂರು ದೇವತೆಗಳ ಆ ವಾಹನೆಯನ್ನು ಮಾಡಿರುವ ಕನ್ನಾಕನ್ನಡಿಗಳನ್ನೂ ಸಹ ಬೆಟ್ಟದಕೋಟೆ ತಿಮ್ಮಪ್ಪರಾಜ ಅರಸಿನ ವಂಶಸ್ಥನು ಪೂಜೆ ಮಾಡಿದನು. ಅನಂತರ ಆನೆ ಕುದುರೆಗಳು ರಾಜ ಮರ್ಯಾದೆಯಿಂದ ನಡೆ ಮುಡಿಯಮೇಲೆ ಕೆಮ್ಮಣ್ಣು ಮಟ್ಟಿಗೆ ಬಂದು, ಧೊರೆಗಳಿಗೆ ನಮಸ್ಕರಿಸಿ, ಅರಮನೆಗೆ ಪ್ರವೇಶಿಸಲು ವೇಶ್ಯಾಸ್ತ್ರೀಯರು ಆರತಿಯನ್ನು ಎತ್ತಿದರು. ಆ ಬಳಿಕ ಆ ಆನೆಕುದುರೆಗಳನ್ನು ಆವಾಸಸ್ಥಾನದಲ್ಲಿ ಪೂಜಿಸಿ ಭಕ್ಷ್ಯಭೋಜ್ಯಾದಿಗಳನ್ನು ನಿವೇದನಮಾಡಿ, ದಧ್ಯನ್ನ ಕವಳಗಳನ್ನು ಕೊಟ್ಟರು.

ಈಕಡೆಯಲ್ಲಿ ರಾಜಒಡೆಯರು ಜನರು ಒಪ್ಪಿಸಿದ ಕೈಗಾಣಿಕೆಗಳನ್ನು ಸ್ವೀಕರಿಸಿ, ಅವರಿಂದ ಪ್ರಣಾಮವನ್ನು ತೆಗೆದುಕೊಂಡು, ಅವರ ತಾರತಮ್ಯವಿದ್ದಂತೆ ಮರ್ಯಾದೆಮಾಡಿ, ಅಪ್ಪಣೆಯನ್ನು ಕೊಟ್ಟು ಕಳುಹಿಸಿದರು. ಆಬಳಿಕ ಛತ್ರ ೧, ಚಾಮರ ೨, ಬೀಸಣಿಗೆ ೧, ಸುವರ್ಣನಗರಿ ೨, ಕಾಳಂಜಿ ೧, ಕನ್ನಡಿ ೧, ಚಂಬಿನಚೀಲ ೧, ನಸ್ಯದ ಡಬ್ಬಿ ೧, ವೀಳ್ಯದ ಪೆಟ್ಟಿಗೆ ೧, ಎಡಬಲದ ಸೇವೆ ೨, ಹಾವಿಗೆ ೧, ಪಟಪಾವಡೆಗಳು ೨, ಇವುಗಳನ್ನು ಪ್ರತ್ಯೇಕಪ್ರತ್ಯೇಕವಾಗಿ ಹಿಡಿದುಕೊಂಡಿರುವ ಚೇಟಿಕಾ ಸ್ತ್ರೀಯರಿಂದ ಉಭಯ ಸಮಯಗಳಲ್ಲಿ ಸೇವೆಯನ್ನು ತೆಗೆದುಕೊಳ್ಳುತ್ತಾ ಸಿಂಹಾಸನದಲ್ಲಿ ಮುಹೂರ್ತ ಮಾಡಿರುವ ಧೊರೆಗಳನ್ನು ನೋಡಬೇಕೆಂಬ ಇಚ್ಛೆಯಿಂದ, ಮಹಾಮಾತುಶ್ರೀಯವರು ಮೊದಲಾದ ಅಂತಃಪುರ ಸ್ತ್ರೀ ಜನರೆಲ್ಲರೂ, ತಮ್ಮ ತಮ್ಮ ಮರ್ಯಾದಾನುಸಾರವಾಗಿ ಸಿಂಹಾಸನಕ್ಕೆ ನಮಸ್ಕರಿಸಿ ಅಂತಃಪುರಕ್ಕೆ ತೆರಳಿದ ಒಡನೆ ಸಿಂಹಾಸನದಿಂದ ಇಳಿದರು.

ಅನಂತರದಲ್ಲಿ ಧೊರೆಗಳು ಆರೋಗಣೆಯನ್ನು ಒಪ್ಪಿಸಿಕೊಂಡು, ಮೂರನೇ ಜಾವದಲ್ಲಿ ಸಿಂಹಾಸನವನ್ನೇರಿ, ಪ್ರಾತಃಕಾಲದಂತೆ ಒಡ್ಡೋಲಗವನ್ನು ಕೈಕೊಳ್ಳುತ್ತಾ ಇರುವಲ್ಲಿ, ಪಟ್ಟಸ್ವಾಮಿಯವರು ಅಳಿಯಂದಿರು ಮೊದಲಾದ ಅರಸುಗಳೂ, ಪಾಳ್ಯಗಾರರೂ ಸಜ್ಜೆಯಿಂದ ಕೆಳಕ್ಕೆ ಇಳಿದು, ಕೈಯಲ್ಲಿ ಕತ್ತಿಗಳನ್ನು ಹಿಡಿದು, ಕೆಮ್ಮಣ್ಣು ಮಟ್ಟಿಯಲ್ಲಿ ನಿಂತು, ತಮ್ಮ

ತಮ್ಮ ಮರ್ಯಾದಾನುಸಾರವಾಗಿ ನಮಸ್ಕಾರವನ್ನು ಮಾಡಿದರು. ಕರಣೀಕರು ಮೊದಲಾದವರು ಕೆಮ್ಮಣ್ಣುಮಟ್ಟಿಯಲ್ಲಿ ತಳೆಬಾಗಿ ಕರಗಳನ್ನು ಮುಗಿದರು. ಸೇವಾ ಜನರೆಲ್ಲರೂ ಕಟ್ಟಲೇ ಮೇರೆಗೆ ಪ್ರಣಾಮವನ್ನು ಮಾಡಿ, ತಮ್ಮತಮ್ಮ ಉಳಿಗಗಳನ್ನು ಹಿಡಿದುಕೊಂಡು ನಿಬಂಧನೇ ಸ್ಥಳಗಳಲ್ಲಿ ನಿಂತುಕೊಂಡರು. ಅನಂತರ, ಮೊದಲು ನಿಬಂಧನೆ ಮಾಡಿರುವ ಮೇರೆಗೆ, ಜಟ್ಟಿಗಳ ಜೋಡಿಯನ್ನು ಕಾಳಗಕ್ಕೆ ಬಿಡಿಸಿ, ಸೋಲುವೆ ಗೆಲುವೆಯನ್ನು ಪರಾಂಬರಿಸಿ, ಅವರವರ ಯೋಗ್ಯತಾನುಸಾರವಾಗಿ ಉಡುಗೆರೆಗಳನ್ನು ಕೊಟ್ಟು, ಮತ್ತೊಂದು ಕಡೆಯಲ್ಲಿ ಟಗರು ಕೋಣ ಮೊದಲಾದವುಗಳ ಕಾಳಗವನ್ನೂ ಡೊಂಬರು ಪೈಲ್ವಾನರು ಮುಂತಾದವರ ಆಟಗಳನ್ನೂ ನೋಡಿ, ಅವರವರ ತಾರತಮ್ಯವರಿತು ವಸ್ತ್ರಾಭರಣಗಳನ್ನು ಕೊಟ್ಟು ಸಂತೋಷದಿಂದ ಇರುತ್ತಿದ್ದರು.

ಆ ಸಮಯದಲ್ಲಿ, ಪ್ರಾತಃಕಾಲದಂತೆ, ಪಟ್ಟದ ಆನೆ ಕುದುರೆಗಳು, ನದೀತೀರಕ್ಕೆ ಹೋಗಿ, ಅಲ್ಲಿ ಆಗತಕ್ಕ ಪೂಜೆ ದೀವಟಿಗೇಸಲಾಮ್ ಮೊದಲಾದವುಗಳನ್ನು ನೆರವೇರಿಸಿಕೊಂಡು ಬರುತ್ತಾ, ಧೊರೆಗಳವರಿಗೆ ದೀವಟಿಗೇಸಲಾಮ್ ಆದನಂತರ, ಪಟ್ಟಸ್ವಾಮಿಯವರು ಮೊದಲಾದವರು ಮೂರನೇ ಜಾವದಂತೆ ನಮಸ್ಕರಿಸಿ ಸೆಜ್ಜೇಮೇಲೆ ಕುಳಿತಿರುವ ಸಮಯದಲ್ಲಿ, ಕೆಮ್ಮಣ್ಣುಮಟ್ಟಿಯಲ್ಲಿ ನಿಂತು, ಧೊರೆಗಳವರಿಗೆ ಪ್ರಣಾಮವನ್ನು ಮಾಡಿ ಅರಮನೆಗೆ ಬಂದವು. ಅನಂತರ ಅವುಗಳಿಗೆ ಪ್ರಾತಃಕಾಲದಂತೆ ಪೂಜೆಮುಂತಾದ್ದನ್ನು ನೆರವೇರಿಸಿದರು. ಧೊರೆಗಳು ಕೆಮ್ಮಣ್ಣುಮಟ್ಟಿಯಲ್ಲಿ ಹತ್ತಿಸಿ ಇರುವ ಹಗಲುಬತ್ತಿ ನಕ್ಷತ್ರಬಾಣ ಹೂಬಾಣ ಚಕ್ರಬಾಣ ಮುಂತಾದವುಗಳ ಆಶ್ಚರ್ಯವನ್ನು ನೋಡುತ್ತಾ, ಜನರಿಗೆ ಹೂವಿನಹಾರ ವೀಳ್ಯಗಳನ್ನು ಕೊಡಿಸಿ, ಅವರಿಂದ ಪ್ರಣಾಮವನ್ನು ತೆಗೆದುಕೊಂಡು, ಸಿಂಹಾಸನದಿಂದ ಇಳಿಯುವ ಸಮಯದಲ್ಲಿ ೨೧ ಕುಶಾಲ್ ಫಿರಂಗಿಗಳಾದ ಮೇಲೆ, ಅಂತಃಪುರಕ್ಕೆ ತೆರಳಿ, ಅಲ್ಲಿ ಚೇಟಿಕಾಸ್ತ್ರೀಯರಿಂದ ಹಸ್ತಲಾಘವ ಮುಂತಾದ ಸೇವೆಗಳನ್ನು ಅಂಗೀಕರಿಸುತ್ತಲಿರುವ ಸಮಯದಲ್ಲಿ ಇವರ ಪತ್ನಿಯರು ಮುಂತಾದ ಅಂತಃಪುರಸ್ತ್ರೀಯರು ಅಡಿದಾವರೆಗಳಿಗೆ ಪ್ರಣಾಮವನ್ನು ಮಾಡಿದರು. ಆಮೇಲೆ ಜನರ ದೃಷ್ಟಿದೋಷವನ್ನು ಪರಿಹರಿಸುವದಕ್ಕೋಸ್ಕರ ಬಗೆಬಗೆಯಾದ

ಅನ್ನದ ಆರತಿಗಳನ್ನೂ ನವರತ್ನದ ಆರತಿಗಳನ್ನೂ ಬೆಳಗಿದನಂತರ, ಧೊರೆಗಳು, ತಮ್ಮ ಮಾತುಶ್ರೀಯವರಿಗೆ ಪ್ರಣಾಮವನ್ನು ಮಾಡಿ, ಅಲಂಕಾರ ವನ್ನು ಸಡಲಿಸಿ, ಫಲಾಹಾರವನ್ನು ಮಾಡಿ ಸುಖವಾಗಿ ಪವಡಿಸಿಕೊಂಡರು.

ರಾಜಒಡೆಯರವರು ಇದೇ ರೀತಿಯಾಗಿ ಈ ದಿನಮೊದಲು ಮಹಾನ ವಮೀ ಸಾಯಂಕಾಲದವರಿಗೂ ಓಲಗವನ್ನು ಬೆಳಸಿದ್ದಲ್ಲದೆ ಈ ನವರಾತ್ರಿಯ ಮಧ್ಯದಲ್ಲಿ ಮೂಲಾನಕ್ಷತ್ರ ದಿನದಲ್ಲಿ ಸರಸ್ವತೀ ಪೂಜೆಯನ್ನು ನೆರವೇರಿ ಸಿದರು.

ಅ ಬಳಿಕ ಮಹಾನವಮಿಯದಿನ ಪ್ರಾತಃಕಾಲದಲ್ಲಿ, ಧೊರೆಗಳು ಸ್ನಾನಸಂಧ್ಯಾವಂದನೆಗಳನ್ನು ನೆರವೇರಿಸಿಕೊಂಡು, ಅರಮನೆಯಲ್ಲಿ ಪಟ್ಟದ ಕತ್ತಿಯನ್ನು ಪೂಜಿಸಿ, ಅಂದಳದಲ್ಲಿ ಇರಿಸಿ, ಅನೇಕ ವೈಭವಗಳಿಂದ ಕೈಗ ಳನ್ನು ಕಟ್ಟಿಕೊಂಡಿರುವ ಅರಸುಗಳು ಮುಂತಾದ ವಿಶಿಷ್ಟ ಜನರೊಡ ನೆಯೂ, ಕನ್ಯಾಕನ್ನಡಿಗಳೊಡನೆಯೂ, ಆನೆ ಕುದುರೆಗಳನ್ನು ಪಾದ್ಯ ಮೊದಲು ಹೋಗುತ್ತಿದ್ದ ಕಾವೇರೀ ಉತ್ತರಪಾರ್ಶ್ವದ ಗೌರೀಕಡುವಿನಲ್ಲಿ ಹಾಕಿದ್ದ ಚಪ್ಪರಕ್ಕೆ ಕಳುಹಿಸಿ ಕೊಟ್ಟರು. ಆಗ ಪಟ್ಟದ ಕತ್ತಿಯನ್ನು ಮಡೀ ಹಾಸಿಗೆಯ ಮೇಲೆ ಇರಿಸಿ, ಅಪ್ಪಣೆಯಾದ ಅರಸುಗಳಲ್ಲಿ ಒಬ್ಬರು, ಮಡಿ ಯನ್ನು ಉಟ್ಟುಕೊಂಡು ಬಂದು, ಆಯುಧಕ್ಕೆ ಎಣ್ಣೇಶಾಸ್ತ್ರಮುಂತಾದ ಶುಭಕಾರ್ಯಗಳನ್ನು ಮಾಡಿ, ಕಲ್ಪೋಕ್ತದಿಂದ ಪೂಜಿಸಿ, ಕಟ್ಟಿಲೇ ಮೇರೆಗೆ ಆನೆ ಕುದುರೆಗಳನ್ನೂ ಪೂಜಿಸಿದ ಮೇಲೆ ಬಂದ ಜನರೆಲ್ಲರೂ ಮುಜರೆ ಯನ್ನು ಮಾಡಿದರು. ಅನಂತರದಲ್ಲಿ ಆ ಜನರಿಗೆ ಹೂವಿನಹಾರ ವೀಳ್ಯಗಳನ್ನು ಕೊಟ್ಟು, ಮಹಾರಾಜಮರ್ಯಾದೆಯಿಂದ ಅರಮನೆಗೆ ಬರುತ್ತಿರುವ ಸಮಯ ದಲ್ಲಿ, ಅಮಲದೇವತೆಯನ್ನು ಪೂಜಿಸುತ್ತಿರುವ ಪೂಜಾರಿಯ ಮನೆಯಿಂದ ಕುಲದೇವತೆಯಾದ ಆ ಅಮಲದೇವತೆಯನ್ನು ಮತ್ತೊಂದು ಅಂದಳದ ಲ್ಲಿರಿಸಿ, ಆಯುಧದ ಹಿಂದುಗಡೆಯಲ್ಲಿಯೇ ಬಿಜಮಾಡಿಸಿಕೊಂಡು ಬಂದು, ಅರ ಮನೇ ಸೌಂದರ್ಯವಿಲಾಸದ ತೋಟ್ಟಿಯ ಹಜಾರದ ಪುಷ್ಪಮಂಟಪದಲ್ಲಿ ಇರಿಸಿದ ಮೇಲೆ ಮತ್ತೊಂದು ಅಂದಳದಲ್ಲಿರುವ ಆಯುಧಕ್ಕೂ ಆನೆ ಕುದುರೆಗಳಿಗೂ ವಾರಾಂಗನೆಯರು ನವರತ್ನದ ಆರತಿಗಳನ್ನು ಬೆಳಗಿದರು. ಅನಂತರ

ಧೊರೆಗಳು ಅಂದಳದಲ್ಲಿದ್ದ ಪಟ್ಟದ ಕತ್ತಿಯನ್ನು ಹಿಡಿದುಕೊಂಡು, ಮೇಲು ಕಟ್ಟು ಮುತ್ತಿನ ಕುಚ್ಚುಗಳಿಂದ ಅಲಂಕೃತವಾದ ಹಜಾರದಲ್ಲಿ ಕಾಲುಮಣೆ ಮೇಲೆ ಇರಿಸಿ, ಪೂರ್ವಸಂಪ್ರದಾಯದ ಮೇರೆಗೆ ಸರಸ್ವತೀಪೂಜೆಯನ್ನು ಮಾಡಿದರು. ಈ ದಿನ ನವಮಿಯು ಅರ್ಧಗಳಿಗೆ ಇದ್ದುದ್ದರಿಂದ್ಯ, ಆ ವೇಳೆಯಲ್ಲಿಯೇ ಆಯುಧಗಳನ್ನು ಪೂಜಿಸಿದ ಮೇಲೆ, ಅಶ್ವಪೂಜೆ ಗಜಪೂಜೆ ಆಂದೋಳಿಕಾಪೂಜೆಗಳನ್ನು ಮಾಡಿ, ಈ ನವಮಿಯ ಹೊತ್ತಿನಲ್ಲಿಯೇ ತಮ್ಮ ಕುಲದೇವತೆಯಾದ ಬೆಟ್ಟದ ಶ್ರೀಚಾಮುಂಡೇಶ್ವರೀ ಅಮ್ಮನವರ ಸನ್ನಿಧಿಯಲ್ಲಿ ಶತಚಂಡೀಜಪ ಮುಂತಾದ ಜಪಗಳಿಗೆ ಪೂರ್ಣಾಹುತಿಯನ್ನು ಮಾಡಿಸಿ, ಜಪವನ್ನು ಬೆಳೆಯಿಸುವಂತೆ ನಿಬಂಧನೆಯನ್ನು ಮಾಡಿ, ಆರೋಗಣೆಯನ್ನು ಒಪ್ಪಿಸಿಕೊಂಡು ಮೂರನೇ ಜಾವದಲ್ಲಿ ಜಟ್ಟೀಕಾಳಗ ಮುಂತಾದ ಓಲಗ ಬೆಳೆಯಿಸಿದರು. ಈದಿನ ಮೂರನೇಜಾವದಲ್ಲಿ ಆನೆ ಕುದುರೆಗಳು ನದಿಗೆ ಹೋಗತಕ್ಕ ಕಟ್ಟಲೆಯಿಲ್ಲ. ಈ ದಿನ ರಾತ್ರಿ, ಕಟ್ಟಲೇ ಮೇರೆಗೆ ಓಲಗಬೆಳೆದನಂತರ ಆಯುಧಕ್ಕೆ ಪೂಜೆಯನ್ನು ಮಾಡಿ, ಕಂಕಣ ವಿಸರ್ಜನೆಯನ್ನು ಮಾಡಿ, ಶಿಂಶಾಸರವನ್ನೂ ದಪ್ತರವನ್ನೂ ಸಹ ಪೂಜಿಸಿ, ಈ ರಾತ್ರಿ ಅತಿ ನೇಮದಿಂದ ಅನೇಕ ಶಾಕ ಪಾಕ ಭಕ್ಷ್ಯ ಭೋಜ್ಯಗಳಿಂದ ಕುಲದೇವತೆಯನ್ನು ಪೂಜಿಸಿ, ಧೊರೆಗಳು ಮೊದಲಾಗಿ ಅಂತಃಪುರಸ್ತ್ರೀಯರೂ ಪುತ್ರಪೌತ್ರರೂ ಸಹ ಕಾಣಿಕೆಗಳನ್ನಿತ್ತು ಪೂಜೆಯನ್ನು ನೆರವೇರಿಸಿದರು.

ವಿಜಯ ದಶಮಿಯ ದಿವಸ ನಡೆಯಿಸಿದ ಕಟ್ಟಲೆಗಳುಯಾವುವೆಂದರೆ:—ಧೊರೆಗಳುಈ ದಿವಸ ಪ್ರಾತಃಕಾಲದಲ್ಲಿ ಸ್ನಾನಸಂಧ್ಯಾವಂದನೆಗಳನ್ನು ನೆರವೇರಿಸಿಕೊಂಡು, ಸರಸ್ವತೀ ಉತ್ತರಪೂಜೆಯನ್ನು ಮಾಡಿ, ಸರ್ವಾಲಂಕಾರಭೂಷಿತರಾಗಿ, ಆಯುಧವನ್ನು ಪೂಜಿಸಿ ಇದ್ದ ಹಜಾರಕ್ಕೆ ಚಿತ್ತಯಿಸಿ, ದಶಮಿಯುಅರಗಳಿಗೆ ಇದ್ದರೂ, ಆ ಹೊತ್ತಿನಲ್ಲಿಯೇ ಆಯುಧಕ್ಕೆ ಉತ್ತರಪೂಜೆಯನ್ನು ಮಾಡಿದರು. ಆ ಕಾಲದಲ್ಲಿ ಪೂರ್ವದಂತೆಯೇ ಕಟ್ಟಲೇ ಮೇರೆಗೆ ಓಲಗ ಮುಜರೆ ನಡೆಯಿತು. ಆಗ ಧೊರೆಗಳು ಆಯುಧದ ಎದುರಿಗೆ ರಕ್ತ ಬೀಳುವಂತೆ ಜಟ್ಟೀಕಾಳಗವನ್ನು ಮಾಡಿಸಿ, ಆ ಆಯುಧಕ್ಕೆ ಬಲಿ

ರೂಪವಾಗಿ ಕಾಳಿಕಾ ಪುರಾಣೋಕ್ತವಾಗಿ ಕೂಷ್ಮಾಂಡ ಛೇದನವನ್ನು ತಾವೇ ಮಾಡಿ, ಅನಂತರದಲ್ಲಿ ಪಟ್ಟದ ಕತ್ತಿಯನ್ನು ಸ್ವಹಸ್ತದಿಂದ ಹಿಡಿದು, ಅಂದಳದಲ್ಲಿ ಇರಿಸಿ, ಅದರ ಸಂಗಡಲೇ ಕೆಲವು ಆಯುಧಗಳನ್ನಿರಿಸಿ, ಉತ್ತರ ದಿಕ್ಕಿನ ಬನ್ನೀಮರದ ಮಂಟಪಕ್ಕೆ ಪಟ್ಟದ ಆನೆಕುದುರೆ ಸಹಿತವಾಗಿ, ಪೂರ್ವದಂತೆ ಮಹಾರಾಜಮರ್ಯಾದೆಯೊಡನೆ ಕಳುಹಿಸಿಕೊಟ್ಟರು.

ಅನಂತರದಲ್ಲಿ ಧೊರೆಗಳು ಅಮಲದೇವತೇ ಅಮ್ಮನವರನ್ನು ಪೂಜಾರೀ ಮನೆಗೆ ಕಳುಹಿಸಿಕೊಟ್ಟು, ಆರೋಗಣೆಯನ್ನು ಒಪ್ಪಿಸಿಕೊಂಡು, ಈದಿನ ಮೂರನೇ ಜಾವದಲ್ಲಿ ವಿಶಿಷ್ಟ ಬಿರುದುಗಳು ಮುಂತಾದ ಮಹಾರಾಜಮರ್ಯಾದೆಯೊಡನೆ ಸೇನಾಸಮೇತರಾಗಿ ಅಂಬಾರಿಯನ್ನೇರಿ ಹೊರಟು, ಬನ್ನೀಮರದ ಸಮೀಪಕ್ಕೆ ಹೋಗಿ, ಅಲ್ಲಿ ವ್ಯಾಘ್ರ, ವರಾಹ, ಭಲ್ಲೂಕ, ಶಶ ಮುಂತಾದ ಅನೇಕ ಅರಣ್ಯಮೃಗಗಳನ್ನು ಹಿಡಿತರಿಸಿ, ವಿನೋದದಿಂದ ಬೇಟೆಯನ್ನಾಡಿ, ಅವುಗಳನ್ನು ಸಂಹರಿಸಿ, ಶಮೀವೃಕ್ಷದ ಬಳಿಯಲ್ಲಿರುವ ಆಯುಧದ ಸಮೀಪಕ್ಕೆ ಚಿತ್ತಯಿಸಿ, ಶಮೀವೃಕ್ಷದ ಪೂಜೆಯನ್ನು ಮಾಡಿಸಿ, ಪ್ರಸಾದವನ್ನು ಸ್ವೀಕರಿಸಿ, ಸಾಯಂಕಾಲವಾದ ಬಳಿಕ ದೀವಟಿಗೇಸಲಾಮ್ ಮೊದಲಾದ ಮರ್ಯಾದೆಗಳನ್ನು ಅಂಗೀಕರಿಸಿ, ಇದೇ ರೀತಿಯಾಗಿ ಆನೆ, ಕುದುರೆ, ಆಯುಧಗಳಿಗೆ ದೀವಟಿಗೇಸಲಾಮ್ ಮಾಡಿಸಿ, ಅವುಗಳನ್ನು ತಮ್ಮ ಸವಾರೀ ಹಿಂದುಗಡೆಯಲ್ಲಿಯೇ ಅರಮನೆಗೆ ಬಿಜಮಾಡಿಸಿಕೊಂಡು ಬರುವಂತೆ ಅಪ್ಪಣೆಯನ್ನು ಕೊಟ್ಟು, ಅತಿ ಸಂಭ್ರಮದಿಂದ ಅರಮನೆಗೆ ಚಿತ್ತಯಿಸಿದರು. ಹೀಗೆ ಧೊರೆಗಳು ಅರಮನೆಗೆ ಬಂದು, ಅಲ್ಲಿ ದೊಡ್ಡ ಹಜಾರದಲ್ಲಿ ಅತ್ಯುನ್ನತವಾದ ಭದ್ರಾಸನದಲ್ಲಿ ಮುಹೂರ್ತಮಾಡಿ, ಪಾಡ್ಯದದಿನ ಸಿಂಹಾಸನಾರೋಹಣ ಕಾಲದಲ್ಲಿ ನಡೆದಂತೆ ನಜರು ಮುಜರೆಗಳನ್ನು ಒಪ್ಪಿಸಿಕೊಂಡು ಮುಹೂರ್ತ ಮಾಡಿಕೊಂಡರು. ಆಸಮಯದಲ್ಲಿ ವಂಶಾವಳೀ ಕರಣೀಕನು ಬನ್ನೀ ಮಹಂಕಾಳಿಯ ಆಶೀರ್ವಾದದ ಪಟ್ಟಿಯನ್ನು ಓದಿ ಒಪ್ಪಿಸಿದನು. ಅನಂತರ ಆ ಕರಣೀಕನಿಗೆ ಹೂವಿನಹಾರ, ವೀಳ್ಯ, ವಸ್ತ್ರಾಭರಣ ಮುಂತಾದವುಗಳನ್ನು ಕೊಡಿಸಿ, ಆ ಪಟ್ಟಿಯನ್ನು ಪಟ್ಟದ ಕತ್ತಿಯ ಒರೆಯೊಳಗೆ ಇರಿಸಿ, ಖಾಸಾ ಮೊಹರು ಮಾಡಿಸಿ, ಶ್ರೀಚಾಮುಂಡೇಶ್ವರೀ ಅಮ್ಮನವರ ಸನ್ನಿಧಿ

ಯಲ್ಲಿ ಇರಿಸುವಂತೆ ನಿಬಂಧನೆಮಾಡಿ, ನಜರು ಮುಜುರೆ ಮಾಡಿದ ಜನರಿಗೆ ಹೂವಿನ ಹಾರ ವೀಳ್ಯಗಳನ್ನು ಕೊಟ್ಟು ಕಳುಹಿಸಿಕೊಡುವಂತೆ ಅಪ್ಪಣೆಯನ್ನು ಕೊಟ್ಟು, ತಾವು ಆರೋಗಣೆಯನ್ನು ಒಪ್ಪಿಸಿಕೊಂಡು ಪವಡಿಸಿಕೊಂಡರು.

ಅನಂತರದಲ್ಲಿ ನವರಾತ್ರಿಯ ಉತ್ಸವಕ್ಕೆ ದೇಶಾಂತರಗಳಿಂದ ಬಂದ ವೇಶ್ಯಾಸ್ತ್ರೀಯರು ಮುಂತಾದ ಜನರಿಗೆ ಅವರವರ ತಾರತಮ್ಯ ವಿದ್ದಂತೆ ವಸ್ತ್ರಾಭರಣಗಳನ್ನು ಕೊಟ್ಟು, ಈ ನವರಾತ್ರಿಯಲ್ಲಿ ಕಾಳಗಮಾಡಿದ ಜಟ್ಟಿಗಳಿಗೆ ಪರಸ್ಪರ ವೈರ ವಿರಬಾರದೆಂದು ಅವರೆಲ್ಲರನ್ನೂ ಒಟ್ಟುಕೂಡಿಸಿ ಊಟಮಾಡಿಸಿ, ಅಂಪಕ ಪೋಷಣವನ್ನು ಕೊಟ್ಟು ಕಳುಹಿಸುವದೆಂದು ಕಟ್ಟು ಮಾಡಿದರು.

ರಾಜಒಡೆಯರು ಆಶೌಚ ಬಂದ ಕಾಲದಲ್ಲಿ ವಿಜಯದಶಮಿಯ ದಿನ ರಾತ್ರಿಯಲ್ಲಿ ಓಲಗ ಬೆಳೆದಮೇಲೆ ಕಂಕಣವಿಸರ್ಜನೆಯನ್ನು ಮಾಡಿ ಆಶೌಚ ಶೇಷಾನುಷ್ಠಾನೆಮಾಡತಕ್ಕದ್ದೆಂದು ನಿಬಂಧನೆಯನ್ನು ಮಾಡಿ, ಈ ವಿವರಗಳನ್ನೆಲ್ಲಾ ಅರಮನೇ ಆಯಕಟ್ಟಿನ ಕರಣೀಕನ ಕಡತಕ್ಕೆ ಬರಿಸಿ, ನಮ್ಮ ವಂಶಪಾರಂಪರ್ಯವಾಗಿ ಈ ಮೇರೆಗೆ ನವರಾತ್ರಿಮಹೋತ್ಸವವು ಬೆಳೆಯತಕ್ಕದ್ದೆಂದು ನಿಬಂಧನೆ ಮಾಡಿ, ಆಯುಧ ಸಿಂಹಾಸನ ಪಟ್ಟದಕುದುರೆ ಪಟ್ಟದಾನೆ ಇವೆಲ್ಲಕ್ಕೂ ಪ್ರತಿನಿತ್ಯದಲ್ಲಿಯೂ ಪೂಜೆ ನಡೆಯುವಂತೆ ಕಟ್ಟಳೆ ಮಾಡಿಸಿದರು.

ರಂಗಸ್ವಾಮಿಯ ದೇವಸ್ಥಾನದ ಮುಂಭಾಗದಲ್ಲಿ ತಾವು ಹೊಸದಾಗಿ ಕಟ್ಟಿಸಿದ ಅರಮನೇ ಸಜ್ಜೇಮೇಲೆ ಈರೀತಿಯಾಗಿ ಓಲಗವನ್ನು ಬೆಳಸಿಸಿ, ಪ್ರತಿಶುಕ್ರವಾರರಾತ್ರಿ ಹೀಗೆಯೇ ಓಲಗಬೆಳೆಯತಕ್ಕದ್ದೆಂದು ಕಟ್ಟುಮಾಡಿಸಿದರು.

ಧರ್ಮಕಾರ್ಯಗಳು.—ರಾಜಒಡೆಯರವರು ತಮ್ಮ ಕುಲದೇವತೆಯಾದ ಶ್ರೀಚಾಮುಂಡೇಶ್ವರೀ ಅಮ್ಮನವರು, ನಂಜನಗೋಡು ಶ್ರೀಕಂಠೇಶ್ವರಸ್ವಾಮಿ, ಮಹೀಶೂರ ಲಕ್ಷ್ಮೀರಮಣಸ್ವಾಮಿ, ತ್ರಿನಯನೇಶ್ವರ, ಶ್ರೀರಂಗಪಟ್ಟಣದ ರಂಗನಾಥಸ್ವಾಮಿ, ಮೇಲುಕೋಟೇ ಚೆಲುವರಾಯಸ್ವಾಮಿ,

ನಾರಾಯಣಸ್ವಾಮಿ, ಬೆಟ್ಟದ ಮೇಲಿರುವ ಯೋಗನೃಸಿಂಹ, ಯಡತೊರೆ ರಾಮನಾಥಪುರ ತಿರಮಕೂಡಲು ನರಸೀಪುರ ಮುಂತಾದ ಸ್ಥಳಗಳಲ್ಲಿರುವ ಶಿವ ವಿಷ್ಣುದೇವರಿಗೆ ವಿಸ್ತಾರವಾಗಿ ದೇವಸ್ಥಾನಗಳನ್ನು ಕಟ್ಟಿಸಿ, ಆಯಾ ದೇವಸ್ಥಾನದ ತಾರತಮ್ಯವಿದ್ದಂತೆ ನಿತ್ಯಗಟ್ಲೆ ಪಡಿತರ ದೀಪಾರಾಧನೆ ಬ್ರಹ್ಮೋತ್ಸವ ಮುಂತಾದ ಅನೇಕ ಉತ್ಸವಗಳಿಗೂ ಸಹ ಗ್ರಾಮಭೂಮಿಗಳನ್ನು ಕೊಟ್ಟದ್ದಲ್ಲದೆ, ತಸ್ತೀಕನ್ನು ಏರ್ಪಾಟುಮಾಡಿ, ಅನೇಕ ವಸ್ತ್ರಾಭರಣ ಪಾತ್ರೆಗಳನ್ನು ಕೊಟ್ಟರು. ಶ್ರೀಚಾಮುಂಡೇಶ್ವರೀ ಅಮ್ಮನವರಿಗೆ ನವರಾತ್ರಿಯಲ್ಲಿ ಕಾಳರಾತ್ರಿಯ ಉತ್ಸವಕಾಲದಲ್ಲಿ ಬಟ್ಟಲಿನಂತೆ ಇರುವ ನವರತ್ನ ಖಚಿತವಾದ ಬಂಗಾರ ಕೊರವಂಜೀ ಗೊಡೆಯನ್ನೂ ಇದೇರೀತಿಯಾಗಿ ಮುಡಿಗಗ್ಗರವನ್ನೂ ಸಹ ಒಪ್ಪಿಸಿ, ಈ ದೇವಸ್ಥಾನದ ಮಹಾದ್ವಾರಕ್ಕೆ ರಾಯಗೋಪುರವನ್ನು ಕಟ್ಟಿಸಬೇಕೆಂದು ಭಿತ್ತಿರಚನೆಯನ್ನು ಮಾಡಿ ನಾಲ್ಕು ದ್ವಾರಶಾಖೆಗಳನ್ನು ಮಾತ್ರ ನಿಲ್ಲಿಸಿದರು. ನಂಜನಗೂಡು ಶ್ರೀಕಂಠೇಶ್ವರ ಸ್ವಾಮಿಯವರಿಗೆ ವಿಭೂತಿ ರೇಖೆಯಿಂದ ಯುಕ್ತವಾದ ನವರತ್ನ ಖಚಿತವಾದ ಕೊಳಗವನ್ನು ಸಮರ್ಪಿಸಿದರು. ಮೇಲುಕೋಟೇ ಚಲುವರಾಯಸ್ವಾಮಿಯವರಿಗೆ ಅಮೌಲ್ಯರತ್ನಗಳಿಂದ ನೂತನವಾಗಿ ಮಾಡಿಸಿದ, ವೈರಮುಡಿಯಂತಿರುವ ರಾಜಮುಡಿ ಎಂಬ ಕಿರೀಟವನ್ನು ಸಮರ್ಪಿಸಿ, ಬ್ರಹ್ಮೋತ್ಸವ ಕಾಲದಲ್ಲಿ ವೈರಮುಡಿಯನ್ನು ಧರಿಸಿ, ತೆಗೆದ ಅನಂತರದಲ್ಲಿ ತಾವು ಸಮರ್ಪಿಸಿದ ರಾಜಮುಡಿಯನ್ನು ಧರಿಸಿ, ಬ್ರಹ್ಮೋತ್ಸವವು ಬೆಳೆದ ಅನಂತರದಲ್ಲಿ ಶ್ರೀರಂಗಪಟ್ಟಣದ ಬೊಕ್ಕಸಕ್ಕೆ ತೆಗೆದುಕೊಂಡು ಬರುವಂತೆಯೂ, ವೈರಮುಡಿಯನ್ನು ಮಾತ್ರ ಉತ್ಸವವಾದ ಅನಂತರ ಆ ದಿನ ರಾತ್ರಿಯೇ ಮೊಹರು ಮಾಡಿಸಿ, ಶ್ರೀರಂಗಪಟ್ಟಣದ ಬೊಕ್ಕಸಕ್ಕೆ ತೆಗೆದುಕೊಂಡು ಬರುವಂತೆಯೂ, ಅಷ್ಟತೀರ್ಥ ಮುಂತಾದ ವಿಶೇಷೋತ್ಸವಗಳಲ್ಲಿ ರಾಜಮುಡಿ ಮಾತ್ರ ಹೋಗಿ ಬರುವಂತೆಯೂ ಸಹ ನಿಬಂಧನೆಯನ್ನು ಮಾಡಿಸಿದರು. ನಾರಾಯಣ ಸ್ವಾಮಿಯವರಿಗೆ ಅಮೌಲ್ಯವಾದ ರತ್ನಕವಚವನ್ನು ಒಪ್ಪಿಸಿದರು. ಆ ಕಾಲದಲ್ಲಿ ಮೇಲುಕೋಟೆಗೆ ಇರುವ ನಾಲ್ಕು ಊರುಬಾಗಿಲುಗಳಿಗೂ ಗೊತ್ತಾಗಿದ್ದ ನಾಲ್ವರು ಸ್ಥಾನೀಕರು ನಾಲ್ಕು ಬಾಗಿಲುಗಳಲ್ಲಿಯೂ ಜನರು ಸಂಚರಿಸುವದನ್ನು ತಪ್ಪಿಸಿ, ಒಂದೊಂದು ಬಾಗಿಲಿಗೆ ಒಬ್ಬೊಬ್ಬರೆಂದು ಗೊತ್ತು

ಮಾಡಿಕೊಂಡು, ಮೂರು ಬಾಗಿಲುಗಳನ್ನು ಹಾಕಿ, ತಮ್ಮ ತಮ್ಮ ಗಡುವು
ಮೇರಿಗೆ ಮೂರು ತಿಂಗಳು ಒಂದೊಂದು ಬಾಗಿಲಲ್ಲಿಯೇ ಸಂಚಾರವಮಾಡ
ಬೇಕೆಂದು ನಿಬಂಧನೆ ಮಾಡಿಕೊಂಡಿದ್ದರು. ಈ ವರ್ತಮಾನವು ರಾಜಒಡೆಯ
ರವರಿಗೆ ತಿಳಿದು, ಈ ನಾಲ್ಕು ಬಾಗಿಲುಗಳಲ್ಲಿಯೂ ಸಕಲರೂ ಸರ್ವದಾ
ಸಂಚಾರಮಾಡುವಂತೆ ನೇಮಕಮಾಡಿದರು. ಈ ನಾಲ್ವರು ಸ್ಥಾನೀಕರು
ಚಲುವರಾಯಸ್ವಾಮಿಯವರಿಗೆ ದಿಲ್ಲೀ ಪಾದಷಹಾನು ಒಪ್ಪಿಸಿ ಇದ್ದ ಗ್ರಾಮ
ಭೂಮಿಗಳನ್ನು ತಾವು ಅನುಭವಿಸಿಕೊಂಡು ದೇವರ ಸೇವೆಯನ್ನು ಚನ್ನಾಗಿ
ನಡಿಸದೆ ಇರುತ್ತಿದ್ದರು. ಈ ವರ್ತಮಾನವನ್ನು ಕೇಳಿ, ರಾಜಒಡೆಯ
ರವರು, ಅವರ ಸ್ವಾಧೀನದಲ್ಲಿ ಇದ್ದ ಗ್ರಾಮ ಭೂಮಿಗಳ ವಿಚಾರಣೆ
ಯನ್ನು ತಪ್ಪಿಸಿ, ದೇವತಾಸೇವೆಯು ಚನ್ನಾಗಿ ನಡೆಯುವಂತೆ ನಿಬಂಧನೆ
ಮಾಡಿ, ಅವರಿಗೆ ಸ್ಥಾನೀಕ ಕೆಲಸ ಮಾತ್ರ ನೋಡಿಕೊಂಡು ಬರುವಂತೆ
ಅಪ್ಪಣೆಯನ್ನು ಕೊಡಿಸಿದರು. ಈ ಮೇಲುಕೋಟೆಯಲ್ಲಿ ಗೃಹೋಪಕರಣ
ಸಹಿತವಾಗಿ ಅನೇಕ ಅಗ್ರಹಾರಗಳನ್ನು ಮಾಡಿದರು. ಇದಲ್ಲದೆ ನಂಜನ
ಗೂಡು, ರಾಮನಾಥಪುರ ತಿರುಮಕೂಡಲು ಮೊದಲಾದಸ್ಥಳಗಳಲ್ಲಿ ಸಂಧ್ಯಾ
ಮಂಟಪ, ಸೋಪಾನ, ಅಗ್ರಹಾರ, ಭಟಮಾನ್ಯ ಮೊದಲಾದವುಗಳನ್ನು
ಕಟ್ಟಿಸಿಕೊಟ್ಟರು. ಎಡತೊರೆಯಲ್ಲಿಯೂ ಇದೇರೀತಿಯಾಗಿ ಮಾಡಿದ್ದ
ಲ್ಲದೆ ಅರ್ಕಪುಷ್ಕರಣಿಗೆ ಸೋಪಾನ ಮಂಟಪಗಳನ್ನು ಕಟ್ಟಿಸಿದರು.
ಮೇಲುಕೋಟೆ, ಚಾಮುಂಡೇಶ್ವರೀಬೆಟ್ಟ, ಮುಂತಾದ ಸ್ಥಳಗಳಲ್ಲಿ ದೇವರ
ಉತ್ಸವಾರ್ಥವಾಗಿ ಮಂಟಪಗಳನ್ನು ನಿರ್ಮಿಸಿ, ಮೇಲುಕೋಟೆಯಲ್ಲಿ ರಾಯ
ಗೋಪುರವನ್ನು ಕಟ್ಟಿಸಬೇಕೆಂದು ಅಧಿಷ್ಠಾನಶುದ್ಧಿಯಾಗಿ ಕೆಲವು ಭಿತ್ತಿ
ಯನ್ನು ನಿರ್ಮಿಸಿ, ನಾಲ್ಕು ದ್ವಾರಶಾಖೆಗಳ ಕಂಬಗಳನ್ನು ಮಾತ್ರ ನಿರ್ಮಿಸಿ
ದ್ದರು. ತಿರುಪತಿ ವೆಂಕಟರಮಣಸ್ವಾಮಿಯವರಿಗೆ ಮುತ್ತಿನ ಸತ್ತಿಗೆ ಮುಂತಾದ
ಸೇವೋಪಕರಣ ಪೂಜೋಪಕರಣ ಅಮೂಲ್ಯವಸ್ತ್ರಾಭರಣಗಳನ್ನು ಒಪ್ಪಿಸಿ
ಪ್ರತಿನಿತ್ಯದಲ್ಲಿಯೂ ನಂದಾದೀವಿಗೆ ಸಹಸ್ರನಾಮಾರ್ಚನೆ ನಿವೇದನ ಮುಂತಾ
ದದ್ದು ನಡೆಯುವದಕ್ಕೂ ಸಹಾ ಗ್ರಾಮಭೂಮಿಗಳನ್ನು ಕೊಟ್ಟು, ಶ್ರೀಮ
ತಸ್ಥ ಮಠ ಪತಿಗಳು ಮುಂತಾದ ಸಕಲರಿಗೂ ಅವರವರ ತಾರತಮ್ಯವರಿತು
ಜೀವನವನ್ನು ಕಲ್ಪಿಸಿ ಗ್ರಾಮ ಭೂಮಿಗಳನ್ನು ಕೊಟ್ಟರು.

ಮುಖ್ಯವಿಷಯಗಳು.— ರಾಜಒಡೆಯರವರು ತಾವು ಸಾಧಿಸಿದ ರಾಜ್ಯಗಳಲ್ಲಿ, ಪೂರ್ವದಲ್ಲಿ ಪಾಳ್ಯಗಾರರು ನೇಮಕಮಾಡಿದ್ದ ಮೇರೆಗೆ, ಕಂದಾಯ ಮುಂತಾದ ಹಣಗಳು ಅರಮನೆಗೆ ಸರಾಗವಾಗಿ ಬರುವದಕ್ಕೋಸ್ಕರ, ಗಡಿಗಳ ವಿಧವರಿತು, ನೂತನವಾಗಿ ತಮ್ಮ ಕಡೆಯ ಬುದ್ಧಿವಂತರಾದ ಅಧಿಕಾರಿಗಳನ್ನೂ; ಲೆಕ್ಕ ಬರೆಯುವದಕ್ಕೆ ಕರಣೀಕರನ್ನೂ, ಕಳ್ಳರು ಮುಂತಾದ ತುಂಟಜನರಿಗೆ ಅವಕಾಶವಿಲ್ಲದಂತೆ ಠಾಣೇದಾರ, ಹೋಬಳೀದಾರ, ವಾಲೇಕಾರ ಮುಂತಾದ ಜನರನ್ನೂ ನೇಮಿಸಿ, ಧರ್ಮದಿಂದ ರಾಜ್ಯಪರಿಪಾಲನೆಯನ್ನು ಮಾಡುತ್ತಿದ್ದರು.

ಅರಮನೆಯಲ್ಲಿ ಪ್ರತಿದಿನದಲ್ಲಿಯೂ ನಡೆಯುವಂತೆ ಕಟ್ಟುಮಾಡಿದ ಊಳಿಗಗಳವಿವರ.—ಸಂಚಿಯ ಊಳಿಗ, ಚೆಂಬಿನ ಚೀಲದ ಊಳಿಗ, ಕತ್ತಿಯ ಊಳಿಗ, ಕಾಳಾಂಜಿಯ ಊಳಿಗ, ಪಡಿಗದ ಊಳಿಗ, ಕನ್ನಡಿಯ ಊಳಿಗ, ಕುಂಚದ ಊಳಿಗ, ಕೈಯಾಲುವಟ್ಟಿಗೆಯ ಊಳಿಗ, ಪಟ್ಟೇಪಾವುಡೆಯ ಊಳಿಗ, ಹಾಸಿಗೆಯ ಊಳಿಗ, ಹಾವುಗೆಯ ಊಳಿಗ, ಬಿಡಾರದ ಊಳಿಗ, ಉಭಯಚಾಮರದ ಊಳಿಗ, ಕರಗದ ಊಳಿಗ, ತೂಗುನೀರಿನ ಊಳಿಗ, ಬೀಸಣಿಗೆಯ ಊಳಿಗ, ತೆರೆಯ ಊಳಿಗ, ನೀರಿನಮನೆಯ ಊಳಿಗ, ಬಿಡಿ, ಊಳಿಗ, ಅವಸರದ ಊಳಿಗ, ರಜದ ಊಳಿಗ, ಹಿತ್ತಲುಮನೆಯ ಊಳಿಗ, ಚಾವಡೀ ಕಾವಲು ಊಳಿಗ. ರಾಜಒಡೆಯರವರು ಈ ಮೇರೆಗೆ ಊಳಿಗಗಳನ್ನು ನೇಮಿಸಿ, ಈ ಜನಗಳಿಂದ ಕೆಲಸವು ಸರಾಗವಾಗಿ ನಡೆಯುವದಕ್ಕೆ ಒಬ್ಬ ಗೊತ್ತುಗಾರನನ್ನೂ ಇಬ್ಬರು ಕರಣೀಕರನ್ನೂ ನೇಮಕಮಾಡಿ, ಅವರವರ ವಿಧವರಿತು ಸಂಬಳವನ್ನು ನೇಮಕಮಾಡಿಸಿದರು.

ಮಲ್ಲರಾಜಯ್ಯನಿಗೆ ದಳವಾಯಿತನವನ್ನು ನೇಮಿಸಿದ್ದು.—ಧೊರೆಯವರು ತಮ್ಮ ಸಾಮಾಜಿಕರನ್ನು ಕುರಿತು "ಇನ್ನೂ ಅಧಿಕವಾಗಿ ರಾಜ್ಯಗಳನ್ನು ಕಟ್ಟಬೇಕಾದರೆ, ಈಗ ನಮ್ಮಲ್ಲಿರುವ ಸೇನೆಗಳು ಸಾಲವು; ಇನ್ನೂ ಹೆಚ್ಚಾಗಿ ಸೇನೆಗಳನ್ನು ಕಟ್ಟಿದರೆ, ಅವುಗಳ ವಿಚಾರಣೆಗೆ ಒಬ್ಬ ದಳಪತಿಯನ್ನು ನೇಮಕ ಮಾಡಬೇಕು. ನಮ್ಮ ಪೂರ್ವಿಕರಾದ ಯದುರಾಯರ ಮೊದಲಿನ ದಿನದ ದಳವಾಯಿತನವನ್ನು ಮಾಡುತ್ತಿದ್ದ ಮಾರ

ನಾಯಕನು ದುಷ್ಟತನ ಮಾಡುವದಕ್ಕೆ ಉದ್ಯುಕ್ತನಾದ್ದರಿಂದ, ಯದುರಾಯರು ಅವನನ್ನು ಸಂಹರಿಸಿ ತಾವು ಪಟ್ಟಾಭಿಷಿಕ್ತರಾದರು. ಅದು ಮೊದಲುಗೊಂಡು ಪೂರ್ವಿಕರು ಒಬ್ಬರೂ ದಳವಾಯಿತನ ನೇಮಕ ಮಾಡಲಿಲ್ಲ. ನಮ್ಮ ಸೋದರಅಳಿಯನಾದ ಕಳಲೇ ಕರಿಕಾಲು ಮಲ್ಲರಾಜಯ್ಯನೆಂಬವನು ಬುದ್ಧಿವಂತನಾಗಿ ಇದ್ದಾನೆ. ಈಗ ನಾವು ಒಬ್ಬ ದಳಪತಿಯನ್ನು ನೇಮಕ ಮಾಡಬೇಕಾದರೆ, ಅವನನ್ನು ಕರೆಯಿಸಿ ನೇಮಕಮಾಡಬೇಕು." ಎಂದು ಅವರೊಡನೆ ಆಲೋಚಿಸಿ, ಆ ಕರಿಕಾಲು ಮಲ್ಲರಾಜಯ್ಯನನ್ನು ಕರೆಯಿಸಿ, ಉಂಗುರವನ್ನು ಕೊಟ್ಟು ನೇಮಕಮಾಡಿದರು.

ಆಬಳಿಕ ಕರಿಕಾಲು ಮಲ್ಲರಾಜಯ್ಯನು ದಳವಾಯಿತನವನ್ನು ತಾನು ಒಪ್ಪಿಕೊಂಡು, ತನಗೆ ಪ್ರಭುವಳಿತವಾಗಿಕೊಟ್ಟಿರುವ ಕಳಲೆಗೆ ಹೋಗಿ ಬರುತ್ತೇನೆಂದು ಹೇಳಿ ಹೋಗಿ, ಬಹುದಿನಗಳವರಿಗೂ ಬರದೆ, ತನ್ನ ಮಾವನ ಮನೆಯಾದ ಯಳಂದೂರಿಗೆ ಹೋಗಿ, ತನ್ನ ಮೊಮ್ಮಗನಾದ ನಂದಿನಾಥಯ್ಯನೆಂಬ ಹುಡುಗನ ಸಂಗಡ ಆ ದಳವಾಯಿತನದ ಉಂಗುರವನ್ನು ಕೊಟ್ಟು ಕಳುಹಿಸಿದನು. ರಾಜಒಡೆಯರವರು, ಮಾಡಿಸಿಕೊಂಡ ಉಪಕಾರವನ್ನು ಮರೆತು ಇವನು ತನ್ನ ಕುಲಶೀಲಪದ್ಧತಿಯನ್ನೇ ಅನುಸರಿಸಿದನೆಂದು ತಮ್ಮ ಸಾಮಾಜಿಕರೊಡನೆ ಅವನ ದುಸ್ಸ್ವಭಾವವನ್ನು ಕುರಿತು ಇಂತೆಂದರು:—

ಈ ಮಲ್ಲರಾಜಯ್ಯನ ತಂದೆಯಾದ ತಿಮ್ಮರಾಜಯ್ಯನು ನಮಗೆ ಭಾವನಾದಕಾರಣ, ನಾವು ಎಲ್ಲರನ್ನೂ ಜಯಿಸಿ, ರಾಜ್ಯಗಳನ್ನು ಕಟ್ಟಿಕೊಂಡು, ಕಳಲೆಯನ್ನು ಮಾತ್ರ ಅವನಿಗೆ ಪ್ರಭುವಳಿತವಾಗಿ ಕೊಟ್ಟು ಇದ್ದೆವು. ಆ ತಿಮ್ಮರಾಜಯ್ಯನು ತೀರಿಹೋದಬಳಿಕ ಅವನ ಹಿರೀಹೆಂಡತಿಯ ಮಗ ಲಕ್ಷ್ಮೀಕಾಂತಯ್ಯನೆಂಬವನು ಆ ಗ್ರಾಮವನ್ನು ತಾನು ಅನುಭವಿಸುತ್ತಾ ತನ್ನ ಭಿನ್ನೋದರರಾದ ತಮ್ಮಂದಿರನ್ನು ರಕ್ಷಿಸುತ್ತಿದ್ದನು. ಆ ಸಮಯದಲ್ಲಿ ಲಕ್ಷ್ಮೀಕಾಂತಯ್ಯನ ಬಲತಾಯಿ ತಗಡೂರು ಚನ್ನಾಜಮ್ಮಯ್ಯನ ಪುತ್ರರಾದ ನಂದಿನಾಥಯ್ಯ ಕಾಂತಯ್ಯ ಚಂದ್ರಶೇಖರಯ್ಯರೆಂಬ ಮೂರುಮಂದಿಯೂ ತಾವು ಈ ಗ್ರಾಮವನ್ನು ಅನುಭವಿಸಬೇಕೆಂದು, ಆ ಲಕ್ಷ್ಮೀ

ಕಾಂತಯ್ಯನನ್ನು ಕೊಂದು, ನಮ್ಮ ಅಕ್ಕಂದಿರು ದೇವಾಜಮ್ಮಣ್ಣಿಯವರ ಪುತ್ರನಾದ ೫ ವರ್ಷದ ಮಲ್ಲರಾಜಯ್ಯನನ್ನು ಕೊಲ್ಲಬೇಕೆಂದು ಅವನನ್ನು ಹುಡುಕುತ್ತಿದ್ದರು. ಆಕಾಲದಲ್ಲಿ ಈ ಬಾಲಕನು ಕುರುಬಗೇರಿಗೆ ಓಡಿಹೋಗಲು, ಅಲ್ಲಿ ಕುರುಬರಪುಟ್ಟನಕರಿಯ ಎಂಬವನು, ಈಬಾಲಕನು ನಮ್ಮ ಸೋದರ ಅಳಿಯನೆಂದು ತಿಳಿದು, ರಾತ್ರಿವೇಳೆಯಲ್ಲಿ ಅವನನ್ನು ಕರೆತಂದು ಬಿಟ್ಟನು. ಅನಂತರ ನಾವು ಈ ಮಲ್ಲರಾಜಯ್ಯನಿಗೆ ಬಾಲ್ಯಪ್ರಭೃತಿ ವಿದ್ಯಾಬುದ್ಧಿಗಳನ್ನು ಕಲಿಸಿ, ವಿವಾಹೋಪನಯನಗಳನ್ನು ಮಾಡಿ, ಇವನ ಭಿನ್ನೋದರರಾದ ಅಣ್ಣಂದಿರನ್ನು ಓಡಿಸಿಬಿಟ್ಟು, ಅವರು ಆಕ್ರಮಿಸಿಕೊಂಡಿದ್ದ ಕಳಲೆಯನ್ನು ಇವನ ಸ್ವಾಧೀನಮಾಡಿ ಇದ್ದೇವೆ. ಲಕ್ಷ್ಮೀಕಾಂತಯ್ಯನ ಪತ್ನಿಯಾದ ಲಿಂಗಾಜಮ್ಮಯ್ಯನೆಂಬವಳು ಸಹಗಮನ ಮಾಡುವ ಕಾಲದಲ್ಲಿ " ನನ್ನ ಗಂಡನನ್ನು ಅನ್ಯಾಯದಿಂದ ವಧಿಸಿದ ಬಲಅತ್ತೇಮಕ್ಕಳು ಮೂವರ ವಂಶವೂ ನಷ್ಟವಾಗಲಿ; ಕಳಲೇ ಅರಸುಗಳು ಕೂಡ್ಲಾಪುರದ ಬತ್ತದ ಅಕ್ಕಿಯ ಅನ್ನವನ್ನೇ ವಿಶ್ವಾಸನಾಗಿ ಊಟ ಮಾಡುವದರಿಂದ ಆ ಅನ್ನವು ರಕ್ತದ ಕೂಳನಂತೆ ಆಗಲಿ; ನನ್ನ ಬಾಳು ತಪ್ಪಿಸಿದ ನನ್ನ ಗಂಡನ ವಂಶದ ಹೆಣ್ಣುಮಕ್ಕಳು ಚೆನ್ನಾಗಿ ಬಾಳದೆ ಇರಲಿ." ಎಂದು ಮೂರು ಶಾಪಗಳನ್ನು ಕೊಟ್ಟು, "ಧರ್ಮಾತ್ಮರಾದ ಮಹೀಶೂರ ಮನೆತನದಲ್ಲಿ ಹುಟ್ಟಿದ ನಮ್ಮ ಬಲಅತ್ತೆಯರಾದ ದೇವಾಜಮ್ಮಣ್ಣಿಯವರ ಪುತ್ರನ ವಂಶವು ನಡೆಯಲಿ" ಎಂದು ನುಡಿದು, ಆ ದೇವಾಜಮ್ಮಣ್ಣಿಯವರಿಗೆ ವೀಳ್ಯವನ್ನು ಕೊಟ್ಟು ಕಳುಹಿಸಿ, ತಾನು ಸಹಗಮನವನ್ನು ಮಾಡಿದಳು. ಆ ಲಿಂಗಾಜಮ್ಮಣ್ಣಿಯು ಕಳಲೇವಂಶಕ್ಕೆ ಪ್ರತಿಬಂಧರೂಪವಾಗಿ ಇದ್ದಾಳೆ. ಇಂಥಾ ದುಷ್ಟವಂಶದಲ್ಲಿ ಹುಟ್ಟಿದ ಈ ಮಲ್ಲರಾಜಯ್ಯನಿಗೆ ಇಂಥಾ ದುರ್ಬುದ್ಧಿಯೂ ಮಾಡಿದ ಉಪಕಾರವನ್ನು ಮರೆಯುವದೂ ಸ್ವಭಾವವೇ ಸರಿ.

ಇಂತೆಂದು ರಾಜಒಡೆಯರವರು ಮಲ್ಲರಾಜಯ್ಯನ ದುಸ್ಸ್ವಭಾವವನ್ನು ತಮ್ಮ ಸಾಮಾಜಿಕರೊಡನೆ ಹೇಳಿ, ತಮ್ಮಲ್ಲಿ ಬಾಲ್ಯದಿಂದ ವಿದ್ಯಾಬುದ್ಧಿಗಳನ್ನು ಕಲಿತು ಶೂರರಾದ ಬೆಟ್ಟದ ಚಾಮರಾಜಒಡೆಯರೆಂಬ ತಮ್ಮ ಅಣ್ಣಂದಿರ ಮಕ್ಕಳಾದ ಬೆಟ್ಟದರಸು ಎಂಬವರನ್ನು ಕರೆಯಿಸಿ, ನಳಸಂವ

ತ್ಸರದ ಮಾಘಶುದ್ಧ ಪಂಚಮಿಯಲ್ಲಿ ಅವರಿಗೆ ದಳವಾಯಿತನವನ್ನು ನೇಮಕ ಮಾಡಿದರು. ಅನಂತರದಲ್ಲಿ ಆ ಬೆಟ್ಟದ ಅರಸಿನವರು ಸೇನೆಯನ್ನು ತೆಗೆದು ಕೊಂಡು ಹೋಗಿ, ಪೆರಿಪಟ್ಟಣದ ನಂಜುಂಡಅರಸಿನಕಡೇ ಜನಗಳನ್ನು ಹೊಡೆ ಬಂದು, ಪೂರ್ವದಲ್ಲಿ ಬರೆದಿರುವ ಮಾವತ್ತೂರನ್ನು ಸಾಧಿಸಿಕೊಂಡುದರು. ಈ ವರ್ತಮಾನವನ್ನು ರಾಜಒಡೆಯರವರು ಕೇಳಿ ಸಂತೋಷಪಟ್ಟರು.

ರಾಜಒಡೆಯರವರು ತಾವು ಸಾಧಿಸಿದ ರಾಜ್ಯಗಳ ಪಾಳ್ಯಗಾರರಲ್ಲಿ ತುಂಟತನವನ್ನು ಮಾಡಿದವರನ್ನು ಚೆನ್ನಾಗಿ ಶಿಕ್ಷೆಮಾಡುತ್ತಾ, ಜಾಗರೂಕರಾಗಿ ಸೀಮೆಗಳ ವರ್ತಮಾನವನ್ನು ಪದೇಪದೇ ತರಿಸಿಕೊಳ್ಳುತ್ತಾ, ಬಹಳ ದ್ರವ್ಯವನ್ನು ಸಂಪಾದಿಸಿ ಅದಕ್ಕೆ ತಕ್ಕ ವೆಚ್ಚವನ್ನು ಮಾಡುತ್ತಾ, ಕೆಲವು ದ್ರವ್ಯವನ್ನು ಬೊಕ್ಕಸದಲ್ಲಿ ಇರಿಸಿ, ರಾಜನೀತಿಯನ್ನು ಅನುಸರಿಸಿ ದುಷ್ಟನಿಗ್ರಹ ಶಿಷ್ಟಪರಿಪಾಲನೆಯನ್ನು ಮಾಡುತ್ತಾ, ರಾಜಒಡೆಯರವರಿಗೆ ಸಮಾನರಿಲ್ಲವೆಂದು ಹೊಗಳಿಸಿಕೊಳ್ಳುತ್ತಾ ರಾಜ್ಯವನ್ನು ಆಳುತ್ತಿದ್ದರು.

ಹೀಗಿರುವಲ್ಲಿ ರಾಜಒಡೆಯರವರು, ದೇಹಕ್ಕೆ ಆಯಾಸವಾಗಲು, ಇನ್ನು ತಮ್ಮ ದೇಹ ನಿಲ್ಲುವದಿಲ್ಲವೆಂದು ತಿಳಿದು, ತಮ್ಮ ಪತ್ನಿಯರಾದ ವೀರಾಜಮ್ಮಣ್ಣಿಯವರನ್ನೂ ದಳವಾಯಿ ಬೆಟ್ಟದ ಅರಸಿನವರನ್ನೂ ಕರೆದು ಅವರೊಡನೆ ಹೇಳಿದ್ದೇನೆಂದರೆ:—

ನಮ್ಮ ಪುತ್ರರಾದ ನರಸರಾಜಒಡೆಯರವರು, ಬೆಟ್ಟಒಡೆಯರವರು, ನಂಜರಾಜಒಡೆಯರವರು, ಇವರು ಮೂರುಮಂದಿಯೂ, ನಮ್ಮ ಜೀವಿತ ಕಾಲದಲ್ಲಿಯೇ ತೀರಿಹೋದರು. ನರಸರಾಜಒಡೆಯರವರ ಮೂವರು ಪತ್ನಿಯರಲ್ಲಿ (ಅರಿಕುಠಾರದ ಚಂದ್ರಶೇಖರರಾಜಯ್ಯನವರ ಮಗಳು ಹೊನ್ನಾಜಮ್ಮಣ್ಣಿ, ತೊರವಳ್ಳಿ ಚಿಕ್ಕಕೆಂಪರಾಜಯ್ಯನವರ ಮಗಳು ಚನ್ನಾಜಮ್ಮಣ್ಣಿ, ಮುಳ್ಳೂರು ರಾಜಶೇಖರಯ್ಯನ ಮಗಳು ಮುದ್ದಾಜಮ್ಮಣ್ಣಿ,) ಹೊನ್ನಾಜಮ್ಮಣ್ಣಿಗೆ ಪೌತ್ರ ಚಾಮರಾಜಒಡೆಯರೆಂಬ ಒಬ್ಬ ಪುತ್ರನು ಇರುತ್ತಾನೆ; ಮಿಕ್ಕ ಇಬ್ಬರಿಗೂ ಮಕ್ಕಳಿಲ್ಲ. ಇದೇರೀತಿಯಲ್ಲಿ ಬೆಟ್ಟಒಡೆಯರ ಹೆಂಡತಿ ಕೊತ್ತಾಗಾಲದ ಲಿಂಗರಾಜಯ್ಯನ ತಂಗಿ ಚೆಲುವಾಜಮ್ಮಣ್ಣಿಗೂ, ನಂಜರಾಜಒಡೆಯರವರ ಹೆಂಡತಿ ಹೊಸಕೋಟೇ ವೆಂಕಟರಾಜ

ಯ್ಯನ ಮಗಳು ನಂಜಮ್ಮಣ್ಣಿಗೂ ಮಕ್ಕಳಿಲ್ಲ. ನಮ್ಮ ನಾಲ್ಕನೇ ಪತ್ನಿಯ ಪುತ್ರನಾದ ಚಾಮರಾಜಒಡೆಯರು ಎಂಬವನು ಬಾಲ್ಯದಲ್ಲಿಯೇ ತೀರಿಹೋದನು. ನಮ್ಮ ಪುತ್ರಿ ಅಕ್ಕಾ ಅಯಮ್ಮಣ್ಣಿಯು ಇದ್ದಾಳೆ. ನಮ್ಮ ಕಿರೀಹೆಂಡತಿಯಾದ ಯಡವನಹಳ್ಳೀ ತಿಮ್ಮಾಜಮ್ಮಣ್ಣಿಯು ಗರ್ಭಿಣಿಯಾಗಿ ಇದ್ದಾಳೆ. ಇವರೆಲ್ಲರನ್ನೂ ನೀವು ಚೆನ್ನಾಗಿ ಸಂರಕ್ಷಣೆ ಮಾಡಿಕೊಂಡು ಬರುವದು.

ಈರೀತಿಯಲ್ಲಿ ಅಪ್ಪಣೆ ಕೊಟ್ಟಮೇಲೆ, ರಾಜಒಡೆಯರವರು, ತಮ್ಮ ಸಾಮಾಜಿಕರನ್ನು ಕರೆಯಿಸಿ, ದಳವಾಯಿ ಬೆಟ್ಟದರಸಿನವರು ಮೊದಲಾದವರೊಡನೆ ಹೇಳಿದ್ದೇನಂದರೆ:—ನಮ್ಮ ಹಿರೀಕುಮಾರರಾದ ನರಸರಾಜಒಡೆಯರವರ ಪುತ್ರ, ಚಾಮರಾಜಒಡೆಯರಿಗೆ, ನಾವು ಚೌಲೋಪನಯನವನ್ನೂ ಎರಡು ವಿವಾಹಗಳನ್ನೂ ಮಾಡಿ ಸ್ವಲ್ಪಮಟ್ಟಿಗೆ ವಿದ್ಯಾಬುದ್ಧಿಗಳನ್ನು ಕಲಿಸಿ ಇರುತ್ತೇವೆ. ಅವನಿಗೆ ಇನ್ನೂ ಚೆನ್ನಾಗಿ ವಿದ್ಯಾಬುದ್ಧಿಗಳನ್ನು ಕಲಿಸಿ, ಈ ಸಂಸ್ಥಾನಕ್ಕೆ ಪಟ್ಟಾಭಿಷೇಕಮಾಡಿ, ನೀವೆಲ್ಲರೂ ಅವನ ಆಜ್ಞಾನುಸಾರವಾಗಿ ಇರುವದು. ನಮ್ಮ ಕಿರೀಹೆಂಡತಿಯು ಗರ್ಭಿಣಿಯಾಗಿ ಇದ್ದಾಳೆ. ಇವಳ ಹೊಟ್ಟೆಯಲ್ಲಿ ಗಂಡುಮಗು ಹುಟ್ಟುತ್ತಾನೆ. ಚಾಮರಾಜಒಡೆಯರ ಅನಂತರದಲ್ಲಿ ಇವನಿಗೇ ಪಟ್ಟವನ್ನು ಕಟ್ಟತಕ್ಕದ್ದು.

ಈರೀತಿಯಲ್ಲಿ ಆಜ್ಞಾಪಿಸಿ, ಶಾ. ಶಕ ೧೫೪೦ನೇ ಪಿಂಗಳಸಂವತ್ಸರದ ಜ್ಯೇಷ್ಠಬಹುಳ ತ್ರಯೋದಶಿಯಲ್ಲಿ ರಾಜಒಡೆಯರವರು ಸ್ವರ್ಗಸ್ಥರಾದರು. ಈಶ್ವರಾಂಶಸಂಭೂತರಾದ ರಾಜಒಡೆಯರವರು ನಾರಾಯಣನಿಗೂ ಪರಮೇಶ್ವರನಿಗೂ ಭೇದವಿಲ್ಲವೆಂದು ತೋರಿಸುವದಕ್ಕೋಸ್ಕರ ಶ್ವೇತ ತುರಂಗಾರೂಢರಾಗಿ ಮೇಲುಗೋಟೆಯಲ್ಲಿ ನಾರಾಯಣಸ್ವಾಮಿಯ ಮಂಗಳಾರ್ತಿಕಾಲದಲ್ಲಿ ಬಂದು ಸ್ವಾಮಿಯಲ್ಲಿಯೇ ಐಕ್ಯವಾದಂತೆ ಸರ್ವಜನರೂ ಕಂಡು ಆಶ್ಚರ್ಯಪಟ್ಟರೆಂತಲೂ, ಅಷ್ಟರಲ್ಲಿಯೇ ಶ್ರೀರಂಗಪಟ್ಟಣದಿಂದ ರಾಜಒಡೆಯರವರು ಸ್ವರ್ಗಸ್ಥರಾದ್ದರಿಂದ ದೇವಸ್ಥಾನದ ಮರ್ಯಾದೆ ಬರಬೇಕೆಂದು ಸಮಾಚಾರ ಬಂತೆಂತಲೂ ಇತಿಹಾಸವಿದೆ. ಇವರಿಗೆ ಪರಲೋಕಕೃತ್ಯವನ್ನು ಪೌತ್ರ ಕರ್ತವ್ಯದಿಂದ ದೇವಮ್ಮನಹಳ್ಳೀ ನಂಜರಾಜಯ್ಯನು ಮಾಡಿದನು.

೫ನೇ ಅಧ್ಯಾಯ.

---

೧೦. ಚಾಮರಾಜಒಡೆಯರವರು. (ರಾಜಒಡೆಯರವರ ಮೊಮ್ಮಕ್ಕಳು.)

ಜನನ.—ಶಾಲೀವಾಹನಶಕ ೧೫೨೯ನೇ ಪರಾಭವಸಂವತ್ಸರದ ಆಷಾಢಬಹುಳ ಷಷ್ಠಿ.

ಪಟ್ಟಾಭಿಷೇಕ.— ,, ೧೫೪೦ನೇ ಪಿಂಗಳ ,, ,, ಶುದ್ಧ ದಶಮಿ.

ಪತ್ನಿಯರು.—ಆನಂದಸಂವತ್ಸರದ ಜ್ಯೇಷ್ಠ ಶುದ್ಧ ದಶಮಿಯಲ್ಲಿ ರಾಜಒಡೆಯರವರು ಇದ್ದಾಗ ಮಾಡಿಸಿದವುಗಳು.—(೧) ಯಳಂದೂರು ಕೆಂಪರಾಜಯ್ಯನವರ ಮಕ್ಕಳು ಮುದ್ದಾಜಮ್ಮಣ್ಣಿಯವರು, (೨) ಬಿಳುಗುಲಿ ಬಲ್ಲಪ್ಪರಾಜಯ್ಯನವರ ಮಕ್ಕಳು ದೇವೀರಮ್ಮಣ್ಣಿಯವರು.

ಪಟ್ಟವಾದಮೇಲೆ ಮಾಡಿಕೊಂಡವುಗಳು.— (೩) ರುಧಿರೋದ್ಗಾರಿ ಸಂವತ್ಸರದ ಮಾಘಶುದ್ಧ ಪಂಚಮಿಯಲ್ಲಿ ಅರ್ಕವಿವಾಹಪುರಸ್ಸರವಾಗಿ ಮೂಗೂರು ಅರಿಯ ಸೋಮರಾಜಯ್ಯನವರ ಮಕ್ಕಳು ಸಿದ್ಧಾಜಮ್ಮಣ್ಣಿಯವರು, (೪) ರಕ್ತಾಕ್ಷಿಸಂವತ್ಸರದ ಜ್ಯೇಷ್ಠ ಶುದ್ಧ ಚತುರ್ದಶಿಯಲ್ಲಿ ಮೂಡಣಕೋಟೆ ದಣಾಯಕ ಚನ್ನರಾಜಯ್ಯನವರ ಮಕ್ಕಳು ದೊಡ್ಡಾಜಮ್ಮಣ್ಣಿಯವರು (ಚನ್ನಾಜಮ್ಮಣ್ಣಿಯವರು), (೫) ಶಿಂಘುವಳ್ಳೀ ಚನ್ನರಾಜಯ್ಯನವರ ಮಕ್ಕಳು ದೊಡ್ಡಾಜಮ್ಮಣ್ಣಿಯವರು.

ಇಮ್ಮಡಿರಾಜಒಡೆಯರವರ ಜನನ.—ಪಿಂಗಳಸಂವತ್ಸರದ ಮಾರ್ಗಶಿರಬಹುಳ ಪಂಚಮಿಯಲ್ಲಿ ರಾಜಒಡೆಯರವರ ೫ನೇ ಧರ್ಮಪತ್ನಿಯರಾದ ಯಡವನಹಳ್ಳೀ ತಿಮ್ಮಾಜಮ್ಮಣ್ಣಿಯವರ ಗರ್ಭಸುಧಾಂಬುಧಿಯಲ್ಲಿ ಒಬ್ಬ ಪುತ್ರರು ಜನಿಸಿದರು. ಆಗ ಈ ಚಾಮರಾಜಒಡೆಯರವರು ತೆರಕಣಾಂಬಿಯಲ್ಲಿರುವ ತಮ್ಮ ಚಿಕ್ಕಪ್ಪಾಜಿಯವರಾದ ಬೆಟ್ಟದ ಚಾಮರಾಜಒಡೆಯರವರ ಬಳಿಗೆ ಈ ಜನನಪತ್ರಿಕೆಯನ್ನು ಬರೆಯಿಸಿ ಕಳುಹಿಸಿ, ಅವರನ್ನು ಸಕುಟುಂಬವಾಗಿ ಕರೆಯಿಸಿ, ತಮ್ಮ ಭಿನ್ನೋದರರಾದ ಚಿಕ್ಕಪ್ಪಾಜಿಯವರಿಗೆ ಇಮ್ಮಡಿರಾಜಒಡೆಯರೆಂಬದಾಗಿ ಜಾತಕರ್ಮನಾಮಕರಣಗಳನ್ನು ಮಾಡಿಸಿದರು.

ದೇಶಗಳನ್ನು ಕಟ್ಟಿದ್ದು.

ಶಾ. ಶಕ ೧೫೪೨ನೇ ಸಿದ್ಧಾರ್ಥಿಸಂವತ್ಸರದ ಕಾರ್ತೀಕಬಹುಳ ೧೪ಲ್ಲಿ ಪೂರ್ವದಲ್ಲಿ ತಲಕಾಡು ನಂಜರಾಜಯ್ಯನವರು ತಿಕ್ಕಣ್ಣನಿಗೆ ಮುಖಾಸಿಯಾಗಿ ಕೊಟ್ಟಿದ್ದ ಬಗ್ಯೆ ಇವನಿಂದ ಕಟ್ಟಿಕೊಂಡದ್ದು ಮದ್ದೂರು.

ಶಾ. ಶಕ ೧೫೪೧ನೇ ಸಿದ್ಧಾರ್ಥಿಸಂವತ್ಸರದ ಮಾರ್ಗಶಿರ ಶುದ್ಧ ೧ದಲ್ಲಿ ತಲಕಾಡು ಹವಾಲು ಸೀಮೆಯನ್ನು ಚೆನ್ನೋಜೊನ್ನಿಯ ಕೈಯಿಂದ ವಿಶ್ವಣ್ಣ ಕಟ್ಟಿಕೊಂಡಿದ್ದ ಬಗ್ಗೆ ಇವನಿಂದ ಸಾಧಿಸಿದ್ದು ಕೆರಗೋಡು.

೧೫೪೪ನೇ ಪ್ರಮೋದೂತ ಸಂವತ್ಸರದ ಕಾರ್ತೀಕ ಶುದ್ಧ ೧ಲ್ಲಿ ಜಗದೇರಾಯನಿಂದ ಚೆನ್ನಪಟ್ಟಣ.

,, ,, ,, ಶುದ್ಧ ೩ಲ್ಲಿ ಜಗದೇರಾಯನಿಂದ ಕಾನಕಾನಹಳ್ಳಿ.

೧೫೪೫ನೇ ಪ್ರಜೋತ್ಪತ್ತಿ ಸಂವತ್ಸರದ ಮಾರ್ಗಶಿರ ಶುದ್ಧ ೩ಲ್ಲಿ ಜಗದೇರಾಯನಿಂದ ನಾಗಮಂಗಲ.

೧೫೪೫ನೇ ರುಧಿರೋದ್ಗಾರಿ ಸಂವತ್ಸರದ ವೈಶಾಖ ಬಹುಳ ೯ಲ್ಲಿ ಜಗದೇರಾಯನಿಂದ ಮಳವಳ್ಳಿ.

,, ,, ,, ಪುಷ್ಯಬಹುಳ ೨ಲ್ಲಿ ಚೆನ್ನರಾಜನಾಯಕನ ಮಗ ಬಾಳೋಜಿನಾಯಕನಿಂದ ಸಾಧಿಸಿದ್ದು ಅರಿಕುಠಾರ.

೧೫೪೬ನೇ ರಕ್ತಾಕ್ಷಿ ಸಂವತ್ಸರದ ವೈಶಾಖಶುದ್ಧ ೫ಲ್ಲಿ ಜಗದೇರಾಯನಿಂದ ಬೂಕನಕೆರೆ ಮತ್ತು ಸಿಂಧುಘಟ್ಟ.

೧೫೪೮ನೇ ಅಕ್ಷಯ ಸಂವತ್ಸರದ ಚೈತ್ರಶುದ್ಧ ೧ಲ್ಲಿ ಹದಿನಾಡು ನಂಜರಾಜಯ್ಯನಿಂದ ಕಟ್ಟಿಕೊಂಡವುಗಳು ಹೊಂಗನೂರು ಮತ್ತು ಅಮಚವಾಡಿ.

,, ,, ,, ಆಷಾಢಬಹುಳ ೩ಲ್ಲಿ ನಂಜುಂಡಅರಸಿನಿಂದ ಹಾಡ್ಯ.

,, ,, ,, ಶ್ರಾವಣಶುದ್ಧ ೧೦ಲ್ಲಿ ಪ್ರಭುದೇವರಿಂದ ಸಾಧಿಸಿದ್ದು ತಗಡೂರು.

,, ,, ,, ೧೫ಲ್ಲಿ ಲಿಂಗರಾಜಯ್ಯನಿಂದ ಕೊತ್ತಾಗಾಲ.

,, ,, ,, ಪುಷ್ಯಶುದ್ಧ ೧೦ಲ್ಲಿ ಕೋಟೇ ಚೆನ್ನರಾಜಯ್ಯನಿಂದ ಕಟ್ಟಿಕೊಂಡದ್ದು ಜಾಡಲೆ.

೧೫೫೩ನೇ ಪ್ರಜೋತ್ಪತ್ತಿ ಸಂವತ್ಸರದ ಚೈತ್ರಶುದ್ಧ ೩ಲ್ಲಿ ಪರಮ ರಾವುತನಿಂದ ಸಾಧಿಸಿದ್ದು ಬೆಳ್ಳೂರು.

೧೫೫೫ನೇ ಶ್ರೀಮುಖ ಸಂವತ್ಸರದ ಫಾಲ್ಗುಣ ಶುದ್ಧ ೩ಲ್ಲಿ ವೆಂಕಟಪ್ಪನಾಯಕನಿಂದ *ಚೆನ್ನರಾಯಪಟ್ಟಣ.

* ಪೂರ್ವದಲ್ಲಿ ಇದಕ್ಕೆ ಕೊಳತೂರು ಎಂದು ಹೆಸರು. ಇದು ಮಟ್ಟಗಿರಿ ಹೆಪ್ಪೂರವನ ವಶದಲ್ಲಿತ್ತು. ಇದನ್ನು ನರಸೀಪುರದ ಲಕ್ಷ್ಮಪ್ಪನಾಯಕನು ಕಟ್ಟಿಕೊಂಡು ತನ್ನ ಮಗ ಚೆನ್ನರಾಯನಿಗೆ ಉಂಬಳಿಯಾಗಿ ಕೊಟ್ಟನು. ಆ ಚೆನ್ನರಾಯನು ಅದಕ್ಕೆ ಕೋಟೆಯನ್ನು ಕಟ್ಟಿಸಿ ಚೆನ್ನರಾಯಪಟ್ಟಣವೆಂಬ ಹೆಸರನ್ನಿಟ್ಟು, ಬೇಲೂರು ವೆಂಕಟಪ್ಪನಾಯಕನಿಗೆ ಕೊಟ್ಟು ತಾನು ನರಸೀಪುರದಲ್ಲಿ ಇದ್ದನು.

ನಾಗಮಂಗಲವನ್ನು ಸಾಧಿಸಿದವಿವರ.—ನಾಗಮಂಗಲದ * ಜಗದೇರಾಯನು ಚಿಕ್ಕನಾಯಕನ ಹಳ್ಳಿಯನ್ನು ಸಾಧಿಸುವದಕ್ಕೆ ತನಗೆ ಸಹಾಯವಾಗಿ ಬರಬೇಕೆಂದು ಮಹೀಶೂರ ಸಂಸ್ಥಾನದ ಧೊರೆಗಳಾದ ಚಾಮರಾಜ ಒಡೆಯರವರ ಬಳಿಗೆ ರಾಮಲಿಂಗನೆಂಬ ಒಂದು ಮದಿಸಿದ ಆನೆಯನ್ನೂ ಮೂರುಸಾವಿರ ವರಹಗಳನ್ನೂ ಕೊಟ್ಟು ಕಳ್ಳುಹಿಸಿದನು. ದಳವಾಯಿ ಬೆಟ್ಟದ ಅರಸಿನವರು ಅವುಗಳನ್ನು ಧೊರೆಗಳವರ ಸನ್ನಿಧಿಗೆ ತೆಗೆಯಿಸಿಕೊಂಡು ಬಂದು ಈ ವೃತ್ತಾಂತವನ್ನೆಲ್ಲಾ ಬಿನ್ನವಿಸಲು, ಧೊರೆಗಳವರು ಆ ನಾಗಮಂಗಲವನ್ನು ತಾವೇ ಸಾಧಿಸಬೇಕೆಂದು ಯೋಚಿಸಿ, ಆ ಆನೆಯನ್ನೂ ಮೂರುಸಾವಿರ ವರಹಗಳನ್ನೂ ಹಿಂದಕ್ಕೆ ಕಳುಹಿಸಿ ಬಿಡುವಂತೆಯೂ, ಆ ರಾಜ್ಯವನ್ನು ಸಾಧಿಸಿಕೊಂಡು ಬರುವಂತೆಯೂ, ಅಪ್ಪಣೆ ಕೊಟ್ಟು ಕಳುಹಿಸಿದರು. ಆಗ ಬೆಟ್ಟದ ಅರಸಿನವರು ಸೇನೆಯನ್ನು ತೆಗೆದುಕೊಂಡು ಹೋಗುತ್ತಿರುವಾಗ, ಮಾರ್ಗದಲ್ಲಿ ಜಗದೇರಾಯನ ಕಡೆಯವನಾದ ನಾಗಮಂಗಲದ ಚನ್ನಯ್ಯನ ಅಣ್ಣ ದೊಡ್ಡಯ್ಯನೆಂಬುವನು ಸ್ವಲ್ಪ ಸೇನೆಯನ್ನು ತೆಗೆದುಕೊಂಡು ಹಿರೀಸಾವೇಪ್ರಾಂತ್ಯದ ಹೊನ್ನೇಮಡುವೆಂಬ ಗ್ರಾಮದ ಬಳಿಯಲ್ಲಿ ಅವರನ್ನು ತಡೆದು ಯುದ್ಧಮಾಡಿದನು. ಬೆಟ್ಟದ ಅರಸಿನವರು ಅವನನ್ನು ಹೊಡೆದುಹಾಕಿ ನಾಗಮಂಗಲಕ್ಕೆ ಮುತ್ತಿಗೆ ಹಾಕಿದರು. ಆಗ ನಾಗಮಂಗಲದ ಜಗದೇರಾಯನಕಡೆ ಅಂಕುಶರಾಯನೆಂಬವನು ಸ್ವಲ್ಪ ಸೇನೆಯೊಡನೆ ಬಂದು ಬೆಟ್ಟದ ಅರಸಿನವರ ಸೈನ್ಯದಮೇಲೆ ಬಿದ್ದು ಮುತ್ತಿಗೆಯನ್ನು ತೆಗಿಸಿದನು.

ಅನಂತರದಲ್ಲಿ ಬೆಟ್ಟದ ಅರಸಿನವರು ಮತ್ತೊಂದು ದೊಡ್ಡ ಸೈನ್ಯದೊಡನೆ ಪುನಃ ಬಂದು ನಾಗಮಂಗಲವನ್ನು ತೆಗೆದುಕೊಳ್ಳಬೇಕೆಂದು ಯೋಚಿಸಿ ಹಿಂತಿರುಗಿ ಪಟ್ಟಣಕ್ಕೆ ಬರುತ್ತಿದ್ದರು. ಆಗ ಮಾರ್ಗದಲ್ಲಿ ನಾಗಮಂಗಲದಲ್ಲಿದ್ದ † ಕನ್ನಂಬಾಡಿ ಗೋಪಾಲರಾಜಯ್ಯನು ಸೈನ್ಯದೊಡನೆ ಬಂದು ಇವರ ಸೈನ್ಯದಮೇಲೆ ಬಿದ್ದನು. ಬೆಟ್ಟದ ಅರಸಿನವರು ಹೊನ್ನೇಮಡುವೆಂಬ

† ಇವನು ಕನ್ನಂಬಾಡಿಯನ್ನು ತನ್ನ ಕಡೇ ಹೆಬ್ಬಾರವನ ಸ್ವಾಧೀನಮಾಡಿ ತನ್ನ ಹೆಂಡತಿ ಮಕ್ಕಳೊಡನೆ ನಾಗಮಂಗಲದಲ್ಲಿ ಇದ್ದನು.

ಗ್ರಾಮದ ಬಳಿಯಲ್ಲಿ ನಿಂತು, ಶ್ರೀರಂಗಪಟ್ಟಣದಿಂದ ಸೈನ್ಯವನ್ನು ತರಿಸಿ ಅವನ ದಂಡಿಗೆ ರಸ್ತು ಬಿಡದಂತೆ ಅಡ್ಡಿಮಾಡಿಸಿ, ಗೋಪಾಲರಾಜಯ್ಯನನ್ನೂ ಅಂಕುಶರಾಯನನ್ನೂ ಯುದ್ಧದಲ್ಲಿ ಹೊಡೆದು ಓಡಿಸಿ, ಅವರಲ್ಲಿದ್ದ ಭೋಜರಾಯ ಚೊಕ್ಕಳಿಕರೆಂಬ ಎರಡು ಆನೆಗಳನ್ನೂ, ಕೆಲವು ಕುದುರೆ ಒಂಟೆ ಮೊದಲಾದವುಗಳನ್ನೂ ತೆಗೆದುಕೊಂಡು ಶ್ರೀರಂಗಪಟ್ಟಣಕ್ಕೆ ಕಳುಹಿಸಿದರು.

ಹೀಗಿರುವಲ್ಲಿ ಗೂಢಚಾರರು ಬಂದು, ಡಣಾಯಕನ ಕೋಟೇ ಪಾಳ್ಯಗಾರನಿಗೂ, ಇಜಾಪುರದ ಪಾದಷಹಾನ ಕಡೆಯ ತುರುಕರಿಗೂ, ಅವನ ಸುತ್ತುಮುತ್ತೂ ಇರುವ ಪಾಳ್ಯಗಾರರಿಗೂ, ಅವನ ಸ್ವಜನಗಳಿಗೂ, ವಿರೋಧವಿದೆ ಎಂದು ಬೆಟ್ಟದಅರಸಿನವರಿಗೆ ತಿಳಿಸಿದರು. ಅದಕ್ಕೆ ಬೆಟ್ಟದ ಅರಸಿನವರು ತಮ್ಮ ಕಡೆಯ ಮಲ್ಲರಾಜಯ್ಯನನ್ನು ಕರೆದು, ಕೆಲವು ಸೈನ್ಯವನ್ನು ಕೊಟ್ಟು, ಡಣಾಯಕನ ಕೋಟೆಗೆ ಮುತ್ತಿಗೆ ಹಾಕುವಂತೆ ಅಜ್ಞಾಪಿಸಿದರು. ಅದೇ ಪ್ರಕಾರ ಮಲ್ಲರಾಜಯ್ಯನು ಮುತ್ತಿಗೆ ಹಾಕಲು, ಆ ಪಾಳ್ಯಗಾರನು ಈವರ್ತಮಾನವನ್ನು ತನಗೆ ಆಪ್ತನಾಗಿದ್ದ ಮಧುರೇ ಪಾಳ್ಯಗಾರನ ಬಳಿಗೆ ಹೇಳಿ ಕಳುಹಿಸಿದನು. ಆ ಮಧುರೆಯ ಪಾಳ್ಯಗಾರನು ಮಹೀಶೂರ ರಾಜರ ಸೈನ್ಯವನ್ನು ಸೋಲಿಸುವದಕ್ಕೆ ತನ್ನಿಂದ ಆಗುವದಿಲ್ಲವೆಂದು ತಿಳಿದು ತನ್ನ ಕಡೆಯವನಾದ ಚಿಕ್ಕಪ್ಪಸೆಟ್ಟಿ ಎಂಬವನನ್ನು ಕಳುಹಿಸಿಕೊಟ್ಟನು. ಆ ಚಿಕ್ಕಪ್ಪಸೆಟ್ಟಿಯು ಬಂದು, ಮಲ್ಲರಾಜಯ್ಯನೊಡನೆ ಸಂಧಿಮಾಡಿ, ಮಹೀಶೂರ ಧೊರೆಗಳಿಗೆ ೧೦ ಸಾವಿರ ವರಹಗಳನ್ನು ಪೊಗದಿ ಕೊಡುವಂತೆ ಗೊತ್ತುಮಾಡಿ, ಮುತ್ತಿಗೆಯನ್ನು ತೆಗೆಯಿಸಿ ಮಧುರೆಗೆ ಹೊರಟುಹೋದನು. ಮಲ್ಲರಾಜಯ್ಯನು ೧೦ ಸಾವಿರ ವರಹ ಪೊಗದೀಹಣವನ್ನು ತೆಗೆದುಕೊಂಡು ಶ್ರೀರಂಗಪಟ್ಟಣಕ್ಕೆ ಬಂದನು. ಅನಂತರದಲ್ಲಿ ಕೆಲವು ದಿನಗಳಾದಮೇಲೆ ದಳವಾಯಿ ಬೆಟ್ಟದ ಅರಸಿನವರು ನಾಗಮಂಗಲವನ್ನು ಸಾಧಿಸಿದರು.

ಧೊರೆಗಳಿಗೂ ದಳವಾಯಿಬೆಟ್ಟದ ಅರಸಿನವರಿಗೂ ಮನಸ್ತಾಪ ಬಂದ ವಿಚಾರ.—ಧೊರೆಗಳ ಸನ್ನಿಧಿಯಲ್ಲಿ ಚಾಕರಿಮಾಡುವ ಊಳಿಗದವರು ಮೊದಲಾದವರು ಧೊರೆಗಳಿಗೆ ಬಾಲ್ಯವಾದ್ದರಿಂದ ವಿದ್ಯಾಬುದ್ಧಿಗಳನ್ನು ಕಲಿತು

ಕೊಳ್ಳುವದಕ್ಕೆ ಅವಕಾಶಕೊಡದೆ, ಆಟಪಾಟಗಳಲ್ಲಿ ಬುದ್ಧಿಯನ್ನು ಉಂಟು ಮಾಡಿ, ಸ್ತ್ರೀಲೋಲಾಪ್ತಿಯಲ್ಲಿಯೇ ಇರುವಂತೆ ಮಾಡಿದರು. ಧೊರೆಗಳಿಗೆ ಪಾಠಹೇಳುತ್ತಿದ್ದ ರಾಮಸೋಮಯಾಜಿಯ ಮಗ ರಂಗನಾಥದೀಕ್ಷಿತನೂ ಔಷಧವನ್ನು ಕೊಡುತ್ತಿದ್ದ ಜೈನರ ಬೊಮ್ಮರಸಪಂಡಿತನೂ ಇದಕ್ಕೆ ಸಹಾಯಕರಾಗಿ ಇದ್ದರು. ಇವರ ದುರ್ನಡತೆಗಳನ್ನು ನೋಡಿ, ದಳವಾಯಿ ಬೆಟ್ಟದ ಅರಸಿನವರು, ಇವರೆಲ್ಲರನ್ನೂ ಕರೆಯಿಸಿ, ನೀವು ಇನ್ನುಮೇಲೆ ನಿಮ್ಮ ಕೆಲಸಗಳನ್ನು ನೋಡಬೇಡಿರೆಂದು ಕಟ್ಟುಮಾಡಿ, ಧೊರೆಗಳ ಸನ್ನಿಧಿಗೆ ವೃದ್ಧನಾದ ಒಬ್ಬ ಗುರಿಕಾರನನ್ನೂ, ಮುದುಕರಾದ ಕೆಲವುಮಂದಿ ಊಳಿಗದವರನ್ನೂ, ಔಷಧವನ್ನು ಒಪ್ಪಿಸುವದಕ್ಕೆ ವೃದ್ಧನಾಗಿಯೂ ಹಳಬನಾಗಿಯೂ ಇರುವ ತಿರುವೆಂಗಳಯ್ಯನೆಂಬ ಒಬ್ಬ ಚಾತಾಳಿ ಪಂಡಿತನನ್ನೂ ನೇಮಕಮಾಡಿ, ಬೊಮ್ಮರಸಪಂಡಿತನಿಗೆ ಒಳಬಾಗಲಲ್ಲಿರುವ ಅವ್ವೇರುಗಳಿಗೆ ಔಷಧಕೊಡುವದೇ ಹೊರತು ಅಂತಃಪುರಕ್ಕೆ ಹೋಗಕೂಡದೆಂದು ಕಟ್ಟುಮಾಡಿದರು. ಧೊರೆಗಳು, ಬೆಟ್ಟದ ಅರಸಿನವರು ನೇಮಿಸಿದ ಜನಗಳನ್ನು ಬಿಟ್ಟು, ತಮ್ಮಲ್ಲಿ ಪೂರ್ವದಲ್ಲಿದ್ದ ಜನಗಳಿಂದಲೇ ಚಾಕರಿ ತೆಗೆದುಕೊಳ್ಳುತ್ತಿದ್ದರು. ಈ ವರ್ತಮಾನವನ್ನು ಬೆಟ್ಟದ ಅರಸಿನವರು ಕೇಳಿ, "ಇದುವರಿಗೂ ಧೊರೆಗಳು ನನ್ನ ಮಾತುಗಳನ್ನು ನಡೆಯಿಸುತ್ತಿದ್ದರು. ಈಗ ವಯಸ್ಸು ಬಂದು ಪ್ರಾಯಬದ್ಧರಾಗಿರುವದರಿಂದ, ಅದಕ್ಕೆ ತಕ್ಕ ಜನಗಳ ಮಾತುಗಳಲ್ಲಿಯೂ ನಡತೆಗಳಲ್ಲಿಯೂ ವಿಶ್ವಾಸವೇ ಹೊರತು, ನಮ್ಮಂಥಾವರಲ್ಲಿ ಇಲ್ಲ" ಎಂದು ತಮ್ಮ ಮನೇಜನರ ಸಂಗಡ ಆಡಿಕೊಳ್ಳುತ್ತಿದ್ದರು. ಈ ಮಾತುಗಳನ್ನು ಇವರ ತಮ್ಮ ದೊಡ್ಡಚಾಮಪ್ಪನೂ, ಇವರ ಮಗ ಚಿಕ್ಕಚಾಮಪ್ಪನೂ ಇಬ್ಬರೂ ಕೇಳಿ, ಮೂರನೇಜಾವದಲ್ಲಿ ಯಾರೂ ಅರಿಯದಂತೆ ಕದವಿನ ಹಿಂದುಗಡೆ ಕುಳಿತುಕೊಂಡು "ಈ ಚಾಮರಾಜ ಒಡೆಯರವರಿಗೆ ಮಾಟವನ್ನು ಮಾಡಿಸಿಯಾಗಲೀ ವಿಷವನ್ನು ಕೊಟ್ಟಾಗಲೀ ಕೊಲ್ಲಿಸಿದರೆ, ಇಮ್ಮಡಿ ರಾಜಒಡೆಯರವರಿಗೆ ಪಟ್ಟಾಭಿಷೇಕವಾಗುವದು. ಅವರಿಗೆ ಬಾಲ್ಯವಾದ್ದರಿಂದ ಸರ್ವತಂತ್ರಸ್ವತಂತ್ರವೂ ನಮ್ಮ ತಂದೆಯವರಿಗೆ ಬರುವದು. ಆಗ ಸಕಲ ಕಾರ್ಯಗಳನ್ನೂ ನಾವೇ ನೋಡಿಕೊಳ್ಳಬಹುದು"

ಎಂದು ಮಾತನಾಡಿಕೊಳ್ಳುತ್ತಿದ್ದರು. ಈ ಮಾತುಗಳನ್ನು ಧೊರೆಗಳ ಮಾತುಶ್ರೀಯವರಾದ ಹೊನ್ನಾಜಮ್ಮಣ್ಣಿಯವರ ಸನ್ನಿಧಿಯಲ್ಲಿ ಚಾಕರಿ ಮಾಡುತ್ತಿದ್ದ ಚನ್ನಮ್ಮೇರು ಕೇಳಿ, ತಮ್ಮ ಒಡತಿಯರ ಸನ್ನಿಧಾನಕ್ಕೆ ಹೋಗಿ, ಈ ವಿವರವನ್ನು ತಿಳಿಸಿದ್ದಲ್ಲದೆ, ಧೊರೆಗಳಿಗೆ ಬಾಲ್ಯದಲ್ಲಿ ಸ್ತನ್ಯವನ್ನು ಕೊಟ್ಟು ಈಗಲೂ ಆರೋಗಣೆಯನ್ನು ಮಾಡಿಸುವ ನಂಜಮ್ಮೇರೊಡನೆ ಹೇಳಿದರು. ಆ ನಂಜಮ್ಮೇರು ಇದನ್ನು ಧೊರೆಗಳಿಗೆ ತಿಳಿಸಿದರು.

ಬೆಟ್ಟದ ಅರಸಿನವರಿಗೆ ಶಿಕ್ಷೆಯಾದದ್ದು.—ಅನಂತರದಲ್ಲಿ ಧೊರೆಗಳು ತಮ್ಮ ಸಾಮಾಜಿಕರನ್ನು ಕರೆಯಿಸಿ, ಈ ವೃತ್ತಾಂತವನ್ನೆಲ್ಲಾ ಅವರೊಡನೆ ಹೇಳಿ, ನೀವು ಚೆನ್ನಾಗಿ ವಿಚಾರಣೆ ಮಾಡಿಕೊಂಡು ಬನ್ನಿ ಎಂದು ಅವರಿಗೆ ಅಜ್ಞಾಪಿಸಿದರು. ಅವರು ಅದೇಮೇರೆಗೆ ವಿಚಾರಣೆಮಾಡಿಕೊಂಡು ಬಂದು ಆ ವಿಷಯವು ಯಥಾರ್ಥವೆಂದು ಬಿನ್ನವಿಸಿದರು. ಆಗ ಬೆಟ್ಟದಅರಸಿನವರು ಈ ವೃತ್ತಾಂತವನ್ನು ತಮ್ಮ ದೊಡ್ಡ ಹೆತ್ತಪ್ಪಾಜಿಯವರಾದ ಬೆಟ್ಟದಚಾಮರಾಜ ಒಡೆಯರವರಬಳಿಗೆ ಹೇಳಿಕಳುಹಿಸಿ, ಅವರ ಪತ್ರಬಂದಂತೆ ಈ ದೊಡ್ಡಚಾಮಪ್ಪನಿಗೂ ಚಿಕ್ಕಚಾಮಪ್ಪನಿಗೂ ಪ್ರಾಣಾಂತ ಶಿಕ್ಷೆಯನ್ನು ಮಾಡಿಸಿದರು. ಬೆಟ್ಟದ ಅರಸಿನವರು ಈ ವೃತ್ತಾಂತವನ್ನು ಕೇಳಿ, ತಮ್ಮನ್ನು ಏನುಮಾಡುವರೋ ಎಂದು ಭಯಪಟ್ಟು, ಹೊರಟುಹೋಗುತ್ತಿದ್ದರು. ಇವರು ಹೊರಗೆ ಹೋದರೆ ಪಾಳ್ಯಗಾರರನ್ನು ಕಟ್ಟಿ ಆಮೇಲೆ ತಮ್ಮಮೇಲೆ ಏನು ಕಾರ್ಯಭಾಗ ಮಾಡುವರೋ ಎಂದು ಯೋಚಿಸಿ, ಧೊರೆಗಳು ಇವರನ್ನು ಕರೆಯಿಸಿ, ಕಣ್ಣಿಗೆ ಭಾಂಡ ಕರ್ಪೂರವನ್ನು ಕಟ್ಟಿಸಿ, ಕಣ್ಣುಗಳನ್ನು ಕೀಳಿಸಿ, ಮನೆಯಲ್ಲಿಯೇ ಇರುವಂತೆ ಕಟ್ಟುಮಾಡಿದರು. ಆ ಬಳಿಕ ರೌದ್ರಿ ಸಂವತ್ಸರದ ಫಾಲ್ಗುನ ಬಹುಳ ೧೩ಲ್ಲಿ ಬನ್ನೂರು ಲಿಂಗಣ್ಣನಿಗೆ ದಳವಾಯಿತನವು ನೇಮಕವಾಯಿತು. ಈ ಲಿಂಗಣ್ಣನು ಮಾಡುತ್ತಿದ್ದ ಬಳಬಾಗಲ ಗುರಿತನವು ನಂಜಮ್ಮೇರ ಮಗನಾದ ಬಸವಯ್ಯನಿಗೂ, ದುರ್ಮುಖಿ ಸಂವತ್ಸರದ ಚೈತ್ರಶುದ್ಧ ೧ ರಲ್ಲಿ ನಿಯೋಗಿತನವು ಬೊಮ್ಮರಸಯ್ಯನಿಗೂ ನೇಮಕವಾಯಿತು.

ದಳವಾಯಿ ಬನ್ನೂರು ಲಿಂಗಣ್ಣ.—ಈ ಬನ್ನೂರು ಲಿಂಗಣ್ಣನು ಅರಿಕುಠಾರವನ್ನು ಜಯಿಸಿ ತಿರುಮಕೂಡಲು ನರಸೀಪುರದ ಮಾರ್ಗವಾಗಿ ಬರು

ವಾಗ ಕಾವೇರೀಕಪಿಲಾನದಿಗಳು ಎರಡೂ ಪೂರ್ಣಪ್ರವಾಹ ಬಂದು ತಿರಮಕೂಡಲು ಎಂಬ ಗ್ರಾಮವು ಶಿಥಿಲವಾಗಿ ಇರುವದನ್ನು ನೋಡಿ, ಶ್ರೀರಂಗಪಟ್ಟಣಕ್ಕೆ ಬಂದು, ಧೊರೆಗಳಿಗೆ ಬಿನ್ನವಿಸಿ, ಅಪ್ಪಣೆಯನ್ನು ತೆಗೆದುಕೊಂಡು, ಮುಂದೆ ಹುಚ್ಚುಹೊಳೆ ಬಂದರೂ, ಈವೂರಿಗೆ ಉಪಾಧಿಬರದಂತೆ, ಈಎರಡು ನದಿಗಳಿಗೂ ಬಲವಾದ ಕಲ್ಲು ಕಟ್ಟೆಗಳನ್ನೂ, ಸಂಗಮಕ್ಕೆ ಕಾಶೀ ಕೆಲಸದ ಸೋಪಾನವನ್ನೂ, ಬ್ರಹ್ಮದೇವರು ಪ್ರತಿಷ್ಠೆ ಮಾಡಿರುವ ಅಶ್ವತ್ಥ ವೃಕ್ಷಕ್ಕೆ ಕಲ್ಲುಕಟ್ಟೆ ಮತ್ತು ಸಂಧ್ಯಾಮಂಟಪವನ್ನೂ ಸಹ ಕಟ್ಟಿಸಿದನು. ಇದಲ್ಲದೆ ಗರ್ಗೇಶ್ವರಿಯ ಗಾರ್ಗೇಶ್ವರ, ತಿರಮಕೂಡಲು ಹನುಮಂತೇಶ್ವರ, ಅಗಸ್ತ್ಯೇಶ್ವರ, ನರಸೀಪುರದಲ್ಲಿರುವ ನೃಸಿಂಹಸ್ವಾಮಿ, ಮೂಲಸ್ಥಾನೇಶ್ವರ ಮೊದಲಾದ ಈ ಪುರಗಳಲ್ಲಿರುವ ದೇವರಿಗೆ ದೇವಸ್ಥಾನಗೋಪುರಗಳನ್ನು ವಿಸ್ತಾರವಾಗಿ ಕಟ್ಟಿಸಿ, ಅಗಸ್ತ್ಯೇಶ್ವರಸ್ವಾಮಿ ದೇವಸ್ಥಾನಕ್ಕೆ ಉಭಯ ಮುಚ್ಚಳವನ್ನು ಹಾಕಿಸಿ ಜೀರ್ಣೋದ್ಧಾರಮಾಡಿ, ಈ ದೇವರಿಗೆಲ್ಲಾ ನಿತ್ಯಕಟ್ಟಲೆ ಪಡಿತರ ದೀಪಾರಾಧನೆ ರಥೋತ್ಸವ ಮೊದಲಾದ ಉತ್ಸವಗಳು ನಡೆಯುವದಕ್ಕೆ ತಸ್ತೀಕುಗಳನ್ನು ಉಂಟುಮಾಡಿ ಗ್ರಾಮ ಭೂಮಿಗಳನ್ನು ಕೊಡಿಸಿದನು. ಅನಂತರದಲ್ಲಿ ತಾನು ಅಗ್ರಹಾರವನ್ನು ಮಾಡಬೇಕೆಂದು ಧೊರೆಗಳಿಗೆ ಬಿನ್ನವಿಸಿಕೊಂಡು, ಅಲದೂರು ನವಲೂರು ಎಂಬ ಎರಡು ಗ್ರಾಮಗಳನ್ನು ಉಂಬಳಿಯಾಗಿ ತೆಗೆದುಕೊಂಡು, ನರಸೀಪುರದ ನೃಸಿಂಹಸ್ವಾಮಿ ದೇವಸ್ಥಾನದ ಹಿಂದುಗಡೆ ಕೆಲವು ಮನೆಗಳನ್ನು ಕಟ್ಟಿಸಿ, ತ್ರಿಮತಸ್ಥಬ್ರಾಹ್ಮರಿಗೂ ವೃತ್ತಿಯನ್ನು ಧಾರೆಯೆರೆದುಕೊಟ್ಟು ಶ್ರೀರಂಗಪಟ್ಟಣಕ್ಕೆ ಬಂದನು.

ಅನಂತರದಲ್ಲಿ ದಳವಾಯಿ ಬನ್ನೂರು ಲಿಂಗಣ್ಣನು ಪ್ರಮೋದೂತ ಸಂವತ್ಸರದಲ್ಲಿ ಚೆನ್ನಪಟ್ಟಣಕ್ಕೆ ಮುತ್ತಿಗೆಹಾಕಿ, ಅದನ್ನು ಸಾಧಿಸುವದಕ್ಕೆ ಘುಂಚಿತವಾಗಿಯೇ ಬಹಳ ಯುದ್ಧಮಾಡಿ, ನಾಗಮಂಗಲದ ಚೆನ್ನಯ್ಯನ ಅಣ್ಣನಾದ ಚಿಕ್ಕಯ್ಯನನ್ನು ಹೊಡೆದುಹಾಕಿದನು. ಅನಂತರದಲ್ಲಿ ಆ ನಾಗಮಂಗಲದ ಚೆನ್ನಯ್ಯನು ಲಿಂಗಣ್ಣನನ್ನು ಹೊಡೆದುಹಾಕಿದನು. ಈ ವರ್ತಮಾನವನ್ನು ಕೇಳಿ, ಧೊರೆಗಳು ಬಹಳ ಚಿಂತಾಕ್ರಾಂತರಾಗಿ, ಕ್ರೋಧನ

ಸಂವತ್ಸರದ ಪುಷ್ಯಬಹುಳ ೬ ಲ್ಲಿ ಬಸವಲಿಂಗಣ್ಣನೆಂಬುವವನಿಗೆ ದಳವಾಯಿತನವನ್ನು ನೇಮಕಮಾಡಿದರು.

ದಳವಾಯಿ ಬಸವಲಿಂಗಣ್ಣ.—ಬಸವಲಿಂಗಣ್ಣನು ಅಕ್ಷಯಸಂವತ್ಸರದ ಆಷಾಢಬಹುಳ ೭ ಲ್ಲಿ ಕೇರಿಪಟ್ಟಣವನ್ನು ಸಾಧಿಸಬೇಕೆಂದು ಹೋಗುತ್ತಾ, ಮಾರ್ಗದಲ್ಲಿ ಕಟ್ಟೇಮಳಲವಾಡೀ ಚನ್ನರಾಜಯ್ಯನೂ ಕನ್ನಂಬಾಡಿ ಗೋಪಾಲರಾಜಯ್ಯನೂ ದುರಾಲೋಚನೆಯನ್ನು ಮಾಡುತ್ತಾರೆಂಬ ವರ್ತಮಾನವನ್ನು ಕೇಳಿ, ಚನ್ನರಾಜಯ್ಯನನ್ನು ಕಟ್ಟೇಮಳಲವಾಡಿಯಿಂದ ಕರತರಿಸಿ ಕಾವಲನ್ನಿಟ್ಟು ಶ್ರೀರಂಗಪಟ್ಟಣಕ್ಕೆ ಕಳುಹಿಸಿ, ಕೇರಿಪಟ್ಟಣಕ್ಕೆ ಹೋಗಿ ಅದಕ್ಕೆ ಮುತ್ತಿಗೆ ಹಾಕಿದನು. ಆ ಕೇರಿಪಟ್ಟಣದಲ್ಲಿದ್ದ ಬೊಮ್ಮರಸಯ್ಯನು ಯುದ್ಧಮಾಡಿ ಬಸವಲಿಂಗಣ್ಣನನ್ನು ಹಿಂದಕ್ಕೆ ಕಳುಹಿಸಬೇಕೆಂದು ಇದ್ದನು. ಆಗ ಬಸವಲಿಂಗಣ್ಣನು ಶ್ರೀರಂಗಪಟ್ಟಣಕ್ಕೆ ಹೇಳಿಕಳುಹಿಸಿ, ಸಿಯೋಗಿ ಬೊಮ್ಮರಸಯ್ಯನನ್ನು ಸೈನ್ಯದೊಡನೆ ಕರೆಯಿಸಿ ಯುದ್ಧಮಾಡುತ್ತಿದ್ದನು. ಕೇರಿಪಟ್ಟಣದ ಬೊಮ್ಮರಸಯ್ಯನು ಇವರ ಸಂಗಡ ಯುದ್ಧಮಾಡಲಾರದೆ ತನ್ನ ನಂಟನಾದ ಶ್ರೀರಂಗಪಟ್ಟಣದ ಬೊಮ್ಮರಸಯ್ಯನೊಡನೆ ವರ್ಷಕ್ಕೆ ೧ ಆನೆಯನ್ನೂ ೩೦೦೦ ವರಹಗಳನ್ನೂ ಕೊಡುತ್ತೇನೆಂದು ನಿಗದಿಮಾಡಿಕೊಂಡನು.

ಅನಂತರದಲ್ಲಿ ಬಸವಲಿಂಗಣ್ಣನು ಸಿಯೋಗಿ ಬೊಮ್ಮರಸಯ್ಯನನ್ನು ಶ್ರೀರಂಗಪಟ್ಟಣಕ್ಕೆ ಕಳುಹಿಸಿ, ತಾನು ಹಾದ್ಯಕ್ಕೆ ವಳಿತವಾದ ಹನಸೋಗೆ ಸಾಲಿಗ್ರಾಮ ಮುಂತಾದ ಸೀಮೆಗಳನ್ನು ಸ್ವಾಧೀನಮಾಡಿಕೊಂಡು, ಶ್ರೀರಂಗಪಟ್ಟಣಕ್ಕೆ ಬಂದು ಧೊರೆಗಳವರಿಗೆ ಬಿನ್ನವಿಸಿದನು. ಆ ಬಳಿಕ ಇವನು ಕಾವಲಲ್ಲಿದ್ದ ಕಟ್ಟೇಮಳಲವಾಡಿ ಚನ್ನರಾಜಯ್ಯನನ್ನು ಕರೆಯಕಳುಹಿ, "ಪೂರ್ವದಲ್ಲಿ ನಮ್ಮ ಧೊರೆಗಳಾದ ರಾಜಒಡೆಯರವರು ನಿನ್ನ ತಂದೆಯಾದ ಗೋಪಾಲರಾಜಯ್ಯನ ಮೇಲೆ ಕಟಾಕ್ಷವಿಟ್ಟು ಪ್ರಭುವಳಿತವಾಗಿ ಕೊಟ್ಟ ಸೀಮೆಯನ್ನು ಅನುಭವಿಸಿಕೊಂಡು ಬರುವಂತೆ ನಿಬಂಧನೆ ಮಾಡಿದ ಉಪಕಾರವನ್ನು ಮರೆತು ತುಂಟಪಾಳ್ಯಗಾರರಾದ ಕನ್ನಂಬಾಡಿ ಗೋಪಾಲರಾಜಯ್ಯ ಜಾಡಲೆ ಸಿಂಗಪ್ಪಒಡೆಯರಿ ಮುಂತಾದ ದುಷ್ಟಜನರ ಸಂಗಡ

ನೀನು ದುರಾಲೋಚನೆ ಮಾಡಬಹುದೆ ?" ಎಂದು ಕೇಳಿದನು. ಅದಕ್ಕೆ ಆ ಚನ್ನರಾಜಯ್ಯನು ನನ್ನಿಂದ ಶತಾಪರಾಧವಾಯಿತೆಂದು ಧೊರೆಗಳಿಗೆ ಅಡ್ಡ ಬಿದ್ದು ಕ್ಷಮಾಪಣೆಯನ್ನು ಕೇಳಿಕೊಂಡನು. ಅದಕ್ಕೆ ದಳವಾಯಿ ಬಸವ ಲಿಂಗಣ್ಣನು ಧೊರೆಗಳೊಡನೆ ಆಲೋಚನೆಮಾಡಿ, ಆ ಚನ್ನರಾಜಯ್ಯನನ್ನು ಕರಿಸಿ "ನಮ್ಮ ದಂಡಿಗೆ ಈಗ ಬಹಳ ಆನೆ ಬೇಕಾಗಿದೆ. ಈಗ ಕಾರ್ಗೋಡಿ ಹಳ್ಳದ ಘಟ್ಟದ ಕೆಳಗಿರುವ ವರ್ತಕಬಾಳರಾಯ ನೆಂಬವನಿಗೆ ವರ್ಷಂಕ್ಕೆ ಕಟ್ಟೇಮಳಲವಾಡಿ ಸೀಮೆಯಲ್ಲಿ ತಮ್ಮಡ ಹಳ್ಳಿ ಎಂಬ ಗ್ರಾಮದಲ್ಲಿ ನೆಲತರ ೨॥೩ ನ್ನೂ ಕೈಸಂಬಳ ೮೦ ವರಹಗಳನ್ನೂ ಇವನ ಮುಖಾಮಿಗೆ ೧೦ ವರಹಗಳ ಭೂಮಿಯನ್ನೂ ಕೊಡುವದಲ್ಲದೆ, ಅವನು ಹೇಳಿದ ಸ್ಥಳದಲ್ಲಿ ೩೦ ಆನೇಕಪ್ಪುಗಳನ್ನು ತೆಗೆಯಿಸಿ ಕೊಟ್ಟರೆ, ಅವನು ಅರಮನೆಗೆ ಬೇಕಾದ ಆನೆಗಳನ್ನು ಸುಲಭಕ್ರಯಕ್ಕೆ ತಂದುಕೊಡುತ್ತೇನೆಂದು ಹೇಳಿ ಇರುತ್ತಾನೆ" ಎಂದು ಹೇಳಿದನು. ಹೀಗೆ ಹೇಳಿದ್ದುಮಾತ್ರವಲ್ಲದೆ, ವರ್ತಕಬಾಳರಾಯನಿಗೂ ನೇಮಕಮಾಡಿ, ಅವನೊಡನೆ "ಆಳುಗಳ ಸಂಬಳ ಮುಂತಾದ್ದನ್ನು ನಿನ್ನ ಕೈಯಿಂದಲೇ ಕೊಟ್ಟು ಕಪ್ಪಿಗೆ ಬಿದ್ದ ಆನೆಗಳನ್ನು ಹಿಡಿತರಿಸಿ ಶ್ರೀರಂಗಪಟ್ಟಣಕ್ಕೆ ಕೊಡತಕ್ಕದ್ದು. ಒಂದು ಮೊಳದ ಕೊಂಬಿನ ಆನೆ ೧ಕ್ಕೆ ೧೦೦ ವರಹಗಳನ್ನೂ, ಗೇಣು ಕೊಂಬಿನದಕ್ಕೆ ೪೦ ವರಹಗಳನ್ನೂ, ಚೋಟು ಕೊಂಬಿನದಕ್ಕೆ ೩೦ ವರಹಗಳನ್ನೂ, ಮುಗುಳು ಕೊಂಬಿನದಕ್ಕೆ ೨೫ ವರಹಗಳನ್ನೂ, ಹೆಣ್ಣಾನೆಗಳಲ್ಲಿ ೫ ಮೊಳದ ಆನೆಗೆ ೫೦ ವರಹಗಳನ್ನೂ, ೪ ಮೊಳದ್ದಕ್ಕೆ ೪೦ ವರಹಗಳನ್ನೂ, ೩ ಮೊಳದ್ದಕ್ಕೆ ೩೦ ವರಹಗಳನ್ನೂ, ಮರಿಯೊಂದಕ್ಕೆ ೧೫ ವರಹಗಳನ್ನೂ ಕೊಡುತ್ತೇವೆ. ಈ ಆನೆಗಳು ಮಧ್ಯಮಾರ್ಗದಲ್ಲಿ ಕೈತಪ್ಪಿಸಿಕೊಂಡು ಹೋದರೆ ಹಣ ಕೊಡುವದಿಲ್ಲ" ಎಂದು ತಿಳಿಸಿ, ಚನ್ನರಾಜಯ್ಯನಿಗೂ ಹೀಗೆಯೇ ನಡೆದುಕೊಳ್ಳತಕ್ಕದ್ದೆಂದು ಕಟ್ಟುಮಾಡಿ, ಇಬ್ಬರನ್ನೂ ಕಟ್ಟೇ ಮಳಲವಾಡಿಗೆ ಕಳುಹಿಸಿಕೊಟ್ಟನು.

ಬಸವ ಲಿಂಗಣ್ಣನು ಮೇಲೆ ಹೇಳಿ ಇರುವ ಕೊತ್ತಾಗಾಲವನ್ನು ಕಟ್ಟಿಕೊಂಡ ಮೇಲೆ ಅದೇ ಸಂವತ್ಸರದಲ್ಲಿ ಪೆನ್ನಾಗರದ ಬಳಿಯಲ್ಲಿರುವ ಕೊತ್ತಾಲವನ್ನು ಕಟ್ಟಿಕೊಳ್ಳಬೇಕೆಂದು ಹೊರಟನು. ಈ ಸಮಾಚಾರವನ್ನು ಆ

ಕೋತ್ತಾಗಾಲದ ಪಾಳ್ಯಗಾರ ಭಟ್ಟ ಮೊದಲ್ಯಾರಿಯು ಕೇಳಿ, ತನ್ನ ಮಗನ ಸಂಗಡ ೩೦೦೦ ವರಹಗಳನ್ನು, ಜಂತದ ಪಲ್ಲಕ್ಕಿಯನ್ನು, ಚಂಗೋಳೆಂಬ ಆನೆಯನ್ನು, ಗೂಳಿ ಎಂಬ ಗ್ರಾಮವನ್ನು ಸಹ ಕೈಗಾಣಿಕೆಯಾಗಿ ಕೊಟ್ಟು ಕಳುಹಿಸಿದನು. ಹೀಗಾದರೂ ಇವನು, ಕೆಲವುದಿವಸದ ಮೇಲೆ ತುಂಟತನ ಮಾಡಿದ್ದರಿಂದ, ಬಸವಲಿಂಗಣ್ಣನು ಅವನನ್ನು ನಿಗ್ರಹಿಸಿ, ವರ್ಷಕ್ಕೆ ೩೦೦೦ ವರಹಗಳನ್ನು ಕೊಡುವಂತೆ ಗೊತ್ತುಮಾಡಿಕೊಂಡು ಶ್ರೀರಂಗಪಟ್ಟಣಕ್ಕೆ ಬಂದನು.

ಆನಂತರ ಈ ಬಸವಲಿಂಗಣ್ಣನು ಪ್ರಭವ ವಿಭವ ಶುಕ್ಲ ಸಂವತ್ಸರಗಳಲ್ಲಿ ಶ್ರೀರಂಗಪಟ್ಟಣದಲ್ಲಿಯೇ ಇದ್ದುಕೊಂಡಿದ್ದು, ಅನಂತರ ಮೇಲೆ ಬರೆದಿರುವ ನಾಗಮಂಗಲವನ್ನು ಸಾಧಿಸುವದಕ್ಕೋಸ್ಕರ, ಸೇನಾಸಮೇತನಾಗಿ ಹೋಗಿ ಸಾಧಿಸುವಷ್ಟರಲ್ಲಿಯೇ, ದೇಹಕ್ಕೆ ಆಯಾಸವಾಗಿ ಶುಕ್ಲ ಸಂವತ್ಸರದ ಫಾಲ್ಗುನಶುದ್ಧ ೧೧ ಲ್ಲಿ ಶ್ರೀರಂಗಪಟ್ಟಣಕ್ಕೆ ಬಂದು ತೀರಿಹೋದನು. ಅನಂತರದಲ್ಲಿ ಪ್ರಮೋದೂತಸಂವತ್ಸರದ ಚೈತ್ರಶುದ್ಧ ದಶಮಿಯಲ್ಲಿ ಚಿಟ್ಟದ ಚಾಮರಾಜ ಬಡೆಯರವರ ಗಾಂಧರ್ವ ಪುತ್ರರಾದ ವಿಕ್ರಮರಾಯರಿಗೆ ದಳವಾಯಿತನವು ನೇಮಕವಾಯಿತು.

ದಳವಾಯಿ ವಿಕ್ರಮರಾಯರು.—ವಿಕ್ರಮರಾಯರು ಮೇಲೆ ಬರೆದಿರುವ ಚನ್ನಪಟ್ಟಣವನ್ನೂ ನಾಗಮಂಗಲವನ್ನೂ ಬೆಳ್ಳೂರನ್ನೂ ಸಹ ಯುದ್ಧದಲ್ಲಿ ಅಲ್ಲಿನ ಪಾಳ್ಯಗಾರರನ್ನು ಜಯಿಸಿ ಕಟ್ಟಿಕೊಂಡರು.

ಧರ್ಮಕಾರ್ಯಗಳನ್ನು ಮಾಡಿದ್ದು.—ಚಾಮರಾಜಬಡೆಯರವರು ತಾವು ಸಾಧಿಸಿದ ಬೆಳ್ಳೂರು, ನಾಗಮಂಗಲ, ಮುಂತಾದ ಗಡಿಗಳನ್ನು ಭದ್ರಪಡಿಸಬೇಕೆಂದು ಚಿತ್ತಯಿಸಿ, ಬರುತ್ತಿರುವ ಮಾರ್ಗದಲ್ಲಿ ಶ್ರವಣಬೆಳಗುಳದ ಜಿನದೇವರ ದರ್ಶನಕ್ಕೆ ಚಿತ್ತಯಿಸಬೇಕೆಂದು. ಸಿಯೋಗಿಬೊಮ್ಮರಸಯ್ಯನು ಬಿನ್ನವಿಸಿಕೊಂಡಂತೆ ಚಿತ್ತಯಿಸಿ, ದೇವರ ದರ್ಶನವನ್ನು ಮಾಡಿಕೊಂಡು ಶ್ರೀರಂಗಪಟ್ಟಣಕ್ಕೆ ದಯಮಾಡಿದರು. ಅನಂತರದಲ್ಲಿ ಪ್ರಜೋತ್ಪತ್ತಿ ಸಂವತ್ಸರದ ಕಾರ್ತಿಕಶುದ್ಧ ೧೫ ಸೋಮವಾರ ಸೋಮೋಪರಾಗ

ಪುಣ್ಯಕಾಲದಲ್ಲಿ ತಮ್ಮ ಹಿರಿಯರಿಗೆ ಶಾಶ್ವತವಾದ ಪುಣ್ಯಲೋಕವು ಬರಬೇಕೆಂಬದಾಗಿಯೂ, ತಮ್ಮ ಪಾಪ ಪರಿಹಾರಾರ್ಥವಾಗಿಯೂ, ನಾಗಮಂಗಲದ ಬಾಚಿಹಳ್ಳಿಹೋಬಳಿಗೆ ಸೇರಿದ ಅಘಾಲಯವೆಂಬ ಗ್ರಾಮಕ್ಕೆ ಪ್ರತಿನಾಮಧೇಯ ಚಾಮರಾಜ ಸಮುದ್ರವೆಂಬ ಅಗ್ರಹಾರದಲ್ಲಿ ೩೬ ಮನೆಗಳನ್ನು ಕಟ್ಟಿಸಿ, ತ್ರಿಮಸ್ಥಬ್ರಾಹ್ಮರಿಗೂ ಕೊಟ್ಟು ಇರುತ್ತಾರೆ. ಮುಖ್ಯವಾದ ಗ್ರಾಮಗಳು ಯಾವವೆಂದರೆ;—ನಾರಾಯಣಪುರ, ಬಿಳಿಕೆರೆ, ಚಟ್ಟನಹಳ್ಳಿ, ಸಿಂಗನಹಳ್ಳಿ ಮತ್ತು ಕೊಪ್ಪಲು, ಶಿಂಗಾರಪುರ, ಕಾಮಂಡಹಳ್ಳಿ ಮತ್ತು ಕೊಪ್ಪಲು, ದೊಡ್ಡಸೋಮನಹಳ್ಳಿ, ಕೆರೇಕಟ್ಟೆ. ಈ ಗ್ರಾಮಗಳ ಎಲ್ಲೆಗಳಿಗೆ ಶಿಲಾಪ್ರತಿಷ್ಠೆ ಮಾಡಿಸಿ, ಸಹಿರಣ್ಯೋದಕ ದಾನ ಧಾರಾಪೂರ್ವಕವಾಗಿ ಕೊಟ್ಟು, ಪುತ್ರಪೌತ್ರಪಾರಂಪರ್ಯವಾಗಿ ಅನುಭವಿಸಿಕೊಂಡು ಬರುವಂತೆ ದಾನಶಾಸನವನ್ನು ಬರೆಯಿಸಿ ಕೊಟ್ಟು ಇರುತ್ತಾರೆ.

ಶ್ರೀಮುಖಸಂವತ್ಸರದಲ್ಲಿ ಚಾಮರಾಜಒಡೆಯರವರ ಧರ್ಮಪತ್ನಿಯರಾದ ಮುದ್ದಾಜಮ್ಮಣ್ಣಿಯವರು ಯಾದವಾದ್ರಿಯಲ್ಲಿರುವ ಯೋಗ ನೃಸಿಂಹಸ್ವಾಮಿ, ಚಲುವರಾಯಸ್ವಾಮಿಯವರ ವೈರಮುಡಿ, ಬ್ರಹ್ಮೋತ್ಸವ ಮುಂತಾದ ಉತ್ಸವ ದರ್ಶನಗಳಿಗೆ ನಾನಾದೇಶಗಳಿಂದ ಅನೇಕಜನರು ಬಂದು, ಕಲ್ಯಾಣಿಯಲ್ಲಿ ಸ್ನಾನಮಾಡುವದಕ್ಕೆ ಸೋಪಾನವಿಲ್ಲದ್ದರಿಂದ, ಬಹಳ ಶ್ರಮಪಡುತ್ತಾರಾದ್ದರಿಂದ, ಈ ಕಲ್ಯಾಣಿಗೆ ಕಾಶಿಕೆಲಸದ ಸೋಪಾನವನ್ನು ಕಟ್ಟಿಸಬೇಕೆಂದು ತಮ್ಮ ಪತಿಗೆ ಬಿನ್ನವಿಸಿಕೊಂಡರು. ಚಾಮರಾಜಒಡೆಯರವರು ಅದೇಪ್ರಕಾರ ಆ ಮುದ್ದಾಜಮ್ಮಣ್ಣಿಯವರ ಹೆಸರಿನಿಂದಲೇ ಆ ಕಲ್ಯಾಣಿಗೆ ಕಾಶಿಕೆಲಸದ ಸೋಪಾನವನ್ನು ಕಟ್ಟಿಸಿದರು.

ಭಾವಸಂವತ್ಸರದ ಮಾಘಶುದ್ಧ ೧೫ ಗುರುವಾರದಲ್ಲಿ ಮಹಿಶೂರ ಬೆಟ್ಟದಚಾಮರಾಜಒಡೆಯರವರ ಕುಮಾರರಾದ ದಳವಾಯಿವಿಕ್ರಮರಾಯರು ನಂಜನಗೂಡು ಶ್ರೀಕಂಠೇಶ್ವರಸ್ವಾಮಿಯವರಿಗೆ ಸಂಕ್ರಾಂತಿ ಉತ್ಸವ ಮೊದಲಾದ ಉತ್ಸವಗಳು ನಡೆಯುವದಕ್ಕೆ ಕಪಿಲಾನದಿಯ ತೀರದಲ್ಲಿ ಮಂಟಪನನ್ನೂ ಅನೇಕವೃಕ್ಷಗಳಿಂದ ನಿಬಿಡವಾದ ವನವನ್ನೂ ಮಾಡಿಸಿದರು. ಶ್ರೀಕಂಠೇಶ್ವರನ ಹೊರಪ್ರಾಕಾರದಲ್ಲಿ ಸರ್ವಜನರೂ ಆಶ್ಚರ್ಯ

ಪಡುವಂತೆ ಶಿಲೆಯಿಂದ ಒಂದು ದೊಡ್ಡ ವೃಷಭವನ್ನು ಮಾಡಿಸಿ ಅದರ ಪೀಠದಲ್ಲಿ ಸ್ವನಾಮಾಂಕಿತವಾಗಿ ಶಾಸನವನ್ನು ಪ್ರತಿಷ್ಠೆಮಾಡಿ ಇದ್ದಾರೆ.

ವಿದ್ಯಾವಿಷಯ.—ಚಾಮರಾಜಒಡೆಯರವರು ಅನೇಕ ವಿದ್ವಜ್ಜನಗಳಿಗೆ ಸಮ್ಮತಿಯಾಗುವಂತೆ ಅನೇಕ ಸಂಸ್ಕೃತ ಪ್ರಾಕೃತ ಗ್ರಂಥಗಳನ್ನು ಮಾಡಿರುವದಲ್ಲದೆ ಶ್ರೀಮದ್ರಾಮಾಯಣ ಸಪ್ತಕಾಂಡಕ್ಕೂ ಚಾಮರಾಜೋಕ್ತಿವಿಲಾಸವೆಂಬ ಕನ್ನಡದ ಟೀಕೆಯನ್ನು ಆಚಂದ್ರಾರ್ಕವಾಗಿ ಇರುವಂತೆ ಮಾಡಿ ಇದ್ದಾರೆ.

ಮುಖ್ಯ ವಿಷಯಗಳು.—ಚಾಮರಾಜ ಒಡೆಯರವರು ತಮ್ಮ ಪರಾಕ್ರಮದಿಂದ ಅನೇಕ ಪಾಳ್ಯಗಾರರನ್ನು ಜಯಿಸಿ ದೇಶಗಳನ್ನು ಕಟ್ಟಿಕೊಂಡದ್ದಲ್ಲದೆ, ಅವರಲ್ಲಿದ್ದ ಬಗೆಬಗೆಯಾದ ಅನೇಕ ಆಯುಧಗಳನ್ನು ಸಂಗ್ರಹಿಸಿಕೊಂಡು ಬಂದಮೇಲೆ, ಇನ್ನೂ ನಾನಾವಿಧ ಆಯುಧಗಳನ್ನು ಇರಿಸುವದಕ್ಕೂ ಮಾಡುವದಕ್ಕೂ ಸಹ ಮಹೀಶೂರನಗರದಲ್ಲಿ ಅಲಗಿನ ಚಾವಡಿ ಎಂಬದಾಗಿ ಹೊಸದಾಗಿ ಒಂದು ಚಾವಡಿಯನ್ನು ನಿರ್ಮಾಣಮಾಡಿಸಿದರು. ರಾಜಒಡೆಯರವರ ಆಳಿಕೆಯಲ್ಲಿಯೂ ತಮ್ಮ ಆಳಿಕೆಯಲ್ಲಿಯೂ ಯಾವಯಾವ ಗಡಿಗಳ ಹೋಬಳಿಗಳಿಗೆ ಯಾವಯಾವ ಗ್ರಾಮಗಳನ್ನು ಸೇರಿಸಬೇಕೋ ಆ ಮೇರೆಗೆ ಸೇರಿಸಿ, ರಾಜಒಡೆಯರವರ ನಿಬಂಧನೆಗಳಿಗೆ ಅನುಸಾರವಾಗಿ ನಡಿಸುತ್ತಿದ್ದರು. ಇವರು ಶ್ರೀರಂಗಪಟ್ಟಣದಲ್ಲಿ ರತ್ನಸಿಂಹಾಸನಾರೂಢರಾಗಿ ನವರಾತ್ರಿಯ ಓಲಗದಲ್ಲಿ "ವೀರ ಶೂರ ಮಲವರ ಗಂಡ ಅಭಯಪ್ರತಾಪಾಧೀಶ್ವರ ಶರಣಾಗತಪರಿಪಾಲಕ" ಎಂಬ ಬಿರುದಿನಿಂದ ಹೊಗಳಿಸಿಕೊಳ್ಳುತ್ತಿದ್ದರು. ಅನೇಕ ಪಾಳ್ಯಗಾರರನ್ನು ಜಯಿಸಿ ಇವರಿಗೆ ಸರಿ ಧೊರೆಯಿಲ್ಲವೆಂದು ಹೊಗಳಿಸಿಕೊಳ್ಳುತ್ತಾ, ತಮ್ಮ ಪೂರ್ವಿಕರು ಮಾಡಿದ ದೇವದಾಯ ಬ್ರಹ್ಮದಾಯ ಮುಂತಾದ ಧರ್ಮಕಾರ್ಯಗಳನ್ನು ನಡಿಚಿಕೊಂಡುಬರುತ್ತಾ, ಶ್ರೀರಂಗಪಟ್ಟಣದ ರಂಗನಾಥಸ್ವಾಮಿ ಮೇಲುಕೋಟೇ ಚಲುವರಾಯಸ್ವಾಮಿ ಮುಂತಾದ ದೇವರ ಉತ್ಸವಗಳಿಗೆ ಮಂಟಪಗಳನ್ನು ಕಟ್ಟಿಸಿ ಸುಖದಿಂದ ಪೃಥ್ವೀಸಾಂಬ್ರಾಜ್ಯವನ್ನು ಮಾಡುತ್ತಿದ್ದರು.

ಹೀಗಿರುವಲ್ಲಿ ಇವರಿಗೆ ದೇಹಕ್ಕೆ ಬಹಳ ಆಯಾಸವಾದ್ದರಿಂದ, ಇವರು ತಮ್ಮ ಪಿತೃವ್ಯಾಜಿಯವರಾದ ರಾಜಒಡೆಯರವರು ಆಜ್ಞಾಪಿಸಿ ಇದ್ದಂತೆ ತಮ್ಮ ತಂದೆಯವರಿಗೆ ಸಪತ್ನಿಮಾತೃಪುತ್ರರಾದ ಇಮ್ಮಡಿ ರಾಜಒಡೆಯರವರಿಗೆ ಶಾ. ಶಕ ೧೫೫೯ನೇ ಈಶ್ವರಸಂವತ್ಸರದ ವೈಶಾಖಶುದ್ಧ ೧೫ಲ್ಲಿ ಪಟ್ಟಾಭಿಷೇಕಮಾಡಿಸಿ, ದಳವಾಯಿ ವಿಕ್ರಮರಾಯರು ಮುಂತಾದ ಅಧಿಕಾರಿಗಳಿಗೆ ಅವರ ಆಜ್ಞಾನುಸಾರವಾಗಿ ನಡೆದುಕೊಳ್ಳುವಂತೆ ಕಟ್ಟುಮಾಡಿ, ಅನಂತರ ಮೂರುದಿನಗಳಿದ್ದು ಆ ವೈಶಾಖ ಬಹುಳ ೩ಲ್ಲಿ ಶ್ರೀರಂಗಪಟ್ಟಣದಲ್ಲಿ ಸ್ವರ್ಗಸೋಪಾನವನ್ನೈದಿದರು. ಇವರ ಪತ್ನಿಯರೆಲ್ಲರೂ ಇವರೊಡನೆ ಸಹಗಮನಮಾಡಿದರು. ಇವರಿಗೆ ಉತ್ತರಕ್ರಿಯಾದಿಗಳನ್ನು ಇಮ್ಮಡಿರಾಜಒಡೆಯರವರ ಕರ್ತೃವ್ಯದಿಂದ ಅಂಕನಹಳ್ಳೀ ದೇವರಾಜಯ್ಯನು ಮಾಡಿದನು.

	ವರ್ಷ.	ತಿಂಗಳು.	ದಿವಸ.
ಈ ಚಾಮರಾಜ ಒಡೆಯರವರ ಅದ್ಯಂತವಯಸ್ಸು	೩೦	೯	೨೮
,, ,, ಆಳಿಕೆ	೧೯	೧೦	೮

ಇವರ ಆಳಿಕೆಯಲ್ಲಿ ದಳವಾಯಿತನವನ್ನು ಮಾಡಿದವರು.—

		ವರ್ಷ.	ತಿಂಗಳು.	ದಿವಸ
೧.	ಬೆಟ್ಟದ ಅರಸಿನವರು ..	೩	೮	೨೧
೨.	ಬಸ್ನೂರು ಲಿಂಗಣ್ಣ	೪	೯	೨೩
೩.	ಬಸವಲಿಂಗಣ್ಣ ..	೪	೨	೬
೪.	ವಿಕ್ರಮರಾಯರು	೫	೧	೩

ಇವರಲ್ಲಿ ೧ನೇ ೪ನೇ ಯವರು ರಾಜಒಡೆಯರವರ ಅಣ್ಣಂದಿರಾದ ಬೆಟ್ಟದ ಚಾಮರಾಜ ಒಡೆಯರವರ ಗಾಂಧರ್ವಪುತ್ರರು, ಮಿಕ್ಕ ಇಬ್ಬರೂ ಶಿವಾಚಾರದವರು.

ಇವರ ಆಳಿಕೆಯಲ್ಲಿ ನಿಯೋಗಿತನವನ್ನು ಮಾಡಿದವನು ಜೈನರ ಬೊಮ್ಮರಸಪಂಡಿತ.

---

೧೧. ಇಮ್ಮಡಿ ರಾಜಒಡೆಯರವರು.

ಜನನ.—ಶಾ. ಶಕ ೧೫೩೯ನೇ ಪಿಂಗಳಸಂವತ್ಸರದ ಮಾರ್ಗಶಿರ ಬಹುಳ ಪಂಚಮಿ.

ಪಟ್ಟಾಭಿಷೇಕ.— ೧೫೫೯ನೇ ಈಶ್ವರ ,, ವೈಶಾಖ ಶುದ್ಧ ೧೫.

ಪತ್ನಿಯರು.—(೧) ಕೋಟೇ ಚೆನ್ನರಾಜಯ್ಯನವರ ಮಕ್ಕಳು ವೆಂಕಟಾಜಮ್ಮಣ್ಣಿಯವರು, (೨) ಮದ್ದೂರು ನರಸೇಅರಸಿನವರ ಮಕ್ಕಳು ನಂಜಮ್ಮಣ್ಣಿಯವರು. ಈ ಎರಡು ವಿವಾಹಗಳೂ ವಿಭವಸಂವತ್ಸರದ ಮಾಘಶುದ್ಧ ಪಂಚಮಿಯಲ್ಲಿ ಚಾಮರಾಜ ಒಡೆಯರವರ ಆಳಿಕೆಯಲ್ಲಿ ನಡೆದವುಗಳು.

ದೇಶಗಳನ್ನು ಕಟ್ಟಿದ್ದು.—ಶಾ. ಶಕ ೧೬೬೧ನೇ ಈಶ್ವರಸಂವತ್ಸರದಲ್ಲಿ ದಳವಾಯಿವಿಕ್ರಮರಾಯರು ಅರಕಲಗೂಡಿಗೆ ಹೋಗಿ, ಅದಕ್ಕೆ ಮುತ್ತಿಗೆ ಹಾಕಿ, ಅಲ್ಲಿನ ಪಾಳ್ಯಗಾರ ಕೃಷ್ಣಪ್ಪನಾಯಕನನ್ನು ಜಯಿಸಿ, ಅವನಲ್ಲಿದ್ದ ಗಜಾಶ್ವ ದ್ರವ್ಯ ಮುಂತಾದ ಸಕಲ ಪದಾರ್ಥಗಳನ್ನೂ ತೆಗೆದುಕೊಂಡು ಶ್ರೀರಂಗಪಟ್ಟಣಕ್ಕೆ ಬಂದರು.

ಮುಖ್ಯವಿಷಯಗಳು.—ಈ ಇಮ್ಮಡಿ ರಾಜಒಡೆಯರವರು ತಮ್ಮ ತಂದೆಗಳೂ ತಾತಂದಿರೂ ಮಾಡಿದ್ದ ದೇವದಾಯ ಬ್ರಹ್ಮದಾಯ ಮುಂತಾದ ಧರ್ಮಕಾರ್ಯಗಳನ್ನು ಚೆನ್ನಾಗಿ ಪರಿಪಾಲನೆ ಮಾಡುತ್ತಾ, ದುಷ್ಟನಿಗ್ರಹ ಶಿಷ್ಟಪರಿಪಾಲನೆಯನ್ನು ತಮ್ಮ ತಂದೆಗಳಿಗಿಂತ ಇಮ್ಮಡಿಯಾಗಿ ವಿಚಾರಣೆ ಮಾಡಿಕೊಂಡು ಬಂದದ್ದರಿಂದ, ಇವರಿಗೆ ಇಮ್ಮಡಿ ರಾಜಒಡೆಯರೆಂಬ ಹೆಸರು ಪ್ರಸಿದ್ಧವಾಯಿತು. ಇವರು ನವರಾತ್ರಿಯ ಉತ್ಸವ ಕಾಲದಲ್ಲಿ ತಮ್ಮ ತಂದೆಗಳು ಹೊಗಳಿಸಿಕೊಳ್ಳುತ್ತಿದ್ದ ಬಿರುದಾವಳಿಗಳಿಂದ ಹೊಗಳಿಸಿಕೊಳ್ಳುತ್ತಿದ್ದದ್ದಲ್ಲದೆ "ವೀರ ಶೂರ ಮಲವರ ಗಂಡ ಸಂಗೀತ ಲೋಲ ಸಾಹಿತ್ಯ ರತ್ನಾಕರ ಅಭಯ ಪ್ರತಾಪಾಧೀಶ್ವರ" ಎಂಬ ಬಿರುದುಗಳಿಂದ ಹೊಗಳಿಸಿಕೊಳ್ಳುತ್ತಾ ವಸಂತೋತ್ಸವ, ನಾಟಕಶಾಲೆ, ಸಾರೀಮೇಳ, ಗಂಧರ್ವವೀಣೆ ಮೊದಲಾದ ಮಹಾರಾಜವೈಭವದಿಂದ ಸತ್ಕೀರ್ತಿಯನ್ನು ಪಡೆದು, ಶಾ. ಶಕ ೧೫೬೧ನೇ ಬಹುಧಾನ್ಯಸಂವತ್ಸರದ ಆಶ್ವಯುಜ ಶುದ್ಧ ೧೫ಲ್ಲಿ ಶ್ರೀರಂಗಪಟ್ಟಣವನ್ನು ಬಿಟ್ಟು ಸ್ವರ್ಗಸುಖವನ್ನು ಅನುಭವಿಸಬೇಕೆಂದು ಪರಲೋಕಗತರಾದರು. ಇವರ ಪತ್ನಿಯರು ಇವರ ಸಂಗಡಲೇ ಸಹಗಮನ ಮಾಡಿದರು. ಇವರಿಗೆ ಉತ್ತರಕ್ರಿಯಾದಿಗಳನ್ನು ಇವರ ಮಾತುಶ್ರೀಯವರಾದ ಯಡವನಹಳ್ಳೀ ಶಿವಮ್ಮಾಜಮ್ಮಣ್ಣಿಯವರ ಕರ್ತವ್ಯದಿಂದ ಹೆಮ್ಮನಹಳ್ಳೀ ದಾಸರಾಜಯ್ಯನು ಮಾಡಿದನು.

	ವರ್ಷ.	ತಿಂಗಳು.	ದಿನ.
ಈ ಇಮ್ಮಡಿ ರಾಜಒಡೆಯರವರ ಅದ್ಯಂತವಯಸ್ಸು	೨೦	೯	೨೬
" " ಆಳಿಕೆ	೧	೫	೦

ಇವರ ಆಳಿಕೆಯಲ್ಲಿ ದಳವಾಯಿತನ ಮಾಡಿದವರು.—

	ವರ್ಷ.	ತಿಂಗಳು.	ದಿನ.
ವಿಕ್ರಮರಾಯರು	೧	೫	೦

೬ನೇ ಅಧ್ಯಾಯ.

೧೨. ರಣಧೀರ ಕಂಠೀರವ ನರಸರಾಜ ಒಡೆಯರವರು.

ಜನನ.—ಶಾ. ಶಕ ೧೫೩೮ನೇ ರಾಕ್ಷಸ ಸಂವತ್ಸರದ ವೈಶಾಖಶುದ್ಧ ೧೪ ಸೋಮವಾರ ಸ್ವಾತೀನಕ್ಷತ್ರ ೨ನೇ ಪಾದ ನೃಸಿಂಹಜಯಂತಿ.

ಪಟ್ಟಾಭಿಷೇಕ.— ,, ೧೫೬೧ನೇ ಬಹುಧಾನ್ಯಸಂವತ್ಸರದ ಕಾರ್ತೀಕಶುದ್ಧ ೨ ಸೋಮವಾರ.

ಪತ್ನಿಯರು.—ಚಾಮರಾಜ ಒಡೆಯರವರ ಆಳಿಕೆಯಲ್ಲಿ ಇವರನ್ನು ತೆರಕಣಾಂಬಿಯಿಂದ ಶ್ರೀರಂಗಪಟ್ಟಣಕ್ಕೆ ಕರೆತರಿಸಿ ಶುಕ್ಲಸಂವತ್ಸರದ ವೈಶಾಖಶುದ್ಧ ೫ಲ್ಲಿ ಮಾಡಿಸಿದ ವಿವಾಹಗಳು.—

(೧) ಬಿಳುಗಲಿ ಹುಚ್ಚತಿಮ್ಮರಾಜಯ್ಯನವರ ಮಕ್ಕಳು ಆಯಮ್ಮಣ್ಣಿಯವರು.
(೨) ಕಳಲೇ ದಾಸರಾಜಯ್ಯನವರ ಮಕ್ಕಳು ಲಕ್ಷ್ಮಮ್ಮಣ್ಣಿಯವರು.

ಪಟ್ಟಾಭಿಷೇಕವಾದಮೇಲೆ ವಿಕ್ರಮ ಸಂವತ್ಸರದ ವೈಶಾಖಶುದ್ಧ ೧೦ಲ್ಲಿ ಅರ್ಕವಿವಾಹಪುರಸ್ಸರವಾಗಿ ಮಾಡಿಕೊಂಡ ಅಷ್ಟಮಹಿಷಿಯರು.—

(೩) ನರಸಲ್ಲಿ ಬಾಳಯ್ಯನವರ ಮಕ್ಕಳು ಚನ್ನಾಜಮ್ಮಣ್ಣಿಯವರು (ತಿಮ್ಮಾಜಮ್ಮಣ್ಣಿಯವರು).
(೪) ಅರಿಕುಠಾರದ ದೊಡ್ಡೇಅರಸಿನವರ ಮಕ್ಕಳು ಲಕ್ಷಮ್ಮಣ್ಣಿಯವರು.
(೫) ,, ,, ,, ಮುದ್ದಾಜಮ್ಮಣ್ಣಿಯವರು.
(೬) ಯಳಂದೂರು ಕೆಂಪರಾಜಯ್ಯನವರ ಮಕ್ಕಳು ನಂಜಮ್ಮಣ್ಣಿಯವರು.
(೭) ಬಾಗಳೀ ಲಿಂಗರಾಜಯ್ಯನವರ ಮಕ್ಕಳು ಗೌರಮ್ಮಣ್ಣಿಯವರು.
(೮) ಹತ್ತಿ ಚನ್ನರಾಜಯ್ಯನವರ ಮಕ್ಕಳು ವೀರಾಜಮ್ಮಣ್ಣಿಯವರು.
(೯) ಹುಲ್ಲಹಳ್ಳಿಯಲ್ಲಿರುವ ಕೊತ್ತಾಗಾಲಸ್ಥಳದ ತಿಪ್ಪೂರು ಸೋಮರಾಜಯ್ಯನವರ ಮಕ್ಕಳು ಸೋಮಾಜಮ್ಮಣ್ಣಿಯವರು.
(೧೦) ಮುಲಗೂಡು ಭದ್ರರಾಜಯ್ಯನವರ ಮಕ್ಕಳು ವೀರಾಜಮ್ಮಣ್ಣಿಯವರು.

ಸಂತಾನ—(೧) ಬಿಳುಗಲಿ ಆಯಮ್ಮಣ್ಣಿಯವರಲ್ಲಿ ಚಾಮರಾಜ ಒಡೆಯರವರು. ಇವರು ೫ ವರ್ಷಗಳಿದ್ದು ದೈವಾಧೀನರಾದರು.

(೨) ಸ್ವೀಕೃತಪುತ್ರರು.—ದೊಡ್ಡ ದೇವರಾಜ ಒಡೆಯರವರು. ಇವರು ರಣಧೀರ ಕಂಠೀರವ ನರಸರಾಜ ಒಡೆಯರವರ ಚಿಕ್ಕಪ್ಪನವರ ಮಕ್ಕಳು.

ರಾಜ ಒಡೆಯರ ಧರ್ಮಪತ್ನಿಯರಾದ ಯಡವನ ಹಳ್ಳೀ ತಿಮ್ಮಾಜಮ್ಮಣ್ಣಿಯವರು ತೆರಕಣಾಂಬಿಯಲ್ಲಿದ್ದ ತಮ್ಮ ಬಾವಂದಿರಾದ ಬೆಟ್ಟದ ಚಾಮರಾಜ ಒಡೆಯರವರ ೩ನೇ ಪುತ್ರರಾದ ಕಂಠೀರವ ನರಸರಾಜ ಒಡೆಯರವರನ್ನು ರಾಜಮರ್ಯಾದೆಯಿಂದ ಕರೆಯಿಸಿ ಶ್ರೀರಂಗಪಟ್ಟಣದಲ್ಲಿ ಪಟ್ಟಾಭಿಷೇಕ ಮಾಡಿಸಿದರು.

ಜಟ್ಟಿಯನ್ನು ಸಂಹರಿಸಿದ್ದು.—ಇವರು ಪಟ್ಟನಾಗುವದಕ್ಕೆ ಮುಂಚಿತವಾಗಿ ತಮ್ಮ ತಂದೆಗಳಾದ ಬೆಟ್ಟದ ಚಾಮರಾಜ ಒಡೆಯರವರ ಸಮೀಪದಲ್ಲಿ ತೆರಕಣಾಂಬಿಯಲ್ಲಿ ಇದ್ದರು. ಆಕಾಲದಲ್ಲಿ ಒಬ್ಬ ಬ್ರಾಹ್ಮಣನು ರಾಮೇಶ್ವರದ ಯಾತ್ರೇಮಾಡಿಕೊಂಡು ಬಂದು, ಈಕಂಠೀರವ ನರಸರಾಜ ಒಡೆಯರವರಿಗೆ ಫಲಮಂತ್ರಾಕ್ಷತೆಯನ್ನು ಒಪ್ಪಿಸಿ, “ತಿರುಚನಾಪಳ್ಳಿಯಲ್ಲಿ ಮಹಾಪರಾಕ್ರಮಶಾಲಿಯಾದ ಶೂರನಾದ ಒಬ್ಬ ಜಟ್ಟಿಯು ತನ್ನಸಂಗಡ ಯಾರೂ ಕಾಳಗವನ್ನು ಕಾಯುವವರು ಇಲ್ಲವೆಂದು, ತನ್ನ ದಟ್ಟೀ ಚಲ್ಲಣಗಳನ್ನು ಆ ವೂರಿನ ಕೋಟೇಬಾಗಲಿಗೆ ಕಟ್ಟಿದರೆ ಸರ್ವಜನರೂ ತನ್ನ ಕಾಲಕೆಳಗೆ ಸಂಚಾರ ಮಾಡುವಂತೆ ಆಗುವದೆಂದು, ದುರಹಂಕಾರದಿಂದ ಅರಸಿನ ಅನುಮತಿಯಿಂದ ಅವುಗಳನ್ನು ಕಟ್ಟಿಇದ್ದಾನೆ. ಅವೂರಿನ ಅರಸು ಬ್ರಾಹ್ಮರು ಮಾತ್ರ ಮತ್ತೊಂದು ಬಾಗಿಲಲ್ಲಿ ಸಂಚಾರವಮಾಡುವಂತೆಯೂ, ಆಬಾಗಿಲಲ್ಲಿ ಮಹಾಶೂರರು ಮೊದಲಾದ ಸಕಲಜನರೂ ಸಂಚಾರಮಾಡುವಂತೆಯೂ, ನೇಮಕ ಮಾಡಿ ಇದ್ದಾನೆ” ಎಂದು ಹೇಳಿದನು. ಆಮಾತನ್ನು ಕೇಳಿ ಈ ಕಂಠೀರವ ನರಸರಾಜ ಒಡೆಯರವರು ಜಟ್ಟೀ ವೇಷವನ್ನು ಧರಿಸಿ, ಜನರು ಅರಿಯದಂತೆ ಆ ಬ್ರಾಹ್ಮಣನನ್ನು ಕರೆದುಕೊಂಡು ಹೋಗಿ, ಆ ತಿರುಚನಾಪಳ್ಳಿಯ ಕೋಟೇಬಾಗಲಿಗೆ ಕಟ್ಟಿರುವ ದಟ್ಟೀ ಚಲ್ಲಣಗಳನ್ನು ತಮ್ಮ ಕಡೆಯ ಆಳಿನ ಕೈಕೋಲಿನಿಂದ ತೆಗೆಯಿಸಿ, ಆದೇಬಾಗಿಲಲ್ಲಿ ಕೋಟೆಯೊಳಕ್ಕೆ ಪ್ರವೇಶಮಾಡಿದರು. ಈ ವರ್ತಮಾನವನ್ನು ಕೇಳಿದ ತಿರುಚನಾಪಳ್ಳಿಯ ಅರಸು ಇವರನ್ನು ಕರೆಯಿಸಿ, ಸನ್ಮಾನಮಾಡಿ ಇರಿಸಿಕೊಂಡಿದ್ದು, ಒಂದಾನೊಂದು ದಿನ ತನ್ನಲ್ಲಿದ್ದ ಸರ್ವಜನರನ್ನೂ ಕರೆಯಿಸಿ ಸಭೆಮಾಡಿ, ತಾನು ಉಪ್ಪರಿಗೇಮೇಲೆ ಕುಳಿತುಕೊಂಡು, ತನ್ನಲ್ಲಿದ್ದ ಜಟ್ಟಿಗೂ ವೇಷಧಾರಿಗಳಾಗಿ ಬಂದು ಇದ್ದ ಕಂಠೀರವ ನರಸರಾಜಒಡೆಯರವರಿಗೂ ಕಾಳಗ ಬಿಡಿಸಿದನು. ಆಗ ವಜ್ರ

ಮುಷ್ಟಿಗಳನ್ನು ಹಿಡಿದು ಇಬ್ಬರೂ ಕಾಳಗವಮಾಡುವ ಸಮಯದಲ್ಲಿ, ಜಟ್ಟೀ ವೇಷವನ್ನು ಧರಿಸಿರುವ ಈ ಕಂಠೀರವ ನರಸರಾಜ ಒಡೆಯರವರು ಜನರು ಅರಿಯದಂತೆ ಪೂರ್ವದಲ್ಲಿ ಸೊಂಟದಲ್ಲಿ ಕಟ್ಟಿಇದ್ದ ವಿಜಯ ನಾರಸಿಂಹನೆಂಬ ಕತ್ತಿಯಿಂದ ಈ ಜಟ್ಟಿಯನ್ನು ತಮ್ಮ ಸಾಧಕ ಹಸ್ತಲಾಘವ ಚಮತ್ಕಾರದಿಂದ ಕೊರಳನ್ನು ಕುಯಿದು ಆ ಹೆಣದ ಮುಂದೆ ಸುಮ್ಮನೆ ನಿಂತುಕೊಂಡರು. ಇದನ್ನು ತಿಳಿಯದೆ ಆ ತಿರುಚನಾಪಳ್ಳಿಯ ಅರಸು ಯಾತಕ್ಕೆ ಸುಮ್ಮನೆ ನಿಂತು ಇದ್ದೀರಿ ಎಂಬದಾಗಿ ಕೇಳಲು, ಕಂಠೀರವನರಸರಾಜ ಒಡೆಯರವರು ತಮ್ಮ ಎಡದ ಹಸ್ತದಲ್ಲಿದ್ದ ಬೆತ್ತದಿಂದ ಎದುರಾಳಿಯ ಮುಖವನ್ನು ತಿವಿದರು. ಆಗ ಆಜಟ್ಟಿಯ ತಲೆಯು ಕೆಳಕ್ಕೆಬಿದ್ದು ಕುಣಿದಾಡಲು, ಈ ಜಟ್ಟೀ ಕಾಳಗವನ್ನು ನೋಡುವದಕ್ಕೆ ಬಂದಿದ್ದ ಜನರೆಲ್ಲರೂ ಇವರ ಹಸ್ತಲಾಘವ ಚಮತ್ಕಾರವನ್ನೂ ಇವರ ಸಾಹಸ ಪರಾಕ್ರಮಗಳನ್ನೂ ನೋಡಿ, ಆಶ್ಚರ್ಯಪಡುತ್ತಾ ಇವರನ್ನು ಕೊಂಡಾಡುತ್ತಿದ್ದರು. ಇದನ್ನು ಕಂಡು ಆ ತಿರುಚನಾಪಳ್ಳಿಯ ಅರಸು ಇವರಿಗೆ ಬಹಳ ಸನ್ಮಾನಗಳನ್ನು ಮಾಡಬೇಕೆಂದು ಯೋಚಿಸುತ್ತಿದ್ದನು. ಇವರು ಆ ಅರಸಿನ ಮುಖಭಾವವನ್ನೂ ಅವನು ಸ್ತೋತ್ರಮಾಡುತ್ತಿರುವ ಅಭಿಪ್ರಾಯವನ್ನೂ ತಿಳಿದು, ಈ ಪಾಳ್ಯಗಾರನಿಂದ ಜಟ್ಟಿಯಂತೆ ಸನ್ಮಾನ ಮಾಡಿಸಿಕೊಳ್ಳುವದು ಅಯುಕ್ತವೆಂದು ಎಣಿಸಿ, ನಾಳೇದಿನ ಬರುತ್ತೇನೆಂದು ಆ ಅರಸಿನೊಡನೆ ಹೇಳಿ, ಆದಿನ ರಾತ್ರಿ ಜನರು ಅರಿಯದಂತೆ ಆವೂರ ಕೋಟೇಬಾಗಲಿಗೆ, ಮಹೀಶೂರ ಸಂಸ್ಥಾನದಿಂದ ಯಾರೋ ಬಂದು ಇಂಥಾ ಪರಾಕ್ರಮವನ್ನು ತೋರಿಸಿದರೆಂದು ಸಕಲರಿಗೂ ತಿಳಿಯುವಂತೆ ಚೀಟಿಯನ್ನು ಬರೆದು ಕಟ್ಟಿ, ತಾವು ಬ್ರಾಹ್ಮಣ ಸಮೇತರಾಗಿ ತೆರುಕಣಾಂಬಿಗೆ ಬಂದು ಸೇರಿದರು. ಹೀಗೆ ಬರುವಾಗ ದಾರಿಯಲ್ಲಿ ಒಂದು ಬಳಪದ ಕಲ್ಲಿನ ಕಂಭವನ್ನು ಕಂಡು ಅದನ್ನು ತಮ್ಮ ಭುಜಬಲ ಪರಾಕ್ರಮ ಬುದ್ಧಿ ಚಮತ್ಕಾರಗಳಿಂದ ಕತ್ತಿಯಿಂದ ಎರಡು ತುಂಡು ಮಾಡಿದರು.

ವಿಕ್ರಮರಾಯರಿಗೆ ದಳವಾಯಿತನ ಹೋದದ್ದು.—ಕಂಠೀರವ ನರಸರಾಜ ಒಡೆಯರವರು ಪಟ್ಟಾಭಿಷಿಕ್ತರಾಗಿ ಸುಖದಿಂದ ಪೃಥ್ವೀಸಾಮ್ರಾಜ್ಯವನ್ನು ಮಾಡುತ್ತಾ ಇರುವ ಸಮಯದಲ್ಲಿ ಪೂರ್ವದಲ್ಲಿ ಅಧಿಕಾರವನ್ನು ಮಾಡು



ಸಹಾಯಯುಕ್ತನಾದ ತಿರುಚನಾಪಳ್ಳಿ ಧೊರೆಯ ದುರಿನೆ ಜಟ್ಟಿಯನ್ನ ಸ್ವಧರಿಸಿದ ಬಲಾಢ್ಯ ರಣಕಂಠೀರವನರ
ಸರಾಜ ಒಡೆಯರವರು ತಿರುಚನಾಪಳ್ಳಿಯ ಜಟ್ಟಿಯೊಂದನೆ ಕಾಳಗ ಮಾಡಿದ್ದು.

ತ್ತಿದ್ದ ಜನರನ್ನು ಕರೆಯಿಸಿ, ಸೀಮೆಯ ಆದಾಯ ವೆಚ್ಚದ ಲೆಕ್ಕವನ್ನೂ, ಬೊಕ್ಕಸ ಮುಂತಾದವುಗಳ ಲೆಕ್ಕವನ್ನೂ, ಕರಣೀಕರ ಮುಖಾಂತರ ವಿಚಾರಣೆಮಾಡಿ, ಸಂಸ್ಥಾನಕ್ಕೆ ಕೂಡಿಬರುವಂತೆ ಅಧಿಕಾರ ಮಾಡಿದ ಜನರ ಶೀಲ ಸ್ವಭಾವಗಳನ್ನು ತಿಳಿದು, ಅವರನ್ನು ಆಯಾ ಅಧಿಕಾರಗಳಲ್ಲಿ ನೇಮಿಸಿದರು.

ಒಂದಾನೊಂದುದಿನ ಧೊರೆಗಳು ತಮಗೆ ಆಪ್ತರಾದ ಜನರನ್ನು ಕರೆಯಿಸಿ " ಪೂರ್ವದಲ್ಲಿ ಧೊರೆತನ ಮಾಡುತ್ತಿದ್ದ ನಮ್ಮ ತಮ್ಮಂದಿರಾದ ಇಮ್ಮಡಿ ರಾಜಒಡೆಯರವರು ೨೧ನೇ ವರ್ಷದಲ್ಲಿ ಯಾವ ಉಪದ್ರವದಿಂದ ತೀರಿಹೋದರು ? ಇದಕ್ಕೆ ಏನಾದರೂ ನಿಮಿತ್ತ ಉಂಟೊ ? " ಎಂಬದಾಗಿ ಕೇಳಿದರು. " ಅವರಿಗೆ ದೇಹಕ್ಕೆ ಆಯಾಸವಾಗಿ ಇರುವ ಕಾಲದಲ್ಲಿ ದಳವಾಯಿ ವಿಕ್ರಮರಾಯರು ವೈದ್ಯನಿಂದ ವಿಷಚೂರ್ಣಪ್ರಯೋಗವನ್ನು ಮಾಡಿಸಿದ್ದರಿಂದ ತೀರಿಹೋದರೆಂಬ ವರ್ತಮಾನವನ್ನು ಕೇಳಿ ಇದ್ದೇವೆ " ಎಂದು ಅವರು ತಿಳಿಸಿದರು. ಅನಂತರದಲ್ಲಿ ಕಂಠೀರವ ನರಸರಾಜಒಡೆಯರವರು ಅಂತಃಪುರಕ್ಕೆ ಹೋಗಿ ವಿಚಾರಿಸುವಲ್ಲಿ ಹೀಗೆ ನಡೆದದ್ದು ಯಥಾರ್ಥವೆಂದು ಅವರು ತಿಳಿಸಿದರು. ಆಗ ದಳವಾಯಿ ವಿಕ್ರಮರಾಯರನ್ನೂ ವೈದ್ಯನನ್ನೂ ಕರೆಯಿಸಿ ಕೇಳಲು, ಅವರು ತಾವು ಹಾಗೆ ಮಾಡಿದ್ದು ಉಂಟು ಎಂದು ಒಪ್ಪಿಕೊಂಡರು. ಮಹಾರಾಜದ್ರೋಹವನ್ನು ಮಾಡಿದವರು ಇಂಥಾ ಅಧಿಕಾರದಲ್ಲಿ ಇರಬಾರದೆಂದು ತಿಳಿದು, ಕಂಠೀರವ ನರಸರಾಜ ಒಡೆಯರವರು ಅವರಿಗೆ ದಳವಾಯಿತನದ ಅಧಿಕಾರವನ್ನು ತೆಗೆದು, ಅವರಿಗೆ ಸಹಾಯಕರಾಗಿ ಇದ್ದ ಜನರೆಲ್ಲರಿಗೂ ತಮ್ಮ ತಂದೆಗಳಾದ ಬೆಟ್ಟದಚಾಮರಾಜ ಒಡೆಯರವರ ಅನುಮತಿಯಿಂದ ಪ್ರಾಣಾಂತ ಶಿಕ್ಷೆಯನ್ನು ಮಾಡಿಸಿದರು. ಅನಂತರದಲ್ಲಿ ಬಹುಧಾನ್ಯಸಂವತ್ಸರದ ಮಾರ್ಗಶಿರ ಶುದ್ಧ ೧ಲ್ಲಿ ತಿಮ್ಮಪ್ಪನಾಯಕನೆಂಬುವವನಿಗೆ ದಳವಾಯಿ ತನವು ನೇಮಕವಾಯಿತು.

ದೇಶಗಳನ್ನು ಕಟ್ಟಿದ್ದು.—

ಶಾ. ಶಕ ೧೫೬೩ನೇ ವಿಷುಸಂವತ್ಸರದ ಚೈತ್ರಬಹುಳ ೫ಲ್ಲಿ ಘಟ್ಟ ಮೊದಲ್ಯಾರಿಂದ ಸಾಂಬಳ್ಳಿ.

,, ಫಾಲ್ಗುನ ,, ೧ಲ್ಲಿ ದಂಟಳ್ಳಿ, ಶಿಂಗಾನಲ್ಲೂರು.

ಶಾ. ಶಕ. ೧೫೬೪ನೇ ಚಿತ್ರಭಾನು ಸಂ॥ ವೈಶಾಖ ಬಹುಳ ೫ಲ್ಲಿ ಅಬ್ದುಲ್‌ಖಾನನ ಕಡೆ ಯಿಂದ ತುರವೇಕೆರೆ, ಆನೇಬಾಗೂರು.

" " ಶ್ರಾವಣ ಶುದ್ಧ ೧ಲ್ಲಿ ಮಧುರೇ ಪಾಳ್ಯಗಾರ ಘಟ್ಟ ಮೊದಲ್ಯಾರಿಂದ ತೋಳದಹೋಬಳಿ ಚೆಂಗಪ್ಪಾಡಿಸ್ಥಳ, ಹೂರಟಿಹಳ್ಳಿಸ್ಥಳ.

೧೫೬೭ನೇ ತಾರಣ ಸಂವತ್ಸರದ ಚೈತ್ರಶುದ್ಧ ೧ಲ್ಲಿ ಹರಪನಹಳ್ಳಿ ಪುರದ ನಾರಸಿನಾಯಕ ನಿಂದ ಹಂಪಾಪುರ.

" ಪುಷ್ಯಬಹುಳ ೭ಲ್ಲಿ ನಂಜಾಂಡಅರಸಿನಿಂದ ಪಾಪುಸರ.

೧೫೬೮ನೇ ಪಾರ್ಥಿವ ಸಂ॥ ಆಶ್ವಯುಜ ಬಹುಳ ೧೦ಲ್ಲಿ ಪೆರಿಪಟ್ಟಣದ ನಂಜಾಂಡಅರಸಿ ನಿಂದ ಪೆರಿಪಟ್ಟಣ.

" ಕಾರ್ತಿಕ ಶುದ್ಧ ೧೫ಲ್ಲಿ ಬೆಟ್ಟದಪುರ.

" ಮಾರ್ಗಶಿರ " ೧ಲ್ಲಿ ರುದ್ರಪಟ್ಟಣ, ಮತ್ತು ಕಣ್ಣಾಗಾಲ.

" " ಬಹುಳ ೧೦ಲ್ಲಿ ಕಿತ್ತೂರು.

" ಪುಷ್ಯ ಶುದ್ಧ ೫ಲ್ಲಿ ನಂಜರಾಜಪಟ್ಟಣ.

೧೫೬೯ನೇ ವ್ಯಯ ಸಂವತ್ಸರದ ವೈಶಾಖ ಶುದ್ಧ ೧೦ಲ್ಲಿ ಭೈರಪ್ಪನಾಯಕನಿಂದ ತುರು ಕರು ಕಟ್ಟಿಕೊಂಡಿದ್ದ ಕಡಬ.

" ಆಷಾಢಬಹುಳ ೧೧ಲ್ಲಿ ಆ ಭೈರಪ್ಪನಾಯಕನಿಂದ ತುರಕರು ಕಟ್ಟಿಕೊಂಡಿದ್ದ ಮಾಯಿಸಮುದ್ರ.

೧೫೭೩ನೇ ಖರಸಂವತ್ಸರದಲ್ಲಿ ತುರಕರಿಂದ ಸೂಳಗೆರೆ ದುರ್ಗ, ನಾಯಕವಾಡಿ ಸಂಸ್ಥಾನ, ಯಲಹಂಕನಾಡು, ಹನುಮಪ್ಪನಾಯಕನಿಂದ ತುರಕರು ಕಟ್ಟಿ ಕೊಂಡಿದ್ದ ಚನ್ನಗಿರಿ, ಬಸವಾಪಟ್ಟಣ.

೧೫೭೪ನೇ ನಂದನ ಸಂವತ್ಸರದ ಮಾರ್ಗಶಿರ ಶುದ್ಧ ೫ಲ್ಲಿ ಪೂರ್ವದಲ್ಲಿ ಜಗದೇರಾಯ ನಿಂದ ವಿಜಾಪುರದ ತಿರುಮಲರಾಯನು ಕಟ್ಟಿಕೊಂಡಿದ್ದ ರತ್ನಗಿರಿ.

" " ಶುದ್ಧ ೧೦ಲ್ಲಿ ಜಗದೇರಾಯನಿಂದ ವಿಜಾ ಪುರದ ತುರಕರು ಕಟ್ಟಿಕೊಂಡಿದ್ದ ವೀರಭದ್ರನ ದುರ್ಗ ;

" " ಬಹುಳ ೭ಲ್ಲಿ ಆ ನಾಗಮಂಗಲದ ಜಗದೇ ರಾಯನಿಂದ ತುರಕರು ಕಟ್ಟಿಕೊಂಡಿದ್ದ ಕೆಂಗೆರೆ ಕೋಟೆ ;

" ಪುಷ್ಯ ಶುದ್ಧ ೧ಲ್ಲಿ ಪೆನ್ನಾಗಾರ.

" ಮಾಘ ಶುದ್ಧ ೧ಲ್ಲಿ ನಾಗಮಂಗಲದ ಜಗದೇ ರಾಯನಿಂದ ತುರುಕರು ಕಟ್ಟಿಕೊಂಡಿದ್ದ ಹೊಂಕಣೀಕೋಟೆ ;

" " ಶುದ್ಧ ೭ಲ್ಲಿ ಧರ್ಮಪುರಿ.

ಶಾ॥ ಶಕ ೧೫೬೩ನೇ ವಿಷು ಸಂವತ್ಸರದ ವೈಶಾಖ ಶುದ್ಧ ೩ಯಲ್ಲಿ ಘಟ್ಟ ಮೊದಲ್ಯಾರಿಂದ ಕಾವೇರೀಪುರ.

೧೫೬೮ನೇ ವ್ಯಯ „ ವೈಶಾಖ ಶುದ್ಧ ೬ಯಲ್ಲಿ ಪ್ರತಾಪನಾಯಕನಿಂದ ಕಲ್ಲೂರು.

೧೫೬೯ನೇ ಸರ್ವಜಿತು „ ಜ್ಯೇಷ್ಠ ಶುದ್ಧ ೧ರಲ್ಲಿ ಅರಕಲಗೂಡು ಕೃಷ್ಣಪ್ಪ ನಾಯಕನಿಂದ ಬಸವಾಪಟ್ಟಣ.

೧೫೭೨ನೇ ವಿಕೃತಿ „ ವೈಶಾಖ ಶುದ್ಧ ೧ರಲ್ಲಿ *ಕುಣಿಗಲು ಕೆಂಪೇಗೌಡ ನಿಂದ ಹೆಬ್ಬೂರು.

೧೫೭೩ನೇ ಖರ ಸಂವತ್ಸರದಲ್ಲಿ ತುಂಗದ ಜಂಗಾಳರಾಯನಿಂದ ತುಂಗ ಮತ್ತು ಇದಕ್ಕೆ ಸೇರಿದ ಗನ್ನೀಗ್ರಾಮ, ಮಾದಾಪುರ, ಕತ್ತರಿಘಟ್ಟ.

೧೫೭೬ನೇ ಜಯ „ ಚೈತ್ರ ಬಹುಳ ೬ಯಲ್ಲಿ ಚಂದ್ರಶೇಖರನಾಯಕ ನಿಂದ ಹೊಸೂರು.

೧೫೭೫ನೇ ವಿಜಯ „ ಫಾಲ್ಗುನ ಬಹುಳ ೪ಯಲ್ಲಿ †ಮಧುರೇ ವೆಂಕಟಾದ್ರಿನಾಯಕನಿಂದ ಸತ್ಯಮಂಗಲ.

„ „ ಈ ಶುದ್ಧ ೧೦ಯಲ್ಲಿ ಧಣಾಯಕನಕೋಟೆ.

---

*ಇವನ ಪೂರ್ವಿಕನು ದ್ರಾವಿಡದೇಶದಲ್ಲಿ ಕಾಂಚೀಪುರದ ಬಳಿಯಲ್ಲಿರುವ ಆಲೂರು ಗ್ರಾಮದಲ್ಲಿ ರೈತನಾಗಿದ್ದು, ಅಲ್ಲಿನ ಒಡೆಯರ ಬಾಧೆಯನ್ನು ತಾಳಲಾರದೆ ಹೊರಟು, ಬೆಂಗಳೂರಿಗೆ ಉತ್ತರದಲ್ಲಿ ಸುಮಾರು ೧೧ ಮೈಲುಗಳ ದೂರದಲ್ಲಿದ್ದ ಬೈಲಿಗೆ ಬಂದು, ಎಲಹಂಕವನ್ನು ಸ್ಥಾಪಿಸಿ, ಅದಕ್ಕೆ ತಾನು ಗೌಡನಾಗಿ, ಬೆಂಗಳೂರಿನ ಒಡೆಯರನ್ನು ಗೆದ್ದು ಅದನ್ನು ಸ್ವಾಧೀನ ಮಾಡಿಕೊಂಡನು. ಸಾವನದುರ್ಗದ ಕೋಟೆಯನ್ನೂ ಈಗಿನ ಬೆಂಗಳೂರು ಕೋಟೆಯನ್ನೂ ಕಟ್ಟಿಸಿದವರು ಈ ವಂಶಸ್ಥರೇ. ಈ ವಂಶಕ್ಕೆ ಮೂಲಪುರುಷನಾದ ವೀರೇಗೌಡನಿಗೆ ಐದನೇ ತಲೆಯವನು ಆಳುವಾಗ ವಿಜಾಪುರದ ರಣದುಲ್ಲಾಖಾನನು ಬಂದು ಬೆಂಗಳೂರು ಮೊದಲಾದ ಸ್ಥಳಗಳನ್ನು ತೆಗೆದುಕೊಂಡನು. ಶಾ॥ ಶಕ. ೧೬೫೦ರಲ್ಲಿ ಈ ವಂಶವನ್ನು ಮಹೀಶೂರ ದೊಡ್ಡ ಕೃಷ್ಣರಾಜ ಒಡೆಯರವರು ನಾಶಮಾಡಿದರು.

†ಈ ವಂಶಕ್ಕೆ ನಾಗಣ್ಣನಾಯಕನೆಂಬವನು ಮೂಲಪುರುಷನು. ಈ ವಂಶವು ಹುಟ್ಟಿದ್ದು ಶಾ॥ ಶಕ ೧೪೫೧ರಲ್ಲಿ. ಇಂಗ್ಲೀಷ್‌ನವರಿಗೆ ಪದೇಪದೇ ತೊಂದರೆಯನ್ನು ಕೊಡುತ್ತಿದ್ದ ದಕ್ಷಿಣದೇಶದ ಮೂರುಪಾಲು ಪಾಳ್ಯಗಾರರೆಲ್ಲಾ ಈ ವಂಶಕ್ಕೆ ಸೇರಿದ್ದವರು. ಇವರಲ್ಲೆಲ್ಲಾ ತಾತಿಯರ ಜಾತಿಯ ಪಾಳ್ಯಗಾರರು ಮಹಾ ಶೂರರು. ಈ ಜನರಲ್ಲಿ ಪೂರ್ವದಲ್ಲಿ ಪಾಂಡವರು ಮಾಡಿದಂತೆ ಒಬ್ಬ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಗಂಡುಮಕ್ಕಳು ಒಬ್ಬ ಸ್ತ್ರೀಯನ್ನೇ ಮದುವೆ ಮಾಡಿಕೊಳ್ಳತಕ್ಕ ಪದ್ಧತಿಯುಂಟು. ಈ ವಂಶಸ್ಥರು ಕೊಡಗು ಮೊದಲಾದ ಸ್ಥಳಗಳಲ್ಲಿ ಈಗಲೂ ಸಿಕ್ಕುತ್ತಾರೆ.

೧೫೭೭ನೇ ವಿಜಯಸಂವತ್ಸರದಲ್ಲಿ ಕಂಠೀರವ ನರಸರಾಜಒಡೆಯರವರು ಕಣಿವೇ ಕೆಳಗಣ ರಾಜ್ಯಗಳನ್ನು ಸಾಧಿಸಬೇಕೆಂದು ದಂಡನ್ನು ತೆಗೆದುಕೊಂಡು ಹೋದರು. ಆಗ ಮಧುರೇ ಪಾಳ್ಯಗಾರ ವೀರಪ್ಪನಾಯಕನು ಕೆಲವು ಜನ ಪಾಳ್ಯಗಾರರಿಗೆ ಸಹಾಯವಾಗಿ ಬಂದು, ಯುದ್ಧವನ್ನು ಮಾಡಿ, ಈ ಕಂಠೀರವ ನರಸರಾಜ ಒಡೆಯರವರ ಶೌರ್ಯವನ್ನು ತಿಳಿದು, ಕಪ್ಪವನ್ನು ಕೊಡುತ್ತೇನೆಂದು ಒಪ್ಪಿಕೊಂಡನು.

ಮಲಯಾಳದ ನಾಯಿಮಾರರೂ ಕೊಂಕಣದೇಶದ ತುಂಟಜನರೂ ಇವರ ಗಡಿಗಳ ಸರಹದ್ದಿಗೆ ಬಂದು ಬಹಳ ತುಂಟತನವನ್ನು ಮಾಡಿದರು. ಆಗ ಇವರು ಅವರಿಗೆ ತಕ್ಕ ಶಿಕ್ಷೆಯನ್ನು ಮಾಡಿಸಿ ಅವರು ಪುನಃ ಬರದಂತೆ ಮಾಡಿದರು.

ಪಿರಿಪಟ್ಟಣದ ನಂಜುಂಡಅರಸಿನಿಂದ ಅರು ಗಡಿಗಳನ್ನು ಸಾಧಿಸಿದ ವಿವರ.—ಈ ನಂಜುಂಡಅರಸು ರಾಜ ಒಡೆಯರವರ ಆಳಿಕೆಯಲ್ಲಿ ವರ್ಷಕ್ಕೆ ೩೦೦೦ ವರಹಾಗಳನ್ನು ಕೊಡುತ್ತೇನೆಂದು ಒಪ್ಪಿಕೊಂಡು, ಕೆಲವು ವರ್ಷ ಕೊಡುತ್ತಾ ಇದ್ದು, ಈಚಿಗೆ ನಿಲ್ಲಿಸಿಬಿಟ್ಟಿದ್ದನು. ಅದಕ್ಕೋಸ್ಕರ ಕಂಠೀರವ ನರಸರಾಜ ಒಡೆಯರವರು ಪಾರ್ಥಿವ ಸಂವತ್ಸರದ ಆಶ್ವಯುಜ ಬಹುಳ ೧೦ಯಲ್ಲಿ ಈ ನಂಜುಂಡಅರಸಿನ ಬಳಿಗೆ ತಮ್ಮ ಕಡೇ ದಳವಾಯಿ ನಂಜರಾಜಯ್ಯನನ್ನು ಕಳುಹಿಸಿಕೊಟ್ಟರು. ನಂಜರಾಜಯ್ಯನು ಪಿರಿಪಟ್ಟಣಕ್ಕೆ ಹೋಗಿ ಬಹು ದಿನಗಳಿಂದ ನಿಂತಿರತಕ್ಕ ಹಣವನ್ನು ಕೊಡು ಎಂದು ಕೇಳಲು, ನಂಜುಂಡಅರಸು ಜನಗಳ ದುರಾಲೋಚನೆಗೆ ಒಳಗಾಗಿ ಕೊಡುವದಿಲ್ಲವೆಂದು ಹೇಳಿಬಿಟ್ಟನು. ಈ ವರ್ತಮಾನವು ಧೊರೆಗಳಿಗೆ ತಿಳಿದದ್ದರಿಂದ, ಅವರು ಪಾರ್ಥಿವ ಸಂವತ್ಸರದ ಆಶ್ವಯುಜ ಬಹುಳ೧೩ಲ್ಲಿ ಸೈನ್ಯ ಸಮೇತರಾಗಿ ಪಿರಿಪಟ್ಟಣಕ್ಕೆ ದಯಮಾಡಿಸಿದರು. ಆಗ ನಂಜುಂಡಅರಸು ಇವರೊಡನೆ ಯುದ್ಧ ಮಾಡಲಾರದೆ ಓಡಿಹೋದನು. ಈ ವರ್ತಮಾನವನ್ನು ಕೇಳಿ, ಧೊರೆಗಳು ಅವನ ಅರಮನೆಯ ಭುವನೇಶ್ವರಿಯಲ್ಲಿದ್ದ ವಸ್ತ್ರಾಭರಣ ದ್ರವ್ಯಮುಂತಾದ ಪದಾರ್ಥಗಳನ್ನೂ ಆನೆ ಕುದುರೆ ಆಯುಧ ಮೊದಲಾದವುಗಳನ್ನೂ ತೆಗೆದುಕೊಂಡು ಶ್ರೀರಂಗಪಟ್ಟಣಕ್ಕೆ ಕಳುಹಿಸಿದರು. ಅನಂತರ ಈ ನಂಜುಂಡಅರಸು ತನ್ನ ಗಡಿಯಾದ ಬೆಟ್ಟದಪುರಕ್ಕೆ ಓಡಿ ಹೋದನು. ಈ ವರ್ತಮಾನವನ್ನು ಕೇಳಿ, ಧೊರೆಗಳು ಈ ಕಾರ್ತೀಕ ಶುದ್ಧ ೧೫ಲ್ಲಿ ಆ ಬೆಟ್ಟದಪುರವನ್ನು ಕಟ್ಟಿಕೊಂಡರು. ಅನಂತರ ಅವನು

ಬೆಟ್ಟದಪುರವನ್ನು ಬಿಟ್ಟು ರುದ್ರಪಟ್ಟಣಕ್ಕೆ ಹೋಗಲು, ಅದೇಸಂವತ್ಸರದ ಮಾರ್ಗಶಿರ ಶುದ್ಧ ೧ಯಲ್ಲಿ ಧೊರೆಗಳು ಅವನನ್ನು ಅಲ್ಲಿಂದ ಓಡಿಸಿ ಆರುದ್ರಪಟ್ಟಣವನ್ನು ಕಟ್ಟಿಕೊಂಡರು. ಅನಂತರದಲ್ಲಿ ಇವನು ಕಣಗಾಲಲ್ಲಿ ಇದ್ದಾನೆಂಬ ವರ್ತಮಾನವನ್ನು ತಿಳಿದು ಅಲ್ಲಿಗೆ ಹೋಗಿ ಅದನ್ನು ಸ್ವಾಧೀನಮಾಡಿಕೊಂಡರು. ಇವರ ಪೆಟ್ಟುಗಳನ್ನು ತಾಳಲಾರದೆ, ಈ ನಂಜುಂಡಅರಸು ಕಿತ್ತೂರಿಗೆ ಹೋಗಲು, ಕಂಠೀರವ ನರಸರಾಜಒಡೆಯರವರು ಈ ಮಾರ್ಗಶಿರಬಹುಳ ೧೧ಯಲ್ಲಿ ಕಿತ್ತೂರನ್ನು ಕಟ್ಟಿಕೊಂಡು ಅವನನ್ನು ಓಡಿಸಿಬಿಟ್ಟರು. ಅನಂತರದಲ್ಲಿ ಪೆರಿಪಟ್ಟಣದ ನಂಜುಂಡಅರಸು ತಾನು ಪೂರ್ವದಲ್ಲಿದ್ದ ನಂಜರಾಜಪಟ್ಟಣಕ್ಕೆ ಹೋಗಿ, ಬಹಳ ಶೂರರಾದ ಕೊಡಗರ ಮರೆಹೊಕ್ಕು, ಅವರನ್ನು ಸ್ವಾಧೀನಮಾಡಿಕೊಂಡನು. ಈ ವರ್ತಮಾನವನ್ನು ಕೇಳಿ, ಕಂಠೀರವ ನರಸರಾಜ ಒಡೆಯರವರು ಅಲ್ಲಿಗೆ ಸೇನಾಸಮೇತರಾಗಿ ಹೋಗಿ, ೭ ದಿವಸ ಅಹೋರಾತ್ರಿಗಳಲ್ಲಿಯೂ ಯುದ್ಧವನ್ನು ಮಾಡಿ, ಆ ಶೂರರಲ್ಲಿ ಅನೇಕರನ್ನು ಸಂಹಾರಮಾಡಿ, ಕೆಲವರನ್ನು ಓಡಿಸಿಬಿಟ್ಟು, ಆ ಪೆರಿಪಟ್ಟಣದ ನಂಜುಂಡಅರಸನನ್ನು ಸಂಹಾರಮಾಡಿ, ಈ ಪಾರ್ಥಿವ ಸಂವತ್ಸರದ ಪುಷ್ಯ ಶುದ್ಧ ೫ಯಲ್ಲಿ ನಂಜರಾಜಪಟ್ಟಣವನ್ನು ಕಟ್ಟಿಕೊಂಡು ಶ್ರೀರಂಗಪಟ್ಟಣಕ್ಕೆ ಬಂದರು.

ವಿಜಾಪುರದ ಪಾದಷಹಾರಕಡೆ ರಣದುಲ್ಲಾಖಾನ್ ಮುಂತಾದ ಶೂರಜನರನ್ನು ೧೬ ಸಾರಿ ಜಯಿಸಿ ಓಡಿಸಿದ ವಿಚಾರ.—ಬಸವಾಪಟ್ಟಣದ ಹನುಮಪ್ಪನಾಯಕನಿಗೂ, ಇಕ್ಕೇರಿ ವೀರಭದ್ರನಾಯಕನಿಗೂ ಪರಸ್ಪರ ದ್ವೇಷವಿತ್ತು. ಹನುಮಪ್ಪನಾಯಕನು, ಯಾರೂ ಸಹಾಯಕರಿಲ್ಲದ್ದರಿಂದ, ವೀರಭದ್ರನಾಯಕನನ್ನು ಜಯಿಸುವದು ಅಸಾಧ್ಯವೆಂದು ತಿಳಿದು, ತನ್ನ ಕಡೆಯ ಮಂತ್ರಿ ವೆಂಕಟದೇವ್ ಎಂಬುವನನ್ನು ಕರೆದು, ೩೦ ಸಾವಿರ ವರಹಾಗಳನ್ನೂ ಕೆಲವು ವಸ್ತ್ರಾಭರಣಗಳನ್ನೂ ಕೊಟ್ಟು, ಇವುಗಳನ್ನು ಕೈಗಾಣಿಕೆಮಾಡಿ, ಕೆಲವು ಸೇನೆಯನ್ನು ತೆಗೆದುಕೊಂಡು ಬಾ ಎಂದು ಹೇಳಿ, ಅವನನ್ನು ವಿಜಾಪುರದ ಪಾದಷಹಾರ ಬಳಿಗೆ ಕಳುಹಿಸಿಕೊಟ್ಟನು. ಆ ಪಾದಷಹಾರು ಇವುಗಳನ್ನು ಅಂಗೀಕರಿಸಿ ಹನುಮಪ್ಪನಾಯಕನ ಸಹಾಯಾರ್ಥವಾಗಿ ಕೆಲವು ಸೇನೆಯನ್ನು ಕಳುಹಿಸುವಂತೆ ಸಮ್ಮತಿಸಿದರು. ಪೂರ್ವದಲ್ಲಿ ಮಹೀಶೂರ ಚಾಮರಾಜಒಡೆಯರವರ ಆಳಿಕೆಯಲ್ಲಿ ನಾಗ

ಮಂಗಲದ ಜಗದೇರಾಯನ ಕಡೆಯ ಗುರಿಕಾರ ಚನ್ನಯ್ಯನೆಂಬವನು ಯುದ್ಧದಲ್ಲಿ ಓಡಿಹೋಗಿ, ವಿಜಾಪುರದ ಪಾದಷಹಾರ ಬಳಿಯಲ್ಲಿ ೨೦೦ ಕುದುರೆಗೆ ಗೊತ್ತುಗಾರನಾಗಿ ಇದ್ದನು. ಇವನು ಹನುಮಪ್ಪನಾಯಕನಿಗೆ ಪಾದಷಹಾರು ಸೈನ್ಯಸಹಾಯವನ್ನು ಮಾಡುತ್ತಾರೆಂದು ಕೇಳಿ, ಶ್ರೀರಂಗಪಟ್ಟಣವನ್ನು ತೆಗೆದುಕೊಳ್ಳುವದಕ್ಕೆ ಇದೇ ಸಮಯವೆಂದು ಯೋಚಿಸಿ, ಆ ಪಾದಷಹಾರಿಗೆ ಹೇಳಿದ್ದೇನಂದರೆ:—“ಈಗ ಶ್ರೀರಂಗಪಟ್ಟಣದಲ್ಲಿ ಹೊಸದಾಗಿ ಪಟ್ಟವಾಗಿರುವ ಧೊರೆಯು, ಹಳಬನಾಗಿಯೂ ಶೂರನಾಗಿಯೂ ಇದ್ದ ಅಲ್ಲಿನ ದಳವಾಯಿ ವಿಕ್ರಮರಾಯನನ್ನು, ತನ್ನ ಸಂಬಂಧಿ ಎಂಬದಾಗಿಯೂ ನೋಡದೆ ನಿರ್ನಿಮಿತ್ತವಾಗಿ ಸಂಹಾರಮಾಡಿ, ಅವನ ಅಧಿಕಾರವನ್ನು ಯಾವನೋ ಒಬ್ಬ ತಿಮ್ಮಪ್ಪನಾಯಕನೆಂಬವನಿಗೆ ಕೊಟ್ಟು ಇರುತ್ತಾನೆ. ಇದರಿಂದ ಅವನಿಗೆ ಸ್ವಜನ ವಿರೋಧವು ಬಹಳವಾಗಿ ಇದೆ. ಆದ್ದರಿಂದ ಶ್ರೀರಂಗಪಟ್ಟಣವನ್ನು ಸಾಧಿಸುವದಕ್ಕೆ ಇದೇ ಸಮಯವು.” ಹೀಗೆ ಹೇಳಿದ ಚನ್ನಯ್ಯನ ಮಾತುಗಳನ್ನು ಕೇಳಿ, ಪಾದಷಹಾರು, ತಮ್ಮ ಕಡೆಯ ಸೇನಾಪತಿಯಾದ ರಣದುಲ್ಲಾಖಾನನಿಗೆ ೪೦ ಸಾವಿರ ಕುದುರೆಗಳನ್ನೂ ಅದಕ್ಕೆ ತಕ್ಕ ಕಾಲ್ಬಲ ಮುಂತಾದ ಯುದ್ಧಸಾಮಗ್ರಿಗಳನ್ನೂ ಕೊಟ್ಟು, ಹನುಪ್ಪನಾಯಕನಿಗೆ ಸಹಾಯವಾಗಿಹೋಗಿ ವೀರಭದ್ರನಾಯಕನನ್ನು ಜಯಿಸಿದಮೇಲೆ, ನಾಗಮಂಗಲದ ಚನ್ನಯ್ಯನೊಡನೆ ಹೋಗಿ ಶ್ರೀರಂಗಪಟ್ಟಣವನ್ನು ಸಾಧಿಸಿಕೊಂಡು ಬರತಕ್ಕದ್ದು ಎಂದು ಅವನಿಗೆ ಕಟ್ಟು ಮಾಡಿದರು.

ಅನಂತರ ರಣದುಲ್ಲಾಖಾನನು ಸೇನಾಸಮೇತನಾಗಿ, ನಾಗಮಂಗಲದ ಚನ್ನಯ್ಯನೊಡಗೂಡಿ, ವೀರಕಂಕಣವನ್ನು ಕಟ್ಟಿಕೊಂಡು, ಬಹುಧಾನ್ಯ ಸಂವತ್ಸರದ ಪುಷ್ಯಬಹುಳ ೮ ಶುಕ್ರವಾರದಲ್ಲಿ ೫ ಹರದಾರಿ ಪರ್ಯಂತವೂ ದಂಡು ಇಳಿದುಕೊಂಡು, ಶ್ರೀರಂಗಪಟ್ಟಣಕ್ಕೂ ಮಹೀಶೂರ ಪುರಕ್ಕೂ ಮುತ್ತಿಗೆ ಹಾಕಿದನು. ಅನಂತರದಲ್ಲಿ ಆದಿನ ರಾತ್ರಿ, ಇವರು ಕೋಟೆಗೆ ಆಗ್ನೇಯಪಾರ್ಶ್ವದಲ್ಲಿಯೂ ಈಶಾನ್ಯ ಪಾರ್ಶ್ವದಲ್ಲಿಯೂ ಸುರಂಗಗಳನ್ನು ತೋಡಿ, ಕೋಟೆಯು ಹಾರಿಹೋಗುವಂತೆ ಬಹಳ ಮದ್ದು ಗುಂಡುಗಳನ್ನು ತುಂಬಿ ಸುರಂಗಗಳನ್ನು ಹಾರಿಸಿದರು. ಆಗ ಎರಡು ಮೂಲೆಗಳಲ್ಲಿಯೂ

ಕೋಟೆಯು ಬಿದ್ದುಹೋಗಿ, ಕೋಟೇಮೇಲೆ ಕಾದುಕೊಂಡಿದ್ದ ಸ್ವಲ್ಪ ಜನರೂ ಹತರಾದರು. ರಣದುಲ್ಲಾಖಾನನ ಕಡೆಯ ಜನರು ಲಗ್ಗೆಯನ್ನು ಏರಬೇಕೆಂಬಸಮಯದಲ್ಲಿ, ಕಂಠೀರವ ನರಸರಾಜಒಡೆಯರವರು ನರಸಿಂಹಾವತಾರವನ್ನು ತಾಳಿ, ಎರಡು ಕಡೆಯಲ್ಲಿಯೂ ಲಗ್ಗೆಯನ್ನೇರಿ ಬರುತ್ತಿರುವ ಶೂರರನ್ನೆಲ್ಲಾ ಅಡಿಯಿಡದಂತೆ ಕಾಲುಗಳನ್ನು ಕಡಿದು, ತಲೆಗಳನ್ನು ಒಡೆದು, ಕೋಟೇಹೊರಗೆ ಇರುವ ಕುದುರೆಗಳನ್ನು ತರಿದು, ಬಂಡಿಗಳನ್ನು ಮುರಿದು, ಆನೆಗಳನ್ನು ಇರಿದು, ಒಂಟೆಗಳನ್ನು ಓಡಿಸಿ, ಅತಿ ಭಯಂಕರವಾಗಿ ಯುದ್ಧ ಮಾಡುತ್ತಿರುವ ಶೂರರನ್ನು ಹೇಡಿಗಳನ್ನಾಗಿ ಮಾಡಿದರು.

ಆ ಬಳಿಕ ರಣದುಲ್ಲಾಖಾನನ ಸೇನೆಯು ಪೆಟ್ಟುಗಳನ್ನು ತಾಳಲಾರದೆ ದಿಕ್ಕುಕೆಟ್ಟು, ಅವನ ಬಳಿಗೆ ಓಡಿಹೋಗಿ, ಯುದ್ಧಮಾಡುವದಕ್ಕೆ ತಮ್ಮ ಕೈಲಾಗದೆಂದು ಹೇಳಿದರು. ಆ ಬಳಿಕ ರಣದುಲ್ಲಾಖಾನನು ಹನುಮಪ್ಪ ನಾಯಕ ಮುಂತಾದ ಸೇನಾಜನರನ್ನು ಕುರಿತು "ಮಹಾ ಪರಾಕ್ರಮಶಾಲಿಗಳಾದ ಈ ಕಂಠೀರವ ನರಸರಾಜ ಒಡೆಯರವರ ಸಂಗಡ ನಾವು ಯುದ್ಧ ಮಾಡಲಾರೆವು. ಏನಾದರೂ ಮಾಡಿ ಸಂಧಿ ಮಾಡಿಕೊಂಡು ಹೋಗುವದೇ ನಮಗೆ ಉಚಿತವು" ಎಂದು ಆಲೋಚನೆ ಮಾಡುತ್ತಿದ್ದನು. ಆಗ ನಾಗಮಂಗಲದ ಚೆನ್ನಯ್ಯನು ತನಗೆ ಅವಮಾನ ಬರುವದೆಂದು ತಿಳಿದು, "ಈ ದಿನ ಸಂಧಿ ಮಾಡಬೇಡಿ. ನಾನು ಅತಿ ರಹಸ್ಯವಾಗಿ ಪಟ್ಟಣಕ್ಕೆ ಹೋಗಿ, ಅಲ್ಲಿನ ಮರ್ಮವನ್ನು ತಿಳಿದು ಹೇಳಿಕಳುಹಿಸುತ್ತೇನೆ. ಆಗ ನಾನು ಹೇಳಿಕಳುಹಿಸಿದ ಮಾರ್ಗವಾಗಿ ನೀವೆಲ್ಲರೂ ಬರಬೇಕು" ಎಂದು ಹೇಳಿ, ಕನ್ನಂಬಾಡೀಮೇಲೆ ಬಳಗುಳದ ಮಾರ್ಗವಾಗಿ, ಬ್ರಹ್ಮಪುರಿಯ ಬಾಗಲಿಂದ ಆ ಬಹುಳ ೯ ಶನಿವಾರ ಕೋಟೆಯೊಳಕ್ಕೆ ಹೊಗಿ, ಅಲ್ಲಿನ ಜನರೆಲ್ಲರೂ ರಣದುಲ್ಲಾಖಾನನ ಸೇನೆಯು ಓಡಿಹೋಯಿತೆಂದು ಉದಾಸೀನರಾಗಿ ಇರುವದನ್ನು ನೋಡಿ, ಮರುದಿನವೇ ಕೋಟೇಯು ಬಿದ್ದಿರುವ ಮಾರ್ಗವಾಗಿ ಗುಂಡು ಹಾರಿಸುತ್ತಾ ಪಟ್ಟಣದ ಒಳಕ್ಕೆ ಬರಬಹುದು ಎಂದು ಹೇಳಿ ಕಳುಹಿಸಿದನು. ಅದೇಮೇರೆಗೆ ಆ ಬಹುಳ ೧೦ ಭಾನುವಾರ ಕೋಟೆಗೆ ಲಗ್ಗೆಯನ್ನೇರಿ ಬರಬೇಕೆಂಬ ಸಮಯದಲ್ಲಿ ದೊರೆಗಳ ಕಡೆಯವರು ಎಚ್ಚತ್ತು ಬಹು ಘೋರವಾಗಿ ಯುದ್ಧಮಾಡಿ ಅವರನ್ನು ಹಿಂದಟ್ಟಿದರು.

ಶ್ರೀರಂಗಪಟ್ಟಣದ ರಂಗನಾಥಸ್ವಾಮಿಯ ಕಟಾಕ್ಷದಿಂದ, ರಣದುಲ್ಲಾಖಾನನ ಸೇನಾಜನರು, ಕೋಟೇಮೇಲೆ ಅತಿಭಯಂಕರವಾದ ಅನೇಕ ರಾಕ್ಷಸರನ್ನು ಕಂಡಂತೆ ಆಗಿ ಭಯಪಟ್ಟು, ಪಟ್ಟಣಕ್ಕೆ ಬರುವದಕ್ಕೆ ಶಕ್ತಿಯಿಲ್ಲದೆ, ಎಲ್ಲರೂ ಓಡಿಹೋಗಿ, ಈ ವರ್ತಮಾನವನ್ನು ರಣದುಲ್ಲಾಖಾನನಿಗೆ ತಿಳಿಸಿದರು. ರಣಧೀರ ಕಂಠೀರವ ನರಸರಾಜ ಒಡೆಯರವರು ಈ ಸಮಾಚಾರವನ್ನು ಕೇಳಿ ಶ್ರೀರಂಗಪಟ್ಟಣದಲ್ಲಿ ಜಯ ಕಹಳೆಯನ್ನು ಹಿಡಿಸಿದರು.

ಅನಂತರದಲ್ಲಿ ಈ ರಣದುಲ್ಲಾಖಾನ್ ಮುಂತಾದ ಸರದಾರರು ಎರಡು ದಿವಸ ಲಗ್ಗೆಯನ್ನೇರಬೇಕೆಂದು ಹೊರಟರೂ ಅಪಜಯವಾಯಿತಾದ್ದರಿಂದ ಹಿಂದಿನದಿನ ಆಲೋಚಿಸಿದಂತೆ ಅವರೊಡನೆ ಸಂಧಿಮಾಡಿ ಖಂಡಣೆಯನ್ನು ಮಾಡಿಕೊಂಡು ಹೋಗಬೇಕೆಂದು ಯೋಚಿಸಿ, ಧೊರೆಗಳಿಗೆ ಆಪ್ತರಾದ ಕಾವೇರೀ ಹೆಬ್ಬಾರವ ಮಿಂಚುಹೆಬ್ಬಾರವರೆಂಬ ಇಬ್ಬರನ್ನು ಕರೆಯಿಸಿ “ಕಾವೇರಿಗೆ ದಕ್ಷಿಣ ಪಾರ್ಶ್ವದಲ್ಲಿರುವ ರಾಜ್ಯವೆಲ್ಲಾ ನಿಮ್ಮದೇ ಸರಿ; ಉತ್ತರ ಪಾರ್ಶ್ವದಲ್ಲಿ ಹುಟ್ಟಿದ ರಾಜ್ಯದ ಹಣದಲ್ಲಿ ಆ ರಾಜ್ಯದ ವೆಚ್ಚ ಕಳೆದು ನಿಂತ ಹಣವನ್ನು ನಮಗೆ ಕೊಡಬೇಕು ಎಂದು ಖಂಡಣೆಯನ್ನು ಮಾಡಿಕೊಂಡು ಬರುವದು” ಎಂಬದಾಗಿ ಅವರೊಡನೆ ಹೇಳಿದನು. ಆ ಮಾತನ್ನು ಕೇಳಿ, ಅವರಿಬ್ಬರೂ ಈ ವೃತ್ತಾಂತವನ್ನು ತಮ್ಮ ಧೊರೆಗಳಿಗೆ ಬಿನ್ನವಿಸಿ ಅಪ್ಪಣೆ ತೆಗೆದುಕೊಂಡು ಬರುತ್ತೇವೆಂದು ಹೇಳಿ ಹೊರಟು ಬರುತ್ತಿದ್ದರು.

ಅಷ್ಟರಲ್ಲಿಯೇ ಧೊರೆಗಳು ತಮಗೆ ಮುಖ್ಯ ಸ್ಥಾನವಾದ ಮಹೀಶೂರ ಕೋಟೆಯು ಏನಾಗಿದೆಯೋ ನೋಡಬೇಕೆಂದು, ಈ ಪುಷ್ಯ ಶುದ್ಧ ೧೧ ಸೋಮವಾರದಲ್ಲಿ ಕೆಲವು ಸೇನೆಯನ್ನು ತೆಗೆದುಕೊಂಡು ಇಲ್ಲಿಗೆ ಬಂದು, ಅರಮನೆಯಲ್ಲಿ ಮುಹೂರ್ತಮಾಡಿ, ಗುರಿಕಾರ ವೀರತ್ತಯ್ಯನೆಂಬವನನ್ನು ಕರೆದು, ಇಲ್ಲಿ ನಡೆದ ವರ್ತಮಾನ ವೇನು ಎಂದು ಕೇಳಿದರು. ಅದಕ್ಕೆ ವೀರತ್ತಯ್ಯನು ಹೇಳಿದ್ದೇನಂದರೆ:—ಕಾಡಬಸವನ ತಿಟ್ಟಿನ ಮೇಲೆ ರಣದುಲ್ಲಾಖಾನನ ಕಡೆಯ ಸೇನಾಜನರು, ಮಹೀಶೂರ ಕೋಟೆಯನ್ನು ಸ್ವಾಧೀನ ಮಾಡಿಕೊಳ್ಳ ಬೇಕೆಂದು, ಯುದ್ಧ ಸನ್ನದ್ಧರಾಗಿ ಲಕ್ಕೀ ಹಳ್ಳವನ್ನು ದಾಟಿ ವೀರಭದ್ರನಕೊತ್ತಲದ ಮಾರ್ಗವಾಗಿ ಬಂದು, ಕೋಟೇ ಮೇಲೆ ಕಾದುಕೊಂಡಿದ್ದ ಓಲೇಕಾರರನ್ನು ಹೊಡೆದು ಲಗ್ಗೆಯನ್ನು ಏರಬೇಕೆಂದು ಇದ್ದರು.

ಆಗ ನಮ್ಮ ಠಾಣೇದಾರ ಬಸವರಾಜಯ್ಯ, ಹೋಬಳೀದಾರ ಸಿದ್ದನಾಯಕ, ಬುರ್ಹಾಖಾನ್ ಮುಂತಾದವರು ಓಲೇಕಾರರನ್ನು ಜೊತೆಗೊಳಿಸಿಕೊಂಡು ತುಪಾಕಿಗಳನ್ನು ಹಾರಿಸಿ ಶತ್ರುಪಕ್ಷದವರನ್ನು ಹೊಡೆದು ಓಡಿಸಿದರು.

ಆ ಸಮಯದಲ್ಲಿ ರಣದುಲ್ಲಾಖಾನನ ಸೇನಾಜನಗಳಿಗೆ ಮಾತ್ರ ಕೋಟೇ ಮೇಲೆ ಅನೇಕ ಸ್ತ್ರೀಯರು ಕಾಣಿಸಲು, ಅವರು ಈ ಸ್ತ್ರೀಯರನ್ನು ಹೊಡೆಯುವದು ಅನುಚಿತವಾದ್ದರಿಂದ ಅವರನ್ನು ಓಡಿಸಿಬಿಟ್ಟು ಅನಂತರದಲ್ಲಿ ಕೋಟೆಯನ್ನು ಸ್ವಾಧೀನಕ್ಕೆ ತೆಗದುಕೊಳ್ಳಬೇಕೆಂದು ಪ್ರಯತ್ನ ಮಾಡಿದರು. ಆ ಬಳಿಕ ಸೇನಾಜನರು ಆ ಕೋಟೇ ಮಲಕಿನ ತೆನೆ ೧ಕ್ಕೆ ಮೂವರು ಮೂವರು ಸ್ತ್ರೀಯರು ತಲೆಯನ್ನು ಕೆದರಿಕೊಂಡು, ಹಸ್ತಗಳಲ್ಲಿ ಆಯುಧಗಳನ್ನು ಹಿಡಿದು, ಅತ್ಯಂತ ಭಯಂಕರವಾದ ರೂಪವುಳ್ಳವರಾಗಿ ನಿಂತಿರುವದನ್ನು ಕಂಡು, ಮುಂದಕ್ಕೆ ಅಡಿಯಿಡುವದಕ್ಕೆ ತೋರದೆ, ದೆಸೆಗೆಟ್ಟು, ಭಯದಿಂದ ಹಿಂದೆ ಮುಂದೆ ಏನೂ ತೋರದೆ ಕೂಗಿಕೊಂಡು ಓಡಿಹೋದರು. ಕೋಟೇ ಮೇಲೆ ಇದ್ದ ಜನರಿಗೆ ಏನೂ ಕಾಣಿಸಲಿಲ್ಲ. ಹೀಗೆಂದು ಆ ವೀರತ್ತಯ್ಯ ಮೊದಲಾದವರು ಬಿನ್ನವಿಸಲು, ಆ ಮಾತುಗಳನ್ನು ಕೇಳಿ, ಧೊರೆಗಳು ಮುಖ್ಯಾಭಿಮಾನಿಯಾಗಿ ಜಗಜ್ಜನನಿಯಾದ ಶ್ರೀಚಾಮುಂಡೇಶ್ವರಿಯೇ ಈ ರೂಪದಿಂದ ಕಾಣಿಸಿಕೊಂಡು ಅವರಿಗೆ ಭಯವನ್ನುಂಟುಮಾಡಿ ಓಡಿಸಿದಳೆಂದು ಅತ್ಯಂತವಾಗಿ ಸಂತೋಷಪಟ್ಟು, ಚಾಮುಂಡೇಶ್ವರಿಯನ್ನು ಬಹಳವಾಗಿ ಸ್ತೋತ್ರ ಮಾಡಿದರು.

ಅಷ್ಟರಲ್ಲಿಯೇ ಶ್ರೀರಂಗಪಟ್ಟಣದಿಂದ ಕಾವೇರೀ ಹೆಬ್ಬಾರವ ಮಿಂಚು ಹೆಬ್ಬಾರವರೆಂಬವರಿಬ್ಬರೂ ಧೊರೆಗಳ ಸನ್ನಿಧಿಗೆ ಬಂದು, "ಕಾವೇರೀ ದಕ್ಷಿಣ ಪಾರ್ಶ್ವದಲ್ಲಿ ಇರುವ ರಾಜ್ಯವು ನಿಮ್ಮದೇ ಸರಿ. ಎಂತಲೂ, ಉತ್ತರ ಪಾರ್ಶ್ವದಲ್ಲಿರುವ ರಾಜ್ಯದಲ್ಲಿ ಹುಟ್ಟಿದ ಹಣದಲ್ಲಿ ಆಯಾ ಗಡಿಗಳ ವೆಚ್ಚವು ಕಳೆದು ನಿಂತ ಹಣವನ್ನು ತನಗೆ ಕಳುಹಿಸುವದೆಂತಲೂ ರಣದುಲ್ಲಾಖಾನನು ಹೇಳಿ ಇರುತ್ತಾನೆ" ಎಂದು ಬಿನ್ನವಿಸಿದರು. ಆಗ ಧೊರೆಗಳು ಪ್ರಕೃತಕ್ಕೆ ಅದೇ ಉಚಿತವೆಂದು ಯೋಚಿಸಿ, ಹಾಗೆಯೇ ಆಗಲಿ ಎಂದು ಒಪ್ಪಿಕೊಂಡರು. ಈ ವಿಚಾರವನ್ನು, ಆ ಬ್ರಾಹ್ಮಣರು ರಣದುಲ್ಲಾಖಾನನಿಗೆ ತಿಳಿಸಲು, ಅವನು ಅದನ್ನು ಹನುಮಪ್ಪನಾಯಕನಿಗೆ ತಿಳಿಸಿ, ಅವನಿಗೆ ಸಹಾಯವಾಗಿ ಕೆಲವು ಸೇನೆಗಳನ್ನು ಈ ಪ್ರಾಂತ್ಯದಲ್ಲಿ ಇರಿಸಿ, ನಿಂತ ಸೇನೆಯನ್ನು ತೆಗೆದುಕೊಂಡು ವಿಜಾಪುರದ ಪಾದಷಾಹರ ಬಳಿಗೆ ಹೊರಟು ಹೋದನು.

ವಿಜಾಪುರದಲ್ಲಿ ರಣದುಲ್ಲಾಖಾನನಿಗೆ ಸೇನಾಧಿಪತ್ಯ ಹೋದ ವಿಚಾರ.— ವಿಕ್ರಮ ಸಂವತ್ಸರದಲ್ಲಿ, ಪೂರ್ವದಲ್ಲಿ ರಣದುಲ್ಲಾಖಾನನಿಂದ ಪರಾಜಿತನಾದ ಇಕ್ಕೇರಿ ವೀರಭದ್ರನಾಯಕನು, ತನ್ನ ಕಡೆಯ ನಿಯೋಗಿಗಳಾದ ಹೊವಯ್ಯ ಪುರುಷೋತ್ತಮಯ್ಯರೆಂಬವರಿಬ್ಬರ ಸಂಗಡ ವಿಜಾಪುರದ ಪಾದಷಹಾರ ಬಳಿಗೆ ಕೆಲವು ದ್ರವ್ಯ ವಸ್ತ್ರಾಭರಣಗಳನ್ನು ಕೊಟ್ಟು ಹೇಳತಕ್ಕ ಮಾತುಗಳನ್ನು ಹೇಳಿಕೊಟ್ಟು ಕಳುಹಿಸಿಕೊಟ್ಟನು. ಆ ನಿಯೋಗಿಗಳು ಪಾದಷಹಾರಿಗೆ ವಸ್ತ್ರಾಭರಣಾದಿಗಳನ್ನು ಒಪ್ಪಿಸಿ ಅವರನ್ನು ಕುರಿತು "ಪೂರ್ವದಲ್ಲಿ ಶ್ರೀರಂಗಪಟ್ಟಣವನ್ನು ಸಾಧಿಸುವದಕ್ಕೆ ರಣದುಲ್ಲಾಖಾನನ ಸಂಗಡ ೪೦ ಸಾವಿರ ಕುದುರೆಗಳನ್ನೂ ಬಸವಾಪಟ್ಟಣದ ಹನುಮಪ್ಪನಾಯಕನನ್ನೂ ನಾಗಮಂಗಲದ ಚನ್ನಯ್ಯನನ್ನೂ ಕಳುಹಿಸಿಕೊಟ್ಟಿರಿ. ಆಗ ಆ ರಣದುಲ್ಲಾಖಾನನು ಅಲ್ಲಿನ ಮರ್ಮವನ್ನು ತಿಳಿದಿರುವ ಈ ಚನ್ನಯ್ಯನ ಮಾತನ್ನು ಕೇಳದೆ, ಹನುಮಪ್ಪನಾಯಕನ ಮಾತಿನಮೇಲೆ ಸಂಧಿ ಮಾಡಿಕೊಂಡು, ಆ ದಂಡಣೇ ಹಣಕ್ಕೆ ಆ ಹನುಮಪ್ಪ ನಾಯಕನನ್ನೇ ಗೊತ್ತುಮಾಡಿ ಬಂದು ಇರುತ್ತಾನೆ. ಶ್ರೀರಂಗಪಟ್ಟಣದ ಧೊರೆಗಳು ಮಹಾ ಪರಾಕ್ರಮಶಾಲಿಗಳು" ಎಂದು ಹೇಳಿದರು. ಆ ಮಾತನ್ನು ಕೇಳಿ ಪಾದಷಹಾರು ಇದನ್ನು ಪರೀಕ್ಷೆ ಮಾಡಬೇಕೆಂದು, ತಮ್ಮ ಕಡೆ ಬುದ್ಧಿವಂತರಾದ ೪ ಮಂದಿ ಅಧಿಕಾರಿಗಳನ್ನು ಕರೆದು, ತಮ್ಮ ದಂಡಣೆ ಮೇರೆಗೆ ಕಾವೇರಿಗೆ ಉತ್ತರ ಪಾರ್ಶ್ವದಲ್ಲಿರುವ ರಾಜ್ಯದ ಹಣವನ್ನು ಪ್ರಮಾಥಿ ಸಂವತ್ಸರದ ಹುಟ್ಟುವಳಿ ಲೆಕ್ಕದ ಮೇರೆಗೆ ಕೊಡಬೇಕೆಂಬದಾಗಿ ಶ್ರೀರಂಗಪಟ್ಟಣದ ಧೊರೆಗಳನ್ನು ಕೇಳುವಂತೆ ಕಟ್ಟುಮಾಡಿ, ಅವರನ್ನು ಕಳುಹಿಸಿಕೊಟ್ಟರು. ಹಾಗೆಯೇ ಅವರು ಬಂದು ಕೇಳಲು, ಧೊರೆಗಳು ಕೊಡುವದಿಲ್ಲವೆಂದು ಹೇಳಿಕಳುಹಿಸಿದರು. ಅದಕ್ಕೆ ಪಾದಷಹಾರು ರಣದುಲ್ಲಾಖಾನನ ಮೇಲೆ ಬಹಳ ಕೋಪ ಮಾಡಿಕೊಂಡು, ಅವನ ಅಧಿಕಾರವನ್ನು ತೆಗೆದು, ಅದೇ ೪೦ ಸಾವಿರ ಕುದುರೆಗಳ ಸೇನಾಧಿಪತ್ಯವನ್ನು ಕೆರ್ಖಖಾನ ಎಂಬುವನಿಗೆ ನೇಮಕಮಾಡಿ, ನಾಗಮಂಗಲದ ಚನ್ನಯ್ಯನನ್ನೂ ಇಕ್ಕೇರಿ ವೀರಭದ್ರ ನಾಯಕನನ್ನೂ ಅವನ ಸಹಾಯಕ್ಕೆ ಕೊಟ್ಟು, ಶ್ರೀರಂಗಪಟ್ಟಣವನ್ನು ಸಾಧಿಸಿಕೊಂಡು ಬರುವಂತೆ ಕಟ್ಟುಮಾಡಿ ಕಳುಹಿಸಿ ಕೊಟ್ಟರು.

ಸೈನ್ಯಾಧಿಪತಿ ಕರ್ನಾಖಾನ್. ——ಕರ್ನಾಖಾನನು ಸೇನಾಸಮೇತನಾಗಿ ಬರುವ ಮಾರ್ಗದಲ್ಲಿ "ಕೆಲವು ಸೇನೆಯನ್ನು ತೆಗೆದುಕೊಂಡು ಬಸವಾಪಟ್ಟಣದ ಹನುಮಪ್ಪನಾಯಕನ ಬಳಿಗೆ ಹೋಗಿ ಶ್ರೀರಂಗಪಟ್ಟಣದ ಖಂಡಣೀ ಹಣವನ್ನು ತೆಗೆದುಕೊಂಡು ಬಾ" ಎಂದು ಚನ್ನಯ್ಯನ ಸಂಗಡ ಹೇಳಿ ಕಳುಹಿಸಿದನು. ಆ ಚನ್ನಯ್ಯನು ಅದೇಮೇರಿಗೆ ಹನುಮಪ್ಪನಾಯಕನ ಬಳಿಗೆ ಹೋಗಿ, "ನೀನು ಪೂರ್ವದಲ್ಲಿ ಶ್ರೀರಂಗಪಟ್ಟಣದಲ್ಲಿ ಖಂಡಣಿ ಮಾಡಿಕೊಂಡು ಇರುವಂತೆ ಹಣವನ್ನು ತೆಗೆದುಕೊಂಡು ಬಂದರೆ ಅದನ್ನು ಪಾದಷಹಾರ ಬಳಿಗೆ ಕಳುಹಿಸ ಬೇಕಾಗಿದೆ; ನೀನು ಹಾಗೆ ಮಾಡದೆ ಅಂಟೇ ಮಾಡಿದರೆ ನಿನ್ನನ್ನು ಹಿಡಿದು ಪಾದಷಹಾರ ಬಳಿಗೆ ಕಳುಹಿಸ ಬೇಕೆಂದು ಅಪ್ಪಣೆಯಾಗಿ ಇದೆ" ಎಂದು ನುಡಿದನು. ಆ ಮಾತನ್ನು ಕೇಳಿದ ಹನುಮಪ್ಪನಾಯಕನು, ತಾನು ಅಲ್ಲಿಗೆ ಹೋಗುವದಿಲ್ಲವೆಂದು ಹೇಳಿದ್ದು ಮಾತ್ರವಲ್ಲದೆ, ಆಮೇಲೆ ಆ ಚನ್ನಯ್ಯನು ತನ್ನನ್ನು ಬಲಾತ್ಕಾರದಿಂದ ಹಿಡಿಸಿ ಕಳುಹಿಸುತ್ತಾನೆಂಬ ವರ್ತಮಾನವನ್ನು ತಿಳಿದು, ಸೈನ್ಯವನ್ನು ತೆಗೆದುಕೊಂಡು ಅವನಮೇಲೆ ಯುದ್ಧಮಾಡಿ ಅವನನ್ನು ಕೊಂದುಹಾಕಿದನು. ಈ ವರ್ತಮಾನವನ್ನು ಕರ್ನಾಖಾನನು ಕೇಳಿ, ಶ್ರೀರಂಗಪಟ್ಟಣದ ಮರ್ಮವನ್ನು ತಿಳಿದ ಚನ್ನಯ್ಯನು ತೀರಿಹೋದದ್ದರಿಂದಲೂ, ಇಕ್ಕೇರಿ ವೀರಭದ್ರನಾಯಕನಿಗೆ ಏನೂ ತಿಳಿಯದ್ದರಿಂದಲೂ, ಮಹಾ ಪರಾಕ್ರಮಶಾಲಿಗಳಾದ ಕಂಠೀರವ ನರಸರಾಜ ಒಡೆಯರವರೊಡನೆ ಯುದ್ಧ ಮಾಡುವದಕ್ಕೆ ತನಗೆ ಸಾಮರ್ಥ್ಯವಿಲ್ಲವೆಂದು ತಿಳಿದು, ಹಿಂತಿರುಗಿ ಹೋಗುವ ಮಾರ್ಗದಲ್ಲಿ, ಈ ತುಂಟತನವನ್ನು ಮಾಡಿದ ಬಸವಾಪಟ್ಟಣದ ಹನುಮಪ್ಪನಾಯಕನನ್ನು ಯುದ್ಧದಲ್ಲಿ ಕೊಂದು, ತಂಜೆಯೆಂಬ ಗ್ರಾಮವನ್ನು ಸಾಧಿಸಬೇಕೆಂದು ಅಲ್ಲಿನ ಪಾಳ್ಯಗಾರನ ರಾಜ್ಯದಲ್ಲಿ ಸ್ವಲ್ಪಸೈನ್ಯವನ್ನು ಇಟ್ಟು, ವಿಜಾಪುರಕ್ಕೆ ಹೋಗಿ ಈ ವಿವರಗಳನ್ನೆಲ್ಲಾ ಪಾದಷಹಾರಿಗೆ ತಿಳಿಸಿದನು. ಆಗ ಪಾದಷಹಾರು ಅವನ ಮೇಲೆ ಕೋಪಿಸಿ, ಅವನ ಅಧಿಕಾರವನ್ನು ತೆಗೆದು ಮುಸ್ತಾಫಖಾನ್ ಎಂಬವನಿಗೆ ಕೊಟ್ಟು, ಶ್ರೀರಂಗಪಟ್ಟಣವನ್ನು ಸಾಧಿಸಿಕೊಂಡು ಬರುವಂತೆ ಹೇಳಿ ಕಳುಹಿಸಿದರು.

ಸೈನ್ಯಾಧಿಪತಿ ಮುಸ್ತಾಫಖಾನ್.—ಮುಸ್ತಾಫಖಾನನು ತಂಜೆ ಯೆಂಬ ಪಾಳ್ಯವನ್ನು ಸಾಧಿಸಿಕೊಂಡು ಶ್ರೀರಂಗಪಟ್ಟಣದ ಕಡೆಗೆ ಬರುತ್ತಿದ್ದನು.

ಕಂಠೀರವ ನರಸರಾಜ ಒಡೆಯರವರು ಈ ವರ್ತಮಾನವನ್ನು ಕೇಳಿ, ತಮ್ಮ ದಳವಾಯಿ ತಿಮ್ಮಪ್ಪನಾಯಕನನ್ನು ಕರೆದು, ಮುಸ್ತಾಫಖಾನನು ಇಲ್ಲಿಗೆ ಬರದಂತೆ ಸೇನೆಯನ್ನು ತೆಗೆದುಕೊಂಡು ಹೋಗಿ ಅವನನ್ನು ಓಡಿಸಿಬಿಡುವುದೆಂದು ಅವನಿಗೆ ಆಜ್ಞೆ ಮಾಡಿ ಕಳುಹಿಸಿಕೊಟ್ಟರು. ಬೆಳ್ಳೂರು ಬಳಿ ಚಂದಮ್ಮನ ಹಳ್ಳಿಯ ಸಮೀಪದಲ್ಲಿ ಇದ್ದ ಮುಸ್ತಾಫಖಾನನು "ಪೂರ್ವದ ಖಂಡಣೆ ಮೇರೆಗೆ ಹಣವನ್ನು ಕೊಟ್ಟರೆ ಹೊರಟು ಹೋಗುತ್ತೇವೆ ; ಇಲ್ಲದಿದ್ದರೆ ನಿಮ್ಮ ಸಂಗಡ ಯುದ್ಧ ಮಾಡಿ ಶ್ರೀರಂಗಪಟ್ಟಣವನ್ನು ತೆಗೆದುಕೊಳ್ಳುತ್ತೇವೆ" ಎಂದು ದಳವಾಯಿ ತಿಮ್ಮಪ್ಪನಾಯಕನ ಬಳಿಗೆ ತನ್ನ ನಿಯೋಗಿ ಹೊವಯ್ಯನೊಡನೆ ಹೇಳಿ ಕಳುಹಿಸಿದನು. ತಿಮ್ಮಪ್ಪನಾಯಕನು ಅವನ ಸಂಗಡ ಯುದ್ಧ ಮಾಡದೆ, ಶ್ರೀರಂಗಪಟ್ಟಣಕ್ಕೆ ಬಂದು, ಈ ವಿವರವನ್ನು ಧೊರೆಗಳಿಗೆ ತಿಳಿಸಿದನು. ಧೊರೆಗಳು ಆ ಮಾತನ್ನು ಕೇಳಿ "ಯುದ್ಧ ಮಾಡಿ ಓಡಿಸಿಬಿಡದೆ ನೀನೇ ಬಂದು ಹೇಳಿದ್ದರಿಂದ, ನೀನು ಈ ಅಧಿಕಾರಕ್ಕೆ ಯೋಗ್ಯನಲ್ಲ" ಎಂದು ಅವನ ಮೇಲೆ ಕೋಪಿಸಿ, ವಿಕ್ರಮಸಂವತ್ಸರದ ಪುಷ್ಯ ಬಹುಳ ೬ಯಲ್ಲಿ ಅವನ ಅಧಿಕಾರವನ್ನು ತೆಗೆದು, ಅದೇ ದಿನ ನಂಜರಾಜಯ್ಯನೆಂಬವನಿಗೆ ದಳವಾಯಿತನವನ್ನು ನೇಮಿಸಿದರು.

ಅನಂತರದಲ್ಲಿ ಧೊರೆಗಳು ಚತುರಂಗ ಸೇನಾ ಸಮೇತರಾಗಿ ನಂಜರಾಜಯ್ಯನನ್ನು ಕರೆದುಕೊಂಡು ಹೊರಟು, ಚಂದಮ್ಮನೆಂಬ ಗ್ರಾಮದ ಬಳಿ ಸೇನಾಸಮೇತನಾಗಿ ಇಳಿದಿರುವ ಮುಸ್ತಾಫಖಾನನ ಸಂಗಡ ತಮ್ಮ ಪರಾಕ್ರಮದಿಂದ ಬಹಳ ಯುದ್ಧ ಮಾಡಿ, ಆನೆಗಳನ್ನು ಹೊಡೆದು ಓಡಿಸಿ, ಕುದುರೆಗಳ ಕತ್ತುಗಳನ್ನು ಕತ್ತರಿಸಿ, ಒಂಟೆಗಳಿಗೆ ಓಡುವದಕ್ಕೆ ಅವಕಾಶವಿಲ್ಲದಂತೆ ಮಾಡಿ, ಕತ್ತಿಗಳನ್ನು ಹಿಡಿದಿರುವ ಜನರ ಕೈಗಳನ್ನು ಕತ್ತರಿಸಿ, ಬಂಡಿಗಳನ್ನು ಬೈಲುಮಾಡಿ, ತುಪಾಕಿಗಳನ್ನು ಜನರು ಹಿಡಿಯದಂತೆ ಕಾಡುಪಾಲುಮಾಡಿ, ಮುಸ್ತಾಫಖಾನನ ಸೈನ್ಯವನ್ನೆಲ್ಲಾ ಧ್ವಂಸಮಾಡಿದರು. ಮುಗಲ್ ಪಠಾಣ್ ಮುಂತಾದ ಶೂರರೆಲ್ಲರೂ ಅವರ ಎದುರಿಗೆ ನಿಂತು ಯುದ್ಧ ಮಾಡಲಾರದೆ, ತಮ್ಮ ತಮ್ಮ ಪ್ರಾಣಗಳನ್ನು ಉಳಿಸಿಕೊಂಡು ಓಡಿಹೋದರು. ಅನಂತರ ಹತಶೇಷ ಜನರೆಲ್ಲರೂ ಪಾದಾಕ್ರಾಂತರಾಗಲು, ಕಂಠೀರವ ನರಸರಾಜ ಒಡೆಯರವರು, ಅವರಿಗೆ ಅಭಯವನ್ನು ಕೊಟ್ಟು, ಆ ಸೈನ್ಯದಲ್ಲಿದ್ದ

ಆನೆ ಕುದುರೆ ಒಂಟೆ ವಸ್ತ್ರಾಭರಣ ದ್ರವ್ಯ ಮದ್ದು ಗುಂಡು ಕತ್ತಿ ಕಠಾರಿ ತುಪಾಕಿ ಮುಂತಾದ ಅನೇಕ ಪದಾರ್ಥಗಳನ್ನು ತೆಗೆದುಕೊಂಡು, ಇವರ ಭುಜಬಲಕ್ಕೆ ಸಾಟಿಯಿಲ್ಲವೆಂದು ಹೊಗಳಿಸಿಕೊಳ್ಳುತ್ತಾ, ಜಯಭೇರಿಯನ್ನು ಹೊಡೆಯಿಸಿಕೊಂಡು, ಅತ್ಯಂತ ಸಂಭ್ರಮದೊಡನೆ ಶ್ರೀರಂಗಪಟ್ಟಣಕ್ಕೆ ಚಿತ್ತಯಿಸಿದರು.

ವೇಮಾಜೀಪಂತನ ವಿಚಾರ.—ಅನಂತರದಲ್ಲಿ ಮುಸ್ತಫಖಾನನು ವಿಜಾಪುರಕ್ಕೆ ಹೋಗಿ, ರಣಧೀರ ಕಂಠೀರವ ನರಸರಾಜ ಒಡೆಯರವರ ಪರಾಕ್ರಮವನ್ನು ಪಾದಷಹಾರಿಗೆ ತಿಳಿಸಿದನು. ಆಗ ಅಲ್ಲಿನ ವಜೀರರೆಲ್ಲರೂ ಕೂಡಿ, ಶ್ರೀರಂಗಪಟ್ಟಣವನ್ನು ಸಾಧಿಸುವದಕ್ಕೆ ಉಪಾಯವನ್ನು ಯೋಚಿಸುತ್ತಿರಲು, ಅಲ್ಲಿ ಒಂದಾನೊಂದು ಅಧಿಕಾರದಲ್ಲಿದ್ದ ವೇಮಾಜೀಪಂತನೆಂಬವನು ಪಾದಷಹಾರನ್ನು ಕುರಿತು "ನಾನು ಈಗ ನಂಜನಗೂಡು ತಿರಮಕೂಡಲು ಜಾತ್ರೆಗಳಿಗೆ ಹೋಗಿ, ದೇವರ ದರ್ಶನವನ್ನು ಮಾಡಿಕೊಂಡು, ಶ್ರೀರಂಗಪಟ್ಟಣವನ್ನು ಸಾಧಿಸುವದಕ್ಕೆ ಉಪಾಯವನ್ನು ತಿಳಿದುಕೊಂಡು ಬರುತ್ತೇನೆ. ನನಗೆ ಸಹಾಯವಾಗಿ ಸ್ವಲ್ಪ ಸೈನ್ಯವನ್ನೂ ಅಬ್ದುಲ್ಲಾಖಾನನೆಂಬ ಸರದಾರನನ್ನೂ ಕಳುಹಿಸಿಕೊಟ್ಟರೆ, ಹಿಂತಿರುಗಿ ಬರುವಾಗ ಮಾರ್ಗದಲ್ಲಿ ಕೆಲವು ಗ್ರಾಮಗಳನ್ನು ಲೂಟಿಮಾಡಿಕೊಂಡು ಮತ್ತು ಕೆಲವು ಗ್ರಾಮಗಳನ್ನು ಕಟ್ಟಿಕೊಂಡು ಬರುತ್ತೇನೆ" ಎಂದು ಹೇಳಿದನು. ಪಾದಷಹಾರು ಅದೇ ಮೇರೆಗೆ ಅಪ್ಪಣೆ ಕೊಡಲು, ವೇಮಾಜೀಪಂತನು ವಿಷುಸಂವತ್ಸರದ ಚೈತ್ರ ಶುದ್ಧದಲ್ಲಿ ತಿರಮಕೂಡಲಿಗೆ ಹೋಗಿ, ದೇವರ ದರ್ಶನವನ್ನು ಮಾಡಿಕೊಂಡು, ಅಲ್ಲಿಂದ ನಂಜನಗೂಡಿಗೆ ಹೋಗಿ, ಶ್ರೀಕಂಠೇಶ್ವರಸ್ವಾಮಿಯ ದರ್ಶನವನ್ನು ಮಾಡಿಕೊಂಡು, ಶ್ರೀರಂಗಪಟ್ಟಣದ ವರ್ತಮಾನವನ್ನು ತಿಳಿದುಕೊಂಡು, ಹೊರಬ್ಚಾಗಿ ಹೊರಟು, ತಿಪ್ಪೂರು ಹಂಪಾಪುರ ಅಕ್ಕೀಹೆಬ್ಬಾಳು ಕನ್ನಂಬಾಡಿ ಗನ್ನಿ ನಲ್ಲೂರು ಮಾದಾಪುರ ಕತ್ತರಿಘಟ್ಟ ಹೊಸಳ್ಳಲು ಮುಂತಾದ ಗ್ರಾಮಗಳನ್ನು ಲೂಟಿಮಾಡಿದನು. ಈ ವರ್ತಮಾನವನ್ನು ಧೊರೆಗಳು ಕೇಳಿ, ಕೆಲವು ಸೈನ್ಯವನ್ನು ತೆಗೆದುಕೊಂಡು ಹೋಗಿ ಅವರನ್ನು ಓಡಿಸಿಬಿಡುವಂತೆ ದಳವಾಯಿ ನಂಜರಾಜಯ್ಯನಿಗೆ ನೇಮಿಸಿದರು. ಆ ನಂಜರಾಜಯ್ಯನು ಸೇನಾಸಮೇತನಾಗಿ ಹೋಗಿ, ಅವರನ್ನು ಹೊಡೆದು ಓಡಿಸಿ, ಅವರ

ದಂಡಿನಲ್ಲಿದ್ದ ಆನೆ ಕುದುರೆ ಮುಂತಾದವುಗಳನ್ನು ತೆಗೆದುಕೊಂಡು ಹಿಂತಿರುಗಿದನು. ದಾರಿಯಲ್ಲಿ ಪೂರ್ವದಲ್ಲಿ ಗುಂಡು ತಗಲಿ ಇದ್ದ ಒಂದು ಗಂಡಾನೆ ಮಾತ್ರ ಮೃತವಾಯಿತು. ನಂಜರಾಜಯ್ಯನು, ಲೂಟಿಮಾಡಿ ಇದ್ದ ಗ್ರಾಮಗಳ ಪ್ರಜೆಗಳನ್ನು ಕರೆಯಿಸಿ, ಕೌಲುಕರಾರುಗಳನ್ನು ಮಾಡಿ, ಪೂರ್ವದಂತೆಯೇ ಸುಖದಲ್ಲಿ ಇರುವಂತೆ ಅಲ್ಲಿನ ಅಧಿಕಾರಿಗಳಿಗೆ ಹೇಳಿ, ಶ್ರೀರಂಗಪಟ್ಟಣಕ್ಕೆ ಬಂದು, ಧೊರೆಗಳಿಗೆ ಯುದ್ಧದಲ್ಲಿ ತೆಗೆದುಕೊಂಡು ಬಂದಿದ್ದ ಪದಾರ್ಥಗಳನ್ನೆಲ್ಲಾ ಒಪ್ಪಿಸಿ, ನಡೆದ ವಿಚಾರವನ್ನು ಬಿನ್ನವಿಸಿದನು.

ಈ ಕಡೆಯಲ್ಲಿ ನಂಜರಾಜಯ್ಯನ ಪೆಟ್ಟುಗಳನ್ನು ತಾಳಲಾರದೆ ಓಡಿಹೋದ ವೇಮಾಜೀಪಂತನು ಅಬ್ದುಲ್ಲಾ ಖಾನನೊಡನೆ ಸೇರಿಕೊಂಡು, ಮಾರ್ಗ ಮಧ್ಯದಲ್ಲಿ ಸಿಕ್ಕಿದ ತುರವೇಕೆರೆಯ ಪಾಳ್ಯಗಾರನನ್ನು ಹೊಡೆದು, ಅವನ್ನು ಕಟ್ಟಿಕೊಂಡು, ಆ ಅಬ್ದುಲ್ಲಾ ಖಾನನನ್ನು ಅಲ್ಲಿ ಇರಿಸಿ, ತಾನು ಮಾತ್ರ ವಿಜಾಪುರಕ್ಕೆ ಹೋಗಿ, ಕಂಠೀರವ ನರಸರಾಜ ಒಡೆಯರವರು ಪರಾಕ್ರಮಶಾಲಿಗಳೂ ದೇವತಾಕಟಾಕ್ಷಕ್ಕೆ ಪಾತ್ರರೂ ಆದ್ದರಿಂದ, ಅವರನ್ನು ಜಯಿಸಿ ಶ್ರೀರಂಗಪಟ್ಟಣವನ್ನು ಸ್ವಾಧೀನ ಮಾಡಿಕೊಳ್ಳುವದಕ್ಕೆ ಆಗುವದಿಲ್ಲವೆಂದು ಪಾದಷಹಾಗೆ ತಿಳಿಸಿದನು.

ತುರವೇಕೆರೆಯನ್ನು ಪುನಃ ಸ್ವಾಧೀನಕ್ಕೆ ತೆಗೆದುಕೊಂಡದ್ದು.— ಅಬ್ದುಲ್ಲಾ ಖಾನನು ತುರವೇಕೆರೆಯ ಪಾಳ್ಯಗಾರನನ್ನು ಕೊಂದು ತಾನು ಅಲ್ಲಿ ಇರುತ್ತಾನೆಂಬ ವರ್ತಮಾನವನ್ನು ಧೊರೆಗಳು ಕೇಳಿ ಅಲ್ಲಿಗೆ ನಂಜರಾಜಯ್ಯನನ್ನು ಸೈನ್ಯಸಹಿತವಾಗಿ ಕಳುಹಿಸಿಕೊಟ್ಟರು. ನಂಜರಾಜಯ್ಯನು ಅಬ್ದುಲ್ಲಾ ಖಾನನನ್ನು ಹೊಡೆದು ಓಡಿಸಿ, ಅವನಲ್ಲಿದ್ದ ೪೦ ಕುದುರೆ ಬೊಕ್ಕಸವೆಂಬ ೧ ಗಂಡಾನೆ ಅನೇಕ ವಸ್ತ್ರಾಭರಣ ದ್ರವ್ಯಮುಂತಾದ್ದನ್ನು ತೆಗೆದುಕೊಂಡು ಆ * ತುರವೇಕೆರೆಯನ್ನು ಸ್ವಾಧೀನಪಡಿಸಿಕೊಂಡನು.

ತಿರುಚಿನಾಪಳ್ಳಿಯ ಅರಸು ಕಳುಹಿಸಿದ ೭೫ ಮಂದಿಕಳ್ಳರ ವಿಚಾರ.— ಪ್ರಮಾಥಿಸಂವತ್ಸರದಲ್ಲಿ ನಡೆದದ್ದು.— ವಿಜಾಪುರದ ರಣದುಲ್ಲಾ ಖಾನನು ಕಂಠೀರವ ನರಸರಾಜ ಒಡೆಯರವರಿಂದ ಪರಾಜಿತನಾಗಿ ಓಡಿಹೋದನೆಂಬ ವರ್ತಮಾನವನ್ನು, ತಿರುಚಿನಾ

* ೬೮ನೇ ಪುಟ ೧ನೇ ಪಙ್ತಿ.



ಶ್ರೀ [illegible]
[illegible] ಯ [illegible] ಹಾಗಿದ್ದರು.

ದಂಡಿನ

ಗಿದನು

ಮಾತ್ರ

ಗಳ ಪ್ರ

ತೆಯೇ

ಣಕ್ಕೆ ಆ

ರ್ಥಗಳ

ಹೋದ

ಮಾರ್ಗ

ಅದನ್ನು

ಮಾತ್ರ

ಪರಾಕ್ರ

ಜಯಿಸಿ

ದಿಲ್ಲವೆಂದ

ಅಬ್ದುಲ್ಲಾ

ಇರುತ್ತಾ

ನನ್ನ ಸೈ

ಖಾನನನ್ನು


೧ ಗಂಡಾನ

೨ * ತುರ

ತಿರುಚನ

ಪ್ರಮಾಥಿ

ಸರಾಜ ಒಡೆ



ಪಳ್ಳಿಯ ಅರಸು ಕೇಳಿ “ಇವರು ಪಟ್ಟಾಭಿಷೇಕಕ್ಕೆ ಮುಂಚಿತವಾಗಿಯೇ ಇಲ್ಲಿಗೆ ಬಂದು, ನಮ್ಮಲ್ಲಿ ಇದ್ದ ಅಸಹಾಯಶೂರನೂ ಅಶಕ್ಯನೂ ಆದ ಜಟ್ಟಿಯನ್ನು ಕಾಳಗದಲ್ಲಿ ಲೀಲಾಮಾತ್ರದಿಂದ ಕೊಂದು, ಜನರು ತಿಳಿಯದಂತೆ ಹೊರಟು ಹೋದರು. ಈಗ ಅವರಿಗೆ ಧೊರೆತನವು ಆಗಿರುವದ್ದರಿಂದ ಇನ್ನು ಮೇಲೆ ನನ್ನ ರಾಜ್ಯವನ್ನೂ ನನ್ನನ್ನೂ ಏನು ಮಾಡುವರೋ” ಎಂದು ಭಯಪಟ್ಟು, ಎದುರಿಗೆ ನಿಂತು ಯುದ್ಧಮಾಡುವದಕ್ಕೆ ಸಾಮರ್ಥ್ಯವಿಲ್ಲದೆ ಏನಾದರೂ ಒಂದು ವಂಚನೆಯಿಂದ ಸಂಹಾರ ಮಾಡಬೇಕೆಂದು ಯೋಚಿಸಿ, ಶೂರರಾದ ೨೪ ಮಂದಿ ಕಳ್ಳರಿಗೆ ದ್ರವ್ಯವನ್ನು ಕೊಟ್ಟು, ಕಂಠೀರವ ನರಸರಾಜ ಒಡೆಯರ ತಲೆಯನ್ನು ತೆಗೆದುಕೊಂಡು ಬರುವದೆಂದು ಹೇಳಿಕಳುಹಿಸಿದನು. ಆ ಕಳ್ಳರು ಪ್ರತ್ಯೇಕ ಪ್ರತ್ಯೇಕವಾಗಿ ವೇಷಾಂತರಗಳನ್ನು ಧರಿಸಿ, ಶ್ರೀರಂಗಪಟ್ಟಣಕ್ಕೆ ಬಂದು, ಅಲ್ಲಿನ ಮರ್ಮವನ್ನು ತಿಳಿಯುತ್ತಾ ಕೆಲವುದಿನ ಅಲ್ಲಿಯೇ ವಾಸವಾಗಿ ಇದ್ದರು. ಹೀಗಿರುವಲ್ಲಿ ಒಂದಾನೊಂದು ದಿನ ಸಮಯವು ಬರಲು, ಈ ಕಳ್ಳರು ಆಯುಧಪಾಣಿಗಳಾಗಿ ಜಲಮಾರ್ಗದಿಂದ ಕನ್ನ ತೆಗೆದುಕೊಂಡು ಜನರು ಅರಿಯದಂತೆ ಅರಮನೆಯ ಒಳಕ್ಕೆ ಪ್ರವೇಶಿಸಿ ಬಿತುಕೊಂಡಿದ್ದರು. ಅಂತಃಪುರದಲ್ಲಿ, ಧೊರೆಗಳು, ಒಬ್ಬರೇ ಮಂಚದ ಮೇಲೆ ಕೂತು ವೀಳ್ಯವನ್ನು ಸವಿಯುತ್ತಾ ಇರುವ ಸಮಯದಲ್ಲಿ, ನಿದ್ರೆಯ ಮಾಳಿಗೇ ಮುಂದಣ ದೊಡ್ಡ ಹಜಾರದ ಕಂಬಗಳ ಮರೆಗಳಲ್ಲಿ ಬೇರೆಬೇರೆ ನಿಂತಿರುವ ಈ ೨೪ ಮಂದಿ ಕಳ್ಳರ ನೆರಳುಗಳನ್ನು ನೋಡಿ, ಯಾರೋ ವಂಚನೆಯಿಂದ ತಮ್ಮನ್ನು ಸಂಹರಿಸುವದಕ್ಕೆ ಬಂದು ಇರುತ್ತಾರೆಂದು ತಿಳಿದು, ಸಮೀಪದಲ್ಲಿ ಇದ್ದ ವಿಜಯನಾರಸಿಂಹನೆಂಬ ಕತ್ತಿಯನ್ನು ಕೈಗೆ ತೆಗೆದುಕೊಂಡರು. ಅಷ್ಟರಲ್ಲಿಯೇ ಆ ಕಳ್ಳರು ಅದನ್ನು ಕಂಡು, ಎಲ್ಲರೂ ಗುಂಪು ಕೂಡಿ, ಧೊರೆಗಳನ್ನು ಸುತ್ತಿಕೊಂಡರು. ಆಗ ಧೊರೆಗಳು ತಮ್ಮ ಸಾಧಕ ಚಮತ್ಕಾರದಿಂದ ಪಟ್ಟವನ್ನು ತಿರುಹಿ, ತಲೆಗಳನ್ನು ಹೊಡೆದು, ಈ ಪೆಟ್ಟನ್ನು ತಪ್ಪಿಸಿಕೊಂಡು ಸಮೀಪಕ್ಕೆ ಬಂದ ಕೆಲವರನ್ನು ತಮ್ಮ ಭುಜಬಲದಿಂದ ಎರಡು ಕಂಕುಳುಗಳಲ್ಲಿಯೂ ಇರುಕಿಸಿಕೊಂಡು, ಕತ್ತುಗಳನ್ನು ಮುರಿದು, ಮತ್ತು ಕೆಲವರನ್ನು ಕಾಲಿನಿಂದ ಒದ್ದು ನಿರ್ಜೀವವಾಗುವಂತೆ ಕೆಡಹಿದರು. ನಿಂತ ಕೆಲವು ಮಂದಿ ಕಳ್ಳರು ಓಡಿಹೋಗುವದಕ್ಕೆ ಅವಕಾಶವಿಲ್ಲದೆ ಆಯುಧಗಳನ್ನು ಕೆಳಕ್ಕೆ ಹಾಕಿ ಪಾದಾಕ್ರಾಂತರಾಗಲು, ಕಂಠೀರವನರಸರಾಜಒಡೆಯರವರು ಅವರನ್ನು ಜೀವದಿಂದ ಬಿಟ್ಟು, ಬಾಗಿಲನ್ನು ಮುದ್ರೆಮಾಡಿ, ಹೊರಗೆ ಕಾದುಕೊಂಡಿದ್ದ ಗೊಲ್ಲರು ಮೊದಲಾದವರನ್ನು ಕೂಗಿ ಕರೆದು, ಸತ್ತುಹೋದ ಕಳ್ಳರ ಹೆಣಗಳನ್ನು ಹೊರಕ್ಕೆ ಹಾಕಿಸಿ, ಉಳಿದ ಸ್ವಲ್ಪ ಜನರನ್ನು ಮಾರನೇ ದಿನ ಸಭೆಗೆ ತೆಗೆದುಕೊಂಡು ಬರುವಂತೆ ಆಜ್ಞಾಪಿಸಿದರು. ಮಾರನೇ ದಿನ ಅವರನ್ನು ಸಭೆಗೆ ಕರಯಿಸಿ ವಿಚಾರಿಸಲು, ಅವರು ತಿರುಚನಾಪಳ್ಳಿಯ ಅರಸಿನಿಂದ ಧೊರೆಗಳ ತಲೆಯನ್ನು ತೆಗೆದುಕೊಂಡು ಹೋಗುವದಕ್ಕೆ ಬಂದವರೆಂದು ತಿಳಿಸಿದರು. ಆಗ ಧೊರೆಗಳು ನೀವು ತಿರುಚನಾಪಳ್ಳಿಗೆ ಹೋಗಿ ಇಲ್ಲಿ ನಡೆದದ್ದನ್ನು ನಿಮ್ಮ ಧೊರೆಗೆ ತಿಳಿಸಿ ಎಂದು ಹೇಳಿ ಅವರನ್ನು ಕಳುಹಿಸಿದರು.

ಬೆಟ್ಟದ ಚಾಮರಾಜ ಒಡೆಯರವರ ಮರಣ.—ಪ್ರಮಾಥಿಸಂವತ್ಸರದ ಚೈತ್ರ ಬಹುಳ ೨ ಯಲ್ಲಿ ಕಂಠೀರವನರಸರಾಜಒಡೆಯರವರ ಹೆತ್ತ ತಂದೆಗಳಾದ ಬೆಟ್ಟದ ಚಾಮರಾಜಒಡೆಯರವರು ಗುಂಡ್ಲು ಎಂಬ ಗ್ರಾಮದಲ್ಲಿ ಸ್ವರ್ಗಲೋಕವನ್ನು ಹೊಂದಿದರು. ಅವರ ದೇಹ ಸಾರ್ಥಕ್ಯವಾಗುವಕಾಲದಲ್ಲಿ ಅವರ ಒಂಭತ್ತುಮಂದಿ ಪತ್ನಿಯರೂ ಸಹಗಮನ ಮಾಡಿದರು. ಈ ವರ್ತಮಾನವು ಶ್ರೀರಂಗಪಟ್ಟಣಕ್ಕೆ ಬರುತ್ತಲೆ, ಕಂಠೀರವನರಸರಾಜಒಡೆಯರವರು ಅವರಿಗೆ ಉತ್ತರಕ್ರಿಯೆಗಳನ್ನು ನೆರವೇರಿಸಿ, ಪ್ರತಿವರ್ಷದಲ್ಲಿಯೂ ಅವರು ತೀರಿಹೋದ ಪುಣ್ಯದಿನದಲ್ಲಿ, ತಮ್ಮ ದೇಶದಲ್ಲಿ ಪ್ರಸಿದ್ಧವಾಗಿರುವ ತೀರ್ಥ ಕ್ಷೇತ್ರಗಳಲ್ಲಿ ಇರುವ ಶಿವ ವಿಷ್ಣು ಮೊದಲಾದ ದೇವರುಗಳ ದೇವಸ್ಥಾನಗಳಲ್ಲಿ, ಆಯಾ ದೇವಸ್ಥಾನದ ಮರ್ಯಾದೆ ಮೇರೆಗೆ ಅಭಿಷೇಕ ದೀಪಾರಾಧನೆ ಮೊದಲಾದ ಉತ್ಸವಗಳು ನಡೆಯುವದಕ್ಕೆ ಗ್ರಾಮಭೂಮಿಗಳನ್ನು ಕೊಟ್ಟು, ಮೇಲುಕೋಟೆ ನಂಜನಗೂಡು ಮುಂತಾದ ಪ್ರಸಿದ್ಧ ಸ್ಥಳಗಳಲ್ಲಿ ಅವರ ಹೆಸರಿನಿಂದ ಕಲ್ಲಿನ ಮಂಟಪಗಳನ್ನು ಕಟ್ಟಿಸಿ, ಉತ್ಸವಗಳು ನಡೆಯುವಂತೆ ಮಾಡಿಸಿದರು.

ಕಟ್ಟಣಗಳನ್ನು ಕಟ್ಟಿಸಿ ಧರ್ಮಕಾರ್ಯಗಳನ್ನು ಮಾಡಿದ್ದು.—ಕಂಠೀರವ ನರಸರಾಜಒಡೆಯರವರು ಪ್ರಮಾಥಿಸಂವತ್ಸರದಲ್ಲಿ ರಂಗನಾಥದೇವರಿಗೆ ಉಪಯೋಗವಾಗುವಂತೆ ಶ್ರೀರಂಗಪಟ್ಟಣದ ಶುಕತೀರ್ಥದಲ್ಲಿ ದೊಡ್ಡದಾಗಿ ಸರೋವರವನ್ನು ಕಟ್ಟಿಸಿದರು. ಪೂರ್ವದಲ್ಲಿ ಹಳೇಕೆರೆಯ ಕೋಡಿಯಲ್ಲಿದ್ದ ತಮ್ಮ ಹೆತ್ತಪ್ಪಾಜಿಯವರಾದ ಬೋಳಚಾಮರಾಜ ಒಡೆಯರವರ ದಹನಸ್ಥಳ ಮಂಟಪವಿರುವ ತೋಟದಲ್ಲಿ, ಬಗೆಬಗೆಯಾದ ಫಲಪುಷ್ಪಗಳನ್ನು ಬಿಡುವ ವೃಕ್ಷಗಳನ್ನು ಹಾಕಿಸಿ, ಶೃಂಗಾರ ತೋಟವೆಂಬದಾಗಿ ಹೆಸರನ್ನು ಇಟ್ಟರು; ತ್ರಿನಯನೇಶ್ವರ ದೇವಸ್ಥಾನಕ್ಕೆ ದಕ್ಷಿಣಪಾರ್ಶ್ವದಲ್ಲಿ ಕಾಶಿಕೆಲಸದಿಂದ ವಿಸ್ತಾರವಾಗಿ ಸರೋವರವನ್ನು ಕಟ್ಟಿಸಿ, ಅದಕ್ಕೆ ಶೃಂಗಾರದ ತೋಟದ ಕೊಳವೆಂಬದಾಗಿ ಹೆಸರಿಟ್ಟರು; ತ್ರಿನಯನೇಶ್ವರ ಸ್ವಾಮಿದೇವಸ್ಥಾನದಲ್ಲಿ ಕೈಸಾಲೆಯನ್ನು ಕಟ್ಟಿಸಿ ಪಂಚಲಿಂಗ ದಕ್ಷಿಣಾಮೂರ್ತಿ ಕ್ಷೇತ್ರಪಾಲ ಕುಮಾರಸ್ವಾಮಿ ಸೂರ್ಯನಾರಾಯಣ ಮುಂತಾದ ದೇವರುಗಳನ್ನೂ, ಪರಿಪಟ್ಟಣದಿಂದ ತಮಗೆ ಸ್ವಪ್ನಲಬ್ಧವಾಗಿಬಂದ ಚಾಮುಂಡೇಶ್ವರಿಯನ್ನೂ ಪ್ರತಿಷ್ಠೆ

ಮಾಡಿಸಿ, ಈ ದೇವಸ್ಥಾನದಲ್ಲಿ ತಮ್ಮ ಭಕ್ತವಿಗ್ರಹವು ಕೈ ಜೋಡಿಸಿಕೊಂಡು ಇರುವಂತೆ ನಿರ್ಮಿಸಿದರು ; ಈ ಮೂರು ಲಕ್ಷ್ಮೀರಮಣಸ್ವಾಮಿಯ ದೇವಸ್ಥಾನದ ಹಿಂಭಾಗದಲ್ಲಿ ವಿಸ್ತಾರವಾಗಿ ಕಲ್ಯಾಣಮಂಟಪವನ್ನೂ ಉಭಯ ಮುಚ್ಚಳದ ಮಂಟಪವನ್ನೂ ಕಟ್ಟಿಸಿ, ದೇವಸ್ಥಾನಗಳನ್ನು ಜೀರ್ಣೋದ್ಧಾರಮಾಡಿ ಕೆಲವು ಗ್ರಾಮಭೂಮಿಗಳನ್ನು ಕೊಟ್ಟು ತಸ್ತೀಕನ್ನು ಉಂಟುಮಾಡಿದರು.

ಪಂಚರತ್ನಗಳನ್ನು ಮಾಡಿ ಇರುವದು.—

(೧) ಶ್ರೀರಂಗಪಟ್ಟಣದ ಅರಮನೆಯ ಬಲಭಾಗದಲ್ಲಿ ರಂಗಸ್ವಾಮಿಯ ಗುಡಿಯಂತೆ ನೂತನವಾಗಿ ಗುಡಿ ಗೋಪುರ ಕೈಸಾಲೆ ಕಲ್ಯಾಣಮಂಟಪ ಯಾಗಶಾಲೆ ವಸಂತದಕೊಳ ಮುಂತಾದವುಗಳನ್ನು ಕಟ್ಟಿಸಿದರು ; ತಾವು ನೃಸಿಂಹಜಯಂತೀದಿನ ಜನಿಸಿದವರಾದಕಾರಣ ಅಮ್ಮನವರು ಸಹಿತವಾಗಿ ನೃಸಿಂಹಸ್ವಾಮಿಯನ್ನೂ, ಉಭಯನಾಚಾರ್ಯರು ಸಹಿತವಾಗಿ ಉತ್ಸವ ವಿಗ್ರಹ ಮುಂತಾದ ಪಂಚಬೇರರನ್ನೂ, ಅನಂತ ಗರುಡ ವಿಷ್ವಕ್ಸೇನ ಆಳ್ವಾರು ಮೊದಲಾದ ಪರಿವಾರದೇವರನ್ನೂ, ನೂತನವಾಗಿ ಪಾಂಚರಾತ್ರಾಗಮೋಕ್ತವಾಗಿ ಪ್ರತಿಷ್ಠೆಯನ್ನು ಮಾಡಿಸಿ, ದೇವರುಗಳಿಗೆ ನಿತ್ಯೋತ್ಸವ ರಥೋತ್ಸವಾದಿ ಉತ್ಸವಗಳಿಗೂ ಈ ದೇವರ ಸೇವೆಯನ್ನು ಮಾಡುವ ಉಪಾಧಿ ಬ್ರಾಹ್ಮರ ಜೀವನಕ್ಕೂ ರಾಮಾನುಜ ಕೂಟ ನಡೆಯುವದಕ್ಕೂ ಸಹ ಬಹಳ ತಸ್ತೀಕುಗಳನ್ನು ಉಂಟುಮಾಡಿದರು; ಅನೇಕ ಗ್ರಾಮ ಭೂಮಿಗಳನ್ನೂ ಅನೇಕ ಪೂಜೋಪಕರಣ ಸೇವೋಪಕರಣ ವಸ್ತ್ರಾಭರಣ ಪಾತ್ರೆಗಳನ್ನೂ ನವರತ್ನ ಖಚಿತವಾದ ಕಂಠೀರವ ಮುಡಿಯನ್ನೂ ಸಹ ಸಮರ್ಪಿಸಿದರು ; ಪ್ರತಿದಿನದಲ್ಲಿಯೂ ದೇವರ ದರ್ಶನವನ್ನು ಮಾಡಿ ತೀರ್ಥಪ್ರಸಾದವನ್ನು ಒಪ್ಪಿಸಿಕೊಳ್ಳುತ್ತಿದ್ದಲ್ಲದೆ, ಈ ದೇವಾಲಯದಲ್ಲಿ ತಮ್ಮ ಭಕ್ತವಿಗ್ರಹವನ್ನು ನಿರ್ಮಿಸಿ, ಈ ದೇವಸ್ಥಾನದ ವರದಿಯನ್ನು ನಿತ್ಯದಲ್ಲಿಯೂ, ಆ ವಿಗ್ರಹದ ಎದುರಿಗೆ ಹೇಳುವಂತೆ ನಿಬಂಧನೆ ಮಾಡಿದರು.

(೨) ಶ್ರೀರಂಗಪಟ್ಟಣದ ಕಾವೇರೀನದಿಗೆ ಉತ್ತರ ಪಾರ್ಶ್ವದಲ್ಲಿ ಕಂಠೀರವ ಪುರವೆಂಬ ಅಗ್ರಹಾರವನ್ನು ನಿರ್ಮಿಸಿ, ಗೃಹೋಪಕರಣ ಸೋಪಸ್ಕರ ಸಹಿತವಾಗಿ ತ್ರಿಮಸ್ಥ ಬ್ರಾಹ್ಮರಿಗೂ ವೃತ್ತಿಯನ್ನು ಧಾರೆಯೆರದು ಕೊಟ್ಟರು.

(೩) ಪಾಳ್ಯಗಾರರ ದಿವಸದಲ್ಲಿ ರಾಜ್ಯದಮೇಲೆ ಚಿನ್ನದ ನಾಣ್ಯಗಳಿಗೆ ನಾನಾವಿಧವಾದ ವಿಗ್ರಹದ ಮುದ್ರೆಗಳು ಇದ್ದದರಿಂದ, ಧೊರೆಗಳು ಒಂದೇ ವಿಧವಾದ ವಿಗ್ರಹದ ಮುದ್ರೆ ಇರಬೇಕೆಂದು ಯೋಚಿಸಿ, ಯೋಗನೃಸಿಂಹಾಂಕಿತವಾಗಿ ಕಂಠೀರಾಯಿ ಹಣವನ್ನು ಮಾಡಿಸುವದಕ್ಕೆ ಟಂಕಸಾಲೆಯನ್ನು ಮಾಡಿಸಿ, ತಾವು ಮಾಡಿಸಿದ ಚಿನ್ನದ ಕಂಠೀರಾಯಿ ಹಣವು ಎಲ್ಲಾ ದೇಶಗಳಲ್ಲಿಯೂ ಪ್ರಸಿದ್ಧವಾಗಿ ನಡೆಯುವಂತೆಯೂ, ಈ ಹತ್ತು ಹಣಕ್ಕೆ ಕಂಠೀರಾಯಿ ೧ ವರಹಾ ಎಂತಲೂ, ಈ ೯ ಹಣಕ್ಕೆ ೧ ವರಹಾ ತೂಕವೆಂತಲೂ ಸ್ವಭಾನು ಸಂವತ್ಸರದ ವೈಶಾಖ ಶುದ್ಧ ೧೫ಯಲ್ಲಿ ನಿಬಂಧನೆ ಮಾಡಿದರು.

(೪) ನಂಜನಗೂಡು ಶ್ರೀಕಂಠೇಶ್ವರ ಸ್ವಾಮಿಯವರಿಗೆ ಅಮೃತಪಡಿಗೆ ಅವಕಾಶವಾಗುವಂತೆ ಕೌಂಡಿನೀನದಿಗೆ ಅಡ್ಡಕಟ್ಟೆಯನ್ನು ಹಾಕಿಸಿ, ನರಸಾಂಬುಧಿಎಂಬ ಮಹಾತಟಾಕವನ್ನು ಕಟ್ಟಿಸಿ, ಆ ಕೆರೇಕೆಳಗೆ ಆದ ಒಟ್ಟು ಮುಂತಾದ ಫಲವನ್ನು ಪಡಿತರ ದೀಪಾರಾಧನೆ ರಥೋತ್ಸವ ಮುಂತಾದ ಉತ್ಸವಗಳಿಗೆ ಸಮರ್ಪಿಸುವಂತೆ ನಿಬಂಧನೆ ಮಾಡಿಸಿ, ಶಿಲಾಪ್ರತಿಷ್ಠೆಯನ್ನು ಮಾಡಿಸಿ ತಾಂಬ್ರದ ಶಾಸನವನ್ನು ಬರೆಯಿಸಿ ಒಪ್ಪಿಸಿದರು.

(೫) ಈ ಕಂಠೀರವ ನರಸರಾಜ ಒಡೆಯರವರ ಗಾಂಧರ್ವಪತ್ನಿಯರಾದ ದೊಡ್ಡಾಜಮ್ಮಯ್ಯನವರು "ಕಾವೇರೀನದಿಯು ಪ್ರವಾಹ ಬಂದಕಾಲದಲ್ಲಿ ಕಾಶಿ ರಾಮೇಶ್ವರ ಮುಂತಾದ ಸ್ಥಳಗಳಿಗೆ ಸಂಚಾರ ಮಾಡುವ ಜನರಿಗೂ, ಈ ಕೋಟೆಯೊಳಕ್ಕೆ ಹೊರಗಿನಿಂದ ಬರತಕ್ಕ ಪದಾರ್ಥಗಳಿಗೂ, ಕೋಟೆಯೊಳಗೆ ವಾಸಮಾಡುವ ಜನರಿಗೆ ನದೀರೂಪವಾಗಿ ಇರುವದಕ್ಕೂ, ಕೋಟೆಯೊಳಕ್ಕೆ ನೀರು ಬರುವದಕ್ಕೂ ಸಹ, ಕಾವೇರೀ ನದಿಗೆ ಉಭಯ ಪಾರ್ಶ್ವಗಳಲ್ಲಿಯೂ ಸೇತುವೆಯನ್ನು ಕಟ್ಟಿಸಬೇಕು" ಎಂದು ಧೊರೆಗಳ ಪಾದಕ್ಕೆ ಬಿನ್ನವಿಸಿಕೊಂಡರು. ಧೊರೆಗಳು ಆ ಮಾತುಗಳನ್ನು ಕೇಳಿ, ಹಿತವೆಂದು ಎಣಿಸಿ, ಕೋಟೆಗೆ ನೈರುತ್ಯ ವಾಯುವ್ಯ ಪಾರ್ಶ್ವಗಳೆರಡರಲ್ಲಿಯೂ ಇರುವ ನದಿಗೆ ೨ ಸೇತುವೆಗಳನ್ನು ಕಟ್ಟಿಸಿ, ಗೌತಮಕ್ಷೇತ್ರಕ್ಕೆ ದಕ್ಷಿಣದಿಕ್ಕಿನ ಚಂದ್ರವನದ ಸಮೀಪದಲ್ಲಿ ಕವಲು ಒಡೆದ ಕಾವೇರಿಗೆ ಕಟ್ಟೆಯನ್ನು ಕಟ್ಟಿಸಿ, ನೀರಮೇಲೆ ನೀರು ಬರುವ ಆಶ್ಚರ್ಯವು ಈ ದೇಶದಲ್ಲಿ

ಇದುವರಿಗೆ ಎಲ್ಲಿಯೂ ಇಲ್ಲದೆ ಇದ್ದದರಿಂದ, ತಾವು ಕೋಟೆಗೆ ನೈರುತ್ಯ ದಿಕ್ಕಿನಲ್ಲಿ ಕಟ್ಟಿಸಿ ಇರುವ ಸೇತುವೇಮೇಲೆ ಹೊಸದಾಗಿ ಕಾಲುವೆಯನ್ನು ತಂದು, ಕೋಟೆಯೊಳಕ್ಕೆ ನೀರು ಬರುವಂತೆ ಮಾಡಿ, ಆ ಕಾಲುವೆಗೆ ಬಂಗಾರದೊಡ್ಡಿಯ ಕಾಲುವೆ ಎಂದು ಹೆಸರನ್ನಿಟ್ಟು, ಅದರ ಕೆಳಗೆ ಆದ ಬತ್ತ ಕಬ್ಬು ಮುಂತಾದವುಗಳು ರಂಗನಾಥಸ್ವಾಮಿಯ ದೇವಸ್ಥಾನಕ್ಕೆ ಕೊಡುವಂತೆ ಕಟ್ಟಲೆ ಮಾಡಿಸಿದರು.

ಶ್ರೀರಂಗಪಟ್ಟಣದ ರಂಗಸ್ವಾಮಿ ದೇವಸ್ಥಾನದ ಗೋಪುರ ಮಂಟಪಗಳನ್ನೂ, ವಿಸ್ತಾರವಾಗಿ ಹೊರಗಿನ ಪ್ರಾಕಾರ ಒಳಗಿನಪ್ರಾಕಾರ ಉಭಯ ಮುಚ್ಚಳದ ಕಲ್ಲುಕೆಲಸಗಳನ್ನೂ ಮಾಡಿಸಿ, ದೇವರಿಗೆ ವೈಕುಂಠಮುಡಿಯೆಂಬ ನವರತ್ನದ ಕಿರೀಟವನ್ನು ಸಮರ್ಪಿಸಿದರು ; ಗಂಗಾಧರೇಶ್ವರಸ್ವಾಮಿ ದೇವಸ್ಥಾನಕ್ಕೂ ವಿಸ್ತಾರವಾಗಿ ಗೋಪುರವನ್ನು ಕಟ್ಟಿಸಿ, ಆ ಗುಡಿಯಲ್ಲಿ ಪಂಚಲಿಂಗ ಪ್ರತಿಷ್ಠೆಯನ್ನು ಮಾಡಿಸಿದರು ; ಕರೀಘಟ್ಟದ ವೆಂಕಟರಮಣಸ್ವಾಮಿಯ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿ, ವಿಸ್ತಾರವಾಗಿ ಕಟ್ಟಿಸಿ, ಆ ಬೆಟ್ಟಕ್ಕೆ ಸೋಪಾನವನ್ನು ಕಟ್ಟಿಸಿದರು ; ನಂಜನಗೂಡು ಶ್ರೀಕಂಠೇಶ್ವರಸ್ವಾಮಿಯವರ ಗೌತಮರಥವು ಶಿಥಿಲವಾಗಿ ಇದ್ದದರಿಂದ ಅದನ್ನು ನೂತನವಾಗಿ ಮಾಡಿಸಿದರು ; ಶ್ರೀ ಚಾಮುಂಡೇಶ್ವರೀ ಅಮ್ಮನವರು ಉತ್ತನಹಳ್ಳೀ ಜ್ವಾಲಾಮುಖೀ ಅಮ್ಮನವರು ಮೊದಲಾಗಿ ತಿರುಪತಿ ಮೇಲುಕೋಟೆ ಮುಂತಾದ ಕ್ಷೇತ್ರಗಳಲ್ಲಿ ಇರುವ ಶಿವ ವಿಷ್ಣು ದೇವರಿಗೂ ಆಯಾ ದೇವಸ್ಥಾನದ ತಾರತಮ್ಯವು ಇದ್ದಂತೆ ತಸ್ತೀಕನ್ನು ಉಂಟುಮಾಡಿ ವಸ್ತ್ರಾಭರಣಗಳನ್ನು ಕೊಟ್ಟರು ; ತಮ್ಮ ಮಾವಂದಿರಾದ ದೊಡ್ಡೇಅರಸಿನವರ ಹೆಸರಿನಿಂದ ಅರಿಕುಠಾರದಲ್ಲಿ ದೊಡ್ಡದಾಗಿ ಒಂದು ಸರೋವರವನ್ನು ಕಟ್ಟಿಸಿ, ದೊಡ್ಡೇಅರಸಿನವರ ಕೊಳವೆಂಬದಾಗಿ ಅದಕ್ಕೆ ಹೆಸರಿಟ್ಟರು. ಇದಲ್ಲದೆ ಇವರು ತಾವು ಸಾಧಿಸಿದ ಕಣಿವೇ ಕೆಳಗಣ ರಾಜ್ಯಗಳಲ್ಲಿಯೂ ಸಹ ಕೆಲವು ಅಗ್ರಹಾರಗಳನ್ನೂ ದೇವತಾ ಸೇವೆಯನ್ನೂ ಮಾಡಿದ್ದಲ್ಲದೆ ಅನೇಕ ಬ್ರಾಹ್ಮರಿಗೆ ಭಟ್ಟಮಾನ್ಯರೂಪವಾಗಿ ಜೀವನವನ್ನು ಕಲ್ಪಿಸಿ ಕೊಟ್ಟು, ತಮ್ಮ ಪೂರ್ವಿಕರು ಮಾಡಿದ ದೇವದಾಯ ಬ್ರಹ್ಮದಾಯ ಮುಂತಾದ ಧರ್ಮಗಳನ್ನು ಪರಿಪಾಲನೆ ಮಾಡುತ್ತಿದ್ದರು.

ಕಂಠೀರವ ನರಸರಾಜ ಒಡೆಯರವರು ತಮಗೆ ಪಟ್ಟವಾದ ಮೇಲೆ ಪ್ರತಿದಿನದಲ್ಲಿಯೂ ಪೂರ್ವದಂತೆಯೇ ನೂತನವಾಗಿ ಗೋದಾನ ದಂಪತಿ ಪೂಜೆ ಪುರಾಣ ಪಂಚಾಂಗಶ್ರವಣ ನಡೆಯುವಂತೆ ಕಟ್ಟಲೆ ಮಾಡಿಸಿದರು; ಪ್ರತಿ ಏಕಾದಶಿಯಲ್ಲಿಯೂ ರುಕ್ಮಾಂಗರಾಯನಂತೆ ಜಾಗರೋಪವಾಸ ಪಾರಣೆಯನ್ನು ಮಾಡುತ್ತಿದ್ದರು. ಇವರು ವೈಷ್ಣವದೀಕ್ಷೆಯನ್ನು ಅಂಗೀಕರಿಸಿದವರಾದಾಗ್ಯೂ, ಕಾತ್ಯಾಯನೀ ಸ್ವರೂಪಳಾದ ತಮ್ಮ ಕುಲದೇವತೆಯಾದ ಶ್ರೀಚಾಮುಂಡೇಶ್ವರಿ ಶ್ರೀಕಂಠೇಶ್ವರ ಮುಂತಾದ ಶಿವದೇವಸ್ಥಾನಗಳಲ್ಲಿ ಭಕ್ತಿಪೂರ್ವಕವಾಗಿ ನಡೆದುಕೊಳ್ಳುತ್ತಾ, ಶಿವರಾತ್ರಿ, ಗೌರೀ ಗಣೇಶ ಮುಂತಾದ ಅನೇಕ ವ್ರತಗಳನ್ನು ಮಾಡಿಕೊಂಡು ಬಂದರು. ಇದಲ್ಲದೆ ಪ್ರತಿದಿನದಲ್ಲಿಯೂ ತಮ್ಮ ಪಟ್ಟದ ಆಯುಧದ ಸಂಗಡಲೆ ಆ ವಿಜಯನಾರಸಿಂಹನೆಂಬ ಆಯುಧಕ್ಕೂ ಪೂಜೆ ನಡೆಯುವಂತೆ ಕಟ್ಟಲೆಮಾಡಿದರು.

ಮುಖ್ಯ ವಿಷಯಗಳು.—ನಂಜರಾಜಯ್ಯನಿಗೆ ದಳವಾಯಿ ತನ ಹೋದದ್ದು.—ಕಂಠೀರವ ನರಸರಾಜ ಒಡೆಯರವರು, ರಣದುಲ್ಲಾ ಖಾ ಮುಂತಾದವರನ್ನು ಯುದ್ಧದಲ್ಲಿ ಜಯಿಸಿ, ಬಹಳ ಯುದ್ಧಸಾಮಗ್ರಿಗಳನ್ನು ಸಂಪಾದಿಸಿ, ಇನ್ನೂ ಬಹಳ ರಾಜ್ಯಗಳನ್ನು ಸಾಧಿಸುವದಕ್ಕೆ ಇನ್ನೂ ಹೆಚ್ಚಾಗಿ ಸೇನೆಯನ್ನು ಕೂಡಿಹಾಕಿ, ದೇಶಕೋಶಗಳನ್ನು ಚೆನ್ನಾಗಿ ವಿಚಾರಣೆ ಮಾಡುತ್ತಾ ಸುಖದಿಂದ ರಾಜ್ಯವನ್ನಾಳುತ್ತಿದ್ದರು. ಹೀಗಿರಲು, ದಳವಾಯಿ ನಂಜರಾಜಯ್ಯನು; ಪೆರಿಪಟ್ಟಣದ ನಂಜುಂಡಅರಸು ಮುಂತಾದ ಪಾಳ್ಯಗಾರರಿಂದ ಲಂಚವನ್ನು ತೆಗೆದುಕೊಂಡು, ಅರಮನೆಗೆ ಬರತಕ್ಕ ಖಂಡಣೆಹಣವನ್ನು ವಸೂಲು ಮಾಡದೆ ಸ್ವಕಾರ್ಯಧುರಂಧರನಾಗಿ ಇದ್ದನು. ಧೊರೆಗಳು ಅವನ ನಡತೆಯನ್ನು ನೋಡಿ, ಇವನ ಮೇಲೆ ಹೊತ್ತ ಹಣವನ್ನು ತೆಗೆದುಕೊಂಡು, ವ್ಯಯ ಸಂವತ್ಸರದ ಪುಷ್ಯ ಶುದ್ಧ ೬ಯಲ್ಲಿ ಅವನ ಅಧಿಕಾರವನ್ನು ತೆಗೆದು, ಲಿಂಗರಾಜಯ್ಯನೆಂಬವನಿಗೆ ದಳವಾಯಿತನವನ್ನು ನೇಮಿಸಿದರು.

ದಳವಾಯಿ ಲಿಂಗರಾಜಯ್ಯ.—ಲಿಂಗರಾಜಯ್ಯನು ಕೆಲವುದಿನ ಸೇನಾಧಿಪತ್ಯವನ್ನು ಮಾಡಿ ಸರ್ವಧಾರಿ ಸಂವತ್ಸರದ ಆಷಾಢಶುದ್ಧ ೬ಯಲ್ಲಿ ತೀರಿಹೋದನು. ಮಾರನೇದಿನವೇ ಕೆಂಪಯ್ಯನೆಂಬವನಿಗೆ ದಳವಾಯಿತನವು ಬಂತು.

ದಳವಾಯಿ ಕೆಂಪಯ್ಯ.—ಇವನು ಅರಮನೇಕೆಲಸದಲ್ಲಿ ಬುದ್ಧಿವಂತನಲ್ಲದೆ ಇದ್ದದರಿಂದ ಇವನ ಅಧಿಕಾರವನ್ನು ತೆಗೆದು ವಿರೋಧಿ ಸಂವತ್ಸರದ ಆಷಾಢ ಶುದ್ಧ ೩ಯಲ್ಲು ಲಿಂಗೇಗೌಡನಿಗೆ ನೇಮಿಸಿದರು.

ದಳವಾಯಿ ಲಿಂಗೇಗೌಡ.—ಇವನು ವಿಕೃತಿ ಸಂವತ್ಸರದ ಭಾದ್ರಪದ ಶುದ್ಧ ೬ಯಲ್ಲಿ ಧೊರೆಗಳ ಕೋಪಕ್ಕೆ ಪಾತ್ರನಾದ್ದರಿಂದ ಇವನ ಅಧಿಕಾರವನ್ನು ತೆಗೆದು ಕಾರಗಳ್ಳಿ ಹಂಪರಾಜಯ್ಯನಿಗೆ ನೇಮಕವಮಾಡಿದರು.

ದಳವಾಯಿ ಹಂಪರಾಜಯ್ಯ.—ಧೊರೆಗಳು ವ್ಯಯಸಂವತ್ಸರದ ಅಶ್ವಯುಜ ಶುದ್ಧ ೧ಯಲ್ಲಿ ಸಿಂಹಾಸನಾರೂಢರಾಗಿ ನವರಾತ್ರಿಯಲ್ಲಿ ಒಡ್ಡೋಲಗವನ್ನು ತೆಗದುಕೊಳ್ಳುತ್ತಾ ಇರುವ ಸಮಯದಲ್ಲಿ, ಸಜ್ಜೇಮೇಲೆ ದಳವಾಯಿ ಅರಸುಗಳು ಪಾಳ್ಯಗಾರರು ಅಧಿಕಾರಸ್ಥರು ಮುಂತಾದ ಸಕಲಜನರೂ ಕೈಕಟ್ಟಿಕೊಂಡು ಇರುವಂತೆಯೂ, ಈ ಆಜ್ಞೆಯನ್ನು ಮೀರಿ ನಡೆದವರಿಗೆ ತಕ್ಕ ಶಿಕ್ಷೆಯಾಗುವದೆಂಬದಾಗಿಯೂ ನಿಬಂಧನೆ ಮಾಡಿದರು. ಖರಸಂವತ್ಸರದ ಅಶ್ವಯುಜ ಶುದ್ಧ ೭ ನವರಾತ್ರಿಯಲ್ಲಿ ಓಲಗದ ವೇಳೆಯಲ್ಲಿ, ಹಂಪರಾಜಯ್ಯನು ಮೇಲೆ ಹೇಳದ ಆಜ್ಞೆಯನ್ನು ಮೀರಿ ನಡೆದದ್ದರಿಂದ, ಧೊರೆಗಳು ಅವನ ಮೇಲೆ ಕೋಪಿಸಿ, ತಮ್ಮ ಮಾವಂದಿರಾದ ಕಳಲೇ ದಾಸರಾಜಯ್ಯನವರಿಗೆ ದಳವಾಯಿತನವನ್ನು ಕೊಟ್ಟರು.

ದಳವಾಯಿ ದಾಸರಾಜಯ್ಯನವರು.—ದಾಸರಾಜಯ್ಯನವರು ವೃದ್ಧರಾಗಿ ಅರಮನೇ ಕೆಲಸಗಳನ್ನು ನೋಡುವದಕ್ಕೆ ಶಕ್ತಿಸಾಲದ್ದರಿಂದ, ವಿಜಯ ಸಂವತ್ಸರದ ಕಾರ್ತೀಕ ಬಹುಳ ೧ದಲ್ಲಿ ದಳವಾಯಿತನವು ಪುನಃ ಲಿಂಗೇಗೌಡನಿಗೆ ಆಯಿತು.

ಹಂಪರಾಜಯ್ಯನಿಗೆ ದಳವಾಯಿತನವು ಪುನಃ ಪ್ರಾಪ್ತವಾದದ್ದು.—ಮನ್ಮಥ ಸಂವತ್ಸರದ ವೈಶಾಖಶುದ್ಧ ೧೪ಯಲ್ಲಿ ಸೇನಾಧಿಪತ್ಯವನ್ನು ಮಾಡುತ್ತಿದ್ದ ಲಿಂಗೇಗೌಡನಿಗೆ ಬದಲಾಗಿ ಪೂರ್ವದಲ್ಲಿದ್ದ ಕಾರಗಳ್ಳಿ ಹಂಪರಾಜಯ್ಯನಿಗೆ ದಳವಾಯಿತನವನ್ನು ನೇಮಿಸಿದರು.

ಶ್ರೀರಂಗಪಟ್ಟಣದ ಕೋಟೆ ದೊಡ್ಡ ಉಗ್ರಾಣ ಆಯುಧ ಶಾಲೆ ಮುಂತಾದವುಗಳನ್ನು ಕಟ್ಟಿಸಿದ್ದು.—ಶ್ರೀರಂಗಪಟ್ಟಣದ ಕೋಟೆಯು ಬಹಳ

ದುರ್ಬಲವಾಗಿ ಇದ್ದದರಿಂದ, ಕಂಠೀರವ ನರಸರಾಜ ಒಡೆಯರವರು, ಪ್ರಮಾಥಿ ಸಂವತ್ಸರದಲ್ಲಿ ಶತ್ರುಗಳಿಗೆ ಅವಕಾಶವಾಗದಂತೆ ಕಟ್ಟಿಸಬೇಕೆಂದು ಶ್ರೀರಂಗ ಪಟ್ಟಣದ ಕಾವೇರೀನದಿಗೆ ಅಡ್ಡಕಟ್ಟೆಗಳನ್ನು ಹಾಕಿಸಿ, ದೊಡ್ಡದೊಡ್ಡ ಕಲ್ಲುಗಳಿಂದ ಕೋಟೆಕೊತ್ತಲು ಅಗಳಗಳನ್ನು ವಿಸ್ತಾರವಾಗಿ ಕಟ್ಟಿಸಿದರು; ಶತ್ರುಗಳು ಬಂದು ಈ ಕೋಟೆಗೆ ಮುತ್ತಿಗೆ ಹಾಕಿದರೆ, ಕೋಟೆಯೊಳಗೆ ಇರುವ ಜನರು ಸುಖದಲ್ಲಿ ಇರುವದಕ್ಕೋಸ್ಕರ, ಬತ್ತ ರಾಗಿ ಹುರಳಿ ಕಡಲೆ ಹೆಸರು ಮುಂತಾದ ಸಕಲಧಾನ್ಯಗಳನ್ನೂ ಉಪ್ಪು ಬೆಲ್ಲ ಹುಣಿಸೇಹಣ್ಣು ಮೆಣಸಿನಕಾಯಿ ಮೆಂತ್ಯ ಜೀರಿಗೆ ಅರಿಸಿನ ಅಡಿಕೆ ಮುಂತಾದ ಗಂದಿಗರ ದಿನಸುಗಳನ್ನೂ ನೀರುಮಜ್ಜಿಗೆ ಹಚ್ಚಡ ಮುಂತಾದ ಪದಾರ್ಥಗಳನ್ನೂ ತುಂಬುವದಕ್ಕೆ ದೊಡ್ಡ ಉಗ್ರಾಣಗಳನ್ನೂ, ಮದ್ದಿನ ಮನೆಗಳನ್ನೂ, ಜಾನಸಾಲೆ ಕತ್ತಿ ಕಠಾರಿ ಗುರಾಣಿ ತುಪಾಕಿ ಅಂಬು ಸಿಂಗಾಡಿ ಬಾಣ ಬತ್ತಿಕೆ ಮದ್ದು ಗುಂಡು ಚೂರಿ ಕತ್ತರಿ ಮುಂತಾದ ಯುದ್ಧ ಸಾಮಗ್ರಿಗಳನ್ನು ಇರಿಸುವದಕ್ಕೆ ಆಯುಧಶಾಲೆಗಳನ್ನೂ ಕಟ್ಟಿಸಿ, ಆನೆ ಕುದುರೆ ಒಂಟೆ ಎತ್ತು ಮುಂತಾದವುಗಳಿಗೆ ಹುಲ್ಲುಮೆದೆಗಳನ್ನು ಹಾಕಿಸಿದರು.

ಮಹೀಶೂರ ಕೋಟೆಯನ್ನು ಬಲಪಡಿಸಿದ್ದು.—ರಾಜಒಡೆಯರವರು ಆಳುವಾಗ, ನಳಸಂವತ್ಸರದಲ್ಲಿ ಮಹಿಶೂರಕೋಟೆಯನ್ನು ಕಟ್ಟಿಸುವದಕ್ಕೋಸ್ಕರ, ಪೂರ್ವದಲ್ಲಿದ್ದ ಹಳೇಕೆರೆಯು ಮುಚ್ಚಿಹೋಗಿದ್ದ ಭೂಮಿಯನ್ನು ಒಳಕ್ಕೆ ಸೇರಿಸಿಕೊಂಡು ತಳಹದಿಯನ್ನು ತೆಗಿಸಿದರು. ಮೂಡಣ ನಿಟ್ಟು೧ಕ್ಕೆ ೬೩೩ ಮಾರೂ ೩೩೦ ಮಲಕಿನ ತೆನೆಗಳೂ, ತೆಂಕಣ ನಿಟ್ಟು೧ಕ್ಕೆ ೩೦೩ ನೀಳ ಮಾರೂ ೪೭೦ ತೆನೆಗಳೂ, ಪಡುವ ನಿಟ್ಟು೧ಕ್ಕೆ ೬೪೯ ನೀಳಮಾರೂ ೩೯೦ ತೆನೆಗಳೂ, ಬಡಗಲ ನಿಟ್ಟು ೧ಕ್ಕೆ ೪೧೧ ನೀಳಮಾರೂ ೫೯೯ ತೆನೆಗಳೂ, ಈ ಮೇರೆಗೆ ಅಳತೆಮಾಡಿ, ತ್ರಿನಯನೇಶ್ವರ ಸ್ವಾಮಿದೇವಸ್ಥಾನವನ್ನು ಒಳಕ್ಕೆ ಸೇರಿಸಿಕೊಂಡು ಕಾಮಗಾರಿ ಆಗುವಷ್ಟರಲ್ಲಿಯೇ, ಚಾಮರಾಜಒಡೆಯರವರಿಗೆ ಪಟ್ಟವಾಯಿತು. ಈ ಚಾಮರಾಜಒಡೆಯರವರು ಅದೇಮೇರೆಗೆ ಕೋಟೆಕೊತ್ತಲ ಮಲಕಿನ ತೆನೆಗಳನ್ನು ಸಹ ಕಟ್ಟಿಸಿದರು. ಕಂಠೀರವ ನರಸರಾಜ ಒಡೆಯರವರು ಇದನ್ನು ಮತ್ತೂ ಬಲಪಡಿಸಿ ಅಲ್ಲಿನ ಚಾವಡಿಯಲ್ಲಿ ಮಾಡಿಸಿದ ಫಿರಂಗಿಗಳನ್ನು ಮುಂದೆ ಹೇಳುವಂತೆ ಇಡಿಸಿದರು.

ಫಿರಂಗಿಗಳನ್ನು ಇಡಿಸಿದ್ದು.—
(೧) ಆಗ್ನೇಯದಿಕ್ಕಿನಲ್ಲಿ ನೀಳ ೧॥ ಮೊಳವೂ ಸುತ್ತು ೨||| ಮೊಳವೂ ಗುಂಡು ೬ ಅಂಗುಲವೂ ಉಳ್ಳ ರಾಮಚಂದ್ರನೆಂಬ ಫಿರಂಗಿ ; (೨) ನೈರುತ್ಯದಿಕ್ಕಿನಲ್ಲಿ ನೀಳ ೧೨ ಮೊಳವೂ ಸುತ್ತು ೨||| ಮೊಳವೂ ಗುಂಡು ೫॥ ಅಂಗುಲವೂ ಉಳ್ಳ ರಾಮಚಂದ್ರನೆಂಬ ಫಿರಂಗಿ ; (೩) ಅರಮನೇ ಹಿಂದಣ ಪೇಣ್ಣು ಕೊತ್ತಲದಲ್ಲಿ ನೀಳ ೮|||ಮೊಳವೂ ಸುತ್ತು ೨। ಮೊಳವೂ ಗುಂಡು ೪ ಅಂಗುಲವೂ ಉಳ್ಳ ಮುದ್ದುಕೃಷ್ಣನೆಂಬ ಫಿರಂಗಿ ; (೪) ಈಶಾನ್ಯದಿಕ್ಕು, ಅರಮನೇ ಮುಂಭಾಗ, ಚಾಮುಂಡೇಶ್ವರೀ ಕೊತ್ತಲದಲ್ಲಿ ನೀಳ ೨೧ ಮೊಳವೂ ಸುತ್ತು ೫ಮೊಳವೂ ಗುಂಡು ೯ ಅಂಗುಲವೂ ಉಳ್ಳ ಲಕ್ಷ್ಮೀರಮಣನೆಂಬ ಫಿರಂಗಿ ; (೫) ವಾಯುವ್ಯದಿಕ್ಕಿನಲ್ಲಿ ನೀಳ ೧೦ ಮೊಳವೂ ಸುತ್ತು ೩ ಮೊಳವೂ ಉಳ್ಳ ಚಾಮುಂಡೇಶ್ವರಿ ಎಂಬ ಫಿರಂಗಿ ; (೬) ಇದಕ್ಕೆ ಮೂಡಲಾಗಿ ಬಡಗಣ ಬಾಗಿಲಮೇಲೆ ಇರುವ ಹುಲೀ ಮುಖದ ಕೊತ್ತಲದಲ್ಲಿ ನೀಳ ೭ ಮೊಳವೂ ಸುತ್ತು ೧ ಮೊಳವೂ ಗುಂಡು ೨ ಅಂಗುಲವೂ ಉಳ್ಳ ನಾಗರಮುರಿ ಫಿರಂಗಿ ; (೭) ಅದಕ್ಕೆ ಮೂಡಲಾಗಿ ಚಿಣ್ಣಗೌಡನ ಹಟ್ಟೀಬಳಿಯಲ್ಲಿ ನೀಳ ೧೪ ಮೊಳವೂ ಸುತ್ತು ೨||| ಮೊಳವೂ ಗುಂಡು ೫ ಅಂಗುಲವೂ ಉಳ್ಳ ರಂಗನಾಥನೆಂಬ ಫಿರಂಗಿ ; (೮) ಇದಕ್ಕೆ ಮೂಡಲಲ್ಲಿ ನೀಳ ೧೪ ಮೊಳವೂ ಸುತ್ತು ೩ ಮೊಳವೂ ಗುಂಡು ೪॥ ಅಂಗುಲವೂ ಉಳ್ಳ ಭೈರವನೆಂಬ ಫಿರಂಗಿ ; (೯) ಈಶಾನ್ಯದಿಕ್ಕಿನ ಮೂಲೆಯಲ್ಲಿ ನೀಳ ೧೪ ಮೊಳವೂ ಸುತ್ತು ೩ ಮೊಳವೂ ಗುಂಡು ೬ ಅಂಗುಲವೂ ಉಳ್ಳ ರಾಮಬಾಣನೆಂಬ ಫಿರಂಗಿ ; (೧೦) ಇದಕ್ಕೆ ತೆಂಕಲಲ್ಲಿ ನೀಳ ೧೦॥ ಮೊಳವೂ ಸುತ್ತು ೨॥ ಮೊಳವೂ ಗುಂಡು ೫ ಅಂಗುಲವೂ ಉಳ್ಳ ಉಗ್ರನರಸಿಂಹನೆಂಬ ಫಿರಂಗಿ ; (೧೧) ಮೇಲೆ ಹೇಳಿದವುಗಳಲ್ಲದೆ ಒಂದು ಚಿಕ್ಕ ಫಿರಂಗಿ. ಮೇಲೆಹೇಳಿದ ೧೧ ಫಿರಂಗಿಗಳಲ್ಲಿ ಮೊದಲಿನ ೪ ಒಳಕೋಟೆಯ ಕೊತ್ತಲಗಳಲ್ಲಿಯೂ ಮಿಕ್ಕವುಗಳು ಹೊರಕೋಟೆಯ ಕೊತ್ತಲಗಳಲ್ಲಿಯೂ ಇರಿಸಿ ಇದ್ದವುಗಳು.

ಕೊತ್ತಲಗಳಲ್ಲಿ ಇರಿಸಿದ್ದ ಗುಂಡುಗಳು.—ಗುಂಡು ೧೯೨೩, ವಿಳಂಬಿ ಸಂವತ್ಸರದವರೆಗೆ ಇದ್ದ ಗುಂಡುಗಳು ೬೦೦೦, ಹೆರಳೇಕಾಯಿಗಾತ್ರದ ಗುಂಡುಗಳು ೩೦೦೦, ಕಬ್ಬಿಣದ ಗುಂಡುಗಳು ೨೩೦೦೦, ವಿಕಾರಿ ಸಂವತ್ಸರದಲ್ಲಿ ದೊಡ್ಡ ಮಾಡಿದ ಗುಂಡುಗಳು ೪೪೦೦, ಚಿಕ್ಕಗುಂಡು ೫೩೧೨. ಒಟ್ಟು ಗುಂಡುಗಳ ಸಂಖ್ಯೆ ೪೩೪೩೯. ಇದಲ್ಲದೆ, ಕಂಠೀರವ ನರಸರಾಜ ಒಡೆಯರವರು, ಯುದ್ಧಕಾಲದಲ್ಲಿ ಗುಂಡುಗಳನ್ನು ಹೊಡೆದರೆ ಅವು ಒಡೆದು ಕೊಂಡು ಒಳಗೆ ತುಂಬಿರುವ ಚೂರಿ ಕತ್ತಿ ಕಠಾರಿ ಮೊಳೆ ಸಣ್ಣಗುಂಡು ಮೊದಲಾದವುಗಳಿಂದ ಬಹುಜನರು ಹತರಾಗುವಂತೆ ಮಾಡಿರುವ ತೊಳ್ಳು ಗುಂಡುಗಳನ್ನೂ ತುಪಾಕಿಗುಂಡುಗಳನ್ನೂ ಇರಿಸುವದಕ್ಕೆ ಮನೆಗಳನ್ನೂ, ಮದ್ದಿನ ಮನೆಗಳನ್ನೂ ಮಾಡಿಸಿ, ಶ್ರೀರಂಗಪಟ್ಟಣ ಬೆಂತೆಯೇ ಧಾನ್ಯಾದಿಗಳನ್ನು ತುಂಬುವದಕ್ಕೆ ಉಗ್ರಾಣಗಳನ್ನು ಮಾಡಿಸಿದರು.

ಮಹೀಶರ ಅರಮನೆಯನ್ನು ದೃಢವಾಗಿ ಕಟ್ಟಿಸಿದ್ದು.—ಮಹೀಶೂರ ಅರಮನೆಯು ಶಿಥಿಲವಾಗಿ ಇದ್ದದರಿಂದ ಜಂತದ ತೊಟ್ಟಿ ಸಮುಖದ ತೊಟ್ಟಿ

ಸೌಂದರ್ಯವಿಲಾಸದ ತೊಟ್ಟಿ ನಾಮತೀರ್ಥದ ತೊಟ್ಟಿ ಮುಂತಾದ ತೊಟ್ಟಿಗಳನ್ನೂ, ಒಳಬಾಗಿಲಲ್ಲಿ ಸಾಲಗೇರಿಗಳನ್ನೂ ವಿಸ್ತಾರವಾಗಿ ಕಟ್ಟಿಸಿ, ಈ ಅರಮನೆಯಲ್ಲಿ ಇದ್ದುಕೊಂಡು ಉಗ್ರಾಣದ ಪದಾರ್ಥಗಳನ್ನೂ ಹಪ್ಪಳ ಉಪ್ಪಿನಕಾಯಿ ಮುಂತಾದ ಪದಾರ್ಥಗಳನ್ನೂ ಅಚ್ಚುಕಟ್ಟಾಗಿ ಮಾಡಿಸಿ ಶ್ರೀರಂಗಪಟ್ಟಣದ ಅರಮನೆಗೆ ಕಳುಹಿಸುವದಕ್ಕೆ ಕೆಲವುಜನ ಅಪ್ಪೇರುಗಳನ್ನೂ, ಇದರ ವಿಚಾರಣೆಯನ್ನು ಮಾಡುವದಕ್ಕೆ ಹೆಚ್ಚಾಗಿ ಇಬ್ಬರು ಗುರಿಕಾರರು ಕರಣೀಕರು ಮುಂತಾದ ಜನರನ್ನೂ ನೇಮಿಸಿದರು ; ಈ ಪೂರ ಕೋಟೆಯನ್ನು ಭದ್ರವಾಗಿ ಕಟ್ಟಿಸಿ, ಈ ಪೂರ ಕಾವಲಿಗೆ ಓಲೇಕಾರರು ಮುಂತಾದವರನ್ನು ನೇಮಿಸಿದರು.

ಧೊರೆಗಳು ತಾವು ಪಾಳ್ಯಗಾರರಿಂದ ಸಾಧಿಸಿದ ರಾಜ್ಯಗಳಿಗೆ ಆಯಾ ರಾಜ್ಯಗಳ ವಿಧವರಿತು ಕಂದಾಯಗಳನ್ನು ನಿಬಂಧನೆ ಮಾಡಿ, ಧನದಿಂದ ಕೊಬ್ಬಿದ ಜನರಿಗೆ ಅವರ ಜೀವನೋಪಾಯಕ್ಕೆ ತಕ್ಕಷ್ಟು ದ್ರವ್ಯವನ್ನು ಕೊಟ್ಟು, ನಿಂತದ್ರವ್ಯವನ್ನು ಅರಮನೆಗೆ ತೆಗೆದುಕೊಂಡು, ಮುಂದಕ್ಕೆ ಆ ಜನರು ತುಂಟತನ ಮಾಡದಂತೆಯೂ ಪ್ರಜಾಸಂರಕ್ಷಣಾರ್ಥವಾಗಿಯೂ ಗಡಿಯೊಂದಕ್ಕೆ ಒಬ್ಬ ಸುಬೇದಾರ, ಇಬ್ಬರು ಕರಣೀಕರು, ಗುಮಾಸ್ತರು, ಠಾಣೇದಾರರು ಮುಂತಾದ ಜನರನ್ನು ನೇಮಿಸಿದರು ; ಪೂರ್ವದಲ್ಲಿ ಹೇಳಿರುವಂತೆ ಹೊಸದಾಗಿ ಕಂಠೀರಾಯಿ ಹಣಗಳನ್ನೂ ವರಹಾಗಳನ್ನೂ ಮಾಡಿಸಿದರು.

ಈರೀತಿಯಲ್ಲಿ ರಣಧೀರ ಕಂಠೀರವನರಸರಾಜ ಒಡೆಯರವರು, ಇವರ ಪರಾಕ್ರಮಕ್ಕೆ ಭೂಲೋಕದಲ್ಲಿ ಒಂದೂ ಸಾಟಿಯಿಲ್ಲವೆಂತಲೂ ಕಲಿಯುಗ ಭೀಮನೆಂತಲೂ ಹೊಗಳಿಸಿಕೊಳ್ಳುತ್ತಾ ಸತ್ಕೀರ್ತಿಯನ್ನು ಪಡೆದು ಧರ್ಮದಿಂದ ರಾಜ್ಯಪರಿಪಾಲನೆಯನ್ನು ಮಾಡುತ್ತಿದ್ದರು. ಹೀಗಿರುವಲ್ಲಿ ಇವರಿಗೆ ದೇಹಕ್ಕೆ ಆಯಾಸವಾಗಲು, ಇವರು ಪೂರ್ವದಂತೆಯೇ ಕಲ್ಲಿನ ಮಂಚದ ಮೇಲೆ ಪವಡಿಸಿಕೊಂಡು, ತಮ್ಮ ದಳವಾಯಿ ಕಾರಗಳ್ಳಿ ಹಂಪರಾಜಯ್ಯ ಮುಂತಾದ ಆಪ್ತಜನರನ್ನು ಕರೆಯಿಸಿ, ಕಲ್ಲಿನ ಚೌಕಿಯಮೇಲೆ ಮುಹೂರ್ತ ಮಾಡಿ, ಇನ್ನುಮೇಲೆ ತಮ್ಮದೇಹ ನಿಲ್ಲುವದಿಲ್ಲವೆಂದು ತಿಳಿದು, ಗುಂಡಲಲ್ಲಿ

ರುವ ತಮ್ಮ ಭಿನ್ನೋದರ ಚಿಕ್ಕಪ್ಪಾಜಿಯವರಾದ ಮುಪ್ಪಿನ ದೇವರಾಜ ಒಡೆಯರವರ ೩ನೇ ಕುಮಾರರು ದೇವರಾಜ ಒಡೆಯರೆಂಬವರನ್ನು ತಮಗೆ ಸ್ವೀಕೃತಪುತ್ರರನ್ನಾಗಿ ಮಾಡಿಕೊಳ್ಳುವದರಿಂದ, ಮುಂದೆ ಅವರಿಗೆ ಪಟ್ಟವನ್ನು ಕಟ್ಟಿ, ಅವರ ಆಜ್ಞಾನುಸಾರವಾಗಿ ನಡೆದುಕೊಳ್ಳುವಂತೆ ಎಲ್ಲರಿಗೂ ಕಟ್ಟುಮಾಡಿ, ಶಾಲೀವಾಹನ ಶಕ ೧೫೮೨ನೇ ವಿಕಾರಿ ಸಂವತ್ಸರದ ಶ್ರಾವಣ ಬಹುಳ ೫ಯಲ್ಲಿ ಅವರನ್ನು ರಾಜಮರ್ಯಾದೆಯಿಂದ್ಧ ಕರೆತರಿಸಿ, ಸ್ವೀಕಾರವನ್ನು ಮಾಡಿಕೊಂಡು, ಆ ಶ್ರಾವಣ ಬಹುಳ ೮ಯಲ್ಲಿ ದೇವೇಂದ್ರನಿಂದ ಸನ್ಮಾನಿತರಾಗಬೇಕೆಂದು ಹೊರಟುಹೋದರು. ಇವರ ದೇಹವು ಸಾರ್ಥಕವಾಗುವ ಕಾಲದಲ್ಲಿ ಇವರ ಪತ್ನಿಯರೆಲ್ಲರೂ ಸಹಗಮನ ಮಾಡಿದರು. ಇವರಿಗೆ ಉತ್ತರಕ್ರಿಯಾದಿಗಳನ್ನು ಇವರ ಗಾಂಧರ್ವಪತ್ನಿಯರಾದ ನರಸಾಜಮ್ಮಯ್ಯನವರ ಪುತ್ರರಾದ ದೇವರಾಜಯ್ಯನವರು ಮಾಡಿದರು.

	ವರ್ಷ.	ತಿಂಗಳು.	ದಿನ.
ರಣಧೀರ ಕಂಠೀರವ ನರಸರಾಜ ಒಡೆಯರವರ ಆದ್ಯಂತ ವಯಸ್ಸು.	೪೪	೩	೧೦
” ” ಆಳಿಕೆ.	೨೦	೯	೨೧

ಇವರ ಆಳಿಕೆಯಲ್ಲಿ ದಳವಾಯಿತನ ಮಾಡಿದವರು.—

೧. ಬೆಟ್ಟದ ಚಾಮರಾಜ ಒಡೆಯರವರ ಗಾಂಧರ್ವಪುತ್ರರು ವಿಕ್ರಮರಾಯರು	..	೦	೦	೨೮
೨. ತಿಮ್ಮಪ್ಪನಾಯಕ	..	೨	೧	೬
೩. ನಂಜರಾಜಯ್ಯ	..	೬	೦	೦
೪. ಲಿಂಗರಾಜಯ್ಯ	..	೧	೬	೦
೫. ಕೆಂಪಯ್ಯ	..	೧	೦	೦
೬. ಲಿಂಗೇಗೌಡ	೧ನೇಸಾರಿ	೧	೨	೦
”	೨ನೇಸಾರಿ	೧	೬	೦
೭. ಕಾರಗಳ್ಳಿಹಂಪರಾಜಯ್ಯ ..	೧ನೇಸಾರಿ	೧	೧	೦
” ” ..	೨ನೇಸಾರಿ	೪	೩	[illegible]
೮. ದಾಸರಾಜಯ್ಯನವರು	..	೨	೧	೮

೭ನೇ ಅಧ್ಯಾಯ.

೧೩. ದೊಡ್ಡದೇವರಾಜ ಒಡೆಯರವರು.

ಜನನ — ಶಾ|| ಶಕ. ೧೫೫೦ನೇ ಪ್ರಭವ ಸಂವತ್ಸರದ ಜ್ಯೇಷ್ಠ ಬಹುಳ ೫ ಶುಕ್ರವಾರ ಧನಿಷ್ಠಾ ನಕ್ಷತ್ರ ರಾತ್ರಿ ೨೬ನೇ ಗಳಿಗೆಗೆ ಸಲ್ಲುವ ವೃಷಭಲಗ್ನದಲ್ಲಿ ದೇವಾಜಮ್ಮಣ್ಣಿಯವರ ಗರ್ಭಸುಧಾಂಬುಧಿಯಲ್ಲಿ.

ಪಟ್ಟಾಭಿಷೇಕ. — ೧೫೮೨ನೇ ವಿಕಾರಿ ಸಂವತ್ಸರದ ಭಾದ್ರಪದ ಶುದ್ಧ ೧೦.

ಪತ್ನಿಯರು. — ಶಾ|| ಶಕ. ೧೫೬೨ನೇ ಪ್ರಮಾಥಿ ಸಂವತ್ಸರದ ವೈಶಾಖ ಶುದ್ಧ ೯ಯಲ್ಲಿ (೧) ಮೂಗೂರು ಬಾಳೇಅರಸಿನವರ ಮಕ್ಕಳು ಅಮೃತಮ್ಮಣ್ಣಿಯವರು ; (೨) ಅರಕೋಟಾರದಚನ್ನರಾಜಯ್ಯನವರ ಮಕ್ಕಳು ಮುದ್ದಾಜಮ್ಮಣ್ಣಿಯವರು ; (೩) ೧೫೭೫ನೇ ನಂದನ ಸಂವತ್ಸರದ ಫಾಲ್ಗುನ ಬಹುಳ ೧ಯಲ್ಲಿ ಅರ್ಕವಿವಾಹಪುರಸ್ಸರ ಅಮಚವಾಡೀ ಲಿಂಗರಾಜಯ್ಯನವರ ಮಕ್ಕಳು ದೇವಾಜಮ್ಮಣ್ಣಿಯವರು. ಈ ಮೂರು ವಿವಾಹಗಳಲ್ಲಿ ಮೊದಲಿನ ೨ ಇವರು ಗುಂಡಲಿನಲ್ಲಿ ಇದ್ದಾಗ ಇವರ ತಂದೆಗಳು ಮುಪ್ಪಿನ ದೇವರಾಜ-ಒಡೆಯರವರು ಮಾಡಿಸಿದವುಗಳು, ೩ನೇದು ಅನಂತರ ಇವರೇ ಮಾಡಿಕೊಂಡದ್ದು.

ಸಂತಾನ. — ಪುತ್ರರು — (೧) ಶಾ|| ಶಕ ೧೫೬೮ನೇ ಪಾರ್ಥಿವ ಸಂವತ್ಸರದ ಆಶ್ವಯುಜ ಶುದ್ಧ ೨ ಚಂದ್ರವಾರ ಶತಭಿಷಾ ನಕ್ಷತ್ರ ೩ನೇ ಪಾದ ರಾತ್ರಿ ೧೦||ನೇ ಗಳಿಗೆಗೆ ಸಲ್ಲುವ ಮಿಥುನಲಗ್ನದಲ್ಲಿ ಚಿಕ್ಕ ದೇವರಾಜ ಒಡೆಯರವರು ; (೨) ಶಾ|| ಶಕ ೧೫೬೯ನೇ ವ್ಯಯ ಸಂವತ್ಸರದ ಫಾಲ್ಗುನ ಶುದ್ಧ ೧ಯಲ್ಲಿ ಕಂಠೀರವಅರಸಿನವರು. ಪುತ್ರಿಯರು. — (೧) ದೊಡ್ಡ ದೇವೀರಮ್ಮಣ್ಣಿಯವರು, (೨) ಗುರುವಾಜಮ್ಮಣ್ಣಿಯವರು. ಈ ನಾಲ್ಕು ಮಂದಿಯೂ ಅಮೃತಮ್ಮಣ್ಣಿಯವರಲ್ಲಿ ಜನಿಸಿದವರು. ಮಿಕ್ಕ ಇಬ್ಬರು ಪತ್ನಿಯರಿಗೂ ಮಕ್ಕಳಿಲ್ಲ.

ದೇಶಗಳನ್ನು ಕಟ್ಟಿದ್ದು.

ಶಾ|| ಶಕ ೧೫೮೫ನೇ ಶುಭಕೃತು ಸಂವತ್ಸರದ ಮಾಘ ಶುದ್ಧ ೫ಯಲ್ಲಿ ವಿಜಾಪುರದ ತುರುಕರಿಂದ ಬಿದರೆಹೊನ್ನಾಳಿ ; ತುಮಕೂರು ಪಾಳ್ಯಗಾರನಿಂದ ಚೇಳೂರು, ಬಿದರೆ.

,, ,, ,, ಫಾಲ್ಗುನ ಶುದ್ಧ ೧ಯಲ್ಲಿ ಕೆಳದೀ ಶಿವಪ್ಪನಾಯಕನಿಂದ ಸಂಪಿಗೆ.

೧೫೮೬ನೇ ಶೋಭಕೃತು ಸಂವತ್ಸರದ ಚೈತ್ರಶುದ್ಧ ೨ಯಲ್ಲಿ ಗೋಲಕೊಂಡಾ ತುರುಕರಿಂದ ಚಿಕ್ಕನಾಯಕನ ಹಳ್ಳಿ.

ಶಾ॥ ಶಕ ೧೫೮೫ನೇ ಶೋಭಕೃತು ಸಂ॥ ಮಾರ್ಗಶಿರಶುದ್ಧ ೧೩ಲ್ಲಿ ಕೆಳದೀ ಶಿವಪ್ಪನಾಯಕ
ನಿಂದ ಹಾಸನ.

೧೫೮೯ನೇ ಪ್ಲವಂಗ ಸಂ॥ ಆಷಾಢ ಬ॥ ೧೫ಯಲ್ಲಿ ಮಧುರೇ ಪಾಳ್ಯಗಾರ ಚಿಕ್ಕಪ್ಪ
ನಾಯಕನಿಂದ ಈರೋಡು.

,, ,, ಮಾರ್ಗಶಿರ ಶುದ್ಧ ೧೦ಯಲ್ಲಿ ,, ಧಾರಾಪುರ.

,, ,, ,, ಬಹುಳ ೩ಯಲ್ಲಿ ಕೆಂಪೇಗೌಡನಿಂದ ಹುಲಿ
ಯೂರುದುರ್ಗ.

,, ,, ಮಾಘ ಶುದ್ಧ ೧೫ಲ್ಲಿ ,, ಕುಣಿಗಲು.

,, ,, ಫಾಲ್ಗುನ ಶುದ್ಧ ೧೦ಲ್ಲಿ ಘಟ್ಟಮೊದಲ್ಯಾರಿಂದ ವಾಮಲೂರು.

ನರಸೀಪುರದ ಲಕ್ಷ್ಮಪ್ಪನಾಯಕನಿಂದ ಸಕ್ಕರೇಪಟ್ಟಣ, ವಸ್ತಾರೆ, ಹೊನ್ನವಳ್ಳಿ.

ಖಂಡಣೀ ಬರುವಂತೆ ಗೊತ್ತು ಮಾಡಿದ ರಾಜ್ಯಗಳು.—ಕೆಳದೀ ಶಿವಪ್ಪನಾಯಕನ ಕಡೆಯವರಿಂದ ಸಕ್ಕರೇಪಟ್ಟಣ, ವಸ್ತಾರೆ, ಹೊನ್ನವಳ್ಳಿ ; ಮಧುರೆಯ ಪಾಳ್ಯಗಾರ ಚಿಕ್ಕಪ್ಪನಾಯಕನಿಂದ ಮಧುರೆ ಮತ್ತು ತಿರುಚನಾಪಳ್ಳಿ.

ಲಕ್ಷ್ಮಪ್ಪನಾಯಕನಿಂದ ಗಡಿಗಳನ್ನು ಸಾಧಿಸಿದ ವಿವರ.—ಪೂರ್ವದಲ್ಲಿ ರಾಜಒಡೆಯರವರು ನರಸೀಪುರದ ಲಕ್ಷ್ಮಪ್ಪನಾಯಕನನ್ನು ಹೊಡೆದು ಓಡಿಸಿ, ಆ ನರಸೀಪುರವನ್ನು ಕಟ್ಟಿಕೊಂಡ ಮೇಲೆ, ಆ ಲಕ್ಷ್ಮಪ್ಪನಾಯಕ ಇವನ ಮಗ ನರಸಿಂಹನಾಯಕ ಇವನ ಮೊಮ್ಮಗ ಲಕ್ಷ್ಮಪ್ಪನಾಯಕ ಇವರು ಆಯಾ ಆಳಿಕೆಯಲ್ಲಿ ಅಲ್ಲಲ್ಲಿ ಪಾಳ್ಯಗಾರರ ಸಂಗಡ ಸೇರಿಕೊಂಡು ತುಂಟತನ ಮಾಡುತ್ತಿದ್ದರು. ಈ ದೊಡ್ಡದೇವರಾಜಒಡೆಯರವರ ಆಳಿಕೆಯಲ್ಲಿ ಎರಡನೇಸಾರಿ ಹೇಳಿದ ಲಕ್ಷ್ಮಪ್ಪನಾಯಕನು, ಕೆಳದೀ ಶಿವಪ್ಪನಾಯಕನು ಬಲಿಷ್ಠನಾಗಿ ಇದ್ದಾನೆಂದು ತಿಳಿದು, ಅವನಲ್ಲಿ ಸೇರಿಕೊಂಡು, ಶ್ರೀರಂಗಪಟ್ಟಣದಲ್ಲಿ ಹೊಸದಾಗಿ ಧೊರೆತನವಾದ ವಿಷಯವನ್ನೂ ಅಲ್ಲಿನ ಮರ್ಮವನ್ನೂ ಅವನಿಗೆ ತಿಳಿಸಿ, ಶ್ರೀರಂಗಪಟ್ಟಣವನ್ನು ಸಾಧಿಸುವದಕ್ಕೆ ಅದೇ ಸಮಯವೆಂದು ಇನ್ನೂ ಕೆಲವು ಪಾಳ್ಯಗಾರರನ್ನು ಸಂಗಡ ಕರೆದುಕೊಂಡು ಬರುತ್ತಿದ್ದನು. ಈ ವರ್ತಮಾನನ್ನು ತಿಳಿದು, ದೊಡ್ಡದೇವರಾಜಒಡೆಯರವರು ಸೇನಾಸಮೇತರಾಗಿ ಹೊರಟು, ಅವನನ್ನು ಬರುವ ಮಾರ್ಗದಲ್ಲಿಯೇ ತಡೆದು ಓಡಿಸಿ, ಹಿಂದಟ್ಟಿಕೊಂಡು ಹೋಗಿ, ಅವನ ಸೇನಾಜನರಿಗೆ ಕಿವಿ ಮೂಗುಗಳನ್ನು ಕುಯಿಸಿ, ಅವನ ಸೈನ್ಯದಲ್ಲಿದ್ದ ಆನೆ ಕುದುರೆ ಅಂದಳ ವಸ್ತ್ರಾಭರಣ

ಮೊದಲಾದವುಗಳನ್ನು ತೆಗೆದುಕೊಂಡು, ಬರುವಾಗ ಆವನ ರಾಜ್ಯವನ್ನು ಸೂರೆ ಮಾಡಿ, ಅವನಿಗೆ ಶಿಕ್ಷೆ ಮಾಡಿಸಿ, ಮೇಲೆ ಹೇಳಿದ ಸಕ್ಕರೆಪಟ್ಟಣ, ವಸ್ತಾರೆ, ಹೊನ್ನವಳ್ಳಿಗಳನ್ನು ಕಟ್ಟಿಕೊಂಡರು. ಆಗ ಕೆಳದೀ ಶಿವಪ್ಪ ನಾಯಕನ ಕಡೆಯವರು ಬಂದು ಧೊರೆಗಳಿಗೆ ಬಹಳವಾಗಿ ಹೇಳಿಕೊಂಡದ್ದರಿಂದ, ಅವುಗಳಿಂದ ಖಂಡಣಿಯನ್ನು ಗೊತ್ತು ಮಾಡಿಕೊಂಡರು.

ಧರ್ಮಕಾರ್ಯಗಳನ್ನು ಮಾಡಿದ್ದು.—ಶ್ರೀಚಾಮುಂಡೇಶ್ವರೀ ಅಮ್ಮನವರ ಬೆಟ್ಟಕ್ಕೆ ದೇವರ ದರ್ಶನಕ್ಕೆ ಹೋಗಿ ಬರುವ ಜನರಿಗೆ ಹಂತವಿಲ್ಲದೆ ಬಹಳ ತೊಂದರೆಯಾಗಿತ್ತು. ದೊಡ್ಡದೇವರಾಜ ಒಡೆಯರವರು ಇದನ್ನು ಮನಸ್ಸಿಗೆ ತಂದು, ಕ್ರೋಧಿ ಸಂವತ್ಸರದಲ್ಲಿ ಗೈದ ಕಲ್ಲುಗಳಿಂದ ೧೦೦೦ ಸೋಪಾನವನ್ನು ಕಟ್ಟಿಸಿ, ಬೆಟ್ಟದ ಮಧ್ಯದಲ್ಲಿ ಸರ್ವರೂ ಆಶ್ಚರ್ಯ ಪಡುವಂತೆ ಅತಿ ಸುಂದರವಾಗಿ ಶಿಲೆಯಿಂದ ಒಂದು ದೊಡ್ಡ ಬಸವನನ್ನು ಮಾಡಿಸಿ, ಪ್ರತಿಷ್ಠೆಮಾಡಿ, ಪ್ರತಿದಿನದಲ್ಲಿಯೂ ಪೂಜೆ ನಡೆಯುವಂತೆ ಕಟ್ಟು ಮಾಡಿದರು ; ಈ ಬೆಟ್ಟದ ಕಿಬ್ಬಿಯಲ್ಲಿ ೬೩ ಮನೆಗಳನ್ನು ಕಟ್ಟಿಸಿ, ತ್ರಿಮತಸ್ಥ ಬ್ರಾಹ್ಮಣರಿಗೂ ವಿಶ್ವಾವಸು ಸಂವತ್ಸರದ ಮಾಘ ಬಹುಳ ೧೩ ಗುರುವಾರ ಶಿವರಾತ್ರಿ ಪುಣ್ಯಕಾಲದಲ್ಲಿ ೬೩ ವೃತ್ತಿಗಳನ್ನು ಧಾರೆಯೆರೆದು ಕೊಟ್ಟು, ದೇವರಾಜಪುರವೆಂದು ಹೆಸರಿಟ್ಟು, ಈ ವೃತ್ತಿವಂತರಿಗೆ ಚನ್ನಪಟ್ಟಣಕ್ಕೆ ವೆಳತವಾದ ಕಾನಕಾನಹಳ್ಳೀ ಹೋಬಳಿಗೆ ಸೇರಿದ ಗರಕಹಳ್ಳಿ ಸೋಗಾಲ ಮುಂತಾದ ೬ ಗ್ರಾಮಗಳನ್ನು ಕೊಟ್ಟು, ಈ ಅಗ್ರಹಾರಕ್ಕೆ ತಾಂಬ್ರದ ಶಾಸನವನ್ನು ಬರೆಯಿಸಿ ಕೊಟ್ಟರು ; ಈ ಅಗ್ರಹಾರದ ಬಳಿಯಲ್ಲಿ ಒಬ್ಬ ಜಂಗಮ ಒಡೆಯರಿಗೆ ಒಂದು ಮಠವನ್ನು ಕಟ್ಟಿಸಿ, ಕೆಲವು ಭೂಮಿಯನ್ನು ಕೊಟ್ಟು, ಈ ಮಠಕ್ಕೆ ಗಚ್ಚಿನಮಠವೆಂಬದಾಗಿ ಹೆಸರಿಟ್ಟರು ; ಈ ದೇವರಾಜಪುರವೆಂಬ ಅಗ್ರಹಾರಕ್ಕೂ ಮಹೀಶೂರ ಕೋಟೆಗೂ ಮಧ್ಯೆ ಛಾಟಾಮಾರ್ಗದಲ್ಲಿ ದೊಡ್ಡದಾಗಿ ಒಂದು ತಟಾಕವನ್ನು ನಿರ್ಮಿಸಿ, ಅದಕ್ಕೆ ದೇವಾಂಬುಧಿ ಎಂದು ಹೆಸರಿಟ್ಟು, ಇದೇ ವಿಶ್ವಾವಸು ಸಂವತ್ಸರದ ಫಾಲ್ಗುನ ಶುದ್ಧ ೧೧ ಶನಿವಾರ ಉತ್ತರಾನಕ್ಷತ್ರದಲ್ಲಿ ಈ ತಟಾಕಪ್ರತಿಷ್ಠೆಯನ್ನು ಮಾಡಿದರು.

ದೊಡ್ಡ ದೇವರಾಜ ಒಡೆಯರವರು ಮಹೀಶೂರ ತ್ರಿನಯನೇಶ್ವರ ಸ್ವಾಮಿದೇವಸ್ಥಾನದ ದ್ವಾರಪಾಲಕರ ಮುಂಭಾಗ ಭದ್ರಬಾಗಿಲ ಕೈಸಾಲೆಗೆ

ಪೂರ್ವ ಅಂಕಣ ನಿಟ್ಟುಸೂಡು ೩ಕ್ಕೆ ೨೩ ಅಂಕಣ ಕಲ್ಲು ಮಂಟಪವನ್ನು ಕಟ್ಟಿಸಿ, ಈಮಂಟಪ ಮಧ್ಯದಲ್ಲಿ ದೊಡ್ಡದಾಗಿ ಗಣಪತಿ ವೃಷಭ ಸಹಿತವಾಗಿ ಗರುಡಕಂಬದಂತೆ ಒಂದು ಶಿಲಾಸ್ತಂಭವನ್ನು ನಿಲ್ಲಿಸಿದರು; ಈದೇವಸ್ಥಾನದ ಮಹಾದ್ವಾರಕ್ಕೆ ೭ ನೆಲೆಗೋಪುರವನ್ನು ಕಟ್ಟಿಸಬೇಕೆಂದು ಚಿತ್ರ ವಿಚಿತ್ರವಾಗಿ ಶಿಲೆಗಳಿಂದಲೂ ಗಾರೆಯಿಂದಲೂ ಗೋಪುರವನ್ನು ಮಾಡಿಸಿದರು; ಈ ದೇವಸ್ಥಾನದ ಕೈಸಾಲೆಯ ಅಂಕಣಗಳಲ್ಲಿ ಪಂಚವಿಂಶತಿ ಲೀಲಾಮೂರ್ತಿ ವಿಗ್ರಹಗಳನ್ನು ಪ್ರತಿಷ್ಠೆಮಾಡಿಸಬೇಕೆಂದು ಕೆಲವು ಶಿಲಾ ವಿಗ್ರಹಗಳನ್ನು ಮಾಡಿಸಿದ್ದಲ್ಲದೆ, ಈದೇವಸ್ಥಾನದಲ್ಲಿ ದೇವರ ಎದುರಿಗೆ ಕೈಮುಗಿದುಕೊಂಡು ನಿಂತಿರುವಂತೆ ಶಿಲೆಯಿಂದ ತಮ್ಮ ಭಕ್ತವಿಗ್ರಹವನ್ನು ಮಾಡಿಸಿದರು; ಈ ಪಂಚವಿಂಶತಿ ಲೀಲಾಮೂರ್ತಿ ವಿಗ್ರಹಗಳು ರಾಜಕಾರ್ಯನಿಮಿತ್ತವಾಗಿ ದೇವಸ್ಥಾನದ ಗೋಪುರದ ಬಾಗಿಲಿಗೆ ಪೂರ್ವ ಭದ್ರಬಾಗಿಲಿಗೆ ಪಶ್ಚಿಮ ಈ ಮಧ್ಯೆ ದೊಡ್ಡ ಅಡಿಗೇಮನೆಯಲ್ಲಿ ಭೂಸ್ಥಾಪನೆ ಮಾಡಲ್ಪಟ್ಟವೆ.

ದೊಡ್ಡದೇವರಾಜಒಡೆಯರವರು ತಿರುಪತಿ ವೆಂಕಟರಮಣಸ್ವಾಮಿಯವರಿಗೆ ನವರತ್ನಖಚಿತವಾದ ಮಂಟಪದ ಮಂದಾಸನವನ್ನೂ, ನಿತ್ಯಗಟ್ಟಲೆಯಲ್ಲಿಯೂ ಸಹಸ್ರನಾಮಾರ್ಚನೆ ನಡೆಯುವದಕ್ಕೆ ಹೂವು ತೋಳಸೀ ತೋಟವನ್ನು ಹಾಕಿಸಿ ಈ ಪುಷ್ಪಾರ್ಚನೆಗಾಗಿಯೂ ಪೊಂಗಲು ನೈವೇದ್ಯಕ್ಕೂ ಎರಡು ಚಿನ್ನದ ಗಂಗಾಳಗಳನ್ನೂ, ನಿತ್ಯಗಟ್ಟಲೆ ನಂದಾದೀವಿಗೆ ಮುಂತಾದ ಸೇವೆಗಳು ನಡೆಯುವದಕ್ಕೂ ಈ ಜನರ ಜೀವನ ನಡೆಯುವದಕ್ಕೂ ಗ್ರಾಮಗಳನ್ನೂ ಒಪ್ಪಿಸಿದರು.

ಧೊರೆಗಳು ತಮ್ಮ ರಾಜ್ಯದ ಮಾರ್ಗಗಳಲ್ಲೆಲ್ಲಾ ಗಾವುದ ೧ಕ್ಕೆ ಒಂದೊಂದು ಅನ್ನಸತ್ರವನ್ನೂ ಕಲ್ಲುಮಂಟಪ ತೋಪು ಸಾಲುಮರ ಕೊಳಗಳನ್ನೂ ಕಟ್ಟಿಸಿದರು. ಇದಲ್ಲದೆ ಇವರು ನಂಜನಗೂಡು ಯಡತೊರೆ ರಾಮನಾಥಪುರ ಮೇಲುಕೋಟೆ ತಿರುಪತಿ ಕಾಶಿ ರಾಮೇಶ್ವರ ಹಸ್ತಿಗಿರಿ ಶ್ರೀರಂಗಮುಂತಾದ ಪುಣ್ಯಕ್ಷೇತ್ರಗಳಲ್ಲಿ ವಾಸಮಾಡಿಕೊಂಡಿದ್ದ ಬಡವರಾದ ಬ್ರಾಹ್ಮಣರಿಗೆ ಕನ್ಯಾದಾನ ಉಪನಯನದಾನಗಳನ್ನು ಕೊಟ್ಟದ್ದಲ್ಲದೆ,ಅನೇಕ ಯಜ್ಞಗಳನ್ನುಮಾಡಿಸಿ, ಬ್ರಾಹ್ಮಣರಿಗೆ ಭಟ್ಟಮಾನ್ಯ ವರ್ಷಾಶನ ಮಾಸಾ

ಶನ ಮುಂತಾದ ಜೀವನಗಳನ್ನು ಕಲ್ಪಿಸಿ, ತಮ್ಮ ಪೂರ್ವಿಕರು ಮಾಡಿದ ದಾನ ಧರ್ಮಗಳನ್ನು ಚೆನ್ನಾಗಿ ಪರಿಪಾಲನೆ ಮಾಡುತ್ತಿದ್ದರು ; ತಮ್ಮ ಕುಲದೇವತೆಯಾದ ಶ್ರೀಚಾಮುಂಡೇಶ್ವರೀ ಅಮ್ಮನವರು ಶ್ರೀಕಂಠೇಶ್ವರ ಮುಂತಾದ ಮೇಲುಕೋಟೆ ಶ್ರೀರಂಗಪಟ್ಟಣ ಮಹೀಶೂರನಗರ ಮುಂತಾದ ಸ್ಥಳಗಳಲ್ಲಿ ಇರುವ ದೇವರಿಗೆ ಅನೇಕ ವಸ್ತ್ರಾಭರಣ ಗ್ರಾಮ ಭೂಮಿಗಳನ್ನು ಕೊಟ್ಟು ದೇವತಾಸೇವೆಯನ್ನು ಚೆನ್ನಾಗಿ ನಡೆಯಿಸಿದರು.

ಧೊರೆಗಳು ಕಾವೇರೀ ಮಣಿಕರ್ಣಿಕಾತೀರದಲ್ಲಿ ಪ್ರತಿದಿನದಲ್ಲಿಯೂ ಸಹಸ್ರಬ್ರಾಹ್ಮರ ಸಂತರ್ಪಣೆಯಾಗಬೇಕೆಂದು ಆಲೋಚಿಸಿ, ಈ ಮಣಿಕರ್ಣಿಕಾತೀರದಲ್ಲಿ ಮನೆಗಳನ್ನು ಕಟ್ಟಿಸಿ, ದೇವರಾಜಸಮುದ್ರವೆಂಬ ಅಗ್ರಹಾರವನ್ನು ನಿರ್ಮಿಸಿ, ಈ ಅಗ್ರಹಾರದಲ್ಲಿರುವ ತ್ರಿಮತಸ್ಥಬ್ರಾಹ್ಮರಿಗೂ ವೃತ್ತಿಗಳನ್ನು ಧಾರೆಯೆರೆದು ಕೊಟ್ಟರು.

ದೊಡ್ಡದೇವರಾಜಒಡೆಯರವರು ತಮ್ಮ ಪೂರ್ವದರಾಜ್ಯ ತಾವು ಸಾಧಿಸಿದ ರಾಜ್ಯಗಳ ಆದಾಯ ವೆಚ್ಚಗಳನ್ನು ನೋಡಿಕೊಂಡು, ಬೊಕ್ಕಸದಲ್ಲಿ ನಿಲ್ಲಿಸಬೇಕಾದಷ್ಟು ದ್ರವ್ಯವನ್ನು ನಿಲ್ಲಿಸಿ, ಷೋಡಶ ಮಹಾದಾನಗಳನ್ನು ಮಾಡಬೇಕೆಂದು ನಿಶ್ಚಯಿಸಿ, ಆಯಾ ಪುಣ್ಯಕಾಲದಲ್ಲಿ ವರ್ಷ ೧ಕ್ಕೆ ೨–೩ರ ಮೇರೆಗೆ ಪ್ರತ್ಯೇಕಪ್ರತ್ಯೇಕವಾಗಿ ಎಲ್ಲವನ್ನೂ ಮಾಡಿದರು. ಅವು ಯಾವವೆಂದರೆ.–(೧) ತುಲಾಪುರುಷದಾನ, (೨) ಹಿರಣ್ಯಗರ್ಭದಾನ, (೩)ಬ್ರಹ್ಮಾಂಡದಾನ, (೪) ಕಲ್ಪವೃಕ್ಷದಾನ, (೫) ಗೋಸಹಸ್ರದಾನ, (೬) ಹಿರಣ್ಯಕಾಮಧೇನುದಾನ, (೭) ಹಿರಣ್ಯಾಶ್ವದಾನ, (೮) ಹಿರಣ್ಯಾಶ್ವರಥದಾನ, (೯) ಹೇಮಹಸ್ತಿರಥದಾನ, (೧೦) ಪಂಚಲಾಂಗಲದಾನ, (೧೧) ಧರಾದಾನ, (೧೨) ವಿಶ್ವಚಕ್ರದಾನ, (೧೩) ಕಲ್ಪಲತಾದಾನ, (೧೪) ಸಪ್ತಸಾಗರದಾನ, (೧೫) ರತ್ನಧೇನುದಾನ, (೧೬) ಮಹಾಭೂತಘಟದಾನ. ಹೀಗೆ ಷೋಡಶದಾನಗಳನ್ನು ಮಾಡಿದ ಮೇಲೆ ಶ್ರೀಮದ್ರಾಮಾಯಣ ಪುರಾಣ ನಿತ್ಯದಾನ ಗೋದಾನ ದಂಪತಿಪೂಜೆಗಳನ್ನು ಮಾಡುತ್ತಾ, ಬ್ರಾಹ್ಮರ ಮುಖದಿಂದ ಅಷ್ಟಾದಶಪುರಾಣ ಉಪಪುರಾಣಗಳನ್ನೂ ಆಯಾ ಕ್ಷೇತ್ರಮಾಹಾತ್ಮ್ಯಗಳನ್ನೂ ಕೇಳಿದ ಅನಂತರದಲ್ಲಿ, ತಮ್ಮ ಅರಮನೆಯ ಚಾಮುಂಡೇಶ್ವರಿ

ಮತ್ತು ಕೃಷ್ಣದೇವರ ದರ್ಶನವನ್ನು ಮಾಡಿ ತೀರ್ಥ ಪ್ರಸಾದವನ್ನು ಸ್ವೀಕರಿಸಿ, ಆರೋಗಣೆಯನ್ನು ಒಪ್ಪಿಸಿಕೊಳ್ಳುತ್ತಿದ್ದರು.

ದಳವಾಯಿಗಳ ವಿಚಾರ.—ದೊಡ್ಡದೇವರಾಜಒಡೆಯರವರು ತಮಗೆ ಪಟ್ಟವಾಗುತ್ತಲೆ, ಪೂರ್ವದಲ್ಲಿ ದಳವಾಯಿತನವನ್ನು ಮಾಡುತ್ತಿದ್ದ ಕಾರಗಳ್ಳೀ ಹಂಪರಾಜಯ್ಯ ಮುಂತಾದ ಅಧಿಕಾರಸ್ಥರನ್ನು ಕರೆಯಿಸಿ, ದೇಶ ಕೋಶ ಭಂಡಾಗಾರಗಳ ಲೆಕ್ಕವನ್ನು ವಿಚಾರಣೆ ಮಾಡುತ್ತಿರುವಲ್ಲಿ, ಈ ಹಂಪರಾಜಯ್ಯನು ರಾಜ್ಯದ ಹಣ ಕಾಸುಗಳ ವಿಷಯದಲ್ಲಿ ವಂಚಕನಾಗಿದ್ದನೆಂದು ತಿಳಿದದ್ದರಿಂದ, ೧೫೮೨ನೇ ಶಾರ್ವರಿ ಸಂವತ್ಸರದ ವೈಶಾಖ ಬಹುಳ ೩ಯಲ್ಲಿ ಅವನ ಅಧಿಕಾರವನ್ನು ತೆಗೆದು, ಕಳಲೇ ಮಲ್ಲರಾಜಯ್ಯನೆಂಬವನಿಗೆ ಆ ಜ್ಯೇಷ್ಠ ಶುದ್ಧ ೧ದಲ್ಲಿ ನೇಮಕ ಮಾಡಿದರು. ಅನಂತರ ಈ ಮಲ್ಲರಾಜಯ್ಯನಿಗೆ ಅರಮನೇ ಕೆಲಸವನ್ನು ನೋಡುವದಕ್ಕೆ ಸಾಮರ್ಥ್ಯ ಸಾಲದ್ದರಿಂದ, ಅದೇ ಸಂವತ್ಸರದ ಆಷಾಢಶುದ್ಧ ೬ಯಲ್ಲಿ, ಮುದ್ದಯ್ಯನೆಂಬವನಿಗೆ ದಳವಾಯಿತನವನ್ನು ಕೊಟ್ಟರು. ಮುದ್ದಯ್ಯನೆಂಬವನು ತೀರಿ ಹೋದದ್ದರಿಂದ, ಶಾ॥ ೧೫೮೩ನೇ ಪ್ಲವ ಸಂವತ್ಸರದ ಆಶ್ವಯುಜ ಶುದ್ಧ ೬ಯಲ್ಲಿ ಈ ಅಧಿಕಾರವು ನಂಜನಾಥಯ್ಯನೆಂಬವನಿಗೆ ಆಯಿತು; ಈ ಫಾಲ್ಗುಣ ಶುದ್ಧ ೬ಯಲ್ಲಿ ನಂಜನಾಥಯ್ಯನ ಬದಲಿ ಕಾಂತಯ್ಯನಿಗೆ ಬಂದು, ಅವನು ಕೆಲಸ ನೋಡುತ್ತಾ ಇದ್ದು, ಶಾ॥ ೧೫೮೪ನೇ ಶೋಭಕೃತು ಸಂವತ್ಸರದ ವೈಶಾಖ ಶುದ್ಧ ೧೧ಯಲ್ಲಿ ಪೂರ್ವದ ನಂಜನಾಥಯ್ಯನಿಗೇ ನೇಮಕವಾಯಿತು. ಶಾ॥ ೧೫೮೯ನೇ ಪ್ಲವಂಗ ಸಂವತ್ಸರದ ವೈಶಾಖ ಶುದ್ಧ ೧೧ಯಲ್ಲಿ ದಳವಾಯಿ ನಂಜನಾಥಯ್ಯನಿಗೆ ಬದಲಿ ಕಳಲೇ ಕುಮಾರಯ್ಯನೆಂಬವನಿಗೆ ನೇಮಕವಾಯಿತು.

ಮುಖ್ಯವಿಷಯಗಳು.— ಶಾ॥ ೧೫೮೩ನೇ ಪ್ಲವ ಸಂವತ್ಸರದ ಫಾಲ್ಗುನ ಶುದ್ಧ ೧೪ಲ್ಲಿ ದೊಡ್ಡದೇವರಾಜ ಒಡೆಯರವರು ತಮ್ಮ ಹಿರೀಮಕ್ಕಳಾದ ಚಿಕ್ಕದೇವರಾಜಒಡೆಯರವರಿಗೆ ಶ್ರೀರಂಗಪಟ್ಟಣದಲ್ಲಿ ಎರಡು ವಿವಾಹಗಳನ್ನು ಮಾಡಿಸಿ ಅನಂತರ ಇವರು ಶ್ರೀರಂಗಪಟ್ಟಣದಲ್ಲಿಯೇ ಇದ್ದರೆ, ತುಂಟ ಜನರೊಡನೆ ಸೇರಿ ತುಂಟಾಟಗಳನ್ನು ಆಡಿಕೊಂಡು ಇರುವರೆಂದು ತಿಳಿದು, ಇವರಿಗೆ

ವಿದ್ಯಾಬುದ್ಧಿಗಳನ್ನೂ ರಾಜನೀತಿಯನ್ನೂ ಹೇಳುವದಕ್ಕೆ ತಕ್ಕ ಜನರನ್ನು ನೇಮಿಸಿ, ಗುಂಡಲಿಗೆ ಪಳತವಾದ ಹಂಗಳವೆಂಬ ಗ್ರಾಮಕ್ಕೆ ಅವರನ್ನು ಪತ್ನೀಸಮೇತವಾಗಿ ಕಳುಹಿಸಿಕೊಟ್ಟರು.

ದೊಡ್ಡದೇವರಾಜ ಒಡೆಯರವರು ತುಂಟಪಾಳ್ಯಗಾರರನ್ನು ಜಯಿಸಿ, ರಾಜ್ಯಗಳನ್ನು ಕಟ್ಟಿಕೊಂಡಮೇಲೆ, ಅವರಲ್ಲಿ ಸಿಕ್ಕಿದ ಆಭರಣಮುಂತಾದ ನವರತ್ನಗಳಿಂದ, ಅವರನ್ನು ಜಯಿಸಿದ ಗುರುತು ಇರಬೇಕೆಂದು ಯೋಚಿಸಿ, ಮುಂದಕ್ಕೆ ಯಾರಾದರೂ ತುಂಟತನಮಾಡಿದರೆ, ಅವರಶಿರಸ್ಸನ್ನು ಮೆಟ್ಟಿ ಆಳುವರೆಂದು ಜನರು ಭಯಪಡುವಂತೆ ಪಾದುಕೆಯನ್ನು ಮಾಡಿಸಿ ಮೆಟ್ಟಿಕೊಂಡರು.

ಇವರು ಸಾಧಿಸಿದ ರಾಜ್ಯಗಳಲ್ಲಿಯೂ, ಪೂರ್ವದಲ್ಲಿ ಇದ್ದ ರಾಜ್ಯಗಳಲ್ಲಿಯೂ, ಕೇಳಿಕೊಂಡ ಪಾಳ್ಯಗಾರರ ಶೀಲಸ್ವಭಾವಗಳನ್ನು ಚೆನ್ನಾಗಿ ತಿಳಿದು, ಕೆಲವರಿಗೆ ಉಂಬಳಿಗಳನ್ನು ಕೊಟ್ಟು, ಕೆಲವರಿಗೆ ಜೋಡಿಯನ್ನು ನೇಮಕಮಾಡಿ, ಕೆಲವರಿಗೆ ಕಂಡಣೀ ಹಣವನ್ನು ಕೊಡುವಂತೆ ಗೊತ್ತುಮಾಡಿ, ರಾಜನೀತಿಯನ್ನು ಅನುಸರಿಸಿ, ದುಷ್ಟನಿಗ್ರಹ ಶಿಷ್ಟಪರಿಪಾಲನೆಯನ್ನು ಮಾಡುತ್ತಾ ರಾಜ್ಯವನ್ನು ಆಳಿದರು.

ದೊಡ್ಡದೇವರಾಜ ಒಡೆಯರವರು ನವರಾತ್ರಿಯ ಉತ್ಸವ ಮುಂತಾದ ಉತ್ಸವಕಾಲಗಳಲ್ಲಿಯೂ ಯುದ್ಧಕ್ಕೆ ಹೊರಡುವ ಕಾಲದಲ್ಲಿಯೂ, "ರಾಜಕುಲತಿಲಕ ರಾಜಮಾರ್ತಾಂಡ ರಾಜಾಧಿರಾಜ ರಾಜಪರಮೇಶ್ವರ" ಎಂಬ ಬಿರುದುಗಳಿಂದ ಹೊಗಳಿಸಿಕೊಳ್ಳುತ್ತಿದ್ದದ್ದಲ್ಲದೆ, "ದೇವಬ್ರಾಹ್ಮಣ ಪರಿಪಾಲಕ" ಎಂಬ ಬಿರುದುನಿಂದಲೂ ಹೊಗಳಿಸಿಕೊಳ್ಳುತ್ತಾ ಇದ್ದರು. ಇವರು ರಾಜ್ಯವಿಚಾರಣೆಗೋಸ್ಕರ ಚಿಕ್ಕನಾಯಕನಹಳ್ಳಿಗೆ ಹೋಗಿದ್ದ ಕಾಲದಲ್ಲಿ ದೇಹಕ್ಕೆ ಬಹಳ ಆಯಾಸವಾದ್ದರಿಂದ, ಇನ್ನುಮೇಲೆ ತಮ್ಮ ದೇಹವು ನಿಲ್ಲುವದಿಲ್ಲವೆಂದು ತಿಳಿದು, ತಮ್ಮ ಸಮೀಪದಲ್ಲಿ ಇದ್ದ ದಳವಾಯಿ ಕುಮಾರಯ್ಯ ಮುಂತಾದ ಅಧಿಕಾರಿಗಳನ್ನು ಕರೆದು "ನಮ್ಮ ಹಿರೀ ಮಕ್ಕಳಾದ ಚಿಕ್ಕದೇವರಾಜ ಒಡೆಯರವರು ಸಕಲ ವಿದ್ಯಾಬುದ್ಧಿಗಳನ್ನು ಕಲಿತು, ರಾಜನೀತಿಯನ್ನು ಚೆನ್ನಾಗಿ ತಿಳಿದುಕೊಂಡು, ಸಾಹಸ ಪರಾಕ್ರಮಶಾಲಿ

ಗಳಾಗಿ ಇದ್ದಾರೆಂದು ಕೇಳಿರುತ್ತೇವೆ. ಅವರನ್ನು ಕರೆಯಿಸಿ, ನಮ್ಮ ಅನಂತರದಲ್ಲಿ ಅವರಿಗೆ ಪಟ್ಟವನ್ನು ಕಟ್ಟಿ, ಅವರ ಆಜ್ಞಾನುಸಾರವಾಗಿ ನೀವೆಲ್ಲರೂ ಇರತಕ್ಕದ್ದು" ಎಂದು ಕಟ್ಟುಮಾಡಿ, ಶಾಲೀವಾಹನ ಶಕ ೧೫೯೫ನೇ ಪರೀಧಾವಿ ಸಂವತ್ಸರದ ಫಾಲ್ಗುನ ಶುದ್ಧ ೫ಲ್ಲಿ ಆ ಚಿಕ್ಕನಾಯಕನಹಳ್ಳಿಯಲ್ಲಿಯೇ ಸ್ವರ್ಗಸೋಪಾನವನ್ನು ಅಡರಿದರು. ಅನಂತರದಲ್ಲಿ, ಇವರು ತಮ್ಮ ದೇಹವನ್ನು ಕಾವೇರೀ ತೀರದಲ್ಲಿಯೇ ಸಾರ್ಥಕ ಮಾಡಬೇಕೆಂದು ಮೊದಲೇ ಅಪ್ಪಣೆ ಕೊಟ್ಟಿದ್ದದ್ದರಿಂದ, ಇವರ ದೇಹವನ್ನು ಚಿಕ್ಕನಾಯಕನಹಳ್ಳಿಯಿಂದ ಶ್ರೀರಂಗಪಟ್ಟಣದ ಕಾವೇರೀತೀರಕ್ಕೆ ಬಂದೇದಿನ ಜಾಗ್ರತೆಯಾಗಿ ತೆಗೆದುಕೊಂಡು ಬಂದು ದೇಹಸಾರ್ಥಕವನ್ನು ಮಾಡಿದರು. ಇವರ ಪತ್ನಿಯರಲ್ಲಿ ಒಬ್ಬರು ಇವರ ಕಾಲದಲ್ಲಿಯೇ ತೀರಿಹೋದದ್ದರಿಂದ ಮಿಕ್ಕವರೆಲ್ಲರೂ ಆ ಕಾಲದಲ್ಲಿ ಸಹಗಮನ ಮಾಡಿದರು. ಆಗ ದಳವಾಯಿ ಕುಮಾರಯ್ಯನು ಬಿನ್ನವತ್ತಳೆಯನ್ನು ಬರೆದು ಹಂಗಳದಲ್ಲಿ ಇದ್ದ ಚಿಕ್ಕದೇವರಾಜ ಒಡೆಯರವರಿಗೆ ಕಳುಹಿಸಲು, ಚಿಕ್ಕದೇವರಾಜ ಒಡೆಯರವರು ಅಲ್ಲಿಯೇ ಇದ್ದುಕೊಂಡು, ತಮ್ಮ ತಂದೆಯವರಿಗೂ ಮಾತುಶ್ರೀಯವರಿಗೂ ಉತ್ತರಕ್ರಿಯಾದಿಗಳನ್ನು ಮಾಡಿದರು; ಇವರ ತಮ್ಮಂದಿರಾದ ಕಂಠೀರವ ಅರಸಿನವರು ತಂದೆಯವರ ಬಳಿಯಲ್ಲಿಯೇ ಇದ್ದರಾದ್ದರಿಂದ, ಶ್ರೀರಂಗಪಟ್ಟಣದಲ್ಲಿಯೇ ಉತ್ತರಕ್ರಿಯಾದಿಗಳನ್ನು ಮಾಡಿದರು.

		ವರ್ಷ.	ತಿಂಗಳು.	ದಿನ.
ದೊಡ್ಡದೇವರಾಜ ಒಡೆಯರವರ ಆದ್ಯಂತ ವಯಸ್ಸು.	..	೪೫	೮	೧೬
,, ,, ಆಳಿಕೆ.	..	೧೩	೫	೨೬

ಇವರ ಆಳಿಕೆಯಲ್ಲಿ ದಳವಾಯಿತನ ಮಾಡಿದವರು.—

೧.	ಕಾರಗಳ್ಳಿ ಪಂಪರಾಜಯ್ಯ..	..	೦	೮	೨೧
೨.	ಕಳಲೇ ಮಲ್ಲರಾಜಯ್ಯ...	...	೦	೧	೫
೩.	ಮುದ್ದಯ್ಯ.. ..	...	೧	೩	೦
೪.	ನಂಜನಾಥಯ್ಯ.. ೧ನೇ ಸಾರಿ..	..	೦	೫	೦
	೨ನೇ ಸಾರಿ..	..	೫	೦	೦
೫.	ಕಾಂತಯ್ಯ.. ..	..	೦	೨	೫
೬.	ಕಳಲೇ ಕುಮಾರಯ್ಯ... ..	..	೫	೯	೨೫

೮ನೇ ಅಧ್ಯಾಯ.

೧೪. ಚಿಕ್ಕ ದೇವರಾಜ ಒಡೆಯರವರು.

ಜನನ.— ಶಾ॥ ಶಕ ೧೫೬೮ನೇ ಪಾರ್ಥಿವ ಸಂವತ್ಸರದ ಅಶ್ವಯುಜ ಶುದ್ಧ ೧೨ ಚಂದ್ರವಾರ ಶತಭಿಷಾನಕ್ಷತ್ರ ೩ನೇ ಪಾದ ರಾತ್ರಿ ೧೦॥ ಗಳಿಗೆಗೆ ಸಲ್ಲುವ ಮಿಥುನ ಲಗ್ನದಲ್ಲಿ ದೊಡ್ಡದೇವರಾಜ ಒಡೆಯರವರ ಧರ್ಮಪತ್ನಿಯರಾದ ಅಮೃತಮ್ಮಣ್ಣಿಯವರ ಗರ್ಭ ಸುಧಾಂಬುಧಿಯಲ್ಲಿ.

ಪಟ್ಟಾಭಿಷೇಕ.—ದಳವಾಯಿ ಕುಮಾರಯ್ಯ ಮುಂತಾದವರು ಹಂಗಳಕ್ಕೆ ಹೋಗಿ, ಚಿಕ್ಕ ದೇವರಾಜ ಒಡೆಯರವರನ್ನು ಪತ್ನೀ ಪುತ್ರರು ಸಹಿತವಾಗಿ ರಾಜಮರ್ಯಾದೆಯಿಂದ ಕರೆದುಕೊಂಡು ಬಂದು, ಇವರ ತಂದೆಗಳ ಅಜ್ಞಾನುಸಾರವಾಗಿ ೧೫೯೪ನೇ ಪರೀಧಾವಿ ಸಂವತ್ಸರದ ಫಾಲ್ಗುನ ಬಹುಳ ೧೨ಯಲ್ಲಿ ಶ್ರೀರಂಗಪಟ್ಟಣದಲ್ಲಿ ಪಟ್ಟವನ್ನು ಕಟ್ಟಿದರು.

ಪತ್ನಿಯರು.—೧೫೮೪ನೇ ಪ್ಲವಸಂವತ್ಸರದ ಫಾಲ್ಗುನಶುದ್ಧ ೧೪ಯಲ್ಲಿ, ಪಟ್ಟವಾಗುವ ದಕ್ಕೆ ಮುಂಚೆ ಶ್ರೀರಂಗಪಟ್ಟಣದಲ್ಲಿ ಇವರ ತಂದೆಗಳು ಮಾಡಿಸಿದವ್ರುಗಳು.— (೧) ಯಳಂದೂರು ಲಿಂಗರಾಜಯ್ಯನವರ ಮಕ್ಕಳು ದೇವಾಜಮ್ಮಣ್ಣಿಯವರು, (೨) ದಳವಾಯಿ ಕುಮಾರಯ್ಯನವರ ಮಕ್ಕಳು ದೇವಮ್ಮಣ್ಣಿಯವರು; ಪಟ್ಟವಾದಮೇಲೆ ಶ್ರೀರಂಗಪಟ್ಟಣದಲ್ಲಿ ಶಾ॥ ಶಕ ೧೬೦೨ನೇ ಸಿದ್ಧಾರ್ಥಿ ಸಂವತ್ಸರದ ಜ್ಯೇಷ್ಠ ಶುದ್ಧ ೧೫ಯಲ್ಲಿ ಅರ್ಕ ವಿವಾಹಪುರಸ್ಸರವಾಗಿ ಮಾಡಿಕೊಂಡ ಅಷ್ಟಮಹಿಷಿಯರು—(೩) ಮೂಗೂರು ಸೋಮರಾಜಯ್ಯನವರ ಮಕ್ಕಳು ಕೆಂಪಮ್ಮಣ್ಣಿಯವರು, (೪) ಯಳಂದೂರು ಚಾಮರಾಜಯ್ಯನವರ ಮಕ್ಕಳು ಮುದ್ದಮ್ಮಣ್ಣಿಯವರು, (೫) ಕಳಲೇದಳವಾಯಿ ಕುಮಾರಯ್ಯನವರ ಹಿರೀಮಕ್ಕಳು ದೇವಮ್ಮಣ್ಣಿಯವರು, (೬) ದೇವರಾಜಯ್ಯನವರ ಮಕ್ಕಳು ದೊಡ್ಡಮುದ್ದಮ್ಮಣ್ಣಿಯವರು, (೭) ಹುಲ್ಲಹಳ್ಳೀ ವೀರರಾಜಯ್ಯನವರ ಮಕ್ಕಳು ಕೆಂಪನಂಜಮ್ಮಣ್ಣಿಯವರು, (೮) ಈ ವೀರರಾಜಯ್ಯನವರ ಮಕ್ಕಳು ಗೌರಮ್ಮಣ್ಣಿಯವರು, (೯) ಬಸವರಾಜಯ್ಯನವರ ಮಕ್ಕಳು ದೇವೀರಮ್ಮಣ್ಣಿಯರು, (೧೦) ಕೊತ್ತಾಗಾಲದ ಕೃಷ್ಣಯ್ಯನವರ ಮಕ್ಕಳು ಕಾಂತಮ್ಮಣ್ಣಿಯವರು.

ಸಂತಾನ.—ಪುತ್ರರು—(೧) ಶಾ॥ ಶಕ ೧೬೦೪ನೇ ಪರೀಧಾವಿಸಂವತ್ಸರದ ಪುಷ್ಯ ಬಹುಳ ೩ಶುಕ್ರವಾರದಲ್ಲಿ ಯಳಂದೂರು ದೇವಾಜಮ್ಮಣ್ಣಿಯವರಲ್ಲಿ ಕಂಠೀರವನರಸರಾಜ ಒಡೆಯರವರು. ಪುತ್ರಿಯರು—(೨) ಶಾ॥ ಶಕ ೧೬೦೪ನೇ ರೌದ್ರಿ ಸಂವತ್ಸರದ ಪುಷ್ಯ ಶುದ್ಧ ೩ ಗುರುವಾರದಲ್ಲಿ ಕಳಲೇ ದೊಡ್ಡಮುದ್ದಮ್ಮಣ್ಣಿಯವರಲ್ಲಿ ದೇವಾಜಮ್ಮಣ್ಣಿಯವರು.

ದೇಶಗಳನ್ನು ಕಟ್ಟಿದ್ದು.—

ಶಾ॥ ಶಕ ೧೫೯೮ನೇ ರಾಕ್ಷಸ ಸಂ॥ ಮಾಘ ಬಹುಳ ೧೦ಯಲ್ಲಿ ನರಸಪ್ಪಒಡೆಯರಿಂದ ಚಿಕ್ಕದೇವರಾಯದುರ್ಗ.

" ಫಾಲ್ಗುನ ಬಹುಳ ೫ಯಲ್ಲಿ ಚಿಕ್ಕಪ್ಪಗೌಡನಿಂದ ದೊಡ್ಡದೇವಗಗನಗಿರಿ.

೧೫೯೯ನೇ ನಳ ಸಂ॥ ವೈಶಾಖ ಬಹುಳ ೬ಯಲ್ಲಿ ರಣದುಲ್ಲಾಖಾನನಕಡೆಯ ಜಾಂಗೀರ್ ಖಾನನಿಂದ ಹೊನ್ನವಳ್ಳಿ.

" ಪುಷ್ಯ ಬಹುಳ ೩ಯಲ್ಲಿ ಹುಸೇನ್ ಖಾನನಿಂದ ಚಿಕ್ಕದೇವರಾಯಸಮುದ್ರಕ್ಕೆ ಪೇಟೆವಾದ ಬೊಮ್ಮಸಮುದ್ರ.

" ಮಾಘ ಬಹುಳ ೨ಯಲ್ಲಿ ಭುಜಂಗಯ್ಯನಿಂದ ತೊದನಾಡು.

೧೬೦೦ನೇ ಪಿಂಗಳ ಸಂ॥ ಪುಷ್ಯ ಬ॥ ೩೦ಯಲ್ಲಿ ಶೆಟ್ಟಿಮೊದಲ್ಯಾರಿಂದ ಅಂದೂರು.

" ಮಾಘ ಬಹುಳ ೩ಯಲ್ಲಿ ಮದ್ದಗಿರೀ ಚಿಕ್ಕಪ್ಪ ಗೌಡನಿಂದ ಚಿಕ್ಕ ಕೊಡ್ಲಿಗೆರೆ.

" ಫಾಲ್ಗುನ ಶುದ್ಧ ೮ಯಲ್ಲಿ " ಕೊರಟಗೆರೆ.

೧೬೦೧ನೇ ಕಾಳಾಯುಕ್ತಿ ಸಂ॥ ಜ್ಯೇಷ್ಠ ಬ॥ ೩ಯಲ್ಲಿ " ಮದ್ದಗಿರಿ.

" " ೧೩ಯಲ್ಲಿ " ಕಾದೂರು.

" " ೩೦ಯಲ್ಲಿ " ವೀರಣ್ಣನದುರ್ಗ.

" ಶ್ರಾವಣ ಬ॥ ೫ಯಲ್ಲಿ " ಮದ್ದಗಿರೀಕಾಂಭಿ.

" " ೭ಯಲ್ಲಿ " ಹೊಸೂರು.

" " ೧೪ಯಲ್ಲಿ " ಚೆನ್ನರಾಯದುರ್ಗಕ್ಕೆ ತಾಣ್ಯ.

" ಭಾದ್ರಪದ ಶುದ್ಧ ೧೨ಲ್ಲಿ " ಮನ್ನೆಕೊಳಾಲ.

" ಆಶ್ವಯುಜ ಶುದ್ಧ ೧೩ಲ್ಲಿ " ಮಿಡಿಗೇಶೀ ಕಾಂಭಿಗೆ ತಾಣ್ಯ.

" ಕಾರ್ತಿಕ ಶುದ್ಧ ೫ಲ್ಲಿ " ಗುಂಡಮಲೆದುರ್ಗ.

" " ಬಹುಳ ೫ಲ್ಲಿ " ಬುಕ್ಕಪುರಕ್ಕೆ ತಾಣ್ಯ

೧೬೧೦ನೇ ಪ್ರಭವ ಸಂ॥ ಚೈತ್ರ ಶುದ್ಧ ೧೫ಲ್ಲಿ ಕಾಸಿಂಖಾನನಿಂದ ತುಮಕೂರು.

" ವೈಶಾಖ ಶುದ್ಧ ೧೨ಲ್ಲಿ ಮರಾಟೀ ವೆಂಕೋಜಿ ರಾಯನಿಂದ *ಚಿಕ್ಕನಾಯಕನಹಳ್ಳಿ.

---

*ಇದನ್ನು ಪೂರ್ವದಲ್ಲಿ ದೊಡ್ಡದೇವರಾಜ ಒಡೆಯರವರು ಸಾಧಿಸಿ ಇದ್ದರು. ಕಂಚಿಕೆರೆಯಲ್ಲಿದ್ದ ವೆಂಕೋಜಿರಾಯನು ಈಚೆಗೆ ಇದನ್ನು ತಾನು ಕಟ್ಟಿಕೊಂಡಿದ್ದನು.

ಶಾ॥ ಶಕ ೧೬೧೦ನೇ ಪ್ರಭವ ಸಂ॥ ವೈಶಾಖ ಬಹುಳ ೩ಯಲ್ಲಿ ಮರಾಟಿ ವೆಂಕೋಜಿ ರಾಯನಿಂದ ಕಂದಿಕೆರೆ.

„ ಜ್ಯೇಷ್ಠ ಶುದ್ಧ ೫ಯಲ್ಲಿ „ ತ್ಯಾಮಗೊಂಡ್ಲು

„ ನಿಜಆಷಾಢ ಶುದ್ಧ ೧೫ಯಲ್ಲಿ ಪೆನಗೊಂಡೆ ಕಾಸೀಂಖಾನನಿಂದ ಬೆಂಗಳೂರು.

೧೬೧೧ನೇ ವಿಭವ ಸಂ॥ ಚೈತ್ರ ಬಹುಳ ೬ಯಲ್ಲಿ ಮರಾಟಿ ವೆಂಕೋಜಿರಾಯನಿಂದ, ಶಂಖಗಿರಿಯ ಗುರಿಕಾರ ಚಿಕ್ಕಯ್ಯನು ಕಟ್ಟಿಕೊಂಡಿದ್ದ ಆವಣಿಪರೂರು, ಅರಶರವಾಣಿ, ಹೊಸಕೋಟೆ.

„ ಜ್ಯೇಷ್ಠ ಬಹುಳ ೫ಯಲ್ಲಿ ಗುರಿಕಾರ ಚಿಕ್ಕಯ್ಯನಿಂದ ಶಂಖಗಿರಿ.

„ ಮಾರ್ಗಶಿರ ಶು॥ ೧ಯಲ್ಲಿ ವೆಂಕೋಜಿರಾಯನಿಂದ ಮನುಗೊಂಡೇದುರ್ಗ.

„ „ ೧೧ಯಲ್ಲಿ ಶಾಲ್ಯದವರಿಂದ ಮನ್ನಾರಗುಡಿ.

„ „ ೧೨ಯಲ್ಲಿ ವೆಂಕೋಜಿರಾಯನಿಂದ ವಾಮಲೂರು.

„ ಮಾಘ ಶುದ್ಧ ೫ಯಲ್ಲಿ „ ಧರ್ಮಪುರಿ.

೧೬೧೨ನೇ ಶುಕ್ಲ ಸಂ॥ ವೈಶಾಖ ಬಹುಳ ೩ಯಲ್ಲಿ „ ಪರಮತಿ.

„ ಆಷಾಢ ಬಹುಳ ೧೧ಯಲ್ಲಿ ಕೊಯಮುತ್ತೂರು ಗುರಿಕಾರ ಲಿಂಗರಾಜಯ್ಯನಿಂದ ಕಾವೇರೀಪಟ್ಟಣ.

„ ಆಶ್ವಯುಜ ಬಹುಳ ೧೪ಯಲ್ಲಿ „ ಕೊಂತೂರುದುರ್ಗ.

„ ಮಾಘ ಬಹುಳ ೧೦ಯಲ್ಲಿ ಮರಾಟಿಯವರಕಡೆ ಘೋರಪಡೆಯಿಂದ ಅನಂತಗಿರಿ.

೧೬೧೩ನೇ ಪ್ರಮೋದೂತ ಸಂ॥ ಅಧಿಕವೈಶಾಖ ಶು॥ ೬ಯಲ್ಲಿ ಬಾಗಡಿ ಪಾಳ್ಯಗಾರನಿಂದ ಬಾಗಡಿ.

„ „ ೧೧ಯಲ್ಲಿ ಇಕ್ಕೇರಿ ಶಿವಪ್ಪನಾಯಕನಿಂದ ಹಾರನಹಳ್ಳಿ.

„ ನಿಜವೈಶಾಖ ಬಹುಳ ೧೧ಯಲ್ಲಿ „ ಬಾಣಾವಾರ.

„ ಜ್ಯೇಷ್ಠ ಬಹುಳ ೬ಯಲ್ಲಿ „ ಕಡೂರು.

„ ಆಷಾಢ ಶುದ್ಧ ೮ಯಲ್ಲಿ „ ಸಕ್ಕರೇಪಟ್ಟಣ.

„ ಶ್ರಾವಣ ಶುದ್ಧ ೩ಯಲ್ಲಿ „ ಬೇಲೂರು.

„ „ ಬಹುಳ ೭ಯಲ್ಲಿ „ ವಸ್ತಾರೆ.

„ „ ಬಹುಳ ೧೦ಯಲ್ಲಿ ಐಗೂರು ಕೃಷ್ಣಪ್ಪನಾಯಕನಿಂದ ಚಿಕ್ಕಮಗಳೂರು.

„ ಭಾದ್ರಪದ ಶುದ್ಧ ೫ಯಲ್ಲಿ „ ಮಹಾರಾಜನದುರ್ಗ.

ಶಾ॥ ಶಕ ೧೬೧೩ನೇ ಪ್ರಮೋದೂತ ಸಂ॥ ಆಶ್ವಯುಜ ಶುದ್ಧ ೫ಯಲ್ಲಿ ಇಕ್ಕೇರಿ ಶಿವಪ್ಪ ನಾಯಕನಿಂದ, ಪೂರ್ವದಲ್ಲಿ ದೊಡ್ಡದೇವರಾಜ ಒಡೆಯ ರವರು ಸಾಧಿಸಿ ಇದ್ದದ್ದನ್ನು ಪುನಃ ಸಾಧಿಸಿದ್ದು ಹಾಸನ.

„ „ ೧೫ಯಲ್ಲಿ „ ಗ್ರಾಮ.

೧೬೧೭ನೇ ಭಾವ ಸಂ॥ ಫಾಲ್ಗುನ ಶುದ್ಧ ೧೦ಯಲ್ಲಿ ಪೂರ್ವದಲ್ಲಿ ಇಮ್ಮಡಿರಾಜಒಡೆಯರ ವರು ಕಟ್ಟಿಕೊಂಡಿದ್ದದ್ದನ್ನು ಅರಕಲಗೂಡು ಪಾಳ್ಯಗಾರನಿಂದ ಪುನಃ ಕಟ್ಟಿಕೊಂಡದ್ದು ಅರಕಲಗೂಡು.

೧೬೧೮ನೇ ಯುವ ಸಂ॥ ಚೈತ್ರ ಶುದ್ಧ ೫ಯಲ್ಲಿ ಐಗೂರು ಕೃಷ್ಣಪ್ಪನಾಯಕನಿಂದ ಐಗೂರು.

„ „ ಬಹುಳ ೧ಯಲ್ಲಿ „ ಸಕಲೇಶಪುರ.

„ ವೈಶಾಖ ಬಹುಳ ೮ಯಲ್ಲಿ „ ಕೊಡ್ಲಿಪೇಟೆ.

೧೬೨೦ನೇ ಈಶ್ವರ ಸಂ॥ ಚೈತ್ರ ಶುದ್ಧ ೩ಯಲ್ಲಿ ಚಿನ್ನಪ್ಪನಾಯಕನಿಂದ ಶಾಲ್ಯ.

„ ವೈಶಾಖ ಶುದ್ಧ ೩ಯಲ್ಲಿ „ ಶಾದಮಂಗಲ, ನಾಮಕಲ್ಲು.

„ „ ಬಹುಳ ೩ಯಲ್ಲಿ „ ತಮ್ಮಂಬಟ್ಟಿ.

ಖಂಡಣೆ ಮಾಡಿಕೊಂಡ ರಾಜ್ಯಗಳ ವಿವರ.—ಐಗೂರು ಕೃಷ್ಣಪ್ಪ ನಾಯಕನು ಧೊರೆಗಳಪಾದಾಕ್ರಾಂತನಾಗಿ, ತನಗೆ ಜೀವನವಿಲ್ಲವೆಂಬದಾಗಿ ಬಿನ್ನವಿಸಿಕೊಂಡ ದ್ದರಿಂದ, ಧೊರೆಗಳು ಜೀವನಾರ್ಥವಾಗಿ ಅವನ ಮಕ್ಕಳಿಗೆ ಐಗೂರು, ಸಕಲೇಶಪುರ ಇವೆರ ಡನ್ನೂ, ಇದೇಮೇರೆಗೆ ಇಕ್ಕೇರೀ ಶಿವಪ್ಪನಾಯಕನು ಬಿನ್ನವಿಸಿಕೊಂಡದ್ದರಿಂದ, ಅವನಿಗೆ ವಸ್ತಾರೆಯನ್ನೂ ಕೊಟ್ಟು, ನಿಂತ ಹಣಕ್ಕೆ ಖಂಡಣೆಯನ್ನು ಗೊತ್ತುಮಾಡಿಕೊಂಡರು; ತಮ್ಮದಂಡನ್ನು ಕೊಡಗುಮಲಯಾಳ ಪ್ರಾಂತ್ಯಗಳಿಗೆ ಕಳುಹಿಸಿಕೊಟ್ಟು, ಅವರನ್ನು ಯುದ್ಧ ದಲ್ಲಿ ಭಯಪಡಿಸಿ, ಅವರಿಂದ ವಸ್ತ್ರಾಭರಣ ಅನೇಕ ಕುದುರೆ ಮುಂತಾದ ಪದಾರ್ಥಗಳನ್ನೂ ಕೆಲವು ದ್ರವ್ಯವನ್ನೂ ತೆಗೆದುಕೊಂಡು, ಮುಂದೆ ವರ್ಷಂಪ್ರತಿಯಲ್ಲಿಯೂ ಖಂಡಣೆ ಬರುವಂತೆ ನೇಮಕ ಮಾಡಿದರು. ಶಾ॥ ಶಕ ೧೬೦೧ನೇ ಕಾಳಾಯುಕ್ತಿ ಸಂವತ್ಸರದಲ್ಲಿ ಮಾಗಡಿಗೆ ಮುತ್ತಿಗೆಯನ್ನು ಹಾಕಿ ಕೆಂಪೇಗೌಡನಿಂದ ಖಂಡಣೆಯನ್ನು ನಿಷ್ಕರ್ಷೆಮಾಡಿಕೊಂಡರು.

ಬೆಂಗಳೂರನ್ನು ಸಾಧಿಸಿ ಅಭಿವೃದ್ಧಿಯನ್ನು ಮಾಡಿದ ವಿವರ.—ಪೂರ್ವ ದಲ್ಲಿ ಸಾತಾರೆಯ ಅರಸಾದ ಮಹಾ ಪರಾಕ್ರಮಶಾಲಿಯಾದ ಶಂಭಾಜಿ ಎಂಬ ವನು, ದಿಳ್ಳೀಪರ್ಯಂತರಕ್ಕೂ ಬಹಳ ರಾಜ್ಯಗಳನ್ನು ಕಟ್ಟಿಕೊಂಡು ಸಾತಾರೆ ಯಲ್ಲಿ ಇದ್ದನು. ದಿಳ್ಳೀಪಾದಷಹಾರು ಇವನನ್ನು ವಂಚನೆಯಿಂದ ಹಿಡಿದು

ಕೊಂಡು ಹೋಗಲು, ಇವನ ತಮ್ಮನಾದ ಶಿವಾಜಿ ಎಂಬವನು ಪಾದಪಹಾರ ಭಯದಿಂದ ತಪ್ಪಿಸಿಕೊಂಡು, ಕೆಲವು ದ್ರವ್ಯವನ್ನೂ ಸೇನೆಯನ್ನೂ ತೆಗೆದು ಕೊಂಡು ಓಡಿ ಬರುತ್ತಾ, ಆಗ ಬೆಂಗಳೂರಲ್ಲಿ ಇದ್ದ ಮಾಗಡಿ ಕೆಂಪೇ ಗೌಡನನ್ನು ಹೊಡೆದು ಓಡಿಸಿ, ಅವನನ್ನು ತನ್ನ ಸ್ವಾಧೀನ ಮಾಡಿಕೊಂಡನು. ಈ ಶಿವಾಜಿಯು, ಶ್ರೀರಂಗಪಟ್ಟಣದ ರಣಧೀರ ಕಂಠೀರವನರಸ ರಾಜಒಡೆಯರವರ ಪರಾಕ್ರಮವನ್ನು ತಿಳಿದು, ಶ್ರೀರಂಗಪಟ್ಟಣದ ಸಮೀಪ ದಲ್ಲಿದ್ದ ಬೆಂಗಳೂರನ್ನು ಬಿಟ್ಟು ಮತ್ತೊಂದು ದೂರವಾದಸ್ಥಳದಲ್ಲಿ ವಾಸ ಮಾಡಬೇಕೆಂದು ಇದ್ದನು. ಆ ಕಾಲದಲ್ಲಿ ತಂಜಾವೂರು ಸಂಸ್ಥಾನದ ವಿಜಯರಾಘವನಾಯಕನೆಂಬವನು, ಒಬ್ಬ ತೆಂಗಲೇ ಆಚಾರ್ಯಪುರುಷ ನನ್ನು ಗುರುವನ್ನಾಗಿ ಮಾಡಿಕೊಂಡು, ದೇಶಕೋಶಗಳ ವಿಚಾರಣೆಯನ್ನು ಬಿಟ್ಟು, ದಂಡಿನ ಜನರಿಗೆ ಸಂಬಳಗಳನ್ನು ಕೊಡದೆ, ಈ ಆಚಾರ್ಯಪುರು ಷರು ಹೇಳಿದಂತೆ ಚಕ್ರಾಂಕನ, ಊರ್ಧ್ವಪುಂಡ್ರಧಾರಣ, ಮೂಲಮಂತ್ರೋ ಪಾಸನ, ಪ್ರತಿದಿನದಲ್ಲಿಯೂ ಆಚಾರ್ಯಪುರುಷರ ಶ್ರೀಪಾದತೀರ್ಥ ಇವು ಗಳನ್ನೇ ಮುಖ್ಯವಾಗಿ ತೆಗದುಕೊಳ್ಳುತ್ತಿದ್ದದ್ದಲ್ಲದೆ, ಅನ್ಯದೇವತಾ ಭಜನೆ ಯಿಲ್ಲದೆ ನಡೆದು ಕೊಳ್ಳುತ್ತಿದ್ದನು. ಈ ಸಮಾಚಾರವನ್ನು ಕೇಳಿ, ಬೆಂಗ ಳೂರಲ್ಲಿ ಇದ್ದ ಶಿವಾಜಿಯು ಆಪ್ತನಾದ ತನ್ನ ಸಂಬಂಧಿಯನ್ನೂ ಕೆಲವು ಸೈನ್ಯಗಳನ್ನೂ ಬೆಂಗಳೂರಲ್ಲಿ ಇರಿಸಿ, ತಂಜಾವೂರಿಗೆ ಹೋಗಿ, ವಿಜಯ ರಾಘವನಾಯಕನನ್ನು ಹೊಡೆದು ಓಡಿಸಿ, ಆ ತಂಜಾವೂರಿನಲ್ಲಿ ತಾನು ದೊರೆತನ ಮಾಡಿಕೊಂಡಿದ್ದನು.

ಹೀಗಿರುವಲ್ಲಿ ಈ ಶಿವಾಜಿಯ ಮಗ ವೆಂಕೋಜಿ ಎಂಬವನೂ ಇವನ ಮಗ ಶಹಜೀ ಎಂಬವನೂ ತಂಜಾವೂರಲ್ಲಿ ಇರುವಾಗ, ಚಿಕ್ಕ ದೇವರಾಜ ಒಡೆಯರವರ ಸೇನೆಯು ಕಣಿವೇ ಕೆಳಗೆ ಇರುವ ತಿರುಚನಾ ಪಳ್ಳಿ ಮಧುರೆ ಮುಂತಾದ ಪಾಳ್ಯಗಾರರನ್ನು ನಿಗ್ರಹಿಸಿ ದಂಡನೆ ಮಾಡಿ ಕೊಂಡು ಬಂದು ಇರುತ್ತಾನೆಂತಲೂ; ಶ್ರೀರಂಗಪಟ್ಟಣದ ದೊರೆಗಳು ಮಹಾ ಪರಾಕ್ರಮಶಾಲಿಗಳೆಂತಲೂ ಕೇಳಿ, ಇನ್ನು ಮೇಲೆ ತನ್ನ ತಂಜಾವೂರನ್ನೂ ಬೆಂಗಳೂರನ್ನೂ ಏನು ಮಾಡುವರೋ ಎಂದು ಭಯಪಟ್ಟು, ಇವರೊಡನೆ

ಸ್ನೇಹ ಮಾಡದಿದ್ದರೆ ತನಗೆ ಕ್ಷೇಮವಾಗಲಾರದೆಂದು ತಿಳಿದು, ತನಗೆ ವೆಚ್ಚಕ್ಕಾಗಿ ೩ ಲಕ್ಷ ರೂಪಾಯನ್ನು ಕಳುಹಿಸಿಕೊಟ್ಟರೆ ಆ ಹಣಕ್ಕೆ ಆಧಾರವಾಗಿ ಬೆಂಗಳೂರನ್ನೇ ಕ್ರಯಕ್ಕೆ ಕೊಡುವದಾಗಿ ಒಬ್ಬ ವಕೀಲನಿಂದ ಪತ್ರವನ್ನು ಬರೆಯಿಸಿ ಚಿಕ್ಕದೇವರಾಜ ಒಡೆಯರವರ ಬಳಿಗೆ ಕಳುಹಿಸಿ ಕೊಟ್ಟನು. ಚಿಕ್ಕದೇವರಾಜ ಒಡೆಯರವರು ಅವನು ಕೇಳಿಕೊಂಡಂತೆ ೩ ಲಕ್ಷ ರೂಪಾಯನ್ನು ಕೊಟ್ಟು ಬೆಂಗಳೂರನ್ನು ಸ್ವಾಧೀನ ಮಾಡಿಕೊಳ್ಳು ವಷ್ಟರಲ್ಲಿಯೇ, ಪೆನಗೊಂಡೇ ಕಾಸೀಂಖಾನನು ಶಾ ಶಕ ೧೬೧೦ನೇ ಪ್ರಭವ ಸಂವತ್ಸರದ ನಿಜ ಆಷಾಢ ಶುದ್ಧ ೧೧ಯಲ್ಲಿ ಬೆಂಗಳೂರಿಗೆ ಠಾಣೆ ಹಾಕಿ ಕೊಂಡನು. ಈ ವರ್ತಮಾನವನ್ನು ದೊರೆಗಳು ಕೇಳಿ, ಆ ಕಾಸೀಂ ಖಾನನನ್ನು ಹೊಡೆದು ಓಡಿಸಿಬಿಟ್ಟು, ಆ ನಿಜ ಆಷಾಢ ಶುದ್ಧ ೧೪ಯಲ್ಲಿ ಅಲ್ಲಿ ತಮ್ಮ ಠಾಣ್ಯವನ್ನು ಹಾಕಿಕೊಂಡರು. ಅನಂತರದಲ್ಲಿ ದೊರೆಗಳು ಕ್ರಯಕ್ಕೆ ತೆಗದುಕೊಂಡ ಬೆಂಗಳೂರಿಗೆ ಬುದ್ಧಿವಂತರಾದ ಅಧಿಕಾರಿಗಳನ್ನು ನೇಮಿಸಿ, ವಿಸ್ತಾರವಾಗಿ ಪೇಟೆ ಕೋಟೆಗಳನ್ನು ಕಟ್ಟಿಸಿ, ವರ್ತಕರನ್ನು ತಂದಿಟ್ಟು, ೧೨ ಸಾವಿರ ಮಗ್ಗದ ಜನರನ್ನು ತಂದು ಇರಿಸಿ, ಇವರಿಗೆಲ್ಲಾ ಕೌಲು ಕರಾರು ಕೊಟ್ಟು ಅಲ್ಲಿರಿಸಿ, ಇಲ್ಲಿ ಆದ ಜವಳಿಯು ಎಲ್ಲಾ ಪ್ರದೇಶ ಗಳಿಗೂ ಹೋಗುವಂತೆಯೂ, ಶ್ರೀರಂಗಪಟ್ಟಣದ ಅರಮನೆಗೆ ಬರುವಂತೆ ಯೂ ನಿಬಂಧನೆ ಮಾಡಿ ಪೇಟೆಯನ್ನು ಬಸ್ತಿ ಮಾಡಿದರು.

ಚಿಕ್ಕ ದೇವರಾಜ ಒಡೆಯರವರು ಹಿಂದೆ ಹೇಳಿದ ಗಡಿಗಳನ್ನು ಸಾಧಿ ಸುವದಕ್ಕೆ ಮುಂಚೆಯೇ, ಪೂರ್ವದಲ್ಲಿದ್ದ ಸೇನೆಯು ಸಾಲದೆಂದು ಹೊಸದಾಗಿ ಸೇನೆಯನ್ನು ಕಟ್ಟುವದಕ್ಕೆ ತಮ್ಮ ಆದಾಯವೆಚ್ಚಗಳ ಲೆಕ್ಕವನ್ನು ನೋಡಿ ಕೊಂಡು, ಪೂರ್ವದಲ್ಲಿ ಇದ್ದದ್ದು ಮತ್ತು ಈಗ ಹೊಸದಾಗಿ ಕಟ್ಟಿದ ಸೇನೆಗಳ ವಿವರ.—೧೨೦೦೦ ಕುದುರೆ, ೧ ಲಕ್ಷ ಕಾಲ್ಬಲ, ಇದಕ್ಕೆ ತಕ್ಕ ಕಾಮಾಟ, ಕಲಾಸಿ, ಫಿರಂಗಿ, ತುಪಾಕಿ, ಕತ್ತಿ, ಕಠಾರಿ, ಗುರಾಣಿ, ಈಟಿ ಮೊದಲಾದ ಆಯುಧಗಳನ್ನೂ ಮದ್ದು ಗುಂಡು ಆನೆ ಒಂಟೆ ಎತ್ತು ಬಂಡಿ ಗುಡಾರ ಮುಂತಾದ ಯುದ್ಧ ಸಾಮಗ್ರಿಗಳನ್ನೂ ಸಿದ್ಧ ಮಾಡಿಸಿದರು.

ಶ್ರೀರಂಗಪಟ್ಟಣದ ಕೊತ್ತಲಗಳಲ್ಲಿ ಇರಿಸಿದ್ದ ಫಿರಂಗಿಗಳ ವಿವರ.

ಹೊಸಕೇರಿಯಲ್ಲಿ ಹನುಮಂತನ ಕೊತ್ತಳದಲ್ಲಿ ೧, ಮೂಲೇ ಕೊತ್ತಳ ರಾಮ ಬಲರಾಮನ ಕೊತ್ತಳದಲ್ಲಿ ರಾಮ ಬಲರಾಮರೆಂಬ ಫಿರಂಗಿಗಳು ೨, ನಾಗಮಂಗಲದ ಚನ್ನಯ್ಯನ ಕೊತ್ತಳದ ಬಳಿಯಲ್ಲಿದ್ದ ಹುಚ್ಚು ನಾರಸಿಂಹನೆಂಬ ಕೊತ್ತಳದಲ್ಲಿ ೨, ಬೀಡಿಗೆರೆಯಲ್ಲಿ ವಿಷ್ಣುಚಕ್ರವೆಂಬ ಕೊತ್ತಳದಲ್ಲಿ ೧, ಮರದ ಕೇರಿಯಲ್ಲಿ ಭೂತನಾಥನ ಕೊತ್ತಳದಲ್ಲಿ ೧, ಹುಲ್ಲುಮೆದೇ ಬಳಿಯಲ್ಲಿರುವ ಚಾಮುಂಡೀ ಕೊತ್ತಳದಲ್ಲಿ ೧, ಇದರ ಬಳಿಯಲ್ಲಿ ಸಿಡಿಲಮಲ್ಲನ ಕೊತ್ತಳದಲ್ಲಿ ೧, ಬ್ರಹ್ಮಪುರದ ಬಾಗಿಲಲ್ಲಿ ನಾಗರಮು ಕೊತ್ತಳದಲ್ಲಿ ೧, ಗುಡಿಯ ಬಳಿಯಲ್ಲಿ ಸಿಡಿಲಮರಿ ಕೊತ್ತಳದಲ್ಲಿ ೧, ದೊಡ್ಡಕೊಳದಲ್ಲಿದ್ದ ರಾಮಲಿಂಗನ ಕೊತ್ತಳದಲ್ಲಿ ೧, ಕೃಷ್ಣ ದಿಡ್ಡಿಯ ಬಳಿಯಲ್ಲಿರುವ ಗೋಪಾಲಕೃಷ್ಣನ ಕೊತ್ತಳದಲ್ಲಿ ೧, ಚಿಕ್ಕೇಅರಸಿನವರ ಕೊತ್ತಳದಲ್ಲಿರುವ ಚೂರಿಕಾನನ ಕೊತ್ತಲದಲ್ಲಿ ೧, ಬಾಪೋಜಿ ದಿಡ್ಡಿಯ ಬಳಿಯಲ್ಲಿರುವ ಚಲುವರಾಯನ ಕೊತ್ತಲದಲ್ಲಿ ೨, ಇದರಬಳಿ ಅನಂತಯ್ಯನ ಮನೇಬಳಿ ರಣಭೀಮನ ಕೊತ್ತಲದಲ್ಲಿ ರಣಭೀಮ ಎಂಬವು ೨, ಮೂಡಣ ಬಾಗಿಲ ರಾಡಿನಲ್ಲಿದ್ದ ಬಡಗಚಾರಿ ವೆಂಕಟಾಚಲನ ಕೊತ್ತಲದಲ್ಲಿ ೧, ಈ ತೆಂಕಚಾರಿಯಲ್ಲಿ ಚಾಮುಂಡೀ ಕೊತ್ತಲದಲ್ಲಿ ೧, ಈ ತೆಂಕ ಚಾರಿ ನಿಟ್ಟಿನಲ್ಲಿ ಕೋಟೇಮೇಲೆ ಪೇಟರಾಯನ ಕೊತ್ತಲದಲ್ಲಿ ೧, ಈ ಮೂಲೆಯಲ್ಲಿದ್ದ ಪ್ರಳಯಕಾಲರುದ್ರ ಪ್ರಳಯಕಾಲಭೈರವನ ಕೊತ್ತಲದಲ್ಲಿ ೨, ಈ ಪಡುವಚಾರಿ ನಿಟ್ಟಿನಲ್ಲಿ ಕೋಟೇನಲ್ಲೂರಿನ ಮನೇಬಳಿ ಧನಂಜಯನ ಕೊತ್ತಲದಲ್ಲಿ ೧, ಚಿಕ್ಕೇ ಅರಸಿನವರ ಕಣಜದ ಬಳಿ ಮುದ್ದುಕೃಷ್ಣನ ಕೊತ್ತಲದಲ್ಲಿ ೧, ಕೋಟೇ ಗಾರೇಹಟ್ಟಿಯ ಬಳಿಯಲ್ಲಿ ಗಾರೇಹಟ್ಟಿ ಚಲುವರಾಯನ ಕೊತ್ತಲದಲ್ಲಿ ೧, ಮೈಸೂರ ಬಾಗಿಲ ರಾಡಿನಲ್ಲಿರುವ ಜಯವಿಜಯರ ಕೊತ್ತಲದಲ್ಲಿ ೨, ಈ ಬಾಗಿಲಲ್ಲಿ ಜೇಬೀ ಕೋಟೇಮೇಲೆ ಇರುವ ಚಿಕ್ಕರಾಮ ಬಾಣನ ಕೊತ್ತಲದಲ್ಲಿ ೧, ಸೇತುವೇಬಾಗಿಲ ರಾಡಿನಲ್ಲಿ ೧, ಇವುಗಳಲ್ಲದೆ ೧೪. ಹೀಗೆ ಇರಿಸಿದ್ದ ಒಟ್ಟು ಫಿರಂಗಿಗಳು ೪೪. ಈ ಮೇಲೆ ಹೇಳಿದವುಗಳಲ್ಲಿ ಮೊದಲಿನ ೧೧ ಒಳಕೋಟೇ ಕೊತ್ತಲಗಳಲ್ಲಿಯೂ, ಆ ಮೇಲೆ ೧೯ ಹೊರಪೇಟೆಯಲ್ಲಿಯೂ ಇರಿಸಿ ಇದ್ದವುಗಳು.

ತಿರುಚನಾಪಳ್ಳಿಗೆ ಮುತ್ತಿಗೆ ಹಾಕಿದ್ದು.—ದೊಡ್ಡದೇವರಾಜಒಡೆಯರವರ ಆಳಿಕೆಯಲ್ಲಿ ಖಂಡಣೆಮಾಡಿಕೊಂಡಿದ್ದ ತಿರುಚನಾಪಳ್ಳಿ ಮಧುರೆ ಮುಂತಾದ ಸ್ಥಳಗಳಲ್ಲಿದ್ದ ಪಾಳ್ಯಗಾರರು, ಕೆಲವು ದಿವಸ ಖಂಡಣೇ ಹಣವನ್ನು ಕೊಡುತ್ತಾ ಇದ್ದು, ಈಚೆಗೆ ೧೦—೧೨ ವರ್ಷಗಳಿಂದ ಕೊಡದೆ ನಿಲ್ಲಿಸಿಬಿಟ್ಟಿದ್ದರು. ಧೊರೆಗಳು ಈ ವರ್ತಮಾನವನ್ನು ತಿಳಿದು, ಅವರನ್ನು ನಿಗ್ರಹಿಸಿ ಆ ರಾಜ್ಯಗಳನ್ನು ಕಟ್ಟಿಕೊಂಡು ಬರುವದಕ್ಕೆ, ತಮ್ಮ

ಕಡೇ ದಳವಾಯಿ ಕುಮಾರಯ್ಯ ಮುಂತಾದ ದೊಡ್ಡ ಅಧಿಕಾರಿಗಳನ್ನು ಕೆಲವು ಸೇನೆಯೊಡನೆ ಅಲ್ಲಿಗೆ ಕಳುಹಿಸಿ ಕೊಟ್ಟರು. ಅವರು ಅದೇಮೇರೆಗೆ ತಿರುಚನಾಪಳ್ಳಿಗೆ ಮುತ್ತಿಗೆಯನ್ನು ಹಾಕಿ ಯುದ್ಧಮಾಡುತ್ತಿದ್ದರು.

ಮರಾಟೀ ಶಾಹೂಛ್ಛೆಯಕಡೆಯವರಾದ ಜಯಾಜೀಘೋಟ ನಿಂಬಾಜೀ ಘೋಟರೊಡನೆ ಯುದ್ಧ.—ದಳವಾಯಿ ಕುಮಾರಯ್ಯ ಮುಂತಾದವರು ತಿರುಚನಾಪಳ್ಳಿಯಲ್ಲಿ ಯುದ್ಧ ಮಾಡುತ್ತಿರುವಾಗ, ಮರಾಟಿಯವರ ಸಂಸ್ಥಾನದ ಶಾಹೂರಾಯನಕಡೆ ಜಯಾಜೀಘೋಟ್ ಸಿಂಬಾಜೀಘೋಟ ಎಂಬ ಇಬ್ಬರು ಸರದಾರರು ೬೦ ಸಾವಿರ ಕುದುರೇಫೌಜು ಇದಕ್ಕೆ ತಕ್ಕ ಕಾಬ್ಬಲ ಮತ್ತು ಯುದ್ಧಸಾಮಗ್ರಿಗಳೊಡನೆ ದಿಳ್ಳಿಗೆ ಹೋಗಿ, ೨—೩ ಸಾರಿ ಯುದ್ಧ ಮಾಡಿದರು ; ಆದರೆ ದಿಳ್ಳಿಯು ಸ್ವಾಧೀನವಾಗದೆ ಇದ್ದದ್ದರಿಂದ, ಇವರು ಆ ಪ್ರಾಂತ್ಯದ ರಾಜ್ಯಗಳನ್ನು ಲೂಟಿಮಾಡಿ ಸಾಧಿಸುವದಕ್ಕೆ ಸಮಯವನ್ನು ನಿರೀಕ್ಷಿಸುತ್ತಾ ಇದ್ದು, ಮಹೀಶೂರ ಸಂಸ್ಥಾನದಲ್ಲಿದ್ದ ಸೇನೆಗಳು ಕಣಿವೇ ಕೆಳಕ್ಕೆ ಹೋಗಿ ಇವೆ ಎಂಬ ವರ್ತಮಾನವನ್ನು ತಿಳಿದು, ಶ್ರೀರಂಗಪಟ್ಟಣವನ್ನು ಸಾಧಿಸುವದಕ್ಕೆ ಇದೇ ಸಮಯವೆಂದು ಯೋಚಿಸಿ, ಅತಿ ಜಾಗ್ರತೆಯಿಂದ ಬರುತ್ತಿದ್ದರು. ಚಿಕ್ಕದೇವರಾಜ ಒಡೆಯರವರು ಈ ವೃತ್ತಾಂತವನ್ನು ಕೇಳಿ, ತಾವು ತಿರುಚನಾಪಳ್ಳಿಯಲ್ಲಿರುವ ಸೇನಾಜನರ ಬಳಿಗೆ, ಕೆಲವು ಸೇನೆಗಳು ವೃದ್ಧನಾದ ಕುಮಾರಯ್ಯನ ಬಳಿಯಲ್ಲಿಯೇ ಇದ್ದುಕೊಂಡು ಆ ತಿರುಚನಾಪಳ್ಳಿಯನ್ನು ಸಾಧನೆ ಮಾಡುವದೆಂತಲೂ, ಈ ಕುಮಾರಯ್ಯನ ಮಗ ದೊಡ್ಡಯ್ಯ ಮುಂತಾದ ಸರದಾರರು ಹೇರಳವಾದ ಸೈನ್ಯಸಹಿತವಾಗಿ ಜಾಗ್ರತೆಯಿಂದ ಕಾವೇರೀಪುರದ ಕಣಿವೆಯ ಮಾರ್ಗವಾಗಿ ಹೊರಟು, ಕಣಿವೇ ಮೇಲಕ್ಕೆ ಬಂದ ವರ್ತಮಾನವನ್ನು ತಮ್ಮ ಬಳಿಗೆ ಬರೆಯಿಸಿ ಕಳುಹಿಸಿ, ತಮ್ಮ ಆಜ್ಞೆಯಾದಂತೆ ಮುಂದೆ ನಡೆದುಕೊಳ್ಳುವದೆಂತಲೂ ಬರೆಯಿಸಿ ಕಳುಹಿಸಿದರು. ಅವರು ಅದೇ ಮೇರೆಗೆ ಬರುವಷ್ಟರಲ್ಲಿಯೇ, ಆ ಜಯಾಜೀಘೋಟ ನಿಂಬಾಜೀಘೋಟ ಎಂಬ ಸರದಾರರು ಯುದ್ಧಸನ್ನದ್ಧರಾಗಿ ಬಹಳ ಸೇನೆಯೊಡನೆ ಶ್ರೀರಂಗಪಟ್ಟಣದ ಸಮೀಪದಲ್ಲಿ ಕಲಸಗೆರೆ ಕೊತ್ತತ್ತಿ ಎಂಬ ಗ್ರಾಮದ ಬಳಿಯಲ್ಲಿರುವ ಮೈದಾನದಲ್ಲಿ

ಬಂದು ಇಳಿದುಕೊಂಡರು. ಚಿಕ್ಕದೇವರಾಜ ಒಡೆಯರವರು ಈ ವೃತ್ತಾಂತವನ್ನು ತಿಳಿದು, ಕಣಿವೇ ಮೇಲಕ್ಕೆ ಬಂದ ತಮ್ಮ ಕಡೆಯ ಸೇನಾಜನರಿಗೆ "ಈ ಕಲಸಗೆರೆ ಕೊತ್ತತ್ತಿ ಗ್ರಾಮದ ಬಳಿಯಲ್ಲಿ ಇಳಿದಿರುವ ಮರಾಟಿಯವರ ದಂಡಿನ ಬಳಿಗೆ ನೀವು ಪರಭಾರೆ ಹೋಗಿ, ರಾತ್ರಿಯಲ್ಲಿ ನಮ್ಮ ದಂಡಿನಲ್ಲಿರುವ ೨೦ ಸಾವಿರ ಆಪಿನ ದನದ ಎತ್ತುಗಳ ಕೊಂಬುಗಳಿಗೆ ಉಪಾಧಿಯಿಲ್ಲದಂತೆ ಪಂಜುಗಳನ್ನು ಕಟ್ಟಿ, ಮೂರುಕಡೆಯಲ್ಲಿಯೂ ಬಹಳ ಬೆಳಕಿನಿಂದ ಭೀತರಾಗಿ ದಿಕ್ಕುಗಳನ್ನು ಕಾಣದೆ ಭ್ರಾಂತರಾಗಿ ಬೆಳಕಿನ ಎದುರಿಗೆ ಬರುವಂತೆ ಎತ್ತುಗಳನ್ನು ಚದರಿಸಿಬಿಟ್ಟು, ನೀವು ಹಿಂದುಗಡೆಯಿಂದ ಯುದ್ಧಸನ್ನದ್ಧರಾಗಿ ಬರುವವರೊಳಗಾಗಿ, ನಿಮಗೆ ಕುಮುಕಿಯಾಗಿ ಶ್ರೀರಂಗಪಟ್ಟಣದಿಂದ ಸೇನೆಯನ್ನು ಕಳುಹಿಸಿ ಕೊಡುತ್ತಲಿದ್ದೇವೆ" ಎಂದು ಬರೆದು ಕಳುಹಿಸಿದರು. ದೊಡ್ಡಯ್ಯ ಮುಂತಾದ ಸರದಾರರೆಲ್ಲರೂ ಅದೇ ರೀತಿಯಾಗಿ ಬಂದು, ರಾತ್ರಿಯಲ್ಲಿ ಯುದ್ಧಮಾಡಿ ಬಹು ಜನರನ್ನು ಸಂಹರಿಸಿದ್ದಲ್ಲದೆ, ಮೇಲೆ ಬರದಿರುವ ಇಬ್ಬರು ಸರದಾರರ ತಲೆಗಳನ್ನು ಹೊಡೆದು, ಪ್ರಾತಃಕಾಲವಾದ ಬಳಿಕ ಆ ದಂಡಿನಲ್ಲಿದ್ದ ಬಹಳ ಪದಾರ್ಥಗಳಿಗೆ ಕಾವಲನ್ನು ಇರಿಸಿ, ಆ ತಲೆಗಳನ್ನು ತೆಗೆದುಕೊಂಡು ಧೊರೆಗಳ ಸನ್ನಿಧಿಗೆ ಬಂದು ಅಡ್ಡಬಿದ್ದು ನಡೆದ ಸಂಗತಿಯನ್ನು ಬಿನ್ನವಿಸಿದರು. ಚಿಕ್ಕದೇವರಾಜ ಒಡೆಯರವರು ಆ ತಲೆಗಳನ್ನು ಶ್ರೀರಂಗಪಟ್ಟಣದ ಕೋಟೇ ಬಾಗಿಲಿಗೆ ಒಂದನ್ನೂ ಮಹೀಶೂರ ಕೋಟೇ ಬಾಗಿಲಿಗೆ ಒಂದನ್ನೂ ಕಟ್ಟಿಸಿದರು. ಅನಂತರದಲ್ಲಿ ಆ ಸೇನಾಜನರು ಪುನಃ ಯುದ್ಧಭೂಮಿಗೆ ಹೋಗಿ, ಅಲ್ಲಿ ಸಿಕ್ಕಿದ ಆನೆ ಕುದುರೆ ದ್ರವ್ಯ ಮುಂತಾದ ಪದಾರ್ಥಗಳನ್ನು ತಂದು ಒಪ್ಪಿಸಿ, ಧೊರೆಗಳಿಂದ ಬಹಳ ಸನ್ಮಾನವನ್ನು ಪಡೆದರು.

ಈ ಕಡೆಯಲ್ಲಿ ಆ ಮರಾಟೀದಂಡಿನಲ್ಲಿ ಹತಶೇಷರೆಲ್ಲರೂ ತಪ್ಪಿಸಿಕೊಂಡು ಓಡಿಹೋಗಿ, ಇಲ್ಲಿ ನಡೆದ ವರ್ತಮಾನವನ್ನು ವಿಸ್ತಾರವಾಗಿ ತಿಳಿಸಿದರು. ಅನಂತರ ದಿಳ್ಳೀ ಪಾದಷಹಾರು ತಮಗೆ ಶತ್ರುಗಳಾಗಿದ್ದ ಮರಾಟಿಯವರ ಕಡೆಯವರಾದ ಜಮಾಜೀಘಾಟ ನಿಂಬಾಜೀಘಾಟೆ ಎಂಬ ಸರದಾರರನ್ನು ಸೈನ್ಯಸಹಿತವಾಗಿ, ಮಹೀಶೂರ ಸಂಸ್ಥಾನದ ಚಿಕ್ಕದೇವರಾಜ

ಒಡೆಯರವರು ಸಂಹಾರಮಾಡಿದರೆಂಬ ವರ್ತಮಾನವನ್ನು ಕೇಳಿ, ಬಹಳ ಸಂತೋಷಪಟ್ಟು, ಪದೇಪದೇ ಇವರ ಗುಣಗಳನ್ನು ತಮ್ಮ ಸಭೆಯಲ್ಲಿ ಶ್ಲಾಘನೆ ಮಾಡುತ್ತಿದ್ದರು.

ಕಟ್ಟಣೆಗಳನ್ನು ಕಟ್ಟಿಸಿ ಧರ್ಮಕಾರ್ಯಗಳನ್ನು ಮಾಡಿದ ವಿಚಾರ.—ಚಿಕ್ಕದೇವರಾಜ ಒಡೆಯರವರು, ತಮಗೆ ಪಟ್ಟವಾದ ಕೂಡಲೆ ಶಾ॥ ಶಕ ೧೫೯೫ನೇ ಪ್ರಮಾದೀಚ ಸಂವತ್ಸರದಲ್ಲಿ ಗುಂಡ್ಲು ಎಂಬ ಗ್ರಾಮದ ಸಮೀಪದಲ್ಲಿರುವ ಕೌಂಡಿನೀನದಿಯ ತೀರದಲ್ಲಿ ದೇವಸ್ಥಾನವನ್ನು ಕಟ್ಟಿಸಿ, ಆ ದೇವಸ್ಥಾನದಲ್ಲಿ ಅಪ್ರತಿಮವಾಸುದೇವರನ್ನೂ ಕಮಲವಲ್ಲೀ ಅಮ್ಮನವರನ್ನೂ, ಸರ್ವರೂ ತೀರ್ಥಪರಿಗ್ರಹಮಾಡಬೇಕೆಂದು ಶಿವನಸಮುದ್ರದಲ್ಲಿದ್ದ ಉಭಯನಾಚ್ಚಾರು ಸಹಿತವಾದ ಉತ್ಸವ ವಿಗ್ರಹವನ್ನೂ ತರಿಸಿ ಅದನ್ನೂ ಪ್ರತಿಷ್ಠೆ ಮಾಡಿಸಿದರು; ಈ ದೇವರಿಗೆ ನಿತ್ಯೋತ್ಸವರಥೋತ್ಸವಾದಿ ಉತ್ಸವಗಳಿಗೂ ರಾಮಾನುಜಕೂಟ ಪಡಿತರ ದೀಪಾರಾಧನೆ ಮುಂತಾದದ್ದು ನಡೆಯುವದಕ್ಕೂ ೬ ಸಾವಿರ ವರಹಾ ತಸ್ತೀಕು ನಿಬಂಧನೆಮಾಡಿ, ಈ ತಸ್ತೀಕಿಗೆ ಉಯ್ಯಂಬಳ್ಳಿ, ದೊಡ್ಡತುಪ್ಪೂರು, ಚಿಕ್ಕತುಪ್ಪೂರು, ಊಡೀಗಾಲ ಮುಂತಾದ ಗ್ರಾಮಗಳನ್ನೂ ನಗದಾಗಿ ಸ್ವಲ್ಪ ದ್ರವ್ಯವನ್ನೂ ಸಹ ಕೊಟ್ಟರು; ಈ ದೇವಸ್ಥಾನದ ಕಂಭದಲ್ಲಿ ಸಿಂಹಾಸನದ ಮೇಲೆ ವಾರಶಿಖಿ ಸಹಿತವಾಗಿ ಇರುವಂತೆ ತಮ್ಮ ಭಕ್ತವಿಗ್ರಹವನ್ನು ಮಾಡಿಸಿ, ದೇವಸ್ಥಾನದ ಮುಂಭಾಗದಲ್ಲಿ ಕಾಶೀ ಕೆಲಸದ ಕಲ್ಲಿನಿಂದ ದೊಡ್ಡದಾಗಿ ಕಲ್ಯಾಣಿ ಎಂಬ ಒಂದು ಸರೋವರವನ್ನು ಕಟ್ಟಿಸಿದರು.

ಇದೇ ಶಾ॥ ಶಕ ೧೫೯೫ನೇ ಪ್ರಮಾದೀಚ ಸಂವತ್ಸರದ ಫಾಲ್ಗುನ ಶುದ್ಧ ೫ಯಲ್ಲಿ, ಧೊರೆಗಳು ತಮ್ಮ ತಂದೆಗಳಾದ ದೊಡ್ಡದೇವರಾಜ ಒಡೆಯರವರ ವರ್ಷಾಬ್ದೀಕ ಪುಣ್ಯಕಾಲದಲ್ಲಿ, ಅವರಿಗೆ ಶಾಶ್ವತವಾದ ವೈಕುಂಠ ಪ್ರಾಪ್ತಿಯಾಗಬೇಕೆಂದು, ಶ್ರೀರಂಗಪಟ್ಟಣದ ರಂಗನಾಥಸ್ವಾಮಿಯ ಸನ್ನಿಧಿಯಲ್ಲಿ ತ್ರಿಮತಸ್ಥಬ್ರಾಹ್ಮಣರಿಗೂ ವೃತ್ತಿಯನ್ನು ಧಾರೆಯೆರೆದುಕೊಟ್ಟು, ಈ ಬ್ರಾಹ್ಮಣರು ಸುಖವಸತಿಯಾಗಿ ಇರುವದಕ್ಕೋಸ್ಕರ, ತಾವು ಗುಂಡ್ಲಿನಲ್ಲಿ ಕಟ್ಟಿಸಿದ ಅಪ್ರತಿಮವಾಸುದೇವರ ಗುಡಿಯ ಮುಂಭಾಗದಲ್ಲಿ ಚತುರಶ್ರವಾಗಿ

೪ ಬೀದಿಗಳನ್ನು ಮಾಡಿ, ಮನೆಗಳನ್ನು ಕಟ್ಟಿಸಿ, ವೃತ್ತಿವಂತಮಹಾಜನರಿಗೆ ಗ್ರಾಮ ಭೂಮಿ ಗೃಹೋಪಕರಣ ಪೂಜೋಪಕರಣಗಳನ್ನು ಸಹ ಕೊಟ್ಟು, ಈ ಅಗ್ರಹಾರಕ್ಕೆ ದೇವರಾಯನಗರವೆಂಬದಾಗಿ ಹೆಸರನ್ನಿಟ್ಟು, ಅದಕ್ಕೆ ಪ್ರಥಮ ಶತಕವೆಂದು ಹೆಸರನ್ನಿಟ್ಟರು ; ಇವರ ದೊಡ್ಡಪ್ಪಾಜಿಯವರಾದ ದೊಡ್ಡದೇವೇಅರಸಿನವರ ಪತ್ನಿಯರಾದ ಅಮೃತಮ್ಮನವರು ತಮ್ಮ ಪತಿಗೆ ಶಾಶ್ವತ ಪರಲೋಕವು ಬರಬೇಕೆಂದು ಧೊರೆಗಳನ್ನು ಕೇಳಿಕೊಂಡದ್ದರಿಂದ, ಧೊರೆಗಳು ತಮ್ಮ ದೊಡ್ಡಪ್ಪಾಜಿಯವರು ತೀರಿಹೋದ ಪ್ರತಿಸಾಂವತ್ಸರೀಕ ಪುಣ್ಯಕಾಲ ಆನಂದ ಸಂವತ್ಸರದ ಮಾರ್ಗಶಿರ ಬಹುಳ ೩ಯಲ್ಲಿ ಈ ಪರವಾಸು ದೇವರ ಗುಡಿಯ ಉತ್ತರಪಾರ್ಶ್ವದಲ್ಲಿ ಚತುರಶ್ರವಾಗಿ ೪ ಬೀದಿಗಳನ್ನು ಮಾಡಿ ಮನೆಗಳನ್ನು ಕಟ್ಟಿಸಿ, ತ್ರಿಮತಸ್ಥ ಬ್ರಾಹ್ಮಣರಿಗೂ ವೃತ್ತಿಯನ್ನು ಧಾರೆ ಯೆರೆದು ಕೊಟ್ಟು, ಇದಕ್ಕೆ ದ್ವಿತೀಯ ಶತಕವೆಂದು ಹೆಸರನ್ನು ಇಟ್ಟರು ; ಇದೇರೀತಿಯಾಗಿ ಮತ್ತು ಕೆಲವು ದಿವಸದಮೇಲೆ ಸ್ವನಾಮಾಂಕಿತವಾಗಿ ತ್ರಿಮತಸ್ಥ ಬ್ರಾಹ್ಮಣರಿಗೂ ವೃತ್ತಿಯನ್ನು ಧಾರೆಯೆರೆದುಕೊಟ್ಟು ಈ ಅಗ್ರಹಾರಕ್ಕೆ ತೃತೀಯ ಶತಕವೆಂದು ಹೆಸರಿಟ್ಟರು. ಈ ಮೂರು ಅಗ್ರಹಾರಗಳ ಬ್ರಾಹ್ಮರ ಗೋತ್ರ ಸೂತ್ರ ನಾಮಗಳನ್ನೂ ಗ್ರಾಮಗಳ ಹೆಸರುಗಳನ್ನೂ ತಾಂಬ್ರದ ಶಾಸನದಲ್ಲಿ ಬರೆಯಿಸಿಕೊಟ್ಟು ಇರುತ್ತಾರೆ. ಧೊರೆಗಳು ಈ ಅಗ್ರಹಾರದ ಮುಂದುಗಡೆ ಪೇಟೆಯನ್ನು ಕಟ್ಟಿಸಿ, ಅಲ್ಲಿ ಸಂತೆಯಾಗುವಂತೆ ಕಟ್ಟು ಮಾಡಿ, ಮೇಲೆ ಹೇಳಿದ ೩ ಅಗ್ರಹಾರಗಳ ತ್ರಿಮತಸ್ಥ ಬ್ರಾಹ್ಮರಲ್ಲಿ ಶ್ರೀವೈಷ್ಣವರಿಗೆ ಪರವಾಸುದೇವರ ಗುಡಿಯನ್ನೂ, ಸ್ಮಾರ್ತರಿಗೆ ಪರಶುರಾಮದೇವರಿಂದ ಪ್ರತಿಷ್ಠಿತವಾದ ರಾಮೇಶ್ವರನ ದೇವಸ್ಥಾನವನ್ನೂ, ಮಾಧ್ವರಿಗೆ ಆಂಜನೇಯ ದೇವಸ್ಥಾನವನ್ನೂ ನೇಮಕ ಮಾಡಿದರು.

ತಂಜಾವೂರಿನಲ್ಲಿ ವೆಂಕೋಜಿಯ ಮಗ ಶಹಜಿ ಎಂಬುವನು, ಒಂದಾನೊಂದು ದಿನ ತನ್ನ ಸಭೆಯಲ್ಲಿ "ಮಹೀಶೂರ ಸಂಸ್ಥಾನದಲ್ಲಿ ಮೇಲುಕೋಟೆ ಒಂದಲ್ಲದೆ ಪ್ರಸಿದ್ಧವಾದ ವಿಷ್ಣುಕ್ಷೇತ್ರಗಳು ಇನ್ನಾವುವೂ ಇಲ್ಲ; ನಮ್ಮ ದೇಶದಲ್ಲಾದರೋ ಶ್ರೀರಂಗ ಶ್ರೀಮುಷ್ಟ ಕುಂಭಕೋಣ ಮನ್ನಾರಗುಡಿ

ಮುಂತಾದ ಅನೇಕ ವಿಷ್ಣುಕ್ಷೇತ್ರಗಳು ಇರುವದಲ್ಲದೆ, ಚಿದಂಬರ. ಮಧ್ಯಾರ್ಜುನ ಮಧುರೆ ರಾಮೇಶ್ವರ ಮುಂತಾದ ಶಿವಕ್ಷೇತ್ರಗಳೂ ಇರುವದರಿಂದ ನಮ್ಮ ದೇಶಕ್ಕೆ ಸಮಾನವಾದದ್ದು ಯಾವದೂ ಅಲ್ಲ” ಎಂದು ಹೇಳಿದನು. ಇವನು ಹೀಗೆ ದೂಷಿಸುತ್ತಾ ಇದ್ದಾನೆಂಬ ವರ್ತಮಾನವನ್ನು ಕೇಳಿ, ಚಿಕ್ಕದೇವರಾಜ ಒಡೆಯರವರು ಮಹಾಕುಪಿತರಾಗಿ, ಸಪ್ತಕಲ್ಪ ಮಧ್ಯದಲ್ಲಿ ಈಗ ಶ್ವೇತವರಾಹಕಲ್ಪವಾಗಿ ಇರುವದರಿಂದ, ಶ್ರೀಮುಷ್ಣದಲ್ಲಿ ಅವತರಿಸಿರುವ ಶ್ವೇತವರಾಹಸ್ವಾಮಿಯವರನ್ನು ಇಲ್ಲಿಗೆ ತರಿಸಬೇಕೆಂದು ಯೋಚಿಸಿ, ಬುದ್ಧಿವಂತರಾದ ಜನರ ಕೈಯಲ್ಲಿ ರಹಸ್ಯವಾಗಿ ದ್ರವ್ಯವನ್ನು ಕೊಟ್ಟು ಕಳುಹಿಸಿದರು. ಆ ಜನರು ಶ್ರೀಮುಷ್ಣಕ್ಕೆ ಹೋಗಿ, ಅರ್ಚಕ ಮುಂತಾದವರಿಗೆ ದ್ರವ್ಯವನ್ನು ಕೊಟ್ಟು, ರಾತ್ರಿಕಾಲದಲ್ಲಿ ಜನರು ಯಾರೂ ಅರಿಯದಂತೆ, ಶ್ವೇತವರಾಹಸ್ವಾಮಿಯವರನ್ನು ಬಿಜಮಾಡಿಸಿಕೊಂಡು ಶ್ರೀರಂಗಪಟ್ಟಣಕ್ಕೆ ತಂದರು. ಆಗ ದೊರೆಗಳು ಅರಮನೆಯ ಬಲಗಡೆಯಲ್ಲಿ ವಿಚಿತ್ರವಾದ ಗುಡಿಯನ್ನು ಕಟ್ಟಿಸಿ, ಆ ಶ್ವೇತವರಾಹಸ್ವಾಮಿಯವರನ್ನೂ, ನೂತನವಾಗಿ ಶಿಲೆಯಿಂದ ನಿರ್ಮಿಸಿದ ಅಂಬುಜವಲ್ಲೀತಯಾರ್ ಎಂಬ ವಿಗ್ರಹವನ್ನೂ, ಉಭಯನಾಚ್ಚಾರು ಸಹಿತವಾದ ಉತ್ಸವ ವಿಗ್ರಹವನ್ನೂ ಪ್ರತಿಷ್ಠೆಮಾಡಿಸಿದರು.

ಇದಲ್ಲದೆ ಚಿಕ್ಕದೇವರಾಜ ಒಡೆಯರವರು ಹರದನಹಳ್ಳಿಯಲ್ಲಿ ನೂತನವಾಗಿ ದೇವಸ್ಥಾನವನ್ನು ಕಟ್ಟಿಸಿ, ಅಲ್ಲಿ ಗೋಪಾಲಕೃಷ್ಣಸ್ವಾಮಿಯವರನ್ನು ಪ್ರತಿಷ್ಠೆ ಮಾಡಿಸಿದರು; ವರಕೋಡು ಎಂಬ ಗ್ರಾಮದಲ್ಲಿ ದೇವಸ್ಥಾನವನ್ನು ಕಟ್ಟಿಸಿ ವರದರಾಜಸ್ವಾಮಿಯನ್ನು ಪ್ರತಿಷ್ಠೆಮಾಡಿಸಿ, ಈಗ್ರಾಮದಲ್ಲಿ ಕಾಶೀಕೆಲಸದಿಂದ ಅತಿರಮಣೀಯವಾದ ದೊಡ್ಡದಾದ ಒಂದು ಸರೋವರವನ್ನು ಕಟ್ಟಿಸಿ, ಆ ಸರೋವರಕ್ಕೆ ಕಲ್ಯಾಣಿ ಎಂದು ಹೆಸರನ್ನಿಟ್ಟರು. ದೊರೆಗಳು ಇವುಗಳಲ್ಲದೆ ಅನೇಕ ಸ್ಥಳಗಳಲ್ಲಿ ಶಿವ ವಿಷ್ಣು ಗಣಪತಿ ಆಂಜನೇಯ ಮುಂತಾದ ಅನೇಕ ದೇವರನ್ನು ಪ್ರತಿಷ್ಠೆಮಾಡಿಸಿ, ಆ ದೇವರ ತಾರತಮ್ಯ ಇದ್ದಂತೆ ಬಹಳ ತಸ್ತೀಕುಗಳನ್ನು ಉಂಟುಮಾಡಿ, ರಥೋತ್ಸವಾದಿ ಉತ್ಸವಗಳು ನಡೆಯುವಂತೆ ಕಟ್ಟಳೆಮಾಡಿ, ತಟಾಕಾರಾಮ ಸರೋವರ ಮೊದಲಾದ ಅನೇಕ ಧರ್ಮಕಾರ್ಯಗಳನ್ನು ಮಾಡಿಸಿರುತ್ತಾರೆ.

ಚಿಕ್ಕದೇವರಾಜ ಒಡೆಯರವರು ತಮ್ಮ ಕುಲದೇವತೆಯಾದ ಶ್ರೀ ಚಾಮುಂಡೇಶ್ವರೀ, ನಂಜನಗೂಡು ಶ್ರೀಕಂಠೇಶ್ವರ ಮೊದಲಾದ ಮೇಲುಕೋಟೆ, ಶ್ರೀರಂಗಪಟ್ಟಣ, ಯಡತೊರೆ, ರಾಮನಾಥಪುರ, ಕರೀಘಟ್ಟ ಮುಂತಾದ ತಮ್ಮ ಸಂಸ್ಥಾನದಲ್ಲಿರುವ ದೇವರುಗಳಿಗೆಲ್ಲಾ, ಪೂರ್ವದ ಸೇವೆಗಿಂತಲೂ ಹೆಚ್ಚಾಗಿ ಸ್ವನಾಮಾಂಕಿತವಾಗಿ ಸೇವೆಯನ್ನು ಮಾಡಿದ್ದಲ್ಲದೆ, ಕಾಶಿ, ರಾಮೇಶ್ವರ, ಪ್ರಯಾಗ, ದ್ವಾರಕಾ, ಜಗನ್ನಾಥ, ತಿರುಪತಿ, ಕಂಚಿ, ಶ್ರೀರಂಗ, ಕುಂಭಕೋಣ, ಶಂಖಮುಖಿ, ದರ್ಭಶಯನ, ಸುಬ್ರಹ್ಮಣ್ಯ ಮುಂತಾದ ಪ್ರಸಿದ್ಧವಾದ ಕ್ಷೇತ್ರಗಳಲ್ಲಿ, ತುಪ್ಪದ ನಂದಾದೀವಿಗೆ ಸಹಸ್ರನಾಮಾರ್ಚನೆ ಪೊಂಗಲು ಮುಂತಾದ ಚಿನ್ನದ ತಳಿಗೆಯನೈವೇದ್ಯ ಮೊದಲಾದದ್ದು ಅಲ್ಲಿನ ಸಂಪ್ರದಾಯದ ಮೇರೆ ನಡೆಯುವಂತೆ ಕಟ್ಟಳೆಮಾಡಿಸಿದರು ; ಶ್ರೀಕಂಠೇಶ್ವರ ಸ್ವಾಮಿಗೆ ಪ್ರತಿದಿನದಲ್ಲಿಯೂ ಮುತ್ತಿನ ಸಹಸ್ರನಾಮಾರ್ಚನೆ ಮಾಡಿಸುವದಲ್ಲದೆ, ತಿರುಪತಿ ವೆಂಕಟರಮಣಸ್ವಾಮಿಯವರಿಗೆ ಚಿನ್ನದ ಛತ್ರಮುಂತಾದ ಸೇವೋಪಕರಣ ಪೂಜೋಪಕರಣ ವಸ್ತ್ರಾಭರಣ ಮುಂತಾದ ಪದಾರ್ಥಗಳನ್ನು ಒಪ್ಪಿಸಿದರು ; ಮೇಲುಕೋಟೆ ಕಲ್ಯಾಣಿ ತೀರ್ಥಮುಂತಾದ ಅಷ್ಟತೀರ್ಥಗಳಲ್ಲಿಯೂ, ಗಜೇಂದ್ರಮೋಕ್ಷ ಮುಂತಾದ ಉತ್ಸವಗಳಿಗೆ ಕೈಸಾಲೆಗಳನ್ನೂ ಮಂಟಪಗಳನ್ನೂ ಅನೇಕವಾಗಿ ಸ್ವನಾಮಾಂಕಿತವಾಗಿಯೂ ಪತ್ನಿಯರ ನಾಮಾಂಕಿತವಾಗಿಯೂ ಮಾಡಿಸಿ ಇರುತ್ತಾರೆ.

ಚಿಕ್ಕದೇವರಾಜ ಒಡೆಯರವರು ೮೪ ಗಡಿಗಳಲ್ಲಿರುವ ಆಗಮೋಕ್ತ ಉತ್ಸವವು ನಡಿಯತಕ್ಕ ದೇವಸ್ಥಾನಗಳಲ್ಲದೆ, ಬಿಡಿ ದೇವಸ್ಥಾನಗಳಲ್ಲಿರುವ ಮಾದೇಶ್ವರ, ಬಸವೇಶ್ವರ, ವೀರಭದ್ರ, ಭೈರವದೇವರು, ಶಕ್ತಿದೇವತೆಗಳು, ಮಾರಿ, ಬಸ್ತಿ ಮುಂತಾದ ವಿಶಿಷ್ಟದೇವರಿಗೂ ಅಲ್ಲಲ್ಲಿ ತಾರತಮ್ಯವಿದ್ದಂತೆ ಪೂರ್ವದ ತಸ್ತೀಕಿಗಿಂತ ಅಧಿಕವಾಗಿ ಕೆಲವು ನಗದು ಭೂಮಿ ಕೆಲವು ಜೋಡಿ ಸಹಾ ಕೊಡಗಿ ಎಂಬದಾಗಿ ಕೊಟ್ಟರು ; ಅನೇಕ ಬ್ರಾಹ್ಮಣರಿಗೂ ತ್ರಿಮತಸ್ಥ ಮಠಪತಿಗಳಿಗೂ ಜಂಗಮಮಠಕ್ಕೂ ಸಹ ವಸ್ತ್ರಾಭರಣ ಮರ್ಯಾದೆಯನ್ನು ಮಾಡಿ ಗ್ರಾಮ ಭೂಮಿಗಳನ್ನು ಕೊಟ್ಟರು.

ಚಿಕ್ಕದೇವರಾಜ ಒಡೆಯರವರು ಹಂಗಳದಲ್ಲಿ ಇದ್ದಾಗ; ತೆರಕಣಾಂಬಿಯಲ್ಲಿದ್ದ ಲಿಂಗಾಭಟ್ಟನೆಂಬ ಬ್ರಾಹ್ಮಣನು ಇವರ ಜಾತಕಭಾವವನ್ನು ನೋಡಿ, "ಇಂಥಾ ದಿನ ಇಷ್ಟನೇ ಗಳಿಗೆಯಲ್ಲಿ ನಿಮಗೆ ಶ್ರೀರಂಗಪಟ್ಟಣದ ರಾಜ್ಯಾಧಿಪತ್ಯವಾಗಿ ಬಹಳ ಯಶಸ್ಸನ್ನು ಪಡೆಯುವಿರಿ" ಎಂಬದಾಗಿ ಹೇಳಿದನು. ಆ ಮಾತು ಅನುಭವಕ್ಕೆ ಬಂದದರಿಂದ, ಧೊರೆಗಳು ಪಟ್ಟವಾದ ಕೂಡಲೆ ಆ ಬ್ರಾಹ್ಮಣನನ್ನು ಕರೆಯಿಸಿ, ಒಂದು ಗ್ರಾಮವನ್ನು ಸರ್ವಮಾನ್ಯವಾಗಿ ಧಾರೆಯೆರದು ಕೊಟ್ಟರು. ಅನಂತರ ಆ ಬ್ರಾಹ್ಮಣನು ತನ್ನ ಹೆಸರಿನಿಂದ ಅಗ್ರಹಾರ ಮಾಡಿಸಿದನು.

ಅನಂತರದಲ್ಲಿ ಧೊರೆಗಳು ಪೂರ್ವದಲ್ಲಿದ್ದ ಅಗ್ರಹಾರ ಭಟ್ಟಮಾನ್ಯ ಮುಂತಾದ ಬ್ರಹ್ಮದಾಯಗಳನ್ನು ನಿರುಪಾಧಿಕವಾಗಿ ನಡೆಯಿಸುತ್ತಿದ್ದದ್ದಲ್ಲದೆ, ತಮ್ಮ ರಾಜ್ಯದಲ್ಲಿ ಜೀವನವಿಲ್ಲದೆ ಕಷ್ಟಪಡುತ್ತಿರುವ ಬ್ರಾಹ್ಮರಿಗೆಲ್ಲಾ ಭಟ್ಟಮಾನ್ಯಗಳನ್ನು ಕೊಟ್ಟು, ಅನೇಕ ಉಪನಯನ ವಿವಾಹ ಮುಂತಾದ ಧರ್ಮಕಾರ್ಯಗಳನ್ನು ಮಾಡಿ, ಜೋಗಿ ಜಂಗಮ ಫಕೀರ ಕುರುಡರು ಕುಂಟರು ಹೆಳವರು ಮೂಕರು ಮುಂತಾದ ಜನರಿಗೆ ಜೀವನವನ್ನು ಮಾಡಿಕೊಟ್ಟು, ಮಠಾನುಗಳಿಗೆ ಕೆಲವು ನಗದು ಭೂಮಿಯನ್ನೂ ಯುದ್ಧದಲ್ಲಿ ತೀರಿಹೋದ ಜನರ ಪತ್ನೀಪುತ್ರರಿಗೆ ರಕ್ತ ಕೊಡಗಿ ಎಂಬದಾಗಿ ಭೂಮಿಯನ್ನೂ ಕೊಟ್ಟು, ಇವರ ಆಳಿಕೆಯಲ್ಲಿ ಸಕಲ ಪ್ರಾಣಿಗಳೂ ಜೀವನವನ್ನು ಮಾಡಿಕೊಂಡು ಸರ್ವರೂ ತಮ್ಮ ತಮ್ಮ ವರ್ಣಾಶ್ರಮದಲ್ಲಿ ಇರುವಂತೆ ಕಟ್ಟುಮಾಡಿದರು.

ಇವರ ಆಳಿಕೆಯಲ್ಲಿ ದಳವಾಯಿತನವನ್ನು ಮಾಡಿದ ಜನರ ವಿವರ.— ಕಳಲೇ ಕುಮಾರಯ್ಯನು ಶಾ॥ ಶಕ ೧೫೯೪ನೇ ಪರೀಧಾವಿ ಸಂವತ್ಸರದ ಫಾಲ್ಗುನ ಬಹುಳ ೧೦ಯಿಂದ ಶಾ॥ ೧೬೦೪ನೇ ದುಂದುಭಿ ಸಂವತ್ಸರದ ವೈಶಾಖ ಬಹುಳ ೩ರವರಿಗೆ. ಅನಂತರ ಇವನಿಗೆ ಬದಲಿ ಶ್ರೀರಂಗಪಟ್ಟಣದಲ್ಲಿದ್ದ ಸೇನೆಗೆಮಾತ್ರ ದೇವಯ್ಯನಿಗೆ ೧೬೦೪ನೇ ದುಂದುಭಿ ಸಂವತ್ಸರದ ಜ್ಯೇಷ್ಠ ಶುದ್ಧ ೧ದಿಂದ ಈ ಶುದ್ಧ ೧೫ವರಿಗೆ ೧೫ ದಿನಗಳು ನೇಮಕ ಮಾಡಿ ಇದ್ದರು. ಅನಂತರ ಮೇಲೆ ಬರೆದಿರುವ ಕುಮಾರಯ್ಯನು ತಾನು ವೃದ್ಧ

ನಾದೆನೆಂದು ಧೊರೆಗಳಿಗೆ ಬಿನ್ನವಿಸಿಕೊಂಡದ್ದರಿಂದ, ಇವನ ಮಗ ದೊಡ್ಡಯ್ಯನೆಂಬವನಿಗೆ ೧೬೦೪ನೇ ದುಂದುಭಿ ಸಂವತ್ಸರದ ಜ್ಯೇಷ್ಠ ಬಹುಳ ೧ದಿಂದ ಶಾ ೧೬೧೨ನೇ ಪ್ರಮೋದೂತ ಸಂವತ್ಸರದ ಜ್ಯೇಷ್ಠ ಶುದ್ಧ ೧೫ ವರಿಗೆ. ದೊಡಯ್ಯನ ಬದಲಿ ಕೊಳ್ಳೆಗಾಲದ ತಿಮ್ಮಪ್ಪಯ್ಯ ೧೬೧೨ನೇ ಪ್ರಮೋದೂತ ಸಂವತ್ಸರದ ಜ್ಯೇಷ್ಠ ಬಹುಳ ೧ದಿಂದ ೧೬೧೭ ನೇ ಯುವ ಸಂವತ್ಸರದ ಮಾಘ ಶುದ್ಧ ೧೫ವರೆಗೆ. ತಿಮ್ಮಪ್ಪಯ್ಯನ ಬದಲಿ ಕಳಲೇ ಕಾಂತಯ್ಯನ ಮಗ ಮಲ್ಲರಾಜಯ್ಯ ೧೬೧೭ನೇ ಯುವ ಸಂವತ್ಸರದ ಮಾಘ ಬಹುಳ ೧ದಿಂದ ೧೬೨೦ನೇ ಬಹುಧಾನ್ಯ ಸಂವತ್ಸರದ ಶ್ರಾವಣ ಶುದ್ಧ ೧೩ವರಿಗೆ. ಸಿಲಸೋಗೆ ವೀರರಾಜಯ್ಯ ೧೬೨೦ನೇ ಬಹುಧಾನ್ಯ ಸಂವತ್ಸರದ ಶ್ರಾವಣ ಶುದ್ಧ ೧೩ಯಿಂದ ೧೬೨೪ನೇ ಚಿತ್ರಭಾನು ಸಂವತ್ಸರದ ಪುಷ್ಯಶುದ್ಧ ೧೦ವರಿಗೆ. ದೇವರಾಯದುರ್ಗದ ದಾಸರಾಜಯ್ಯ ೧೬೨೪ನೇ ಚಿತ್ರಭಾನು ಸಂವತ್ಸರದ ಪುಷ್ಯ ಶುದ್ಧ ೩ಯಿಂದ ೧೬೨೬ನೇ ತಾರಣ ಸಂವತ್ಸರದ ಕಾರ್ತಿಕ ಬಹುಳ ೩ವರಿಗೆ.

ಮುಖ್ಯ ವಿಷಯಗಳು.—ಚಿಕ್ಕ ದೇವರಾಜ ಸಾಗರ ಮತ್ತು ದೇವ ನಾಲೆ.—ಚಿಕ್ಕದೇವರಾಜ ಒಡೆಯರವರು ಶ್ರೀರಂಗಪಟ್ಟಣದ ಪಶ್ಚಿಮ ಪಾರ್ಶ್ವದ ಕಾವೇರೀ ನದಿಗೆ ಕಟ್ಟೆಯನ್ನು ಕಟ್ಟಿಸಿ, ಆ ನದಿಯ ಎರಡು ಪಾರ್ಶ್ವಗಳಲ್ಲಿಯೂ ಕಾಲುವೆಗಳನ್ನು ತಂದು, ಉತ್ತರ ಪಾರ್ಶ್ವ ಬರುವ ಕಾಲುವೇ ನೀರು ಕರೀಘಟ್ಟದ ಮೇಲೆ ಬಂದದ್ದನ್ನು ಜನರು ನೋಡಿ ಆಶ್ಚರ್ಯಪಡುವಂತೆಯೂ, ಈ ನೀರು ಬಹುದೂರ ಹೋಗುವಂತೆಯೂ ಮಾಡಿಸಿ, ಈ ಕಾಲುವೆಗೆ ಚಿಕ್ಕದೇವರಾಜ ಸಾಗರವೆಂಬದಾಗಿಯೂ, ದಕ್ಷಿಣ ಪಾರ್ಶ್ವದಲ್ಲಿ ಮಾಡಿಸಿದ ಕಾಲುವೆಗೆ ದೇವನಾಲೆ ಎಂಬದಾಗಿಯೂ ಹೆಸರನ್ನು ಇಟ್ಟರು.

ಗಡಿಗಳ ವಿಚಾರ.—ರಾಜಒಡೆಯರವರು ಮೊದಲಾಗಿ ತಾವು ಸಾಧಿಸಿದ ರಾಜ್ಯಗಳನ್ನು ಬಿಟ್ಟು ಮಾಡಿ, ಕೆಲವರಿಗೆ ಉಂಬಳಿಯನ್ನು ಕೊಟ್ಟು, ಕೆಲವರಿಗೆ ಚಂಡಾಣೆಯನ್ನು ನಿಗದಿ ಮಾಡಿ ಇರುವದಲ್ಲದೆ, ನಿಂತ ಗಡಿಗಳಲ್ಲಿ ಸಣ್ಣದಾಗಿ ಇದ್ದದ್ದನ್ನು ಸಮೀಪದಲ್ಲಿರುವ ಗಡಿಗಳಿಗೆ ಸೇರಿಸಿ ದೊಡ್ಡದು

ಮಾಡಿ, ಒಟ್ಟು ಮಹೀಶೂರ ಸಂಸ್ಥಾನದ ೮೪ ಗಡಿಗಳೆಂಬದಾಗಿ ನಿಬಂಧನೆ ಮಾಡಿದರು. ಈ ಗಡಿಗಳಲ್ಲಿರುವ ಸಣ್ಣ ಸಣ್ಣ ಗ್ರಾಮಗಳನ್ನು ೮—೧೦—೧೨—೧೬ವರೆಗೂ ದೊಡ್ಡ ಗ್ರಾಮಗಳಿಗೆ ಸೇರಿಸಿ ದೊಡ್ಡ ಗ್ರಾಮದ ಹೆಸರಿನಿಂದ ಹೋಬಳಿ ಎಂಬದಾಗಿ ನಿಬಂಧನೆ ಮಾಡಿದರು.

ಗಡಿಗಳಲ್ಲಿನ ಏರ್ಪಾಡು.—ಗಡಿಯೊಂದಕ್ಕೆ ಸುಬೇದಾರ ೧, ಚಿಕ್ಕಪಾರುಪತ್ಯಗಾರ ೧, ಅಠವಣೆಗೆ ಪ್ರತಿ ೩, ಗುಮಾಸ್ತರು ೬, ರಾಯಸದವನು ೧, ಕಾಗದಪತ್ರಗಳನ್ನು ಸಾಗಿಸುವದಕ್ಕೂ ಕಂಡುಕೇಳಿದ ವರ್ತಮಾನಗಳನ್ನು ಬರೆಯುವದಕ್ಕೂ ಸಹ ಅಂಚೇ ಹರಿಕಾರ ೧, ಕೋಲುಕಾರ ಜನರು, ಗಡಿಗಳ ತಾರತಮ್ಯವಿದ್ದಂತೆ ದಫೇದಾರ ಸಹಿತ ಕಾಲವ್ರೊಳಗದಜನರು, ಹಸ್ತಾಂತ್ರಿ ೧, ಗೊಲ್ಲ ೧, ಚಾವಡಿ ಕಾವಲುಗಾರರು ೨, ಕೈ ದೀವಟಿಗೆಯವ ೧, ಗಡಿಗಳಲ್ಲಿ ತುಂಟ ಪಾಳ್ಯಗಾರರು ಕಳ್ಳರು ಕಾಕರು ಮುಂತಾದ ಜನರಿಗೆ ಆಸ್ಪದವಾಗದಂತೆಯೂ ಚಾವಡಿ ಮುಂತಾದ ಸ್ಥಳಗಳಲ್ಲಿ ಹಸ್ತಾಂತ್ರದ ಕಾವಲು ಕಟ್ಟಳೆಗೂ ಸಹಾಬಂದೋಬಸ್ತಾಗಿರುವದಕ್ಕೆ ಗಡಿಯೊಂದಕ್ಕೆ ಕಂದಾಚಾರಕ್ಕೆ ಠಾಣೇದಾರ ೧ ಆಳುಗುರಿಕಾರ ೧, ಶಿರಸ್ತೇದಾರರು ೩, ಗುಮಾಸ್ತರು ೩, ಹೋಬಳಿದಾರ, ದಫೇದಾರ, ಓಲೇಕಾರ, ಕೊಂಬು, ತಮಟೆ ಮುಂತಾದ ಜನಗಳನ್ನು ನೇಮಕಮಾಡಿ, ಗಡಿಗಳ ವಿಧವರಿತು ೧೦೦ _ ೨೦೦—೩೦೦—೪೦೦ ಜನದ ವರಿಗೂ ಓಲೇಕಾರರನ್ನೂ, ಈ ಓಲೇಕಾರರು ೬ಕ್ಕೆ ಒಬ್ಬ ದಫೇದಾರನೆಂಬದಾಗಿಯೂ, ೫೦ ಜನಕ್ಕೆ ಒಬ್ಬ ಹೋಬಳಿದಾರನೆಂಬದಾಗಿಯೂ ನೇಮಕ ಮಾಡಿ, ಕಾರ್ಯಬಿದ್ದಾಗ ಯುದ್ಧಮಾಡುವದಕ್ಕೆ ಮದ್ದು ಗುಂಡು ಮುಂತಾದ ಯುದ್ಧ ಸಾಮಗ್ರಿಗಳನ್ನು ಸಿದ್ಧವಾಗಿರುವಂತೆ ಕಟ್ಟಳೆಮಾಡಿಸಿದರು. ಇದಲ್ಲದೆ ಗಡಿಗಳಲ್ಲಿ ಹೇರಳವಾಗಿ ಕೂಡಿ ಬರುವಂತೆ ಪೈರು ಪಚ್ಚೆಗಳನ್ನು ಮಾಡಿಸತಕ್ಕ ಬುದ್ಧಿವಂತನಾದ ಸುಬೇದಾರನನ್ನೂ, ಹಣಕಾಸು ದವಸ ಧಾನ್ಯ ಮುಂತಾದವುಗಳ ಲೆಕ್ಕ ಬರೆಯುವದರಲ್ಲಿ ನಿರ್ವಂಚನೆಯವನಾಗಿ ನಡೆದುಕೊಳ್ಳುವ ಶಿರಸ್ತೇದಾರ ಗುಮಾಸ್ತರನ್ನೂ, ರಾಯಸದವರು ಮುಂತಾದ ಅಠವಣೆ ಪಣಕಟ್ಟಿನ ಜನಗಳಲ್ಲದೆ ಕಂದಾಚಾರಕ್ಕೆ ಕಿಲ್ಲೇದಾರ ಠಾಣೇದಾರ ಮುಂತಾದ ಜನರನ್ನೂ ನೇಮಿಸಿ, ಇವರು ಕಾವಲು ಕಟ್ಟಳೆ ಮುಂತಾದವು

ಗಳಲ್ಲಿ ಸುಬೇದಾರ ಹೇಳಿದಂತೆ ಕೇಳುವಂತೆಯೂ, ಈ ಅಧಿಕಾರಿಗಳೆಲ್ಲಾ ಬುದ್ಧಿವಂತರಾಗಿರುವ ಜನರ ಬುದ್ಧಿಯನ್ನು ಪರೀಕ್ಷಿಸಿ ನಿರ್ವಂಚನೆಯಿಂದ ನಡೆಸು ಕೊಳ್ಳುವಂತೆಯೂ ನೇಮಕವಮಾಡಿಸಿ, ಸುಬೇದಾರ ಶಿರಸ್ತೇದಾರ ಕಿಲ್ಲೇದಾರ ಮುಂತಾದವರಿಗೆ ಅವರವರ ಚಾಕರಿಯ ವಿಥವರಿತು ಸಂಬಳ ವನ್ನು ನೇಮಕಮಾಡಿಸಿ, ಆ ಸಂಬಳಕ್ಕೆ ಅರ್ಧ ನಗದು ಅರ್ಧ ಭತ್ತಾ ಈಮೇರೆಗೆ ಕೊಡುವಂತೆ ಗೊತ್ತುಮಾಡಿ, ಕಂದಾಚಾರದ ಓಲೇಕಾರ ಜನರಿಗೆ ತಿಂಗಳು ೧ಕ್ಕೆ ಅಡ್ಡ—ಹಣವಡ್ಡ—ಒಂದು ಹಣದವರಿಗೂ ಸಂಬಳವನ್ನು ನೇಮಕ ಮಾಡಿ, ಈ ಸಂಬಳಕ್ಕೆ ಅರ್ಧ ನಗದು ಅರ್ಧ ಭೂಮಿಯನ್ನು ಕೊಡು ವಂತೆಯೂ, ಈ ಜನರಿಗೆ ಅರಮನೆಯ ಹಿಟ್ಟು ಬಿಟ್ಟು ಕಾಣಿಕೆಕಡ್ಡಾಯ ಮನೆದೆರಿಗೆ ಮುಂತಾದ ಬಾಬುಗಳನ್ನು ಕೊಡಕೆಲಸ ವಿಲ್ಲವೆಂಬದಾಗಿಯೂ, ಇದಲ್ಲದೆ ರಾಜ್ಯದಲ್ಲಿ ಜನರ ನಡತೆಯೂ ಮತ್ತು ಗಡಿಗಳಲ್ಲಿಯೂ ಮಾರ್ಗ ಗಳಲ್ಲಿಯೂ ಕಳ್ಳಕಾಕರರು ಮುಂತಾದ ತುಂಟ ಜನರಿಂದ ಹೆಚ್ಚುಕಡಿಮೆ ನಡಿದರೆ ಆ ವರ್ತಮಾನವನ್ನು ಈ ಜನಗಳ ಮುಖದಿಂದ ಜಾಗ್ರತೆಯಾಗಿ ತಮಗೆ ತಿಳಿಸುವಂತೆಯೂ ಸಹ ಕಟ್ಟಳೆ ಮಾಡಿಸಿದರು.

ಅಷ್ಟಗ್ರಾಮ ಮುಂತಾದ ನದಿಯ ಕಟ್ಟೆ ಕಾಲುವೇ ಕೆಳಗೆ ಆದ ಕಬ್ಬು ಬತ್ತ ಮುಂತಾದ ಪೈರುಗಳನ್ನು ಮಾಡಿ, ಅರಮನೆಗೆ ಅರ್ಧ ವಾರ ವನ್ನು ಕೊಡುವಂತೆ ನಿಬಂಧನೆ ಮಾಡಿದ್ದಕ್ಕೆ, ಪ್ರಜೆಗಳು ವಾರಕೊಟ್ಟರೆ ತಮಗೆ ಹುಟ್ಟುವಳಿ ಕಳೆದು ಜೀವನ ನಡೆಯುವದಿಲ್ಲವೆಂದು ಬಿನ್ನವಿಸಿ ಕೊಂಡರು. ಆಗ ಧೊರೆಗಳು ಒಂದು ವರ್ಷ ಆದ ಫಲವನ್ನು ರೇಟಿ ಮಾಡಿಸಿ ರೈತರ ಮುಟ್ಟುವಳಿಯನ್ನು ವಿಚಾರಿಸಿ ನೋಡಲು, ಹುಟ್ಟು ವಳಿಯೂ ಮುಟ್ಟುವಳಿಯೂ ಸಮನಾದ್ದರಿಂದ, ಆದ ಫಲವನ್ನು ಮೂರು ಪಾಲುಮಾಡಿ, ಒಂದು ಪಾಲನ್ನು ಅವರ ಮುಟ್ಟುವಳಿಗೂ, ಒಂದು ಪಾಲನ್ನು ಅವರ ಜೀವನಕ್ಕೂ ಬಿಟ್ಟು ಕೊಟ್ಟು, ನಿಂತ ಒಂದು ಪಾಲನ್ನು ಅರಮನೆಗೆ ಕೊಡುವಂತೆ ನಿಷ್ಕರ್ಷೆ ಮಾಡಿ, ಒಂದೆರಡು ವರ್ಷ ಹಾಗೆ ನಡೆದ ಮೇಲೆ ಮುಂದೆ ಸಮವಾರ ಕೊಡುವಂತೆ ನಿಬಂಧನೆ ಮಾಡಿಕೊಂಡರು. ಹ್ಯಾಗಂದರೆ, ಕೆರೇ ಕೆಳಗಣ ಪೈರುಗಳಿಗೆ ನೀರು ಬಂದ ವರ್ಷ ಬತ್ತ ಮುಂತಾದ ಪೈರು

ಗಳನ್ನು ಮಾಡಿ, ಅರ್ಧ ಅರಮನೆಗೆ ವಾರಾಕೊಡುವಂತೆಯೂ, ನೀರು ಬಾರದ ವರ್ಷ ಆ ಭೂಮಿಯಲ್ಲಿ ಬೆದ್ದಲು ಪೈರು ಮಾಡಿಕೊಂಡು, ಅರಮನೆಗೆ ನಿಬಂಧನೆ ಮೇರೆಗೆ ಬೆದ್ದಲು ಕಂದಾಯವನ್ನು ಕೊಡುವಂತೆಯೂ ನಿಷ್ಕರ್ಷೆಮಾಡಿಸಿದರು. ಈ ಕಟ್ಟೇಕಾಲುವೇ ನೀರನ್ನು ಸರಾಗವಾಗಿ ತಂದು ಪೈರು ಮಾಡಿಸುವದಕ್ಕೆ ಕಾಲುವೇ ಮಣೇಗಾರ ೧, ಶಾನುಭೋಗ ೧, ಕಾಲವ್ರೂಳಿಗದವನು ೧, ನೀರುಗಂಟಿ ಈ ಜನಗಳನ್ನು ಕಾಲುವೇಮುನಾಸಬು ಇದ್ದಂತೆ ಗ್ರಾಮಗಳ ಹಂತವಾರುಮೇರೆಗೆ ೨—೩—೪ ಜನದ ಮೇರೆಗೆ ನೇಮಕ ಮಾಡಿಸಿದ್ದಲ್ಲದೆ, ಅರಮನೇ ವಾರದ ಪೈರುಗಳನ್ನು ರೇಖೆ ಮಾಡಿಸುವದಕ್ಕೆ ಹಸಿಗೇ ಮಣೇಗಾರ ೧, ಹಸಿಗೇ ಶಾನುಭೋಗ ೧, ಕಾಲವ್ರೂಳಗದವರು ಮುಂತಾದ ಜನಗಳನ್ನು ನೇಮಕಮಾಡಿಸಿದರು.

ಚಿಲ್ಲರೆಗ್ರಾಮ ೧ಕ್ಕೆ ಗೌಡ ೧, ಶಾನುಭೋಗ ೧—೨—೩, ಪಂಚಾಂಗದ ಬ್ರಾಹ್ಮಣ ೧, ಕಬ್ಬಿಣದ ಕೆಲಸದವನು ೧, ಅಕ್ಕಸಾಲೆ ೧, ಕುಂಬಾರ ೧, ಅಗಸ ೧, ಕೆಲಸಿ ೧, ತೋಟಿ ೧, ತಳವಾರ ೧, ಕೆರೇನೀರುಗಂಟಿ ೧, ಬಡರವನು ೧, ಈಮೇರೆಗೆ ಬಾರಾಬಲೂತಿ ಎಂಬದಾಗಿ ನಿಷ್ಕರ್ಷೆಮಾಡಿ, ಈ ೧೨ ಜನಕ್ಕೂ ಅವರವರ ಮುನಾಸಾಬು ಇದ್ದಂತೆ, ಕೋರಿನ ದವಸದಲ್ಲಿ ಸೋಲಿಗೆಗುಡ್ಡೆ ಆಯಾ ಎಂಬದಾಗಿ ರುಸುಂ ಮಾಡಿಕೊಟ್ಟು, ಮತ್ತು ಗೌಡ ಶಾನುಭೋಗರಿಗೆ ಶ್ಯಾನಾಯ ಮುದ್ರೆ ಎಂಬದಾಗಿ ಕೊಡುವಂತೆ ನೇಮಕ ಮಾಡಿಸಿ, ಗ್ರಾಮಕ್ಕೆ ಒಬ್ಬ ಗೌಡನಿಗೆಮಾತ್ರ ಮನೇತೆರಿಗೆ ಹಿಟ್ಟು ಬಿಟ್ಟಿ ಕಾಣಿಕೆ ಕಡ್ಡಾಯ ಮುಂತಾದ್ದನ್ನು ಬಿಟ್ಟುಕೊಡುವಂತೆ ನಿಬಂಧನೆಮಾಡಿಸಿದರು. ಇದಲ್ಲದೆ ಶಾನುಭೋಗನ ಸಂಬಳಕ್ಕೆ ಅರ್ಧ ಭೂಮಿಯನ್ನೂ ಅರ್ಧ ಸಂಬಳವನ್ನೂ ಮತ್ತು ರೈತರಿಂದ ವರ್ಷ ೧ಕ್ಕೆ ಕುಳ ೧ಕ್ಕೆ ಕಾಲು, ಅರ್ಧ, ಮುಕ್ಕಾಲು, ಒಂದು ಹಣವರೆಗೆ ಕುಳದ ಮುನಾಸಬು ಇದ್ದಂತೆ ಕಡತದ ಕಾಣಿಕೇ ಹಣವೆಂದು ಕೊಡುವಂತೆ ನೇಮಕಮಾಡಿಸಿದರು.

ಬಡ, ಕೆಲಸಿ, ಕುಂಬಾರ, ಅಗಸ, ತೋಟಿ, ಕಮ್ಮಾರ, ತಳವಾರ ಮುಂತಾದ ಆಯಾ ಸ್ವಾಮ್ಯದ ಜನಗಳಿಗೆ ರೈತರ ಕಡೆಯಿಂದ ತೆನೆಯೊಡನೆ ಕೂಡಿದ ಹೊರೇ ಹುಲ್ಲನ್ನೂ ಕಣದಲ್ಲಿ ೧ ಕೊಳಗ ದವಸವನ್ನೂ ಕೊಡು

ವಂತೆಯೂ, ಈ ರೈತರ ಮನೆಗಳಲ್ಲಿರುವ ಜನರ ಸುಮಾರುಮೇರೆಗೆ ತೋಟಿ ತಳವಾರ ಹೊರತು ಮಿಗಿಲಾದ ಜನಗಳಿಗೆ ಹಡದೆಯನ್ನು ನಿಬಂಧನೆ ಮೇರೆಗೆ ಕೊಡುವಂತೆಯೂ ನೇಮಕಮಾಡಿಸಿದರು ; ಪಂಚಾಂಗದ ಬ್ರಾಹ್ಮಣ, ಶಾನುಭೋಗ, ತೋಟಿ, ತಳವಾರ, ನೀರುಗಂಟಿ, ಈ ೫ ಜನಗಳಿಗೆ ಮಾತ್ರ ಇವರ ಜೀವನಾರ್ಥವಾಗಿ ಅವರವರ ತಾರತಮ್ಯವಿದ್ದಂತೆ ೧ ವರಹ ದಿಂದ ೬ ವರಹದವರಿಗೂ ಮಾನ್ಯವಾಗಿ ಭೂಮಿಯನ್ನು ಕೊಟ್ಟರು. ಇದ ಲ್ಲದೆ ಕಾಲಿವೇ ಮಣೇಗಾರ, ಹಸಿಗೇ ಮಣೇಗಾರ, ಈ ಶಾನುಭೋಗರು ಮುಂತಾದ ಜನರಿಗೂ ಮೇಲೆ ಕಂಡಂತೆ ೧ ಹೊರೇ ಹುಲ್ಲನ್ನೂ ೧ ಕೊಳಗ ದವಸವನ್ನೂ ಸಹ ವಾರದ ಹುಟ್ಟುವಳಿಯಲ್ಲಿ ಕೊಡುವಂತೆ ನೇಮಿಸಿದರು ; ಮಿಗಿಲಾದ ಪೇಟೆಕಟ್ಟಿನ ಜನರು ಅಂದರೆ ಬಣ್ಣಗಾರ, ದೇವಾಂಗ, ಜಿಪ್ಪಲಿಗ, ಕಾಮಾಟಿ, ಗಾರೇಕೆಲಸದವನು, ಶಿಲ್ಪಿ, ಈ ಆರುಮಂದಿಯಲ್ಲದೆ ಮ್ಯಾದರು ಮುಂತಾದ ಜನರು ತಮ್ಮತಮ್ಮ ಕುಲಪದ್ಧತಿ ಮೇರೆಗೆ ಬುದ್ಧಿ ಕುಶಲತೆಗೆ ತಕ್ಕ ಉದ್ಯೋಗಗಳಿಂದ ಜೀವನಮಾಡುವಂತೆ ನಿಬಂಧನೆ ಮಾಡಿಸಿದರು.

ಅನಂತರದಲ್ಲಿ ರಾಜ್ಯದಲ್ಲಿ ದವಸಗಳನ್ನು ಅಳತೆಮಾಡುವ ಕೊಳಗ ಗಳು ಆಯಾ ಸೀಮೆಗಳ ಪದ್ಧತಿಪ್ರಕಾರ ೮ ಸೇರು ೧೨ ಸೇರು ೧೫ ಸೇರು ೧೬ ಸೇರು ಈಪ್ರಕಾರ ಇದ್ದದರಿಂದ, ಅದೇ ಮೇರೆಗೆ ಈಗಲೂ ೮೪ ಗಡಿ ಗಳಲ್ಲಿಯೂ ನಡೆಯುವಂತೆ ಕಟ್ಟುಮಾಡಿಸಿದರು.

ದೇವರಾಜಮೊಹರು ಮಾಡಿಸಿ ಗಡಿಗಳು ಮುಂತಾದವುಗಳಿಗೆ ಕೊಟ್ಟ ದ್ದು.—ಅನಂತರದಲ್ಲಿ ಚಿಕ್ಕದೇವರಾಜ ಒಡೆಯರವರು ೮೪ ಗಡಿಗಳಲ್ಲಿಯೂ ಪೂರ್ವದಲ್ಲಿ ಪಾಳ್ಯಗಾರರ ದಿವಸದಲ್ಲಿದ್ದ ಮುದ್ರೆಯ ಉಂಗುರಗಳನ್ನು ತರಿಸಿ ಪರಾಂಬರಿಸುವಲ್ಲಿ, ಒಂದೊಂದು ಗಡಿಯಲ್ಲಿ ಒಂದೊಂದು ಪ್ರಕಾರ ಇದ್ದದ ರಿಂದ, ಇನ್ನು ಮೇಲ ಹೀಗೆ ಇರಬಾರದೆಂದು ಪರ್ಯಾಲೋಚನೆಮಾಡಿ, ಗಡಿ ಯೊಂದಕ್ಕೆ ಆಯಾಗಡಿಗಳ ಹೆಸರನ್ನು ಬರೆದು, ಮಧ್ಯೆ 'ದೇ' ಎಂಬ ಅಕ್ಷರ ವನ್ನೂ, ಆಚೆ ಈಚೆ ಸೂರ್ಯ ಚಂದ್ರರನ್ನೂ ಬರೆಯಿಸಿ, ಉಂಗುರದ ಬಿಲ್ಲೆಗೆ ಕೆತ್ತಿಸಿದ ಚಿನ್ನದ ವುಂಗುರವನ್ನು ಆಯಾ ಗಡಿಯ ಸುಬೇದಾರನ ಕೈಯಲ್ಲಿ ಇರುವಂತೆ ಕಟ್ಟಳೆ ಮಾಡಿಸಿದರು. ಅರಮನೆ ಚಿಕ್ಕಪಾರುಪತ್ಯಗಾರ ಕಿಲ್ಲೇ

ದಾರರಿಗೂ, ಗಡಿಗಳಿಗೆ ಸೇರಿರುವ ಹೋಬಳಿಗಳಿಗೂ, ಗ್ರಾಮಗಳಿಗೂ, ಸುಂಕ ಫೌಮ್ಕು ಸಮಯಾಚಾರ ಮುಂತಾದ ಸಮಸ್ತ ಪಣಕಟ್ಟಿನ ಗೊತ್ತುಗಾರ ಜನಗಳಿಗೊ, 'ದೇ' ಎಂಬ ಒಂದೇ ಅಕ್ಷರವನ್ನು ಕೆತ್ತಿರುವ ಬೆಳ್ಳಿಯ ಉಂಗುರಗಳನ್ನು ಮಾಡಿಸಿಕೊಟ್ಟರು. ಅರಮನೆಯ ಅಪ್ಪಣೆಯನ್ನು ಮೀರಿ ನಡೆದ ಜನರ ಮನೆಗಳಿಗೂ ದವಸದ ರಾಶಿಗಳಿಗೂ ಮುದ್ರೆಯನ್ನು ಹಾಕ ತಕ್ಕಬಗ್ಯೆ, ಮರದ ಹಲಿಗೆಯನ್ನು ಮಾಡಿಸಿ, ಆಚೆ ಈಚೆ ಸೂರ್ಯ ಚಂದ್ರರ ನ್ನೂ ಮಧ್ಯೆ 'ದೇ' ಎಂಬ ಅಕ್ಷರವನ್ನೂ ಕೆತ್ತಿಸಿದ ಈ ಮುದ್ರೇಕೋಲನ್ನು ಗ್ರಾಮಗಳ ಚಾವಡಿಯಲ್ಲಿ ಇರಿಸಿ ಇದ್ದು, ತೋಟಿ ತಳವಾರ ನೀರಗಂಟಿ ಈ ಜನಗಳು, ಗ್ರಾಮದ ಪಾರುಪತ್ಯಗಾರ ಹೇಳಿದಂತೆ ಆ ಮುದ್ರೇಕೋಲನ್ನು ತೆಗದುಕೊಂಡು ಹೋಗಿ ಮುದ್ರೆಹಾಕುವಂತೆ ನಿಬಂಧನೆ ಮಾಡಿದರು. ಗಡಿಗಳಲ್ಲಿರುವ ದೇವಸ್ಥಾನಗಳಿಗೂ ಕೂಡ ಆಯಾ ದೇವರ ಹೆಸರುಗಳನ್ನು ಬರೆದು ಅಕ್ಷರವನ್ನು ಕೆತ್ತಿಸಿ ದೇವಸ್ಥಾನದ ಪಾರುಪತ್ಯಗಾರನ ಕೈಯಲ್ಲಿ ಇರುವಂತೆ ಕಟ್ಟಲೆಮಾಡಿಸಿದರು.

ಅನಂತರದಲ್ಲಿ ೮೪ ಗಡಿಗಳಲ್ಲಿಯೂ ಅಳತೆಮಾಡುವ ಕೊಳಗ ಬಳ್ಳ ಸೇರು ಅರ್ಧಸೇರು ಪಾವು ಅರಪಾವು ಚಟಾಕು ಮುಂತಾದ ಪಕ್ಕಾ ಸೇರುಗಳಿಗೂ, ಕಚ್ಚಾ ಸೇರು ಪಂಚೇರು ಧಡೆಯ ಮಣ ಮುಂತಾದವುಗಳಿಂದ ಅಳತೆ ಮಾಡುವ ಪಾತ್ರೆಗಳಿಗೂ, ಮೇಲೆ ಬರದಿರುವ ಮೋರೆಗೆ ಮುದ್ರೆಗಳನ್ನು ಕೆತ್ತಿಸಿ ಪೇಟೆ ಮನೆಗಳಲ್ಲಿ ಮಾರುವದಕ್ಕೂ ತೆಗೆದುಕೊಳ್ಳುವದಕ್ಕೂ ಇದೇ ಮುದ್ರೆಹಾಕಿದ ಕೊಳಗ ಸೇರು ಧಡೆಯ ಮಣ ಮುಂತಾದವುಗಳಿಂದಲೇ ವ್ಯಾಪಾರ ಮಾಡುವಂತೆ ಕಟ್ಟಲೆಮಾಡಿಸಿದರು.

ಚಿಕ್ಕಹಾಳಿತ ದೊಡ್ಡಹಾಳಿತ ತೂಕಗಳನ್ನು ನಿರ್ಣಯಿಸಿದ್ದು.—ಕಂಠೀರಾಯಿ ೩ ಹಣತೂಕಕ್ಕೆ ಒಂದು ದುಡ್ಡು ತೂಕವೆಂತಲೂ, ಆ ದುಡ್ಡು ತೂಕ ೧ಕ್ಕೆ ತೋಲಾ ಎಂತಲೂ, ಈ ೬೪ ದುಡ್ಡು ತೂಕಕ್ಕೆ ಕಚ್ಚಾ ೧ ಸೇರೆಂತಲೂ, ಈ ೧೦ ಸೇರಿಗೆ ಒಂದು ಧಡಿಯಾಸೆಂತಲೂ, ಇಂಥಾ ಧಡಿಯ ನಾಲ್ಕು ಆದರೆ ಒಂದು ಚಿಕ್ಕಮಣ ಎಂತಲೂ, ದೊಡ್ಡಹಾಳಿತದ ಮಣುವಿನ ತೂಕಕ್ಕೆ ಇದೇ ೪೪—೪೬ ಸೇರು ಎಂತಲೂ ನಿಬಂಧನೆ ಮಾಡಿದರು. ಬೆಲ್ಲ, ಅಡಿಕೆ, ಅರಿಸಿನ, ಹುಣಿಸೇಹಣ್ಣು, ಮೆಣಸು, ಮೆಣಸಿನಕಾಯಿ, ಗಂಧಿಗರ

ಅಂಗಡೀ ಕಿರಾಣಿಜಿನಸು ಮುಂತಾದ ಪದಾರ್ಥಗಳನ್ನು ಅರಮನೆಗೆ ದೊಡ್ಡ ಹಾಳತದಿಂದ ತೆಗೆದುಕೊಂಡು ಚಿಕ್ಕಹಾಳತದಿಂದ ವೆಚ್ಚ ಮಾಡುವಂತೆಯೂ ಇದೇ ಮೇರೆಗೆ ಪೇಟೆಗಳಲ್ಲಿ ವ್ಯಾಪಾರ ಮಾಡುವಂತೆಯೂ ನಿಬಂಧನೆ ಮಾಡಿಸಿದರು.

ಗಿಡ ಗೆಂಡೆ ಕಟ್ಟಿದ ಭೂಮಿಗಳನ್ನು ಸಾಗುವಳಿಗೆ ಕೊಟ್ಟಿದ್ದು.—ಗಿಡ ಗೆಂಡೆ ಕಟ್ಟಿರುವ ಭೂಮಿಗೆ ಆಯಾಸೀಮೆಯ ಪದ್ಧತಿಪ್ರಕಾರ ಪೂರ್ವದಲ್ಲಿ ಶಾನುಭೋಗನ ಲೆಕ್ಕದಪ್ರಕಾರ ಹನ್ನೆರಡು ಹಣ ಹುಟ್ಟುವ ಉತ್ತಮ ಭೂಮಿಯನ್ನು ಗಿಡ ಗೆಂಡೆ ಕಡಿದು ರೈತರು ಸಾಗುವಳಿ ಮಾಡಿದರೆ, ೫ ವರ್ಷದವರಿಗೂ ಮೂರರಲ್ಲಿ ಒಂದು ಪಾಲು ಕಂದಾಯ ತೆಗೆದುಕೊಳ್ಳುವಂತೆಯೂ, ಇದೇಮೇರೆಗೆ ಇರುವ ೧೬ ಹಣ ಹುಟ್ಟುವ ಮಧ್ಯಮೋತರ ಭೂಮಿಗೆ ನಾಲ್ಕರಲ್ಲಿ ಒಂದುಪಾಲು ೪ ಹಣವನ್ನು ಕಂದಾಯ ತೆಗೆದುಕೊಂಡು ಅನಂತರ ಅರಮನೆಯ ಪದ್ಧತಿಮೇರೆಗೆ ನಿಜವಾದ ಕಂದಾಯವನ್ನು ತೆಗೆದು ಕೊಳ್ಳುವಂತೆಯೂ ನಿಬಂಧನೆ ಮಾಡಿಸಿದರು. ಕೆಲವು ಸೀಮೆಗಳಲ್ಲಿ ರೈತರು ಕಡಿಮೆಯಾಗಿ ಗಿಡ ಗೆಂಡೆ ಕಟ್ಟಿರುವ ಭೂಮಿಯು ಹೆಚ್ಚಾಗಿ ಇದ್ದದರಿಂದ ಸಾಗುವಳಿಯಾಗತಕ್ಕ ಬಗ್ಗೆ ರೈತರಿಗೆ ಹಿಸ್ಸೇ ಕಂದಾಯವೆಂಬದಾಗಿ ನೇಮಕ ಮಾಡಿಕೊಟ್ಟರು.

ತೆಂಗಿನಮರ ಮುಂತಾದವುಗಳಿಗೆ ಕಂದಾಯ.—ಸೀಮೆಗಳ ತೋಟಗಳಲ್ಲಿರುವ ೧೦೦೦ ತೆಂಗಿನಮರಕ್ಕೆ ೩೦—೨೮—೨೫—೧೫—೧೮ ವರಹದ ಮೇರೆಗೆ ಆಯಾ ತೋಟದ ಫಲಗಳನ್ನು ನೋಡಿ ಕಂದಾಯವನ್ನು ನಿಬಂಧನೆ ಮಾಡಿಸಿದ್ದಲ್ಲದೆ, ಕೆಲವು ಸೀಮೆಗಳಲ್ಲಿ ತೋಟಕ್ಕೆ ಕಂದಾಯ ಪೂರ್ವಪದ್ಧತಿ ಇಲ್ಲದ್ದರಿಂದ, ಅಡಿಕೆ ತೆಂಗಿನಲ್ಲಿ ಆದ ಫಲವನ್ನು ವಾರ ತೆಗೆದುಕೊಳ್ಳುವಂತೆಯೂ, ಮೇಲ್ಕಂಡ ತೆಂಗಿನಮರಕ್ಕೆ ಕಂದಾಯ ನಿಗದಿ ಮಾಡಿರುವ ಸೀಮೆಗಳಲ್ಲಿ ಅಡಿಕೇಮರಕ್ಕೂ ಆಯಾಸೀಮೆಯ ಪದ್ಧತಿಮೇರೆಗೆ ಕಂದಾಯವನ್ನು ನಿಬಂಧನೆ ಮಾಡಿದರು.

ಕೆರೆಯ ಹಿಂದುಗಡೆಯಲ್ಲಿಯೂ ಕಾಲುವೆಗಳ ಸಮೀಪದಲ್ಲಿಯೂ ಹೊಸದಾಗಿ ಅಡಿಕೆ ತೆಂಗು ತೋಟವನ್ನು ಮಾಡುವದಕ್ಕೆ ರೈತರಿಗೆ ಸಾಗುವಳಿಗೆ

ಕೊಡಬೇಕಾದರೆ, ೧೦ ಬಾಳೇಬುಡಕ್ಕೆ ೩ ಹಣ ಕಂದಾಯದ ಮೇರೆಗೆ ತೆಗದುಕೊಂಡು ಅಡಿಕೆ ತೆಂಗು ಫಲಕ್ಕೆ ಬಂದ ಮೇಲೆ ಬಾಳೇ ಕಂದಾಯವನ್ನು ಬಿಟ್ಟುಕೊಟ್ಟು ಅಡಿಕೆ ತೆಂಗಿಗೆಮಾತ್ರ ಆಯಾ ಸೀಮೆಯ ಪದ್ಧತಿ ಮೇರೆಗೆ ವಾರವಾಗಲೀ ಕಂದಾಯವಾಗಲೀ ತೆಗದುಕೊಳ್ಳುವಂತೆ ನಿಬಂಧನೆ ಮಾಡಿಸಿದರು.

ಹೊಲಗಳಲ್ಲಿರುವ ಹುಣಿಸೆ ಹಲಸಿನ ಮರಗಳಿಗೆ ಮಾತ್ರ ಫಲವಿದ್ದಂತೆ ೧ ಹಣದಿಂದ ೨ ಹಣದವರೆಗೂ ಮರವಳಿ ಕಂದಾಯವನ್ನು ನಿಷ್ಕರ್ಷೆ ಮಾಡಿಸಿದರು.

ರಾಜ್ಯದಲ್ಲಿ ಕೆಲವು ಭೂಮಿಗಳಿಗೆ ರೈತರು ನಾವು ಕಂದಾಯವನ್ನು ಕೊಡಲಾರೆವು ಎಂದು ಬೇಡಿಕೊಂಡದ್ದರಿಂದ, ಧೊರೆಗಳು ರೈತರ ಮೇಲೆ ಕಟಾಕ್ಷವಿಟ್ಟು, ಅವರು ಚೆನ್ನಾಗಿ ಬದುಕಬೇಕೆಂದು ಯೋಚಿಸಿ, ವಾರವನ್ನು ತೆಗೆದುಕೊಳ್ಳುವಂತೆ ನಿಬಂಧನೆ ಮಾಡಿ, ವಾರದಲ್ಲಿ ಹುಟ್ಟಿದ ಅರಮನೇಪಾಲಿನ ದವಸವನ್ನು ಶ್ರೀರಂಗಪಟ್ಟಣದ ದೊಡ್ಡಉಗ್ರಾಣಕ್ಕೆ ತಂದು ಸೇರಿಸುವಂತೆ ಗಡಿಗಳ ಸುಬೇದಾರರಿಗೆ ಕಟ್ಟಲೆ ಮಾಡಿಸಿದರು. ವಾರಗಳಲ್ಲಿ ಹುಟ್ಟಿದ ಹುಲ್ಲನ್ನು ಶ್ರೀರಂಗಪಟ್ಟಣದ ಹುಲ್ಲುಮೆದೆಗೆ ತಂದು ಹಾಕುವಂತೆ ನಿಬಂಧನೆ ಮಾಡಿಸಿದರು.

ಕೊಬ್ಬಿದ ರೈತರನ್ನು ಅಡಗಿಸಿ ತೆರಿಗೆಗಳನ್ನು ಹಾಕಿದ್ದು.—ಈಪ್ರಕಾರವಾಗಿ ಸಕಲ ವಿಷಯಗಳಲ್ಲಿಯೂ ರೈತರಿಗೆ ಸರಾಗ ಮಾಡಿಕೊಟ್ಟದ್ದರಿಂದ ಕೆಲವರು ರೈತರು ಧನಧಾನ್ಯದಿಂದ ಗರ್ವಿತರಾಗಿ "ಅರಮನೆಗೆ ಕೊಡತಕ್ಕ ಕಂದಾಯ ವಾರ ದವಸ ಮುಂತಾದ್ದನ್ನು ಕೊಡುವದಿಲ್ಲ. ಕಾಡಭೂಮಿಯನ್ನು ಬಸವಣ್ಣ ಉಳುತ್ತಲಿದ್ದಾನೆ, ದೇವೇಂದ್ರ ಮಳೆಯನ್ನು ಕರೆಯುತ್ತಲಿದ್ದಾನೆ. ನಾವು ಕಷ್ಟಪಟ್ಟು ಪೈರುಮಾಡಿ ನಿಮಗೆ ಯಾತಕ್ಕೆ ಕೊಡಬೇಕು ?" ಎಂಬದಾಗಿ ಅರಮನೆಯ ಮುದ್ರೆಯನ್ನು ಮೀರಿ ನಡೆದರು. ಆಗ ಧೊರೆಗಳು ಆ ರೈತರನ್ನು ಹಿಡಿತರಿಸಿ, ತುಂಟರಿಗೆ ತಕ್ಕ ಶಿಕ್ಷೆಯನ್ನು ಮಾಡಿಸಿ ಅವರ ಸರ್ವಸ್ವವನ್ನೂ ಅರಮನೆಗೆ ತೆಗೆದುಕೊಂಡರು. ಇದನ್ನು ಕಂಡ ಮತ್ತು ಕೆಲವು ಜನ ರೈತರು ಭಯಪಟ್ಟು "ಅಪ್ಪಣೆಯಾದಂತೆ ನಡೆದುಕೊಳ್ಳು

ತ್ತೇವೆ." ಎಂದು ಬಿನ್ನವಿಸಿಕೊಂಡದ್ದರಿಂದ, ಆ ರೈತರಿಗೆ ಜೀವನಕ್ಕೂ, ಮುಂದೆ ಅವರ ಆರಂಬ ನಡೆಯುದಕ್ಕೂ, ಅವರಲ್ಲಿ ಇದ್ದ ಧನಧಾನ್ಯಗಳಲ್ಲಿ ಸ್ವಲ್ಪವನ್ನು ಬಿಟ್ಟು, ನಿಂತ ಧಾನ್ಯ ವಿಶಿಷ್ಟವನ್ನೂ ಅರಮನೆಗೆ ತೆಗೆದುಕೊಂಡು, ಇನ್ನು ಮೇಲೆ ರೈತರಿಗೆ ಸರಾಗ ಮಾಡಿ ಕೊಟ್ಟರೆ ಅರಮನೆಯ ಕೆಲಸ ಕೆಟ್ಟುಹೋಗುವದೆಂದು ಪರ್ಯಾಲೋಚನೆಮಾಡಿ, ರೈತರನ್ನು ತಗ್ಗಿಸುವ ನಿಮಿತ್ತವಾಗಿಯೂ ಅರಮನೆಗೆ ಕೂಡಿ ಬರುವಂತೆಯೂ ಹೆಚ್ಚಾಗಿ ಮನೇತೆರಿಗೆ ಮುಂತಾದ ೧೯ ಬಾಬುಗಳನ್ನು ನೇಮಿಸಿದರು.

(೧) ಮನೇ ತೆರಿಗೆ, (೨) ಹುಲ್ಲುಹಣ, (೩) ದೇವರಾಯವಟ್ಟ, (೪) ಪಿರ ಸುಂಕ, (೫) ಸಮಯಾಚಾರ, (೬) ದನಕರ ಮುಂತಾದ್ದಕ್ಕೆ ಸುಂಕ, (೭) ಕುರೀ ತೆರಿಗೆ, (೮) ಗುಳುವಿನ ಪ್ರೊಮ್ಮು, (೯) ಅಂಗಡಿಪಸರ, (೧೦) ಕೋಟಾಚಾರ, (೧೧) ಉಬ್ಬೇ ಕಾಣಿಕೆ, (೧೨) ಅಂಗಡಿ ಪಟ್ಟಿಡಿ, (೧೩) ಗಿಡಕಾವಲು, (೧೪) ಜಾತಿ ಮಣಿಯ, (೧೫) ಮಗ್ಗದಕಂದಾಯ, (೧೬) ಪಾಶವಾರ, (೧೭) ಮದುವೇ ತೆರಿಗೆ, (೧೮) ಉಪ್ಪಿನ ಮೊಳ, (೧೯) ಕೌದೀ ತೆರಿಗೆ. ಈಮೇರೆಗೆ ೧೯ ಬಾಬುಗಳನ್ನು ರೈತರಿಗೆ ನಿಷ್ಕರ್ಷೆ ಮಾಡಿಸಿ, ಈ ಬಾಬುಗಳಲ್ಲಿ ಒಂದೊಂದಕ್ಕೆ ಒಬ್ಬ ಮಣೇಗಾರ, ಶಾನುಭೋಗ, ಕೋಲುಕಾರ ಮುಂತಾದ ಜನಗಳನ್ನು ನೇಮಕಮಾಡಿ, ಈ ಬಾಬುಗಳಿಗೆ ಗುತ್ತಿಗೆಯನ್ನು ಮಾಡಿ, ಆಯಾಸಂವತ್ಸರದಲ್ಲಿ ಹುಟ್ಟಿದ ಗುತ್ತಿಗೇ ಹಣವನ್ನು ಆಯಾಗ್ರಾಮದ ಹುಟ್ಟುವಳಿಗೆ ಸೇರಿಸುವಂತೆಯೂ, ಆಯಾ ರೈತರ ತಾರತಮ್ಯವರಿತು ಕಂದಾಯ ಹೆಚ್ಚಿಸಿ, ಈ ಹಣವೆಲ್ಲಾ ಸೀಮೇ ಕಂದಾಯದ ಹಣದ ಜೊತೆಯಲ್ಲಿಯೇ ಬರುವಂತೆಯೂ ನಿಬಂಧನೆ ಮಾಡಿದ್ದರು.

ಚಿಂತಾಲುಗಳನ್ನು ಹಾಕಿಸಿದ್ದು.— ಪಾಳ್ಯಗಾರರಿಂದ ಜಯಿಸಿದ ಗಡಿಗಳ ಕೋಟೆ ಕೊತ್ತಲಗಳನ್ನು ಭದ್ರ ಮಾಡಿಸಿ, ಪೂರ್ವದಲ್ಲಿದ್ದ ಪೇಟೆಗಳನ್ನು ವಿಸ್ತಾರವಾಗಿ ಕಟ್ಟಿಸಿ, ಯಾವಯಾವ ಪ್ರದೇಶಗಳಲ್ಲಿ ಯಾವ ಯಾವ ಪದಾರ್ಥಗಳು ಹೆಚ್ಚಾಗಿ ಬೆಳೆಯುತ್ತವೋ ಆ ಪದಾರ್ಥಗಳನ್ನು ಒಂದೊಂದು ದೊಡ್ಡ ಪೇಟೆಯಲ್ಲಿಯೇ ಗೊತ್ತಾಗಿ ಕರಗಸಾಡಿ ಆಗಬೇಕೆಂದು

ವರ್ತಕರು ಬಿನ್ನವಿಸಿಕೊಂಡಂತೆ, ಧೊರೆಗಳು ಬೆಂಗಳೂರು ಗುಬ್ಬಿ ತುರುವೇಕೆರೆ ಮುಂತಾದ ಸ್ಥಳಗಳಲ್ಲಿ ಚಿಂತಾಲುಗಳನ್ನು ಹಾಕಿಸಿ, ಹತ್ತಿ ಅಡಿಕೆ ಮುಂತಾದ ತೂಕದ ಪದಾರ್ಥಗಳು ಅಲ್ಲಿಗೆ ಬಂದು ಅಲ್ಲಿ ತೂಕಮಾಡಿ ತೆಗೆದು ಕೊಂಡುಹೋಗಿ ಚಿಲ್ಲರೆ ಪೇಟೆಗಳಲ್ಲಿ ಮಾರುವದೆಂದು ಕಟ್ಟುಮಾಡಿಸಿದರು.

ಸುಂಕದ ಚಾವಡಿ ಮೊದಲಾದವುಗಳು.—ಇದಲ್ಲದೆ ದವಸ ತೂಕದ ಕಿರಾಣಿ ಗಂದಿಗ ಜಿನಸು ಜವಳಿ ಮುಂತಾದ ಸಕಲ ಪದಾರ್ಥಗಳೂ, ೮೪ ಗಡಿಗಳ ಪೇಟೆಗಳಿಂದ ತೆಗೆದುಕೊಂಡು ಹೋಗುವದಕ್ಕೂ, ಬರುವದಕ್ಕೂ, ಅಲ್ಲಿಯೇ ಕರಗಪಡಿ ಆಗುವದಕ್ಕೂ ಸಹ, ಅರಮನೆಗೆ ಕೂಡಿಬರುವಂತೆ ಆಯಾ ಜಿನಸಿನ ತಾರತಮ್ಯ ಇದ್ದಂತೆ ಸುಂಕವನ್ನು ನಿಬಂಧನೆ ಮಾಡಿ, ಈ ಸುಂಕವನ್ನು ತೆಗೆದುಕೊಳ್ಳುವದಕ್ಕೆ ಸುಂಕದ ಚಾವಡಿ ಎಂಬದಾಗಿಯೂ, ಇದಕ್ಕೆ ಸುಂಕದ ಮಣೆಗಾರ, ಶಾನುಭೋಗ ೧—೨—೩, ಕೋಲುಕಾರರು, ಅಲ್ಲಲ್ಲಿ ಮಾರ್ಗಗಳಲ್ಲಿರುವ ಉಕ್ಕಡಗಳಲ್ಲಿ ಒಂದೊಂದಕ್ಕೆ ಒಬ್ಬೊಬ್ಬ ಕೋಲುಕಾರ ಶಾನುಭೋಗ ಮುಂತಾದ ಜನಗಳನ್ನು ನಿಷ್ಕರ್ಷೆ ಮಾಡಿಸಿ ಈ ಜನಗಳಿಗೆ ಸಂಬಳಗಳನ್ನು ನಿಗದಿ ಮಾಡಿಸಿದರು.

ಸೆಟ್ಟಿ ಯಜಮಾನ ಮೊದಲಾದವರು.—ಗಡಿಗಳು ಮುಂತಾದ ಪೇಟೆಗಳಲ್ಲಿ ಬಣಜಿಗರು ಕೋಮಟಿಗರು ಪಾಂಚಾಳದವರು ಮುಂತಾದ ಹಮಾಕೋಮಿನ ಜನರು ತಮ್ಮತಮ್ಮ ಜಾತಿ ನಿಬಂಧನೆಯನ್ನು ಮೀರಿ ನಡೆಯದಂತೆಯೂ, ಕಳ್ಳತನ ನಡೆಯದಂತೆಯೂ, ಆಯಾ ಗಡಿಯಲ್ಲಿ ವ್ಯಾಪಾರ ಮಾಡುವಂಥಾವರು ಅರಮನೇ ನಿಬಂಧನೆಮೇರೆಗೆ ವ್ಯಾಪಾರಗಳು ಮಾಡಬೇಕಾದ್ದಲ್ಲದೆ ಹೆಚ್ಚು ಕಡಿಮೆ ನಡೆಯಿಸದಂತೆಯೂ, ಅರಮನೆಯ ನಿಬಂಧನೆಯನ್ನು ಮೀರಿ ನಡೆದ ಜನರನ್ನು ಶಿಕ್ಷೆ ಮಾಡುವದಕ್ಕೂ ಸಹ, ಪೇಟೆ ೧ಕ್ಕೆ ಕೊತ್ತವಾಲ ೧, ಶಾನುಭೋಗರು ಪೇಟೆಇದ್ದಂತೆ ೧—೨—೩, ಊಳಿಗದವರು, ಪೇಟೇ ಸೆಟ್ಟಿ ೧, ಯಜಮಾನ ೧, ದೇಶದ ಶಾನುಭೋಗ ೧, ಚಲವಾದಿ ೧, ಟಮುಕಿ ಹೊಡೆದು ಸಾರುವದಕ್ಕೆ ಡಂಡಿಯವನು ೧, ಕೊಂಬಿನವನು ೧, ತಂಬಟೆಯವನು ೧, ಕಳ್ಳಭಂಟರು ಮುಂತಾದ ಜನರನ್ನು ನೇಮಿಸಿ, ರಾತ್ರಿ ವೇಳೆಗಳಲ್ಲಿ ಕೊತ್ತವಾಲ, ದಂಡಿ, ಕಳ್ಳಬಂಟರು, ಕೊಂಬು, ತಂಬಟೆ

ಮುಂತಾದ ಜನರು ಕಳ್ಳ ಕಾಕರಿಗೆ ಆಸ್ಪದವಿಲ್ಲದಂತೆ ಗಸ್ತಿಯನ್ನು ತಿರುಗಿ ಕೊಂಡು ಜಾಗರೂಕರಾಗಿ ಇರುವಂತೆಯೂ, ಕೊತ್ತವಾಲ ಪೇಟೇಸೆಟ್ಟಿ ಯಜಮಾನ ಇವರು ವಿಚಾರಣೆ ಮಾಡಿ ಸ್ವಲ್ಪ ತಪ್ಪು ಮಾಡಿದವರ ಕೈಯಲ್ಲಿ ಅಪರಾಧವನ್ನು ತೆಗೆದುಕೊಳ್ಳುವಂತೆಯೂ, ಹೆಚ್ಚು ಅಪರಾಧವನ್ನು ಮಾಡಿದ ಜನಗಳಿಗೆ ಶಿಕ್ಷೆ ಮಾಡುವದಕ್ಕೆ ಧೊರೆಗಳಿಗೆ ಬಿನ್ನವಿಸುವಂತೆಯೂ, ಮೇಲಕಂಡ ಜನಗಳಿಗೆ ತಮ್ಮ ತಮ್ಮ ಜಾತಿ ಪದ್ಧತಿ ಮೇರೆಗೆ ನಡೆದುಕೊಳ್ಳುವಂತೆಯೂ ಸಹ ಕಟ್ಟು ಮಾಡಿಸಿದರು.

ಆಯಾ ಸೀಮೆಯ ಪದ್ಧತಿ ಮೇರೆಗೆ ದೇಶಮುಖಿ, ದೇಶಪಾಂಡೆ, ನಾಡಿಗರು, ಮುಗಿದ ಕೈಗೆ ಹೊನ್ನು ತೆಗೆದುಕೊಳ್ಳುವವರು, ಹೆಬ್ಬಾರವರು ಮುಂತಾದ ಜನಗಳಿಗೆ ಅವರವರ ಪೂರ್ವಪದ್ಧತಿ ಪ್ರಕಾರ ವೀಳ್ಯ ಮೊದಲಾದ ಮರ್ಯಾದೆಗಳನ್ನು ನಡೆಯಿಸುವಂತೆ ಕಟ್ಟಳೆ ಮಾಡಿಸಿದರು.

ಕಂದಾಯದ ವಸೂಲು.—ನಿಬಂಧನೆ ಮಾಡಿರುವ ಮೇರೆಗೆ ಗಡಿಗಳಿಂದ ಹಣ ವಸೂಲಾಗಿ ಬರುವದಕ್ಕೆ ವರ್ಷಕ್ಕೆ ಮೂರು ಕಂದಾಯವೆಂಬದಾಗಿ ನಿಷ್ಕರ್ಷೆ ಮಾಡಿ, ವರ್ಷ ಪ್ರತಿವರ್ಷದಲ್ಲಿಯೂ ಕಾಸು ಬಾಕಿ ನಿಲ್ಲದಂತೆ ವಸೂಲಾಗಿ ಆಕವಣೆ ಕಂದಾಚಾರ ದೇವಾದಾಯ ಬ್ರಹ್ಮದಾಯ ಮುಂತಾದ ಸ್ಥಳದ ಶಿಬ್ಬಂದಿ ಖರ್ಚು ಕಳೆದು ಶ್ರೀರಂಗಪಟ್ಟಣದ ಬೊಕ್ಕಸಕ್ಕೆ ಬಂದ ಹಣವನ್ನು ದವಲತ್ತಿಗೆ ಎಂದು ನಿಷ್ಕರ್ಷೆ ಮಾಡಿದರು. ಸುಬೇದಾರನು ಪೈರು ಪಚ್ಚೆ ಮುಂತಾದ ಬಾಬುಗಳಿಂದ ಹೆಚ್ಚು ಹುಟ್ಟುವಳಿ ಮಾಡುತ್ತೇನೆಂದು ಮುಚ್ಚಳಿಕೆ ಬರೆದುಕೊಟ್ಟ ಪ್ರಕಾರ ವರ್ಷಕ್ಕೆ ಬರತಕ್ಕ ಕಂಠೀರಾಯಿ ೩,೨೦,೦೦೦ ವರಹಗಳಲ್ಲಿ ಜಾಳಿಗೆ ೧ಕ್ಕೆ ೧,೦೦೦ ವರಹಗಳ ಪ್ರಕಾರ ಜಾಳಿಗೆ ೨ಕ್ಕೆ ೨,೦೦೦ ವರಹಗಳು ಪ್ರತಿದಿನದಲ್ಲಿಯೂ ಗಡಿಗಳಿಂದ ಬರುವಂತೆ ನಿಬಂಧನೆ ಮಾಡಿಸಿದ್ದಲ್ಲದೆ, ಗಡಿಗಳಿಂದ ಬಂದ ಹಣವನ್ನು ಸರ್ವಾಧಿಕಾರಿ ಮಾಡುವಂಥಾವನು ನಾಮತೀರ್ಥದ ವೇಳೆಗೆ ತಂದು ಒಪ್ಪಿಸುವಂತೆ ಕಟ್ಟಳೆ ಮಾಡಿದರು. ಬಂದುವೇಳೆ ಬಂದಾನೊಂದುದಿನ ಹಣ ಬರುವದು ಸಾವಕಾಶವಾದರೆ, ಧೊರೆಗಳು ರಾಮಾಯಣ ಪಾರಾಯಣದಲ್ಲಿಯೇ ಕಾಲವನ್ನು ಕಳೆದು, ೨,೦೦೦ ವರಹ ಬಂದಬಳಿಕ ನೋಟಸವಿಕೆಯನ್ನು ಮಾಡಿಸಿ,

ಅರಮನೆಯ ಖಾಸಾಬೊಕ್ಕಸಕ್ಕೆ ಕಳುಹಿಸಿ, ಅನಂತರ ಆರೋಗಣೆಯನ್ನು ಒಪ್ಪಿಸಿಕೊಳ್ಳುತ್ತಿದ್ದರು. ದೊರೆಗಳು ಈ ಹಣದಿಂದಲೇ ದಾನಧರ್ಮಗಳನ್ನು ಮಾಡುತ್ತಿದ್ದರು.

ಉಗ್ರಾಣಗಳ ಏರ್ಪಾಡು.—ಪೂರ್ವದಲ್ಲಿ ರಣಧೀರ ಕಂಠೀರವನರಸರಾಜಒಡೆಯರವರು ಸಕಲ ಪದಾರ್ಥಗಳನ್ನೂ ತುಂಬುವದಕ್ಕೆ ಶ್ರೀರಂಗಪಟ್ಟಣದ ಕೋಟೆಯಲ್ಲಿ ಕಟ್ಟಿಸಿದ್ದ ದೊಡ್ಡ ಉಗ್ರಾಣದಲ್ಲಿ, ಸೀಮೆಗಳಿಂದ ಬಂದ ವಾರದ ದವಸವನ್ನೂ ಕ್ರಯಕ್ಕೆ ತರಿಸಿದ ಎಣ್ಣೆ ತುಪ್ಪ ಮುಂತಾದ ಕಿರಾಣಿ ಜಿನಸುಗಳನ್ನೂ ಹೊಸದಾಗಿ ತುಂಬಿಸಿ, ಹಳದಾಗಿ ಇದ್ದ ಸಕಲ ಪದಾರ್ಥಗಳನ್ನೂ ಪ್ರತಿದಿನದಲ್ಲಿಯೂ ಅರಮನೆ ಮುಂತಾದ ಸ್ಥಳಗಳಲ್ಲಿ ವೆಚ್ಚ ಮಾಡುವದಕ್ಕೆ, ಇದೇರೀತಿಯಾಗಿ ಹೊಸದಾಗಿ ಕಟ್ಟಿಸಿದ ಚಿಕ್ಕ ಉಗ್ರಾಣಕ್ಕೆ ಕೊಟ್ಟು ಕಳುಹಿಸುವಂತೆಯೂ, ದೊಡ್ಡ ಉಗ್ರಾಣದಲ್ಲಿ ವೆಚ್ಚವಾದ ಜಿನಸುಗಳಿಗೆ ಸರಿಯಾಗಿ ಹೊಸದಾಗಿ ಭರ್ತಿಯಾಗಿರುವಂತೆಯೂ ನಿಬಂಧನೆ ಮಾಡಿಸಿದರು.

ಗಡಿಗಳಲ್ಲಿರುವ ಅರಮನೇ ಪಣ್ಯದ ತೋಟಗಳಲ್ಲಿ ಉತ್ಪತ್ತಿಯಾದ ತೆಂಗು ಹಲಸು ಮಾವು ನಿಂಬೆ ಕಿತ್ತಳೆ ದಾಳಿಂಬ ಹೆರಳೆ ವೀಳ್ಯದೆಲೆ ಬಾಳೆ ಸೌತೆ ಹೀರೆ ಪಡುವಲ ಕುಂಬಳ ಗೆಣಸು ಬದನೆ ಮುಂತಾದ ಹಸರವಾಣಿ ಜಿನಸುಗಳು ಚಿಕ್ಕ ಉಗ್ರಾಣಕ್ಕೆ ಬರುವಂತೆ ನಿಬಂಧನೆ ಮಾಡಿಸಿದರು. ಚಿಕ್ಕ ಉಗ್ರಾಣಕ್ಕೆ ದೊಡ್ಡ ಉಗ್ರಾಣದಿಂದ ಬಂದ ಪದಾರ್ಥಗಳಲ್ಲಿಯೂ ಪಣ್ಯದ ತೋಟಗಳಿಂದ ಬಂದ ಹಸರವಾಣಿ ಜಿನಸುಗಳಲ್ಲಿಯೂ ವೆಚ್ಚವಾದ ಜಿನಸುಗಳು ಹೊರತು ಬಾಕಿ ನಿಂತ ಜಿನಸುಗಳನ್ನು ಕಡ್ಡಾಯ ಹಾಕುವಂತೆ ಮಾಡಿದ್ದಲ್ಲದೆ, ಹಸರವಾಣಿ ಜಿನಸುಗಳು ಕರಗಪಡಿ ಆಗತಕ್ಕ ಬಗ್ಗೆ ಪಣ್ಯದ ಅಂಗಡಿ ಎಂಬದಾಗಿ ನಿಬಂಧನೆ ಮಾಡಿಸಿದರು.

ದೊಡ್ಡ ಉಗ್ರಾಣಕ್ಕೆ ಗುರಿಕಾರ ೧—೨, ಕರಣೀಕರು ೩, ಗುಮಾಸ್ತರು, ಊಳಿಗದವರು, ಅಳತೆಯವರು, ತೂಕದವರು, ಕಾಮಾಟಿ, ಚಂಗ್ಹಾಲಿ, ಪಹರೆಯವರು ಮುಂತಾದ ಜನಗಳನ್ನು ನೇಮಕ ಮಾಡಿಸಿದ್ದಲ್ಲದೆ, ಇದೇ ರೀತಿಯಾಗಿ ಚಿಕ್ಕ ಉಗ್ರಾಣಕ್ಕೂ ಜನಗಳನ್ನು ನೇಮಕಮಾಡಿಸಿದರು. ಪಣ್ಯದ ಅಂಗಡಿಗೆ ಶಾನುಭೋಗನನ್ನೂ ವ್ಯಾಪಾರ ಮಾಡುವದಕ್ಕೆ ಒಬ್ಬ ಗೊಲ್ಲನನ್ನೂ ನೇಮಕ ಮಾಡಿಸಿ, ಹುಲ್ಲು ಮೆದೆಗೆ ಗುರಿಕಾರ ೧, ಶಾನುಭೋಗರು

೨-೩-೪, ಊಳಿಗದವರು, ಕಾಮಾಟಿ ಮುಂತಾದ ಜನಗಳನ್ನು ನೇಮಕ ಮಾಡಿಸಿ, ಈ ಜನಗಳಿಗೆಲ್ಲಾ ಅವರವರ ವಿಧವರಿತು ಸಂಬಳಗಳನ್ನು ನಿಬಂಧನೆಮಾಡಿ, ಈ ಸಂಬಳಕ್ಕೆ ಅರ್ಧ ಬತ್ತವನ್ನೂ ಅರ್ಧ ನಗದು ಹಣವನ್ನೂ ಕೊಡುವಂತೆ ನಿಬಂಧನೆ ಮಾಡಿಸಿದರು.

ಆಯುಧಶಾಲೆ.—ಪೂರ್ವದಲ್ಲಿ ರಣಧೀರಕಂಠೀರವ ನರಸರಾಜ ಒಡೆಯರವರು ಶ್ರೀರಂಗಪಟ್ಟಣದ ಕೋಟೆಯೊಳಗೆ ಕಟ್ಟಿಸಿದ್ದ ಜಾನಸಾಲೆ ಮದ್ದಿನ ಮನೆ ಅಲಗಿನ ಚಾವಡಿ ಮುಂತಾದವುಗಳನ್ನು ಮೊದಲಿಗಿಂತ ವಿಸ್ತಾರವಾಗಿ ಮಾಡಿಸಿ, ಈ ಜಾನಸಾಲೆಯಲ್ಲಿ ಹಗಲುಬತ್ತಿ, ಹೂಬಾಣ, ಆಕಾಶಕೋಳವಿ, ಚಕ್ರಬಾಣ, ನಕ್ಷತ್ರಬಾಣ ಮೊದಲಾದ ನಾನಾವಿಧವೃಕ್ಷ ಪಕ್ಷಿಬಾಣಗಳನ್ನು ಮಾಡಿಸಿ, ಈ ಬಾಣಗಳನ್ನು ನವರಾತ್ರ್ಯುತ್ಸವ ದೇವತಾಉತ್ಸವ ಮುಂತಾದ ಉತ್ಸವಕಾಲಗಳಲ್ಲಿ ಹತ್ತಿಸುವಂತೆ ಕಟ್ಟಲೆ ಮಾಡಿಸಿದರು ; ಪೂರ್ವಕ್ಕಿಂತಲೂ ಅಧಿಕವಾಗಿ ಕತ್ತಿ, ಕಠಾರಿ, ತುಪಾಕಿ, ಮದ್ದು, ಗುಂಡು ಮೊದಲಾದ ಯುದ್ಧ ಸಾಮಗ್ರಿಗಳನ್ನು ಹೇರಳವಾಗಿ ಮಾಡುವಂತೆ ಕಟ್ಟಲೆ ಮಾಡಿಸಿ, ಇದರ ವಿಚಾರಣೆಗೂ ಲೆಕ್ಕ ಬರೆಯುವದಕ್ಕೂ ಗುರಿಕಾರ ಶಾನುಭೋಗ ಮುಂತಾದ ಆಯಾ ಪೋಕಟ್ಟಿನ ಜನಗಳನ್ನು ನೇಮಕ ಮಾಡಿಸಿದರು.

ಅರಮನೆಯಲ್ಲಿ ಬೊಕ್ಕಸ ಮುಂತಾದವುಗಳನ್ನು ಮಾಡಿಸಿದ ವಿಚಾರ.— (೧) ಹಣಕಾಸುಗಳನ್ನು ಇರಿಸುವ ಬೊಕ್ಕಸ, (೨) ಜವಳೀ ಬೊಕ್ಕಸ, (೩) ಕತ್ತೀಬೊಕ್ಕಸ, (೪) ಸಮುಖದಬಾಗಿಲು, (೫) ನಾಮತೀರ್ಥದತೊಟ್ಟಿ, (೬) ಮಹೀಶೂರ ಹೋಬಳೀ ಇಟ್ಟೀ ಊಳಿಗ, (೭) ಪಟ್ಟಣದ ಹೋಬಳಿ ಇಟ್ಟಿಯಊಳಿಗ, (೮) ಕುದುರೇಲಾಯ, (೯) ಆನೇಲಾಯ, (೧೦) ಒಂಟೇ ಲಾಯ, (೧೧) ಕಾಣಿಕೇ ಬೊಕ್ಕಸ, (೧೨) ಒಡವೇ ಇರಿಸುವ ಬೊಕ್ಕಸ (೧೩) ಹಾಸಿಗೇ ಬೊಕ್ಕಸ, (೧೪) ಒಳ ಬಾಗಿಲು, (೧೫) ಸಮುಖದ ಊಳಿಗ, (೧೬) ಗೊಲ್ಲರ ಹೋಬಳಿ, (೧೭) ಹಸುವಿನ ಕರೆಯುವಹಟ್ಟಿ, (೧೮) ಎಮ್ಮೆ ಕರೆಯುವಹಟ್ಟಿ, (೧೯) ಕೋಟೆ ಎತ್ತು, (೨೦) ಪರದೇಶದ ಹೋಬಳಿ, (೨೧) ಖಾಸಾ ಮೈಗಾವಲು, (೨೨) ಅವಸರದ ಹೋಬಳಿ.—ಅವಸರದ ಹೋಬಳಿಗೆ ಸೇರಿತವಾದವರಾದ ಚಿನ್ನ ಬೆಳ್ಳೀ ಸೋಟೆಯವರು, ಬಿಲಗದವರು, ಹೆಣ್ಣುಮೇಳದವರು, ಹೊಗಳುವ ಭಟರು, ನವಪತ್ತು ಖಾನೆಯವರು,

ಬೆಸ್ತರು, ದೀವಟಿಗೆಯವರು, ದೀಪದಕಂಭದವರು ಇವರಿಗೆಲ್ಲಾ ಗೊತ್ತುಗಾರರನ್ನೂ ಶಾನುಭೋಗರನ್ನೂ ನೇಮಿಸಿದರು.

ಅರಸುಗಳ ೧೩ ಮನೆತನ ಮತ್ತು ೧೮ ಮನೆತನಗಳನ್ನು ವ್ಯವಸ್ಥೆ ಮಾಡಿದ್ದು.—ಶಾ ಶಕ ೧೬೧೨ನೇ ಪ್ರಮೋದೂತ ಸಂವತ್ಸರದ ಆಶ್ವಯುಜ ಶುದ್ಧ ೧೦ಯಲ್ಲಿ, ಅರಸುಗಳ ಬಂಧುಗಳಲ್ಲಿ ಕೆಲವರು ಸಂಧ್ಯಾವಂದನೆಯನ್ನೂ ಮಾತಾ ಪಿತೃಗಳ ಶ್ರಾದ್ಧಗಳನ್ನೂ ಬಿಟ್ಟು ಗೌಡಪಟ್ಟು ಸಂಬಂಧ ಮಾಡಿದ್ದರಿಂದಲೂ, ಮತ್ತು ಕೆಲವರು ಇದೇ ರೀತಿಯಾಗಿ ಒಡಜಾತಿ ಸಂಬಂಧವನ್ನು ಮಾಡಿದ್ದರಿದಲೂ, ಹಾಗೆ ಬೆರೆದು ಇದ್ದ ಅರಸುಗಳನ್ನು ಚೆನ್ನಾಗಿ ಪರಾಂಬರಿಸಿ ವಿಚಾರಣೆಮಾಡಿ, ಇನ್ನು ಮೇಲೆ ಹೀಗೆ ಬಂಧುತ್ವ ಸಂಕಲಿತವಾಗಿ ಇರಬಾರದೆಂದು, ಗೌಡಪಟ್ಟು ಸಂಬಧವನ್ನು ಮಾಡಿದವರನ್ನೂ ಒಡಜಾತಿ ಸಂಬಧ ಮಾಡಿದವರನ್ನೂ ವಿಂಗಡಿಸಿ ಅಯಾಜಾತಿಗೆ ಸೇರಿಸಿಬಿಟ್ಟು, ಅನಾದಿಯಾಗಿ ಪರಿಶುದ್ಧವಾಗಿ ಹೊಂದಿ ಬಂದ ಸಂಬಂಧಗಳುಳ್ಳ ಅರಸುಗಳನ್ನು ವಿಂಗಡಿಸಿ ನೇಮಕ ಮಾಡಿಸಿ ೧೩ ಮನೆತನವೆಂತಲೂ, ಅರಸುಗಳ ಸಂಪ್ರದಾಯದಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾಗಿ ನಡೆದ ಅರಸುಗಳನ್ನು ೧೮ ಮನೆತನವೆಂತಲೂ ನಿಬಂಧನೆ ಮಾಡಿದರು.

ಹದಿಮೂರು ಮನೆತನಗಳು.—(೧) ಮಹಿಶೂರನಗರದ ಧೊರೆಗಳ ಮನೆತನ, (೨) ಮೂಗೂರವರ ಮನೆತನ, (೩) ಯಳಂದೂರವರ ಮನೆತನ, (೪) ಕೊತ್ತಾಗಾಲದವರ ಮನೆತನ, (೫) ಅರಿಕುಠಾರದವರ ಮನೆತನ, (೬) ನೀಲಸೋಗೆ ಮತ್ತು ಹ್ಯಾಕನೂರು ಮನೆತನ, (೭) ಬಿಳುಗುಲಿ ಮತ್ತು ನರನಲ್ಲೀ ಮನೆತನ, (೮) ಕಳಲೇ ಹುಣಸನಾಳು ಮನೆತನ, (೯) ಹಳೇಬೀಡು ಬಿಸಕೆರೇ ಮನೆತನ, (೧೦) ಹೆಡತಲೆ, ಹೆಮ್ಮರಗಾಲ ಮತ್ತು ತೊರವಳ್ಳೀ ಮನೆತನ, (೧೧) ಕೋಟೆ, ಮೂಡಣಕೋಟೆ, ಹುರ, ಮತ್ತು ಹುಲ್ಲಹಳ್ಳೀ ಮನೆತನ, (೧೨) ತಗಡೂರು ಮನೆತನ, (೧೩) ಕಾರಗಳ್ಳೀ ಮನೆತನ.

ಹದಿನೆಂಟು ಮನೆತನಗಳು.—(೧) ಕಿರುಗುಂದದ ಅರಸುಗಳ ಮನೆತನ, (೨) ಬಾಗಳಿಯವರ ಮನೆತನ, (೩) ಮುಳ್ಳೂರವರ ಮನೆತನ, (೪) ಕೋಟೇಸಿಂಗಪ್ಪ ಒಡೆಯರವರ ಮನೆತನ, (೫) ಮುಲುಗೋಡದವರ ಮನೆತನ, (೬) ಸಿಂಧುವಳ್ಳಿಯವರ ಮನೆತನ, (೭) ಮರಶಿಯವರ ಮನೆತನ, (೮) ಹೆಬ್ಬಾಳರವರ ಮನೆಂತನ, (೯) ಕಿ್ಕ್ಕೇರಿಯವರ ಮನೆತನ, (೧೦) ಹಾದನೂರು ಅರಸುಗಳ ಮನೆತನ, (೧೧) ಕುಲಗಾಣದ ಅರಸುಗಳ ಮನೆತನ, (೧೨) ತಲಕಾಡು ಅರಸುಗಳ ಮನೆತನ, (೧೩) ಬೆಳ್ಳೂರು ಅರಸುಗಳ

ಮನೆತನ, (೧೪) ಹೊಸಕೋಟೆಯವರ ಮನೆತನ, (೧೫) ಮಳಲವಾಡಿಯವರ ಮನೆತನ, (೧೬) ಮದ್ದೂರವರ ಮನೆತನ, (೧೭) ಹೆಬ್ಬಲಗುಪ್ಪೇ ಅರಸುಗಳ ಮನೆತನ, (೧೮) ತಿಪ್ಪೂರು ಅರಸುಗಳ ಮನೆತನ.

ಈ ಮೇಲೆ ಹೇಳಿದ ಮನೆತನಗಳಲ್ಲಿ* ೧೩ ಮನೆತನದವರು ೧೩ ಮನೆತನಗಳಲ್ಲಿಯೇ ಹೆಣ್ಣು ಕೊಟ್ಟು ತೆಗೆದುಕೊಳ್ಳುವದು ಎಂತಲೂ, ೧೮ ಮನೆತನದವರು ೧೮ ಮನೆತನಗಳಲ್ಲಿಯೇ ಹೆಣ್ಣು ಕೊಟ್ಟು ತೆಗೆದುಕೊಳ್ಳುವದೆಂತಲೂ ನಿಬಂಧನೆ ಮಾಡಿದ್ದಲ್ಲದೆ, ೧೩ ಮನೆತನದ ಅರಸುಗಳ ಹೆಣ್ಣುಗಳನ್ನು ೧೮ ಮನೆತನದವರಿಗೆ ಕೊಡಕೂಡದೆಂತಲೂ, ೧೮ ಮನೆತನದ ಹೆಣ್ಣು ಮಕ್ಕಳನ್ನು ೧೩ ಮನೆತನದ ಅರಸುಗಳಿಗೆ ೨ನೇ ಮದುವೆಗೆ ತರಬಹುದು ಎಂತಲೂ ನಿಬಂಧನೆ ಮಾಡಿದರು.

ಅನಂತರದಲ್ಲಿ ಚಿಕ್ಕದೇವರಾಜ ಒಡೆಯರವರು ಎಲ್ಲಾ ಮನೆತನಗಳ ಅರಸುಗಳನ್ನೂ ಕರೆಯಿಸಿ, ಅವರನ್ನು ಕುರಿತು "ನಾವು ನಿಬಂಧನೆ ಮಾಡಿಸಿ ಇರುವ ಅರಸುಗಳ ಸಂಪ್ರದಾಯದಲ್ಲಿ ಮುಂದಕ್ಕೆ ಹೆಚ್ಚು ಕಡಿಮೆ ನಡೆಯದಂತೆಯೂ, ವೈದಿಕಕರ್ಮಗಳನ್ನು ಬಿಡದಂತೆಯೂ ನಿಬಂಧನೆ ಮಾಡಿ ಇರುವದರಲ್ಲಿ, ಯಾರಾದರೂ ವರ್ಣಾಶ್ರಮ ಸಂಪ್ರದಾಯಕ್ಕೆ ವ್ಯತಿರಿಕ್ತವಾಗಿ ನಡೆದರೆ, ಅವರ ಆಚಾರವಿಚಾರ ವಿಚಾರಣೆಯನ್ನು ಮಾಡುವದಕ್ಕೆ ನಮಗೆ ಬಹಳ ರಾಜ್ಯಗಳ ವಿಚಾರಣೆ ಇರುವದರಿಂದಲೂ, ಇನ್ನೂ ಬಹಳ ರಾಜ್ಯಗಳನ್ನು ಸಂಪಾದಿಸುವದಕ್ಕೆ ರಾಜ್ಯದಮೇಲೆ ಸಂಚಾರಮಾಡುವ ಆವಶ್ಯಕವು ಬಹಳವಾಗಿರುವದರಿಂದಲೂ, ನಮ್ಮ ಮಾವಂದಿರಾದ ಮೂಗೂರು ಮನೆತನದ ಸೋಮರಾಜಯ್ಯನವರನ್ನು ಸಮುಚಿದ ಗುರಿಕಾರರನ್ನಾಗಿ ನೇಮಿಸಿರುತ್ತೇವೆ. ಯದುರಾಯರು ಆದಿಯಾಗಿ ನಮ್ಮ ಅರಮನೆಯ ಸಂಪ್ರದಾಯವನ್ನೂ ೧೩ ಮತ್ತು ೧೮ ಮನೆತನಗಳ ವಾವೆವರ್ತನೆ ಗೋತ್ರ ಸೂತ್ರಗಳನ್ನೂ ಸಹಾ ಚೆನ್ನಾಗಿ ತಿಳಿದಿರುವ ಸಮುಚಿದ ಅಪ್ಪಾಜಯ್ಯನೆಂಬವನಿಗೆ ಸಮುಚಿದ ಬಟ್ಟು ಕರಣೀಕತನವನ್ನು ನೇಮಕ ಮಾಡಿರುತ್ತೇವೆ. ನೀವುಗಳು ಇಲ್ಲಿಂದ ಮುಂದಕ್ಕೆ ಹೆಣ್ಣು ಕೊಡುವದು ತರುವದು, ದತ್ತು ಕೊಡು

* ಈಗ ಈ ಭೇದಗಳು ಯಾವವೂ ಇಲ್ಲದೆ, ೧೩ ಮತ್ತು ೧೮ ಮನೆತನದವರೆಲ್ಲರೂ ಪರಸ್ಪರವಾಗಿ ಹೆಣ್ಣು ಕೊಟ್ಟು ತೆಗೆದುಕೊಳ್ಳುತ್ತಾರೆ.

ವೆದು ತೆಗೆದುಕೊಳ್ಳುವದು ಸಹಾ ನಮ್ಮ ತಪ್ಪು ಅವರಿಗೆ ತಿಳಿಸಿದರೆ, ಇವರು ಬಂದು ನಮಗೆ ಶೃತಪಡಿಸಿ, ನಮ್ಮ ಅಪ್ಪಣೆಯಾದಂತೆ ನಿಮಗೆ ಉತ್ತರವನ್ನು ಬರೆದುಕೊಡುತ್ತಾರೆ. ನಿಮ್ಮ ನಿಮ್ಮ ಮನೆಯ ಶುಭಪ್ರಸ್ತಗಳಲ್ಲಿ ಹೆಣ್ಣಿನ ಮನೆಯವರೂ ಗಂಡಿನ ಮನೆಯವರೂ ನಮಗೆ ಒಪ್ಪಿಸತಕ್ಕ ಹೂವಿನಹಾರ, ನುತ್ತು ವೀಳ್ಯ ಮತ್ತು ಎರಡು ಹೊನ್ನುಗಳ ಮೇರೆಗೆ ಈ ಸೋಮರಾಜಯ್ಯನವರಿಗೆ ಕೊಡತಕ್ಕದ್ದು; ಹೂವಿನ ಹಾರ, ವೀಳ್ಯ, ಒಂದು ಹೊನ್ನಿನ ಮೇರೆಗೆ ಸಮಯಿತದ ಬಟ್ಟು ಕರಣೀಕ ಅಪ್ಪಾಜಯ್ಯನಿಗೆ ಕೊಡತಕ್ಕದ್ದು. ಇದಲ್ಲದೆ ಅನುಕೂಲ ಇದ್ದವರು ನಿಮ್ಮ ನಿಮ್ಮ ಮಾನಾನುಗುಣವಾಗಿ ವಸ್ತ್ರಗಳನ್ನು ಕೊಡತಕ್ಕದ್ದು" ಎಂಬದಾಗಿ ನಿಬಂಧನೆ ಮಾಡಿದರು. ಈ ವಿವರಗಳನ್ನೆಲ್ಲಾ ತಿಳಿದುಕೊಂಡ ಅರಸುಗಳು "ಸ್ವಾಮಿಯವರ ಪಾದದಿಂದ ಅಪ್ಪಣೆ ದಯಪಾಲಿಸಿದ ಮೇರೆಗೆ ನಡೆದುಕೊಳ್ಳುತ್ತಲಿದ್ದೇವೆ" ಎಂದು ಬಿನ್ನಹ ಮಾಡಿಕೊಂಡದ್ದಲ್ಲದೆ, "ನವರಾತ್ರಿಯ ಉತ್ಸವಕಾಲಗಳಲ್ಲಿಯೂ ನಮ್ಮ ನಮ್ಮ ಮನೆಗಳ ಶುಭಪ್ರಸ್ತಗಳಲ್ಲಿಯೂ ನಾವು ಬಂದು ಸ್ವಾಮಿಗಳ ಪಾದದರ್ಶನವನ್ನು ಮಾಡಿಕೊಂಡು ಅಡ್ಡಬಿದ್ದು ಅಪ್ಪಣೆ ತೆಗೆದುಕೊಂಡು ಹೋಗುವಂತೆ ನಮಗೆ ಅಪ್ಪಣೆ ಆಗಬೇಕು" ಎಂದು ಬಿನ್ನವಿಸಿಕೊಂಡರು. ಅದಕ್ಕೆ ಚಿಕ್ಕದೇವರಾಜ ಒಡೆಯರವರು ಸೋಮರಾಜಯ್ಯ ಅಪ್ಪಾಜಯ್ಯನವರನ್ನು ಕರೆದು, "ಈ ಅರಸುಗಳು ತಮ್ಮ ತಮ್ಮ ಮನೆಯ ಪ್ರಸ್ತವೆಂದು ನಿಮಗೆ ತಿಳಿಸಿದರೆ, ನೀವು ಇವರನ್ನು ಕರೆದುಕೊಂಡು ಬಂದು, ಭೇಟಿಮಾಡಿಸಿ, ಉತ್ತರವನ್ನು ಬರೆದುಕೊಡುವದಲ್ಲದೆ, ನೀವು ನಿಂತು ಪ್ರಸ್ತಗಳನ್ನು ಮಾಡಿಸಿ, ನಾವು ನಿಬಂಧನೆ ಮಾಡಿರುವ ಮರ್ಯಾದೆಯನ್ನು ತೆಗೆದುಕೊಂಡು ಬರುವದು" ಎಂದು ಕಟ್ಟುಮಾಡಿ ಅರಸುಗಳನ್ನೆಲ್ಲಾ ಕಳುಹಿಸಿಕೊಟ್ಟರು.

ತಿರುಮಲಯ್ಯಂಗಾರಿಯ ವಿಚಾರ.—ಮಂತ್ರಿತನದಲ್ಲಿದ್ದ ಪರಮ ಆಪ್ತನಾದ ತಿರುಮಲಯ್ಯಂಗಾರಿಯು ಚಿಕ್ಕದೇವರಾಜಒಡೆಯರವರನ್ನು ಕುರಿತು "ಅರಮನೆಗೆ ನಾಮತೀರ್ಥದ ವೇಳೆಯಲ್ಲಿ ಪುರೋಹಿತರು ಮುಂತಾದ ಸ್ಮಾರ್ತ ವಿದ್ವಾಂಸರು ನಾಮವನ್ನು ಇಟ್ಟುಕೊಂಡು ಬರಬೇಕೆಂದು ಅಪ್ಪಣೆಯಾಗಬೇಕು. ೧೭ ಮನೆತನದ ಅರಸುಗಳು ನಾಳೆ ಪ್ರಥಮ ಏಕಾದಶೀ ದಿವಸ ಸ್ವಾಮಿಯವರ ಆಚಾರ್ಯರವರ ಕಡೆಯಿಂದಲೇ ಚಕ್ರಾಂಕನವನ್ನು ಮಾಡಿಕೊಂಡು, ಊರ್ಧ್ವಪುಂಡ್ರಧಾರಣ ದಾಸ್ಯನಾಮ ಮೂಲಮಂತ್ರೋ

ಪಾಸನ ನಾರಾಯಣ ಪೂಜೆ ಮುಂತಾದ ಪಂಚಸಂಸ್ಕಾರಗಳನ್ನು ಮಾಡಿಕೊಂಡು, ಅನ್ಯದೇವತಾ ಪೂಜೆಯನ್ನು ಮಾಡದೆ, ವೈಷ್ಣವದೀಕ್ಷೆಯನ್ನು ಅಂಗೀಕರಿಸಿದವರೇ ಸ್ವಾಮಿಯವರ ಬಂಧುತ್ವಕ್ಕೆ ಯೋಗ್ಯರಾಗಬೇಕು ; ಹಾಗಿಲ್ಲದವರು ಬಂಧುತ್ವಕ್ಕೆ ಕಾರಣವಿಲ್ಲ. ಸ್ವಾಮಿಯವರ ಸೇವೆಯನ್ನು ಮಾಡುವ ಊಳಿಗದವರಲ್ಲಿ ಕೆಲವರು ಚಕ್ರಾಂಕನವನ್ನು ಮಾಡಿಸಿಕೊಳ್ಳುವಂತೆ ಅಪ್ಪಣೆಯಾಗಬೇಕು" ಎಂದು ಬಿನ್ನೈಸಿಕೊಂಡನು. ಧೊರೆಗಳ ತಿರುಮಲಯ್ಯಂಗಾರಿಯ ಹೇಳಿಕೇಪ್ರಕಾರ ಸಮುಖದ ಗುರಿಕಾರ ಸೋಮರಾಜಯ್ಯ ಅಪ್ಪಾಜಯ್ಯನವರನ್ನು ಕರೆಯಿಸಿ ಮೇಲೆ ಹೇಳಿದ ವಿವರಗಳನ್ನೆಲ್ಲಾ ಆ ಜನಗಳಿಗೆ ಹೇಳಿಬಿಡುವದು ಎಂದು ಅಪ್ಪಣೆಯನ್ನು ಕೊಟ್ಟರು.

ಅರಸುಗಳು ಅರ್ಜಿಗಳನ್ನು ಬರೆದುಕೊಂಡದ್ದು.—ಸೋಮರಾಜಯ್ಯನೂ ಅಪ್ಪಾಜಯ್ಯನೂ ಅರಸುಗಳು ಮುಂತಾದವರನ್ನು ಕರೆಯಿಸಿ, ಧೊರೆಗಳು ಕಟ್ಟುಮಾಡಿಸಿ ಇರುವ ವಿವರಗಳನ್ನು ಹೇಳಿ, ಚಕ್ರಾಂಕನವನ್ನು ಮಾಡಿಕೊಂಡು ವೈಷ್ಣವ ದೀಕ್ಷೆಯನ್ನು ಅಂಗೀಕರಿಸಿದ ಅರಸುಗಳು ಧೊರೆಗಳ ಪಾದಕ್ಕೆ ಬಿನ್ನವತ್ತಳೆಯನ್ನು ಬರೆದುಕೊಳ್ಳುವದು ಎಂದು ಹೇಳಲು, ಅವರು ಅದೇಪ್ರಕಾರ ಬರೆದುಕೊಂಡದ್ದೇನಂದರೆ:—

ಸ್ವಾಮಿಯವರ ದಿವ್ಯಶ್ರೀ ಪಾದಪದ್ಮಂಗಳಿಗೆ.—ಭಾವ ಸಂವತ್ಸರದ ಚೈತ್ರಶುದ್ಧ ೧೧ಯಲ್ಲಿ, ಸ್ವಾಮಿಯವರ ಪಾದಬಂಧುಗಳಾದ ವಾಸಿಷ್ಠ ಗೋತ್ರದ ಮೂಗೂರು ಮನೆತನದ ದೊಡ್ಡಯ್ಯ, ಬಸವರಾಜಯ್ಯ, ವೀರರಾಜಯ್ಯ, ಚನ್ನರಾಜಯ್ಯ, ನಂಜರಾಜಯ್ಯ, ಬಾಳಯ್ಯ, ಬಾಳಯ್ಯ, ರಾಮರಾಜಯ್ಯ, ರಾಜಯ್ಯ, ಚಂದಯ್ಯ, ನಂಜರಾಜಯ್ಯ, ಲಿಂಗರಾಜಯ್ಯ, ಬಾಳಯ್ಯ, ಲಿಂಗರಾಜಯ್ಯ ಸಹ ಸದ್ವಿನಯ ಭಯಭಕ್ತಿಯಿಂದ ಸಾಷ್ಟಾಂಗ ವೆರಗಿ ಪೊಡಮಟ್ಟು ಮಾಡುವ ಬಿನ್ನಹ— ಸ್ವಾಮಿ, ನಾವೆಲ್ಲರೂ ಉತ್ತಮವಾದ ಕ್ಷತ್ರಿಯವಂಶದಲ್ಲಿ ಜನಿಸಿ, ಸ್ವಾಮಿಯವರ ಪಾದಪದ್ಮಂಗಳಿಗೆ ಬಂಧುಗಳಾಗಿ ಇದ್ದಲ್ಲಿ, ಈ ಮಹಿಮೆಯನ್ನು ಅರಿಯದೆ, ಅಜ್ಞಾನಿಗಳಾಗಿ, ನಮ್ಮ ಜಾತಿ ಧರ್ಮಗಳನ್ನು ಬಿಟ್ಟು, ಶೂದ್ರರಂತೆ ವೈದಿಕಮಂತ್ರ ಹೀನರಾಗಿ, ಶೈವಾಚಾರಪರರಾಗಿ, ವರ್ಣಾಶ್ರಮಾಚಾರಹೀನರಾಗಿ, ಜಾತಿವಿಜಾತಿಗಳನ್ನು ಅರಿಯದೆ, ಹೆಣ್ಣುಗಳನ್ನು ಕೊಟ್ಟು ತೆಗೆದು ಕೊಳ್ಳುತ್ತಾ ಇಹಲೋಕಭ್ರಷ್ಟರಾಗಿ ಕೆಟ್ಟು ಹೋಗುವಂಥಾವರನ್ನು, ಪರಮ ದಯಾಳುಗಳೂ ಅನಾಥಬಂಧುಗಳೂ ಆದ ಸ್ವಾಮಿಯವರು ಪರಾಂಬರಿಸಿ, ಅವ್ಯಾಜವಾಗಿ ನಮ್ಮಲ್ಲಿ ಕೃಪೆಯಿಟ್ಟು, ನಮ್ಮೆಲ್ಲರ ಕುಲದಲ್ಲಿ ಹಿಂದಕ್ಕೆ ಹುಟ್ಟಿಇದ್ದಂಥಾವರು, ಈಗ ಇರುವಂಥಾವರು, ಮುಂದಕ್ಕೆ ಹುಟ್ಟುವಂಥಾವರು ಸಹ ಸಕಲರೂ ಪರಿಶುದ್ಧರಾಗುವಂತೆ ನಮಗೆ ಹಿತೋಪದೇಶವನ್ನು ಮಾಡಿ, ವರ್ಣಾಶ್ರಮೋಚಿತವಾದ ಸಂಧ್ಯಾವಂದನ ಚಕ್ರಾಂಕನಾದಿ ವೈದಿಕಕರ್ಮಗಳನ್ನು ಆಚರಿಸಹೇಳಿ, ಕಟ್ಟುಮಾಡಿ ಜೀರ್ಣೋದ್ಧಾರವನ್ನು ಮಾಡಿದ್ದನ್ನು ಕುರಿತು ನಾವು ಧನ್ಯರಾದೆವು ; ನಮ್ಮೆಲ್ಲರ ಕುಲವೂ ಪಾವನವಾಯಿತು. ಇಂದುಮೊದಲಾಗಿ ನಾವೆಲ್ಲರೂಕೂಡಿ ಐಕಮತ್ಯರಾಗಿ ಹಿಂದಣ ಅಜ್ಞಾನ ಕೃತ್ಯಗಳನ್ನೆಲ್ಲಾ

ಬಿಟ್ಟು, ನಮ್ಮೆಲ್ಲರ ವಂಶದಲ್ಲಿಯೂ ಹುಟ್ಟಿದ ಹೆಣ್ಣುಗಂಡು ಮೊದಲು ಸಕಲರೂ ವಿಷ್ಣುಭಕ್ತರಾಗಿ, ನಾವೆಲ್ಲರೂ ಸ್ವಾಮಿಯವರ ಆಚಾರ್ಯಶಿಷ್ಯರಾಗಿ, ಶಂಖಚಕ್ರಾಂಕನ ಊರ್ಧ್ವಪುಂಡ್ರಧಾರಣ ದಾಸ್ಯನಾಮ ಮೂಲಮಂತ್ರೋಪಾಸನ ನಾರಾಯಣಪೂಜೆ ಮುಂತಾದ ಪಂಚಸಂಸ್ಕಾರಗಳನ್ನು ಪಡೆದು, ಸಂಧ್ಯಾವಂದನೆ ಮುಂತಾದ ನಿತ್ಯಕರ್ಮಗಳನ್ನು ತಪ್ಪದೆ ನಡೆಯಿಸಿಕೊಂಡು, ವೈಷ್ಣವ ಏಕಾದಶಿ ಅಮಾವಾಸ್ಯೆ ತಂದೆತಾಯಿಗಳ ತಿಥಿ ಮುಂತಾದವುಗಳನ್ನು ಭಕ್ತಿಗೂಡಿ ಆಚರಿಸುತ್ತಾ, ಹೆಣ್ಣುಗಳನ್ನು ಕೊಡುವಲ್ಲಿ ಕೊಂಬಲ್ಲಿ ಮುನ್ನಿನಂತೆ ಕಂಡಕಂಡಬಳಿ ಕೊಡದೆ ತಾರದೆ, ಸ್ವಾಮಿಯವರು ಮಿತಿಮಾಡಿರುವಂಥಾ ಮಹೀಶೂರನಗರ ಮುಂತಾದ ಈ ಮನೆತನದಲ್ಲಿಯೇ ಹೆಣ್ಣುಗಳನ್ನು ಕೊಟ್ಟು ತೆಗದುಕೊಳ್ಳುತ್ತಾ, ನಮಗೆ ಸ್ವಾಮಿಯವರು ಮಿತಿಮಾಡಿರುವಂಥಾ ಸೇವೆಯನ್ನು ವಂಚನೆಯಿಲ್ಲದೆ ಭಯಭಕ್ತಿಯಿಂದ ಮಾಡುತ್ತಾ, ನಾವೆಲ್ಲರೂ ವೈಷ್ಣವರಾಗಿ ಇರುವೆವು. ನಮ್ಮ ೧೩ ಮನೆತನದ ಹೆಣ್ಣು ಗಂಡುಗಳಲ್ಲಿ, ಯಾರಾದರೂ ಈ ಸಂಕೇತಕ್ಕೆ ತಪ್ಪಿನಡೆದುಕೊಂಡರೂ, ಇಂಥಾಪಾಪಿಗಳನ್ನು ಬಳಹಾಕಿಕೊಂಡರೂ, ಅವರಿಬ್ಬರನ್ನೂ ಕುಲಕ್ಕೆ ಕೂಡಕಾರಣವಿಲ್ಲ. ಈ ಅರ್ಥಕ್ಕೆ ತಪ್ಪಿದವರು ಸ್ವಾಮಿಯವರ ಪಾದದೊಡನೆ ಬಂಧುತ್ವಕ್ಕೆ ಸಲ್ಲದಂಥಾ ಪತಿತರು ಎಂತಲೂ, ವಿಷ್ಣುಪಾದೋದ್ಭವೆಯಾದ ಗಂಗಾನದಿಯ ತೀರದಲ್ಲಿ ಮಾತಾ ಪಿತೃಗಳನ್ನೂ ಗೋ ಬ್ರಾಹ್ಮಣರನ್ನೂ ಕೊಂದ ಪಾತಕಿಗಳು ಎಂತಲೂ ಬರೆಯಿಸಿ ಒಪ್ಪಿಸಿದ ಬಿನ್ನವತ್ತಳೆ.

ಹದಿಮೂರು ಮನೆತನದ ಅರಸುಗಳು ಅಪ್ಪಣೇ ಮೇರೆಗೆ ಚಕ್ರಾಂಕನವನ್ನು ಮಾಡಿಕೊಂಡು, ನಾರಾಯಣಪೂಜೆಯೇ ಮುಖ್ಯವಾಗಿ ನಡೆದುಕೊಂಡವರಿಗೆ, ಕೂಡಿಬಾರದೆ ಇದ್ದದ್ದರಿಂದ, ಇವರು ಪುನಃ ಅರ್ಜಿಯನ್ನು ಬಿನ್ನಹ ಮಾಡಿಕೊಂಡ ವಿವರ ಏನೆಂದರೆ:—

ಸ್ವಾಮಿಯವರ ದಿವ್ಯಶ್ರೀಪಾದಪದ್ಮಂಗಳಿಗೆ.—ಧಾತು ಸಂವತ್ಸರದ ಜ್ಯೇಷ್ಠ ಬಹುಳ ೧ಲ್ಲಿ ಸ್ವಾಮಿಯವರಪಾದ ಬಂಧುಗಳಾದ ವಾಸಿಷ್ಠಗೋತ್ರದ ಮೂಗೂರು ಮನೆತನದ ಬಾಳಯ್ಯ, ಬಸವರಾಜಯ್ಯ, ಚನ್ನರಾಜಯ್ಯ, ನಂಜರಾಜಯ್ಯ, ಲಿಂಗರಾಜಯ್ಯ, ಚಂದಯ್ಯ, ನಂಜರಾಜಯ್ಯ, ರಾಮರಾಜಯ್ಯ, ವೀರರಾಜಯ್ಯ, ಬಾಳಯ್ಯ, ಮುಂತಾದ ೧೩ ಮನೆತನದವರು ಸದ್ವಿನಯ ಭಯಭಕ್ತಿಯಿಂದ ಸಾಷ್ಟಾಂಗವೆರಗಿ ಪೊಡಮಟ್ಟು ಮಾಡುವ ಬಿನ್ನಹ—ಸ್ವಾಮಿ, ನಾವೆಲ್ಲರೂ ಉತ್ತಮವಾದ ಕ್ಷತ್ರಿಯವಂಶದಲ್ಲಿ ಜನಿಸಿ ಸ್ವಾಮಿಯವರ ಪಾದಪದ್ಮಂಗಳಿಗೆ ಬಂಧುಗಳಾಗಿ ಇದ್ದಲ್ಲಿ, ಈ ಮಹಿಮೆಯನ್ನು ಅರಿಯದೆ, ಅಜ್ಞಾನಿಗಳಾಗಿ, ಕ್ಷತ್ರಿಯಕರ್ಮಹೀನರಾಗಿ, ಹೆಣ್ಣು ಕೊಡುವಲ್ಲಿ ಕೊಂಬಲ್ಲಿ, ಪೂರ್ವದಂತೆ ಸ್ವಾಮಿಯವರ ಪಾದಕೆ ಬಿನ್ನಹಮಾಡಿಕೊಳ್ಳದೆ, ಅಜ್ಞಾನದಿಂದ ಹೆಣ್ಣುಕೊಟ್ಟು ತೆಗದುಕೊಂಡ ಜನರನ್ನು ವಿಂಗಡಿಸಿ, ಪರಮದಯಾಳುಗಳೂ ಅನಾಥ ಬಂಧುಗಳೂ ಆದ ಸ್ವಾಮಿಯವರು ಪರಾಂಬರಿಸಿ, ಅವ್ಯಾಜವಾಗಿ ನಮ್ಮಲ್ಲಿ ಕೃಪೆಯಿಟ್ಟು, ನಮ್ಮ ಎಲ್ಲರ ಕುಲ

ದಲ್ಲಿಯೂ ಹಿಂದಕ್ಕೆ ಹುಟ್ಟಿಇದ್ದಂಥಾವರು, ಈಗ ಇರುವಂಥಾವರು, ಮುಂದೆ ಹುಟ್ಟುವಂಥಾವರು ಸಹ ಸಕಲರೂ ಶುದ್ಧರಾಗುವಂತೆ ನಮಗೆ ಹಿತೋಪದೇಶವನ್ನು ಮಾಡಿ, ವರ್ಣಾಶ್ರಮೋಚಿತವಾದ ಸಂಧ್ಯಾವಂದನ ಮುಂತಾದ ವೈದಿಕಕರ್ಮಗಳನ್ನು ಪೂರ್ವದಂತೆ ಆಚರಿಸ ಹೇಳಿ ಕಟ್ಟುಮಾಡಿಸಿ, ಜೀರ್ಣೋದ್ಧಾರ ಮಾಡಿದ್ದನ್ನು ಕುರಿತು ನಾವೆಲ್ಲರೂ ಧನ್ಯರಾದೆವು; ನಮ್ಮೆಲ್ಲರ ಕುಲವೂ ಪಾವನವಾಯಿತು. ಅದು ಮೊದಲು ನಮ್ಮ ಕುಲದೇವತೆಗಳನ್ನು ಬಿಟ್ಟು, ನಾರಾಯಣ ಪೂಜೆಯೇ ಮುಖ್ಯವಾಗಿ ನಡೆದದ್ದರಿಂದ ನಮಗೆ ಮನೆಗಳಲ್ಲಿ ಕೆಲವು ಕಷ್ಟಗಳು ಜಾಸ್ತಿಯಾದ್ದರಿಂದ, ಈಗ ಪುನಃ ಸ್ವಾಮಿಯವರಿಗೆ ಬಿನ್ನಹಮಾಡಿಕೊಳ್ಳುವದೇನೆಂದರೆ :—ನಮ್ಮನಮ್ಮ ಕುಲದೇವತಾಪೂಜೆ, ಸ್ವಾಮಿಯವರು ಕಟ್ಟುಮಾಡಿಸಿದ ಕ್ಷತ್ರಿಯ ಕರ್ಮಕ್ಕೆ ಉಚಿತವಾದ ಅಮಾವಾಸ್ಯೆ ಮುಂತಾದ ವೈದಿಕಕರ್ಮಗಳನ್ನು ಮಾಡಿಕೊಂಡು, ನಾವೆಲ್ಲರೂ ಕೂಡಿ ಏಕಮತ್ಯರಾಗಿ ಇಂದು ಮೊದಲಾಗಿ ಸ್ವಾಮಿಯವರು ಕಟ್ಟುಮಾಡಿಸಿದಮೇರೆಗೆ ನಮ್ಮ ನಮ್ಮ ವಂಶಗಳಲ್ಲಿ ಹುಟ್ಟಿದ ಹೆಣ್ಣು ಗಂಡು ಮೊದಲು ಸಕಲರೂ ನಮ್ಮನಮ್ಮ ಕುಲದೇವತಾ ಭಕ್ತರಾಗಿ ಸ್ವಾಮಿಯವರು ಏರ್ಪಾಟುಮಾಡಿಸಿದಂಥಾ ಸೇವೆಯನ್ನು ವಂಚನೆಯಿಲ್ಲದೆ ಭಯ ಭಕ್ತಿಯಿಂದ ಮಾಡುತ್ತಾ, ನಮ್ಮ ೧೩ ಮನೆತನದ ಹೆಣ್ಣುಗಳನ್ನು ತರುವಲ್ಲಿ ಕೊಂಬಲ್ಲಿ ಸ್ವಾಮಿಯವರ ಅಪ್ಪಣೆಮೇರೆಗೆ ನಡೆದುಕೊಳ್ಳಲುಳ್ಳವರು. ಈ ಸಂಕೇತಕ್ಕೆ ತಪ್ಪಿ ನಡೆದುಕೊಂಡರೂ ಅಂಥಾವಾಹಿಗಳನ್ನು ಒಳಹಾಕಿಕೊಂಡರೂ, ಅವರಿಬ್ಬರನ್ನೂ ಕುಲಕ್ಕೆ ಕೂಡಕೂಡದಿಲ್ಲ. ಈ ಅರ್ಥಕ್ಕೆ ತಪ್ಪಿದವರು ಸ್ವಾಮಿಯವರ ಪಾದದೊಡನೆ ಬಂಧುತ್ವಕ್ಕೆ ಸಲ್ಲದಂಥಾ ಪತಿತರು ಎಂತಲೂ, ವಿಷ್ಣು ಪಾದೋದ್ಭವೆಯಾದ ಗಂಗಾನದಿಯ ತೀರದಲ್ಲಿ ಮಾತಾ ಪಿತೃಗಳನ್ನೂ ಗೋಬ್ರಾಹ್ಮಣರನ್ನೂ ಕೊಂದಪಾತಕಿಗಳು ಎಂತಲೂ ಬರೆಯಿಸಿ ಒಪ್ಪಿಸಿದ ಬಿನ್ನವತ್ತಳೆ.

ಧೊರೆಗಳು ಇವರ ಅರ್ಜಿಯನ್ನು ಪರಾಂಬರಿಸಿ ಸೋಮರಾಜಯ್ಯ ಅಪ್ಪಾಜಯ್ಯನವರನ್ನು ಕರೆದು ೧೩ ಮನೆತನದ ಅರಸುಗಳಿಗೂ ೧೮ ಮನೆತನದಅರಸುಗಳಿಗೂ ಅವರವರ ಮನೆಗಳಲ್ಲಿ ಪೂರ್ವಸಂಪ್ರದಾಯದಮೇರೆಗೆ ದೇವತಾಪೂಜೆ ಮುಂತಾದದ್ದು ನಡೆದುಕೊಂಡು ಬರುವಂತೆ ಹೇಳಬೇಕು ವೆಂದು ಕಟ್ಟು ಮಾಡಿದರು. ಅವರಿಬ್ಬರೂ ಅದೇಮೇರೆಗೆ ಅರಸುಗಳನ್ನು ಕರೆಯಿಸಿ ನಿಮ್ಮನಿಮ್ಮ ಮನೆಗಳ ಪೂರ್ವಸಂಪ್ರದಾಯದ ಮೇರೆಗೆ ನಡೆದುಕೊಳ್ಳುವಂತೆ ಅಪ್ಪಣೆಯಾಗಿದೆ ಎಂಬದಾಗಿ ಹೇಳಿಬಿಟ್ಟರು.

ಧೊರೆಗಳು, ಅರಮನೆಯಲ್ಲಿ ಚಾಕರಿಯಿಲ್ಲದೆ ಸಂಬಳವನ್ನು ತೆಗೆದುಕೊಳ್ಳುವ ಅರಸುಮಕ್ಕಳು, ಪಾಳ್ಯಗಾರರು, ಬ್ರಾಹ್ಮಣರು, ವಿದ್ವಾಂಸರು, ವೀಣಾಸಂಗೀತಗಾರರು, ವೈದ್ಯರು, ಮಂತ್ರವಾದಿಗಳು ಮೊದಲಾದ ಜನಗಳ

ಲೆಕ್ಕಗಳನ್ನು ಬರೆದುಕೊಳ್ಳುವದಕ್ಕೆ ಇಬ್ಬರು ಕರಣೀಕರನ್ನು ನೇಮಕ ಮಾಡಿಸಿ, ಈ ವಿದ್ವಾಂಸರುಮಾತ್ರ ಧೊರೆಗಳ ಸ್ನಾನ ಸಂಧ್ಯಾವಂದನೆ ರಾಮಾಯಣ ಪಾರಾಯಣ ನಿತ್ಯದಾನ ದಂಪತಿಪೂಜೆ ಗೋಪೂಜೆಗಳಕಾಲದಲ್ಲಿ ಬಂದು ತಮಗೆ ಆಶೀರ್ವಾದ ಮಂತ್ರಾಕ್ಷತೆಗಳನ್ನು ಒಪ್ಪಿಸುವಂತೆಯೂ, ಮಿಗಿಲಾದ ಜನಗಳು ಬಂದು ಕಾದುಕೊಂಡಿದ್ದು ದರ್ಶನವನ್ನು ಮಾಡಿಕೊಂಡು ಹೋಗುವಂತೆಯೂ ನಿಬಂಧನೆಮಾಡಿ, ಈ ಜನಗಳಲ್ಲಿ ಯಾರಾದರೂ ಗ್ರಾಮಾಂತರಕ್ಕೆ ಹೋಗಿ ಬರಬೇಕಾದರೂ, ಅವರ ಮನೆಗಳಲ್ಲಿ ಪ್ರಸ್ತಗಳಾಗಬೇಕಾದರೂ, ಅವರು ಬಂದು ಸೋಮರಾಜಯ್ಯನವರಿಗೂ ಅಪ್ಪಾಜಯ್ಯನಿಗೂ ತಿಳಿಸಿದರೆ ಅವರು ಬಂದು ತಮಗೆ ಶೃತಪಡಿಸುವಂತೆ ಕಟ್ಟುಮಾಡಿದರು.

ಸಂಬಳವನ್ನು ಕೊಡುತ್ತಿದ್ದ ಪದ್ಧತಿ:—ಚಿಕ್ಕದೇವರಾಜ ಒಡೆಯರವರು ಶ್ರೀರಂಗಪಟ್ಟಣದಲ್ಲಿ ಸರ್ವಾಧಿಕಾರ ಮಾಡುವವರಿಗೂ; ಕರಣೀಕತನ ಮಾಡುವವರಲ್ಲದೆ ತಮ್ಮ ಸಮೀಪದಲ್ಲಿ ಆಪ್ತರಾಗಿ ಇರುವ ಜನಗಳಿಗೂ; ೧೮ ಚಾವಡಿ, ದೊಡ್ಡ ಉಗ್ರಾಣ, ಚಿಕ್ಕ ಉಗ್ರಾಣ, ಹುಲ್ಲುಮೆದೆ, ಜಾನಸಾಲೆ, ಅರಮನೇದಂಡಿನಲ್ಲಿರುವ ಸವಾರು, ಬಾರು, ಓಲೇಕಾರು ಕಾಮಾಟ, ಕಲಾಸಿ, ಬೊಕ್ಕಸ ಮುಂತಾದ ಸ್ಥಳಗಳಲ್ಲಿ ಗೊತ್ತುಗಾರರು, ಕರಣೀಕರು, ಗುಮಾಸ್ತರು, ಊಳಿಗದವರು ಮುಂತಾದ ಎಲ್ಲಾ ಚಾಕರಿ ಜನಗಳಲ್ಲದೆ, ೮೪ ಗಡಿಗಳಲ್ಲಿರುವ ಸುಬೇದಾರ, ಕಿಲ್ಲೇದಾರ, ಕರಣೀಕ, ಗುಮಾಸ್ತರು, ಶೇಕದಾರ, ಮಣೇಗಾರ, ಗೌಡ, ಹಸಿಗೇಶಾನುಭೋಗ ಮುಂತಾದ ಎಲ್ಲಾ ಚಾಕರಿಜನಗಳಿಗೂ, ತಾವು ನಿಬಂಧನೆಯನ್ನು ಮಾಡಿ ಇರುವ ಸಂಬಳಕ್ಕೆ ಅರ್ಧ ನಗದು ಕೊಡುವಂತೆಯೂ, ಅರ್ಧಸಂಬಳಕ್ಕೆ ಅವರವರ ಮಾನಾನುಗುಣವಾಗಿ ಬತ್ತ ರಾಗಿ ಮುಂತಾದ ಧಾನ್ಯಗಳನ್ನು ಕೊಡುವಂತೆಯೂ ಕಟ್ಟಳೆ ಮಾಡಿಸಿದರು. ಈ ಜನರಲ್ಲಿ ತಮ್ಮ ತಮ್ಮ ಆದಾಯಕ್ಕೆ ತಕ್ಕ ಮನೆಯ ನಿತ್ಯಗಟ್ಟಲೇಖರ್ಚು ಅವರವರ ಮಾನಾನುಗುಣವಾಗಿ ಮದುವೆ ಮುಂಜಿ ಮುಂತಾದ ಪ್ರಸ್ತಗಳನ್ನು ಮಾಡಿಕೊಳ್ಳುವದೆಂದು ನಿಬಂಧನೆ ಮಾಡಿಸಿ, ಯಾರಾದರೂ ಸಂಬಳ ಇದ್ದವರು ಆದಾಯಕ್ಕಿಂತ ಹೆಚ್ಚು ವೆಚ್ಚ ಮಾಡಿದರೆ "ನಿನಗೆ ಹೆಚ್ಚುವೆಚ್ಚ ಮಾಡುವದಕ್ಕೆ

ಹಣವು ಎಲ್ಲಿಂದ ಬಂತು ? " ಎಂದು ಮುಖತಃ ಚೆನ್ನಾಗಿ ವಿಚಾರಣೆ ಮಾಡಿ, ಸಾಲ ಕೊಟ್ಟವರಿಗೂ ತೆಗೆದುಕೊಂಡವರಿಗೂ ಶಿಕ್ಷೆಮಾಡಿಸಿ, ಜನರಿಗೆ ಲಂಚ ಲಾವಣೆಗಳಿಗೆ ಆಸ್ಪದವಿಲ್ಲದಂತೆಯೂ, ಅರಮನೆಯ ಹಣಕಾಸು ದವಸ ಮುಂತಾದವುಗಳಲ್ಲಿ ವಂಚನೆಯಿಲ್ಲದೆ ನಡೆದುಕೊಳ್ಳುವಂತೆಯೂ ನಿಬಂಧನೆ ಮಾಡಿ ಬುದ್ಧಿ ಕಲಿಸಿದರು.

ರಾಜ್ಯದಲ್ಲಿ ವ್ಯಾಪಾರಸ್ಥರು ತಂದು ಮಾರುವ ದವಸ ಮುಂತಾದ ಜಿನಸುಗಳಿಗೆ ಆಯಾ ಗಡಿಗಳ ಸುಂಕದ ಚಾವಡಿಗಳಲ್ಲಿ ಕಟ್ಟಳೆ ಮೇರೆಗೆ ಸುಂಕ ತೀರಿದ ಹಣಕಾಸುಗಳು ಗೋಲಕಕ್ಕೆ ದಾಖಲು ಮಾಡುವಂತೆಯೂ, ಈ ವ್ಯಾಪಾರಸ್ಥರು ತಂದ ಜಿನಸುಗಳಲ್ಲಿ ಮುನಾಸಬು ಇದ್ದಮೇರೆಗೆ ಹೇರು ೧ಕ್ಕೆ ಪಾವುಸೇರುಮೇರೆಗೆ ನಿಷ್ಕರ್ಷೆಮಾಡಿ, ಆಯಾಗಡಿಗಳಲ್ಲಿರುವ ದೇವರಿಗೂ ಕೆಲವು ಬ್ರಾಹ್ಮಣರುಮುಂತಾದ ಜನಗಳಿಗೂ ಅವರವರ ತಾರತಮ್ಯವಿದ್ದಂತೆ ಕೊಡುವಮೇರೆಗೆ ರುಸುಂ ಎಂಬದಾಗಿ ನೇಮಕಮಾಡಿಸಿಕೊಟ್ಟರು.

ಶ್ರೀರಂಗಪಟ್ಟಣದಲ್ಲಿ ಚಿಕ್ಕ ಅರಮನೆಯನ್ನು ಕಟ್ಟಿಸಿದ್ದು.—ಚಿಕ್ಕದೇವರಾಜ ಒಡೆಯರವರು ಶ್ರೀರಂಗಪಟ್ಟಣದಲ್ಲಿ ತಮ್ಮ ತಮ್ಮಂದಿರಾದ ಕಂಠೀರವ ಅರಸಿನವರು ತಮ್ಮ ಪತ್ನಿಯರ ಸಹಿತವಾಗಿ ಸುಖವಾಗಿ ವಾಸ ಮಾಡಿ ಕೊಂಡಿರುವದಕ್ಕೆ, ಚಿಕ್ಕ ಅರಮನೆ ಎಂಬದಾಗಿ ಕಟ್ಟಿಸಿ, ಗುರಿಕಾರ ಕೆಲವು ಊಳಿಗದವರು ಅಪ್ಪೇರುಗಳು ಶಾನುಭೋಗ ಗೊಲ್ಲರು ಮುಂತಾದ ಜನರನ್ನು ನೇಮಕಮಾಡಿಸಿದರು.

ಡಿಲ್ಲೀ ಪಾದಷಹಾರಿಂದ ಅನೇಕ ಸನ್ಮಾನಗಳನ್ನು ಪಡೆದವೃತ್ತಾಂತ.—ಚಿಕ್ಕದೇವರಾಜ ಒಡೆಯರವರು ತಮ್ಮ ಭುಜಬಲದಿಂದ ಅನೇಕ ಪಾಳ್ಯಗಾರರನ್ನು ಜಯಿಸಿ, ದೇಶಗಳನ್ನು ಸ್ವಾಧೀನ ಮಾಡಿಕೊಂಡು, ತಮ್ಮ ಬುದ್ಧಿ ಕೌಶಲ್ಯದಿಂದ ಅನೇಕ ಏರ್ಪಾಡುಗಳನ್ನು ಮಾಡಿ, ಎಂದಿಗೂ ತುಂಟ ಪಾಳ್ಯಗಾರರಿಗೆ ಅವಕಾಶವಾಗದಂತೆ ದುಷ್ಟನಿಗ್ರಹ ಶಿಷ್ಟಪರಿಪಾಲನೆಯನ್ನು ಚೆನ್ನಾಗಿ ಮಾಡುತ್ತಾ, ಪ್ರಭು ಸಂರಕ್ಷಣೆಯನ್ನು ಮಾಡುವದರಲ್ಲಿ ಇವರಿಗೆ ಸಾಟಿ ಯಿಲ್ಲವೆಂದು ಹೊಗಳಿಸಿಕೊಳ್ಳುತ್ತಾ ಇರುವ ಸಮಯದಲ್ಲಿ, ಕೆಲವು ಜನ ತುಂಟ ಪಾಳ್ಯಗಾರರು ಅಸೂಯೆಯಿಂದ ಇವರ ಮೇಲೆ ದುರಾಲೋಚನೆ

ಯನ್ನು ಮಾಡುತ್ತಲಿದ್ದರು. ಈ ವರ್ತಮಾನವನ್ನು ಕೇಳಿ ಧೊರೆಗಳು ಇನ್ನುಮೇಲೆ ತಮಗೆ ಸಮಾನರಾದ ಸಂಸ್ಥಾನಾಧಿಪತಿಗಳೊಡನೆ ಸ್ನೇಹ ಮಾಡಬೇಕೆಂದು ತಮ್ಮ ಆಪ್ತ ಜನರೊಡನೆ ಆಲೋಚನೆ ಮಾಡಿ, ಬುದ್ಧಿವಂತನಾಗಿದ್ದ ಕರಣೀಕ ಲಿಂಗಣ್ಣಯ್ಯನೆಂಬವನಿಗೆ ಸಂಸ್ಥಾನದ ವಕೀಲತನವನ್ನು ನೇಮಕಮಾಡಿ, ದಿಳ್ಳೀಪಾದಷಹಾರ ಮಾನಾನುಗುಣವಾಗಿ ವಸ್ತ್ರಾಭರಣಗಳನ್ನು ಕೊಟ್ಟು, ತಮ್ಮ ಕುಶಲ ಪತ್ರಿಕೆಯೊಡನೆ ದಿಳ್ಳಿಗೆ ಕಳುಹಿಸಿ ಕೊಟ್ಟರು.

ಅನಂತರದಲ್ಲಿ ಲಿಂಗಣ್ಣಯ್ಯನು ದಿಳ್ಳಿಯ ಸಮೀಪಕ್ಕೆ ಹೋಗಿ, ಒಂದು ಗಾವುದದ ದೂರದಲ್ಲಿ ಇಳಿದುಕೊಂಡು, ಅಲ್ಲಿನ ವಜೀರ ಮುಂತಾದ ಜನರಿಗೆ ಧೊರೆಗಳ ಅಪ್ಪಣೆ ಮೇರೆಗೆ ವಸ್ತ್ರಗಳನ್ನು ಕೊಟ್ಟು ಕಳುಹಿಸಿ, ತಾನು ಬಂದಿರುವ ವರ್ತಮಾನವನ್ನು ಪಾದಷಹಾರಿಗೆ ತಿಳಿಸಬೇಕೆಂದು ಹೇಳಿ ಕಳುಹಿಸಿದನು. ಆಗ ಆ ಸಾಮಾಜಿಕರು ಈ ವೃತ್ತಾಂತವನ್ನು ಪಾದಷಹಾರಿಗೆ ತಿಳಿಸಲು, ಪಾದಷಹಾರು "ನಮ್ಮ ಸಂಸ್ಥಾನಕ್ಕೆ ಹಿತಚಿಂತನೆಯನ್ನು ಮಾಡುತ್ತಲಿರುವ ಮಹೀಶೂರ ಸಂಸ್ಥಾನದ ಧೊರೆಗಳಕಡೆ ವಕೀಲ ಲಿಂಗಣ್ಣಯ್ಯನನ್ನು ಕರೆದುಕೊಂಡು ಬನ್ನಿ" ಎಂದು ಅಪ್ಪಣೆ ಕೊಟ್ಟು, ತಮ್ಮ ದರಬಾರಕಾಲದಲ್ಲಿ ಭೇಟಿಯನ್ನು ಕೊಟ್ಟರು. ಈ ಕರಣೀಕ ಲಿಂಗಣ್ಣಯ್ಯನು ಪಾದಷಹಾರಿಗೆ ಅಲ್ಲಿನ ಮರ್ಯಾದೆಮೇರೆಗೆ ನಜರು ಮುಜರೆಗಳನ್ನು ಮಾಡಿ, ಧೊರೆಗಳು ಅಪ್ಪಣೆಕೊಟ್ಟು ಕಳುಹಿಸಿ ಇದ್ದ ನಿರಾಜೆಖಿಲ್ಲತ್ತು ನವರತ್ನಾಭರಣ ಮುಂತಾದ ಪದಾರ್ಥಗಳನ್ನೂ ಕುಶಲಪತ್ರಿಕೆಯನ್ನೂ ಸಹ ಒಪ್ಪಿಸಿದನು. ಪಾದಷಹಾರು "ನಿಮ್ಮ ಧೊರೆಗಳು ಕ್ಷೇಮವಾಗಿದ್ದಾರೆಯೆ? ಎಂದು ಕೇಳಲು, ಲಿಂಗಣ್ಣಯ್ಯನು "ನಮ್ಮ ಧೊರೆಗಳು ಸರ್ವಕಾಲದಲ್ಲಿಯೂ ತಮ್ಮ ದವಲತ್ತಿನ ಕ್ಷೇಮಲಾಭವೃದ್ಧಿಯನ್ನು ಪ್ರಾರ್ಥಿಸುತ್ತಲಿದ್ದಾರೆ" ಎಂದು ಹೇಳಿದನು. ಅನಂತರದಲ್ಲಿ ಪಾದಷಹಾರು ಬಹಳ ಸಂತೋಷಯುಕ್ತರಾಗಿ, ಲಿಂಗಣ್ಣಯ್ಯನನ್ನು ತಮ್ಮ ಸಮೀಪದಲ್ಲಿಯೇ ಒಂದು ಕಡೆ ಕೂರಿಸುವಂತೆ ಅಪ್ಪಣೆಯನ್ನು ಕೊಟ್ಟು, ಅವನನ್ನು ಕುರಿತು "ನಿಮ್ಮ ಧೊರೆಗಳು ಅನೇಕ ಶತ್ರುಗಳನ್ನು ಜಯಿಸಿ, ರಾಜ್ಯಗಳನ್ನು ಕಟ್ಟಿ, ದೇಶ ಮರ್ಯಾದೆಗಳನ್ನು ಚೆನ್ನಾಗಿ ವ್ಯವಸ್ಥೆ ಮಾಡಿ, ದುಷ್ಟ ನಿಗ್ರಹ ಶಿಷ್ಟಪರಿ

ಪಾಲನೆಯನ್ನು ಮಾಡುತ್ತಾ, ಧರ್ಮದಿಂದ ರಾಜ್ಯ ಪರಿಪಾಲನೆಯನ್ನು ಮಾಡುತ್ತಿರುವ ಸಮಯದಲ್ಲಿ, ಮರಾಟೆಯವರ ಕಡೆಯವರಾದ ಜಯಾಜೀಘಾಟ್ ನಿಂಬಾಜೀಘಾಟ್ ಎಂಬ ಇಬ್ಬರು ಸರದಾರರು ೬೦ ಸಾವಿರ ಕುದುರೆಗಳ ಸೈನ್ಯ ಸಹಿತವಾಗಿ ನಮ್ಮ ದಿಳ್ಳೀಪ್ರಾಂತ್ಯಕ್ಕೆ ೨–೩ ಸಾರಿ ಬಂದು ಯುದ್ಧ ಮಾಡಿ ಸೀಮೆಗಳನ್ನು ಲೂಟಿ ಮಾಡುತ್ತಾ ಸಿಕ್ಕದೆ ತಪ್ಪಿಸಿಕೊಂಡು ಓಡಿ ಹೋಗಿ ನಿಮ್ಮ ಶ್ರೀರಂಗಪಟ್ಟಣವನ್ನು ಸಾಧಿಸಬೇಕೆಂದು ಬಂದರು. ಆಗ ಆ ಸೇನೆಗಳನ್ನೂ ಆ ಇಬ್ಬರು ಸರದಾರರನ್ನೂ ನೀವು ಹೊಡೆದು ಹಾಕಿದಿರೆಂಬ ವರ್ತಮಾನವನ್ನು ಕೇಳಿ ಬಹಳ ಸಂತೋಷವಾಗಿ ಇದೆ. ನಿಮ್ಮ ಶ್ರೀರಂಗಪಟ್ಟಣವೂ ನಮ್ಮದಾಗಿರುವದಲ್ಲದೆ, ನಿಮ್ಮ ಧೊರೆಗಳೂ ನಮಗೆ ಸನ್ಮಿತ್ರರಾಗಿ ಇರುತ್ತಾರೆ. ನಿಮಗೆ ಏನಾದರೂ ಕಾರ್ಯವಿದ್ದಲ್ಲಿ ನಮಗೆ ಹೇಳಿ ಕಳುಹಿಸಿದರೆ, ಅಕ್ಷಣದಲ್ಲಿಯೇ ಆ ಕಾರ್ಯವನ್ನು ಮಾಡಿಕೊಡುತ್ತೇವೆ " ಎಂದು ಅಪ್ಪಣೆಯನ್ನು ಕೊಟ್ಟು, ' ರಾಜಾ ಗಜದೇವ್ ' ಎಂಬದಾಗಿ ಕಿತಾಬು ಕೊಟ್ಟು, ಧೊರೆಗಳ ಪೂರ್ವದ ಶಿಖಾಸರದಲ್ಲಿ ಇರಿಸುವದಕ್ಕೆ ಯೋಗ್ಯವಾದ ರಾಜಾ ಚಿಕ್ಕದೇವರಾಜ್ ಮಹಮ್ಮದ್ ಷಾಯಿ ಹಿಜರೀ ಲೆಕ್ಕವನ್ನು ಸಹಾ ಫಾರ್ಸಿ ಅಕ್ಷರದಲ್ಲಿ ಬರೆದಿರುವ ಮೊಹರನ್ನೂ, ತಮ್ಮದಾಗಿರುವದಕ್ಕೆ ಕೆಂಪು ಜಾಂಡೆ, ಹನುಮಧ್ವಜ, ಗರುಡಧ್ವಜ, ಶಂಖ, ಚಕ್ರ, ಅಂಕುಶ, ಕುಠಾರ, ಮಕರ, ಮತ್ಸ್ಯ, ಶರಭ, ಸಾಳ್ವ, ಗಂಡಭೇರುಂಡ, ಧರಣೀ ವರಾಹ ಮುಂತಾದ ಬಿರುದುಗಳನ್ನೂ, ಅಧಿಕವಾಗಿ ತಮ್ಮ ಸಂಸ್ಥಾನದ ಪದ್ಧತಿಮೇರೆಗೆ ನಗಾರಿ ನವಪತ್ತುಗಳನ್ನೂ ಸಹ ಕೊಟ್ಟು, ಚಿಕ್ಕದೇವರಾಜ ಒಡೆಯರವರು ಕಳುಹಿಸಿ ಇದ್ದದ್ದಕ್ಕಿಂತ ಇಮ್ಮಡಿಯಾಗಿ ನಿರಾಜಿಖಿಲ್ಲತ್ತು ನವರತ್ನಾಭರಣಗಳನ್ನೂ ಕೊಟ್ಟು, ಸ್ನೇಹ ಸೂಚಕವಾದ ಕುಶಲಪತ್ರವನ್ನು ಬರೆಯಿಸಿ ಕೊಟ್ಟು " ನಿಮ್ಮ ಧೊರೆಗಳಾದ ಚಿಕ್ಕದೇವರಾಜ ಒಡೆಯರವರು ಪಾಂಡವರು ಆಳುತ್ತಿದ್ದ ಸಿಂಹಾಸನಾರೂಢರಾಗಿ ಇರುವದ್ದರಿಂದ ಒಬ್ಬರಿಗೂ ತಾಜೀಂ ತವಜ್ಜೀಂ ಪ್ರತಿ ಸಲಾಮ್ ಮಾಡಕೆಲಸವಿಲ್ಲ " ಎಂದು ಅಪ್ಪಣೆಯನ್ನು ಕೊಟ್ಟು, ಕರಣೀಕ ಲಿಂಗಣ್ಣಯ್ಯನಿಗೂ ಅವನ ಮಾನಾನುಗುಣವಾಗಿ ವಸ್ತ್ರ ಮುಂತಾದ ಮರ್ಯಾದೆಗಳನ್ನು ಮಾಡಿ, ಧೊರೆಳ ಕ್ಷೇಮಲಾಭ ವರ್ತಮಾನವು ತಮಗೆ

ಪದೇಪದೇ ತಿಳಿಯುವದಕ್ಕೆ ತಮ್ಮ ಕಡೆಯವನಾದ ಒಬ್ಬ ಹರಿಕಾರನನ್ನು ಲಿಂಗಣ್ಣಯ್ಯನ ಸಂಗಡ ಕಳುಹಿಸಿಕೊಟ್ಟರು.

ಅನಂತರದಲ್ಲಿ ಲಿಂಗಣ್ಣಯ್ಯನು ದಿಳ್ಳೀ ಪಾದಷಹಾರು ಧೊರೆಗಳವರಾದ ಚಿಕ್ಕ ದೇವರಾಜ ಒಡೆಯರವರಿಗೆ ಸನ್ಮಾನಗಳನ್ನು ಮಾಡಿದ ವಿವರಗಳನ್ನು ವಿಸ್ತಾರವಾಗಿ ಸೂಚಿಸಿ ವಿಜ್ಞಾಪನಪತ್ರಿಕೆಯನ್ನು ಬಿನ್ನಹ ಮಾಡಿಕೊಂಡು, ದಿಳ್ಳಿಯಿಂದ ಹೊರಟು, ಶ್ರೀರಂಗಪಟ್ಟಣದ ಸಮೀಪಕ್ಕೆ ಬಂದ ವರ್ತಮಾನವನ್ನು ಧೊರೆಗಳ ಸನ್ನಿಧಾನಕ್ಕೆ ಪುನಃ ವಿಜ್ಞಾಪನಪತ್ರಿಕೆಯನ್ನು ಬಿನ್ನಹ ಮಾಡಿಕೊಂಡನು. ಚಿಕ್ಕ ದೇವರಾಜ ಒಡೆಯರವರು ಕರಣೀಕ ಲಿಂಗಣ್ಣಯ್ಯನ ಬಿನ್ನವತ್ತಳೆಯನ್ನು ಪರಾಂಬರಿಸಿ, ಶ್ರೀರಂಗಪಟ್ಟಣವನ್ನು ಶೃಂಗಾರಮಾಡಿಸಿ, ತಮ್ಮಲ್ಲಿರುವ ವಿಶಿಷ್ಟ ಅಧಿಕಾರಿಗಳು ಅರಸುಗಳು ವರ್ತಕರು ಮುಂತಾದ ಎಲ್ಲಾ ಕೋಮಿನ ಜನಗಳು ಓಲಗ ತಾಳ ಮೇಳಸಹಿತವಾಗಿ ಬಂದು ಹರದಾರಿ ಪರ್ಯಂತರಕ್ಕೂ ಹೋಗಿ ಎದುರುಗೊಂಡು ತೆಗೆಯಿಸಿಕೊಂಡು ಬರುವಂತೆ ಕಳುಹಿಸಿಕೊಟ್ಟು, ದಿಳ್ಳಿಯಿಂದ ಬಂದ ಮೊಹರನ್ನೂ ಕುಶಲಪತ್ರಿಕೆಯನ್ನೂ ಅಂದಳದಲ್ಲಿ ಇರಿಸಿ, ಅಲ್ಲಿಂದ ಬಂದ ಬಿರುದುಗಳ ಸಹಿತನಾಗಿ ೪ ಬೀದಿಗಳಲ್ಲಿಯೂ ಮೆರವಣಿಗೆ ಮಾಡಿಸಿ, ರಂಗನಾಥಸ್ವಾಮಿಯ ಮಂಟಪೋತ್ಸವಕಾಲದಲ್ಲಿ ದೇವರ ಮುಂದುಗಡೆಯಲ್ಲಿ ಕುಶಲಪತ್ರಿಕೆಯನ್ನು ಓದಿಸಿ, ಆ ಮೊಹರನ್ನೂ ಖಿಲ್ಲತ್ತನ್ನೂ ದೇವರ ಮುಂದುಗಡೆಯಲ್ಲಿ ಸಮರ್ಪಣೆ ಮಾಡಿ, ಆ ಬಿರುದುಗಳನ್ನು ಹಿಡಿಸಿ ಇದ್ದು, ಅಲ್ಲಿಂದ ನವಪತ್ತುಗಳನ್ನು ಮಾಡಿಸಿದರು.

ಅನಂತರ ವಿಕ್ರಮಸಂವತ್ಸರದಲ್ಲಿ, ರಾಜಾ ಜಗದೇರಾವ್ ಎಂಬ ಕಿತಾಬನ್ನು ಸಂಪಾದಿಸಿದ ಚಿಕ್ಕ ದೇವರಾಜ ಒಡೆಯರವರು ಅತಿ ಸಂಭ್ರಮದಿಂದ ದಿಳ್ಳಿಯಿಂದ ಬಂದ ನಗಾರಿ ನವಪತ್ತುಗಳನ್ನು ಮಾಡಿಸುತ್ತಾ, ಆ ಬಿರುದುಗಳನ್ನು ಹಿಡಿಸಿಕೊಂಡು, ಶಿಖಾಮೊಹರನ್ನು ಧರಿಸಿಕೊಂಡು, ಓಲಗವನ್ನು ತೆಗೆದುಕೊಳ್ಳುತ್ತಲಿದ್ದರು. ಆ ಸಮಯದಲ್ಲಿ ಪುತ್ರರಾದ ಕಂಠೀರವ ಮಹಾರಾಜ ಒಡೆಯರವರು ಮುಂತಾದ ಸರ್ವಾಧಿಕಾರಿಗಳು, ಅರಸುಗಳು, ಪಾಳ್ಯಗಾರರು, ಅಧಿಕಾರಸ್ಥರು ಮೊದಲಾದ ಜನರನ್ನು ಅವರವರ ಮಾನಾನು

ಗುಣವಾಗಿ ನಜರು ಮುಜರೆಗಳನ್ನು ಒಪ್ಪಿಸಿಕೊಳ್ಳುತ್ತಲಿರುವ ಸಮಯದಲ್ಲಿ ಭಟರಿಂದ ಹೊಗಳಿಸಿಕೊಳ್ಳುತ್ತಿದ್ದದ್ದು ಏನೆಂದರೆ:—ಶ್ರೀಮನ್ಮಹಾರಾಜ ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪ ಪ್ರತಿಮ ಜಗದೇಕವೀರ ಭುವನೈಕಶೂರ ರಾಗದ್ವೇಷರಹಿತ ದುಷ್ಟನಿಗ್ರಹಕ ಶಿಷ್ಟಪರಿಪಾಲಕ ಬೃಹಸ್ಪತಿಸಮಾನನಿಪುಣ ಮಹೇಂದ್ರಸಮ ವಿಕ್ರಮ ಮಹೇಶ್ವರಸಮಾನ ಮಹಾಪ್ರತಾಪ ತಾರತಮ್ಯವಿಚಕ್ಷಣಧುರೀಣ ರಾಜಸ ತಾಮಸ ಸಾತ್ವಿಕ ತ್ರೈಗುಣ್ಯಪರಿಜ್ಞಾನವಿಚಕ್ಷಣ ಪಸ್ತ ಪಟಹ ಭೇರೀಮೃದಂಗ ಶಂಖ ಕಹಳಾ ವೀಣಾ ವೇಣು ತಂತ್ರೀ ಗುಣ ಲಕ್ಷಣ ಪ್ರಜ್ಞಾನ ವೀರ ನರಪತಿ ಶೂರಾಗ್ರಗಣ್ಯ ಮಲೆತವರ ಗಂಡ ಅರಿಹರಿಭೇರುಂಡ ಕರ್ಣಾಟದೇಶ ಮಂಡನ ಮಹೀಶೂರಪುರಾಧಿರಾಜವಂಶೋತ್ತಂಸ ಅರ್ಥಿಜನಕಲ್ಪಶಾಖಿ ಪ್ರತ್ಯರ್ಥಿ ವ್ರಜ ಸಪಕ್ಷಪರ್ವತವಜ್ರಿ ರಾಜಕುಲಾಬ್ಧಿ ಶಶಾಂಕ ಧರಣೀವರಾಹಾದಿ ಬಿರುದಾಂಕ ಅಭಯಪ್ರತಾಪಾಧೀಶ್ವರ" ಎಂಬ ಬಿರುದುಗಳಿಂದ ಹೊಗಳಿಸಿಕೊಳ್ಳುತ್ತಾ ಓಲಗವನ್ನು ತೆಗೆದುಕೊಳ್ಳುತ್ತಿರುವ ಸಮಯದಲ್ಲಿ, ತಮ್ಮಲ್ಲಿ ಇದ್ದ ಅರಸುಗಳು ಅಧಿಕಾರಿಗಳು ಮುಂತಾದ ಎಲ್ಲಾ ಚಾಕರಿಜನಗಳಿಗೂ ದಿಳ್ಳಿಗೆ ಹೋಗಿಬಂದ ಕರಣೀಕ ಲಿಂಗಣ್ಣಯ್ಯ ಮುಂತಾದ ಜನಗಳಿಗೂ, ದಿಳ್ಳಿಯಿಂದ ಬಂದ ಹರಿಕಾರನಿಗೂ ಸಹ, ಅವರವರ ಮಾನಾನುಗುಣವಾಗಿ ವಸ್ತ್ರಾಭರಣ ಮರ್ಯಾದೆಗಳನ್ನು ಮಾಡಿ, ಕೆಲವರಿಗೆ ಗ್ರಾಮಭೂಮಿಗಳನ್ನು ಕೊಟ್ಟರು. ಪೂರ್ವದಲ್ಲಿ ಸ್ವಲ್ಪವಾಗಿ ಎರಡುವೇಳೆ ನಡೆಯುತ್ತಿದ್ದ ಢಾಳದಮಾಣಿ ಭೇರಿಮುಂತಾದಓಲಗಗಳಿಗೆ ಈಗ ದಿಳ್ಳಿಯಿಂದ ಬಂದ ನವಪತ್ತನ್ನು ಪ್ರತಿ ದಿನದಲ್ಲಿಯೂ ನಾಲ್ಕುವೇಳೆ ನಡೆಯುವಂತೆ ಕಟ್ಟಳೆ ಮಾಡಿದರು.

ಹದಿನೆಂಟು ಚಾವಡಿಗಳನ್ನು ನಿಬಂಧನೆ ಮಾಡಿದ್ದು.—ಚಿಕ್ಕ ದೇವರಾಜಒಡೆಯರವರು ಒಂದಾನೊಂದುದಿನ ತಮ್ಮ ಆಪ್ತಜನರಿಂದೊಡಗೂಡಿ "ದಿಳ್ಳೀ ಪಾದಷಹಾರು ಪ್ರತಿದಿನದಲ್ಲಿಯೂ ದರಬಾರು ಮಾಡತಕ್ಕ ರೀತಿಯೂ ಅಲ್ಲಿನ ಅಧಿಕಾರಸ್ಥಾನವೂ ಯಾವವು" ಎಂದು ಕರಣೀಕ ಲಿಂಗಣ್ಣಯ್ಯನನ್ನು ಕೇಳಲು, ಅವನು ಪಾದಷಹಾರು ಪ್ರತಿದಿನದಲ್ಲಿಯೂ ಮಾಡುವ ದರಬಾರು ರೀತಿಯನ್ನೂ ಅಲ್ಲಿನ ದೇಶಭಾಷೆಯಿಂದ ಇರುವ ೧೮

ಕಚೇರಿ ಎಂದು ಇರುವ ಅಧಿಕಾರಸ್ಥಾನಗಳನ್ನು ವಿಜ್ಞಾಪನೆ ಮಾಡಿದನು. ಆ ಮಾತುಗಳನ್ನು ಕೇಳಿ, ಚಿಕ್ಕ ದೇವರಾಜಒಡೆಯರವರು ತಮ್ಮ ಸಾಮಾಜಿಕರೊಡನೆ ಆಲೋಚನೆ ಮಾಡಿ ೧೮ ಕಚೇರಿ ಎಂಬದಾಗಿ ನಿಬಂಧನೆ ಮಾಡಿದರು. ಯಾವವೆಂದರೆ:—

(೧) ನಿರೂಪದ ಚಾವಡಿ.—ಇದರಲ್ಲಿ ರಾಯಸದವರು ಗಡಿಗಳು ಮುಂತಾದ ಅಧಿಕಾರಸ್ಥಾನಗಳಿಂದ ಯಾರು ಯಾರು ಅರ್ಜಿಗಳನ್ನು ಬಿನ್ನವಿಸಿಕೊಂಡರೂ, ಅವುಗಳನ್ನು ಸುಲಾವಣೆಮಾಡಿ, ಅಪ್ಪಣೆಯಾದಂತೆ ನಿರೂಪ ಬರೆದು, ಆ ನಕಲನ್ನು ಬರೆದುಕೊಂಡು, ನಿರೂಪಕ್ಕೆ ಧೊರೆಗಳ ದಸಕತ್ತು ಮೊಹರು ಮಾಡಿಸಿ, ಆಯಾ ಜನಗಳಿಗೆ ಕಳುಹಿಸಿಕೊಡುವಂತೆ ನಿಬಂಧನೆ ಮಾಡಿಸಿದರು.

(೨) ಅಯಕಟ್ಟಿನ ಚಾವಡಿ.—ಇದರಲ್ಲಿ ಮಹೀಶೂರ ೮೪ ಗಡಿಗಳ ಶೀಮೆಯ ಆದಾಯವೆಚ್ಚಗಳ ಲೆಕ್ಕವನ್ನೂ ಫೌಜಿನ ಲೆಕ್ಕವನ್ನೂ ತೋಷೀಖಾನೇ ಲೆಕ್ಕವನ್ನೂ ಕರ್ತರ ಖಾಸಾ ಆದಾಯವೆಚ್ಚದ ಲೆಕ್ಕವನ್ನೂ ಸಹಾ ಬರೆದುಕೊಳ್ಳುವಂತೆ ಕಟ್ಟಳೆ ಮಾಡಿಸಿದರು.

(೩) ಮಹೀಶೂರ ಹೋಬಳೀವಿಚಾರದ ಚಾವಡಿ.—ತಾವು ನಿಬಂಧನೆ ಮಾಡಿರುವ ೮೪ ಗಡಿಗಳಲ್ಲಿ ಕಾವೇರಿಗೆ ದಕ್ಷಿಣಪಾರ್ಶ್ವದಲ್ಲಿ ಇರುವ ಗಡಿಗಳಿಗೆ ಮಹೀಶೂರ ಹೋಬಳೀವಿಚಾರದ ಚಾವಡಿ ಎಂಬದಾಗಿ ನಿಬಂಧನೆ ಮಾಡಿಸಿದರು.

(೪) ಪಟ್ಟಣದ ಹೋಬಳೀ ವಿಚಾರದ ಚಾವಡಿ.—ಕಾವೇರಿಗೆ ಉತ್ತರಪಾರ್ಶ್ವದಲ್ಲಿರುವ ಗಡಿಗಳಿಗೆ ಪಟ್ಟಣದ ಹೋಬಳೀವಿಚಾರದ ಚಾವಡಿ ಎಂದು ನಿಬಂಧನೆ ಮಾಡಿದರು.

(೫) ಸೀಮೇ ಕಂದಾಚಾರದ ಚಾವಡಿ.—ಈ ಗಡಿಗಳಲ್ಲಿರುವ ಕಿಲ್ಲೇದಾರ, ಶಿರಸ್ತೇದಾರ, ಹೋಬಳೀದಾರ, ಓಲೇಕಾರ ಮುಂತಾದ ಶಿಬ್ಬಂದೀಜನಗಳ ಲೆಕ್ಕವನ್ನೂ, ಆಯಾ ಕಿಲ್ಲೆಯಲ್ಲಿರುವ ಫಿರಂಗಿ ತುಪಾಕಿ ಮದ್ದುಗುಂಡು ಮೊದಲಾದ ಜಕೀರಿ ಸಾಮಾನು ಮುಂತಾದವುಗಳ ಲೆಕ್ಕವನ್ನೂ ಬರೆಯುವಂತೆ ನಿಬಂಧನೆ ಮಾಡಿದರು.

(೬) ಬಾಗಿಲು ಕಂದಾಚಾರದ ಚಾವಡಿ.—ಇದರಲ್ಲಿ ಸವಾರು, ಬಾರಿನವರು, ಬಾರಗಿರಿಯವರು, ಅಹಷಾಂ, ಹಜಾರಲ್ಲಿ ಇರುವಂಥಾವರು, ಪಾಳ್ಯಗಾರರು ಮುಂತಾದವರ ಲೆಕ್ಕವನ್ನು ಬರೆಯುವಂತೆ ನಿಬಂಧನೆ ಮಾಡಿದರು.

(೭) ಸುಂಕದ ಚಾವಡಿ.—ಇದರಲ್ಲಿ ಎಲ್ಲಾ ಸೀಮೆಯ ಮಾರ್ಗಗಳಲ್ಲಿ ಹೋಗಿಬರುವ ಜವಳಿ ರಸ್ತು ಮುಂತಾದ ಜಿನಸುಗಳಿಗೂ, ಅಯಾ ಪೇಟೆಯ ಮನೆಗಳಲ್ಲಿ ಕರಗಪಡಿ ಆಗುವ ಪದಾರ್ಥಗಳಿಗೂ, ನಿಬಂಧನೆ ಮೇರೆಗೆ ಸುಂಕವನ್ನು ತೆಗೆದುಕೊಂಡ ಬಟ್ಟಿಲೆಕ್ಕದ ವಿಚಾರಣೆಯನ್ನು ಮಾಡುವದೆಂದು ನಿಬಂಧನೆ ಮಾಡಿಸಿದರು.

(೮) ಪೊಪ್ಪಿನ ಚಾವಡಿ—ಇದರಲ್ಲಿ ಸೀಮೇಮೇಲೆ ಇರುವ ಶ್ಯಾಜಗಾರರು, ಮಾನ್ಯಗಾರರು, ಬ್ರಾಹ್ಮಣರು, ಅಧಿಕಾರಸ್ಥರು, ತುರುಕರು ಮುಂತಾದ ಜನಗಳು ವ್ಯಾಪಾರ ತರುವಲ್ಲಿಯೂ, ಕೊಡುವಲ್ಲಿಯೂ, ಸರಕಾರದ ಶೀರ್ವೆ ಆಗದೆ ಇದ್ದ ಪದಾರ್ಥಗಳನ್ನು ತೆಗೆದುಕೊಳ್ಳುವಲ್ಲಿಯೂ, ಸುಂಕವನ್ನು ತೆಗೆದುಕೊಳ್ಳುವದೆಂದು ನಿಬಂಧನೆ ಮಾಡಿಸಿದರು.

(೯) ತೊಡಾಯದ ಚಾವಡಿ.—ಇದರಲ್ಲಿ ಪೊಪ್ಪಿನ ಐವಜಿನಲ್ಲಿ ಶ್ರೀರಂಗಪಟ್ಟಣದಲ್ಲಿಮಾತ್ರ ಅರ್ಧ ಐವಜು ತೆಗೆದುಕೊಳ್ಳುವಂತೆ ಕಟ್ಟು ಮಾಡಿಸಿದರು.

(೧೦) ಪಟ್ಟಣದ ಹೋಬಳಿ ಅಷ್ಟಗ್ರಾಮದ ಚಾವಡಿ.—ತಾವು ಪೂರ್ವದಲ್ಲಿ ಮಾಡಿಸಿ ಇರುವ ಚಿಕ್ಕ ದೇವರಾಜಸಾಗರವೆಂಬ ಕಾಲುವೆಗೆ ೮ ಹೋಬಳಿಗಳನ್ನು ಸೇರಿಸಿ ಪಟ್ಟಣದ ಹೋಬಳಿ ಅಷ್ಟಗ್ರಾಮದ ಚಾವಡಿ ಎಂದು ನಿಬಂಧನೆ ಮಾಡಿದರು.

(೧೧) ಮಹೀಶೂರ ಹೋಬಳೀ ಅಷ್ಟಗ್ರಾಮದ ಚಾವಡಿ—ದಕ್ಷಿಣ ಪಾರ್ಶ್ವದಲ್ಲಿರುವ ದೇವರಾಯಕಾಲುವೆಗೆ ೮ ಹೋಬಳಿಗಳನ್ನು ಸೇರಿಸಿ ಮಹೀಶೂರಹೋಬಳಿ ಅಷ್ಟಗ್ರಾಮದ ಚಾವಡಿ ಎಂದು ನಿಬಂಧನೆ ಮಾಡಿದರು.

ಈ ಎರಡು ಅಷ್ಟಗ್ರಾಮದ ಚಾವಡಿಗಳಲ್ಲಿಯೂ ಕಾವೇರಿ ಹೇಮಾವತಿ ಮುಂತಾದ ನದಿಗಳ ಕಟ್ಟೇಕಾಲುವೆ ಕಾಮಗಾರಿ ಮಾಡಿಸಿ, ಆ ನೀರು ನಿಂತ ಪೈರುಗಳಲ್ಲಿ ಆದ ವಾರದ ಹುಟ್ಟುವಳಿ ಬತ್ತ ಕಬ್ಬು ಮುಂತಾದವುಗಳ ಲೆಕ್ಕವನ್ನು ಬರೆಯುವಂತೆ ನಿಬಂಧನೆ ಮಾಡಿದರು.

(೧೨) ಬೆಣ್ಣೇ ಚಾವಡಿ.—ಇದರಲ್ಲಿ ಅರಮನೆಯ ದನ ಕರು ಎಮ್ಮೆ ಮೊದಲಾದ ಜೀವರಾಶಿಗಳನ್ನು ವಿಚಾರಣೆ ಮಾಡಿಕೊಂಡು, ಅದರಲ್ಲಿ ಆದ ಹಾಲು ಮೊಸರು ಬೆಣ್ಣೆ ಮುಂತಾದವುಗಳಲ್ಲಿ ಕೆಲವು ಅರಮನೆಗೆ ಬರುವಂತೆಯೂ, ಕೆಲವು ಕರಿಗಪಡಿಯಾಗುವಂತೆಯೂ ಕಟ್ಟಳೆ ಮಾಡಿಸಿದರು.

(೧೩) ಪಟ್ಟಣದ ಚಾವಡಿ.—ಇದರಲ್ಲಿ ಶ್ರೀರಂಗಪಟ್ಟಣದ ಕೋಟೆ ಕೊತ್ತಲ ಜೀಬಿ ಬಂದೋಬಸ್ತು ಮಾಡುವದಕ್ಕೋಸ್ಕರವೂ, ಅರಮನೇ ಕಾಮಗಾರಿ ಮಾಡುವದಕ್ಕೂ, ಚಾವಡಿ, ಉಗ್ರಾಣ, ಸರಕಾರಕ್ಕೆ ಸೇರಿದ ಮನೆ, ಮದ್ದಿನ ಮನೆ ಮುಂತಾದವುಗಳ ಕಾಮಗಾರಿ ಮಾಡುವದಕ್ಕೂ ಸಹ, ಕಾಮಾಟಿ, ಚಂಗೂಲಿ, ಓಜ, ಕಲ್ಲು ಕುಟುಕರು, ಗಾರೆಯವರು ಮೊದಲಾದ ಕೈನಾತದ ಜನಗಳನ್ನು ನೇಮಿಸಿ, ಕೋಟೆ ಪೇಟೆಗಳನ್ನು ಬಂದೋಬಸ್ತು ಮಾಡತಕ್ಕ ಬಗ್ಯೆ ಕೊತ್ತವಾಲ, ಶಾನುಭೋಗ, ತಳವಾರ, ಕಳ್ಳ ಭಂಟರು ಮುಂತಾದ ಜನಗಳನ್ನು ನೇಮಿಸಿದರು.

(೧೪) ಬೇಹಿನ ಚಾವಡಿ.—ಇದರಲ್ಲಿ ೮೪ ಗಡಿಗಳಲ್ಲಿಯೂ ನಡೆದ ವರ್ತಮಾನಗಳಿಗೆ ತತ್ಕ್ಷಣದಲ್ಲಿಯೇ ಅಂಚೇ ಹರಿಕಾರ ಬರೆದ ಅರ್ಜಿಯನ್ನು ಜಾಗ್ರತೆಯಾಗಿ ತಿಳಿಸುವಂತೆಯೂ, ಅರಮನೆಯಿಂದ ಗಡಿಗಳಿಗೆ ಬರೆಯಿಸಿದ ನಿರೂಪವನ್ನು ಕಳುಹಿಸುವಂತೆಯೂ ಕಟ್ಟಳೆ ಮಾಡಿದರು.

(೧೫) ಸಮುಖದ ಚಾವಡಿ.—ಇದರಲ್ಲಿ ಅರಸು ಮಕ್ಕಳು, ಕುಮಾರರು, ಮಾತಬರಜನಗಳು, ಸಮುಖದ ಊಳಿಗದವರು, ಇಟ್ಟೇ ಊಳಿಗದವರು, ಹರಿಕಾರರು, ಗೊಲ್ಲರು, ಆನೆ, ಕುದುರೆ, ಒಂಟೆ, ಕೋಟೆ ಎತ್ತು, ಗುಡಾರ, ಕನಾತು ಮುಂತಾದ ಎಲ್ಲಾ ಊಳಿಗಗಳು ಪೂರ್ವನಿಬಂಧನೆಮೇರೆಗೆ ನಡೆಯುವದಕ್ಕೆ, ಆಯಾ ಹೋಬಳಿ ಗುರಿಕಾರರು ಮತ್ತು ಶಾನುಭೋಗರು ಬರೆಯಿಸುವ ಲೆಕ್ಕಗಳನ್ನು, ಸಮುಖದ ಚಾವಡಿಯವರು ಬರೆದುಕೊಂಡು, ಒಟ್ಟು ಸಮುಖದ ಗುರಿಕಾರ ಸೋಮರಾಜಯ್ಯನಿಗೂ, ಸಮುಖದ ಅಪ್ಪಾಜಯ್ಯನಿಗೂ ತಿಳಿಸುವಂತೆಯೂ, ತಮಗೂ ಶೃತಪಡಿಸುವಂತೆಯೂ ನಿಬಂಧನೆ ಮಾಡಿದರು.

(೧೬) ದೇವಸ್ಥಾನದ ಚಾವಡಿ.—ಇದರ ಪ್ರಕಾರ ವಿಶಿಷ್ಟದೇವಸ್ಥಾನಗಳ ಆದಾಯವೆಚ್ಚಗಳನ್ನೂ ಅಲ್ಲಿ ನಡೆಯತಕ್ಕ ಆಯಕಟ್ಟುಗಳನ್ನೂ ನಿಬಂಧನೆ ಮಾಡಿದರು.

(೧೭) ಕಬ್ಬಿಣದ ಚಾವಡಿ.—ಇದರಲ್ಲಿ ಸೀಮೆಯಲ್ಲಿ ಆಗುವ ಕಬ್ಬಿಣವನ್ನೆಲ್ಲಾ ಅರಮನೆಗೆ ತೆಗೆಯಿಸಿಕೊಂಡು, ಕಬ್ಬಿಣದ ಪಾತ್ರೆಗಳನ್ನು ಅರಮನೆಯಿಂದಲೇ ಮಾಡಿಸಿ, ಸರಕಾರದಿಂದಲೇ ಖರೀದಿಯಾದರೆ ಸುಂಕ ಕೂಡಿ ಬರುವದೆಂದು ನಿಬಂಧನೆ ಮಾಡಿದರು.

(೧೮) ಹೊಗೇಸೊಪ್ಪಿನ ಚಾವಡಿ.—ಇದರಲ್ಲಿ ಪಟ್ಟಣದ ಕಸಬೆಯಲ್ಲಿ ರೈತರು ಮಾರುವದಕ್ಕೆ ತಂದ ಎಲ್ಲಾ ಹೊಗೇಸೊಪ್ಪನ್ನೂ ಅರಮನೆಗೆ ಸುಲಭಕ್ರಯಕ್ಕೆ ತೆಗೆದುಕೊಂಡು ಅರಮನೆಯವರೇ ಮಾರಬೇಕೆಂದು ನಿಬಂಧನೆ ಮಾಡಿಸಿದರು.

ಈ ಪ್ರಕಾರ ೧೮ ಚಾವಡಿ ಎಂಬದಾಗಿ ನಿಬಂಧನೆಮಾಡಿ, ಚಾವಡಿ ೧ಕ್ಕೆ ಗೊತ್ತುಗಾರ ೧, ದಪ್ತರ ೩, ತಾರತಮ್ಯ ವಿದ್ದಂತೆ ಗುಮಾಸ್ತರು, ರಾಯಸದವರು, ದಫೇದಾರ, ಊಳಿಗದವರು, ಗೊಲ್ಲರು, ಚಾವಡೀಕಾವಲುಗಾರ, ದೀವಟಿಗೆಯವರು ಮುಂತಾದ ಜನಗಳನ್ನು ನೇಮಕಮಾಡಿಸಿ, ಇವರೆಲ್ಲರಿಗೂ ಅಧಿಕಾರ ತಾರತಮ್ಯವಿದ್ದಂತೆ ಸಂಬಳವನ್ನು ನೇಮಕಮಾಡಿ, ಈ ಸಂಬಳಕ್ಕೆ ಅರ್ಧ ನಗದು ಅರ್ಧ ಬತ್ತ ಮುಂತಾದ ದವಸಗಳನ್ನು ಕೊಡುವಂತೆ ನಿಬಂಧನೆ ಮಾಡಿ, ಈ ಅಧಿಕಾರಮಾಡುವ ಜನರೆಲ್ಲರೂ ತಮ್ಮತಮ್ಮ ಕೆಲಸಗಳಲ್ಲಿ ಅರಮನೆಗೆ ಕೂಡಿ ಬರುವಂತೆ ಜಾಗರೂಕರಾಗಿ ಇದ್ದುಕೊಂಡು, ಪ್ರತಿದಿನದಲ್ಲಿಯೂ ಧೊರೆಗಳ ಮುಖಪ್ರಕ್ಷಾಳನ ಕಾಲದಲ್ಲಿ ತಮ್ಮತಮ್ಮ ಚಾವಡಿಯಲ್ಲಿ ನಡೆದ ಆಡಳಿತಗಳನ್ನು ವರದಿ ಹೇಳುವದೆಂದು ಕಟ್ಟಲೆ ಮಾಡಿದರು. ಇದಲ್ಲದೆ ಸೀಮೆಯ ಆಡಳಿತ, ೧೮ ಚಾವಡಿಗಳಲ್ಲಿ ನಡೆದ ವರ್ತಮಾನ, ಪಹರೆ ಚೌಕಿ ಮೊಹರು ಮುದ್ರೆ ಬಂದೋಬಸ್ತು ಮುಂತಾದ ವಿಶೇಷ ವರ್ತಮಾನಗಳನ್ನು ಈ ಚಾವಡಿಗಳ ಅಧಿಕಾರಿಗಳಿಂದ ತಿಳಿಯುವದಲ್ಲದೆ, ತಮ್ಮ ಅಂತರಂಗದ ಜನಗಳಿಂದ ರಹಸ್ಯವಾಗಿ ಅರಮನೆಯ

ವರ್ತಮಾನವನ್ನು ಸಹಾ ತಿಳಿದುಕೊಂಡು, ಹೆಚ್ಚುಕಡಿಮೆ ಇದ್ದರೆ ಅದರ ಬಂದೋಬಸ್ತು ಮಾಡಿಸುತ್ತಿದ್ದರು. ಇವರ ಆಳಿಕೆಯಲ್ಲಿ ಅರಣ್ಯದಲ್ಲಿ ಇದ್ದ ವ್ಯಾಘ್ರ, ವರಾಹ ಭಲ್ಲೂಕ ಸರ್ಪ ಮುಂತಾದ ದುಷ್ಟಮೃಗಗಳು ಕೂಡ ಇವರ ಆಜ್ಞೆಯನ್ನು ಮೀರದೆ ನಡೆದುಕೊಳ್ಳುತ್ತಿದ್ದವೆಂದು ಹೇಳಿಕೆ ಉಂಟು.

ನವಕೋಟಿನಾರಾಯಣ ಎಂಬ ಬಿರುದನ್ನು ಧರಿಸಿದ್ದು.—ದೊರೆಗಳು ಈ ಪ್ರಕಾರವಾಗಿ ಅನೇಕ ನಿಬಂಧನೆಗಳನ್ನು ಮಾಡಿ, ದೇಶಕೋಶಗಳನ್ನು ಕಟ್ಟಿ, ಪಾಳ್ಯಗಾರರನ್ನು ನಿಗ್ರಹಿಸಿ, ಅರಸುಗಳ ಶಿರಸ್ಸುಗಳನ್ನು ಮೆಟ್ಟಿ ಆಳುವಂತೆ, ಅವರ ಶಿರಸ್ಸಿನಲ್ಲಿದ್ದ ನವರತ್ನಾಭರಣಗಳಿಂದ ಎರಡು ಮುಳ್ಳುಬತ್ತುಗಳನ್ನು ಮಾಡಿಸಿ ಮೆಟ್ಟಿಕೊಂಡು, ಪೂರ್ವಕ್ಕಿಂತಲೂ ಅತಿಶಯವಾಗಿ ಬಿರುದುಗಳನ್ನು ಹಿಡಿಸಿಕೊಳ್ಳುತ್ತಾ, ನವರಾತ್ರಿ ಮುಂತಾದ ಉತ್ಸವಕಾಲಗಳಲ್ಲಿ ಅರಸುಗಳು ಪಾಳ್ಯಗಾರರು ಮುಂತಾದ ವಿಶಿಷ್ಟಜನರೂ ಪೂರ್ವ ನಿಬಂಧನೆ ಮೇರೆಗೆ ನಡೆದುಕೊಳ್ಳುತ್ತಿರುವ ಸಮಯದಲ್ಲಿ, ತಮ್ಮಲ್ಲಿ ಇದ್ದ ವಸ್ತ್ರಾಭರಣ ದ್ರವ್ಯಗಳನ್ನು ಲೆಕ್ಕಮಾಡಿಸಿ, ನವಕೋಟಿ ಆಯಿತೆಂಬ ವರ್ತಮಾನವನ್ನು ತರಿಸಿಕೊಂಡು, ಹಿಂದಕ್ಕೆ ಯಾರೂ ಪಡೆಯದೆ ಇರುವ ಕೀರ್ತಿಯನ್ನು ಸಂಪಾದಿಸಿ, ಈ ಉತ್ಸವ ಕಾಲದಲ್ಲಿ ನವಕೋಟಿನಾರಾಯಣ ಎಂಬದಾಗಿ ಹೊಗಳಿಸಿಕೊಳ್ಳುತ್ತಾ, ಸುಖದಿಂದ ರಾಜ್ಯಪರಿಪಾಲನೆಯನ್ನು ಮಾಡುತ್ತಿದ್ದರು.

ಚಿಕ್ಕ ದೇವರಾಜ ಒಡೆಯರವರು ಪ್ರತಿದಿನದಲ್ಲಿಯೂ ನಿತ್ಯದಾನ ಗೋದಾನ ದಂಪತಿಪೂಜೆ ಗೋಪೂಜೆ ಏಕಾದಶಿ ಕೃಷ್ಣಜಯಂತಿ ಮುಂತಾದ ಅನೇಕ ವ್ರತ ದಾನಧರ್ಮಗಳನ್ನು ಮಾಡಿ, ಸತ್ಕೀರ್ತಿಯನ್ನು ಪಡೆದು, ಅನಂತರದಲ್ಲಿ ತಮಗೆ ದೇಹಕ್ಕೆ ಬಹಳ ಆಯಾಸವಾಗಿರುವ ಸಮಯದಲ್ಲಿ, ಆಪ್ತರಾದ ಮಂತ್ರಿಗಳು ಮುಂತಾದವರನ್ನು ಕರೆಯಿಸಿ, ತಮ್ಮ ಪುತ್ರರಾದ ಕಂಠೀರವ ಒಡೆಯರವರಿಗೆ ಮೂಕತ್ವಲಕ್ಷಣವಿಲ್ಲದೆ ಮಾತನಾಡದೆ ಇದ್ದದ್ದರಿಂದ, ಮೂಕಭಾವ ಬಂದಿರುವ ವಿವರವನ್ನೂ, ಅವರ ಬುದ್ಧಿ ಜ್ಞಾನಗಳನ್ನೂ, ಅವರು ಬಾಲ್ಯದಲ್ಲಿ ಮಾತನಾಡಿದ ರೀತಿಯನ್ನೂ ಅವರಿಗೆ ತಿಳಿಸಿದರು. ಏನೆಂದರೆ:—

ಕಂಠೀರವ ಒಡೆಯರವರು ಬಾಲ್ಯದಲ್ಲಿ ೫ ವರ್ಷದವರೆಗೂ ಮಾತನಾಡದೆ ಇದ್ದರು. ಆಗ ಅನೇಕ ಔಷಧ ಯಂತ್ರ ಮಂತ್ರ ತಂತ್ರ ದೇವತಾ ಪ್ರಾರ್ಥನೆ ಮುಂತಾದವುಗಳನ್ನು ಮಾಡಿಸಿದೆವು. ಅದರೂ ಮಾತನಾಡಲಿಲ್ಲ. ಆದ್ದರಿಂದ ನಾವು ಬಹಳ ಚಿಂತಾಕ್ರಾಂತರಾಗಿ “ ಇವರನ್ನು ಯಾರು ಮಾತನಾಡಿಸುವರೋ ಅವರಿಗೆ ಗ್ರಾಮ ಭೂಮಿಗಳನ್ನು ಕೊಟ್ಟು, ಬಹಳವಾಗಿ ಮರ್ಯಾದೆ ಮಾಡುತ್ತೇವೆ ” ಎಂದು ಸಭೆಯಲ್ಲಿ ತಿಳಿಸಿದೆವು. ಆ ಕಾಲದಲ್ಲಿ ಹೆಗ್ಗಡದೇವನಕೋಟೆಯಲ್ಲಿ, ಗೋಪಾಲಭಟ್ಟನೆಂಬ ಒಬ್ಬ ಬ್ರಾಹ್ಮಣನು ಬಹುದಿನ ಅನಶನವ್ರತ ಮುಂತಾದ ನಿಯಮಗಳಿಂದ ಸೂರ್ಯೋಪಾಸನೆಯನ್ನು ಮಾಡುತ್ತಾ ಸೂರ್ಯನನ್ನು ಪ್ರಸನ್ನನನ್ನಾಗಿ ಮಾಡಿಕೊಂಡು ಇದ್ದನು. ಆ ಬ್ರಾಹ್ಮಣನು, ನಾವು ಪ್ರಚಾರ ಮಾಡಿದ ವಿಚಾರವನ್ನು ಕೇಳಿ, ದೊರೆಗಳ ಪುತ್ರರನ್ನು ಮಾತನಾಡಿಸುವದಕ್ಕೆ ತನ್ನಿಂದ ಆದೀತೆ ಎಂದು ಪ್ರಾರ್ಥನೆ ಮಾಡಿ ಮಲಗಿಕೊಂಡಿರಲು, ಸೂರ್ಯ ನಾರಾಯಣಸ್ವಾಮಿಯು “ ಈ ಕಾರ್ಯವು ನಿನ್ನಿಂದ ಆಗುವದು ” ಎಂದು ಸ್ವಪ್ನದಲ್ಲಿ ಪ್ರಸನ್ನನಾಗಿ ಹೇಳಿದನು. ಅನಂತರದಲ್ಲಿ ಆ ಬ್ರಾಹ್ಮಣನು ಶ್ರೀರಂಗಪಟ್ಟಣಕ್ಕೆ ಬಂದು, ತಾನು ಮಾತನಾಡಿಸುತ್ತೇನೆಂದು ನಮ್ಮ ಸನ್ನಿಧಿಗೆ ಜನಗಳ ಮುಖದಿಂದ ಶೃತಪಡಿಸಲು, ನಾವು ಅವನನ್ನು ಕರೆಯಿಸಿ, ಮಾತನಾಡಿಸಬಹುದೆಂದು ಅಪ್ಪಣೆಯನ್ನು ಕೊಟ್ಟೆವು. ಆ ಬ್ರಾಹ್ಮಣನು ಪುನಃ ಒಂದು ಮಂಡಲದವರೆಗೂ ಅನಶನ ವ್ರತದಿಂದ ಸೂರ್ಯಪ್ರಾರ್ಥನೆಯನ್ನು ಮಾಡಿ, ಮರುದಿನ ಮಾತನಾಡಿಸಬಹುದೆಂದು ಸೂರ್ಯನಾರಾಯಣಸ್ವಾಮಿಯು ಪ್ರಸನ್ನನಾಗಿ ಹೇಳಿದನಂತರ, ನಾಳೇದಿನ ಮಾತನಾಡಿಸುತ್ತೇನೆಂದು ನಮಗೆ ಶೃತಪಡಿಸಿದನು. ಆ ಬಳಿಕ ನಾವು ನಮ್ಮ ಅಂತಃಪುರದ ಸ್ತ್ರೀಯರಿಂದಲೂ ಪರಿಮಿತ ಆಪ್ತಜನರಿಂದಲೂ ಕೂಡಿ, ನಮ್ಮ ಪುತ್ರರನ್ನು ಕರೆಯಿಸಿ, ವಿಭೂತಿ ಫಲಮಂತ್ರಾಕ್ಷತೆ ತೀರ್ಥಪ್ರಸಾದಗಳನ್ನು ಕೊಡಿಸಿ, ಮಾತನಾಡಿಸಬಹುದೆಂದು ಆ ಬ್ರಾಹ್ಮಣನಿಗೆ ಅಪ್ಪಣೆ ಕೊಟ್ಟೆವು. ಅನಂತರ ಆ ಬ್ರಾಹ್ಮಣನು ಸೂರ್ಯ ಪ್ರಾರ್ಥನೆಯನ್ನು ಮಾಡಿ, ಕಂಠೀರವರನ್ನು ಕುರಿತು ಮಾತನಾಡಬೇಕೆಂದು ಕೇಳಲು, ಅವರು ತಮ್ಮ ಜನ್ಮಾಂತರದ ವೃತ್ತಾಂತವನ್ನು ಕುರಿತು ಹೇಳಿದ್ದೇನೆಂದರೆ:—“ ನಾನು ಪೂರ್ವಜನ್ಮದಲ್ಲಿ ಯೋಗಾಭ್ಯಾಸ ಮಾಡಿಕೊಂಡಿರುವ ಕಾಲದಲ್ಲಿ, ಕುಂಬಾರನ ಜನ್ಮವನ್ನು ಧರಿಸಿ, ಕಾಶೀಕ್ಷೇತ್ರದ ಮಣಿಕರ್ಣಿಕಾ ತೀರದಲ್ಲಿ ಮಹಾಯೋಗಿಯಾದ ಕೃಷ್ಣಭಟ್ಟನೆಂಬ ಬ್ರಾಹ್ಮಣನ ಶುಶ್ರೂಷೆಯನ್ನು ಮಾಡಿಕೊಂಡು, ಭಗವದ್ಗೀತಾರ್ಥವನ್ನೇ ಕೇಳುತ್ತಾ, ಆ ಬ್ರಾಹ್ಮಣನಿಗೆ ಪ್ರತಿನಿತ್ಯದಲ್ಲಿಯೂ ಆಹಾರಕ್ಕೆ ಹಾಲನ್ನು ನನ್ನ ಮನೆಯಿಂದ ತರಿಸಿಕೊಡುತ್ತಿದ್ದೆನು. ಹೀಗಿರುವಲ್ಲಿ, ಒಂದಾನೊಂದುದಿನ ಆ ಬ್ರಾಹ್ಮಣನು ತನ್ನ ಗೀತಾ ಪುಸ್ತಕವನ್ನು ತಾನು ಕೂತು ಇದ್ದ ಸ್ಥಳದಲ್ಲಿ ಮರೆತು ಬಿಟ್ಟು ಹೊದ್ದರಿಂದ, ಆ ಪುಸ್ತಕವನ್ನು ನಾನು ತೆಗೆದುಕೊಂಡು, ಅನ್ಯತ್ರ ಕ್ರಯಕ್ಕೆ ಕೊಟ್ಟು, ಆ ಹಣದಿಂದಲೇ ಹಾಲು ತಂದು ಕೊಟ್ಟೆನು. ಈ ಪುಸ್ತಕಾಪಹಾರದೋಷದಿಂದಲೂ, ನನ್ನ ದುಷ್ಕರ್ಮದಿಂದಲೂ, ನನಗೆ ಮೂಕತ್ವವು ಬಂದು ಇದೆ; ಆದರೆ ನನ್ನ ಪೂರ್ವಜನ್ಮ ಸುಕೃತದಿಂದ ರಾಜೋದರದಲ್ಲಿ ಜನಿಸಿ ಇರುತ್ತೇನೆ. ಆ ಕೃಷ್ಣ

ಭಟ್ಟನೆಂಬ ಬ್ರಾಹ್ಮಣನು, ಮಹಾಯೋಗಿಯಾಗಿ ಜ್ಞಾನಿಯಾಗಿ ಇದ್ದರೂ, ಶೂದ್ರನಿಗೆ ಜ್ಞಾನೋಪದೇಶಮಾಡಿದ್ದರಿಂದ ಯೋಗಭ್ರಷ್ಟನಾಗಿ, ನನಗೆ ಮುಂದೆ ೩ನೇ ವರ್ಷದಲ್ಲಿ ಅವನೇ ನನ್ನ ಹೊಟ್ಟೆಯಲ್ಲಿ ಹುಟ್ಟುವನು. ಆ ಮಗನಿಗೆ ಕೃಷ್ಣರಾಜನೆಂದು ಹೆಸರನ್ನು ಇಡುವದು. ಮುಂದೆ ನಾನು ಧೊರೆತನ ಮಾಡುವಕಾಲದಲ್ಲಿ, ನೀವು ಯಾವಯಾವ ಮಾತುಗಳನ್ನು ಕೇಳುವಿರೋ ಅವುಗಳನ್ನೆಲ್ಲಾ ನನ್ನ ಮನಸ್ಸಿಗೆ ತಂದು ಕೊಂಡು, ಯುಕ್ತಾಯುಕ್ತ ಪರ್ಯಾಲೋಚನೆಯನ್ನು ಮಾಡಿ, ಹಸ್ತ ಮುಖನೇತ್ರ ಸಂಜ್ಞೆಗಳಿಂದಲೇ ಹೇಳುವದಲ್ಲದೆ, ನನಗೆ ಅಕ್ಷರಜ್ಞಾನ ಇರುವದರಿಂದ, ವಿಶೇಷಮಾತುಗಳನ್ನು ಹೇಳಬೇಕಾದರೆ, ಬರೆದು ತೋರಿಸುತ್ತೇನೆ. ನನಗೆ ಈಗ ಮಾತನಾಡುವ ಜ್ಞಾನವು ಭಗವಂತನಾದ ಸೂರ್ಯನಾರಾಯಣನ ಅನುಗ್ರಹದಿಂದ ಉಂಟಾಯಿತು. ಈ ಜನ್ಮದಲ್ಲಿ ನಾನು ಇನ್ನು ಮೇಲೆ ಮಾತನಾಡುವದಿಲ್ಲ" ಎಂದು ಹೇಳಿ, ಮೊದಲಿನಂತೆ ಮೂಕತ್ವವನ್ನೇ ವಹಿಸಿದರು. ಅನಂತರದಲ್ಲಿ ನಮ್ಮ ಪುತ್ರರನ್ನು ಮಾತನಾಡಿಸಿದ ಗೋಪಾಲ ಭಟ್ಟನೆಂಬ ಬ್ರಾಹ್ಮಣ ನನ್ನು ಕುರಿತು "ನಿನಗೆ ಏನುಬೇಕು?" ಎಂದು ಕೇಳಲು, ಆತನು "ನನಗೆ ಹೆಗ್ಗಡದೇವನಕೋಟೆಯ ಸ್ಥಳಪುರೋಹಿತ್ಯಮಾತ್ರ ಇದೆ. ಆ ಸೀಮೆಯ ಪುರೋಹಿತ ವಿಶಿಷ್ಟವೂ ಆಗಬೇಕು" ಎಂದು ಕೇಳಿಕೊಂಡನು. ಪೂರ್ವದಲ್ಲಿ ಜೈನರು ಮಾಡಿಸುತ್ತಿದ್ದ ಹೆಗ್ಗಡದೇವನಕೋಟೆಯ ಸೀಮೇ ಪುರೋಹಿತ್ಯವನ್ನು ಅವರಿಂದ ತೆಗೆದು, ಆ ಗಡಿಯ ಸುಬೇದಾರ ರೈತರು ವರ್ತಕರು ಮುಂತಾದ ವಿಶಿಷ್ಟಜನರಿಗೂ ಈ ಬ್ರಾಹ್ಮಣನ ಪುತ್ರ ಪೌತ್ರ ಪಾರಂಪರ್ಯವಾಗಿ ಈ ಹೆಗ್ಗಡದೇವನಕೋಟೇ ಸೀಮೆಯ ಪುರೋಹಿತ್ಯವನ್ನು ನಡೆಯಿಸಿಕೊಂಡು ಬರುವಂತೆ ಒಟ್ಟು ನಿರೂಪ ಬರೆಯಿಸಿಕೊಟ್ಟು, ಇದೇಮೇರೆಗೆ ಅನುಭವಿಸಿಕೊಂಡು ಬರುವಂತೆ ಆ ಬ್ರಾಹ್ಮಣನಿಗೆ ತಾಂಬ್ರದ ಶಾಸನ ಬರೆಯಿಸಿಕೊಟ್ಟು, ವಸ್ತ್ರಾಭರಣ ಮುಂತಾದ ಮರ್ಯಾದೆಗಳನ್ನು ಮಾಡಿ ಕಳುಹಿಸಿಕೊಟ್ಟು ಇರುತ್ತೇವೆ.

ಈ ರೀತಿಯಾಗಿ ತಮ್ಮ ಪುತ್ರರ ವೃತ್ತಾಂತವನ್ನು ಹೇಳಿ, ಚಿಕ್ಕದೇವರಾಜ ಒಡೆಯರವರು ತಮ್ಮ ಆಪ್ತರಾದ ಮಂತ್ರಿ ಮೊದಲಾದವರನ್ನು ಕುರಿತು "ಈ ವಿಷಯಗಳೆಲ್ಲಾ ನಮ್ಮ ಅಂತಃಪುರದ ಸ್ತ್ರೀಜನಗಳಿಗೂ ನಿಮಗೂ ತಿಳಿದೇ ಇದೆ. ಆದ್ದರಿಂದ ನಮ್ಮ ಪುತ್ರರು ಬಾಲ್ಯದಲ್ಲಿ ೫ನೇ ವರ್ಷದಲ್ಲಿ ಹೇಳಿದ ಮೇರೆಗೆ ಅವರಿಗೆ ೩ನೇ ವರ್ಷದಲ್ಲಿ ಜನಿಸಿದ ನಮ್ಮ ಮರಿಪುಟ್ಟಸ್ವಾಮಿಯವರಿಗೆ, ನಮಗೆ ಶ್ರೀ ಚಾಮುಂಡೇಶ್ವರಿಯೇ ಕುಲದೇವತೆಯಾದಾಗ್ಯೂ, ಬಾಲ್ಯದಲ್ಲಿ ಅವರು ಹೇಳಿದ ಮಾತು ಅನುಭವಕ್ಕೆ ಬಂದದರಿಂದ, ಕೃಷ್ಣರಾಜನೆಂಬದಾಗಿ ನಾಮಕರಣ ಮಾಡಿಸಬೇಕು. ಇನ್ನು ಮೇಲೆ ನಮ್ಮ ಪುತ್ರರಾದ ಕಂಠೀರವ ಒಡೆಯರವರಿಗೆ ಪಟ್ಟಾಭಿಷೇಕ

ಮಾಡಿಸಿ, ನೀವೆಲ್ಲರೂ ಇವರು ಮಾತನಾಡುವದಿಲ್ಲವೆಂಬದಾಗಿ ರಾಜ ಕಾರ್ಯಗಳಲ್ಲಿ ಹೆಚ್ಚುಕಡಿಮೆ ನಡೆಯಿಸದೆ, ದುಷ್ಟನಿಗ್ರಹ ಶಿಷ್ಟಪರಿಪಾಲನೆಯನ್ನು ಚೆನ್ನಾಗಿ ಮಾಡುತ್ತಾ, ಪಾಳ್ಯಗಾರರು ಮುಂತಾದ ತುಂಟ ಜನಗಳಿಗೆ ಅವಕಾಶವಾಗದಂತೆಯೂ, ಸ್ವಾಮಿದ್ರೋಹಿಗಳು ಎನ್ನಿಸಿಕೊಳ್ಳದೆ, ಜಾಗರೂಕರಾಗಿ ನಿಮ್ಮ ನಿಬಂಧನೆಯನ್ನು ಮೀರಿ ನಡೆಯದೆ, ಇವರ ಆಜ್ಞಾನುಸಾರವಾಗಿ ಇದ್ದುಕೊಂಡು ಇರುವದು" ಎಂದು ಅಪ್ಪಣೆಯನ್ನು ಕೊಟ್ಟು, ಸ್ವಲ್ಪದಿನಗಳಿದ್ದು ಶಾ. ಶಕ ೧೬೨೬ನೇ ತಾರಣ ಸಂವತ್ಸರದ ಕಾರ್ತಿಕ ಬಹುಳ ೩೦ ಸೂರ್ಯಗ್ರಹಣ ಪರ್ವ ಪುಣ್ಯಕಾಲದಲ್ಲಿ ಸೂರ್ಯೋದಯವಾದ ೧ ಗಳಿಗೆಯಲ್ಲಿ ಶ್ರೀ ರಾಮಚಂದ್ರಸ್ವಾಮಿಯವರ ಪಾದಾರವಿಂದವನ್ನೈದಿದರು. ಅನಂತರ ಇವರ ಪುತ್ರರಾದ ಕಂಠೀರವ ಒಡೆಯರವರು ಶ್ರೀರಂಗಪಟ್ಟಣದಲ್ಲಿ ಹೊಸ ಶೃಂಗಾರದ ತೋಟದಲ್ಲಿ, ತಮ್ಮ ಕರ್ತವ್ಯದಿಂದ ದಹನವುಂತಾದ ಉತ್ತರ ಕ್ರಿಯಾದಿಗಳನ್ನು ದೋರನಹಳ್ಳಿ ನರಸಯ್ಯನ ಕೈಯಿಂದ ಮಾಡಿಸಿ, ಅವನಿಗೆ ಅವರು ಆರೋಗಣೆಯನ್ನು ಒಪ್ಪಿಸಿಕೊಳ್ಳುತ್ತಿದ್ದ ಚಿನ್ನದ ಹರಿವಾಣ ಚಂಬು ಮುಂತಾದ ಪದಾರ್ಥಗಳನ್ನೂ ಕೆಲವು ವಸ್ತ್ರಾಭರಣಗಳನ್ನೂ ಕೊಟ್ಟು, ಇವರ ಅಸ್ತಿಯನ್ನು ಕಾಶಿಗೆ ಕಳುಹಿಸಿಕೊಟ್ಟದ್ದಲ್ಲದೆ, ಇವರ ದಹನಸ್ಥಳದಲ್ಲಿ ಗುಡಿಯನ್ನು ಕಟ್ಟಿಸಿ, ಕೃಷ್ಣಸ್ವಾಮಿ ವಿಗ್ರಹವನ್ನು ಪ್ರತಿಷ್ಠೆ ಮಾಡಿಸಿ, ತಸ್ತೀಕನ್ನು ಉಂಟುಮಾಡಿದರು. ಚಿಕ್ಕದೇವರಾಜ ಒಡೆಯರವರ ದಹನಕಾಲದಲ್ಲಿ ಅವರ ಪತ್ನಿಯರು ಸಹಗಮನ ಮಾಡಲಿಲ್ಲ.

	ವರ್ಷ.	ತಿಂಗಳು.	ದಿನ.
ಚಿಕ್ಕದೇವರಾಜ ಒಡೆಯರವರ ಆದ್ಯಂತ ವಯಸ್ಸು..	೫೯	೧	೧೯
" ಆಳಿಕೆ ..	೩೦	೮	೩

ಮಂತ್ರಾಲೋಚನೆ ಮುಂತಾದವುಗಳಿಗೆ ನೇಮಕ ಮಾಡಿಸಿದ್ದ ಜನಗಳು.—

೧ ಯಳಂದೂರು ಪಂಡಿತರು.
೨ ತಿರುಮಲಯ್ಯಂಗಾರ್ಯರು.
೩ ಷಡಕ್ಷರಯ್ಯನವರು.
೪ ತಮಗೆ ವಿದ್ಯೆ ಹೇಳಿದ ಚಿಕ್ಕ ಉಪಾಧ್ಯಾಯರು.
೫ ಕರಣೀಕ ಲಿಂಗಣ್ಣಯ್ಯ.

ದಳವಾಯಿತನ ಮಾಡಿದವರು *

*೧೧೩ನೇ ಪುಟ ನೋಡು.

೯ನೇ ಅಧ್ಯಾಯ.

೧೫. ಕಂಠೀರವ ಮಹಾರಾಜ ಒಡೆಯರ್ ವರು.

ಜನನ.—ಶಾ. ಶಕ ೧೫೯೪ನೇ ಪರೀಧಾವಿ ಸಂವತ್ಸರದ ಪುಷ್ಯಬಹುಳ ೪ ಶುಕ್ರವಾರ ಮಖಾನಕ್ಷತ್ರ ೪ನೇ ಪಾದ ಸೂರ್ಯೋದಯವಾದ ೨೧ ಗಳಿಗೆಗೆ ಸಲ್ಲುವ ವೃಷಭ ಲಗ್ನದಲ್ಲಿ, ಚಿಕ್ಕ ದೇವರಾಜ ಒಡೆಯರವರ ಹಿರೀ ಧರ್ಮಪತ್ನಿಯರಾದ ಯಳಂದೂರು ದೇವಾಜಮ್ಮಣ್ಣಿಯವರ ಗರ್ಭಸುಧಾಂಬುಧಿಯಲ್ಲಿ.

ಪಟ್ಟಾಭಿಷೇಕ.—ಶಾ. ಶಕ ೧೬೨೬ನೇ ತಾರಣಸಂವತ್ಸರದ ಮಾರ್ಗಶಿರ ಶುದ್ಧ ೧೫.

ಪತ್ನಿಯರು.—ಶಾ. ಶಕ ೧೬೩೫ನೇ ಶ್ರೀಮುಖ ಸಂವತ್ಸರದ ವೈಶಾಖ ಶುದ್ಧ ೧೦ಯಲ್ಲಿ (೧) ಯಳಂದೂರು ಲಿಂಗರಾಜ ಅರಸಿನವರ ಮಕ್ಕಳು ಚಾಮಮ್ಮಣ್ಣಿಯವರು, (೨) ಕಲ್ಲಹ ಳ್ಳಿ ಬಸವರಾಜ ಅರಸಿನವರ ಮಕ್ಕಳು ಚೆಲುವಾಜಮ್ಮಣ್ಣಿಯವರು.

ಸಂತಾನ.—(೧) ಯಳಂದೂರು ಚಾಮಮ್ಮಣ್ಣಿಯವರಲ್ಲಿ ಒಬ್ಬ ಪುತ್ರರು ಜನಿಸಿ ಬಾಲ್ಯದಲ್ಲಿಯೇ ತೀರಿಹೋದರು; (೨) ಚೆಲುವಾಜಮ್ಮಣ್ಣಿಯವರಲ್ಲಿ ದೊಡ್ಡ ಕೃಷ್ಣರಾಜಒಡೆಯರವರು.

ಪಾಳ್ಯಗಾರರನ್ನು ಜಯಿಸಿ ದಂಡಣೆಯನ್ನು ಗೊತ್ತು ಮಾಡಿಕೊಂಡ ರಾಜ್ಯಗಳು.—

ಶಾ. ಶಕ ೧೬೩೨ನೇ ವಿಕೃತಿ ಸಂವತ್ಸರದ ಪುಷ್ಯಶುದ್ಧ ೧೨ಯಲ್ಲಿ ಚಿಕ್ಕಬಳ್ಳಾಪುರದ ಪಾಳ್ಯಗಾರ ಬೈಚೇಗೌಡನಿಂದ ಚಿಕ್ಕಬಳ್ಳಾಪುರ.

" " ಮಾಘಮಾಸದಲ್ಲಿ ದೊಡ್ಡಬಳ್ಳಾಪುರದ ಪಾಳ್ಯಗಾರನಿಂದ ದೊಡ್ಡಬಳ್ಳಾಪುರ.

೧೬೩೩ನೇ ಖರ ಸಂವತ್ಸರದ ಚೈತ್ರ ಮಾಸದಲ್ಲಿ ವಿಜಾಪುರದ ಪಾದಷಹಾರಕಡೆ ತುರುಕರಿಂದ ಶಿರ್ಯ.

" " ವೈಶಾಖಮಾಸದಲ್ಲಿ ಮಿಡಿಗೇಶೀ ಪಾಳ್ಯಗಾರನಿಂದ ಮಿಡಿಗೇಶಿ.

ಈ ಪಾಳ್ಯಗಾರರನ್ನೆಲ್ಲಾ ಯುದ್ಧದಲ್ಲಿ ಜಯಿಸಿ ಅವರಲ್ಲಿ ಇದ್ದ ಆನೆ ಕುದುರೆ ವಸ್ತ್ರಾಭರಣ ದ್ರವ್ಯ ಮುಂತಾದವುಗಳನ್ನೆಲ್ಲಾ ಶ್ರೀರಂಗಪಟ್ಟಣಕ್ಕೆ ತೆಗೆದುಕೊಂಡು ಬಂದರು.

ಪ್ರಧಾನ ಲಿಂಗಣ್ಣಯ್ಯ.—ಚಿಕ್ಕದೇವರಾಜ ಒಡೆಯರವರ ಆಳಿಕೆಯಲ್ಲಿ ಬಟ್ಟು ಕರಣೀಕತನವನ್ನು ಮಾಡುತ್ತಿದ್ದ ಲಿಂಗಣ್ಣಯ್ಯನು ಕಾಶಿಗೆ

ಹೊರಟು ಹೋದದ್ದರಿಂದ ಇವನಮಗ ಲಿಂಗಣ್ಣಯ್ಯನೆಂಬುವನಿಗೆ ಪ್ರಧಾನ ತನವು ನೇಮಕವಾಯಿತು.

ಸೇನಾಧಿಪತ್ಯ ಮಾಡಿದ ಜನಗಳ ವಿಗರ.— ಪೂರ್ವದಲ್ಲಿ ಸೇನಾಧಿಪತ್ಯ ಮಾಡುತ್ತಿದ್ದ ದೇವರಾಯದುರ್ಗದ ದಾಸರಾಜಯ್ಯನ ಅಧಿಕಾರವನ್ನು ತೆಗೆದು, ಕಲ್ಲಹಳ್ಳೀ ಕಾಂತಯ್ಯನೆಂಬುವನಿಗೆ ನೇಮಕಮಾಡಿಸಿದರು. ಈ ಕಾಂತಯ್ಯನು ಚಿಕ್ಕಬಳ್ಳಾಪುರದ ಜಗಳದಲ್ಲಿ ತೀರಿಹೋದದ್ದರಿಂದ ಇವನಮಗ ನಂಜರಾಜಯ್ಯನಿಗೆ ನೇಮಕ ಮಾಡಿಸಿದರು. ಈ ನಂಜರಾಜಯ್ಯನ ಮಗ ಬಸವರಾಜಯ್ಯನೆಂಬವನು ಬುದ್ಧಿವಂತನಾಗಿ ಇದ್ದದ್ದರಿಂದ ಇವನ ತಂದೆಯ ಅಧಿಕಾರವು ಇವನಿಗೇ ಆಯಿತು. ಅನಂತರ ಈ ಬಸವರಾಜಯ್ಯನ ಅಧಿಕಾರವನ್ನು ತೆಗೆದು ನಂಜರಾಜಯ್ಯನೆಂಬವನಿಗೆ ನೇಮಕ ಮಾಡಿಸಿದರು. ಅನಂತರದಲ್ಲಿ ಈ ನಂಜರಾಜಯ್ಯನ ಅಧಿಕಾರವನ್ನು ತೆಗೆದು ಕಳಲೇ ದೊಡ್ಡಯ್ಯನಮಗ ವಿರಾಜಯ್ಯನಿಗೆ ನೇಮಕ ಮಾಡಿಸಿದರು.

ಧರ್ಮಕಾರ್ಯಗಳು.—ಕಂಠೀರವಮಹಾರಾಜ ಒಡೆಯರವರು ಸ್ವನಾಮಾಂಕಿತವಾಗಿ ಮೇಲುಕೋಟೆಯಲ್ಲಿ ಬಿಂದುಮಾಧವನ ಗುಡಿಯನ್ನು ಕಟ್ಟಿಸಿ, ತಮ್ಮ ರಾಜ್ಯದಲ್ಲಿ ಬ್ರಾಹ್ಮಣರು ಮೊದಲಾದವರಿಗೆ ಭಟ್ಟಮಾನ್ಯ ಮುಂತಾದ ಜೀವನಗಳನ್ನು ಮಾಡಿಸಿಕೊಟ್ಟರು; ತಮ್ಮಲ್ಲಿ ಪ್ರಧಾನತನವನ್ನು ಮಾಡುತ್ತಿದ್ದ ಲಿಂಗಣ್ಣಯ್ಯನ ತಂದೆಯಾದ ಕರಣೀಕ ಲಿಂಗಣ್ಣಯ್ಯನು ಕರೀಕಲ್ಲು (ಪ್ರತಿನಾಮಧೇಯ ಕಂಠೀರವ ಸಮುದ್ರವೆಂಬ) ಗ್ರಾಮದಲ್ಲಿ ಪ್ರತಿಷ್ಠೆ ಮಾಡಿಸಿ ಇರುವ ಗಂಗಾವಿಶ್ವೇಶ್ವರ ಗೋಪಾಲಕೃಷ್ಣಸ್ವಾಮಿ ಮೊದಲಾದ ದೇವತಾಸೇವೆಗಳಿಗೂ ಕೆಲವು ಬ್ರಾಹ್ಮಣರ ಜೀವನಾರ್ಥವಾಗಿ ಅಗ್ರಹಾರವನ್ನು ಮಾಡುವದಕ್ಕೂ; ಧರ್ಮಪುರ ಮುಂತಾದ ಕೆಲವು ಗ್ರಾಮಗಳನ್ನೂ, ಕರೀಕಲ್ಲು ಗ್ರಾಮದಬಳಿ ಇರುವ ಚಿಕ್ಕ ದೇವರಾಜಸಾಗರವೆಂಬ ಕಾಲುವೇ ಕೆಳಗಣ ಭೂಮಿಗಳನ್ನೂ, ಕೆಲವು ತೋಟಗಳನ್ನೂ ಸಹಾ ಕೊಟ್ಟು, ವರಾಹಮುದ್ರೆ ಮತ್ತು ತಾಂಬ್ರಶಾಸನವನ್ನು ಬರೆಯಿಸಿಕೊಟ್ಟು ಸತ್ಕೀರ್ತಿಯನ್ನು ಪಡೆದರು.

ಇತರ ಮುಖ್ಯ ವಿಷಯಗಳು.—ಕಂಠೀರವ ಮಹಾರಾಜರವರು ಪಾಣಿಸ್ಥಾನದಲ್ಲಿ ಇದ್ದವರಾದಾಗ್ಯೂ, ಹಸ್ತ ಮುಖ ನೇತ್ರಸಂಜ್ಞೆಯಿಂದಲೇ

ರಾಜ್ಯತಂತ್ರವನ್ನು ಚೆನ್ನಾಗಿ ನಡೆಯಿಸಿಕೊಂಡು, ದುಷ್ಟನಿಗ್ರಹ ಶಿಷ್ಟ ಪರಿಪಾಲನೆಯನ್ನು ಮಾಡುತ್ತಾ, ಶ್ರೀರಂಗಪಟ್ಟಣದಲ್ಲಿ ರತ್ನಸಿಂಹಾಸನಾರೂಢರಾಗಿ ಸುಖದಿಂದ ರಾಜ್ಯಭಾರವನ್ನು ಮಾಡುತ್ತಾ, ನವರಾತ್ರಿಮುಂತಾದ ಉತ್ಸವಗಳಲ್ಲಿ 'ಶ್ರೀಮನ್ಮಹಾರಾಜಾಧಿರಾಜ ರಾಜ ಪರಮೇಶ್ವರಾದಿ' ಬಿರುದುಗಳಿಂದ ಹೊಗಳಿಸಿಕೊಳ್ಳುತ್ತಾ, ತಮ್ಮ ಪೂರ್ವಿಕರು ಮಾಡಿದ ದೇವದಾಯ ಬ್ರಹ್ಮದಾಯ ಮಠಗಳು ಸತ್ರಗಳಿಗೂ, ಜೋಗಿ ಜಂಗಮ ಪಕೀರ ಮುಂತಾದ ಜನಗಳಿಗೂ, ಪೂರ್ವನಿಬಂಧನೆ ಮೇರೆಗೆ ಪೂರ್ವದಂತೆ ಜೀವನಗಳನ್ನು ನಡೆಯಿಸುತ್ತಾ ಇದ್ದದ್ದಲ್ಲದೆ, ತಾವು ಮಾಡಿದ ಆಯಕಟ್ಟಮೇರೆಗೆ ಸಕಲ ಕಾರ್ಯಗಳನ್ನೂ ನಡೆಯಿಸಿಕೊಂಡು ಬಂದರು. ಹೀಗಿರುವಲ್ಲಿ ಇವರು ದೇಹಕ್ಕೆ ಆಯಾಸವಾಗಿ ಶಾ. ಶಕ ೧೬೩೬ನೇ ವಿಜಯ ಸಂವತ್ಸರದ ಫಾಲ್ಗುನ ಶುದ್ಧ ೧೫ಯಲ್ಲಿ ಶ್ರೀರಂಗಪಟ್ಟಣದಲ್ಲಿ ಸ್ವರ್ಗಸೋಪಾನವನ್ನು ಐದಿದರು. ಸಹಗಮನವು ಇಲ್ಲ. ಇವರಿಗೆ ಉತ್ತರಕ್ರಿಯಾದಿಗಳನ್ನು ಪುತ್ರ ಕರ್ತವ್ಯದಿಂದ ಕೆಂಚನಗೂಡು ಮನೆತನದ ದಾಳಾಳ ದಾಸರಾಜಯ್ಯನೆಂಬವನು ಮಾಡಿದನು. ಅನಂತರ ಇವರ ಅಸ್ಥಿಯನ್ನು ಕಾಶಿಗೆ ಕಳುಹಿಸಿಕೊಟ್ಟರು.

	ವರ್ಷ.	ತಿಂಗಳು.	ದಿನ.
ಕಂಠೀರವಮಹಾರಾಜ ಒಡೆಯರವರ ಆದ್ಯಂತವಯಸ್ಸು	೪೧	೧	೨೩
„ „ ಆಳಿಕೆ ..	೯	೩	೦

ದಳವಾಯಿತನ ಮಾಡಿದ್ದವರು.*

---

*೧೪೪ನೇ ಪುಟ ನೋಡು.

೧೬. ದೊಡ್ಡ ಕೃಷ್ಣರಾಜ ಒಡೆಯರವರು.

ಜನನ.—ಶಾ. ಶಕ ೧೬೨೪ನೇ ಚಿತ್ರಭಾನುಸಂವತ್ಸರದ ಚೈತ್ರಶುದ್ಧ ೧ ಬುಧವಾರ ಅಶ್ವಿನೀ ನಕ್ಷತ್ರ ರಾತ್ರಿ ೧೩ ಗಳಿಗೆ ಮಕರಲಗ್ನದಲ್ಲಿ ಕಂಠೀರವ ಮಹಾರಾಜ ಒಡೆಯರವರ ಧರ್ಮಪತ್ನಿ ಚೆಲುವಾಜಮ್ಮಣ್ಣಿಯವರ ಗರ್ಭಸುಧಾಂಬುಧಿಯಲ್ಲಿ.

ಪಟ್ಟಾಭಿಷೇಕ.—ಶಾ. ಶಕ ೧೬೩೬ನೇ ವಿಜಯ ಸಂವತ್ಸರದ ಫಾಲ್ಗುನ ಬಹುಳ ೧೪ಯಲ್ಲಿ.

ಪತ್ನಿಯರು.—(೧) ೧೬೩೮ನೇ ದುರ್ಮುಖಿ ಸಂವತ್ಸರದ ಚೈತ್ರ ಶುದ್ಧ ೫ಯಲ್ಲಿ ಕಳಲೇ ಚಿಕ್ಕೀಅರಸಿನವರ ಮಕ್ಕಳು ದೇವಾಜಮ್ಮಣ್ಣಿಯವರು ; ೧೬೪೦ನೇ ವಿಳಂಬಿ ಸಂವತ್ಸರದ ಮಾರ್ಗಶಿರ ಶುದ್ಧ ೧೦ ಮಂಗಳವಾರದಲ್ಲಿ (೨—೩) ಕಳಲೇ ಚಲುವೇ ಅರಸಿನವರ ಮಕ್ಕಳು ಚಲುವಾಜಮ್ಮಣ್ಣಿಯವರು ಮತ್ತು ಕಾಂತಮ್ಮಣ್ಣಿಯವರು, (೪) ಚಿಕ್ಕರಾಜಯ್ಯನವರ ಮಕ್ಕಳು ಚಲುವಾಜಮ್ಮಣ್ಣಿಯವರು, (೫) ಕಳಲೇ ಚಿಕ್ಕಕಾಂತಯ್ಯನವರ ಮಕ್ಕಳು ಚೆಲುವಾಜಮ್ಮಣ್ಣಿಯವರು, (೬) ನೀಲಸೋಗೆಯವರಲ್ಲಿ ದಳವಾಯಿ ವೀರರಾಜಯ್ಯನವರ ಮಕ್ಕಳು ದೇವೀರಮ್ಮಣ್ಣಿಯವರು, (೭) ಮೂಗೂರವರಲ್ಲಿ ಅವುಚವಾಡಿ ನಂಜರಾಜಯ್ಯನವರ ಮಕ್ಕಳು ಕೆಂಪಮ್ಮಣ್ಣಿಯವರು, (೮) ಕೊತ್ತಾಗಾಲದ ಲಕ್ಷ್ಮೀಕಾಂತಯ್ಯನವರ ಮಕ್ಕಳು ಕಾಂತಮ್ಮಣ್ಣಿಯವರು, (೯) ಹುಲ್ಲಹಳ್ಳೀ ಚಿಕ್ಕರಾಜಯ್ಯನವರಮಕ್ಕಳು ಕೆಂಪನಂಜಮ್ಮಣ್ಣಿಯವರು.

ಸಂತಾನ.—(೧) ಹಿರೀಹೆಂಡತಿ ದೇವಾಜಮ್ಮಣ್ಣಿಯವರಲ್ಲಿ ಒಬ್ಬ ಪುತ್ರರು ಹುಟ್ಟಿ ಬಾಲ್ಯದಲ್ಲಿ ೬ ತಿಂಗಳಲ್ಲಿಯೇ ತೀರಿಹೋದರು ; (೨—೩) ಈ ದೇವಾಜಮ್ಮಣ್ಣಿಯವರಿಗೆ ಸ್ವೀಕೃತಪುತ್ರರು ೧೮ ತಿಂಗಳು ಚಾಮರಾಜ ಒಡೆಯರವರು, ಇಮ್ಮಡಿ ಕೃಷ್ಣರಾಜಒಡೆಯರವರು.

ಯುದ್ಧಗಳನ್ನು ನಡಿಸಿದ್ದು.—೧೬೪೬ನೇ ಕ್ರೋಧಿ ಸಂವತ್ಸರದಲ್ಲಿ, ಆರ್ಕಾಟ್ ನವಾಬ್ ಸಾದುಲ್ಲಾಖಾನನ ಕಡೆ ದಿವಾನ್ ಸಿದ್ದೋಜಿ ಘೋರ್ಪಡೆ ಎಂಬವನು ಬಹಳ ಸೈನ್ಯವನ್ನು ತೆಗೆದುಕೊಂಡು ಬಂದು, ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದನು. ಆಗ ಧೊರೆಗಳು ಕೋಟೇಮೇಲಿನಿಂದ ಬಹಳವಾಗಿ ಗುಂಡುಗಳನ್ನು ಹೊಡೆದು, ಯುದ್ಧವನ್ನು ಮಾಡುತಾ, ಇವರ ಪೆಟ್ಟುಗಳನ್ನು ತಾಳಲಾರದೆ ಓಡಿಹೋಗುತ್ತಿರುವ ಅವರ ದಂಡಿನ ಮೇಲೆ ಬೆನ್ನಟ್ಟಿ ಹೋಗಿ ಯುದ್ಧಮಾಡಿ, ಕೆಲವರಿಗೆ ಕಿವಿ ಮೂಗುಗಳನ್ನು ಕುಯಿಸಿ, ಆ ದಂಡಿನಲ್ಲಿದ್ದ ಆನೆ ಕುದುರೆ ವಸ್ತ್ರಾಭರಣ ಮುಂತಾದ ಪದಾರ್ಥಗಳನ್ನು ತೆಗೆದುಕೊಂಡರು.

೧೭೨೬ನೇ ಪರಾಭವ ಸಂವತ್ಸರದಲ್ಲಿ ಮರಾಟಿಯವರಕಡೆ ಬಾಜೀರಾವ್ ಎಂಬ ಸರದಾರನು ಬಹಳ ಸೈನ್ಯವನ್ನು ತೆಗೆದುಕೊಂಡು ಬಂದು, ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿ ಯುದ್ಧ ಮಾಡುತ್ತಿದ್ದನು. ಆ ಸಮಯದಲ್ಲಿ ಅವನ ದಂಡನ್ನು ಶ್ರೀರಂಗಪಟ್ಟಣದ ಕೋಟೇಮೇಲಿನಿಂದ ಕೋವಿ, ಪಿರಂಗೀಗುಂಡು, ಜಂಜಾಲು, ತುಪಾಕಿ, ಮಂಕರಡಿಬ್ಬಿ, ಜಬರಜಂಗಿ, ಬಾಣ ಮುಂತಾದವುಗಳಿಂದ ಹೊಡೆಯುತ್ತಲಿದ್ದರು. ಆ ಬಳಿಕ ಬಾಜೀರಾಯನು ತನ್ನ ದಂಡಿನಲ್ಲಿ ಬಹುಜನ ಹತವಾದದ್ದನ್ನು ಕಂಡು, ಭಯದಿಂದ ಎದೆಗೆಟ್ಟು, "ನಾವು ಕತ್ತಿಯಲ್ಲಿ ಯುದ್ಧವನ್ನು ಮಾಡುವವರು; ಇವರಾದರೋ ಮದ್ದುಗುಂಡುಗಳಿಂದ ಯುದ್ಧಮಾಡಿ, ನಮ್ಮ ಸೇನೆಯನ್ನೆಲ್ಲಾ ಸಂಹಾರಮಾಡಿದರು. ಇದು ಶ್ರೀರಂಗಪಟ್ಟಣವಲ್ಲ, ಪಿರಂಗೀಪಟ್ಟಣ" ಎಂದು ತನ್ನ ಸೇನಾಜನರೊಡನೆ ಹೇಳಿಕೊಳ್ಳುತ್ತಾ, ಇವರೊಡನೆ ಯುದ್ಧ ಮಾಡುವದು ಅಸಾಧ್ಯವೆಂದು ತಿಳಿದು ಓಡಿಹೋದನು. ದೊಡ್ಡ ಕೃಷ್ಣರಾಜಒಡೆಯರವರು ಅವರನ್ನು ಬೆನ್ನಟ್ಟಿಕೊಂಡು ಹೋಗಿ, ಬಹಳವಾಗಿ ಯುದ್ಧಮಾಡಿ, ಅವರಲ್ಲಿದ್ದ ಸಕಲ ಪದಾರ್ಥಗಳನ್ನೂ ತೆಗೆದುಕೊಂಡು ಬಂದರು.

ಪೂರ್ವದಲ್ಲಿ ಸಾಧಿಸಿ ಇದ್ದ *ಮಾಗಡಿ, ಹಾಳ್ಯ, ರತ್ನಗಿರಿ ಮುಂತಾದ ಸ್ಥಳಗಳಲ್ಲಿದ್ದ ಪಾಳ್ಯಗಾರರು ತುಂಟತನಮಾಡಿ ಕಟ್ಟಿಕೊಂಡಿದ್ದ ಗಡಿಗಳನ್ನು, ಅವರನ್ನು ಹೊಡೆದು ಪುನಃ ಸ್ವಾಧೀನ ಮಾಡಿಕೊಂಡದ್ದಲ್ಲದೆ, ಇನ್ನೂ ತುಂಟತನ ಮಾಡುತ್ತಿದ್ದ ಪಾಳ್ಯಗಾರರನ್ನು ನಿಗ್ರಹಿಸಿ, ಸೀಮೆಗಳನ್ನು ಬಂದೋಬಸ್ತು ಮಾಡಿಸಿದರು.

ಧರ್ಮಕಾರ್ಯಗಳನ್ನು ಮಾಡಿದ್ದು.—ದೊಡ್ಡ ಕೃಷ್ಣರಾಜ ಒಡೆಯರವರು ತಮ್ಮ ಪೂರ್ವಿಕರು ಮಾಡಿದ ದೇವದಾಯ ಬ್ರಹ್ಮದಾಯ ಸಂಪ್ರದಾಯ ಮುಂತಾದ ಧರ್ಮಕಾರ್ಯಗಳನ್ನು ನಿರುಪಾಧಿಕವಾಗಿ ನಡೆಯಿಸಿಕೊಂಡು ಬರುತ್ತಿದ್ದದ್ದಲ್ಲದೆ, ತಿರುಪತಿ ವೆಂಕಟರಮಣಸ್ವಾಮಿಯವರ ನಿತ್ಯ

* ದಳವಾಯಿ ದೇವರಾಜಯ್ಯನು ಮಾಗಡಿಯ ಪಾಳ್ಯಗಾರನನ್ನು ಜಯಿಸಿ, ಸಾವನದುರ್ಗದಲ್ಲಿ ೨೦೦ ವರ್ಷಗಳಿಂದ ಕೂಡಿಹಾಕಿ ಇದ್ದ ದ್ರವ್ಯವನ್ನು ಸಾಧಿಸಿಕೊಂಡು ಬಂದನು ಇಲ್ಲಿಗೆ ಕೆಂಪೇಗೌಡನ ವಂಶವು ನಾಶವಾಯಿತು.

ಗಟ್ಟಲೆಯ ಸೇವಾರ್ಥವಾಗಿಯೂ, ಬ್ರಹ್ಮೋತ್ಸವಮುಂತಾದ ವಿಶೇಷ ಉತ್ಸವಗಳು ನಡೆಯುವದಕ್ಕೋಸ್ಕರ ಪರಮತಿ ಎಂಬ ಗಡಿಗೆ ಒಳಿತನಾದ ವೆಂಕಟಪುರ, ಆಯುಂಪಾಳಗ್ರಾಮ, ದೊಡ್ಡಮರದೂರು, ಚಿಕ್ಕಮರದೂರು ಮುಂತಾದ ೬ ಗ್ರಾಮಗಳಲ್ಲಿಯೂ ಹುಟ್ಟುವಂಥಾ ಕಂಠೀರಾಯಿ ೬೦೦ ವರಹಗಳನ್ನು ಶ್ರೀ ವೆಂಕಟರಮಣಸ್ವಾಮಿಯ ಕೈಂಕರ್ಯಕ್ಕೆ, ೧೬೪೩ನೇ ಸಾಧಾರಣ ಸಂವತ್ಸರದ ಮಾರ್ಗಶಿರ ಬಹುಳ ೩೦ ಸೋಮವಾರ ಸೂರ್ಯೋಪರಾಗ ಪುಣ್ಯಕಾಲದಲ್ಲಿ ಸಹಿರಣ್ಯೋದಕ ದಾನ ಧಾರಾಪೂರ್ವಕವಾಗಿ ಧಾರೆಯನ್ನೆರೆದುಕೊಟ್ಟು, ಈ ಗ್ರಾಮಗಳಿಗೆ ಶಂಖಚಕ್ರಾಂಕನವಾಗಿ ಶಿಲಾಪ್ರತಿಷ್ಠೆಯನ್ನು ಮಾಡಿಸಿ, ಈ ದೇವತಾ ಸೇವೆಯು ಸಾರೋದ್ಧಾರವಾಗಿ ನಡೆಯುವದಕ್ಕೆ ತಾಂಬ್ರದ ಶಾಸನವನ್ನು ಬರೆಯಿಸಿ ವೆಂಕಟಾಚಲಪತಿಯ ಬಂಡಾರಕ್ಕೆ ಒಪ್ಪಿಸಿದರು.

ದೊಡ್ಡಕೃಷ್ಣರಾಜ ಒಡೆಯರವರು ತಮ್ಮ ಮಾತುಶ್ರೀಯವರಾದ ಚೆಲುವಾಜಮ್ಮಣ್ಣಿಯವರು ಅಪ್ಪಣೆ ಕೊಡಿಸಿದಂತೆ, ಅವರ ತವರುಮನೆಯ ಮನೇ ದೇವರಾದ ಕಳಲೇ ಲಕ್ಷ್ಮೀಕಾಂತಸ್ವಾಮಿಯ [illegible] ಜೀರ್ಣೋದ್ಧಾರ ಮಾ[illegible] [illegible], ಈ ಕಳಲೆಯಲ್ಲಿ [illegible] ರಾಜ ಪುರವೆಂಬ ಅಗ್ರಹಾರವನ್ನು ನಿರ್ಮಾಣ [illegible], ಗಣಸಂಖ್ಯಾ ೪೩ ವೃತ್ತಿಗಳನ್ನು ಗೃಹೋಪಕರಣ ಸಹಿತವಾಗಿ ತ್ರಿಮತಸ್ಥಬ್ರಾಹ್ಮಣರಿಗೂ ಧಾರೆಯನ್ನೆರದು ಸೂರಹಳ್ಳಿ ಮುಂತಾದ ಗ್ರಾಮಗಳನ್ನು ಕೊಟ್ಟರು.

ಧರ್ಮಪತ್ನಿಗಳ ಹಿರೀಕಟುಂಬ ದೇವಾಜಮ್ಮಣ್ಣಿಯವರೂ ಚೆಲುವಾಜಮ್ಮಣ್ಣಿಯವರೂ ಅಗ್ರಹಾರ ಮಾಡಬೇಕೆಂದು ಬಿನ್ನವಿಸಿಕೊಂಡದ್ದರಿಂದ, ತೊಣ್ಣೂರು ಸ್ಥಳದಲ್ಲಿ ಸ್ವನಾಮಾಂಕಿತವಾಗಿ ದೇವಸ್ಥಾನವನ್ನು ಕಟ್ಟಿಸಿ, ಗೋಪಾಲಕೃಷ್ಣಸ್ವಾಮಿಯನ್ನು ಪ್ರತಿಷ್ಠೆ ಮಾಡಿಸಿ, ಮೇಲೆ ಬರೆದಿರುವ ಇಬ್ಬರು ಪತ್ನಿಯರ ಹೆಸರಿನಿಂದಲೂ ೨ ಅಗ್ರಹಾರಗಳನ್ನು ಕಟ್ಟಿಸಿ, ಅಗ್ರಹಾರ ೧ಕ್ಕೆ ೨೪ ವೃತ್ತಿಮೇರೆಗೆ ೪೮ ವೃತ್ತಿಗಳನ್ನು ತ್ರಿಮತಸ್ಥ ಬ್ರಾಹ್ಮಣರಿಗೂ ಗೃಹೋಪಕರಣಸಹಿತವಾಗಿ ಧಾರೆಯನ್ನೆರದುಕೊಟ್ಟು ದೇವಸ್ಥಾನಕ್ಕೆ ತಸ್ತೀಕನ್ನು ಉಂಟುಮಾಡಿದರು.

ಇವುಗಳಲ್ಲದೆ ದೊರೆಗಳು ಅನೇಕ ಪುಣ್ಯಸ್ಥಳಗಳಲ್ಲಿಯೂ ಕಾವೇರೀ ಕೆಳಗಣ ಸ್ಥಳಗಳಲ್ಲಿಯೂ ಕೆಲವು ಅಗ್ರಹಾರಗಳನ್ನು ಮಾಡಿಸಿದ್ದಲ್ಲದೆ, ವಿಶೇಷ ಪುಣ್ಯಕಾಲಗಳಲ್ಲಿ ಗಜಾಶ್ವ, ಉಭಯತೋಮುಖೀ, ಆಂದೋಳಿಕಾ, ಕನ್ಯಾದಾನ, ಉಪನಯನದಾನ, ನಿತ್ಯದಾನ, ದಂಪತಿಪೂಜೆಗಳನ್ನು ಅನೇಕ ವಾಗಿ ಮಾಡಿದರು. ಮತ್ತು ಮೇಲುಕೋಟೆಯಲ್ಲಿ ಸ್ವನಾಮಾಂಕಿತವಾಗಿಯೂ ಮಾತುಶ್ರೀ ಚೆಲುವಾಜಮ್ಮಣ್ಣಿಯವರ ನಾಮಾಂಕಿತವಾಗಿಯೂ ಕಲ್ಯಾಣಿಯ ಬಳಿಯಲ್ಲಿ ಕೆಲವು ಮಂಟಪಗಳನ್ನೂ ಆಳ್ವಾರ ಗುಡಿಗಳನ್ನೂ ಕಟ್ಟಿಸಿದರು.

ಇತರ ಮುಖ್ಯ ವಿಷಯಗಳು.— ದೊಡ್ಡಕೃಷ್ಣರಾಜ ಒಡೆಯರವರು ಪೂರ್ವದಂತೆ ನವರಾತ್ರಿಯ ಉತ್ಸವಕಾಲದಲ್ಲಿ ಹನುಮಧ್ವಜ ಗರುಡಧ್ವಜ ಶಂಖ ಚಕ್ರ ಮಕರಟಕ್ಕೆ ಸಿಂಹಲಲಾಟ ಶರಭ ಸಾಳ್ವ ಮುಂತಾದ ಬಿರುದುಗಳಿಂದಲೂ, ರಾಜಕುಲತಿಲಕ ರಾಜಮಾರ್ತಾಂಡ ರಾಜಾಧಿರಾಜರೆಂಬ ಬಿರುದುಗಳಿಂದಲೂ ಹೊಗಳಿಸಿಕೊಳ್ಳುತ್ತಿದ್ದರು. ಇವರ ಆಳಿಕೆಯಲ್ಲಿ ಸೀಮೇ ಕಾರ[illegible] ವಿಶೇಷವಾಗಿ ತಾವು ಪರಾಂಬರಿಕೆ ತೆಗೆದುಕೊಳ್ಳದೆ, ಸರ್ವಾಧಿಕಾ[illegible]ವರಾಜಯ್ಯ ಇವರಿಬ್ಬರೂ ಬಂಧುಗಳಾಗಿ ಪರಮ [illegible]ವನ್ನೂ ಇವರ ಸ್ವಾಧೀನಮಾಡಿ, ತಾವು ಸಂಗೀತ [illegible] ಲೋಲುಪ್ತಿಯಲ್ಲಿಯೇ ಇದ್ದದ್ದರಿಂದ, ಪೂರ್ವನಿಬಂಧನೆಯು ತಪ್ಪಿ [illegible]ಗಳು ಹೆಚ್ಚು ಕಡಿಮೆಯಾಗಿ ನಡೆಯುವಂತೆ ಆದದ್ದಲ್ಲದೆ, ತುಂಟಜನಗಳಿಗೂ ಅವಕಾಶವಾಯಿತು. ಇವರು ಸರ್ವ ಜನಗಳನ್ನೂ ಸಂರಕ್ಷಣೆ ಮಾಡುತ್ತಿದ್ದದ್ದಲ್ಲದೆ, ಅರಣ್ಯದಲ್ಲಿದ್ದ ಹುಲಿ ಕರಡಿ ಶಿವಂಗಿ ಕಾಡೆಮ್ಮೆ ಹುಲ್ಲೇಕರು ಕಡವೆ ಸಾರಗ ಕಪಿ ಗಿಣಿ ಮಲೆಶಾನ ಕಾಳಿಂಗ ನವಿಲು ಪುಣುಗಿನಬೆಕ್ಕು ಬಗೆಬಗೆಯಾದ ಪಾರಿವಾಳದ ಪಕ್ಷಿಗಳು, ಗೌಜಲಪಕ್ಷಿಗಳು ಲಾವಗನಪಕ್ಷಿಗಳು ಗಿಡಗ ಭೈರಿ ಮುಂತಾದ ಅನೇಕ ಮೃಗಪಕ್ಷಿಗಳನ್ನು ಚೆನ್ನಾಗಿ ಸಂರಕ್ಷಣೆ ಮಾಡಿಸುತ್ತಿದ್ದರು.

ಪರಕಾಲಸ್ವಾಮಿಗಳನ್ನು ಕರೆಯಿಸಿ ಸಮಾಶ್ರಯಣಮಾಡಿಕೊಂಡದ್ದು.—ದೊಡ್ಡ ಕೃಷ್ಣರಾಜ ಒಡೆಯರವರು ತಿರುಪತಿಯಲ್ಲಿದ್ದ ಮುನಿತ್ರಯ ಸಂಪ್ರದಾಯದಲ್ಲಿ ಧುರಂಧರರಾದ ದೊಡ್ಡಪರಕಾಲಸ್ವಾಮಿಗಳನ್ನು

ಕರೆಯು ಕಳುಹಿಸಿ, ಸಮಾಶ್ರಯಣ ಮುಂತಾದ ಶ್ರೀವೈಷ್ಣವ ದೀಕ್ಷೆಯನ್ನು ಅಂಗೀಕರಿಸಿ, ಏಕಾದಶೀ ಉಪವಾಸವನ್ನೂ ದ್ವಾದಶೀ ಪಾರಣೆಯನ್ನೂ ಸಾಧಿಸಿ, ಪರಮ ಭಾಗವತರಂತೆ ಇರುತ್ತಿದ್ದು, ಲಕ್ಷ್ಮಿ ಶ್ಯಂಗಾರಿ ಎಂಬವನಿಗೆ ಈ ಮಠದ ಮುಖಾಧಿಪತ್ಯವನ್ನು ನೇಮಕ ಮಾಡಿಸಿದರು.

ಹದಿನೆಂಟು ಮನೆತನದ ಅರಸುಮಕ್ಕಳಿಗೆ ನಿರೂಪವನ್ನು ಬರೆಯಿಸಿದ್ದು.—

ಶ್ರೀಕೃಷ್ಣರಾಜ ಒಡೆಯರವರು.

೧೬೩೯ನೇ ಹೇವಿಳಂಬಿ ಸಂವತ್ಸರದ ಶ್ರಾವಣ ಶುದ್ಧ ೧೦ ಯಲ್ಲಿ, ಶ್ರೀಮತು ಹದಿನೆಂಟು ಮನೆತನದ ಅರಸು ಮಕ್ಕಳಾದ ಬಾಗೇಯವರು, ಮುಳ್ಳೂರವರು, ಕೋಟೇಲಿಂಗಪ್ಪ ಒಡೆಯರು, ಮುಲಗೂಡವರು, ಹರಗುಂದದವರು, ಶಿಂಧುವಳ್ಳಿಯವರು, ಮರಳೆಯವರು, ಹೆಬ್ಬಾಳವರು, ಚಿಕ್ಕೇರಿದೊಡ್ಡನ ಕೆಂಪನ ದೊಡ್ಡಮಕ್ಕಳು, ಹಾದನೂರವರು, ಹತ್ತಿಮಲ್ಲರಾಜಯ್ಯನ ಚಂದಾತಳಕಾಡವರು, ಕಳ್ಳೂರು ಗುರುವನ ಮಕ್ಕಳು, ಹೊಸಕೋಟೆಯವರು, ಮಳಲವಾಡಿಯವರು, ಮದ್ದೂರವರು, ಹೆಬ್ಬನಗುಪ್ಪೆಯವರು, ತಿಪ್ಪೂರು ಸೋಮರಾಜ ಮುಂತಾದ ೧೮ ಮನೆತನಕ್ಕೆ ಹೊಂದಿಸಿ ಇರುವ ಅರಸುಮಕ್ಕಳಲ್ಲಿ ಹೆಣ್ಣುಗಳನ್ನು ಕೊಟ್ಟು ತಂದುಕೊಂಡು ಬಂಧುತ್ವ ನಡೆಯುವಹಾಗೆ ಕಟ್ಟಲೆಮಾಡಿಸಿ ಇರುತ್ತೇವೆ. ಆದ್ದರಿಂದ ನೀವೆಲ್ಲರೂ ಗಣಗನೂರು ತಿಮ್ಮರಾಜನ ವಂಶದ ಚನ್ನರಾಜನ ಮನೆತನಕ್ಕೆ ಹೆಣ್ಣು ಕೊಟ್ಟು, ಹೆಣ್ಣು ತಂದು ಕೊಂಡು ಬಂಧುತ್ವಮಾಡಿ ಅನ್ಯೋನ್ಯವಾಗಿ ನಡೆದು ಕೊಳ್ಳತಕ್ಕದ್ದು.

ಈರೀತಿಯಾಗಿ ನಿರೂಪವನ್ನು ಅಪ್ಪಣೆಕೊಡಿಸಿ, ಧರ್ಮದಿಂದ ರಾಜ್ಯಪರಿಪಾಲನೆಯನ್ನು ಮಾಡುತ್ತಿದ್ದು, ಅನಂತರ ತಮಗೆ ದೇಹಕ್ಕೆ ಬಹಳ ಆಯಾಸವಾಗಿ ಇರುವ ಕಾಲದಲ್ಲಿ, ತಮಗೆ ಸಂತಾನವಿಲ್ಲವೆಂದು ತಿಳಿದು, ತಮ್ಮ ಹಿರೀಕುಟುಂಬ ದೇವಾಜಮ್ಮಣ್ಣಿಯವರು ಮುಖ್ಯವಾದ ಪತ್ನಿಯರಸಂಗಡ ತಮ್ಮ ಜ್ಞಾತಿಯಾದ ಅಂಕನಹಳ್ಳಿ ದೇವರಾಜಅರಸಿನವರ ಪುತ್ರರನ್ನು ಸ್ವೀಕಾರ ಮಾಡಿಕೊಂಡು, ಅವರಿಗೆ ಪಟ್ಟವನ್ನು ಕಟ್ಟುವದೆಂದು ಅಪ್ಪಣೆಕೊಟ್ಟು, ತಾವು ಭೂಲೋಕದಲ್ಲಿ ಮಾಡಿದ ದಾನ ಧರ್ಮಗಳನ್ನು ಪರಲೋಕದಲ್ಲಿ ಅನುಭವಿಸಬೇಕೆಂದು ೧೬೫೩ನೇ ವಿರೋಧಿಕೃತು ಸಂವತ್ಸರದ ಫಾಲ್ಗುನ ಬಹುಳ ೫ಯಲ್ಲಿ ಷಷ್ಟಿಕೆ ಹೊತ್ತಿನಲ್ಲಿ ಶ್ರೀಮನ್ನಾರಾಯಣ ಪಾದಾರವಿಂದದಲ್ಲಿ ಐಕ್ಯವಾದರು.

ಅನಂತರದಲ್ಲಿ ದೇವಾಜಮ್ಮಣ್ಣಿಯವರು ತಮ್ಮ ಕರ್ತವ್ಯದಿಂದ ತಮ್ಮ ಜ್ಞಾತಿಯಾದ ಅಂಕನಹಳ್ಳೀ ಚಾಮರಾಜಯ್ಯನವರ ಮಗ ತಿಮ್ಮರಾಜಯ್ಯ

ನಿಂದ ಉತ್ತರ ಕ್ರಿಯಾಗಳನ್ನು ನಡಿಸಿ, ಅವರು ತೀರಿಹೋದ ಪುಣ್ಯ ದಿವಸಗಳಲ್ಲಿ ಶ್ರೀ ಚಾಮುಂಡೇಶ್ವರೀ ಬೆಟ್ಟದ ಮೇಲಿರುವ ಮಹಾಬಲೇಶ್ವರ ಸ್ವಾಮಿಯವರಿಗೆ ಪ್ರತಿವರ್ಷದಲ್ಲಿಯೂ ಫಾಲ್ಗುನ ಬಹುಳ ೬ ದಿವಸ ರಥೋತ್ಸವವು ನಡೆಯುವಂತೆ ಕಟ್ಟಳೆ ಮಾಡಿದರು. ಸಹಗಮನವಿಲ್ಲ.

	ವರುಷ	ತಿಂಗಳು.	ದಿನ.
ದೊಡ್ಡಕೃಷ್ಣರಾಜ ಒಡೆಯರವರ ಅನ್ಯಾಂತವಯಸ್ಸು	೨೯	೧೧	೨೦
" ಆಳಿಕೆ ..	೧೭	೧೧	೨೩

ಇವರ ಆಳಿಕೆಯಲ್ಲಿ ದಳವಾಯಿತನ ಮಾಡಿದವರು.—

ಕಳಲೇವೀರರಾಜಯ್ಯ ...	೧೧	೨	೧೯
ಇವನಮಗ ದೇವರಾಜಯ್ಯ			

ಸರ್ವಾಧಿಕಾರಿ.—ನಂಜರಾಜಯ್ಯ.

೧೭. ಚಾಮರಾಜ ಒಡೆಯರವರು.

ಜನನ.—ಶಾ. ಶಕ ೧೬೨೬ನೇ ತಾರಣ ಸಂವತ್ಸರ.

ಪಟ್ಟಾಭಿಷೇಕ.—ಶಾ. ಶಕ ೧೬೫೫ನೇ ಪರೀಧಾವಿಸಂವತ್ಸರದ ಚೈತ್ರ ಶುದ್ಧ ೫.

ಪತ್ನಿಯರು.—ಪಟ್ಟವಾದಮೇಲೆ ೧೬೫೫ನೇ ಪರೀಧಾವಿಸಂವತ್ಸರದ ಜ್ಯೇಷ್ಠ ಶುದ್ಧ ೩ಯಲ್ಲಿ

(೧) ಕೋಳಗಿರಿ ನಂಜರಾಜಯ್ಯನವರ ಮಕ್ಕಳು ದೇವಾಜಮ್ಮಣ್ಣಿಯವರು,

(೨) ಮೂಗೂರು ಮನೆತನದ ಅಳಗಂಚೀ ಬಾಳಯ್ಯನಮಕ್ಕಳು ದೇವಾಜಮ್ಮಣ್ಣಿಯವರು. ಇವರಲ್ಲದೆ ಧೊರೆಗಳಿಗೆ ಪಟ್ಟಕ್ಕೆ ಮುಂಚೆ ಮದುವೆಯಾದವರು ಒಬ್ಬರಿದ್ದರು.

ಸಂತಾನ.—ಇಲ್ಲ.

ಚಾಮರಾಜ ಒಡೆಯರವರಿಗೆ ಪಟ್ಟಾಭಿಷೇಕವಾದ ವಿಚಾರ.—ದೊಡ್ಡಕೃಷ್ಣರಾಜ ಒಡೆಯರವರ ಜ್ಯೇಷ್ಠ ಪತ್ನಿಯರಾದ ದೇವಾಜಮ್ಮಣ್ಣಿಯವರು, ತಮ್ಮಪತಿಯ ಅಜ್ಞಾನುಸಾರವಾಗಿ, ದಳವಾಯಿ ದೇವರಾಜಯ್ಯ, ಸರ್ವಾಧಿಕಾರಿ ನಂಜರಾಜಯ್ಯ, ಕರಾಚೂರಿ ನಂಜರಾಜಯ್ಯ ಮುಂತಾದ ಅಧಿಕಾರಸ್ಥರನ್ನು ಕರೆಯಿಸಿ " ನಮ್ಮಜ್ಞಾತಿಯವಾದ ಅಂಕನಹಳ್ಳೀ ದೇವರಾಜ ಅರಸಿನವರ ಮಕ್ಕಳಾದ ೨೯ ವರ್ಷ ವಯಸ್ಸುಳ್ಳ ಚಾಮರಾಜಯ್ಯನವ

ರನ್ನು ಸಕುಟುಂಬವಾಗಿ ಕರೆಯಿಸಿ, ನಮಗೆ ಸ್ವೀಕಾರಮಾಡಿಸಿ, ಅವರಿಗೆ ಪಟ್ಟವನ್ನು ಕಟ್ಟುವವರಾಗಿ” ಎಂದು ಅಪ್ಪಣೆ ಕೊಟ್ಟರು. ಅನಂತರ ಈ ಅಧಿಕಾರಸ್ಥರು, ಆ ಚಾಮರಾಜಯ್ಯನವರನ್ನು ರಾಜ ಮರ್ಯಾದೆಯಿಂದ ಕರೆ ತರಿಸಿ, ಅವರು ಪಶ್ಚಿಮವಾಹಿನಿಗೆ ಬಂದ ವರ್ತಮಾನವನ್ನು ತರಿಸಿಕೊಂಡು, ತಾವು ಮೂರುಜನವೂ ಪಶ್ಚಿಮವಾಹಿನಿಗೆ ಹೋಗಿ ಅವರನ್ನು ಕಂಡು “ನಿಮಗೆ ಪಟ್ಟವನ್ನು ಕಟ್ಟಿಸುತ್ತೇವೆ. ನೀವು ಮಹಾಮಾತುಶ್ರೀ ದೇವಾಜಮ್ಮಣ್ಣಿಯವರ ಆಜ್ಞಾನುಸಾರವಾಗಿ ಇರಬೇಕು. ಇಲ್ಲದಿದ್ದರೆ ನಿಮಗೆ ಪಟ್ಟವು ಸಲ್ಲಲಾರದು” ಎಂದುಹೇಳಿ ಪ್ರಮಾಣಮಾಡಿಸಿಕೊಂಡು, ೧೬೫೩ನೇ ವಿರೋಧಿಕೃತುಸಂವತ್ಸರದ ಫಾಲ್ಗುನ ಬಹುಳ ೭ ಮಂಗಳವಾರದಲ್ಲಿ ಶ್ರೀರಂಗ ಪಟ್ಟಣಕ್ಕೆ ಕರೆದುಕೊಂಡುಬಂದು ದೇವಾಜಮ್ಮಣ್ಣಿಯವರ ಭೇಟೀಮಾಡಿಸಿದರು. ಆಗ ದೇವಾಜಮ್ಮಣ್ಣಿಯವರು ಚಾಮರಾಜಯ್ಯನವರನ್ನು ಕುರಿತು “ನಿಮಗೆ ಈ ಸೂತಕವು ಕಳೆದಮೇಲೆ ಶಾಸ್ತ್ರೀಯವಾಗಿ ಪಟ್ಟವನ್ನು ಕಟ್ಟುತ್ತಾ ಇದ್ದೇವೆ. ಈದಿನ ಮೊದಲುಗೊಂಡು ನೀವು ದೇಶ ಕೋಶ ವಿಚಾರಣೆಯನ್ನು ಮಾಡುತ್ತಾ ಇರುವದು” ಎಂದು ಅಪ್ಪಣೆ ಕೊಟ್ಟು, ೧೬೫೪ನೇ ಪರೀಧಾವಿ ಸಂವತ್ಸರದ ಚೈತ್ರ ಶುದ್ಧ ೫ಯಲ್ಲಿ ಚಾಮರಾಜ ಅರಸಿನವರನ್ನು ಸ್ವೀಕಾರಮಾಡಿಕೊಂಡು, ಅರಮನೆಯ ದೊಡ್ಡ ಹಜಾರದಲ್ಲಿ ಶಾಸ್ತ್ರೋಕ್ತವಾಗಿ ಪಟ್ಟಾಭಿಷೇಕವನ್ನು ಮಾಡಿಸಿ, ದಳವಾಯಿ ದೇವರಾಜಯ್ಯ, ಸರ್ವಾಧಿಕಾರಿ ನಂಜರಾಜಯ್ಯ, ಕರಾಚೂರಿ ನಂಜರಾಜಯ್ಯ ಮುಂತಾದ ಅಧಿಕಾರಸ್ಥರೆಲ್ಲರಿಗೂ, ಚಾಮರಾಜ ಒಡೆಯರವರ ಆಜ್ಞಾನುಸಾರವಾಗಿ ನಡೆದುಕೊಳ್ಳತಕ್ಕದ್ದೆಂದು ಅಪ್ಪಣೆಯನ್ನು ಕೊಟ್ಟರು.

ದಳವಾಯಿ ದೇವರಾಜಯ್ಯ ಮುಂತಾದವರು ಸ್ವಾಮಿ ದ್ರೋಹ ಮಾಡಿದ್ದು ಮುಂತಾದದ್ದು.—ಈ ಚಾಮರಾಜ ಒಡೆಯರವರು ಸುಖದಿಂದ ರಾಜ್ಯವನ್ನು ಆಳುತ್ತಾ ಇರುವ ಕಾಲದಲ್ಲಿ ದಳವಾಯಿ ದೇವರಾಜಯ್ಯ, ಇವನ ತಮ್ಮ ಕರಾಚೂರಿ ನಂಜರಾಜಯ್ಯ, ಸರ್ವಾಧಿಕಾರಿ ನಂಜರಾಜಯ್ಯ ಈ ಮೂವರು ದುಷ್ಟಜನರೂ ಸ್ವಾಮಿದ್ರೋಹದಲ್ಲಿಯೇ ಆಸಕ್ತರಾಗಿ, ರಾಜ್ಯದಲ್ಲಿ ಹುಟ್ಟುವ ದ್ರವ್ಯಗಳಲ್ಲಿ ಗಡಿ ೧ಕ್ಕೆ ಪ್ರತಿವರ್ಷದಲ್ಲಿಯೂ ದಳವಾಯಿ ದೇವರಾಜಯ್ಯನಿಗೂ ಇವನ ತಮ್ಮನಿಗೂ ೨೦೦೦ ವರಹಾಗಳು, ಸರ್ವಾಧಿ

ಕಾರಿ ನಂಜರಾಜಯ್ಯನಿಗೆ ೧೦೦೦ ವರಹಗಳ ಮೇರೆಗೆ ಬರುವಂತೆ ನಿಬಂಧನೆ ಮಾಡಿಕೊಂಡು, ತಮ್ಮ ಕಡೆ ಆಪ್ತರಾದ ಉದ್ಯೋಗದವರು ಲಂಚವನ್ನು ತೆಗೆದುಕೊಂಡು ಹೇಳಿದವರಿಗೆ ಅಧಿಕಾರಗಳನ್ನು ಕೊಡಿಸುತ್ತಾ, ಗಡಿಗಳಲ್ಲಿ ತಮ್ಮ ಸ್ವಂತ ಪಣ್ಯಕ್ಕೆ ತೋಟ, ಗದ್ದೆ, ಬೆದ್ದಲು ಮುಂತಾದ ಉತ್ತಮ ಭೂಮಿಗಳನ್ನು ತಮ್ಮದೆಂಬದಾಗಿ ಮಾಡಿಕೊಂಡು, ಅರಮನೇ ವಾರದಲ್ಲಿ ಹುಟ್ಟಿದ ದವಸವನ್ನು ತಮ್ಮ ಪಣ್ಯದ್ದು ಎಂದು ತರಿಸಿಕೊಳ್ಳುತ್ತಾ, ದೊರೆಗಳನ್ನು ಮೂಲವಿಗ್ರಹದಂತೆ ಇಟ್ಟು, ಶಬ್ದಮಾತ್ರದಿಂದಲೇ ದೊರೆಗಳೆಂದೆನ್ನಿಸಿ, ನಿರೂಪದ ದಸಕತ್ತುಗಳನ್ನು ಮಾತ್ರ ಮಾಡಿಸುತ್ತಾ, ಏನೂ ಸ್ವಾತಂತ್ರ್ಯವಿಲ್ಲದಹಾಗೆ ಮಾಡಿ, ೮ ತಿಂಗಳವರಿಗೂ ಸಕಲ ಕಾರ್ಯಗಳನ್ನೂ ತಾವೇ ನಡೆಯಿಸುತ್ತಿದ್ದರು.

ಚಾಮರಾಜ ಒಡೆಯರವರು ಸ್ವಾಮಿ ದ್ರೋಹಿಗಳಾದ ಈ ೩ ಜನರ ದುರ್ನಡತೆಗಳನ್ನು ಚೆನ್ನಾಗಿ ಪರಾಂಬರಿಸಿ, ಇನ್ನು ಮುಂದಕ್ಕೂ ತಾವು ಹೀಗೆ ಉದಾಸೀನರಾಗಿ ಇದ್ದರೆ ರಾಜ್ಯವು ತಮ್ಮ ಅಧೀನದಲ್ಲಿ ಇರಲಾರದೆಂತಲೂ, ಈ ಜನಗಳ ಅಧಿಕಾರವನ್ನು ತೆಗೆದು ತಮ್ಮ ಆಪ್ತಜನರಿಗೆ ಕೊಡಬೇಕೆಂತಲೂ ಆಲೋಚನೆ ಮಾಡುತ್ತಿದ್ದರು. ಈ ವರ್ತಮಾನವನ್ನು ದಳವಾಯಿ ದೇವರಾಜಯ್ಯನು ರಹಸ್ಯವಾಗಿ ತಿಳಿದುಕೊಂಡು, ಅಂತಃಪುರಕ್ಕೆ ಹೋಗಿ, ಮಹಾ ಮಾತುಶ್ರೀ ದೇವಾಜಮ್ಮಣ್ಣಿಯವರ ಸನ್ನಿಧಾನದಲ್ಲಿ "ನಿಮ್ಮ ಪುತ್ರರಾದ ಚಾಮರಾಜ ಒಡೆಯರವರು, ದೊಡ್ಡ ದೊರೆಗಳು ಸಾಕುತ್ತಿದ್ದ ಅನೇಕ ಮೃಗಪಕ್ಷಿಗಳನ್ನು ಅರಣ್ಯಕ್ಕೆ ಬಿಡಿಸಿ, ಅವುಗಳನ್ನು ಸಂರಕ್ಷಣೆ ಮಾಡುತ್ತಿದ್ದ ಜನರ ಜೀವನಗಳನ್ನು ಮತ್ತು ಕೆಲವರ ಜೀವನಗಳನ್ನೂ ತೆಗೆದು ಇರುವದಲ್ಲದೆ, ಮುಂದೆ ತಮ್ಮ ಅಂತಃಪುರಕ್ಕೆ ಕೊಡುತ್ತಿರುವ ಪದಾರ್ಥಗಳಲ್ಲಿ ಅರ್ಧಮಾತ್ರ ಕೊಡುವ ಮೇರೆಗೆ ಚಿಕ್ಕ ಉಗ್ರಾಣದವರಿಗೆ ಕಟ್ಟುಮಾಡಿಸಬೇಕೆಂಬದಾಗಿಯೂ, ನಮ್ಮ ಅಧಿಕಾರಗಳನ್ನು ತೆಗೆದು ತಮ್ಮ ಕಡೆ ದುಷ್ಟಜನರಿಗೆ ಕೊಡಬೇಕೆಂಬದಾಗಿಯೂ ಆಲೋಚನೆ ಮಾಡುತ್ತಾ ಇದ್ದಾರೆ. ಇವುಗಳೆಲ್ಲಾ ಸ್ವಲ್ಪ ದಿನಗಳಲ್ಲಿಯೇ ಚಿತ್ತಕ್ಕೆ ವೇದ್ಯವಾಗುವವು. ಈವರು ಬಂದು ಏನಾದರೂ ಅರಿಕೆಮಾಡಿದರೆ ಯಥಾರ್ಥವೆಂದು ಚಿತ್ತಕ್ಕೆ ತೋರಕೆಲಸವಿಲ್ಲ. ತಮ್ಮ ಅಪ್ಪಣೆಯಾದರೆ ಇದಕ್ಕೆ ತಕ್ಕ

ಉಪಾಯವನ್ನು ಹೊರಗೆ ಮಾಡುತ್ತೇವೆ” ಎಂದು ಚಾಮರಾಜ ಒಡೆಯರವರ
ಮೇಲೆ ಅಸೂಯೆ ಹುಟ್ಟುವಂತೆ ಹೇಳಿದರು. ಅದಕ್ಕೆ ದೇವಾಜಮ್ಮಣ್ಣಿ
ಯವರು ಎಲ್ಲರಿಗೂ ಹ್ಯಾಗೆ ವಿಹಿತವಾಗಿ ತೋರುವದೋ ಹಾಗೆ ಮಾಡಬಹು
ದೆಂದು ಹೇಳಿದರು. ಚಾಮರಾಜ ಒಡೆಯರವರು ಈ ವರ್ತಮಾನವನ್ನು
ಕೇಳಿ, ದಳವಾಯಿ ದೇವರಾಜಯ್ಯನ ಅಧಿಕಾರವನ್ನು ತೆಗೆದು ದೇವಯ್ಯ
ನೆಂಬ ಬ್ರಾಹ್ಮಣನಿಗೆ ನೇಮಕಮಾಡಿ, ಸರ್ವಾಧಿಕಾರಿ ನಂಜರಾಜಯ್ಯನ
ಬದಲಿ ವೀರಸೆಟ್ಟಿ ಎಂಬವನಿಗೆ ನೇಮಕಮಾಡಿ, ಗೋಪೀನಾಥಯ್ಯನಿಗೆ
ಪ್ರಧಾನತನವನ್ನು ನೇಮಿಸಿ, ಇವರಿಗೆಲ್ಲಾ ಉಡುಗೆರೆಗಳನ್ನು ಕೊಟ್ಟು,
ಕಂಠೀರವಯ್ಯ ಕಡೂರು ಚಿಕ್ಕಯ್ಯ ನಾರಣಪ್ಪ ಶಿವನಪ್ಪ ಈ ನಾಲ್ವರನ್ನು
ಮಂತ್ರಾಲೋಚನೆಗೆ ಇಟ್ಟುಕೊಂಡರು. ಈ ರೀತಿಯಲ್ಲಿ ಧೊರೆಗಳು ಸ್ವತಂ
ತ್ರರಾಗಿ, ಸೀಮೆಯಮೇಲೆ ಅನ್ಯಾಯ ನಡೆಯದಂತೆ ದುಷ್ಟನಿಗ್ರಹ
ಶಿಷ್ಟ ಪರಿಪಾಲನೆಯನ್ನು ಮಾಡುತ್ತಾ, ಸೀಮೆಯ ಆದಾಯ ವೆಚ್ಚಗಳನ್ನು
ವಿಚಾರಿಸಿ ಬಂದೋಬಸ್ತುಮಾಡಿ, ಪೂರ್ವನಿಬಂಧನೆ ಮೇರೆಗೆ ದೇವದಾಯ
ಬ್ರಹ್ಮದಾಯ ಮುಂತಾದ ದಾನಧರ್ಮಗಳನ್ನು ನಡೆಯಿಸುತ್ತಾ, ಈ ಚಾಮ
ರಾಜ ಒಡೆಯರವರಿಗೆ ಸಾಟಿಯಿಲ್ಲವೆಂದು ಹೊಗಳಿಸಿಕೊಳ್ಳುತ್ತಾ, ಧರ್ಮ
ದಿಂದ ೧೮ ತಿಂಗಳು ರಾಜ್ಯಪರಿಪಾಲನೆಯನ್ನು ಮಾಡಿದರು.

ಇವರು, ತಮ್ಮ ಅರಮನೆಯ ಒಳಬಾಗಿಲ ಗುರಿಕಾರ ಕರಣೀಕ
ಗೊಲ್ಲರು ಊಳಿಗದವರು ಅವ್ವೇರುಗಳು ಮುಂತಾದ ಜನರು ಮಹಾ ಮಾತು
ಶ್ರೀಯವರು ಅರಿಯದಂತೆ ಚಿಕ್ಕಉಗ್ರಾಣದಿಂದ ಮನಸ್ಸುಬಂದಂತೆ ಹೆಚ್ಚಾಗಿ
ತರಿಸಿಕೊಂಡು ವೆಚ್ಚಮಾಡುತ್ತಿದ್ದ ಹೆಚ್ಚುವೆಚ್ಚವನ್ನು ತಪ್ಪಿಸಿ, ವಿಹಿತ
ವಾಗಿ ನಡೆಯುವಂತೆ ಕಟ್ಟಳೆ ಮಾಡಿಸಿದರು. ಈ ಜನರು ಕೂಡ ಧೊರೆ
ಗಳಿಗೂ ಮಹಾ ಮಾತುಶ್ರೀಯವರಿಗೂ ವಿರೋಧ ತರಬೇಕೆಂದು ಧೊರೆ
ಗಳಮೇಲ್ಲೆ ದೂರು ಹೇಳಿದ್ದರಿಂದ, ಮಹಾ ಮಾತುಶ್ರೀಯವರು ಪೂರ್ವದಲ್ಲಿ
ದಳವಾಯಿ ದೇವರಾಜಯ್ಯನು ಹೇಳಿದ್ದ ಮಾತುಗಳೇ ಈಗ ಯಥಾರ್ಥ
ವಾಯಿತೆಂದು ನಂಬಿ ಚೆನ್ನಾಗಿ ವಿಚಾರಣೆ ಮಾಡದೆ ಇರುತ್ತಿದ್ದರು.

ಅನಂತರದಲ್ಲಿ ಈ ಸ್ವಾಮಿದ್ರೋಹಿಗಳಾದ ದಳವಾಯಿ ದೇವರಾಜಯ್ಯ
ಸರ್ವಾಧಿಕಾರಿ ನಂಜರಾಜಯ್ಯ ಕರಾಚೂರಿನಂಜರಾಜಯ್ಯ ಈ ಮೂವರೂ,

ತಾವು ಮಾಡುತ್ತಿದ್ದ ಕಾರ್ಯಗಳನ್ನು ಧೊರೆಗಳು ಚೆನ್ನಾಗಿ ವಿಚಾರಣೆ ಮಾಡಿ ತಿಳಿದುಕೊಂಡು ಇರುತ್ತಾರಾದ್ದರಿಂದ, ಇನ್ನು ಮುಂದೆ ಇವರನ್ನು ತೀರಿಸದೆ ಇದ್ದರೆ ತಮ್ಮನ್ನೇ ಇವರು ಸಂಹರಿಸುವರೆಂದು ಭಯಪಟ್ಟು, ಪರ್ಯಾಲೋಚನೆಮಾಡಿ, ಪೂರ್ವದಲ್ಲಿ ದೇವಾಜಮ್ಮಣ್ಣಿಯವರು ತಮಗೆ ಅಪಯಶಸ್ಸು ಬಾರದಂತೆ ಧರ್ಮದಮೇಲೆ ದೃಷ್ಟಿಯಿಟ್ಟು ವಿಹಿತವಾದ ಕಾರ್ಯಗಳನ್ನು ಮಾಡಬೇಕೆಂದು ದೇವರಾಜಯ್ಯನಿಗೆ ಹೇಳಿದ ಮಾತುಗಳನ್ನು ಮನಸ್ಸಿಗೆ ತಾರದೆ, ಅನೇಕ ಜನ್ಮಗಳಲ್ಲಿ ಅನುಭವಿಸಿದರೂ ನಾಶವನ್ನು ಹೊಂದುವದಕ್ಕೆ ಅಶಕ್ಯವಾದ ರೌರವಾದಿ ನರಕಪ್ರಾಪ್ತಿಯನ್ನು ಉಂಟುಮಾಡುತ್ತಿರುವ ರಾಜಹತ್ಯಮೊದಲಾದ ಕ್ರೂರಕೃತ್ಯಗಳನ್ನು ಮಾಡಬೇಕೆಂಬ ಇಚ್ಛೆಯಿಂದ, ಈ ಚಾಮರಾಜ ಒಡೆಯರವರ ಸೇನಾಜನರಲ್ಲಿ ತಮಗೆ ಅತ್ಯಂತ ಆಪ್ತರೂ ಶೂರರೂ ದುರ್ಬುದ್ಧಿಗಳೂ ಆದ ಸೇನಾನಾಯಕರ ಬಳಿಗೆ ರಾತ್ರಿವೇಳೆಯಲ್ಲಿ ಜನರು ಅರಿಯದಂತೆ ಕೋಟೆಯ ಹೊರಕ್ಕೆ ಹೋಗಿ, ಆ ದಂಡನಲ್ಲಿ ಮುಖ್ಯಸ್ಥನಾದ ಮದ್ದಗಿರಿ ಮಲ್ಲರಾಜಯ್ಯನ ಬಳಿ ಇದ್ದ ಗುಲಾಂಹೈದರಲ್ಲಿ ಎಂಬ ಜಮಾದಾರ ಮುಂತಾದ ಕೆಲವು ಜನಗಳಿಗೆ, ತಾವು ಸ್ವಾಮಿದ್ರೋಹದಿಂದ ಸಂಪಾದಿಸಿದ ದ್ರವ್ಯದಲ್ಲಿ ಸ್ವಲ್ಪಕೊಟ್ಟು "ನೀವು ಮಹಾಶೂರರು. ನಿಮ್ಮ ಶೌರ್ಯಪರಾಕ್ರಮಗಳು ನಿಮಗೆ ತಿಳಿದೇ ಇದೆ. ನೀವು ಪೂರ್ವದಿಂದಲೂ ನಮ್ಮ ತಾಬೇದಾರಿಯಲ್ಲಿಯೇ ಇದ್ದಿರಿ. ನಿಮಗೆ ನಾವು ಬಹಳ ಉಪಕಾರವನ್ನು ಮಾಡಿ ಇರುತ್ತೇವೆ. ಇನ್ನೂ ನಿಮಗೆ ಬಹಳ ಉಪಕಾರಗಳನ್ನು ಮಾಡುತ್ತಲಿರುವೆವು. ಈಗ ನಿಮಗೆ ಅರಮನೆಯಿಂದ ಬರತಕ್ಕ ಸಂಬಳಗಳನ್ನು ತೆಗೆದುಕೊಂಡು, ನಾವು ಇನ್ನು ಮೇಲೆ ನಿಮ್ಮಲ್ಲಿ ಚಾಕರಿ ಮಾಡುವದಿಲ್ಲವೆಂದು ಹೇಳಿ ಹೊರಟುಬಂದರೆ, ನಿಮಗೆ ಪೂರ್ವದಂತೆ ಸಂಬಳಗಳನ್ನು ಕೊಡುತ್ತಲಿದ್ದೇವೆ" ಎಂದು ಆಸೆಯನ್ನುಂಟುಮಾಡಿ ಹೇಳಿಬಂದರು. ಆ ಬಳಿಕ ೨ ಸಾವಿರ ಕುದುರೆ ೬ ಸಾವಿರ ಬಾರಿನವರು ಮಾತ್ರ ಸಂಬಳಗಳನ್ನು ತೆಗೆದುಕೊಂಡು ಚಾಕರಿ ಬಿಟ್ಟು ಕೋಟೆಯ ಹೊರಗೆ ಬಂದು ಹರದಾರಿದೂರದಲ್ಲಿ ಇಳಿದುಕೊಂಡರು. ಈ ವರ್ತಮಾನವನ್ನು ದಳವಾಯಿ ದೇವರಾಜಯ್ಯನು ತಿಳಿದು, ಜಗನ್ನಾಥದಾಸನೆಂಬ ಸಾಹುಕಾರನ ಮುಖಾಂತರ ೨ ಲಕ್ಷ ರೂಪಾಯನ್ನು ಆ ದಂಡಿನ

ಜನಗಳಿಗೆ ಸಂಬಳಗಳನ್ನು ಕೊಟ್ಟು ಕಳುಹಿಸಿ, ಯಾವಾಗ ಹೇಳಿಕಳುಹಿಸಿದರೂ ಆ ವೇಳೆಗೆ ಯುದ್ಧಸನ್ನದ್ಧರಾಗಿ ಬರಬೇಕೆಂದು ಹೇಳಿ ಕಳುಹಿಸಿ, ಆ ಜನಗಳನ್ನು ಸ್ವಾಧೀನಮಾಡಿಕೊಂಡಿದ್ದನು. ಚಾಮರಾಜ ಒಡೆಯರವರ ಕಡೆ ಸೇನಾಜನರು ಕಟ್ಟಲೆ ಮೇರೆಗೆ ಪ್ರತಿಶುಕ್ರವಾರದಲ್ಲಿಯೂ ಕೋಟೆಯ ಹೊರಗೆ ೨ ಹರದಾರಿ ಪರ್ಯಂತರಕ್ಕೂ ಹೋಗಿ, ಅಲ್ಲಿರುವ ಮೈದಾನದಲ್ಲಿ ಕವಾಯಿತುಮಾಡಿಕೊಂಡು ಬರುವ ಪದ್ಧತಿ ಪ್ರಕಾರ, ದಳವಾಯಿ ದೇವಯ್ಯನು ವಿಶಿಷ್ಟಸೈನ್ಯವನ್ನೂ ಕರೆದುಕೊಂಡು, ಕೋಟೆಯ ಹೊರಕ್ಕೆ ಹೋಗಿ ಇದ್ದನು. ಆ ಸಮಯವನ್ನು ನಿರೀಕ್ಷಿಸಿಕೊಂಡಿದ್ದ ದಳವಾಯಿ ದೇವರಾಜಯ್ಯನು, ತಾನು ಮೊದಲು ಸಿದ್ಧಮಾಡಿ ಇದ್ದ ಜನಗಳನ್ನು ಯುದ್ಧ ಸನ್ನದ್ಧರಾಗಿ ಕರೆಯಿಸಿಕೊಂಡು, ಕೋಟೆಯ ಹೊರಕ್ಕೆ ಕವಾಯಿತಿಗೆ ಹೋಗಿ ಇದ್ದ ಸೈನ್ಯವನ್ನು ಒಳಕ್ಕೆ ಬಾರದಂತೆ ಕೋಟೇ ಬಾಗಿಲಲ್ಲಿ ತನ್ನ ಕಡೇ ಜನಗಳನ್ನು ಇಟ್ಟು ಬಂದೋಬಸ್ತು ಮಾಡಿ, ಅರಮನೇಬಾಗಲಿಗೆ ಬಂದು ಹಂಗಾಮ ಮಾಡುತ್ತಿದ್ದನು. ಚಾಮರಾಜ ಒಡೆಯರವರು ಈ ವರ್ತಮಾನವನ್ನು ಕೇಳಿ, ಅರಮನೇ ಬಾಗಿಲನ್ನು ಹಾಕಿಸಿ, ದೇವರಾಜಯ್ಯನ ಬಳಿಗೆ " ಪೂರ್ವದಲ್ಲಿ ನಿಮ್ಮಿಂದ ಸ್ವಲ್ಪ ಹೆಚ್ಚುಕಡಿಮೆಗಳು ನಡೆದದ್ದರಿಂದ ನಾವು ಈ ಮೇರೆ ಕಾರ್ಯವನ್ನು ನಡೆಯಿಸಬೇಕಾಯಿತು. ನಮಗೆ ಪಟ್ಟವಾದ ೮ ತಿಂಗಳವರೆಗೂ ನಿಮ್ಮ ಅನುಮತಿಯಿಂದಲೇ ರಾಜ್ಯಭಾರ ಮಾಡಿ, ಈಚೆಗೆ ೧೮ ತಿಂಗಳಿಂದ ಸ್ವತಂತ್ರರಾಗಿ ರಾಜ್ಯಭಾರ ಮಾಡುವದರಿಂದ ನಮಗೂ ನಿಮಗೂ ಮನಸ್ತಾಪ ಉಂಟಾಯಿತು. ಇಲ್ಲಿಂದ ಮುಂದಕ್ಕೆ ನಿಮ್ಮ ಅನುಮತಿಯಿಂದಲೇ ಸಕಲ ಕಾರ್ಯಗಳನ್ನೂ ಮಾಡುತ್ತಲಿದ್ದೇವೆ " ಎಂದು ಬಹುಪ್ರಕಾರ ಸಮಾಧಾನೋಕ್ತಿಗಳನ್ನು ಹೇಳಿ ಕಳುಹಿಸಿದರು. ಆದರೂ ಇವನು ಆ ಮಾತುಗಳನ್ನು ಮನಸ್ಸಿಗೆ ತಾರದೆ, ಸ್ವಾಮಿದ್ರೋಹದಲ್ಲಿಯೇ ಬುದ್ಧಿಯುಳ್ಳವನಾಗಿ ರಾಮಬಾಣನೆಂಬ ಆನೆಯಿಂದ ಅರಮನೇ ಆನೇಬಾಗಿಲನ್ನು ಮುರಿಸಿ, ತನ್ನ ಕಡೆಯವರನ್ನು ಪಹರೆ ಇಟ್ಟು ಬಂದೋಬಸ್ತು ಮಾಡಿ, ನಾಗೋಜಿರಾಯನೆಂಬ ಜಮಾದಾರನನ್ನು ಒಳಕ್ಕೆ ಕಳುಹಿಸಿ, ದೊರೆಗಳ ಹಸ್ತದಲ್ಲಿದ್ದ ಶಿರಾಮೊಹರನ್ನೂ ಪಟ್ಟದಕತ್ತಿಯನ್ನೂ ಸಿಂಹಾಸನದಮೇಲೆ

ಇಳಿಸಿ, ಚಾಮರಾಜಒಡೆಯರವರನ್ನು ಸಕುಟುಂಬವಾಗಿ ನಿರ್ಬಂಧದಿಂದ ಕಬ್ಬಾಳದುರ್ಗಕ್ಕೆ ಕಳುಹಿಸಿದನು.

ಕಬ್ಬಾಳದುರ್ಗಕ್ಕೆ ಹೋಗುವಾಗ ಚಾಮರಾಜಒಡೆಯರವರು ದಳವಾಯಿ ದೇವರಾಜಯ್ಯನನ್ನು ಶಪಿಸಿದ್ದೇನೆಂದರೆ:—"ನಾವು ನಮ್ಮ ಮಾತುಶ್ರೀಯವರಿಗೆ ದ್ರೋಹವನ್ನು ಮಾಡದೆ, ಪೂರ್ವದಲ್ಲಿ ಮಾಡಿಕೊಟ್ಟ ಪ್ರಮಾಣವನ್ನು ತಪ್ಪದೆ ಧರ್ಮದಿಂದ ನಡೆದುಕೊಂಡರೂ, ದಳವಾಯಿ ದೇವರಾಜಯ್ಯನು ನಮಗೆ ಈ ಅವಸ್ಥೆಯನ್ನು ಉಂಟುಮಾಡಿದನು. ನಮ್ಮ ಪೂರ್ವಿಕರಾದ ರಾಜಒಡೆಯರವರಿಗೆ ಭಾವಂದಿರಾದ ಕಳಲೇ ತಿಮ್ಮರಾಜಯ್ಯನವರಿಗೆ ಕಳಲೆ ಮುಂತಾದ ಕೆಲವುಗ್ರಾಮಗಳನ್ನು ಪ್ರಭುವಳಿತವಾಗಿ ಕೊಟ್ಟು ಸಂರಕ್ಷಣೆ ಮಾಡುತ್ತಿರುವ ಸಮಯದಲ್ಲಿ, ಆ ತಿಮ್ಮರಾಜಯ್ಯನ ಅನಂತರ ಅವನ ಹಿರೀಹೆಂಡತಿಯ ಮಗನಾದ ಲಕ್ಷ್ಮೀಕಾಂತಯ್ಯನೆಂಬವನು, ಆ ಗ್ರಾಮ ಭೂಮಿಯನ್ನು ಅನುಭವಿಸಿಕೊಂಡು ಭಿನ್ನೋದರ ತಮ್ಮಂದಿರಾದ ನಂದಿನಾಥಯ್ಯ ಕಾಂತಯ್ಯ ಚಂದ್ರಶೇಖರಯ್ಯ ಮುಂತಾದ ಜನರನ್ನು ಚೆನ್ನಾಗಿ ಸಂರಕ್ಷಣೆ ಮಾಡುತ್ತಿದ್ದನು. ಈ ಮೂರುಜನರೂ ಈ ಗ್ರಾಮವನ್ನು ತಾವೇ ಅನುಭವಿಸ ಬೇಕೆಂದು ಆ ಲಕ್ಷ್ಮೀಕಾಂತಯ್ಯನನ್ನು ಅಸೂಯೆಯಿಂದ ಹೊಡೆದುಹಾಕಲು, ಆತನ ಹೆಂಡತಿಯಾದ ಲಿಂಗಾಜಮ್ಮಣ್ಣಿ ಎಂಬ ಮಹಾಪತಿವ್ರತೆಯು ಸಹಗಮನ ಮಾಡುವಕಾಲದಲ್ಲಿ—ಅನ್ಯಾಯದಿಂದ ನನ್ನ ಗಂಡನನ್ನು ಹೊಡೆದುಹಾಕಿದ ನನ್ನ ಬಲಅತ್ತೇ ಮಕ್ಕಳಾದ ಈ ಮೂವರ ವಂಶವೂ ನಷ್ಟವಾಗಲಿ. ಮತ್ತೊಬ್ಬ ಬಲತ್ತೆಯರಾದ ಧರ್ಮಾತ್ಮರಾದ ಮಹೀಶೂರ ರಾಜಒಡೆಯರವರ ಅಕ್ಕಂದಿರಾದ ದೇವಾಜಮ್ಮಣ್ಣಿಯವರ ವಂಶವು ಸಾರೋದ್ಧಾರವಾಗಿ ನಡೆಯಲಿ. ನನ್ನ ಬಾಳು ತಪ್ಪಿಸಿದ ಈ ಕಳಲೇ ಮನೆತನದ ಹೆಣ್ಣುಮಕ್ಕಳು ಚೆನ್ನಾಗಿ ಬಾಳಕಲೆಸವಿಲ್ಲ—ಎಂದು ಶಾಪ ಕೊಟ್ಟಂತೆಯೇ, ಆ ವಂಶದ ಹೆಣ್ಣುಮಕ್ಕಳು ಹ್ಯಾಗೆ ಬಾಳುವದಿಲ್ಲವೋ ಹಾಗೆಯೇ, ನಮ್ಮಭಾಗಕ್ಕೆ ಶ್ರೀಚಾಮುಂಡೇಶ್ವರೀ ಅಮ್ಮನವರೇ ಸತ್ಯವಾಗಿ ಇದ್ದರೆ, ಈ ದೇವರಾಜಯ್ಯನ ವಂಶವು ಮುಂದಕ್ಕೆನಷ್ಟವಾಗಲಿ"ಎಂದು ಶಾಪರೂಪನಾದ ಅತಿಕಠಿನೋಕ್ತಿಯನ್ನು ಹೇಳಿ, ನಿರ್ಬಂಧದಲ್ಲಿಯೇ ಕಬ್ಬಾಳ

ದುರ್ಗಕ್ಕೆ ಹೊರಟು ಹೋದರು. ಅನಂತರದಲ್ಲಿ ದೇವರಾಜಯ್ಯನು ಚಾಮರಾಜ ಒಡೆಯರವರ ಕಡೆ ಪ್ರಧಾನತನವನ್ನು ಮಾಡುತ್ತಿದ್ದ ಗೋಪೀನಾಥಯ್ಯ ದಳವಾಯಿ ದೇವಯ್ಯ ಸರ್ವಾಧಿಕಾರಿ ವೀರಸೆಟ್ಟಿ ಮುಂತಾದ ೩ ಮಂದಿಯನ್ನೂ ಕಹರೆಯಲ್ಲಿ ಇರಿಸಿಬಿಟ್ಟನು.

ದಳವಾಯಿ ದೇವರಾಜಯ್ಯನು ಈರೀತಿಯಾಗಿ, ಜನರು ಮನಸ್ಸಿನಲ್ಲಿ ಸ್ಮರಿಸಿದಾಗ್ಯೂ ಅತ್ಯಂತ ಭಯಂಕರವಾದ, ಲೋಕದಲ್ಲಿ ಸೂರ್ಯಚಂದ್ರರು ಇರುವ ಪರ್ಯಂತವೂ ಅಪಕೀರ್ತಿಯನ್ನುಂಟುಮಾಡುವ, ಚಂಡಾಲರಿಂದಲೂ ನುಡಿಯಲಶಕ್ಯವಾಗಿರುವ, ವಂಶನಾಶಕ್ಕೆ ಮುಖ್ಯಸಾಧಕವಾಗಿರುವ, ಅತ್ಯಂತ ಘೋರವಾದಕಾರಣ ಸಹಿಸಲಶಕ್ಯವಾಗಿರುವ ಸ್ವಾಮಿದ್ರೋಹವನ್ನು ಮಾಡಿ, ಲೋಕದಲ್ಲಿ ಉಂಟಾದ ಅಪಖ್ಯಾತಿಯನ್ನು ಪರಿಹರಿಸಿಕೊಳ್ಳಬೇಕೆಂಬ ಇಚ್ಛೆಯಿಂದಲೂ, ರಾಜಾಧಿಕಾರಿಗಳಲ್ಲಿ ತಾವು ಸ್ಥಿರವಾದ ಸ್ವಾತಂತ್ರ್ಯವನ್ನು ಪಡೆಯಬೇಕೆಂಬ ಆಸೆಯಿಂದಲೂ ಸಹ, ಈ ವಂಚನೆಯನ್ನು ಏನೂ ಅರಿಯದೆ ಇರುವ ಮಹಾಮಾತುಶ್ರೀ ದೇವಾಜಮ್ಮಣ್ಣಿಯವರಿಗೆ "ನಿಮ್ಮ ಜ್ಞಾತಿಯಾದ ಚಿಕ್ಕನಹಳ್ಳಿ ಚಾಮೇ ಅರಸಿನವರ ೩ ವರ್ಷವಯಸ್ಸುಳ್ಳ ಪುತ್ರರನ್ನು ನೀವು ಸ್ವೀಕಾರಮಾಡಿಕೊಂಡು, ಅವರಿಗೆ ಪಟ್ಟವನ್ನು ಕಟ್ಟಿಸಬೇಕು" ಎಂದು ಅರಿಕೆಮಾಡಿಕೊಂಡು, ಅವರ ಅನುಮತಿಯಿಂದ, ಅವರನ್ನು ರಾಜಮರ್ಯಾದೆಯಿಂದ ಶ್ರೀರಂಗಪಟ್ಟಣಕ್ಕೆ ಕರೆಯಿಸಿದನು.

		ತಿಂಗಳು.	ದಿನ.
ಚಾಮರಾಜ ಒಡೆಯರವರ ಆದ್ಯಂತ ಆಳಿಕೆ	.. ..	೧೬	೨೮
ಇದರಲ್ಲಿ ದಳವಾಯಿ ದೇವರಾಜಯ್ಯ ಮುಂತಾದವರ ಸಮ್ಮತಿಯಿಂದ		೮	೨೮
ಸ್ವತಂತ್ರವಾಗಿಮಾಡಿದ್ದು	.. ..	೮	೦

೧೮. ಇಮ್ಮಡಿ ಕೃಷ್ಣರಾಜ ಒಡೆಯರವರು.

ಜನನ.—ಶಾ. ಶಕ ೧೬೫೧ನೇ ಕೀಲಕ ಸಂವತ್ಸರ.

ಪಟ್ಟಾಭಿಷೇಕ.—ಶಾ. ಶಕ ೧೬೫೭ನೇ ಆನಂದ ಸಂವತ್ಸರದ ಜ್ಯೇಷ್ಠ ಬಹುಳ ೧೦ ಸ್ಥಿರ ವಾರ ದಿವಿ ೧೮ಗಳಿಗೆಯಲ್ಲಿ.

ಪತ್ನಿಯರು.—(೧)ಶಾ. ಶಕ ೧೬೬೯ನೇ ಅಕ್ಷಯ ಸಂವತ್ಸರದಲ್ಲಿ ಕಳಲೆ ಕರಾಚೂರಿ ನಂಜ ರಾಜಯ್ಯನವರ ಮಕ್ಕಳು ಪುಟ್ಟಮ್ಮಣ್ಣಿಯವರು (ಪ್ರತಿನಾಮಧೇಯ ದೇವಾ ಜಮ್ಮಣ್ಣಿಯವರು.) ಶಕ ೧೬೮೨ನೇ ಪ್ರಮಾಥಿ ಸಂವತ್ಸರದ ಮಾಘಮಾಸದಲ್ಲಿ (೨) ಬೇಲೂರು ವೆಂಕಟರಾಜಯ್ಯನವರ ಮಕ್ಕಳು ದೇವಾಜಮ್ಮಣ್ಣಿಯವರು ; (೩) ಕತ್ತಿ ಗೋಪಾಲರಾಜಯ್ಯನವರ ಮಕ್ಕಳು ಲಕ್ಷ್ಮಮ್ಮಣ್ಣಿಯವರು.

ಸಂತಾನ.—ಪುತ್ರರು ಕಳಲೇ ದೇವಾಜಮ್ಮಣ್ಣಿಯವರಿಗೆ (೧) ಬೆಟ್ಟದ ಚಾಮರಾಜ ಒಡೆಯರವರು, (೨) ನಂಜರಾಜ ಒಡೆಯರವರು ; (೩) ಬೇಲೂರು ದೇವಾಜಮ್ಮಣ್ಣಿಯವರಲ್ಲಿ ದೇವರಾಜ ಒಡೆಯರವರು ಬಾಲ್ಯದಲ್ಲಿಯೇ ತೀರಿಹೋದರು ; ಲಕ್ಷ್ಮಮ್ಮಣ್ಣಿ ಯವರಿಗೆ (೪) ಅರಿಕುಠಾರದ ಆತ್ರೇಯಸ ಗೋತ್ರದ ದೇವರಾಜ ಅರಸಿನವರ ಕುಟುಂಬ ಹೊನ್ನಾಜಮ್ಮಣ್ಣಿಯವರ ಗರ್ಭದಲ್ಲಿ ಜನಿಸಿದ ಈ ಪುತ್ರರೇ ಮಹೀಶೂರ ಸಂಸ್ಥಾನದ ಧೊರೆತನಕ್ಕೆ ಸ್ವೀಕಾರ. ಇವರೇ ಖಾಸಾ ಚಾಮರಾಜ ಒಡೆಯರವರು.

ಇಮ್ಮಡಿ ಕೃಷ್ಣರಾಜ ಒಡೆಯರವರ ಅಳಿಯಂದಿರು.—ದೇವಾಜಮ್ಮಣ್ಣಿಯವರಿಗೆ ಬಿಳುಗಲಿ ಮನೆತನದ ಶ್ರೀವತ್ಸ ಗೋತ್ರದ ನಾರಣರಾಜೆ ಅರಸಿನವರು ; ದೇವಾಜಮ್ಮಣ್ಣಿಯವರಿಗೆ ತಗಡೂರು ಮನೆತನದ ಹರಿತಸ ಗೋತ್ರದ ಸಿದ್ಧರಾಜಅರಸಿನವರು ; ಲಕ್ಷ್ಮಮ್ಮಣ್ಣಿಯವರ ಮಕ್ಕಳು ಚಾಮಮ್ಮಣ್ಣಿ ಯವರಿಗೆ ಕೊತ್ತಾಗಾಲದ ಮನೆತನದ ವಿಶ್ವಾಮಿತ್ರಗೋತ್ರದ ಲಿಂಗ ರಾಜ ಅರಸಿನವರು.

ಕತ್ತಿಗೋಪಾಲರಾಜ ಅರಸಿನವರ ಹೆಣ್ಣುಮಕ್ಕಳು ೫ ಜನಕ್ಕೆ, ಇಮ್ಮಡಿ ಕೃಷ್ಣರಾಜ ಒಡೆಯರವರ ಪತ್ನಿಯರು ಹೊರತು ಮಿಕ್ಕ ೪ ಜನಗಳನ್ನು ವಿವಾಹವಾಗಿರುವ ಅರಸುಗಳು.—ದೇವಾಜಮ್ಮಣ್ಣಿಯವರಿಗೆ ಕೊತ್ತಾಗಾಲದ ಕೃಷ್ಣೋ ಅರಸಿನವರ ಮಕ್ಕಳು ಲಕ್ಷ್ಮೀಕಾಂತಯ್ಯನವರು ; ಚಂದ್ರಾಜಮ್ಮಯ್ಯನವರಿಗೆ ಕಳಲೇ ಮನೆತನದ ಮದ್ದೂರು ಕೃಷ್ಣೋ ಅರಸಿನವರ ಮಕ್ಕಳು ಕಾಂತಯ್ಯನವರು ; ಕೃಷ್ಣಾಜಮ್ಮಯ್ಯ ನವರಿಗೆ ಕಾವೇರೀ

ಪುರದ ದೊಡ್ಡೇ ಅರಸಿನವರು; ಕೆಂಪಲಕ್ಷ್ಮಮ್ಮನವರಿಗೆ ನೀಲಸೋಗೇ ಮನೆತನದ ಚನ್ನರಾಜಯ್ಯನವರು.

ದೊಡ್ಡಕೃಷ್ಣರಾಜ ಒಡೆಯರವರ ಜ್ಯೇಷ್ಠ ಪತ್ನಿಯರಾದ ದೇವಾಜಮ್ಮಣ್ಣಿಯವರು, ಶಾ. ಶಕ ೧೬೫೬ನೇ ವಿರೋಧಿಕೃತು ಸಂವತ್ಸರದ ಆಶ್ವಯುಜ ಬಹುಳ ೪ ಶುಕ್ರವಾರದಲ್ಲಿ, ಚಿಕ್ಕನಹಳ್ಳೀ ಚಾಮೆ ಅರಸಿನವರ ೩ ವರ್ಷದ ಪುತ್ರರನ್ನು ಯಥಾ ಶಾಸ್ತ್ರೀಯವಾಗಿ ಸ್ವೀಕಾರ ಮಾಡಿಕೊಂಡು ಚಿಕ್ಕಕೃಷ್ಣರಾಜ ಒಡೆಯರೆಂಬದಾಗಿ ನಾಮಕರಣಮಾಡಿ, ಇವರಿಗೆ ಶಾ. ಶಕ ೧೬೫೭ನೇ ಆನಂದ ಸಂವತ್ಸರದ ಜ್ಯೇಷ್ಠ ಬಹುಳ ೧೦ ಸ್ಥಿರವಾರ ದಿವಿ ೧೧ ಗಳಿಗೆಯಲ್ಲಿ ಅರಮನೇ ನಾಮತೀರ್ಥದ ತೊಟ್ಟಿಯಲ್ಲಿ ಪಟ್ಟಾಭಿಷೇಕವನ್ನು ಮಾಡಿಸಿದರು. ಇವರೇ ಇಮ್ಮಡಿ ಕೃಷ್ಣರಾಜ ಒಡೆಯರವರು.

ದಳವಾಯಿ ದೇವರಾಜಯ್ಯನೂ ಇವನ ತಮ್ಮನೂ ಮಾಡಿದ ದ್ರೋಹ.— ಧೊರೆಗಳ ಬಾಲ್ಯದಲ್ಲಿ, ಅರಮನೆಯಲ್ಲಿ ಮಹಾ ಮಾತುಶ್ರೀಯವರು ಹೊರಗಡೆ ನಡೆಯುವ ಆಡಳಿತಗಳನ್ನು ಏನೂ ತಿಳಿಯದೆ ಅಂತಃಪುರದಲ್ಲಿಯೇ ಇದ್ದರಾದ್ದರಿಂದ, ದಳವಾಯಿ ದೇವರಾಜಯ್ಯನೂ ಇವನ ತಮ್ಮ ಕರಾಚೂರಿ ನಂಜರಾಜಯ್ಯನೂ, ತಮ್ಮ ಕಡೆಯ ಊಳಿಗದವರು ಲಂಚವನ್ನು ತೆಗೆದುಕೊಂಡು ಅವರು ಹೇಳಿದವರಿಗೆಲ್ಲಾ, ಸರ್ವಾಧಿಕಾರಿ ನಂಜರಾಜಯ್ಯನಿಗೆ ಹೇಳಿ, ಗಡಿಗಳಲ್ಲಿ ಅಮಲು ಶಿರಸ್ತೆ ಕಿಲ್ಲೆ ಮುಂತಾದ ಅಧಿಕಾರಗಳನ್ನು ಕೊಡಿಸುತ್ತಾ, ಅರಮನೆಗೆ ಬರತಕ್ಕ ಹಣದಲ್ಲಿ ಗಡಿಯೊಂದಕ್ಕೆ ತಮ್ಮ ಖಾಸಗಿ ಖರ್ಚಿಗೆ ೨—೩ ಸಾವಿರ ವರಹಗಳ ವರಿಗೂ ತರಿಸಿಕೊಳ್ಳುವದಲ್ಲದೆ, ಗಡಿಗಳಲ್ಲಿ ತಮ್ಮ ಸ್ವಂತಪಣ್ಯವೆಂಬದಾಗಿ ಹೆಸರಿಟ್ಟು, ಅರಮನೆಗೆ ಬರತಕ್ಕ ಪಾರದವಸದಲ್ಲಿ ಕೆಲವನ್ನು ತಾವೇ ತರಿಸಿ ಕೊಳ್ಳುತ್ತಾ ಇದ್ದರು. ಇವರ ಕಡೆ ಊಳಿಗದವರೂ ಸಹಾ ಇದೇರೀತಿಯಾಗಿ ಗಡಿಗಳ ತಾರತಮ್ಯವಿದ್ದಂತೆ ೧೦೦—೨೦೦ ವರಹಗಳನ್ನು ತರಿಸಿಕೊಳ್ಳುತ್ತಿದ್ದದ್ದಲ್ಲದೆ, ಪ್ರಧಾನ ವೆಂಕಟಪತಯ್ಯನು ಗಡಿಯೊಂದಕ್ಕೆ ೫೦೦—೧೦೦೦ ವರಹಗಳವರಿಗೂ ತರಿಸಿಕೊಂಡು ಸ್ವಾಮಿದ್ರೋಹವನ್ನು ಮಾಡುತ್ತಿದ್ದನು. ಈರೀತಿಯಾಗಿ ಇವರ ಆಳಿಕೆಯಲ್ಲಿ ಸರ್ವಾಧಿಕಾರಿ ನಂಜರಾಜಯ್ಯನು ೫—೬ ವರ್ಷಗಳವರಿಗೂ

ಈ ದುಷ್ಟ ಜನಗಳನ್ನು ಸೇರಿಸಿಕೊಂಡು, ವಂಚನೆಯಿಂದ ಬಹಳ ಹಣವನ್ನು ಸಂಪಾದಿಸಿ, ತನಗೆ ಸಂತಾನವಿಲ್ಲದ್ದರಿಂದ, ತನ್ನ ಅವಸಾನಕಾಲದಲ್ಲಿ ಪರಲೋಕದಲ್ಲಿ ದೃಷ್ಟಿಯಿಟ್ಟು, ತಾನು ಸಂಪಾದಿಸಿದ ದ್ರವ್ಯವು ವ್ಯರ್ಥವಾಗಬಾರದೆಂದು, ಧೊರೆಗಳ ೨ ಪಾಪಗಳಿಗೂ ೨ ಲಕ್ಷ ವರಹಗಳನ್ನು ನಜರು ಮಾಡಿ, ತನ್ನ ದೇಹ ಸಾರ್ಥಕವಾಗುವದಕ್ಕೂ ತನ್ನ ಹೆಂಡತಿ ಚೆಂಡ್ರಾಯಮ್ಮಣ್ಣಿಯ ಜೀವನಕ್ಕೂ ೫೦ ಸಾವಿರ ವರಹಗಳನ್ನು ಕೊಟ್ಟು, ೧೬೬೧ನೇ ಸಿದ್ಧಾರ್ಥಿ ಸಂವತ್ಸರದಲ್ಲಿ, ಶ್ರೀರಂಗಪಟ್ಟಣದ ಕಾವೇರೀತೀರದಲ್ಲಿ ದೈವಾಧೀನನಾದನು. ಇವನ ಕೆಲಸವನ್ನು ದಳವಾಯಿ ದೇವರಾಜಯ್ಯನು ತನ್ನ ತಮ್ಮನಾದ ಕರಾಚೂರಿ ನಂಜರಾಜಯ್ಯನಿಗೆ ಕೊಡಿಸಿದನು.

ಸರ್ವಾಧಿಕಾರಿ ನಂಜರಾಜಯ್ಯನು ತನ್ನ ಮರಣಕಾಲದಲ್ಲಿ ಧೊರೆಗಳಿಗೆ ವಿಜ್ಞಾಪನೆ ಮಾಡಿದ್ದೇನಂದರೆ :—ಮರಾಟೆಯವರು ಮೋಸಗಾರರಾದ್ದರಿಂದ ನಂಬ ಕೆಲಸವಿಲ್ಲ. ಕನ್ನಂಬಾಡಿ ವೆಂಕಟಪತಯ್ಯನಿಗೆ ಉಭಯ ವಿಚಾರದ ಚಾವಡಿಯಲ್ಲಿ ಕರಣೀಕತನ ಕೊಡುವದೇ ಹೊರತು ಪ್ರಧಾನತನದಲ್ಲಿ ನಿಲ್ಲಿಸಕೆಲಸವಿಲ್ಲ. ಮೊಗಲರ ಸಂಗಡ ದ್ವೇಷ ಮಾಡಕೆಲಸವಿಲ್ಲ. ಮದ್ದಗಿರಿ ಮಲ್ಲರಾಜಯ್ಯನು ಧೊರೆಗಳ ಅಪ್ಪಣೆಮೇರೆಗೆ ಅರಮನೆಯಿಂದ ೧೦ ಸಾವಿರ ವರಹಗಳಿಗೆ ಕ್ರಯಕ್ಕೆ ತೆಗೆದುಕೊಂಡು ಬೆಂಗಳೂರಲ್ಲಿ ಕತ್ತೀ ಗೋಪಾಲರಾಜಯ್ಯನವರ ವಶಕ್ಕೆ ಕೊಟ್ಟಿರುವವರು ಮಹಮ್ಮದ್ ಶಾಬಾಸಾಬ್ ಮತ್ತು ಇವನ ತಮ್ಮ ಹೈದರಲ್ಲೀಖಾನ್, ಇವರಲ್ಲಿ ಹೈದರಲ್ಲೀಖಾನ್ ಎಂಬವನನ್ನು ೫೦ ಕುದುರೆಗೂ ೧೦೦ ಜನಪ್ಯಾದೇರಿಗೂ ಗೊತ್ತು ಮಾಡಿ ಇಡುವದಲ್ಲದೆ, ಹೆಚ್ಚು ಅಧಿಕಾರ ಕೊಡಕೆಲಸವಿಲ್ಲ; ಹಾಗೆ ಕೊಟ್ಟರೆ ಇವನು ಬುದ್ಧಿವಂತನಾಗಿದ್ದರೂ ಇವನ ಮಗನ ದಿವಸಕ್ಕಾದರೂ ತೊಂದರೆ ಸಂಭವಿಸೀತು.

ಹೈದರಲ್ಲೀಖಾನ್, ಇವನ ಅಣ್ಣ ಮಹಮ್ಮದ್ ಶಾಬಾಸಾಬ್, ಮತ್ತು ಇವನ ಚಿಕ್ಕಪ್ಪ ಗುಲಾಂ ಅಲ್ಲೀಸಾಬ್ ಇವರನ್ನು ಅರಮನೆಗೆ ೧೦ ಸಾವಿರ ವರಹಗಳಿಗೆ ಕ್ರಯಕ್ಕೆ ತೆಗೆದುಕೊಂಡ ವಿವರ.—

ಪೂರ್ವದಲ್ಲಿ ಈ ಹೈದರಲ್ಲೀಖಾನನ ಮೂಲಪುರುಷನಾದ ಅಷರೆಫ್‌ಷಾ ಎಂಬ ಒಬ್ಬ ಸರದಾರನು ಅರಬಸ್ಥಾನ್ ದೇಶದಿಂದ ತನ್ನ ಹೆಂಗಸರು ಮಕ್ಕಳು

ಸಹಿತನಾಗಿ ವಿಜಾಪುರಕ್ಕೆ ಬಂದು ಅಲ್ಲಿ ಪಾದಷಹಾರಬಳಿ ಚಾಕರಿಗೆ ನಿಂತನು. ಈ ಸರದಾರನ ವಂಶದಲ್ಲಿ ಹುಟ್ಟಿದ ಬುಬ್ಬ ಸರದಾರನು ತನ್ನ ಹೆಂಡತಿ ಮತ್ತು ೪ ಮಂದಿ ಗಂಡುಮಕ್ಕಳೊಡನೆ, ಅಲ್ಲಿ ಜೀವನಕ್ಕೆ ಸಾಲದೆ, ಕೋಲಾರಕ್ಕೆ ಬಂದನು. ಅನಂತರದಲ್ಲಿ ಆ ಸರದಾರನೂ ಅವನ ಹೆಂಡತಿಯೂ ಕೋಲಾರದಲ್ಲಿಯೇ ತೀರಿಹೋದರು. ಆಗ ಈ ಮೂವರು ಮಕ್ಕಳೂ ಅವರ ಗೋರಿಗಳನ್ನು ಅಲ್ಲಿಯೇ ಮಾಡಿ, ತಮ್ಮ ತಮ್ಮ ಹೆಂಡಿರು ಮಕ್ಕಳೊಡನೆ ಆ ಊರನ್ನು ಬಿಟ್ಟು ಹೊರಟರು. ಇವರಲ್ಲಿ ಹಿರಿಯವನಾದ ಮಹಮ್ಮದ್ ಫತ್ತುಲ್ಲಾಸಾಬನು ಸೀರ್ಯದ ನವಾಬರಲ್ಲಿ ಚಾಕರಿಗೆ ನಿಂತು, ೫೦ ಕುದುರೆಗಳನ್ನೂ ೬೫೦ ಮಂದಿ ಬಲೇಕಾರರನ್ನೂ ಭರ್ತಿಮಾಡಿ, ಆ ಜನಗಳಿಗೆ ತಾನು ಗೊತ್ತುಗಾರನಾಗಿ, ಸೀರ್ಯದಲ್ಲಿ ಗುಮ್ಮನಹಳ್ಳಿಯೆಂಬ ಗ್ರಾಮವನ್ನು ಜಹಗೀರಾಗಿ ಸಂಪಾದಿಸಿ, ಫತ್ತೇನಾಯಕನೆಂಬ ಹೆಸರನ್ನು ಪಡೆದನು. ಇವನೇ ನವಾಬನ ತಂದೆ. ಇವನ ಹಿರಿತಮ್ಮ ಗುಲಾಂ ಹೈದರಲ್ಲೀಸಾಬನು ಶ್ರೀರಂಗಪಟ್ಟಣಕ್ಕೆ ವಳಿತವಾದ ಮದ್ಗಿರಿ ಎಂಬ ಗಡಿಯಲ್ಲಿ ಅಧಿಕಾರವನ್ನು ಮಾಡುತ್ತಿದ್ದ ಮಲ್ಲರಾಜಯ್ಯನ ಬಳಿಯಲ್ಲಿ ೨೦೦ ಪ್ಯಾದೆ ಮತ್ತು ೫೦ ಕುದುರೆಗೆ ಗೊತ್ತುಗಾರನಾಗಿ ನಿಂತನು. ಇವನಿಗೆ ಮಕ್ಕಳಿಲ್ಲ. ಇವನ ತಮ್ಮ ಗುಲಾಂ ಅಲ್ಲೀಸಾಬನು ದೊಡ್ಡಬಳ್ಳಾಪುರದ ಪಾಳ್ಯಗಾರನ ಬಳಿ ಕಿಲ್ಲೆಗೆ ಗೊತ್ತುಗಾರನಾಗಿ ಇದ್ದನು. ಇವನಿಗೂ ಮಕ್ಕಳಿಲ್ಲ. ಈ ಮೂವರಲ್ಲಿ ಫತ್ತೇನಾಯಕನಿಗೆ ಮಾತ್ರ, ಇಬ್ಬರು ಗಂಡು ಮಕ್ಕಳು: (೧) ಹಿರೀಮಗ ಶಹಬಾಸಾಬ್; (೨) ಕಿರೀಮಗ ಹೈದರಲ್ಲೀಖಾನ್ (ಈತನೇ ನವಾಬ). ಇವರ ತಂದೆಯು ತೀರಿಹೋಗುವವರಿಗೆ ತಂದೆಯು ಮಾಡಿಯಿದ್ದ ಸಾಲ ಸೀರ್ಯದ ನವಾಬರ ಬಳಿಯಲ್ಲಿ ೩,೦೦೦ ವರಹ, ಸೀರ್ಯದ ವರ್ತಕರ ಬಳಿಯಲ್ಲಿ ೬,೦೦೦ ವರಹ, ಒಟ್ಟು ೯,೦೦೦ ವರಹ. ಈ ೯,೦೦೦ ವರಹ ಸಾಲದ ತಗಾದೆಯು ಬಹಳವಾದ್ದರಿಂದ, ಇವರು ಈ ಹಣಕ್ಕಾಗಿ ತಮ್ಮ ಹೆಂಗಸರು ಮಕ್ಕಳನ್ನು ಒಲುಕೊಟ್ಟು, ದೊಡ್ಡಬಳ್ಳಾಪುರಕ್ಕೆ ಬಂದು, ತಮ್ಮ ೨ನೇ ಚಿಕ್ಕಪ್ಪನಾದ ಗುಲಾಂ ಅಲ್ಲೀಸಾಬನಿಗೆ ಈ ವೃತ್ತಾಂತವನ್ನು ಹೇಳಿದರು. ಈ ಗುಲಾಂ ಅಲ್ಲಿಯು ತಾನು ದೊಡ್ಡಬಳ್ಳಾಪುರದ ಪಾಳ್ಯಗಾರನಲ್ಲಿ ೧,೦೦೦ ವರಹ ಸಾಲ

ಮಾಡಿರುತ್ತೇನೆಂದು ಅವರ ಸಂಗಡ ಹೇಳಿ, ಈ ಸಾಲಗಳು ತೀರತಕ್ಕ ಬಗ್ಗೆ ಇವರನ್ನು ಕರೆದುಕೊಂಡು ಮದ್ದಗಿರಿಗೆ ಬಂದು, ಅಲ್ಲಿ ತನ್ನ ಅಣ್ಣನಾದ ಗುಲಾಂ ಹೈದರಲ್ಲೀಸಾಹೇಬನಿಗೆ ಈ ವಿವರಗಳನ್ನು ಹೇಳಿದನು. ಆ ಗುಲಾಂ ಹೈದರಲ್ಲೀಸಾಹೇಬನು, ಮದ್ದಗಿರಿಯಲ್ಲಿ ಅಧಿಕಾರವನ್ನು ಮಾಡುತ್ತಿದ್ದ ಮಲ್ಲರಾಜಯ್ಯನ ಬಳಿಗೆ ಇವರನ್ನು ಕರೆದುಕೊಂಡುಹೋಗಿ, ಇವರ ಸಾಲದ ವೃತ್ತಾಂತವನ್ನೆಲ್ಲಾ ಹೇಳಿ "ಈ ಸಾಲವನ್ನು ನೀವು ಧೊರೆಗಳಿಗೆ ತಿಳಿಸಿ ತೀರಿಸಿ ಕೊಟ್ಟರೆ, ನಾವು ಧೊರೆಗಳ ಪಾದದಲ್ಲಿ ಯಾವ ಚಾಕರಿ ಅಪ್ಪಣೆಯಾದರೂ, ಸ್ವಾಮಿದ್ರೋಹವಿಲ್ಲದೆ ನಿರ್ವಂಚನೆಯಿಂದ ನಡೆದುಕೊಳ್ಳುತ್ತೇವೆ" ಎಂದು ಪ್ರಮಾಣ ಮಾಡಿಕೊಟ್ಟರು. ಆ ಮಲ್ಲರಾಜಯ್ಯನು ಇವರು ಶೂರರೆಂಬುದಾಗಿಯೂ, ಮುಂದೆ ಯಾವ ಕೆಲಸವನ್ನು ಕೊಟ್ಟರೂ ನಿರ್ವಹಿಸುವರೆಂಬುದಾಗಿಯೂ ತಿಳಿದು, ಧೊರೆಗಳ ಸನ್ನಿಧಿಗೆ ಅರ್ಜಿಯ ಮೂಲಕ ಬಿನ್ನಹ ಮಾಡಿಕೊಂಡು, ಧೊರೆಗಳ ಅಪ್ಪಣೆಯಾದಂತೆ ಅರಮನೆಯಿಂದ ೧೦ ಸಾವಿರ ವರಹಗಳನ್ನು ಕೊಟ್ಟು ಇವರನ್ನು ಕೊಂಡುಕೊಂಡನು. ಅನಂತರದಲ್ಲಿ ಇವರು ತಮ್ಮ ತಮ್ಮ ಸಾಲಗಳನ್ನು ತೀರಿಸಿ, ಓಲುಕೊಟ್ಟು ಇದ್ದವರನ್ನು ಬಿಡಿಸಿಕೊಂಡು ಬಂದು, ಮದ್ದಗಿರಿಯಲ್ಲಿ ಗುಲಾಂಹೈದರಲ್ಲೀ ಬಳಿಯಲ್ಲಿಯೇ ನಿಂತರು. ಅನಂತರ ಈ ಗುಲಾಂಹೈದರಲ್ಲಿಯು ತೀರಿಹೋದನು. ಆ ಬಳಿಕ ಮಲ್ಲರಾಜಯ್ಯನು ಧೊರೆಗಳ ಅಪ್ಪಣೆಮೇರೆಗೆ ಶಹಬಾಸಾಹೇಬನಿಗೆ ಅದೇ ಚಾಕರಿಯನ್ನು ನೇಮಕ ಮಾಡಿಸಿ, ಬೆಂಗಳೂರಲ್ಲಿ ಅಧಿಕಾರವನ್ನು ಮಾಡುತ್ತಿದ್ದ ಕತ್ತೀಗೋಪಾಲರಾಜಯ್ಯನವರ ಬಳಿಗೆ, ಇವನನ್ನೂ ಇವನ ತಮ್ಮ ಹೈದರಲ್ಲೀಖಾನನನ್ನೂ ಶೈನ್ಯಾತಿಗೆ ಕಳುಹಿಸಿಕೊಟ್ಟನು.

ಹೈದರನಾಯಕನು ದೇವಂಹಳ್ಳಿಯನ್ನು ಸಾಧಿಸಿದ್ದು.—ಕತ್ತೀಗೋಪಾಲರಾಜಯ್ಯನವರು ದೇವಂಹಳ್ಳಿಗೆ ಮುತ್ತಿಗೆಯನ್ನು ಹಾಕಿ, ಶ್ರೀರಂಗಪಟ್ಟಣದಿಂದ ಸರ್ವಾಧಿಕಾರಿ ಕರಾಚೂರಿ ನಂಜರಾಜಯ್ಯನವರನ್ನು ಕರೆಯಿಸಿಕೊಂಡು, ೯ ತಿಂಗಳವರಿಗೂ ಯುದ್ಧ ಮಾಡುವ ಕಾಲದಲ್ಲಿ, ಈ ಶಹಬಾಸಾಹೇಬನು ಸೋತದ್ದರಿಂದ, ಈತನ ತಮ್ಮನಾದ ಮುಂದೆ ನವಾಬನೆನಿಸಿಕೊಳ್ಳುವ ಫತ್ತೇನಾಯಕನ ಮಗನಾದ ಹೈದರನಾಯಕನು ಶೂರ ಜನರ

ಎದುರಿಗೆ ಪರೀಕ್ಷೆಯನ್ನು ಕೊಟ್ಟು, ಸನ್ಮಾನಗಳನ್ನು ಪಡೆದು, ಶೂರನೆನಿಸಿಕೊಂಡು, ತನ್ನ ಅಣ್ಣನ ಕೆಲಸದಲ್ಲಿ ನಿಂತು, ಶಾ. ೧೬೬೮ನೇ ಅಕ್ಷಯ ಸಂವತ್ಸರದಲ್ಲಿ ದೇವಂಡಹಳ್ಳಿಯನ್ನು ಸಾಧಿಸಿ, ದಿನೇದಿನೇ ಪ್ರವರ್ಧಮಾನನಾಗುತ್ತಾ ಬಂದನು.

ದೇವರಾಜಯ್ಯನ ಮೋಸ.—ಶ್ರೀರಂಗಪಟ್ಟಣದಲ್ಲಿ ದಳವಾಯಿ ದೇವರಾಜಯ್ಯನು ಪ್ರಧಾನ ವೆಂಕಟಪತಯ್ಯನ ಕೈಯಲ್ಲಿ ೪ ಲಕ್ಷ ವರಹಗಳ ದಂಡ ತೆಗೆದುಕೊಂಡು ತನ್ನ ಮನೆಗೆ ತೆಗದುಕೊಂಡು, ಅವನಿಗೆ ಪ್ರಧಾನತನವನ್ನು ತೆಗೆದು, ಬಾಗಿಲಕಂದಾಚಾರದ ಚಾವಡಿಯಲ್ಲಿ ಯಿದ್ದ ೮೦ ವರ್ಷ ವಯಸ್ಸುಳ್ಳ ಚನ್ನಪ್ಪಯ್ಯನೆಂಬವನಿಗೆ ನೇಮಕ ಮಾಡಿಸಿದನು.

ಹೈದರನಾಯಕನು ೧೧ ಒಂಟೆಗಳ ಮೇಲಣ ಅಕ್ಬರ್ ಮೊಹರುಗಳನ್ನು ತಂದದ್ದು.—ಹೀಗಿರುವಲ್ಲಿ ದಿಳ್ಳೀ ಪಾದಷಹರ ಕಡೆಯಲ್ಲಿ ವಜೀರನಾಗಿದ್ದ ನಾಸರಜಂಗನು ಅರ್ಕಾಡಿಗೆ ಮುತ್ತಿಗೆ ಹಾಕುವ ನಿಮಿತ್ತವಾಗಿ, ಲಕ್ಷಾಂತರ ಸೈನ್ಯದೊಡನೆ ಬರುತ್ತಿದ್ದನು. ಇವನು ಶ್ರೀರಂಗಪಟ್ಟಣದ ಧೊರೆಗಳಿಗೆ “ ನನಿಗೆ ಸಹಾಯಕ್ಕಾಗಿ ನಿಮ್ಮ ಕಡೆಯ ಸೇನೆಯು ಬರಬೇಕು ” ಎಂದು ಹೇಳಿ ಕಳುಹಿಸಿದನು. ಧೊರೆಗಳು ಅದೇ ಮೇರೆಗೆ, ತಮ್ಮಲ್ಲಿ ಬುದ್ಧಿವಂತನಾಗಿಯೂ ಪರಾಕ್ರಮಶಾಲಿಯಾಗಿಯೂ ಇದ್ದ ಹೈದರನಾಯಕನನ್ನೂ ಬರಕ್ಕೀ ವೆಂಕಟರಾಯನೆಂಬವನನ್ನೂ ಸೈನ್ಯದೊಡನೆ ಕಳುಹಿಸಿಕೊಟ್ಟರು. ನಾಸರುಜಂಗನು ಅರ್ಕಾಡು ನವಾಬನನ್ನು ಓಡಿಸಿಬಿಟ್ಟು, ಅವನ್ನು ತನ್ನ ಸ್ವಾಧೀನ ಮಾಡಿಕೊಂಡು, ದಿಳ್ಳಿಗೆ ಹಿಂತಿರುಗಿ ಹೋಗುತ್ತಿದ್ದನು. ಆಗ ಅರ್ಕಾಡು ಚಂದಾಸಾಹೇಬನು ಕರ್ನೂಲು ನವಾಬನ ಬಳಿಗೆ ಹೇಳಿ ಕಳುಹಿಸಲು, ಆ ನವಾಬನು ಸೈನ್ಯವನ್ನು ತೆಗೆದುಕೊಂಡು ಬಂದು, ರಾಜಕೋಟೆ ಎಂಬ ಸ್ಥಳದಲ್ಲಿ ಯುದ್ಧ ಮಾಡಿ, ಆ ನಾಸರುಜಂಗನನ್ನು ಹೊಡೆದು ಹಾಕಿ, ಅವನ ದಂಡಿನಲ್ಲಿದ್ದ ೧೧ ಒಂಟೆಗಳ ಮೇಲೆ ಇದ್ದ ಅಕ್ಬರ್ ಮೊಹರ ಹೇರನ್ನು ತೆಗೆದು ಕೊಂಡನು. ಆಗ ಬರಕ್ಕೀ ವೆಂಕಟರಾಯನ ಸಂಗಡ ಹೋಗಿಯಿದ್ದ ಹೈದರನಾಯಕನು ಆ ಜನಗಳನ್ನು ಹೊಡೆದು ಆ ಮೊಹರಿನ ಹೇರುಗಳನ್ನು ತೆಗದುಕೊಂಡು ಶ್ರೀರಂಗಪಟ್ಟಣಕ್ಕೆ ಬರಲು, ಈ ವರ್ತಮಾನವನ್ನು ತಿಳಿದ ದಳವಾಯಿ ದೇವರಾಜಯ್ಯನು ಆ ಹಣ ತನಗೆ ಬರ

ಬೇಕೆಂದು ಕೇಳಿದನು. ಹೈದರನಾಯಕನು ಅವನಿಗೆ ಕೊಡಬೇಕೆಂದು ಧೊರೆಗಳಿಗೆ ನಂಬರು ಮಾಡಿದ್ದರಿಂದ, ಧೊರೆಗಳು ೧೦ ಬಂಟೇ ಮೋಹರನ್ನು ಸರಕಾರಕ್ಕೆ ತೆಗೆದುಕೊಂಡು, ಉಳಿದ ೩ ಹೇರನ್ನು ಹೈದರನಾಯಕನಿಗೆ ಇನಾಮವಾಗಿ ಕೊಟ್ಟರು.

ಚಂದಾಸಾಹೇಬನ ಗತಿ.—ಅನಂತರ ಧೊರೆಗಳು ತಮಗೆ ಸೇರಿದ ತಿರುಚನಾಪಳ್ಳಿಯನ್ನು ಆರ್ಕಾಟು ಚಂದಾಸಾಹೇಬನು ಕಟ್ಟಿಕೊಂಡನೆಂಬ ವರ್ತಮಾನವನ್ನು ಕೇಳಿ, ಆ ತಿರುಚನಾಪಳ್ಳಿಯನ್ನು ಪುನಃ ಸಾಧಿಸಿಕೊಂಡು ಬರುವದಕ್ಕೆ, ಕರಾಚೂರಿ ನಂಜರಾಜ ಅರಸಿನವರ ಸಂಗಡ ಜಮಾದಾರ ಹೈದರನಾಯಕನನ್ನು ಕಳುಹಿಸಿಕೊಟ್ಟರು. ಇವರು ತಿರುಚನಾಪಳ್ಳಿಗೆ ಹೋಗಿ ಮುತ್ತಿಗೆಯನ್ನು ಹಾಕಿ ಯುದ್ಧ ಮಾಡುತ್ತಿರಲು, ಶ್ರೀರಂಗಪಟ್ಟಣದ ಧೊರೆಗಳ ಕಟಾಕ್ಷಕ್ಕೆ ಪಾತ್ರನಾಗಬೇಕೆಂದು, ಚನ್ನಪಟ್ಟಣದ ಮಹಮ್ಮದಲ್ಲೀಖಾನನು ಪಿತೂರಿಯಿಂದ ಆರ್ಕಾಟು ಚಂದಾಸಾಹೇಬನನ್ನೂ ಅವನಕಡೆ ದಿವಾನ್ ಶೇಷಗಿರಿರಾಯನನ್ನೂ ಸಹಾ ತನ್ನ ಗುಡಾರಕ್ಕೆ ಕರೆಯಿಸಿ, ಇಬ್ಬರ ತಲೆಯನ್ನೂ ಹೊಡೆಯಿಸಿ, ಅರಸಿನವರ ಮುಖಾಂತರ ಶ್ರೀರಂಗಪಟ್ಟಣಕ್ಕೆ ಕಳುಹಿಸಿ ಕೊಟ್ಟನು. ಆಗ ಧೊರೆಗಳು ಈ ೨ ತಲೆಯನ್ನೂ ಶ್ರೀರಂಗಪಟ್ಟಣದ ಕೋಟೆ ಬಾಗಲಿಗೆ ಕಟ್ಟಿಸಿದರು.

ಹೈದರನಾಯಕನು ಕರಾಚೂರಿ ನಂಜರಾಜಯ್ಯನನ್ನು ಬಿಡಿಸಿದ್ದು.—ಅನಂತರದಲ್ಲಿ ಮಹಮ್ಮದಲ್ಲೀಖಾನನು ತಿರುಚನಾಪಳ್ಳಿಯನ್ನು ತನ್ನ ಸ್ವಾಧೀನ ಮಾಡಿಕೊಂಡು ಕರಾಚೂರಿ ನಂಜರಾಜಯ್ಯನನ್ನು ಕೋಟೆಯೊಳಕ್ಕೆ ಬರಬೇಕೆಂದು ವಂಚನೆಯಿಂದ ಹೇಳಿದನು. ಆಗ ಜಮಾದಾರ ಹೈದರಲ್ಲಿಖಾನನು “ ಈಗ ವೇಳೆಯಲ್ಲ. ಕೋಟೆಯೊಳಕ್ಕೆ ಹೋಗಬೇಡಿ ” ಎಂದು ಹೇಳಿದಾಗ್ಯೂ ಅವನ ಮಾತನ್ನು ಮನಸ್ಸಿಗೆ ತಾರದೆ, ತಿರುಚನಾಪಳ್ಳಿಯ ಮುಖ್ಯಮುಖದ ಬಾಗಲಿಂದ ಕೋಟೆಯ ಜೇಬಿಯೊಳಕ್ಕೆ ಸ್ವಲ್ಪ ಸೈನ್ಯದೊಡನೆ ಹೋದನು. ಆಗ ಈ ಮಹಮ್ಮದಲ್ಲೀಖಾನನು ಹೊರಬಾಗಿಲು ಒಳಬಾಗಿಲುಗಳನ್ನು ಹಾಕಿಸಿ, ಜೇಬಿಯೊಳಗೆ ನಂಜರಾಜಯ್ಯನನ್ನು ನಿಲ್ಲಿಸಿಕೊಂಡು ಯುದ್ಧ ಮಾಡುತ್ತಿದ್ದನು. ಆ ಸಮಯದಲ್ಲಿ

ಇವರ ಸಂಗಡ ಹೋಗಿ ಯಿದ್ದ ಹೈದರನಾಯಕನು ಬಹಳ ಯುದ್ಧ ಮಾಡಿ, ಆ ಜನಗಳನ್ನು ಹೊಡೆದು, ಈ ಕರಾಚೂರಿ ನಂಜರಾಜಯ್ಯನನ್ನು ಬಿಡಿಸಿಕೊಂಡು ಬಂದನು.

ಹೈದರಲ್ಲೀಖಾನನು ಮಹಮ್ಮದಲ್ಲೀಖಾನನನ್ನು ಗೆದ್ದು ದಂಡಿನ ಜನಗಳನ್ನು ಸಮಾಧಾನಪಡಿಸಿದ್ದು.—ಅನಂತರದಲ್ಲಿ ಚನ್ನಪಟ್ಟಣದ ಮಹಮ್ಮದಲ್ಲೀಖಾನನು "ಶ್ರೀರಂಗಪಟ್ಟಣದ ಧೊರೆಗಳ ಸೈನ್ಯವು ಬಹಳವಾಗಿ ಬಂದಿದೆ. ಅವರಲ್ಲಿ ಶೂರನಾದ ಹೈದರಲ್ಲೀಖಾನನೆಂಬವನು ಇದ್ದಾನೆಂದು ಕೇಳಿ ಇರುತ್ತೇವೆ. ಈಗ ಇವರನ್ನು ಹೊಡೆದು ಓಡಿಸಬೇಕಾದರೆ ಇಂಗ್ಲಿಷರ ಸೈನ್ಯ ಹೊರತು ಆಗುವದಿಲ್ಲ" ಎಂದು ತಿಳಿದು, ಇಂಗ್ಲಿಷರ ಸಹಾಯ ಮಾಡಿಕೊಂಡುಬಂದು, ೮–೧೦ ಸಾರಿ ಯುದ್ಧ ಮಾಡಿದನು. ಆ ಸಮಯದಲ್ಲಿ, ಹೈದರಲ್ಲೀ ಖಾನನು ಧೊರೆಗಳ ಕಡೆ ಇದ್ದ ಸೈನ್ಯ ಸಾಲದೆ ಇದ್ದದ್ದರಿಂದ, ನಾಸರಜಂಗನ ಯುದ್ಧಕಾಲದಲ್ಲಿ ಧೊರೆಗಳು ತನಗೆ ಇನಾಮಾಗಿ ಕೊಟ್ಟದ್ದ ದ್ರವ್ಯದಲ್ಲಿ ಬಹಳ ಸೇನೆಯನ್ನು ಕಟ್ಟಿ, ಮೂರು ವರ್ಷಗಳ ವರಿಗೂ ಯುದ್ಧ ಮಾಡಿ, ಆ ಮಹಮ್ಮದಲ್ಲೀಖಾನನನ್ನು ಹೊಡೆದು ಓಡಿಸಿ, ಯುವ ಸಂವತ್ಸರದಲ್ಲಿ ತಿರುಚನಾಪಳ್ಳಿಯನ್ನು ಸ್ವಾಧೀನ ಮಾಡಿಕೊಂಡು, ಶ್ರೀರಂಗಪಟ್ಟಣಕ್ಕೆ ಹೊರಟು ಬರುತ್ತಿದ್ದನು. ಮಾರ್ಗದಲ್ಲಿ ಧೊರೆಗಳ ಕಡೆ ದಂಡಿನ ಜನಗಳು ತಮಗೆ ಸಂಬಳವನ್ನು ಅಲ್ಲಿಯೇ ಕೊಡಬೇಕೆಂದು ಕರಾಚೂರಿ ನಂಜರಾಜ ಅರಸಿನವರನ್ನು ತಡೆದರು. ಆಗ ಅವರು ಈ ಜನಗಳನ್ನು ಸಮಾಧಾನ ಪಡಿಸುವದಕ್ಕೆ ಸಾಮರ್ಥ್ಯವಿಲ್ಲದೆ, ಹಿಂದುಮುಂದೆ ತೋರದೆ, ಈ ಹೈದರಲ್ಲೀಖಾನನನ್ನು ಕರೆದು, ನೀನು ಬುದ್ಧಿವಂತನಾದ್ದರಿಂದ ಈ ಜನರನ್ನು ಸಮಾಧಾನಮಾಡು ಎಂದು ಹೇಳಿದರು. ಆಗ ಹೈದರಲ್ಲೀಖಾನನು ಕಣವೇ ಕಳಗೆ ಅಮಲು ಮಾಡುತ್ತಿದ್ದ ನಾಮಕಲ್ಲುರಾಮರಾಡ್ಡಿ ಮುಂತಾದವರನ್ನು ಕರೆಯಿಸಿ, ಅರಸಿನವರಿಂದ ಕೆಲವು ಸನ್ಮಾನಗಳನ್ನು ಮಾಡಿಸಿ, ಕೆಲವರನ್ನು ನಿಗ್ರಹಿಸಿ, ಬಾಕಿತಕ್ಕ ಹಣ ನಿಲ್ಲುವದಕ್ಕೆ ಕಾರಣವೇನೆಂದು ತನಿಖೆಮಾಡಿ, ಅವರ ಕಡೆಯಿಂದ ೫–೬ ಲಕ್ಷ ವರಹಗಳ ಪರ್ಯಂತರಕ್ಕೂ ವಸೂಲು ಮಾಡಿ, ಸೈನ್ಯದವರಿಗೆ ಬಟವಾಡೆ ಮಾಡಿಸಿ, ಅರಸಿನವರನ್ನು ಕರೆದುಕೊಂಡು ಶ್ರೀರಂಗಪಟ್ಟಣಕ್ಕೆ ಹೊರಟು ಬಂದನು.

ನವಾಬನು ದಿಂಡಗಲ್ಲಿಗೆ ಹೊರಟು ಹೋದದ್ದು.—ಅನಂತರದಲ್ಲಿ ಕರಾಚೂರಿ ನಂಜರಾಜ ಅರಸಿನವರು, ಈ ಹೈದರಲ್ಲೀಖಾನನು ತಿರುಚನಾಪಳ್ಳಿ ಪ್ರಾಂತ್ಯದಲ್ಲಿ ಮೂರು ವರ್ಷಗಳವರೆಗೂ ಯುದ್ಧಮಾಡಾಗ, ಸರಕಾರದ ಸೈನ್ಯ ಸ್ವಲ್ಪದ್ದರಿಂದ ತನ್ನ ಸ್ವಂತ ದ್ರವ್ಯದಿಂದ ಹೆಚ್ಚಾಗಿ ಸೈನ್ಯವನ್ನು ಕಟ್ಟಿ ಬಹಳ ಯುದ್ಧ ಮಾಡಿ ತಿರುಚನಾಪಳ್ಳಿಯನ್ನು ಸ್ವಾಧೀನ ಪಡಿಸಿಕೊಂಡ ವಿವರವನ್ನೂ, ಸಂಬಳಕ್ಕೆ ದಂಗೆ ಮಾಡಿದ ದಂಡಿನ ಜನಗಳಿಗೆ ಸಂಬಳಗಳನ್ನು ಕೊಟ್ಟು ಸಮಾಧಾನ ಮಾಡಿದ ವಿವರವನ್ನೂ ಸಹ ಧೊರೆಗಳಿಗೆ ಅರಿಕೆ ಮಾಡಿದನು. ಧೊರೆಗಳು ಈ ಹೈದರಲ್ಲೀಖಾನನು ಮಾಡಿದ ಮೇಹನತ್ತನ್ನು ಚಿತ್ತಕ್ಕೆ ತಂದು, ಬಹದರನಂಬದಾಗಿ ಕಿತಾಬನ್ನು ಕೊಟ್ಟು, ಬಹಳ ಸನ್ಮಾನಗಳನ್ನು ಮಾಡಿ, ಇವನು ಕೊಟ್ಟ ದಂಡಿನ ಹಣದ ಬಗ್ಗೆ, ಕಾವೇರಿಗೆ ಈಚೆ ಧಾರಾಪುರ ಸತ್ಯಮಂಗಲಕ್ಕೆ ಸಹ ೩ ಲಕ್ಷ ಗೋಪಾಲಿ ವರಹಗಳ ತನಿಖೆ ಸಿರೂಪವನ್ನು ಬರೆಯಿಸಿ ಕೊಟ್ಟಿದ್ದಲ್ಲದೆ, ಇವನು ಕಟ್ಟಿದ ದಂಡಿನ ಖರ್ಚಿನ ಬಗ್ಗೆ ದಿಂಡಕಲ್ಲು ಮುಂತಾದ ೨ ಲಕ್ಷ ಗೋಪಾಲಿ ವರಹಗಳ ಗಡಿಗಳನ್ನು ನಿಗದಿಸಿ, ಸಿರೂಪವನ್ನು ಬರೆಯಿಸಿ ಕೊಟ್ಟು, ಸರಕಾರದ ಕೆಲಸಬಿದ್ದ ವೇಳೆಯಲ್ಲಿ ಬರುವಂತೆ ಕಟ್ಟುಮಾಡಿಸಿ, ಶಾ. ೧೬೭೮ನೇ ಯುವ ಸಂವತ್ಸರದ ಶ್ರಾವಣ ಮಾಸದಲ್ಲಿ ಬಹದರಹೈದರಲ್ಲೀಖಾನನನ್ನು ದಿಂಡಗಲ್ಲಿಗೆ ಕಳುಹಿಸಿ ಕೊಟ್ಟರು.

ಧೊರೆಗಳವರಿಗೂ ದಳವಾಯಿ ದೇವರಾಜಯ್ಯನಿಗೂ ಮನಸ್ತಾಪ ಬಂದ ವಿಚಾರ.—ಧೊರೆಗಳು "ದಳವಾಯಿ ದೇವರಾಜಯ್ಯನೂ ಇವನ ತಮ್ಮ ಕರಾಚೂರಿ ನಂಜರಾಜಯ್ಯನೂ ಇವರ ಕಡೆ ಅಧಿಕಾರ ಮಾಡುತ್ತಿದ್ದ ಜನರೂ ಮಾಡುತ್ತಿದ್ದ ಸ್ವಾಮಿದ್ರೋಹ ವಂಚನೆ ದುರ್ನಡತೆಗಳನ್ನು ಚನ್ನಾಗಿ ವಿಚಾರಣೆಮಾಡಿದ, ನಮ್ಮ ಅಣ್ಣಂದಿರಾದ ೧೮ ಶ್ರೀಗಳು ಚಾಮರಾಜ ಒಡೆಯರವರು, ಇವರ ಅಧಿಕಾರಗಳನ್ನು ತೆಗೆದು, ನಿರ್ವಂಚನೆಯಿಂದ ನಡೆದುಕೊಳ್ಳುವ ಬುದ್ಧಿವಂತರಿಗೆ ಅಧಿಕಾರಗಳನ್ನು ನೇಮಿಸಿ ಧರ್ಮದಿಂದ ರಾಜ್ಯಪರಿಪಾಲನೆಯನ್ನು ಮಾಡುತ್ತಿದ್ದರು. ಆ ಸಮಯದಲ್ಲಿ ಏನೂ ಅರಿಯದೆ ಅಂತಃಪುರದಲ್ಲಿರುವ ನಮ್ಮ ಮಹಾ ಮಾತುಶ್ರೀಯವರಿಗೂ ನಮ್ಮ ಅಣ್ಣಂದಿ

ರಿಗೂ ಮನಸ್ತಾಪವನ್ನುಂಟುಮಾಡಿ, ನಮ್ಮ ಅಣ್ಣಂದಿರಿಗೆ ಸಹಿಸಲಶಕ್ಯವಾದ, ಕೇಳುವವರಿಗೂ ಕರ್ಣಕಠೋರವಾಗಿರುವ, ಮಾಡಬಾರದ ಸ್ವಾಮಿದ್ರೋಹವನ್ನು ಮಾಡಿದ್ದಲ್ಲದೆ, ಈಗಲೂ ಪೂರ್ವದಂತೆ ಅದೇಪ್ರಕಾರ ಮಾಡಿಕೊಂಡು ಬಂದಿರುತ್ತಾರೆ" ಎಂದು ಅವರ ಅಪರಾಧಗಳನ್ನು ಪರಾಂಬರಿಸಿದ್ದರಿಂದ ಧೊರೆಗಳಿಗೂ ದೇವರಾಜಯ್ಯ ಮತ್ತು ಅವನ ತಮ್ಮನಿಗೂ ಮನಸ್ತಾಪವು ಬಂತು.

ದೇವರಾಜಯ್ಯನಿಗೂ ಇವನ ತಮ್ಮನಿಗೂ ಮನಸ್ತಾಪ ಬಂದದ್ದು.— ಧೊರೆಗಳವರು ಸ್ವಜನಕ್ಕೆ ಅಧಿಕಾರವನ್ನು ಕೊಟ್ಟದ್ದರಿಂದ ಹೀಗಾಯಿತೆಂದು ನಿಶ್ಚಯಿಸಿ, ಅವರ ಅಧಿಕಾರವನ್ನು ತಗೆಯಬೇಕೆಂಬದಾಗಿ ಯೋಚನೆ ಮಾಡುತ್ತಿದ್ದರು. ಈ ಸಮಾಚಾರವು ಅವರಿಬ್ಬರಿಗೂ ತಿಳಿಯಿತು. ಕರಾಚೂರಿ ನಂಜರಾಜಯ್ಯನು "ಧೊರೆಗಳ ಬಳಿ ಇರುವ ಆಪ್ತಜನರನ್ನು ನಿಗ್ರಹಿಸಿದ ಹೊರತು ನಮಗೆ ಎಂದಿಗೂ ಕ್ಷೇಮವಾಗಲಾರದು" ಎಂದು ತನ್ನ ಅಣ್ಣನಾದ ದೇವರಾಜಯ್ಯನ ಸಂಗಡ ಆಲೋಚಿಸಿದನು. ಆಗ ದೇವರಾಜಯ್ಯನು ಪೂರ್ವದಲ್ಲಿ ೧೮ ತಿಂಗಳ ಚಾಮರಾಜ ಒಡೆಯರವರ ಆಳಿಕೆಯಲ್ಲಿಯೇ ನನಗೆ ಬಹಳ ಅಪಯಶಸ್ಸು ಬಂದುಯಿದೆ. ಈಗ ಇಂಥಾ ಕೆಲಸವನ್ನು ಮಾಡಬಾರದು" ಎಂದು ಹೇಳಿದನು. ಆದ್ದರಿಂದ ಆ ಅಣ್ಣ ತಮ್ಮಂದಿರಿಬ್ಬರಿಗೂ ವಿರೋಧವುಂಟಾಯಿತು.

ನಂಜರಾಜಯ್ಯನು ಅರಮನೆ ಬಾಗಲಿಗೆ ಗುಂಡು ಹೊಡಿಸಿದ್ದು.— ಅನಂತರದಲ್ಲಿ ಕರಾಚೂರಿ ನಂಜರಾಜಯ್ಯನು ತಾಪು ಮಾಡಿದ ಸ್ವಾಮಿದ್ರೋಹ ಮುಂತಾದ ವಂಚನೆಗಳನ್ನು ಮನಸ್ಸಿಗೆ ತಾರದೆ, ಧೊರೆಗಳವರು ತನಗೆ ಆಳಿಯುದಿರಾದ್ದರಿಂದ ತಾನೇ ಸಕಲ ಕಾರ್ಯಗಳಲ್ಲಿಯೂ ಮುಖಂಡನಾಗಿ ಇರಬೇಕೆಂದು, ಮುಂದೆ ತನಗೆ ಬರುವ ಅಪಯಶಸ್ಸನ್ನು ತಿಳಿದುಕೊಳ್ಳದೆ, ದ್ರವ್ಯದ ಮೇಲಣ ಆಸೆಯಿಂದ, ಬಹದ್ದರ ಹೈದರಲ್ಲೀಖಾನನು ಶ್ರೀರಂಗಪಟ್ಟಣದಲ್ಲಿ ಇಲ್ಲದೆ ದಿಂಡಿಗಲ್ಲಿಗೆ ಹೋಗಿರುವ ಕಾಲದಲ್ಲಿ, ಅರಮನೇ ಜನಗಳ ಮೇಲಣ ಅಸೂಯೆಯಿಂದ, ತನಗೆ ವಿರೋಧಿಗಳಾದ ಜನಗಳು ಧೊರೆಗಳ ಸಮೀಪದಲ್ಲಿ ಇರುವ ಕಾಲದಲ್ಲಿ ಆ ಜನಗಳನ್ನು ನಿಗ್ರಹಿಸ

ಬೇಕೆಂದು, ಅರಮನೇ ಬಾಗಲಿಗೆ ೪ ಫಿರಂಗಿಗಳನ್ನು ಎತ್ತಿ ಕಟ್ಟಿ ಗುಂಡುಗಳನ್ನು ಹೊಡಿಸಿದನು. ಆಗ ಧೊರೆಗಳವರು ತಮ್ಮ ಕಡೇ ಜನಗಳನ್ನು ಒಳಗೆ ಇಟ್ಟು, ತಾವು ಈಚೆಗೆ ಬಂದು, ತಮ್ಮ ಪರಾಕ್ರಮದಿಂದ ಆ ನಂಜರಾಜಯ್ಯನ ಕಡೇ ಜನಗಳನ್ನು ಹೊಡಿಸಿ, ಕೆಲವರಿಗೆ ಕಿವಿ ಮೂಗುಗಳನ್ನು ಕುಯಿಸಿ, ಕೆಲವರಿಗೆ ಪ್ರಾಣಾಂತ ಶಿಕ್ಷೆಯನ್ನು ವಿಧಿಸಿದರು.

ದೇವರಾಜಯ್ಯನ ಪಲಾಯನ ಮತ್ತು ಆತನ ಮೋಸ.—ದೇವರಾಜಯ್ಯನು ತನ್ನ ತಮ್ಮನ ಕಡೇ ಜನಗಳಿಗೆ ಆದ ದುರವಸ್ಥೆಯನ್ನು ಕೇಳಿ, ತಾನು ಇನ್ನು ಮೇಲೆ ಅಲ್ಲಿ ಇದ್ದರೆ ತನ್ನ ಪರಿಣಾಮವಾಗಲಾರದೆಂದು ತಿಳಿದು, ಧೊರೆಗಳಿಂದ ಅಪ್ಪಣೆಯನ್ನು ತೆಗೆದುಕೊಳ್ಳುವದಕ್ಕೆ ಮುಖವಿಲ್ಲದೆ, ೧೦೦ ಕುದುರೆಯನ್ನೂ ೩೦೦ ಬಾರನ್ನೂ ತೆಗೆದುಕೊಂಡು, ಪ್ರಧಾನತನದಲ್ಲಿ ಇದ್ದ ಆಪ್ತನಾದ ಚನ್ನಪ್ಪಯ್ಯನನ್ನು ಸಂಗಡ ಕರೆದುಕೊಂಡು, ಸತ್ಯಮಂಗಲಕ್ಕೆ ಹೊರಟುಹೋದನು. ಆಗ ಧೊರೆಗಳವರು ಪೂರ್ವದಲ್ಲಿ ಪ್ರಧಾನತನವನ್ನು ಮಾಡುತ್ತಾ ಇದ್ದ ಕನ್ನಂಬಾಡಿ ವೆಂಕಟಪತಯ್ಯನನ್ನು ಕರೆಯಿಸಿ ಪೂರ್ವದಂತೆ ಪ್ರಧಾನತನವನ್ನು ನೇಮಕ ಮಾಡಿಸಿದರು. ದೇವರಾಜಯ್ಯನು ಸತ್ಯಮಂಗಲಕ್ಕೆ ಹೋಗಿ, ಬಹದ್ದರ ಹೈದರಲ್ಲೀಖಾನನ ದಂಡಿನ ಖರ್ಚಿಗಾಗಿ ತನಿಖೇ ಬರೆಯಿಸಿಕೊಟ್ಟು, ಕಣಿವೇ ಕೆಳಗಣ ಸೀಮೆ ಈರೋಡು ಧಾರಾಪುರ ಸತ್ಯಮಂಗಲ ಮುಂತಾದ ಗಡಿಗಳ ಹಣವನ್ನು ಹೈದರಲ್ಲೀಖಾನನಿಗೆ ಕೊಡಕೆಲಸವಿಲ್ಲವೆಂದು ಹೇಳಿ ಕಳುಹಿಸಿ, ತನ್ನ ಖರ್ಚಿಗೆ ತರಿಸಿಕೊಳ್ಳುತ್ತಿದ್ದನು. ಬಹದ್ದರ ಹೈದರಲ್ಲೀಖಾನನು ದೇವರಾಜಯ್ಯನು ಮಾಡುತ್ತಿದ್ದ ದುಷ್ಕೃತ್ಯವನ್ನು ತಿಳಿದು, ಶ್ರೀರಂಗಪಟ್ಟಣಕ್ಕೆ ಬಂದು, ಈ ವಿವರಗಳನ್ನು ಧೊರೆಗಳವರಿಗೆ ಬಿನ್ನವಿಸಿ, ತನಗೆ ಮೊದಲು ಬರೆಯಿಸಿಕೊಟ್ಟ ತನಿಖೇ ಹಣವು ಸರಾಗವಾಗಿ ಬರುವಂತೆ ಪುನಃ ನಿರೂಪವನ್ನು ಅಪ್ಪಣೆ ಮಾಡಿಸಿಕೊಂಡು, ದಿಂಡಿಗಲ್ಲು ಪ್ರಾಂತ್ಯಕ್ಕೆ ಹೊರಟು ಹೋದನು.

ನವಾಬನು ದೇವರಾಜಯ್ಯನನ್ನು ಶ್ರೀರಂಗಪಟ್ಟಣಕ್ಕೆ ಕರೆದುತಂದದ್ದು.—ಶಾ|| ೧೬೮೦ನೇ ಈಶ್ವರ ಸಂವತ್ಸರದಲ್ಲಿ ಶ್ರೀರಂಗಪಟ್ಟಣದಲ್ಲಿ ಜನಗಳ ಚಿತಾವ

ಸೆಯಿಂದ, ದಂಡಿನ ಜನಗಳಲ್ಲಿ ಕೆಲವರು ಸಂಬಳ ಕೊಡಬೇಕೆಂದು ದಂಗೆ ಮಾಡಿದರು. ಆಗ ಧೊರೆಗಳು ಈ ತುಂಟಜನಗಳನ್ನು ಸಮಜಾಯಿಷಿ ಮಾಡತಕ್ಕ ಬಗ್ಗೆ ಕಣಿವೇ ಕಳಕ್ಕೆ ದಿಂಡಿಗಲ್ಲಿಗೆ ಬಹದರ ಹೈದರಲ್ಲೀಖಾನ ನಿಗೆ ಹೊರಟು ಬರುವಂತೆ ನಿರೂಪವನ್ನು ಬರಯಿಸಿ ಕಳುಹಿಸಿ ಕೊಟ್ಟರು. ಆ ಬಳಿಕ ಬಹದರ ಹೈದರಲ್ಲೀಖಾನನು ಬುದ್ಧಿನಿರೂಪವನ್ನು ಶಿರಸಾವಹಿಸಿ ನೋಡಿಕೊಂಡು, ಸೈನ್ಯಸಮೇತನಾಗಿ ಶ್ರೀರಂಗಪಟ್ಟಣಕ್ಕೆ ಹೊರಟು ಬರು ವಾಗ ಸತ್ಯಮಂಗಲಕ್ಕೆ ಬಂದು, ದಳವಾಯಿ ದೇವರಾಜಯ್ಯನಿಗೆ ನೀವೂ ಶ್ರೀರಂಗಪಟ್ಟಣಕ್ಕೆ ಬರಬೇಕೆಂದು ಹೇಳಿಕಳುಹಿಸಿದನು. ಅದಕ್ಕೆ ದೇವ ರಾಜಯ್ಯನು ತಾನು ಬರುವದಿಲ್ಲನೆಂದು ಹೇಳಿ ಕಳುಹಿಸಿ ಬಿಟ್ಟನು. ಸಂಗ ಡಲೇ ಹೈದರಲ್ಲೀಖಾನನು ಸತ್ಯಮಂಗಲದ ಕೋಟೆಗೆ ಮೋರ್ಚೆಕಟ್ಟಿ ತೋಪು ಗಳನ್ನು ಹೊಡೆಯಿಸಿ, ದಳವಾಯಿ ದೇವರಾಜಯ್ಯನ ಕಡೆ ದಂಡಿನ ಸರದಾರ ರಿಂದ ಆತನಿಗೆ ಹೇಳಿಸಿ, ಆತನನ್ನು ಕರೆದುಕೊಂಡು ಶ್ರೀರಂಗಪಟ್ಟಣಕ್ಕೆ ಬಂದು ಸೇರಿದನು.

ನವಾಬನು ಧೊರೆಗಳವರಿಗೂ ದೇವರಾಜಯ್ಯನಿಗೂ ಇದ್ದ ಮನ ಸ್ತಾಪವನ್ನು ಪರಿಹರಿಸಿದ್ದು.—ಬಹದರ ಹೈದರಲ್ಲೀಖಾನನು ಧೊರೆಗಳವರ ಸನ್ನಿಧಿಗೆ ಬಂದು ಅಡ್ಡಬಿದ್ದು, ನಡೆದ ವೃತ್ತಾಂತವನ್ನೆಲ್ಲಾ ಬಿನ್ನವಿಸಿ, “ಈಗ ಪ್ರಕೃತಕ್ಕೆ ದಳವಾಯಿದೇವರಾಜಯ್ಯನ ಮೇಲೂ ಕರಾಚೂರಿ ನಂಜರಾ ಜಯ್ಯನ ಮೇಲೂ ಇರುವ ಮನಸ್ತಾಪವನ್ನು ಬಿಡಬೇಕು” ಎಂದು ಬಹಳವಾಗಿ ಬಿನ್ನವಿಸಿಕೊಂಡು, ಅಪ್ಪಣೆಯಾದಂತೆ ಶುಕ್ರವಾರ ಓಲಗವಾ ಗುವ ಸಮಯದಲ್ಲಿ ಅವರಿಬ್ಬರನ್ನೂ ಕರೆದುಕೊಂಡು ಬಂದು, ಧೊರೆಗಳ ವರಿಗೆ ಅಡ್ಡಬೀಳಿಸಿ ಮನಸ್ತಾಪವನ್ನು ಪರಿಹರಿಸಿದನು.

ದೇವರಾಜಯ್ಯನ ಮರಣ, ನವಾಬನಿಗೆ ದಳವಾಯಿತನ, ಮತ್ತು ಖಂಡೇರಾಯನಿಗೆ ದಿವಾನಗಿರಿ.—ದೇವರಾಜಯ್ಯನು ಶ್ರೀರಂಗಪಟ್ಟಣದಲ್ಲಿ ಕೆಲವು ದಿನಗಳಿದ್ದು, ಸತ್ಯಮಂಗಲಕ್ಕೆ ಹೋಗಿ, ಬರುವ ಮಾರ್ಗದಲ್ಲಿ ಶಾ॥ ೧೬೮೧ನೇ ಬಹುಧಾನ್ಯ ಸಂವತ್ಸರದ ಜ್ಯೇಷ್ಠ ಬಹುಳ ೭ ಯಲ್ಲಿ

ದೈವಾಧೀನನಾದನು. ಆ ಬಳಿಕ ಒಹದರ ಹೈದರಲ್ಲೀಖಾನನು ತಾನು ಕಾವೇರಿ ಕೆಳಕ್ಕೆ ಹೋಗಬೇಕೆಂದು ಆಳಿದ ಮಹಾ ಸ್ವಾಮಿಯವರ ಸನ್ನಿಧಾನಕ್ಕೂ ಕರಾಚೂರಿ ನಂಜರಾಜಯ್ಯನವರ ಬಳಿಗೂ ಸಹ ಬಂದು ಮಾತನಾಡಿಕೊಂಡು ಹೋಗುತ್ತಿದ್ದನು. ಆಗ ಕೆಲವರು ಸೈನ್ಯದವರು ಸಂಬಳದ ಹಣಕ್ಕೆ ದಂಗೆ ಮಾಡಿದರು. ಆ ಸಮಯದಲ್ಲಿ ಧೊರೆಗಳು ಒಹದರ ಹೈದರಲ್ಲೀಖಾನನನ್ನು ಕರೆಯಿಸಿ "ಈಗ ನೀನು ನಯಭಯಗಳಿಂದ ಸೈನ್ಯದ ದಂಗೆಯನ್ನು ಎಬ್ಬಿಸು" ಎಂದು ಅಪ್ಪಣೆಯನ್ನು ಕೊಡಲು, ಅವನು ಅಡ್ಡಬಿದ್ದು ಕೈ ಜೋಡಿಸಿಕೊಂಡು ನಿಂತು "ನನ್ನ ಅಪರಾಧವನ್ನು ಕ್ಷಮಿಸಬೇಕು. ಇದು ವಿಷಮ ಸಂಧಿವೇಳೆ. ಖಾವಂದಿರು ಚಿತ್ತಕ್ಕೆ ತಂದು ಇದಕ್ಕೆ ಉಪಾಯವನ್ನು ಅಪ್ಪಣೆಕೊಟ್ಟರೆ, ಪಾದದ ಚಾಕರಿಯಲ್ಲಿ ಸಿದ್ಧವಾಗಿದ್ದೇನೆ. ಈ ಕಾಲದಲ್ಲಿ ನನ್ನಂಥಾವರು ಈ ಕೆಲಸಕ್ಕೆ ಉದ್ಯುಕ್ತರಾಗಿ ನಿಂತರೆ, ಸ್ವಾಮಿರಿಗೂ ದ್ವೇಷಿಗಳಾಗಿ, ಕ್ಷುದ್ರಜನಗಳಿಂದ ಪಾದದ ಚಾಕರನ ಮೇಲೂ ಚಿತ್ತಕ್ಕೆ ಬೇಸರ ಬರುವಂತೆ ಆಗಿ, ಕಾರ್ಯವೆಲ್ಲಾ ಕೆಟ್ಟು ಹೋಗುವದು." ಎಂದು ಬಿನ್ನವಿಸಿದನು. ಧೊರೆಗಳು ಅವನ ವಿಜ್ಞಾಪನೆಯನ್ನು ಚಿತ್ತದಲ್ಲಿ ಲಾಲಿಸಿ, ತಮ್ಮ ಕಡೆ ಜನರು ಮಾಡಿರುವ ಕೆಲಸಗಳನ್ನೂ ವಂಚನೆಗಳನ್ನೂ ಚೆನ್ನಾಗಿ ಪರಾಂಬರಿಸಿ, ತಮ್ಮಲ್ಲಿ ಇರುವ ಜನಗಳಿಂದ ಈ ಕಾರ್ಯವು ನಿರ್ವಾಹವಾಗಲಾರದೆಂದು ಚಿತ್ತಕ್ಕೆ ತಂದು, ಹೈದರನಾಯಕನನ್ನು ಕುರಿತು "ನಿನ್ನ ಮೇಲೆ ನಮ್ಮ ಕಟಾಕ್ಷವು ಸಂಪೂರ್ಣವಾಗಿ ಇರುವದರಿಂದ ಕ್ಷುದ್ರಜನಗಳಿಂದ ಏನೂ ಆಗಲಾರದು. ನೀನು ನಮಗೆ ಕ್ರೀತಪುತ್ರನಾಗಿ ನಮ್ಮ ಕಾರ್ಯದಲ್ಲಿ ನಿರ್ವಂಚಕನಾಗಿ ನಡೆದುಕೊಂಡು ಇರುವದು ನಮ್ಮ ಮನಸ್ಸಿಗೆ ಸಂಪೂರ್ಣವಾಗಿ ತಿಳಿದು ಇರುವದರಿಂದ, ಈಗ ನಾವು ಮಾಡುವ ಕಾರ್ಯವನ್ನು ನೀನೇ ಮಾಡಬೇಕು" ಎಂದು ಅಪ್ಪಣೆ ಕೊಟ್ಟರು. ಆಗ ಹೈದರಲ್ಲೀಖಾನನು ಪುನಃ ಅಡ್ಡಬಿದ್ದು "ಬುದ್ಧಿ ನಿರೂಪ ಅಪ್ಪಣೆಯಾದಂತೆ ಪಾದದ ಗುಲಾಮು ನಡೆದುಕೊಳ್ಳುತ್ತೇನೆ" ಎಂದು ಅರಿಕೆಮಾಡಿಕೊಳ್ಳಲು, ಆಳಿದ ಮಹಾಸ್ವಾಮಿಯವರು ಬುದ್ಧಿ ನಿರೂಪವನ್ನು ಅಪ್ಪಣೆ ಕೊಡಿಸಿದ ವಿವರವೇನೆಂದರೆ:—"ನೀನು ನಮ್ಮ ಅರಮನೆಯ ಜನ ಹೊರತು

ನೀಚಜನರಲ್ಲಿ ಯಾರನ್ನು ದಂಡನೆ ಶಿಕ್ಷೆಯನ್ನು ಮಾಡಿದಾಗ್ಯೂ, ನಾವು ಆ ಮಾತಿಗೆ ಬರುವದಿಲ್ಲ. ಇನ್ನು ಮೇಲೆ ನಮಗೆ ಸರಕಾರದ ಕೆಲಸ ಮುಖ್ಯವೇ ಹೊರತು ಜನರ ದಾಕ್ಷಿಣ್ಯ ಕೆಲಸವಿಲ್ಲ. ಪೂರ್ವದಲ್ಲಿ ನಾವು, ನಮ್ಮ ಸ್ವಾಮಿಗಳು ಅರಮನೆಯ ಕೆಲಸದಲ್ಲಿ ನಿರ್ವಂಚಕರಾಗಿ ನಡೆದುಕೊಂಡಾರೆಂಬುದಾಗಿಯೂ, ಅವರು ಬದುಕಲೆಂಬುದಾಗಿಯೂ, ದಾಕ್ಷಿಣ್ಯದಿಂದ ಅವರಿಗೆ ಅಧಿಕಾರಗಳನ್ನು ಕೊಟ್ಟಿದ್ದರಿಂದ, ರಾಜ್ಯವು ಈ ರೀತಿಯಾಗಿ ಹೀನಸ್ಥಿತಿಗೆ ಬರುವಂತೆ ಮಾಡಿದರು. ಈಗ ನೀನು ಸರಕಾರದ ಕೆಲಸವೇ ಮುಖ್ಯವಾಗಿ ಅರಮನೆಗೆ ಕೂಡಿ ಬರುವಂತೆ ಮಾಡತಕ್ಕದ್ದು. ಈ ವಿಷಯದಲ್ಲಿ ನೀನು ಏನಾದರೂ ಜನರ ದಾಕ್ಷಿಣ್ಯದಿಂದ ನಡೆದುಕೊಂಡು ಕಾರ್ಯಗಳನ್ನು ಕೆಡಿಸಿದರೆ ಈ ಕೆಲಸ ನಿನಗೂ ಸಹ ಉಳಿಯುವದಿಲ್ಲ" ಹೀಗೆಂದು ಆಳಿದ ಮಹಾಸ್ವಾಮಿಯವರು ನಿರೂಪವನ್ನು ಅಪ್ಪಣೆ ಕೊಟ್ಟು, ಹೈದರಖಾನನಿಂದಲೂ ಅನುಗುಣವಾದ ಕರಾರು ಕಾಗದವನ್ನು ಬರೆಯಿಸಿಕೊಂಡು, ಶಾ॥ ೧೬೮೧ನೇ ಬಹುಧಾನ್ಯ ಸಂವತ್ಸರದಲ್ಲಿ ಅವನಿಗೆ ದಳವಾಯಿತನವನ್ನು ನೇಮಿಸಿ, ಬುದ್ಧಿನಿರೂಪವನ್ನೂ ಮಹತಾಬಿ ಖಿಲ್ಲತ್ತು ವೀಳ್ಯವನ್ನೂ ಅಪ್ಪಣೆ ಕೊಟ್ಟು ಕಳುಹಿಸಿದರು. ಅನಂತರ ಹೈದರಲ್ಲೀಖಾನನು ದಂಗೆ ಕೂತಿದ್ದ ಸೈನ್ಯದ ಜನರನ್ನು ಸಮಾಧಾನ ಮಾಡಿ ಕಳುಹಿಸಿ ಬಿಟ್ಟು, ಆ ಬಳಿಕ ಅದೇ ಸಂವತ್ಸರದಲ್ಲಿ ಧೊರೆಗಳಿಗೆ ಅರಿಕೆ ಮಾಡಿಕೊಂಡು, ಸಂಸ್ಥಾನದ ದಿವಾನಗಿರಿಯನ್ನು ತನ್ನ ಕಡೆ ಖಂಡೇರಾಯನಿಗೆ ನೇಮಕ ಮಾಡಿಸಿದನು.

ಸೈನ್ಯದ ಬಟವಾಡೆ ಮುಂತಾದದ್ದು.—ಬಹದ್ದರ ಹೈದರಲ್ಲೀಖಾನನು ಪ್ರತಿ ನಿತ್ಯವೂ ಕರ್ತರ ಆಸ್ಥಾನಕ್ಕೆ ಬಂದು, ಎಲ್ಲಾ ಪೊಕಟ್ಟಿನ ಅಧಿಕಾರಿಗಳನ್ನೂ ಹಿಡಿತರಿಸಿ, ನಯಭಯಗಳಿಂದ ಅವರಿಂದ ನಜರು ತೆಗದುಕೊಂಡು, ಹೇರಳವಾಗಿ ಹಣವನ್ನು ಕೂಡಿಹಾಕಿ, ಸೈನಿಕರಿಗೆ ಸ್ವಲ್ಪ ಹಣವನ್ನು ಬಟವಾಡೆ ಮಾಡಿಸಿ, ಆ ಸೈನಿಕರ ಪೈಕಿ ೪,೦೦೦ ಕುದುರೆಯವರನ್ನು ಬರಿತರಫು ಮಾಡಿ, ಸರಕಾರದಲ್ಲಿ ೩,೦೦೦ ಕುದುರೆ ಗಳನ್ನು ಖಾಯಂ ಇಟ್ಟು, ಈ ಬರತರಫಾದ ಜನರು ಹೊರಟು ಹೋಗುವ ಮಾರ್ಗದಲ್ಲಿ ತನ್ನ ಕಡೇ ಜನರನ್ನು ಗುರುತು ತಿಳಿಯದಂತೆ ಹೋಗಿ ಲೂಟಿ ಮಾಡಿಕೊಂಡು ಬನ್ನಿ

ಎಂಬುದಾಗಿ ಕಳುಹಿಸಿ ಕೊಟ್ಟು, ಲೂಟಿ ಮಾಡಿ. ಹಣವನ್ನು ತರಿಸಿಕೊಂಡು, ಬರತಕ್ಕವರಲ್ಲಿ ಕೆಲವರು ವೈಸ್ಯವೃತ್ತಿಯಿಂದ ಹೇಳಿಕೊಂಡದ್ದರಿಂದ, ಆ ಜನಗಳನ್ನು ತನ್ನ ಕಡೆ ಖಾವಣಾ ಬರೆಯಿಸಿಕೊಂಡು, ಪಟ್ಟಣದ ಕೋಟೇ ಬಾಗಲಿಗೆ ತನ್ನ ಕಡೆ ಖಾತ್ರಿ ರಾದ ಬಾರಿನವರನ್ನು ಪಹರೆ ಇಟ್ಟು ಭದ್ರಮಾಡಿ, ಕೋಟೆಯೊಳಗಿದ್ದ ಸೈನ್ಯವನ್ನೆಲ್ಲಾ ತೆಗೆದು ಕಡತನಾಳು ಕನ್ನಾಳು ಜೋರೆಯ ಮೇಲೆ ಇರಿಸಿದನು.

ನಂಜರಾಜಯ್ಯನವರಿಗೆ ೩ ಲಕ್ಷ ಸೀಮೆಯನ್ನು ಕೊಟ್ಟು ಮಹೀಶೂರಿಗೆ ಕಳುಹಿಸಿದ್ದು.—ಶಾ ೧೬೮೭ನೇ ಪ್ರಮಾಥಿ ಸಂವತ್ಸರದಲ್ಲಿ ದೊರೆಗಳ ಮಾವಂಶಿರಾದ ಕರಾಚೂರಿ ನಂಜರಾಜಯ್ಯನವರು, ತಮಗೆ ಸರ್ವಾಧಿಕಾರ ಹೋದ ಮೇಲೆ, ಬಹದ್ದರಹೈದರಲ್ಲೀ ಖಾನನ ಮುಖಾಂತರ ೩,೦೦೦ ಬಾರಿನವರನ್ನೂ ೧,೦೦೦ ಕುದುರೆಯನ್ನೂ ತಾವು ಚಾಕರಿ ಇಟ್ಟುಕೊಂಡು, ಸರಕಾರದ ಕಾರ್ಯ ಬಿದ್ದ ವೇಳೆಯಲ್ಲಿ ಸೈನ್ಯವನ್ನು ತೆಗೆದುಕೊಂಡು ಬರುವಂತೆಯೂ, ತನ್ನ ಸ್ವಂತ ವೆಚ್ಚಕ್ಕೆ ೩ ಲಕ್ಷ ವರಹಗಳ ಸೀಮೆಯನ್ನು ಜಹಗೀರಾಗಿ ಕೊಡಿಸಿಕೊಡಬೇಕೆಂದಾಗಿಯೂ ದೊರೆಗಳ ಸನ್ನಿಧಾನಕ್ಕೆ ಅರಿಕೆ ಮಾಡಿಕೊಂಡರು. ಆಗ ದೊರೆಗಳು ಕಟಾಕ್ಷವಿಟ್ಟು, ಕಣಿವೇ ಕೆಳಗಣ ಸೀಮೆಯಲ್ಲಿ ಕ್ಯಾವನುಂಗಲ ಪರಮತಿ ಮುಂತಾದ ೪ ಗಡಿಗಳನ್ನೂ, ಕಣಿವೇ ಮೇಲಿನ ಸೀಮೆಯಲ್ಲಿ ಮೈಸೂರು ಬೆಟ್ಟದಪುರ ಕೋಣನೂರು ಮುಂತಾದ ೬ ಗಡಿಗಳನ್ನೂ, ೩ ಲಕ್ಷದ ಸೀಮೆಗೆ ಸರಿಯಾಗಿ ಅಪ್ಪಣೆ ಕೊಟ್ಟು, ಈ ನಂಜರಾಜಯ್ಯನವರನ್ನು ಮಹೀಶೂರಲ್ಲಿ ಇರುವಂತೆ ಕಟ್ಟು ಮಾಡಿಸಿದರು.

ಮಿರ್ಜೀ ಗೋಪಾಲರಾಯನೊಡನೆ ಯುದ್ಧ.—ಅನಂತರದಲ್ಲಿ ಮರಾಟೆಯವರ ಕಡೆ ಮಿರ್ಜೀ ಗೋಪಾಲರಾಯನೆಂಬುವನು ೪೦,೦೦೦ ಸಾವಿರ ಕುದುರೇ ಸೈನ್ಯದೊಡನೆ ಬೆಂಗಳೂರಿಗೆ ಬಂದು ಘೌತ್ತಿಗೆ ಹಾಕಿದನು. ಈ ವರ್ತಮಾನವು ದೊರೆಗಳಿಗೆ ಶೃತವಾದ್ದರಿಂದ, ದೊರೆಗಳ ಸರ್ವಾಧಿಕಾರಿ ಬಹದರ ಹೈದರನಾಯಕನನ್ನೂ ಬಿರಕ್ಕೀ ಶ್ರೀನಿವಾಸರಾಯನನ್ನೂ ಕಳುಹಿಸಿಕೊಟ್ಟರು. ಅವರಿಬ್ಬರೂ ಬಹು ಸೈನ್ಯಗಳನ್ನು

ತೆಗೆದುಕೊಂಡು ಹೋಗಿ, ಮೂರು ತಿಂಗಳವರಿಗೂ ಚನ್ನಪಟ್ಟಣದ ಗಿಡದಲ್ಲಿ ಯುದ್ಧ ಮಾಡಿ, ಮಿರ್ಜೇ ಗೋಪಾಲರಾಯನಕಡೆ ೪೦,೦೦೦ ಕುದುರೇಸೈನ್ಯದವರನ್ನು ಸಂಹರಿಸಿ, ಉಳಿದ ಜನರನ್ನು ಬಿಟ್ಟರೆಸಾಕು ಎಂದು ಎನಿಸಿದರು. ಗೋಪಾಲರಾಯನು ತನ್ನ ದಂಡಿನ ಖರ್ಚಿಗೆ ೩೦ ಲಕ್ಷ ರೂಪಾಯನ್ನೂ, ಪೂರ್ವದಲ್ಲಿ ಪುನಹೇದ ನಾರಾಯಣರಾಯನು ಬಂದಿದ್ದಾಗ ದಂಡನೆ ಮಾಡಿಕೊಂಡ ೨೬ ಲಕ್ಷ ರೂಪಾಯನ್ನೂ, ಒಟ್ಟು ೫೬ ಲಕ್ಷ ರೂಪಾಯನ್ನು ಕೊಟ್ಟರೆ ತಾನು ಹೊರಟು ಹೋಗುತ್ತೇನೆಂದು ಬಹದರ ಹೈದರಲ್ಲೀಖಾನನ ಬಳಿಗೆ ಹೇಳಿ ಕಳುಹಿಸಿದನು. ಹೈದರಲ್ಲೀಖಾನನು ಈ ವಿವರವನ್ನು ಶ್ರೀರಂಗಪಟ್ಟಣದಲ್ಲಿ ಇದ್ದ ಧೊರೆಗಳ ಸನ್ನಿಧಿಗೆ ಬಿನ್ನಹ ಮಾಡಿಕೊಳ್ಳಲು, ಧೊರೆಗಳು ನಮ್ಮ ಸರಕಾರಕ್ಕೆ ಹ್ಯಾಗೆ ಕೂಡಿಬರಬೇಕೋ ಹಾಗೆ ಮಾಡತಕ್ಕದ್ದೆಂತಲೂ, ಈ ಜನರು ಈ ದೇಶಕ್ಕೆ ಪುನಃ ಎಂದಿಗೂ ಬಾರದಂತೆ ಮಾಡಬೇಕೆಂತಲೂ ಬುದ್ಧಿನಿರೂಪನನ್ನು ಅಪ್ಪಣೆ ಕೊಡಿಸಿದರು. ಹೈದರಲ್ಲೀಖಾನನು ಮತ್ತೊಂದು ತಿಂಗಳ ವರಿಗೂ ಅದೇ ಚನ್ನಪಟ್ಟಣದ ಗಿಡದಲ್ಲಿ ಆ ಜನಗಳನ್ನು ಸಿಕ್ಕಿಸಿಕೊಂಡು, ಹಿಂದಕ್ಕೂ ಮುಂದಕ್ಕೂ ಬಿಡದೆ ಬಹಳ ಯುದ್ಧ ಮಾಡಿ, ಆ ಜನಗಳನ್ನು ಬಹಳ ಕಷ್ಟಪಡಿಸಿ, ಉಳಿದ ಜನಗಳನ್ನು ಬಿಟ್ಟರೆ ಸಾಕೆಂದೆನ್ನಿಸಿ, ಮೇಲೆ ಹೇಳಿದ ೫೬ ಲಕ್ಷ ರೂಪಾಯಲ್ಲಿ ೩೦ ಲಕ್ಷ ರೂಪಾಯನ್ನು ಬಿಡಿಸಿ, ಪೂರ್ವದ ದಂಡಣೆಗಾಗಿ ೨೬ ಲಕ್ಷ ರೂಪಾಯಿಗೆ ಓಲು ಕೊಟ್ಟಿದ್ದ ನಾಗಮಂಗಲ ಚನ್ನರಾಯಪಟ್ಟಣ ಕಂದಿಕೆರೆ ಚಿಕ್ಕನಾಯಕನಹಳ್ಳಿ ಮುಂತಾದ ೧೩ ಗಡಿಗಳ ಬಂದೋಬಸ್ತಿನ ಬಗ್ಯೆ ಅವರು ಇಟ್ಟಿದ್ದ ೬೦೦೦ ಕುದುರೇ ಜನರನ್ನು ಹೊಡೆದು ಓಡಿಸಿ, ಆ ಗಡಿಗಳಲ್ಲಿ ಅವರ ಕಡೇ ಜನಗಳು ವಸೂಲು ಮಾಡಿಯಿದ್ದ ಹಣವನ್ನು ತಾನೇ ತರಿಸಿಕೊಂಡು, ಶ್ರೀರಂಗಪಟ್ಟಣದಿಂದಲೂ ಕೆಲವು ಹಣವನ್ನು ತರಿಸಿ, ವರ್ತಕರ ಕಡೆಯಿಂದ ಕೆಲವು ಹಣವನ್ನು ಸಾಲಮಾಡಿ, ಅದೇ ೨೬ ಲಕ್ಷ ರೂಪಾಯಿಗೆ ಭರ್ತಿಮಾಡಿ ಮಿರ್ಜೇ ಗೋಪಾಲರಾಯನಿಗೆ ಕೊಟ್ಟು, ಅವನನ್ನೂ ಅವನಕಡೇ ಊಳಿಗದ ಜನಗಳನ್ನೂ ಕಳುಹಿಸಿಕೊಟ್ಟು, ಆ ೧೩ ಗಡಿಗಳನ್ನು ಸ್ವಾಧೀನ ಮಾಡಿಕೊಂಡು, ಧೊರೆಗಳಕಡೆ ಅಮಲ್ದಾರ ಶಿರಸ್ತೇದಾರ ಕಿಲ್ಲೇದಾರ ಮುಂತಾದ

ಜನಗಳನ್ನು ಇಟ್ಟು, ಬಂದೋಬಸ್ತು ಮಾಡಿ, ಶ್ರೀರಂಗಪಟ್ಟಣಕ್ಕೆ ಬಂದು ನಡೆದ ವೃತ್ತಾಂತವನ್ನೆಲ್ಲಾ ಧೊರೆಗಳಿಗೆ ಬಿನ್ನವಿಸಿದನು.

ಹೈದರಲ್ಲೀಖಾನನಿಗೆ ನವಾಬ ಹೈದರಲ್ಲೀಖಾನ್ ಬಹದರನೆಂಬ ಹೆಸರು ಬಂದದ್ದು.—ಆಳುವ ಪ್ರಭುಸ್ವಾಮಿಯವರು ಹೈದರಲ್ಲೀಖಾನನು ಸರಕಾರದಿಂದ ಮರಾಟೆಯವರಿಗೆ ಕೊಡತಕ್ಕ ೫೧ ಲಕ್ಷ ರೂಪಾಯನ್ನು ಸ್ವಲ್ಪದಲ್ಲಿಯೇ ತೀರಿಸಿ, ಅವರ ಸೈನ್ಯವನ್ನು ಹೊಡೆದು ಓಡಿಸಿ, ಪೂರ್ವದಲ್ಲಿ ಬಿಟ್ಟುಕೊಟ್ಟಿದ್ದ ೧೩ ಗಡಿಗಳನ್ನು ಬಿಡಿಸಿಕೊಂಡು ಸರಕಾರಕ್ಕೆ ಕೂಡಿಬರುವಂತೆ ಮಾಡಿದ ಮೆಹನತ್ತನ್ನು ಚೆನ್ನಾಗಿ ಪರಾಂಬರಿಸಿ, ಬಹಳ ಸಂತೋಷಪಟ್ಟು, ಶಾ॥ ಶಕ ೧೬೮೧ನೇ ಬಹುಧಾನ್ಯ ಸಂವತ್ಸರದಲ್ಲಿ, ಈ ಹೈದರಲ್ಲೀಖಾನನಿಗೆ ನವಾಬಹೈದರಲ್ಲೀಖಾನ್‌ಬಹದ್ದರನೆಂಬ ಹೆಸರನ್ನು ಕೊಟ್ಟು, ಆನೆ ಕುದುರೆಗಳನ್ನೂ ಮಹತಾಬಿ ಬಿಲ್ಲತ್ತನ್ನೂ ನಗನತ್ತು ಸಹಾ ಕೊಟ್ಟದ್ದಲ್ಲದೆ, ಕರಾಚೂರಿ ನಂಜರಾಜಯ್ಯ ಮುಂತಾದ ಅಧಿಕಾರಿಗಳೆಲ್ಲರೂ ಇವನಿಗೆ ಪೂರಾ ತಾಜೀಂ ಕೊಡುವದೆಂಬದಾಗಿ ಅಪ್ಪಣೆಯನ್ನು ಕೊಡಿಸಿ, ಹೂವಿನ ಹಾರ ವೀಳ್ಯಗಳನ್ನು ಕೊಟ್ಟು, ಮರ್ಯಾದೆಯಿಂದ ಮನೆಗೆ ಕಳುಹಿಸಿಕೊಟ್ಟರು.

ಜವಾಜಿ ಪಾಳ್ಯ ಮುಂತಾದ ೧೩ ಗಡಿಗಳನ್ನು ಸ್ವಾಧೀನ ಮಾಡಿಕೊಂಡದ್ದು.—ಅನಂತರ ಕೆಲವು ದಿವಸದ ಮೇಲೆ ನವಾಬ ಹೈದರಲ್ಲೀಖಾನಬಹದರನು "ಪೂರ್ವದಲ್ಲಿ ಮರಾಟೆಯವರ ಯುದ್ಧದಲ್ಲಿ ಕೆಲವು ಹೆಚ್ಚು ಸೈನ್ಯಗಳನ್ನು ಕಟ್ಟಿದೆನು. ಮರಾಟೆಯವರಿಗೆ ಕೊಡತಕ್ಕ ಹಣಕ್ಕೆ ಕೆಲವು ಹಣ ಸಾಲ ಮಾಡಿ ಅವರಿಗೆ ಸಲ್ಲಿಸಿದೆನು. ಕೊಬ್ಬಿ ಪಾಲಘಾಟಚೇರಿ ಕಲ್ಲೀಕೋಟೆ ಮುಂತಾದ ಸ್ಥಳಗಳಿಗೆ ನನ್ನ ಭಾವಮೈದುನನಾದ ಸಯ್ಯದ್ ಮೊಕದುಂ ಸಾಬಿಯನ್ನು ಸೈನ್ಯಸಹಿತವಾಗಿ ಕಳುಹಿಸಿಕೊಟ್ಟು ಯುದ್ಧಮಾಡಿ, ಅವರ ಕಡೆಯಿಂದ ವರ್ಷ ೧ಕ್ಕೆ ೧೦ ಲಕ್ಷ ರೂಪಾಯಿ ಪ್ರಕಾರ ಕೊಡುವಂತೆ ಖಂಡಣೆ ಮಾಡಿಕೊಂಡಿರಲು, ಈ ವರ್ತಮಾನವನ್ನು ಸತ್ಯಮಂಗಲದಲ್ಲಿದ್ದ ದಳವಾಯಿ ದೇವರಾಜಯ್ಯನು ತಿಳಿದು, ಧೊರೆಗಳ ಅಪ್ಪಣೆಯಾಗಿದೆ ಎಂದು ಚಿತ್ತೋರೀ ಕಾಗದವನ್ನು ಬರೆದು, ತನ್ನ ಕಡೆ ಜಮಾದಾರ ಹರಿಸಿಂಗನನ್ನು ಕಳುಹಿಸಿ

ಕೊಟ್ಟು, ಆ ೧೦ ಲಕ್ಷ ರೂಪಾಯಿಯನ್ನು ತಾನೇ ತೆಗೆಸಿಕೊಂಡನೆಂಬ ವರ್ತಮಾನವು ನನಗೆ ತಿಳಿದದ್ದರಿಂದ, ನನ್ನ ದಂಡಿನ ಖರ್ಚಿಗೆ ೩ ಲಕ್ಷ ರೂಪಾಯಿ ಕೊಡಬೇಕೆಂದು ನಾನು ಆ ದೇವರಾಜಯ್ಯನನ್ನು ಕೇಳಿದ್ದಕ್ಕೆ, ಆಗ ಓದೇಬಾಗಿಲು ರಂಗಣ್ಣನ ಮುಖಾಂತರ ನನಗೆ ಜಾಮೀನುಪತ್ರವನ್ನು ಬರೆಯಿಸಿ ಕೊಟ್ಟು ಇರುತ್ತಾನೆ. ಆ ಬಗ್ಗೆ ಹಣವೂ ಸಹ ನನಗೆ ಬರಬೇಕು. ಇನ್ನೂ ಕೆಲವು ಸೇನೆಗಳನ್ನು ಕಟ್ಟಿ ಸೀಮೆಗಳನ್ನು ಸಾಧಿಸಬೇಕು” ಎಂಬದಾಗಿ ಧೊರೆಗಳ ಸನ್ನಿಧಾನಕ್ಕೆ ಅರ್ಜಿಯನ್ನು ಬಿನ್ನಹ ಮಾಡಿಕೊಂಡನು. ಈ ಹಣಕ್ಕೆ ತನಿಖೆ ಬರೆಯಿಸಿಕೊಡುತ್ತೇವೆಂದು ಧೊರೆಗಳು ಅಪ್ಪಣೆ ಕೊಡಲು, ನವಾಬನು “ದಿವಾನ್ ಪಾಂಡೇರಾಯ ಪ್ರಧಾನ ವೆಂಕಟಪತಯ್ಯ ಮುಂತಾದವರು ತನಿಖೆ ಹಣವನ್ನು ಕೊಡುವುದಕ್ಕೆ ಸುಸ್ತಿ ಮಾಡುತ್ತಾರೆ. ಅದ್ದರಿಂದ ನನ್ನ ಕಡೇ ಅಮಲ್ದಾರ ಮೊದಲಾದ ಜನಗಳನ್ನಿಟ್ಟು, ಸೀಮೆಯನ್ನು ಬಂದೋಬಸ್ತು ಮಾಡಿ, ಅಪ್ಪಣೆಯಾದ ತನಿಖೆಗಡಿಗಳ ಹಣವನ್ನು ನಾನೇ ತೆಗೆಸಿಕೊಳ್ಳುತ್ತೇನೆ” ಎಂಬದಾಗಿ ಪುನಃ ಅರ್ಜೀ ಬಿನ್ನಹಮಾಡಿಕೊಂಡನು. ಅದಕ್ಕೆ ಧೊರೆಗಳು “ಕೆಲವು ಸೀಮೆಗಳಿಗೆ ನೀನೇ ಅಮಲು ಶಿರಸ್ತೇದಾರರನ್ನು ನೇಮಿಸಿ, ನೀನು ಮಾಡಿರುವ ಸಾಲವನ್ನು ತೀರಿಸಿಕೊಂಡು, ಇನ್ನು ಕೆಲವು ಸೈನ್ಯಗಳನ್ನು ಕಟ್ಟಿ, ಬಹಳ ಸೀಮೆಗಳನ್ನು ಸಾಧಿಸು” ಎಂಬದಾಗಿ ಬುದ್ಧಿಸಿರೂಪವನ್ನು ಅಪ್ಪಣೆಕೊಟ್ಟರು. ಅನಂತರ ಈ ನವಾಬನು ಕೆಲವು ಸೇನೆಗಳನ್ನು ಕಟ್ಟಿ, ಕಣಿವೆಗಳಿಕ್ಕೆ ಹೋಗುವಾಗ ಮಾರ್ಗದಲ್ಲಿ ಬಾರಾಮಹಲು ಸೀಮೆಯಲ್ಲಿ ಜವಾಜಿಪಳ್ಳಿ ತಿರಪತ್ತೂರು ಕೃಷ್ಣಗಿರಿ ಮುಂತಾದ ೧೩ ಗಡಿಗಳನ್ನು ಸ್ವಾಧೀನ ಮಾಡಿಕೊಂಡನು.

ನಂಜರಾಜಯ್ಯನನ್ನು ಕೊಣನೂರಿಗೆ ಕಳುಹಿಸಿದ ವಿಚಾರ.— ಧೊರೆಗಳ ಸನ್ನಿಧಿಯಲ್ಲಿದ್ದ ದಿವಾನ್ ಪಾಂಡೇರಾಯ ಪ್ರಧಾನ ವೆಂಕಟಪತಯ್ಯ ಲಾಲಾದಾಸ್ ಮುಂತಾದ ಜನಗಳು “ಈ ಕರಾಚೂರಿ ನಂಜರಾಜಯ್ಯನವರು ೩ ಸಾವಿರ ಬಾರನ್ನೂ ೧,೦೦೦ ಕುದುರೆಯನ್ನೂ ಚಾಕರಿಗೆ ಇಟ್ಟುಕೊಂಡು, ಸರಕಾರದ ಕೆಲಸ ಬಿದ್ದಾಗ ಬರುತ್ತೇನೆಂಬದಾಗಿ ಹೇಳಿ, ೩ ಲಕ್ಷ

ಸೀಮೆಯನ್ನು ಜಹಗೀರಾಗಿ ಅನುಭವಿಸಿಕೊಂಡು, ವಿಜಿರ್‌ಗೋಪಾಲರಾಯ ಮುಂತಾದವರು ಯುದ್ಧಕ್ಕೆ ಬಂದ ಕಾಲದಲ್ಲಿ ಸಹಾಯಕ್ಕೂ ಬರಲಿಲ್ಲ. ನವಾಬನು ಬಹುಕಾರ್ಯಗಳನ್ನು ನಡೆಯಿಸಿದಂತೆ ಇವರು ಏನೂ ಮಾಡಲಿಲ್ಲ. ಇವರ ಜೀವನಾರ್ಥವಾಗಿ ಲಕ್ಷ ಸೀಮೆಯನ್ನು ಕೊಟ್ಟು, ಉಳಿದ ೨ ಲಕ್ಷ ವರಹದ ಸೀಮೆಯನ್ನು ಸರಕಾರಕ್ಕೆ ತೆಗೆದುಕೊಂಡು ಮಹೀಶೂರಲ್ಲಿ ಇಡದೆ ಇವರನ್ನು ಕೊಣನೂರು ಪ್ರಾಂತ್ಯಕ್ಕೆ ಕಳುಹಿಸಿಕೊಡಬೇಕು” ಎಂಬದಾಗಿ ವಿಜ್ಞಾಪನೆಯನ್ನು ಮಾಡಿಕೊಂಡರು. ದೊರೆಗಳು ಈ ವಿಜ್ಞಾಪನೆಯನ್ನು ಚಿತ್ತಕ್ಕೆ ತಂದು “೨ ಲಕ್ಷ ಸೀಮೆಯನ್ನು ಸರಕಾರಕ್ಕೆಬಿಟ್ಟು ನೀವು ಲಕ್ಷ ಸೀಮೆಯನ್ನು ಅನುಭವಿಸಿಕೊಂಡು ಕೊಣನೂರಲ್ಲಿ ಇರತಕ್ಕದ್ದು” ಎಂದು ನಂಜರಾಜಯ್ಯನವರಿಗೆ ಅಪ್ಪಣೆ ಕೊಟ್ಟು ಕಳುಹಿಸಿದರು. ಅನಂತರ ಈ ಕರಾಚೂರಿ ನಂಜರಾಜಯ್ಯನವರು ತಾವು ಮಹೀಶೂರಲ್ಲಿಯೇ ಇರುತ್ತೇವೆಂತಲೂ ಕೊಣನೂರಿಗೆ ಹೋಗುವದಿಲ್ಲವೆಂತಲೂ ಹೇಳಿ ಮಹೀಶೂರ ಕೋಟೆಯನ್ನು ಭದ್ರಪಡಿಸಿಕೊಂಡು ಅಲ್ಲಿಯೇ ವಾಸ ಮಾಡಿಕೊಂಡಿದ್ದರು. ದೊರೆಗಳು ಈ ವರ್ತಮಾನವನ್ನು ತಿಳಿದು, ಕಣಿವೇಕೆಳಗಿನಿಂದ ನವಾಬ್ ಹೈದರಲ್ಲೀಖಾನ್ ಬಹದರನನ್ನು ಕರೆಯಿಸಿ, ಈ ನಂಜರಾಜಯ್ಯನನ್ನು ಮಹೀಶೂರಿಂದ ಹೊರಡಿಸಿ ಕೊಣನೂರಿಗೆ ಕಳುಹಿಸ ಬೇಕೆಂದು ಅಪ್ಪಣೆಯನ್ನು ಕೊಡಲು, ನವಾಬನು ಮಹೀಶೂರ ಕೋಟೆಗೆ ಮುತ್ತಿಗೆ ಹಾಕಿ ೩ ತಿಂಗಳ ಪರ್ಯಂತವೂ ಯುದ್ಧ ಮಾಡಿ, ಅರಸಿನವರನ್ನು ಮಹೀಶೂರಿಂದ ಹೊರಡಿಸಿ, ದೊರೆಗಳಿಗೆ ಅರಿಕೆ ಮಾಡಿ ಲಕ್ಷ ಸೀಮೆಯನ್ನು ಜಹಗೀರಾಗಿ ಕೊಡಿಸಿಕೊಟ್ಟು, ಕೊಣನೂರಿಗೆ ಕಳುಹಿಸಿ ಬಿಟ್ಟನು.

ನವಾಬನಿಗೂ ಖಂಡೇರಾಯನಿಗೂ ಮನಸ್ತಾಪ ಬಂದದ್ದು.—ನವಾಬ ಹೈದರಲ್ಲೀಖಾನ್ ಬಹದರನು, ಮಹೀಶೂರ್ ಯುದ್ಧದಲ್ಲಿ ತನ್ನ ಆನೆ ಕುದುರೆ ಕಾಲಾಳು ಮದ್ದು ಗುಂಡುಗಳು ಬಹಳ ನಷ್ಟವಾಯಿತೆಂತಲೂ, ಆಗ ಇರುವ ಸೈನ್ಯ ಸಾಲದಾದ್ದರಿಂದ ಭರ್ತಿಮಾಡತಕ್ಕ ಬಗ್ಗೆ ಆಗ ತನಗೆ ಕೊಟ್ಟಿರುವ ಭೂಮಿಯು ಸಾಲದೆಂತಲೂ, ದೊರೆಗಳಿಗೆ ಅರ್ಜಿ

ಯನ್ನು ಬಿನ್ನಹ ಮಾಡಿಕೊಂಡದ್ದಲ್ಲದೆ, ಕೆಲವು ಜನಗಳ ಮುಖಾಂತರವಾಗಿಯೂ ಅರಿಕೆಮಾಡಿಸಿದನು. ಅದಕ್ಕೆ ಧೊರೆಗಳು ಕಟಾಕ್ಷವಿಟ್ಟು ನಾಮಕಲ್ಲು ಖಾದಮಂಗಲ ಪರಮತ್ತಿ ಎಂಬ ೩ ಗಡಿಗಳನ್ನು ನವಾಬನಿಗೆ ತಸಿಲೇಬುದ್ಧಿ ನಿರೂಪವನ್ನು ಅಪ್ಪಣೆಕೊಡಿಸುವ ಸಮಯದಲ್ಲಿ, ಹಾಗೆ ಕೊಡಕೂಡದೆಂಬದಾಗಿ ಖಂಡೇರಾಯನು ಹೇಳಿದ್ದರಿಂದ, ಖಂಡೇರಾಯನಿಗೂ ನವಾಬನಿಗೂ ಮನಸ್ತಾಪ ಉಂಟಾಯಿತು.

ನವಾಬನಿಗೂ ಖಂಡೇರಾಯನಿಗೂ ಯುದ್ಧವಾದದ್ದು ಮತ್ತು ಬಿಕೂರಿಗಳು.—ಪ್ರಧಾನವೆಂಕಟಪತಯ್ಯ ದಿವಾನ್ ಖಂಡೇರಾಯ ಕೊಳ್ಳೇಗಾಲದ ವೀರಣ್ಣಶೆಟ್ಟಿ ಮುಂತಾದವರು "ಈ ನವಾಬನು ಬಹಳ ಪ್ರಬಲನಾದನು. ನಾವು ಸರಕಾರಕ್ಕೆ ಮಾಡಿರುವ ವಂಚನೆ ಮುಂತಾದ ಮರ್ಮಗಳನ್ನು ಇವನು ಚೆನ್ನಾಗಿ ತಿಳಿದು ಇದ್ದಾನೆ. ಇನ್ನು ಇವನು ಪ್ರಬಲಕ್ಕೆ ಬಂದರೆ ನಮ್ಮನ್ನು ಚೆನ್ನಾಗಿ ನಿಗ್ರಹಿಸುವನು. ಆದ್ದರಿಂದ ಇವನನ್ನು ಈಗಲೇ ನಿಗ್ರಹಿಸಬೇಕು" ಎಂದು ಯೋಚಿಸಿ ಧೊರೆಗಳ ಸನ್ನಿಧಿಗೆ ಬಂದು, "ಸ್ವಾಮಿಯವರು ಸ್ವಲ್ಪ ಚಾಕರಿಯಲ್ಲಿ ಇದ್ದ ಈ ಹೈದರಖಾನನಿಗೆ ಬಹಳ ಸನ್ಮಾನಗಳನ್ನು ಮಾಡಿ ನವಾಬನೆಂಬ ಹೆಸರನ್ನು ಕೊಟ್ಟರಿ. ಇವನು ಮುಂದೆ ಸ್ವಾಮಿಯವರ ರಾಜ್ಯಭಾರವನ್ನೇ ಸ್ವಲ್ಪಸ್ವಲ್ಪವಾಗಿ ಅಪೇಕ್ಷಿಸುತ್ತಾ ಇದ್ದಾನೆ. ಆದ್ದರಿಂದ ಸ್ವಾಮಿಯವರ ಅಪ್ಪಣೆಯಾದರೆ ಇವನನ್ನು ಈಗಲೇ ನಿಗ್ರಹಿಸುತ್ತೇವೆ" ಎಂಬದಾಗಿ ಬಿನ್ನವಿಸಿದಮೇಲೆ, ಖಂಡೇರಾಯನು ಸ್ವಲ್ಪ ಸೈನ್ಯದೊಡನೆ ತನ್ನ ಪತ್ನೀಪುತ್ರರ ಸಹಿತವಾಗಿ ಶ್ರೀರಂಗಪಟ್ಟಣದ ಉಭಯಕಾವೇರೀ ಮಧ್ಯದಲ್ಲಿ ಇಳಿದಿದ್ದ ನವಾಬನ ಸಂಗಡ ಯುದ್ಧಮಾಡಿ, ಅವನನ್ನು ಜಯಿಸಲಾರದೆ ಶ್ರೀರಂಗಪಟ್ಟಣಕ್ಕೆ ಹೊರಟು ಬಂದನು.

ಅನಂತರದಲ್ಲಿ ಆ ನವಾಬನು ತನ್ನಲ್ಲಿ ಸ್ವಲ್ಪ ಸೈನ್ಯವೇ ಇದ್ದದರಿಂದ ಆಗಯುದ್ಧ ಮಾಡಬಾರದೆಂದುತಿಳಿದು, ತನ್ನ ಹೆಂಗಸರುಮಕ್ಕಳನ್ನು ಅಲ್ಲಿಯೇ ಬಿಟ್ಟು, ಕಾವೇರೀ ಪೂರ್ಣ ಪ್ರವಾಹ ಬಂದುಇದ್ದದರಿಂದ ರಾತ್ರಿವೇಳೆಯಲ್ಲಿ ಹರಿಗೋಲು ತರಿಸಿಕೊಂಡು ೩೦ ಕುದುರೇ ಸವಾರರು ಕೆಲವು ದ್ರವ್ಯ ಸಹಿ

ತನಾಗಿ ಬೆಂಗಳೂರಿಗೆ ಹೊರಟುಹೋದನು. ಮಾರನೇದಿನ ಪ್ರಾತಃಕಾಲದಲ್ಲಿ ಖಂಡೇರಾಯನು ಅವನ ದಂಡನ್ನು ಲೂಟಿಮಾಡಿ, ಅವನ ಹೆಂಗಸರು ಮಕ್ಕಳನ್ನು ಸೆರೆಹುಲ್ಲಿರಿಸಿದನು. ಈವರ್ತಮಾನವನ್ನು ಧೊರೆಗಳು ತಿಳಿದು ಖಂಡೇರಾಯ ಪ್ರಭೃತಿಗಳಮೇಲೆ ಬಹಳ ಕೋಪವನ್ನು ಮಾಡಿ, ತಮ್ಮ ಕ್ರೀತಪುತ್ರನಾದ ನವಾಬನಮೇಲೆ ಬಹಳ ಕಟಾಕ್ಷವಿಟ್ಟು, ಅವನ ೮ ವರ್ಷದ ಮಗನಾದ ಟೀಪೂಸುಲ್ತಾನನನ್ನೂ ಅವನ ಹೆಂಗಸರುಮಕ್ಕಳನ್ನೂ ಕೋಟೆಯೊಳಕ್ಕೆ ಕರೆತರಿಸಿ, ದಳವಾಯಿ ದೇವರಾಜಯ್ಯನನ್ನು ಬಿಡಿಸಿ, ಇವರು ಅಲ್ಲಿಯೇ ಇರುವಂತೆ ಕಟ್ಟು ಮಾಡಿಸಿ, ಮಾನದಿಂದ ಸಂರಕ್ಷಣೆ ಮಾಡುತ್ತಿದ್ದರು.

ಖಂಡೇರಾಯನು ಧೊರೆಗಳಿಗೆ ತಿಳಿಯದಂತೆ, ಗಡಿಗಳಿಗೆ ನವಾಬನು ಬಂದು ಇರುತ್ತಾನೆಂತಲೂ, ಅವನನ್ನು ಯಾರು ಹಿಡಿದುಕೊಡುತ್ತಾರೋ ಅವರಿಗೆ ಬಹಳ ಸನ್ಮಾನಗಳನ್ನು ಮಾಡಿಸುತ್ತೇವೆಂದು ಧೊರೆಗಳ ಅಪ್ಪಣೆಯಾಗಿದೆ ಎಂತಲೂ ಪಿತೂರಿ ಕಾಗದವನ್ನು ಬರೆದನು. ಈ ವರ್ತಮಾನವು ಬೆಂಗಳೂರಲ್ಲಿ ಇದ್ದ ನವಾಬನಿಗೆ ತಿಳಿದದ್ದರಿಂದ, ನವಾಬನು ಹಠಾತ್ತಾಗಿ ಕೋಣನೂರಿಗೆ ಬಂದು, ಈ ವರ್ತಮಾನವನ್ನು ಕರಾಚೂರಿ ನಂಜರಾಜಯ್ಯನವರಿಗೆ ತಿಳಿಸಿದನು.

ನಂಜರಾಜಯ್ಯನವರು ನವಾಬರ ಮರೆಬಿದ್ದು ಇರುತ್ತಾರೆಂಬ ವರ್ತಮಾನವನ್ನು ಖಂಡೇರಾಯನು ತಿಳಿದು, ಅರಸಿನವರ ಲಕ್ಷ ಸೀಮೆಯನ್ನು ಲೂಟಿಮಾಡಬೇಕೆಂದು ಸೈನ್ಯಸಹಿತನಾಗಿ ಕಟ್ಟೇಮಳವಾಡಿಗೆ ಬಂದು ಇಳಿದುಕೊಂಡನು. ಈ ವಿಷಯವು ನವಾಬನಿಗೆ ತಿಳಿದಿದ್ದರಿಂದ ನವಾಬನು ಖಂಡೇರಾಯನನ್ನು ಯಾರು ಹಿಡಿದು ಕೊಡುತ್ತಾರೋ ಅವರಿಗೆ ಬಹಳ ಇನಾಮುಗಳನ್ನು ಕೊಡಿಸುತ್ತೇವೆಂದು ಶ್ರೀರಂಗಪಟ್ಟಣದಲ್ಲಿರುವ ಮುಖ್ಯಾಧಿಕಾರಿಗಳ ಪಿತೂರಿ ಕಾಗದಬಂದಂತೆ ಬರೆದು, ಈ ಕಾಗದವು ಖಂಡೇರಾಯನ ತಂಡಿನ ಜನರ ಕೈಗೆ ಸಿಕ್ಕುವಂತೆ ಮಾಡಿಸಿದನು. ಆ ಕಾಗದವನ್ನು ನೋಡಿಕೊಂಡು ಖಂಡೇರಾಯನು ಭೀತನಾಗಿ ಹೊರಟು ಹೋದನು.

ನವಾಬನಿಗೆ ಸರ್ವಾಧಿಕಾರ ನೇಮಕವಾದ ವಿಚಾರ.—ಖಂಡೇರಾಯನು ಶ್ರೀರಂಗಪಟ್ಟಣಕ್ಕೆ ಬಂದಮೇಲೆ, ನವಾಬನು “ದಿವಾನ್ ಖಂಡೇರಾಯನು ಧೊರೆಗಳ ಸನ್ನಿಧಿಯಲ್ಲಿರುವ ಆಪ್ತ ಮುಖ್ಯಾಧಿಕಾರಿಗಳಿಗೆ ಲಂಚವನ್ನು ಕೊಟ್ಟು, ಸ್ವಾಧೀನಮಾಡಿಕೊಂಡು, ಧೊರೆಗಳವರ ಸೀಮೆಯ ಗಡಿಗಳಲ್ಲಿ ಒಂದೊಂದಕ್ಕೆ ೧—೩ ವರಹಗಳಮೇರೆಗೆ ತರಿಸಿಕೊಳ್ಳುತ್ತಿರುವನು. ಇದಕ್ಕೆ ದಾಖಲೆ ಯಿದೆ. ಈ ಖಂಡೇರಾಯನು ನನ್ನ ಕಡೆಯವನೇ ಹೊರತು ಪೂರ್ವದಿಂದ ತಮ್ಮಲ್ಲಿ ಚಾಕರಿಮಾಡಿದವನಲ್ಲ. ಪೂರ್ವದಲ್ಲಿ ಸಂಸ್ಥಾನಕ್ಕೆ ಬಹಳ ಸೀಮೆಗಳನ್ನು ಸಾಧಿಸುವದಕ್ಕೋಸ್ಕರ ನನ್ನ ದಂಡಿನ ಖರ್ಚಿಗಾಗಿ ನನಗೆ ಕೆಲವು ಸಾಲವಾಗಿದೆ. ಆ ಹಣವನ್ನು ಅಪ್ಪಣೆಕೊಡಿಸಿ ಕೊಡುವದಲ್ಲದೆ ಖಂಡೇರಾಯನನ್ನು ಹಿಡಿದು ನನ್ನ ವಶಕ್ಕೆ ಕಳುಹಿಸಿಕೊಡಬೇಕು. ಈ ವಿವರಗಳನ್ನು ಚಿತ್ತಕ್ಕೆ ತಾರದೆ ಉಪೇಕ್ಷೆಮಾಡಿದರೆ, ನಾನು ನನ್ನ ಸೈನ್ಯದೊಡನೆ ಮತ್ತೆಲ್ಲಾದರೂ ಚಾಕರಿಗೆ ಹೊರಟುಹೋಗುತ್ತೇನೆ” ಎಂದು ಧೊರೆಗಳ ಸನ್ನಿಧಿಗೆ ಅರ್ಜಿಯನ್ನು ಬಿನ್ನಹಮಾಡಿಕೊಂಡನು. ಧೊರೆಗಳು ಈ ವಿಷಯವಾಗಿ ತಮ್ಮ ಆಪ್ತಜನರೊಡನೆ ಆಲೋಚನೆ ಮಾಡಲು, ಆಜನರು “ಪ್ರಕೃತಕ್ಕೆ ನವಾಬನು ಮರಾಟಿಯವರು ಮುಂತಾದ ತುಂಟಜನರೊಡನೆ ಸೇರಿ ಕೊಂಡರೆ, ನಮ್ಮ ಸಂಸ್ಥಾನಕ್ಕೆ ಬಹಳ ತೊಂದರೆ ಯುಂಟಾಗುವದು” ಎಂದು ಬಿನ್ನವಿಸಿದರು. ಈ ವಿವರಗಳನ್ನು ಚಿತ್ತಕ್ಕೆ ತಂದು, ನವಾಬನು ಸಂಸ್ಥಾನಕ್ಕೆ ಇನ್ನೂ ಬಹುಸೀಮೆಗಳನ್ನು ಸಾಧಿಸಿ ಯಶಸ್ಸನ್ನು ಉಂಟುಮಾಡುತ್ತಾನೆಂದು ಅವನಮೇಲೆ ಕಟಾಕ್ಷವಿಟ್ಟು, ಸ್ವಂತ ಖರ್ಚಿಗೆ ಬೇಕಾದಷ್ಟು ಸೀಮೆಗಳನ್ನು ಇರಿಸಿಕೊಂಡು, ತಮ್ಮ ಮಾವಂದಿರಾದ ಕರಾಚೂರಿ ನಂಜರಾಜಯ್ಯನವರಿಗೆ ಜೀವನಾರ್ಥವಾಗಿ ಕೆಲವು ಸೀಮೆಗಳನ್ನು ಕೊಟ್ಟು, ತಾವು ಮಾಡಿದ ದಾನಧರ್ಮಗಳೂ ತಮ್ಮ ಪೂರ್ವಿಕರು ಮಾಡಿ ಯಿದ್ದ ದೇವಾದಾಯ ಬ್ರಹ್ಮಾದಾಯದ ಸೀಮೆಗಳೂ ನಿರುಪಾಧಿಕವಾಗಿ ನಡೆಯುವಂತೆ ನಿಬಂಧನೆಮಾಡಿ, ಉಳಿದ ಸೀಮೆಗಳ ವಿಚಾರಣೆಯನ್ನು ನವಾಬನಿಗೆ ಕೊಟ್ಟು, ಆದಾಯ ವೆಚ್ಚಗಳ ಲೆಕ್ಕವನ್ನು ತಮಗೆ ಶೃತಪಡಿಸಬೇಕೆಂತಲೂ, ಇನ್ನೂ ಹೊಸದಾಗಿ ಸೀಮೆಗಳನ್ನು ಸಾಧಿಸುವದೆಂತಲೂ, ಈ

ವಿಷಯದಲ್ಲಿ ಹೆಚ್ಚು ಕಡಿಮೆ ನಡೆದರೆ ಆ ಕೆಲಸವು ಅವನಿಗೆ ನಿಲ್ಲಲಾರದೆಂತಲೂ ಅಪ್ಪಣೆಕೊಟ್ಟು, ಶಾ. ಶ. ೧೬೮೩ನೇ ವಿಷು ಸಂವತ್ಸರದ ಜ್ಯೇಷ್ಠ ಬಹುಳ ಷಿಯಲ್ಲಿ ಬುದ್ಧಿನಿರೂಪವನ್ನೂ ಉಡುಗೆರೆ ವೀಳ್ಯಗಳನ್ನೂ ದಯಪಾಲಿಸಿ, ಖಂಡೇರಾಯನನ್ನು ಅವನ ಸ್ವಾಧೀನಮಾಡಿದರು.

ನವಾಬನು ಖಂಡೇರಾಯನನ್ನು ತನ್ನ ಸ್ವಾಧೀನಮಾಡಿಕೊಂಡು ಸೆರೆಯಲ್ಲಿ ಇಟ್ಟು ಪಂಜರದಲ್ಲಿ ಇರಿಸಿ, ಸೀಮೆಮೇಲೆ ಇದ್ದ ಇವನಕಡೇ ಜನಗಳನ್ನು ದಂಡಿಸಿ ಬಹುದ್ರವ್ಯವನ್ನು ವಸೂಲು ಮಾಡಿದನು. ಅನಂತರದಲ್ಲಿ ನವಾಬನು ಶ್ರೀರಂಗಪಟ್ಟಣದ ಕಿಲ್ಲೇದಾರಿಯನ್ನು ಮಖದುಂಸಾಬಿಗೆ ನೇಮಕಮಾಡಿ, ಶ್ರೀರಂಗಪಟ್ಟಣದ ಕೋಟೆಯನ್ನು ವಿಸ್ತಾರವಾಗಿಯೂ ಭದ್ರವಾಗಿಯೂ ಕಟ್ಟಿಸಿ, ಕೆಲವುದಿನ ಆ ಕೋಟೆಯಲ್ಲಿಯೇ ವಾಸಮಾಡಿ, ಸೀಮೆಗಳನ್ನು ಸಾಧಿಸುವದಕ್ಕೆ ಧೊರೆಗಳ ಅಪ್ಪಣೆಯನ್ನು ತೆಗೆದುಕೊಂಡು ರಾಜ್ಯದಮೇಲೆ ಹೊರಟನು.

ಧೊರೆಗಳ ಅಪ್ಪಣೆಮೇರೆಗೆ ನವಾಬನು ಸೈನ್ಯಗಳನ್ನು ಕಟ್ಟಿ ಆಯಾ ಪಾಳ್ಯಗಾರರಿಂದ ಸೀಮೆಗಳನ್ನು ಸಾಧಿಸಿದ ವಿವರ.—

ಬಾರಾಮಹಲುತಾಲ್ಲೂಕು ಗಡಿಗಳು.—(೧) ಜವಾದಿಪಾಳ್ಯ, (೨) ಮತ್ತೂರು, (೩) ಜಗದೇವ್ರ, (೪) ತಿರಪತ್ತೂರು, (೫) ಗಗನಗಡ, (೬) ಮಹಾರಾಜಗಡ, (೭) ಕೃಷ್ಣಗಿರಿ, (೮) ಕಲ್ಲಾವೀ, (೯) ಕರೋರಗಡ, (೧೦) ವಾನಂಬಾಡಿ, (೧೧) ಸಿಂಗರಪೇಟೆ, (೧೨) ಸುದರ್ಶನಗಡ, (೧೩) ಪವನಗಡ,

ಘಾಟಗಡಿಗಳು.—(೧) ದೇವಂಡಹಳ್ಳಿ, (೨) ದೊಡ್ಡಬಳ್ಳಾಪುರ, (೩) ಪೆನಗೊಂಡೆ, (೪) ಕಲ್ಲೀಕೋಟೆ, (೫) ಹಂಡೇದುರ್ಗ, (೬) ಕೋಲಾರ, (೭) ಹಂಚಹಟ್ಟೀದುರ್ಗ, (೮) ಸೀರ್ಯ, (೯) ಮಡಕಶೀರ್ಯ, (೧೦) ಕೊಡಗೊಂಡೆ, (೧೧) ಸಿರಹಟ್ಟಿಲಕ್ಷ್ಮೀಶ್ವರ, (೧೨) ಬಾಗಲ್ಲೂರು, (೧೩) ರೇವಣಸೀರ್ಯ, (೧೪) ಗುಬ್ಬಿ ಹೊಸಹಳ್ಳಿ, (೧೫) ಯಲ್ಲಪ್ಪನಾಯಕನ ಹೊಸಕೋಟೆ, (೧೬) ಪಾಲಘಾಟಚೇರಿ, (೧೭) ಚವುಟರ ಬಂಗಲ, (೧೮) ಆನೆಕಲ್ಲು, (೧೯) ಪಾವಗೊಂಡೆ, (೨೦) ರಾಯಕೋಟೆ, (೨೧) ಅಮುರಾಪುರ, (೨೨) ಮತ್ತೋಡು, (೨೩) ಬಸವಾ ಪಟ್ಟಣ, (೨೪) ಹರಿಹರ, (೨೫) ಮುಳ್ಳುಬಾಗಿಲು, (೨೬) ಜಂಗಮಕೋಟೆ, (೨೭) ಕಂಗೊಂದಿ.

ನಗರದ ಸೀಮೆಯ ಗಡಿಗಳು.—(೧) ಹವೇಲಿಬಿದನೂರು, (೨) ಕೌಲೇದುರ್ಗ, (೩) ಬೆಂಕೀಪುರ, (೪) ಮಹದೇವಪುರ, ಶಿಕಾರಪುರ, (೫) ಕುಂ , (೬) ತರೀಕೆರೆ, (೭) ಅರಗ, (೮) ಲಕ್ಕವಳ್ಳಿ, (೯) ಆನವಟ್ಟಿ, (೧೦) ಇಕ್ಕೇರಿಸಾಗರ, (೧೧) ಶಿವಮೊಗ್ಗೆ, (೧೨) ಹೊಳೇಹೊನ್ನೂರು, (೧೩) ಆಯನೂರು, (೧೪) ಚಂದ್ರಗುತ್ತಿ, (೧೫) ಅನಂತಪುರ, (೧೬) ಕೊಪ್ಪ, (೧೭) ಯಡಹಳ್ಳಿ, (೧೮) ಸಂತೇಬಿದನೂರು, (೧೯) ಉಡಗಣಿ, (೨೦) ಅಜಂಪುರ, (೨೧) ದಾನಿವಾಸ, (೨೨) ಚೆನ್ನಗಿರಿ, (೨೩) ಸೊರಬ ತವನಂದೀ, (೨೪) ಅಣಜಿ, (೨೫) ತುರಕರಹೊನ್ನಾಳಿ, (೨೬) ಮಂಡಗದ್ದೆ, (೨೭) ಜಡೆಯ, (೨೮) ಮಾವಿನ ಹೊಳೆ, (೨೯) ಬಿಳ್ಳಾಳರಾಯನದುರ್ಗ, (೩೦) * ಬಾರಕೂರು, (೩೧) ಕಾರಕಳಾ, (೩೨) ಘಂಟಿವಾಳ, (೩೩) ಮಂಗಳೂರು, ಕೊಡೆಯಾಲ, (೩೪) ಸದಾಶಿವಗಡ, (೩೫) ಕೊಲ್ಲೂರು, (೩೬) ಉಡುಪಿ, (೩೭) ಗೋಕರ್ಣ, (೩೮) ಜತಲ, (೩೯) ಸುಬ್ರಹ್ಮಣ್ಯ, (೪೦) ಶೃಂಗೇರಿ, (೪೧) ಕುಂದಾಪುರ, ಕುಶಾಲಪುರ (೪೨) ಹೊನ್ನಾವಾರ, (೪೩) ಮೂಡಬಿದರೆ, (೪೪) ಬಸವರಾಜದುರ್ಗ, (೪೫) ದರಿಯಾಬಹದರಗಡ, (೪೬) ಕೋಟೇಶ್ವರ, (೪೭) ಶಂಕರನಾರಾಯಣ, (೪೮) ಕೊಡ್ಳಿ.

ಸೋದೇಸೀಮೆಯ ಗಡಿಗಳು.—(೧) ಐನುಕಸಬೆ, (೨) ಕರೂರು, (೩) ಛಪತಹಳ್ಳಿ, (೪) ನದಿಕಟ್ಟೆ, (೫) ಜಿನ್ನಾಪುರ, (೬) ಇಸಳೂರು, (೭) ಬಿದನೋಡು, (೮) ಶಿರಶಿ, (೯) ನಾಗನೂರು, (೧೦) ಶಾಂತಪುರ, (೧೧) ತೋಟದ ಸೀಮೆ, (೧೨) ಉಳವೆ, (೧೩) ಹೆರೂರು, (೧೪) ಬಾಳೂರು, (೧೫) ಮಳಗಿ, (೧೬) ಮಂಜಗುಣಿ, (೧೭) ಮೊಣಕೀ, (೧೮) ಶಿವಳ್ಳಿ, (೧೯) ಯಲ್ಲಾಪುರ, (೨೦) ಬನವಶೀ, (೨೧) ಹುತ್ತಖಂಡ, (೨೨) ಮುದಗೊಂಡೆ, (೨೩) ಸಾಂಬ್ರಾಣಿ, (೨೪) ಕಾಳೇನಾಡು.

ಏಂಜರ್ಾ ಅಂಕೋಲೇ ಸೀಮೆಯ ಗಡಿಗಳು.—(೧) ಕಸಬೆ, (೨) ಕುದರೆ, (೩) ಕಡಿವಾಡ, (೪) ಬಾಡ, (೫) ಶಿವೇಶ್ವರ.

ಪೂರ್ವದ ದೊರೆಗಳು ಪಾಳ್ಯಗಾರರಿಂದ ಸಾಧಿಸಿದ ಗಡಿಗಳಲ್ಲಿ, ಕೆಲವನ್ನು ಅದೇ ಪಾಳ್ಯಗಾರರು ತುಂಟತನದಿಂದ ಪುನಃ ವಶ ಮಾಡಿಕೊಂಡಿದ್ದರು. ಈ ಆಳಿಕೆಯಲ್ಲಿ ಆ ಪಾಳ್ಯಗಾರರನ್ನು ಜಯಿಸಿ ಸಾಧಿಸಿದ ಗಡಿಗಳು ಯಾವವೆಂದರೆ :—

ರಣಧೀರ ಕಂಠೀರವ ನರಸರಾಜ ಒಡೆಯರವರ ಆಳಿಕೆಯಲ್ಲಿ ಸಾಧಿಸಿದ್ದು ೧.—

(೧) ಹೆಬ್ಬೂರು.

* ಇಲ್ಲಿಂದ ಮುಂದಿರುವವುಗಳು ಪಾಯನಘಾಟು ಸೀಮೆಗಳು.

ಚಿಕ್ಕದೇವರಾಜ ಒಡೆಯರವರ ಆಳಿಕೆಯಲ್ಲಿ ಸಾಧಿಸಿದ ಬಾಬತು ೫.—

ಹೊಸಕೋಟೆ, ದೇವರಾಯದುರ್ಗ, ಚನ್ನರಾಯದುರ್ಗ, ತುಮಕೂರು, ಮಧುಗಿರಿ.

ಕಂಠೀರವಮಹಾರಾಜ ಒಡೆಯರವರ ಆಳಿಕೆಯಲ್ಲಿ ಸಾಧಿಸಿದ ಬಾಬತು ೪.—

ಚಿಕ್ಕಬಳ್ಳಾಪುರ, ಸೀರ್‍ಯ, ದೊಡ್ಡಬಳ್ಳಾಪುರ, ಮಿಡಿಗೇಶಿ

ದೊಡ್ಡಕೃಷ್ಣರಾಜಒಡೆಯರವರ ಆಳಿಕೆಯಲ್ಲಿಸಾಧಿಸಿದಬಾಬತು೧.—ರತ್ನಗಿರಿ.

ಇವರ ಆಳಿಕೆಯಲ್ಲಿ ನವಾಬನಿಗೆ ಸರ್ವಾಧಿಕಾರವನ್ನು ಕೊಡುವದಕ್ಕೆ ಮುಂಚಿತವಾಗಿಯೂ, ಇವನಿಗೆ ಅಧಿಕಾರವನ್ನು ಕೊಟ್ಟ ಅನಂತರದಲ್ಲಿಯೂ, ಇವನು ಗಡಿಗಳನ್ನು ಸಾಧಿಸುವ ಕಾಲದಲ್ಲಿಯೂ ನಡೆದ ವಿವರಗಳು.—

ಬಿದಲೂರನ್ನು ಸಾಧಿಸಿದ ವಿಚಾರ.—ನವಾಬನು ಚಿತ್ರದುರ್ಗಕ್ಕೆ ಹೋಗಿ ಮುತ್ತಿಗೆಯನ್ನು ಹಾಕಿ ಈ ದುರ್ಗದ ಮದಗಿರಿನಾಯಕ ನಿಂದ ಸಂವತ್ಸರಕ್ಕೆ ೮ ಲಕ್ಷ ದುಗ್ಗಾಣಿ ವರಹಗಳ ಖಂಡಣೆಯನ್ನು ಗೊತ್ತು ಮಾಡಿಕೊಂಡನು. ಅನಂತರದಲ್ಲಿ ಮದಗಿರಿನಾಯಕನಿಗೂ ಬಿದ ಲೂರು ಪಾಳ್ಯಗಾರನಿಗೂ ದ್ವೇಷವಿದ್ದದ್ದರಿಂದ, ಮದಗಿರಿನಾಯಕನು ಬಿದ ಲೂರು ಪಾಳ್ಯಗಾರನ ದತ್ತಪುತ್ರನಾದ ಚನ್ನಬಸವಯ್ಯನಿಗೂ ಇವನ ಸಾಕು ತಾಯಿಯಾದ ವೀರಮ್ಮನೆಂಬ ರಾಣಿಗೂ ಪರಸ್ಪರ ಕಲಹವಿತ್ತೆಂಬ ಮರ್ಮವನ್ನು ತಿಳಿದವನಾದ್ದರಿಂದ, ಈ ಬಿದಲೂರನ್ನು ಸ್ವಾಧೀನ ಮಾಡಿ ಕೊಡುತ್ತೇನೆಂದು ನವಾಬರಿಗೆ ಹೇಳಿ ಕರೆದುಕೊಂಡು ಹೋಗುತ್ತಿದ್ದನು. ಆ ಸಮಯದಲ್ಲಿ ಬಿದಲೂರು ರಾಣಿಯು ನವಾಬರು ಬರುತ್ತಾರೆಂಬ ವರ್ತ ಮಾನವನ್ನು ತಿಳಿದು, ತನ್ನ ದತ್ತು ಮಗನ ಮೇಲಣ ಅಸೂಯೆಯಿಂದ ತನ್ನ ಗಂಡನು ಸಂಪಾದಿಸಿದ ದ್ರವ್ಯ ವಸ್ತ್ರಾಭರಣಾದಿ ಪದಾರ್ಥಗಳಲ್ಲಿ ತನಗೆ ಬೇಕಾದಷ್ಟು ತೆಗೆದುಕೊಂಡು, ಉಳಿದದ್ದನ್ನು ಒಂದು ಕೊಠಡಿಯಲ್ಲಿ ಹಾಕಿ, ಆ ಕೊಠಡಿಗೆ ಬೆಂಕಿಯನ್ನು ಹಚ್ಚಿ ಬಿಟ್ಟು, ಅಲ್ಲಿ ದಿವಾನಗಿರಿ ಮಾಡು ತ್ತಿದ್ದ ನಂಜಯ್ಯನಿಗೂ ಈ ವೀರಮ್ಮರಾಣಿಗೂ ಬಹಳ ಸ್ನೇಹವಿದ್ದದ್ದರಿಂದ ಅವನನ್ನು ಕಟ್ಟಿಕೊಂಡು, ಬಳ್ಳಾಳರಾಯನ ದರ್ಗಾಭಿಮುಖವಾಗಿ ಹೊರ ಟಳು. ನವಾಬನು ಈ ವರ್ತಮಾನವನ್ನು ತಿಳಿದು ಜಾಗ್ರತೆಯಾಗಿ ಬೆಂಕಿ

ಯನ್ನು ಅರಿಸಿ, ಆ ಬಿದಲೂರನ್ನೂ ಅದಕ್ಕೆ ಶಳಿತವಾದ ಸೀಮೆಯನ್ನೂ ಸಹ ಸ್ವಾಧೀನ ಮಾಡಿಕೊಂಡು, ಆ ರಾಣಿಯು ಹೋಗದಂತೆ ಅವಳನ್ನು ತಡೆದು, ಅವಳ ಸಾಕುಮಗನಾದ ಚನ್ನಬಸವಯ್ಯನನ್ನು ಹಿಡಿದು, ಇವರಿಬ್ಬರನ್ನೂ ಮಧ್ಗಿರಿಯಲ್ಲಿ ಕೈದುಮಾಡಿ ಇರಿಸಿದನು.

ಅನಂತರ ನವಾಬನು ಈ ಬಿದಲೂರಲ್ಲಿರುವ ಇಕ್ಕೇರೀ ವರಹಾಕ್ಕೂ ದುರ್ಗದಸೀಮೆಯದುರ್ಗೀ ವರಹಾಕ್ಕೂ ಸಹ ಬದಲಾಗಿ ಸ್ವಾಮಿಯ ಹೆಸರಿನಿಂದ ಚಿನ್ನದ ನಾಣ್ಯವೂ ಅದೇ ಮೇರೆಗೆ ಆಗಬೇಕೆಂಬದಾಗಿಯೂ, ಈ ಬಿದಲೂರಿಗೆ ಮತ್ತೊಂದು ಹೆಸರು ಇಡಬೇಕೆಂಬದಾಗಿಯೂ ಧೊರೆಗಳ ಸನ್ನಿಧಾನಕ್ಕೆ ಅರ್ಜಿಯನ್ನು ಬಿನ್ನಹ ಮಾಡಿಕೊಂಡು, ಧೊರೆಗಳ ಬುದ್ಧಿಸಿರೂಪ ಅಪ್ಪಣೆಯಾದಂತೆ, ಬಿದಲೂರಿಗೆ ನಗರವೆಂಬದಾಗಿ ಹೆಸರನ್ನಿಟ್ಟು, ನೂತನವಾಗಿ ಬಹದರೀ ಚಿನ್ನದ ನಾಣ್ಯದ ವರಹಕ್ಕೆ ಟಂಕಸಾಲೆಯನ್ನು ಉಂಟುಮಾಡಿ, ಈ ಬಹದರೀ ವರಹವು ಸೀಮೇ ಮೇಲೆ ಚಲಾವಣೆಯಾಗುವಂತೆ, ಶಾ. ೧೬೮೫ನೇ ಚಿತ್ರಭಾನು ಸಂವತ್ಸರದ ಫಾಲ್ಗುನಮಾಸದಲ್ಲಿ ನಿಬಂಧನೆಯನ್ನು ಮಾಡಿ, ಈ ನಗರದ ಸೀಮೆಯ ಬಂದೋಬಸ್ತಿನಬಗ್ಗೆ ಮಧ್ಗಿರಿ ವೆಂಕಪ್ಪಯ್ಯನಿಗೆ ದಿವಾನಗಿರಿಯನ್ನು ಕೊಟ್ಟದ್ದಲ್ಲದೆ, ಶ್ರೀರಂಗಪಟ್ಟಣದ ದಿವಾನಗಿರಿಯನ್ನು ದಿಂಡಗಲ್ಲು ವೆಂಕಟಪತಯ್ಯನೆಂಬವನಿಗೆ ಧೊರೆಗಳ ಅಪ್ಪಣೆಮೇರೆಗೆ ನೇಮಕ ಮಾಡಿಸಿದನು.

ಅನಂತರದಲ್ಲಿ ನವಾಬನು ಕೊಡೆಯಾಲದಲ್ಲಿ ಜಹಜುಗಳನ್ನು ಮಾಡಿಸಿ, ಬೇಕಾದ ಪದಾರ್ಥಗಳನ್ನು ನೀರಮೇಲಿಂದ ಶ್ರೀರಂಗಪಟ್ಟಣಕ್ಕೆ ತರಿಸುತ್ತಾ ಬಂದನು.

ಫೈಜುಲ್ಲಾಖಾನನ ವಿಚಾರ.—ಅನಂತರ ಮೇಲೆ ಬರೆದಿರುವ ಸೋದೆ ಮುಂತಾದ ಸಂಸ್ಥಾನಗಳನ್ನೂ ಪಾಳ್ಯಗಾರರ ಗಡಿಗಳನ್ನೂ ಸಾಧಿಸುವಾಗ ನವಾಬರಂತಮ್ಮಲ್ಲಿ ಶೂರರಾಗಿ ಇದ್ದ ಫೈಜುಲ್ಲಾಖಾನ್ ಮುಂತಾದ ಸರದಾರರ ಸಂಗಡ ಧೊರೆಗಳವರ ಅಪ್ಪಣೆಮೇರೆಗೆ ಕೆಲವು ಸೈನ್ಯಗಳನ್ನು ಕೊಟ್ಟು ಕಳುಹಿಸಿದರು. ಈ ವರ್ತಮಾನವನ್ನು ಅಲ್ಲಲ್ಲಿ ಪಾಳ್ಯಗಾರರು ತಿಳಿದು,

ಇವರ ಸಂಗಡ ಯುದ್ಧ ಮಾಡುವದಕ್ಕೆ ಸಾಮರ್ಥ್ಯವಿಲ್ಲದೆ ಚಿಂತಿಸುತ್ತಿರುವಾಗ, ಈ ಸೋದೆ ಸಂಸ್ಥಾನದ ಅರಸು ತನ್ನ ಹೆಂಗಸರು ಮಕ್ಕಳನ್ನು ಕರೆದುಕೊಂಡು, ಕೆಲವು ವಸ್ತ್ರಾಭರಣಾದಿ ಪದಾರ್ಥಗಳನ್ನು ತೆಗೆದುಕೊಂಡು ಓಡಿ ಹೋದನು. ಫೈಜುಲ್ಲಾಖಾನನು ಈ ಸಂಸ್ಥಾನಕ್ಕೆ ಸೇರಿದ ೨೪ ಗಡಿಗಳನ್ನು ಸ್ವಾಧೀನಮಾಡಿಕೊಂಡು ಮತ್ತು ಪಂಚಮಹಲಿಗೆ ಸೇರಿದ ಅಂಕೋಲೆಮುಂತಾದ ೫ ಗಡಿಗಳನ್ನು ಕಟ್ಟಿಕೊಂಡು ರಾಣೀಬಿದನೂರನ್ನು ಸಾಧಿಸುವದಕ್ಕೆ ಹೋದನು. ಆಗ ಮಾರ್ಗದಲ್ಲಿ ಶ್ರವಣೂರ ನವಾಬ್ ಅಬ್ದುಲ್ ಹಕೀಂಖಾನನು ತನ್ನ ಸೈನ್ಯವನ್ನು ತೆಗೆದುಕೊಂಡು ಬಂದು ಆ ದಂಡನ್ನು ತಡೆದನು. ಈ ವರ್ತಮಾನವು ನವಾಬರಿಗೆ ತಿಳಿದದ್ದರಿಂದ, ನವಾಬರು ಈ ಫೈಜುಲ್ಲಾಖಾನನಿಗೆ ಸಹಾಯವಾಗಿ ದಂಡನ್ನು ತೆಗೆದುಕೊಂಡು ಹೋದರು. ಆ ಅಬ್ದುಲ್‌ಖಾನನು ಈ ವೃತ್ತಾಂತವನ್ನು ಕೇಳಿ, ಫೈಜುಲ್ಲಾಖಾನನ ಮುಖಾಂತರ ಶ್ರವಣೂರ ನಾಣ್ಯ ೩ ಲಕ್ಷ ವರಹಗಳನ್ನು ಖಂಡಣಿಯನ್ನು ಕೊಡುತ್ತೇನೆಂಬದಾಗಿ ಒಪ್ಪಿಕೊಂಡು ಹಣವನ್ನು ಕೊಟ್ಟದ್ದಲ್ಲದೆ, ನವಾಬರಿಗೆ ಜವಾಹಿರು ಕಠಾರಿಯನ್ನು ಕಳುಹಿಸಿಕೊಟ್ಟನು.

ನವಾಬರು ತಾವು ಸಾಧಿಸಿದ ಗಡಿಗಳ ವಿವರವನ್ನು ಅರ್ಜಿ ಬರೆದು, ಶ್ರವಣೂರ ನವಾಬನು ಕೊಟ್ಟು ಕಳುಹಿಸಿದ ಜವಾಹಿರು ಕಠಾರಿಯನ್ನು ಆ ಅರ್ಜಿಯ ಸಂಗಡ ಶ್ರೀರಂಗಪಟ್ಟಣಕ್ಕೆ ಧೊರೆಗಳವರ ಸನ್ನಿಧಿಗೆ ಕಳುಹಿಸಿಕೊಟ್ಟು, ಮರಾಟಿಯವರ ಸೀಮೆಯನ್ನು ಲೂಟಿಮಾಡಿ ಕೆಲವು ಸೀಮೆಗಳನ್ನು ಸಾಧಿಸಿಕೊಂಡು ಬರುವಂತೆ ಮೀರ ಫೈಜುಲ್ಲಾಖಾನನೊಡನೆ ಹೇಳಿ ಕಳುಹಿಸಿಕೊಟ್ಟು, ತಾವು ನಗರಕ್ಕೆ ಬಂದರು. ಫೈಜುಲ್ಲಾಖಾನನು ಮರಾಟಿಯವರ ಸೀಮೆಯಲ್ಲಿ ಯುದ್ಧಮಾಡಿ, ಶಾ. ೧೬೮೬ನೇ ತಾರಣ ಸಂವತ್ಸರದಲ್ಲಿ ಕೃಷ್ಣಾನದಿಯ ಪರ್ಯಂತಕ್ಕೂ ಕೆಲವುಗಡಿಗಳನ್ನು ಸಾಧಿಸಿಕೊಂಡು ಬಂದನು.

ಪಾರ್ಥಿವ ಸಂವತ್ಸರದಲ್ಲಿ ನವಾಬರ ಸೈನ್ಯವು ಘಟ್ಟದ ಕೆಳಕ್ಕೆ ಹೋಗಿ ತಿಲ್ಲಿನ ಪಾಳ್ಯಗಾರರು ಪುನಃ ತುಂಟತನ ಮಾಡುತ್ತಾ ಇದ್ದದರಿಂದ ಆ ಪಾಳ್ಯಗಾರರನ್ನು ನಿಗ್ರಹಿಸಿ ಸೀಮೆಗಳನ್ನು ಬಂದೋಬಸ್ತು ಮಾಡಿದರು.

ಕಲ್ಲೀಕೋಟೆಯನ್ನು ಸ್ವಾಧೀನಮಾಡಿಕೊಂಡದ್ದು.—ನಾಯಿಮಾರರ ಸೀಮೋಲ್ಲಂಘನಗಳು ತುಂಟತನವನ್ನು ಮಾಡುತ್ತಿರಲು, ನವಾಬರು ಆ ವರ್ತಮಾನವನ್ನು ಕೇಳಿ, ಸೇನಾಸಮೇತರಾಗಿ ಕಲ್ಲೀಕೋಟೆಗೆ ಹೋಗಿ ಮುತ್ತಿಗೆ ಹಾಕಲು, ಅಲ್ಲಿನ ನಾಯಿಮಾರರು ಶ್ರೀರಂಗಪಟ್ಟಣದ ಭಾರಿನ ಸಿಪಾಯಿಗಳ ಕೆಂಪು ಕುಡತೆಗಳನ್ನೂ ಕರೀ ಪಾಗುಗಳನ್ನೂ ನೋಡಿ ಭಯಪಟ್ಟು ಓಡಿ ಹೋದರು. ಆ ಕಲ್ಲೀಕೋಟೆಯ ಪಾಳ್ಯಗಾರನಾದ ಮಾನವಿಕ್ರಮನು ನವಾಬರ ಬಳಿಗೆ ಬಂದು ಕಾಣಿಸಿಕೊಳ್ಳಲು, ನವಾಬರು ಅವನಿಗೆ ಸನ್ಮಾನಗಳನ್ನು ಮಾಡಿ, ೪ ಲಕ್ಷ ಶಾಹಾರಿ ಕಾಸುಗಳನ್ನು ಕೊಟ್ಟರೆ ನಿನ್ನ ಕಲ್ಲೀಕೋಟೆಯನ್ನು ನಿನಗೆ ಕೊಡುತ್ತೇನೆಂದು ಹೇಳಿ ಒಡಂಬಡಿಸಿ, ತಮ್ಮ ದಂಡಿನ ಸಮೀಪದಲ್ಲಿ ಒಂದು ದೇವಸ್ಥಾನದಲ್ಲಿ ಇಳಿಸಿ ಇದ್ದರು. ಆ ಮಾನವಿಕ್ರಮನು ಆ ದೇವಸ್ಥಾನದಲ್ಲಿ ೨-೩ ದಿನಗಳಿದ್ದು, ನವಾಬರು ಹಣಕ್ಕೆ ಹೇಳಿ ಕಳುಹಿಸಲು ಹಣವನ್ನು ಕೊಡುವದಕ್ಕೆ ಗತಿಯಿಲ್ಲದೆ, ತಾನು ಇಳಿದಿದ್ದ ದೇವಸ್ಥಾನದ ಬಾಗಿಲಿಗೆ ಬೆಂಕಿಯನ್ನು ಹಾಕಿ, ತಾನು ಒಳಗೆ ಸತ್ತು ಹೋದನು. ಈ ವರ್ತಮಾನವನ್ನು ನವಾಬರು ತಿಳಿದು, ಕಲ್ಲೀಕೋಟೇ ಸೀಮೆಯನ್ನು ಬಂದೋಬಸ್ತು ಮಾಡಿ, ಅಲ್ಲಿನ ಪೂರ್ವದಲ್ಲಿ ಇದ್ದ ಮಣ್ಣು ಕೋಟೆಗೆ ಬದಲು ಕಲ್ಲು ಕೋಟೆಯನ್ನು ಕಟ್ಟಿಸಿ, ಅಲ್ಲಿನ ಅಧಿಕಾರದ ಬಗ್ಗೆ, ತೆರ ಕಣಾಂಬಿ ಶಂಕರಗೌಡನ ಮಗ ಕೊಯಮುತ್ತೂರು ಅಧಿಕಾರದಲ್ಲಿ ಇದ್ದ ಪುಟ್ಟಮಾವಣ್ಣನಿಗೆ ಧೊರೆಗಳವರ ಅಪ್ಪಣೆಮೇರೆಗೆ ನೇಮಕಮಾಡಿಸಿದರು.

ಇಮ್ಮಡಿ ಕೃಷ್ಣರಾಜ ಒಡೆಯರವರು ಸ್ವರ್ಗಸ್ಥರಾದ ವಿಚಾರ.—ನವಾಬರು ಕಲ್ಲೀಕೋಟೆಯಲ್ಲಿ ಇರುವ ಸಮಯದಲ್ಲಿಯೇ, ಶಾ. ೧೬೮೯ ನೇ ವ್ಯಯಸಂವತ್ಸರದ ನಿಜ ಚೈತ್ರ ಬಹುಳ ಪಾಡ್ಯಮಿ ಶುಕ್ರವಾರದಲ್ಲಿ, ಶ್ರೀರಂಗಪಟ್ಟಣದಲ್ಲಿ ಧೊರೆಗಳಾದ ಇಮ್ಮಡಿ ಕೃಷ್ಣರಾಜ ಒಡೆಯರವರು ವೈಕುಂಠಮಾರ್ಗವನ್ನು ಅಪೇಕ್ಷಿಸಿ ತೆರಳಿದರು. ಈ ವರ್ತಮಾನವು ಶ್ರೀರಂಗಪಟ್ಟಣದಿಂದ ನವಾಬರ ಬಳಿಗೆ ಬರಲು, ನವಾಬರು ಬಹಳ ಚಿಂತಾಕ್ರಾಂತರಾಗಿ ಶ್ರೀರಂಗಪಟ್ಟಣದ ಕಿಲ್ಲೇದಾರಿ ಮಾಡುತ್ತಿದ್ದ ಮೊಗದುಂಸಾಬನಿಗೆ "ನೀನು ಅರಮನೆಗೆ ಹೋಗಿ ಮಹಾಮಾತುಶ್ರೀಯವರ ಸನ್ನಿಧಾನಕ್ಕೆ ಸಮಾಧಾನೋಕ್ತಿ

ಯನ್ನು ಅರಿಕೆ ಮಾಡಿ, ಅನಂತರದಲ್ಲಿ ಇಮ್ಮಡಿ ಕೃಷ್ಣರಾಜ ಒಡೆಯರವರಿಗೆ ಅರಮನೆಯ ಶಾಸ್ತ್ರಸಂಪ್ರದಾಯದ ಮೇರೆಗೆ ಪರಲೋಕ ಸಾಧನವನ್ನು ಮಾಡಿಸಿ, ಮಹಾಮಾತುಶ್ರೀ ಚಲುವಾಜಮ್ಮಣ್ಣಿಯವರ ಅಪ್ಪಣೆ ಮೇರೆಗೆ ಚಿಕ್ಕಧೊರೆಗಳಿಗೆ ಪಟ್ಟಾಭಿಷೇಕವನ್ನು ಮಾಡಿಸು" ಎಂದು ಉತ್ತರವನ್ನು ಬರೆದು ಕಳುಹಿಸಿದರು. ಆ ಮೊಗದುಂ ಸಾಬನು ಅರಮನೆಗೆ ಬಂದು ಅದೇ ಮೇರೆಗೆ ಮಹಾ ಮಾತುಶ್ರೀಯವರ ಸನ್ನಿಧಾನಕ್ಕೆ ಅರಿಕೆ ಮಾಡಿಸಿ, ಮುಂದೆ ಸನ್ನಿಧಾನದಲ್ಲಿ ಯಾವ ವಿಷಯವಾಗಿ ಏನು ಅಪ್ಪಣೆಯಾದರೂ ಅಪ್ಪಣೆ ಮೇರೆಗೆ ನಡೆದುಕೊಳ್ಳುತ್ತೇನೆ ಎಂದು ಬಿನ್ನವಿಸಿದನು. ಅನಂತರ ಇವರ ಸಪತ್ನೀಮಾತೃ ಚಲುವಾಜಮ್ಮಣ್ಣಿಯವರು ಈ ಇಮ್ಮಡಿ ಕೃಷ್ಣರಾಜಒಡೆಯರವರಿಗೆ ಪರಲೋಕಸಾಧನವ್ಯಾಪಾರವನ್ನು ಗುಡಮಾಚನಹಳ್ಳಿ ಚಾಮಯ್ಯನ ಮಗ ಬೆಟ್ಟದಯ್ಯನ ಕೈಯಲ್ಲಿ ಮಾಡಿಸಿದರು. ಸಹಗಮನವಿಲ್ಲ.

	ವರ್ಷ.	ತಿಂಗಳು.	ದಿನ.
ಇಮ್ಮಡಿ ಕೃಷ್ಣರಾಜ ಒಡೆಯರವರ ಆದ್ಯಂತ ವಯಸ್ಸು.	೩೪	೫	೨೮
,, ,, ಆಳಿಕೆ.	೩೧	೯	೨೧

ಈ ಆಳಿಕೆಯಲ್ಲಿ ಅಧಿಕಾರ ಮಾಡುತ್ತಿದ್ದ ಜನಗಳ ವಿವರ.—

೧. ದಳವಾಯಿ ದೇವರಾಜಯ್ಯ.
೨. ಸರ್ವಾಧಿಕಾರಿ ನಂಜರಾಜಯ್ಯ.
೩. ಕರಾಚೂರಿ ನಂಜರಾಜಯ್ಯ.
೪. ಪ್ರಧಾನ ಕನ್ನಂಬಾಡಿ ವೆಂಕಟಪತಯ್ಯ.
೫. ಪ್ರಧಾನ ಬಾಗಿಲ ಕಂದಾಚಾರದ ಚನ್ನಪ್ಪಯ್ಯ.
೬. ನವಾಬ್ ಹೈದರಲ್ಲೀಖಾನ್ ಬಹದ್ದರ.
೭. ದಿವಾನ್ ಖಂಡೇರಾಯ.

೧೦ನೇ ಅಧ್ಯಾಯ.

೧೯. ನಂಜರಾಜ ಒಡೆಯರವರು.

ಜನನ.—ಶಾ॥ ಶಕ—೧೬೮೫ನೇ ಚಿತ್ರಭಾನು ಸಂವತ್ಸರದ ವೈಶಾಖ ಶುದ್ಧ ೫.
ಪಟ್ಟಾಭಿಷೇಕ.—೧೬೮೯ನೇ ವ್ಯಯ ಸಂವತ್ಸರದ ನಿಜ ಚೈತ್ರ ಬಹುಳ ೧೩.
ಪತ್ನೀಪುತ್ರರು.—ಇವರಿಗೆ ಪತ್ನೀಪುತ್ರರು ಇಲ್ಲ.

ಈ ನಂಜರಾಜ ಒಡೆಯರವರ ಸಾಪತ್ನೀ ಹೆತ್ತಮ್ಮಯ್ಯನವರಾದ ಚೆಲುವಾಜಮ್ಮಣ್ಣಿಯವರು, ಒಟ್ಟು ಸರ್ವಾಧಿಕಾರವನ್ನು ಮಾಡುತ್ತಿದ್ದ ನವಾಬರು ಕಲ್ಲೀಕೋಟೆಗೆ ಹೋಗಿರುವ ಸಮಯದಲ್ಲಿ, ಪಟ್ಟಣದ ಕಿಲ್ಲೇದಾರಿ ಮಾಡುತ್ತಲಿದ್ದ ಮೊಗದುಂಸಾಬನಿಗೆ ಅಪ್ಪಣೆಯನ್ನು ಕೊಟ್ಟು ಪಟ್ಟಾಭಿಷೇಕ ಮಹೋತ್ಸವವನ್ನು ಮಾಡಿಸಿದರು.

ನಂಜರಾಜಯ್ಯನವರ ಲಕ್ಷ ಸೀಮೆಯನ್ನು ತೆಗೆದುಕೊಂಡು ಖೈದು ಮಾಡಿದ ವಿವರ.—ಕರಾಚೂರಿ ನಂಜರಾಜಯ್ಯನವರು ಕೊಣನೂರನ್ನು ಬಿಟ್ಟು ಪುನಃ ಮಹೀಶೂರನಗರಕ್ಕೆ ಬಂದು ಇರುವ ಸಮಯದಲ್ಲಿ, ಚನ್ನಪಟ್ಟಣದ ನಿಜಾಮಲ್ಲೀಖಾನರಿಗೂ ಮರಾಟಿಯವರಿಗೂ “ ಈ ನಮ್ಮ ನವಾಬನನ್ನು ಹೊಡೆದುಹಾಕಿ ಧೊರೆಗಳವರ ಸನ್ನಿಧಿಯಲ್ಲಿ ಪೂರ್ವದಂತೆ ನಮ್ಮ ಚಾಕರಿಯನ್ನು ನಮಗೆ ಕೊಡಿಸಬೇಕು ” ಎಂದು ಪಿತೂರೀ ಕಾಗದವನ್ನು ಬರೆದರು. ಈ ವರ್ತಮಾನವು ನವಾಬರಿಗೆ ತಿಳಿದದ್ದರಿಂದ, ನವಾಬರು ಮಹೀಶೂರಿಗೆ ಬಂದು ನಂಜರಾಜಯ್ಯನವರನ್ನು ಕಂಡು ಅತಿ ವಿನಯದಿಂದ “ ನಿಮ್ಮ ಮಕ್ಕಳಾದ ವೀರರಾಜಯ್ಯನವರಿಗೆ ಮದುವೆಯನ್ನು ಮಾಡಿಸಿ, ನಿಮಗೆ ಪೂರ್ವದಂತೆಯೇ ಲಕ್ಷ ಸೀಮೆಯನ್ನು ಕೊಡುತ್ತಲಿದ್ದೇನೆ. ಶ್ರೀರಂಗಪಟ್ಟಣದ ಕೋಟೇ ಮಹೀಶೂರ ಬಾಗಿಲನ್ನೂ ಮೂಡಣ ಬಾಗಿಲನ್ನೂ ಸಹ ನಿಮ್ಮ ಸ್ವಾಧೀನ ಮಾಡಿ ಕೊಡುತ್ತೇನೆ ” ಎಂಬದಾಗಿ ಈ ವಿಚಾರಕ್ಕೆಲ್ಲಾ ವಂಚನೆಯಾದ ಕರಾರುನಾಮೇ ಕಾಗದಗಳನ್ನು ಬರಿಸಿ ಕೊಟ್ಟದ್ದಲ್ಲದೆ, ಫೈಜುಲ್ಲಾಖಾನನ ಮುಖಾಂತರ ಇವರಿಗೆ ಭಾಷೆಯನ್ನು ಕೊಡಿಸಿ,

ಈ ನಂಜರಾಜಯ್ಯನವರನ್ನು ಕುಟುಂಬ ಸಹಿತವಾಗಿ ಕರೆದುತಂದು ಶ್ರೀರಂಗ ಪಟ್ಟಣದ ಪೇಟೇ ಮನೆಯಲ್ಲಿ ಇರಿಸಿ, ಸುತ್ತಲೂ ಚೌಕೀ ಪಹರೆಯನ್ನಿಟ್ಟು ಬಂದೋಬಸ್ತು ಮಾಡಿ, ಅವರಿಗೆ ಕೊಟ್ಟಿದ್ದ ಕೊಣನೂರು ಮುಂತಾದ ಲಕ್ಷ ಸೀಮೆಯನ್ನು ಜಪ್ತಿ ಮಾಡಿ, ಅವರ ಜೀವನಕ್ಕೆ ಮಾತ್ರ ಕಳಲೇ ಸೀಮೆಯನ್ನು ಶಾ ೧೬೯೦ನೇ ಸರ್ವಜಿತು ಸಂವತ್ಸರದಲ್ಲಿ ಜಹಗೀರಾಗಿ ಕೊಡಿಸಿದರು. ಅನಂತರದಲ್ಲಿ ನವಾಬರು ಆ ಪಿತೂರೀ ಕಾಗದದ ಮರ್ಮವನ್ನು ಹೇಳಿದ ನಂಜರಾಜಯ್ಯನ ಕಡೆ ಓಬಳಯ್ಯ ಕಾಳಯ್ಯ ರೇಚವರಿಗೆ ತೋಷೀಖಾನೆ ಮುಂತಾದ ಸ್ಥಳಗಳಲ್ಲಿ ದಫ್ತರಗಳನ್ನು ಕೊಟ್ಟು, ಈ ಪಿತೂರೀ ವಿಷಯಕ್ಕೆ ಸಹಾಯಕರಾಗಿ ಇದ್ದ ಮಲ್ಲು ಅಣ್ಣ ಮುಂತಾದ ಉಳಿಗದವರಿಗೆಲ್ಲಾ ಕೈದುಮಾಡಿ ದಂಡಗಳನ್ನು ತೆಗದು ಕೊಂಡರು.

ನವಾಬರು ಕೆಳವೇ ಕೆಳಗೆ ಚನ್ನಪಟ್ಟಣದ ಮಹಮ್ಮದಲ್ಲೀಖಾನ್, ಇಂಗ್ಲಿಷ ಸರದಾರರು, ಮರಾಟೆಯವರು, ಮತ್ತು ಕೆಲವು ನವಾಬರುಗಳು, ಕೆಲವು ಪಾಳ್ಯಗಾರರು, ಇವರ ಸಂಗತ ೧೦—೮ ಸಾರಿ ಬಹಳ ಯುದ್ಧಗಳನ್ನು ಮಾಡಿ ಸೀಮೆಗಳನ್ನು ಸಾಧಿಸಿದ ವಿವರ.—

ಮರಾಟೆಯವರೊಡನೆ ಯುದ್ಧ.—ನವಾಬರು ಕೃಷ್ಣಾ ನದಿಯ ಪರ್ಯಂತಕ್ಕೂ ಹೋಗಿ, ಪುನಹಾದ ಪೇಷವ ಮಾಧವರಾಯನೊಡನೆ ಯುದ್ಧ ಮಾಡಿ, ಅವನ ಸೀಮೆಯನ್ನು ಲೂಟಿ ಮಾಡಿ, ಕೆಲವು ವಸ್ತ್ರಾಭರಣಗಳನ್ನು ಸಂಪಾದಿಸಿ, ಬಳ್ಳಾರಿಯನ್ನು ಮುತ್ತಿಗೆ ಹಾಕಿ ಕಟ್ಟಿಕೊಂಡು ಬರುತ್ತಿದ್ದರು. ಆಸಮಯದಲ್ಲಿ ಆ ಪೇಷವೆ ಮಾಧವರಾಯನ ಸೈನ್ಯವು ಕೃಷ್ಣಾನದಿಯನ್ನು ದಾಟಿ ಬೆನ್ನಟ್ಟಿ ಬಂದಿತು. ಅಷ್ಟರಲ್ಲಿ ನವಾಬರು ಸೈನ್ಯ ಸಹಿತವಾಗಿ ತುಂಗಭದ್ರಾನದಿಯನ್ನು ದಾಟಿಬಂದರು.

ಮಾಧವರಾಯನ ಸೈನ್ಯವು ಹಿಂದಟ್ಟಿ ಬರುವದೆಂಬ ವರ್ತಮಾನವನ್ನು ಕೇಳಿ ನವಾಬರು ಶ್ರೀರಂಗ ಪಟ್ಟಣಕ್ಕೆ ಬರುವ ಮಧ್ಯಮಾರ್ಗದಲ್ಲಿ ತುಂಗಭದ್ರಾ ನದಿಯು ಪೂರ್ಣಪ್ರವಾಹ ಬಂದಿರಲು, ನದಿಯನ್ನು ದಾಟುವದಕ್ಕೆ ಸಾಮರ್ಥ್ಯವಿಲ್ಲದೆ, ಹಿಂದು ಮುಂದು ತೋರದೆ, ಬಹಳ ಭೀತರಾಗಿ, ಮಹೀಶೂರ ಸಂಸ್ಥಾನಕ್ಕೆ ಮುಖ್ಯಾಭಿಮಾನಿಯಾದ ಶ್ರೀಚಾಮುಂಡೇಶ್ವರೀ ಅಮ್ಮನವರಿಗೂ, ಮಹಾತ್ಮರಾದ ಧೊರೆಗಳು ನಂಜರಾಜ

ಒಡೆಯರವರಿಗೂ ಬಹಳ ಕಾಣಿಕೆಗಳನ್ನು ಕಟ್ಟಿಕೊಂಡು, ತುಂಗಭದ್ರಾನದಿಯನ್ನು ಪೂಜೆ ಮಾಡಿಸಿ ಪ್ರಾರ್ಥನೆಯನ್ನು ಮಾಡಿಕೊಂಡು, ಇಮಾಂಬಕಷ್ ಎಂಬ ಆನೆಯ ಮೇಲೆ ಹಳದೀ ಬನಾತಿನ ಕರೀ ಬಬ್ಬರೀ ಅಂಬಾರಿಯಲ್ಲಿ ಕೂತುಕೊಂಡು ಆ ನದಿಯಲ್ಲಿ ತಾವೇ ಮುಂಚಿತವಾಗಿ ಆನೆಯನ್ನು ಇಳಿಸುತ್ತಲೇ ನದಿಯ ನೀರು ಸ್ವಲ್ಪವಾಯಿತು. ಸೈನ್ಯವೆಲ್ಲಾ ಆನೆಯ ಹಿಂದುಗಡೆಯೇ ಹೊರಟಿತು. ಹೀಗೆ ಶ್ರೀಚಾಮುಂಡೇಶ್ವರೀ ಅಮ್ಮನವರ ಕೃಪಾಕಟಾಕ್ಷದಿಂದಲೂ, ಮುಂದೆ ಈ ನವಾಬರಿಂದ ಬಹು ಕಾರ್ಯಗಳು ನಡೆಯ ಬೇಕಾದದರಿಂದಲೂ, ನದಿಯು ಮಾರ್ಗವನ್ನು ಕೊಟ್ಟು; ನವಾಬರು ಕೂತುಕೊಂಡಿದ್ದ ಆನೆಯೂ ಇವರ ದಂಡೂ ನದಿಯ ಮೇಲಕ್ಕೆ ಬರುವವರಿಗೂ ನದಿಯಲ್ಲಿಯೇ ಇದ್ದು, ಅವರು ನದಿಯ ಮೇಲಕ್ಕೆ ಬಂದ ಮೇಲೆ ಪುನಃ ಪೂರ್ವದಂತೆ ಪೂರ್ಣಪ್ರವಾಹ ಬಂದು, ಜನರು ದಾಟುವ ದಕ್ಕೆ ಸಾಮರ್ಥ್ಯವಿಲ್ಲದಂತೆ ಮಾಡಿತು. ಆಗ ಹಿಂದೆ ಜನ್ನಟ್ಟಿ ಬಂದ ಪೇಷವೇ ಮಾಧವ ರಾಯನ ದಂಡಿನ ಜನಗಳು ಈ ಮಹಿಮೆಯನ್ನು ನೋಡಿ ಶಾ॥ ೧೬೯೧ನೇ ವಿರೋಧಿ ಸಂವತ್ಸರದಲ್ಲಿ ಹಿಂತಿರುಗಿ ಹೋದರು.

ರಣಧೀರಕಂಠೀರವ ನರಸರಾಜಒಡೆಯರವರ ಆಳಿಕೆಗೆ ಸೇರಿಯಿದ್ದ ಡೆಂಕಣೀ ಕೋಟೆ ಬಂದು ಪಿನಹಾ ಸಾಧಿಸಿದ ೧೪ ಗಡಿಗಳ ವಿವರ.—ಕರೂರು, ಕಾಂಗ್ಯ, ಕೊಳ್ಳೇಗಾಲ, ಸೂಬೆಸಂಸ್ಥಾನ, ಧಾರಿನಾಯಕನಪಾಳ್ಯ, ಹವೇಲಿ, ಗುಂಡೂರುರಾಜಕೋಟೆ, ವಲಿವೊದಲಾ, ಕೊಟ್ಪಾಲ ಪೆಡಪಲ್ಲಿ, ಪಿಲೆರಗೊಟಕಾಲವಾ, ಕೊವರ್ಕಾಲವಾ, ಮದನಪಲ್ಲಿ, ಪೆದ್ದಪಾಳ್ಯಂ. ಇವುಗಳಿಗೆ. ಕಸಬೆ ೮ ಗುರುಂಗೊಂಡೇ ಸೀಮೆಗಳು.

ಈ ಮೇಲೆ ಹೇಳಿದ ಗಡಿಗಳನ್ನು ಸಾಧಿಸುವ ಕಾಲದಲ್ಲಿ, ಈ ಪಾಳ್ಯಗಾರರಿಗೆ ಸಹಾಯವಾಗಿಬಂದ ಮೇಲೆ ಬರೆದಿರುವ ಮುರಾರಿರಾಯರು ಮುಂತಾದವರನ್ನು ಹೊಡೆದು, ಬಹಳ ವಸ್ತ್ರಾಭರಣ ದ್ರವ್ಯ ಆನೆ ಕುದುರೆ ಮುಂತಾದ ಪದಾರ್ಥಗಳನ್ನು ಸ್ವಾಧೀನ ಮಾಡಿಕೊಂಡ ವಿವರಗಳನ್ನು ಧೊರೆಗಳ ಸನ್ನಿಧಾನಕ್ಕೆ ಬಿನ್ನವಿಸಿ, ನವಾಬರು ಧೊರೆಗಳಿಂದ ಬಹಳ ಸನ್ಮಾನಗಳನ್ನು ಪಡೆದು ಇರುತ್ತಿದ್ದರು.

ನಂಜರಾಜಒಡೆಯರವರು ಸ್ವರ್ಗಸ್ಥರಾದದ್ದು.—ನಂಜರಾಜಒಡೆಯರವರು ಈ ರೀತಿಯಾಗಿ ಧರ್ಮದಿಂದ ರಾಜ್ಯಪರಿಪಾಲನೆಯನ್ನು ಮಾಡಿಕೊಂಡಿದ್ದು, ಶಾ॥ ೧೬೯೨ನೇ ವಿಕೃತಿ ಸಂವತ್ಸರದ ಶ್ರಾವಣ ಶುದ್ಧ ೧೦ ಬುಧವಾರ ರಾತ್ರಿ,

೨೦ ಗಳಿಗೆಯಲ್ಲಿ ಲಕ್ಷ್ಮೀವಿಲಾಸದ ತೋಟ್ಟಿಯಲ್ಲಿ ಸ್ವರ್ಗಸ್ಥರಾದರು. ಇವರಿಗೆ ಉತ್ತರಕ್ರಿಯಾದಿಗಳನ್ನು ಮಾಡಿದವರು ಗುಡಮಾಚನಹಳ್ಳಿ ಚಾಮಯ್ಯನವರ ಮಗ ಬೆಟ್ಟದಯ್ಯ.

		ವರ್ಷ.	ತಿಂಗಳು.	ದಿನ.
ನಂಜರಾಜಒಡೆಯರವರ ಆದ್ಯಂತ ವಯಸ್ಸು	..	೮	೩	೫
„ ಆಳಿಕೆ	..	೪	೩	೧೨

ಇವರ ಆಳಿಕೆಯಲ್ಲಿ ಅಧಿಕಾರ ಮಾಡಿದವರು.

೧. ಒಟ್ಟು ಸರ್ವಾಧಿಕಾರಿ ನವಾಬ ಹೈದರಲ್ಲೀಖಾನ್ ಬಹದರ.

ದಿವಾನಗಿರಿ ಮಾಡಿದವರು ಉಭಯ ವಿಚಾರದ ಚಾವಡೀ ಅಧಿಕಾರಿಗಳು ಸಹ.

೨. ದಿಂಡುಗಲ್ಲು ವೆಂಕಟಪ್ಪ.
೩. ಈ ವೆಂಕಟಪ್ಪನ ಮಗ ಚನ್ನಣ್ಣಯ್ಯ.
೪. ಘೈಜುಲ್ಲಾಖಾನರ ತಮ್ಮ ಹಾಫಿಜುಲ್ಲಾಖಾನರು.
೫. ಮದ್ದಿಗಿರಿ ವೆಂಕಪ್ಪಯ್ಯ.
೬. ಉಭಯ ವಿಚಾರದ ಚಾವಡಿ ತಿಮ್ಮಪ್ಪಯ್ಯ.
೭. ಇವನ ಬದಲಿಗೆ ಒಟ್ಟು ವಿಚಾರದ ಚಾವಡಿಗೆ ಮೇಲೆ ಹೇಳಿರುವ ವೆಂಕಪ್ಪಯ್ಯ.
೮. ಈ ಮದ್ದಿಗಿರಿ ವೆಂಕಪ್ಪಯ್ಯನಿಗೆ ಪ್ರಧಾನತನ.

೨೦. ಬೆಟ್ಟದ ಚಾಮರಾಜ ಒಡೆಯರವರು.

(ಇಮ್ಮಡಿ ಕೃಷ್ಣರಾಜ ಒಡೆಯರವರ ಮಕ್ಕಳು.)

ಜನನ. — ಶಾ॥ ಶಕ ೧೬೮೧ನೇ ಪ್ರಮಾಥಿ ಸಂವತ್ಸರದ ಭಾದ್ರಪದಶುದ್ಧ ೫.

ಪಟ್ಟಾಭಿಷೇಕ. — ೧೬೯೨ನೇ ವಿಕೃತಿ ಸಂವತ್ಸರದ ಶ್ರಾವಣ ಬಹುಳ ೧೦.
(ಒಟ್ಟು ಸರ್ವಾಧಿಕಾರಿ ನವಾಬ ಹೈದರಲ್ಲೀಖಾನ್ ಬಹದರರು ಮಹಾಮಾತುಶ್ರೀ ಲಕ್ಷಮ್ಮಣ್ಣಿಯವರ ಅಪ್ಪಣೆ ಮೇರೆಗೆ ಮಾಡಿಸಿದರು)

ಪತ್ನೀಪುತ್ರರು — ಇವರಿಗೆ ಪತ್ನೀಪುತ್ರರು ಇಲ್ಲ.

ತ್ರಿಯಂಬಕ ಮಾಮನೊಡನೆ ಯುದ್ಧ.—ಶಾ ಶಕ ೧೬೯೨ನೇ ವಿಕೃತಿ ಸಂವತ್ಸರದ ಜ್ಯೇಷ್ಠ ಮಾಸದಲ್ಲಿ ಪುನಹ ಪೇಸ್ವ ತ್ರಿಯಂಬಕ ಮಾಮನು ೪೦ ಸಾವಿರ ಕುದುರೆ ಸೈನ್ಯ ಸಹಿತವಾಗಿ ಶ್ರೀರಂಗ ಪಟ್ಟಣವನ್ನೂ ಆರ್ಕಾಡು ಸೀಮೆಯನ್ನೂ ಸಾಧಿಸಬೇಕೆಂದು ಹೊರಟು, ಮೈಸೂರು ಧೊರೆಗಳ ಸೀಮೆಯನ್ನು ಲೂಟಿ ಮಾಡುತ್ತಾ, ಈ ಸೀಮೆಗೆ ಸೇರಿದ ಗುರುಂಗೊಂಡೆಗೆ ಹೋಗಿ, ಮೋರ್ಚಿ ಹಾಕಿ, ೩ ತಿಂಗಳ ಪರ್ಯಂತರವೂ ಯುದ್ಧ ಮಾಡಿ, ಅದು ಸ್ವಾಧೀನವಾಗದೆ ಇದ್ದದರಿಂದ ಮಳೆಗಾಲ ಕಳೆದ ಬಳಿಕ ಅಲ್ಲಿಂದ ಹೊರಟು ಮಾಘ ಫಾಲ್ಗುಣ ಮಾಸದಲ್ಲಿ ಶ್ರೀರಂಗಪಟ್ಟಣಕ್ಕೆ ಮುತ್ತಿಗೆಯನ್ನು ಹಾಕುವದಕ್ಕೆ ಹೊರಟನು. ಈ ವರ್ತಮಾನವನ್ನು ನವಾಬರು ಮಾಗಡಿಯಲ್ಲಿದ್ದಾಗ ತಿಳಿದು, ಹಠಾತ್ತಾಗಿ, ಬಾರು ಅಹಷ್ಪಾಂಕುದುರೆ ಮುಂತಾದ ಸೈನ್ಯಗಳನ್ನು ಹಿಂಗಡಿಸಿಕೊಳ್ಳದೆ ಹೊರಟು, ತಮ್ಮ ದಂಡಿನ ಸಂಗಡ ತೆಗೆದುಕೊಂಡು ಹೋದ ಮದ್ದು ಗುಂಡು ಹಣಕಾಸು ದವಸ ಮುಂತಾದವುಗಳನ್ನು ಬಂದೋಬಸ್ತು ಮಾಡುವದಕ್ಕೋಸ್ಕರ ಕೆಲವು ಬಾರಿನ ಜನಗಳನ್ನೇ ಕೋಟೆಯಂತೆ ನಿಲ್ಲಿಸಿ ಬಂದೋಬಸ್ತು ಮಾಡಿ, ಮೇಲುಕೋಟೇ ಸಮೀಪದಲ್ಲಿರುವ ಚಿನಕುರಳೀ ಬಳಿಯಲ್ಲಿ ಬಹಳ ಯುದ್ಧ ಮಾಡುತ್ತಿದ್ದರು. ಆ ಸಮಯದಲ್ಲಿ ತ್ರಿಯಂಬಕ ಮಾಮನ ಕಿವಿಗೆ ಬಂದು ತುಪಾಕೀಗುಂಡು ತಗಲಿದ್ದರಿಂದ, ಅವನಿಗೆ ಬಹು ಕೋಪಬಂದು ನವಾಬರ ದಂಡಿನ ಮೇಲೆ ಬಿದ್ದು ಯುದ್ಧವನ್ನು ಮಾಡುತ್ತಿರಲು, ನವಾಬರ ಬಾರಿನ ಕೋಟೆಯ ಮಧ್ಯದಲ್ಲಿದ್ದ ಮದ್ದಿನ ಪೆಟ್ಟಿಗೆಗೆ ಬಾಣ ತಗಲಿ ಹತ್ತಿಕೊಂಡದ್ದರಿಂದ, ನವಾಬರ ಜನರು ಬಹುಮಂದಿ ಮೃತರಾಗಿ, ನಿಂತ ಜನರೂ ನವಾಬರೂ ಸುಲ್ತಾನ್ ಬಕ್ಷಿ ಶ್ರೀನಿವಾಸರಾಯ ಮುಂತಾದವರೂ ಶ್ರೀರಂಗಪಟ್ಟಣಕ್ಕೆ ಬಂದು ಸೇರಿದರು. ಅನಂತರ ತ್ರಿಯಂಬಕ ಮಾಮನು ಇವರನ್ನು ಬೆನ್ನಟ್ಟಿಕೊಂಡು ಬಂದು, ಕರೀಘಟ್ಟದ ಬಳಿಯಲ್ಲಿ ನಿಂತು, ಶ್ರೀರಂಗಪಟ್ಟಣಕ್ಕೆ ಮುತ್ತಿಗೆಯನ್ನು ಹಾಕಿ ಎರಡು ತಿಂಗಳ ಪರ್ಯಂತರವೂ ಯುದ್ಧ ಮಾಡುತ್ತಿದ್ದನು. ಆಗ ನವಾಬರು ಬಹು ಸೈನ್ಯಗಳನ್ನು ಸೇರಿಸಿಕೊಂಡು ಶುಕ್ರವಾರದ ಪೇಟೆಯ ಬಳಿಗೆ ಹೋಗಿ ಬಹಳ ಯುದ್ಧವನ್ನು ಮಾಡಿ ತ್ರಿಯಂಬಕ ಮಾಮನ ದಂಡನ್ನು ಕಣಿವೇ ಕೆಳಕ್ಕೆ ಓಡಿಸಿಬಿಟ್ಟರು.

ಅನಂತರದಲ್ಲಿ ತ್ರಿಯಂಬಕಮಾಮನ ದಂಡಿನ ಜನಗಳು ಕೋವೇ ಕೆಳಗೆ ಮಹೀಶೂರ ಸಂಸ್ಥಾನದ ಗಡಿಗಳನ್ನು ಬಹಳವಾಗಿ ಲೂಟಿಮಾಡಲು ಉಪಕ್ರಮಿಸಿದರು. ಈ ವರ್ತಮಾನವನ್ನು ನವಾಬರು ಕೇಳಿ ಕೆಲವು ಸೈನ್ಯಗಳನ್ನು ಕಳುಹಿಸಿ ಬಂದೋಬಸ್ತು ಮಾಡಿಸಿದರು. ಅಷ್ಟರಲ್ಲಿ ಅವರ ದಂಡಿಗೆ ದೇಶದಿಂದ ಬರುತ್ತಿದ್ದ ಅಕ್ಕಿ ತುಪ್ಪ ಗೋಧೀಹಿಟ್ಟು ಸಕ್ಕರೆ ಹುರಳಿ ಕಡಲೆ ಜವಳಿ ಕೆಲವು ದ್ರವ್ಯ ಮುಂತಾದ ಪದಾರ್ಥಗಳನ್ನು ತೆಗೆದುಕೊಂಡು ೩ ಸಾವಿರ ಕುದುರೇಸವಾರರು ಮುಂತಾದವರು ಬರುತ್ತಿದ್ದರು. ಈ ವೃತ್ತಾಂತವನ್ನು ನವಾಬರು ಕೇಳಿ, ಆ ಪದಾರ್ಥಗಳನ್ನು ಲೂಟಿ ಮಾಡಿಸಿಕೊಂಡು ಬರುವದಕ್ಕೆ ತಮ್ಮ ಮಗನಾದ ಟೀಪೂಸುಲ್ತಾನನ ಸಂಗಡ ನಾಲ್ಕಾರು ಸಾವಿರ ಕುದುರೆ ಮುಂತಾದ ಸೈನ್ಯಗಳನ್ನೂ ಬಕ್ಷಿ ಶ್ರೀನಿವಾಸರಾಯನನ್ನೂ ಕಳುಹಿಸಿಕೊಟ್ಟರು. ಆಗ ಟೀಪೂಸುಲ್ತಾನನು ನಗರದ ಬಳಿಗೆ ಹೋಗಿ, ಆರಸ್ತು ಮುಂತಾದ ಪದಾರ್ಥಗಳನ್ನು ತಡೆದು, ಅವರ ಸಂಗಡ ಬಹಳ ಯುದ್ಧ ಮಾಡಿ ಓಡಿಸಿಬಿಟ್ಟು, ಅವರಲ್ಲಿ ಇದ್ದ ವಿಶಿಷ್ಟ ಪದಾರ್ಥಗಳನ್ನೂ ತೆಗೆದುಕೊಂಡು, ತಮ್ಮ ತಂದೆಯಾದ ನವಾಬರಿಗೆ ತಿಳಿಸದೆ, ಆ ಪದಾರ್ಥಗಳನ್ನು ಅಲ್ಲಿಯೇ ಕಡ್ಡಾಯ ಹಾಕಿ, ಹಣವನ್ನು ತೆಗೆದುಕೊಂಡು ಶ್ರೀರಂಗಪಟ್ಟಣಕ್ಕೆ ಬಂದು ಈ ವಿವರವನ್ನು ತಿಳಿಸದೆ ಇರುತ್ತಿದ್ದನು. ಹೀಗೆ ವಂಚನೆ ಮಾಡಿ ತಿಳಿಸದೆ ಹಣವನ್ನು ತೆಗೆದುಕೊಂಡನೆಂದು ನವಾಬರಿಗೆ ತಿಳಿದದ್ದರಿಂದ, ನವಾಬರು ತಮ್ಮ ಮಗನಾದಾಗ್ಯೂ ಸರಕಾರದ ಹಣಕ್ಕೆ ವಂಚನೆ ಮಾಡಿದ್ದರಿಂದ ಉಂಟಾದ ಕೋಪದಿಂದ, ಈ ಸುಲ್ತಾನನ ಕೈಯಲ್ಲಿ ೨ ಲಕ್ಷ ಬಹದರೀ ವರಹಗಳನ್ನು ದಂಡ ತೆಗೆದುಕೊಂಡರು.

ಅನಂತರದಲ್ಲಿ ಶಾ|| ೧೬೯೪ನೇ ಖರ ಸಂವತ್ಸರದ ವೈಶಾಖ ಮಾಸದಲ್ಲಿ ತ್ರಿಯಂಬಕ ಮಾಮನ ಕಡೆ ಮಹಿಮಾಜೀ ಸಿಂಧ್ಯನು ಕೆಲವು ಸೈನ್ಯಗಳೊಡನೆ ಬಂದು, ತುಮಕೂರಿಗೆ ಸೇರಿದ ಚೇಳೂರಿಗೆ ಮುತ್ತಿಗೆ ಹಾಕಿದನು. ಅಲ್ಲಿ ಅಧಿಕಾರವನ್ನು ಮಾಡುತ್ತಿದ್ದ ವೆಂಕಟಪ್ಪನು ದೇವರಾಯದುರ್ಗದಲ್ಲಿ ಇದ್ದ ತಿಮ್ಮಣ್ಣಾಜೀಪಂತನಿಗೆ ಹೇಳಿ ಕಳುಹಿಸಲು, ಅವನು ಕೆಲವು ಸೈನ್ಯಗಳನ್ನು ತೆಗೆದುಕೊಂಡು ಬಂದು ಅಲ್ಲಿ ೧೧ ದಿನಗಳವರೆಗೂ

ಬಹಳ ಯುದ್ಧ ಮಾಡಿ, ಮಹಿಮಾಜಿ ಸಿಂಧ್ಯನು ಕೆಂಪು ಬಣ್ಣದ ಕಾವೀ ಝಂಡೆಯನ್ನು ಹಾಕಿಕೊಂಡು ಇರುವದನ್ನು ನೋಡಿ, ನಮ್ಮ ಧೊರೆಗಳ ಬಿರುದನ್ನು ನೀನು ಹಾಕಿಸಿಕೊಳ್ಳುವದಕ್ಕೆ ನಿಮಿತ್ತವೇನೆಂದು ಹೇಳಿ ಕಿತ್ತಿಕೊಂಡು, ಆ ಮಹಿಮಾಜೀ ಸಿಂಧ್ಯನನ್ನು ಕೈಸೆರೆಹಿಡಿದು, ಧೊರೆಗಳವರ ಸನ್ನಿಧಾನಕ್ಕೆ ಕಳುಹಿಸಿಕೊಟ್ಟು, ದೇವರಾಯದುರ್ಗಕ್ಕೆ ಹೊರಟು ಹೋದನು.

ಮಹಿಮಾಜಿಪಂತನು ಸೋತ ವರ್ತಮಾನವನ್ನು ಕಣಿವೇಕೆಳಗೆ ಇದ್ದ ತ್ರಿಯಂಬಕಮಾಮನು ಕೇಳಿ, ಹಠಾತ್ತಾಗಿ ಕೆಲವು ಸೈನ್ಯಗಳನ್ನು ತೆಗೆದುಕೊಂಡು ದೇವರಾಯದುರ್ಗಕ್ಕೆ ಬಂದು, ಯುದ್ಧವನ್ನು ಮಾಡಿ, ದುರ್ಗವನ್ನು ತೆಗೆದುಕೊಂಡು, ಅಲ್ಲಿದ್ದ ರಂಗಪ್ಪನಾಯಕ ಬಿಮಣಾಜಿಪಂತ ಮೊದಲಾದವರನ್ನು ಹಿಡಿದು ನಂದಿಗಡಕ್ಕೆ ಕಳುಹಿಸಿಬಿಟ್ಟನು.

ಕೊಡಗಿನವರಿಗೂ ಮಹೀಶೂರ ಧೊರೆಗಳವರಿಗೂ ದ್ವೇಷ ಬಂದದದ್ದು.—ತ್ರಿಯಂಬಕ ಮಾಮನು ಶಾ॥ ೧೬೯೩ನೇ ವಿಕೃತಿ ಸಂವತ್ಸರದ ಜ್ಯೇಷ್ಠ ಮಾಸದಿಂದ ಶಾ॥ ೧೬೯೪ನೇ ನಂದನ ಸಂವತ್ಸರದ ಜ್ಯೇಷ್ಠ ಮಾಸದ ವರಿಗೂ ಸೀಮೆಗಳನ್ನು ಲೂಟಿ ಮಾಡುತ್ತಾ ಬಂದದರಿಂದಲೂ, ಧೊರೆಗಳವರ ಸೀಮೆಯಲ್ಲಿ ಇದ್ದ ರಸ್ತುಗಳೆಲ್ಲಾ ಲೂಟಿಯಾದದ್ದರಿಂದಲೂ, ಮಳೆ ಚೆನ್ನಾಗಿ ನಡಿಸದೆ ಹೋದದ್ದರಿಂದಲೂ ಕ್ಷಾಮವು ಪ್ರಾಪ್ತವಾಯಿತು. ಆಗ ನವಾಬರು ಕೊಡಗು ಐಗೂರು ಮುಂತಾದ ಪಾಳ್ಯಗಾರರ ಬಳಿಗೆ ಅಕ್ಕಿ ತುಪ್ಪ ಮುಂತಾದ ರಸ್ತುಗಳನ್ನು ಕುಮುಕಿ ಮಾಡಿಕೊಡಬೇಕೆಂದು ಪ್ರಧಾನ ವೆಂಕಪ್ಪಯ್ಯನನ್ನು ಕಳುಹಿಸಿಕೊಟ್ಟರು. ಅದಕ್ಕೆ ಐಗೂರು ಪಾಳ್ಯಗಾರನು ರಪ್ತನ್ನು ಕುಮುಕಿ ಮಾಡಿ ಕಳುಹಿಸಿಕೊಟ್ಟು, ಕೊಡಗಿನ ಪಾಳ್ಯಗಾರ ಮಾತ್ರ ಕಳುಹಿಸಿ ಕೊಡದೆ ಹೋದದ್ದರಿಂದ, ಕೊಡಗಿನವರಿಗೂ ಮಹಿಶೂರ ಧೊರೆಗಳವರಿಗೂ ಮನಸ್ತಾಪ ಉಂಟಾಯಿತು.

ತ್ರಿಯಂಬಕಮಾಮನು ಪುನಹಗೆ ಹೋದದ್ದು.—ಈಕಡೆ, ೧೬೯೪ನೇ ನಂದನ ಸಂವತ್ಸರದ ಆಷಾಢ ಮಾಸದಲ್ಲಿ ಕಣಿವೇಕೆಳಗೆ ಇದ್ದ ತ್ರಿಯಂಬಕ

ಮಾಮನ ಬಳಿಗೆ ಪುನಹಾದಲ್ಲಿ ಶ್ರೀಮಂತ ಮಾಧವರಾಯನು ತೀರಿಹೋದ ವರ್ತಮಾನವು ಬಂದದರಿಂದ, ತ್ರಿಯಂಬಕಮಾಮನು ಕಣಿವೇಕೆಳಗಿನಿಂದ ಸೈನ್ಯಸಹಿತನಾಗಿ ಮೇಲುಸೀಮೆಯ ಮಾರ್ಗವಾಗಿ ಬಂದು, ಜಾಗ್ರತೆಯಾಗಿ ಪುನಹೆಗೆ ಹೊರಟುಹೋದನು.

ನಾಯಿಮಾರರ ಹಂಗಾಮು.—ವಿಜಯ ಸಂವತ್ಸರದಲ್ಲಿ ಕಲ್ಲೀಕೋಟೇ ನಾಯಿಮಾರರು ಬಹಳ ಹಂಗಾಮು ಮಾಡುತ್ತಲಿರುವ ಸಮಾಚಾರವು ನವಾಬರಿಗೆ ಶ್ರೀರಂಗಪಟ್ಟಣದಲ್ಲಿ ಇರುವಾಗ ತಿಳಿದದ್ದರಿಂದ, ಆ ಜನಗಳನ್ನು ಬಂದೋಬಸ್ತು ಮಾಡುವದಕ್ಕೋಸ್ಕರ, ನವಾಬರು ಹರಿಕಾರ ರಂಗಪ್ಪನಾಯಕನನ್ನೂ ರಾಮಗಿರಿ ರಾಮರಾಜಯ್ಯನನ್ನೂ ಕಳುಹಿಸಿಕೊಟ್ಟರು. ನಾಯಿಮಾರರು ಇವರಿಬ್ಬರನ್ನೂ ಹೊಡದುಹಾಕಿಬಿಟ್ಟರು. ನವಾಬರು ಈ ವರ್ತಮಾನವನ್ನು ಕೇಳಿ ಬರಕ್ಕೀ ಶ್ರೀನಿವಾಸರಾಯನ ಸಂಗಡ ಕೆಲವು ಸೈನ್ಯಗಳನ್ನು ಕಳುಹಿಸಿಕೊಟ್ಟು ಅವನು ಅಲ್ಲಿಯೇ ಇರುವಂತೆ ನೇಮಕ ಮಾಡಿದರು.

ಕೊಡಗಿಗೆ ಮುತ್ತಿಗೆ ಹಾಕಿದ್ದು.—ಕೊಡಗಿನ ಪಾಳ್ಯಗಾರನಿಗೆ ಶ್ರೀರಂಗಪಟ್ಟಣಕ್ಕೆ ಕೆಲವು ರಸ್ತು ಸಹಾಯ ಮಾಡಿ ಕೊಡಬೇಕೆಂಬದಾಗಿ ಪೂರ್ವದಲ್ಲಿ ಹೇಳಿ ಕಳುಹಿಸಿದ್ದಕ್ಕೆ ಅವನು ಉದಾಸೀನ ಮಾಡಿದ್ದರಿಂದ, ನವಾಬರು ಕೊಡಗಿಗೆ ಹೋಗಿ ಮುತ್ತಿಗೆಯನ್ನು ಹಾಕಿ ಮಡಿಕೇರೆ ಬಾಳೆನಾಡು ಮುಂತಾದ ಅವನ ಸೀಮೆಗಳನ್ನು ಶಾ॥ ೧೬೯೬ನೇ ಜಯ ಸಂವತ್ಸರದಲ್ಲಿ ಕಟ್ಟಿಕೊಂಡು ಅವುಗಳನ್ನು ಬಂದೋಬಸ್ತು ಮಾಡಿ ಅದೇ ಸಂವತ್ಸರದ ಜ್ಯೇಷ್ಠ ಮಾಸದಲ್ಲಿ ಶ್ರೀರಂಗಪಟ್ಟಣಕ್ಕೆ ಬಂದು ಸೇರಿದರು.

ಪುನಹಾಸೀಮೆಗೂ ಧೊರೆಗಳ ಸೀಮೆಗೂ ಕೃಷ್ಣಾನದಿಯನ್ನು ಎಲ್ಲೆಕಟ್ಟು ಮಾಡಿಕೊಂಡವಿಚಾರ.—ಪುನಹಾದಲ್ಲಿ ಶ್ರೀಮಂತಮಾಧವರಾಯನು ತೀರಿಹೋದ ಅನಂತರದಲ್ಲಿ, ಅವನ ತಮ್ಮನಾದ ನಾರಾಯಣರಾಯನು ರಾಜ್ಯಭಾರವನ್ನು ಮಾಡುತ್ತಾ ಇದ್ದನು. ಆಗ ಈ ನಾರಾಯಣರಾಯನ ಚಿಕ್ಕಪ್ಪನಾದ ರಘೋಬನು ಅವನನ್ನು ಹೊಡೆದುಹಾಕಿ ತಾನೇ ರಾಜ್ಯಭಾರ ಮಾಡು

ತ್ತಿದ್ದನು. ಆ ಕಾಲದಲ್ಲಿ ಈ ರಘೋಬನು ಶ್ರೀರಂಗಪಟ್ಟಣವನ್ನು ಸಾಧಿಸುವದಕ್ಕೆ ಬರುತ್ತಾನೆಂಬ ವರ್ತಮಾನವು ನವಾಬರಿಗೆ ತಿಳಿದದ್ದರಿಂದ, ನವಾಬರು ಪ್ರಧಾನವೆಂಕಪ್ಪಯ್ಯ ಅಪ್ಪಾಜಿ ರಾಮರಾಯ ಮೊದಲಾದವರನ್ನು ಸಲಹೆಗೆ ಕಳುಹಿಸಿಕೊಟ್ಟರು. ಇವರಿಬ್ಬರೂ ಹೋಗಿ ರಘೋಬನ ಭೇಟಿಯನ್ನು ಮಾಡಿಕೊಂಡು ನವಾಬರು ಬರೆದ ಪತ್ರವನ್ನು ಕೊಟ್ಟನಂತರ, ರಘೋಬನು ಪತ್ರವನ್ನು ನೋಡಿಕೊಂಡು, ಮಹೀಶೂರಸಂಸ್ಥಾನದ ಧೊರೆಗಳವರಿಗೆ ಕೃಷ್ಣಾನದಿಯ ಪರ್ಯಂತರವೂ ಇರುವ ಭೂಮಿಯು ಅವರದೇಸರಿ ಎಂತಲೂ, ನಮಗೆ ಕಾರ್ಯಬಿದ್ದಲ್ಲಿ ನವಾಬರು ಸೈನ್ಯ ಸಹಿತರಾಗಿ ಸಹಾಯಕ್ಕೆ ಬರಬೇಕೆಂತಲೂ ಕಾಗದವನ್ನು ಬರೆದುಕೊಟ್ಟು, ವೆಂಕಪ್ಪಯ್ಯನಿಗೂ ಅಪ್ಪಾಜಿರಾಮರಾಯ ಮುಂತಾದ ಜನಗಳಿಗೂ ಬಹಳ ಸನ್ಮಾನಗಳನ್ನು ಮಾಡಿ ಕಳುಹಿಸಿಕೊಟ್ಟನು. ಇಷ್ಟು ಹೊತ್ತಿಗೆ ಪುನಹಾದಲ್ಲಿ ಪೂರ್ವದಲ್ಲಿ ರಾಜ್ಯಭಾರಮಾಡುತ್ತಿದ್ದ ನಾರಾಯಣರಾಯನ ಹೆಂಡತಿಯು ಗಂಡುಮಗುವನ್ನು ಹೆತ್ತದ್ದರಿಂದ, ಅಲ್ಲಿನ ಸರದಾರರೆಲ್ಲರೂ ಒಟ್ಟುಗೂಡಿ, ಆ ಮಗುವಿಗೆ ಶ್ರೀಮಂತನ ಅಧಿಕಾರವನ್ನು ನೇಮಕಮಾಡಿಸಿ, ಸವಾಯಿ ಮಾಧವರಾಯನೆಂದು ಹೆಸರನ್ನಿಟ್ಟು, ತೊಟ್ಟಿಲಿಗೆ ಮೊಹರನ್ನು ಕಟ್ಟಿ ಮುಂದೆ ಆ ಮಗುವು ದೊಡ್ಡದಾಗುವವರಿಗೆ ಅಲ್ಲಿನ ಅಧಿಕಾರಕ್ಕೆ ನಾನಾ ಫಡ್ನೀಸನೆಂಬವನಿಗೆ ನೇಮಕಮಾಡಿ, ಎಲ್ಲರೂ ಇವರ ರಕ್ಷಾತಲಬಿನಲ್ಲಿ ಇರುವಂತೆ ನಿಬಂಧನೆಯನ್ನು ಮಾಡಿಕೊಂಡಿದ್ದರು. ಆದ್ದರಿಂದ ರಘೋಬನು ಬೊಂಬಾಯಿಗೆ ಹೊರಟುಹೋದನು.

ಪ್ರಧಾನವೆಂಕಪ್ಪಯ್ಯನು ರಘೋಬನ ಕಾಗದವನ್ನು ತೆಗೆದುಕೊಂಡು, ಸೀರ್ಯದಲ್ಲಿ ಇದ್ದ ಅವರ ಕಡೆಯವನಾದ ಭಾವಾಜೀಸಿಂಧ್ಯನಿಗೆ ಕೊಡಲು, ಅವನು ಆ ಕಾಗದವನ್ನು ಮಂಜೂರುಮಾಡದೆಹೋದನು. ಈ ವರ್ತಮಾನವು ನವಾಬರಿಗೆ ತಿಳಿದು ತಮ್ಮ ಮಗ ಟೀಪೂಸುಲ್ತಾನ ಮುಂತಾದವರ ಸಹಿತ ಕೆಲವು ಸೈನ್ಯಗಳನ್ನು ಸೀರ್ಯಕ್ಕೆ ಕಳುಹಿಸಿಕೊಟ್ಟರು. ಅನಂತರ ಸುಲ್ತಾನನು ಸೀರ್ಯಕ್ಕೆ ಹೋಗಿ ೨-೩ ತಿಂಗಳವರೆಗೂ ಭಾವಾಜೀಸಿಂಧ್ಯನೊಡನೆ ಯುದ್ಧಮಾಡಿ, ಸೀರ್ಯವನ್ನೂ ಮದ್ದಗಿರಿಯನ್ನೂ ಸಹ

ತೆಗೆದುಕೊಂಡು, ಅವನನ್ನು ಕೈಸೆರೆಹಿಡಿದು ಶ್ರೀರಂಗಪಟ್ಟಣಕ್ಕೆ ಕಳುಹಿಸಿ ಕೊಟ್ಟರು.

ಅನಂತರದಲ್ಲಿ ನವಾಬರು ಲಕ್ಷ್ಮಣಪಂತ್ ಭಿವಣಾಜಿಪಂತ್ ಎಂಬವ ರನ್ನು ಪುನಹಾದ ಸಿಂಘೋಜಿಸನ ಬಳಿಗೆ ಕಳುಹಿಸಿಕೊಟ್ಟು, ಅವರ ಕೌಲಿನ ಪ್ರಕಾರ ಪೂರ್ವದಂತೆ ಕೃಷ್ಣಾನದಿಯು ಪರ್ಯಂತರಕ್ಕೂ ಸಾಧಿಸಿದ ಕೆಲವು ಸೀಮೆಗಳನ್ನು ಸ್ವಾಧೀನ ಮಾಡಿಕೊಂಡು, ಮಹಿಮಾಜೀ ಸಿಂಧ್ಯನ ಮಗ ನಾದ ಭಾವಾಜೀ ಸಿಂಧ್ಯನನ್ನು ಶ್ರೀರಂಗಪಟ್ಟಣದ ಸೆರೆಯಿಂದ ಬಿಟ್ಟು ಬಿಟ್ಟು, ಪೂರ್ವದಲ್ಲಿ ನಂದಿಗಡಕ್ಕೆ ಕಳುಹಿಸಿಕೊಟ್ಟಿದ್ದ ರಂಗಪ್ಪನಾಯಕ ಮುಂತಾದವರನ್ನು ಕರೆಯಿಸಿಕೊಂಡರು.

ಬಳ್ಳಾರಿ ಗುತ್ತಿ ಮುಂತಾದ ಗಡಿಗಳನ್ನು ಸಾಧಿಸಿದ ವಿವರ.— ಶಾ॥ ೧೬೯೭ನೇ ಮನ್ಮಥ ಸಂವತ್ಸರದಲ್ಲಿ ನವಾಬರು ಬಳ್ಳಾರಿಯನ್ನು ತೆಗೆದು ಕೊಳ್ಳಬೇಕೆಂದು ಧಡೆಘಾಟಿಯಿಂದ ರತ್ನಗಿರಿ ಮಾರ್ಗವಾಗಿ ಹೊರಟು ಹೋಗು ತ್ತಿರುವಾಗ, ಅದವಾನಿ ದಿವಾನ ರಾಜಾಬಹದ್ದರನು ಅವರನ್ನು ಅಡ್ಡ ಕಟ್ಟಿದನು. ಆಗ ನವಾಬರು ಅವನನ್ನು ಯುದ್ಧದಲ್ಲಿ ಗೆದ್ದು, ಅವನ ಸೈನ್ಯವನ್ನು ಲೂಟಿಮಾಡಿ, ಅವನಿಂದ ದಂಡಣೆಯನ್ನು ಗೊತ್ತುಮಾಡಿಕೊಂಡು, ಅವನಲ್ಲಿ ಚಾಕರಿಯಿದ್ದ, ಪರಾಷೀಸ ಮೂಸಾ ಲಾಲಿ ಎಂಬ ಇಬ್ಬರು ಸರದಾರರು ಸಹಿತವಾಗಿ ೨೦೦ ಜನರನ್ನು ತಮ್ಮಲ್ಲಿ ಚಾಕರಿ ಯಿಟ್ಟುಕೊಂಡು, ಬಳ್ಳಾರಿಗೆ ಹೋಗಿ ಯುದ್ಧಮಾಡಿದರು. ಆಗ ಬಳ್ಳಾರೀ ಪಾಳ್ಯಗಾರನು ಹೆಂಗಸರು ಮಕ್ಕಳು ಸಹಿತವಾಗಿ ಗಿಡಬಿದ್ದು ಓಡಿಹೋದದರಿಂದ, ನವಾಬರು ಬಳ್ಳಾರಿ ಯನ್ನು ಠಾಣೆಹಾಕಿಕೊಂಡು ಅದಕ್ಕೆ ಸೇರಿದ ಗಡಿಗಳನ್ನು ಸ್ವಾಧೀನಮಾಡಿ ಕೊಂಡರು.

ಅನಂತರ ಅದೇ ಮನ್ಮಥ ಸಂವತ್ಸರದ ಪುಷ್ಯಮಾಸದಲ್ಲಿ ಗುತ್ತಿಗೆ ಠಾಣ್ಯವನ್ನು ಹಾಕಿ ನಾಲ್ಕು ದಿಕ್ಕಿನಲ್ಲಿಯೂ ಬಂದೋಬಸ್ತು ಮಾಡಿದರು. ಆಗ ಮುರಾರಿರಾಯನು ಸಲಹೇದ ಮಾತನಾಡುವದಕ್ಕೆ ಒಬ್ಬ ಮುಸಲ್ಮಾನ ನನ್ನು ಕಳುಹಿಸಿಕೊಡಲು, ನವಾಬರು ಜನಗಳ ಮುಖದಿಂದ ಅಲ್ಲಿನ

ಮರ್ಮವನ್ನು ಚೆನ್ನಾಗಿ ತಿಳಿದು, ಮುರಾರಿರಾಯನ ಸಂಗಡ ಬಹಳ ಯುದ್ಧವನ್ನು ಮಾಡಿ, ಗುತ್ತಿಗೆ ಠಾಣ್ಯವನ್ನು ಹಾಕಿ, ಮುರಾರಿರಾಯನನ್ನು ಕೈಸೆರೆ ಹಿಡಿದು ಶ್ರೀರಂಗಪಟ್ಟಣಕ್ಕೆ ಕಳುಹಿಸಿಕೊಟ್ಟು, ಅವನಲ್ಲಿದ್ದ ಆನೆ ಕುದುರೆ ದ್ರವ್ಯ ವಸ್ತ್ರಾಭರಣ ಮುಂತಾದ ಪದಾರ್ಥಗಳನ್ನು ಸ್ವಾಧೀನಮಾಡಿಕೊಂಡು, ಗುತ್ತಿಯಲ್ಲಿದ್ದ ಸಾಹುಕಾರ ಪೂರ್ಣಗಿರಿ, ಬಲಗಿರಿ, ತುಳಜಾಗಿರಿ, ಹರಿಣಾಗಿರಿ ಮುಂತಾದ ಗೋಸಾವಿಗಳಿಂದ ೨ ಲಕ್ಷ ವರಹಗಳವರಿಗೂ ತೆಗೆದುಕೊಂಡು, ಮತ್ತು ಕೆಲವು ಜನಗಳಿಂದ ಮುಗುವಳಿಯನ್ನು ತೆಗೆದುಕೊಂಡು, ಬಳ್ಳಾರಿಯಲ್ಲಿದ್ದ ಸೂಳೇರನೆಲ್ಲಾ ಪಟ್ಟಣಕ್ಕೆ ಕಳುಹಿಸಿಕೊಟ್ಟು, ಬಳ್ಳಾರಿ ಸೀಮೆಗೂ ಗುತ್ತಿ ಸೀಮೆಗೂ ಅಧಿಕಾರದಬಗ್ಗೆ ಬಾಳಾಜಿರಾಯ ಮುಂತಾದ ಬುದ್ಧಿವಂತರಾದ ಜನಗಳನ್ನು ನೇಮಕಮಾಡಿ, ಶಾ। ೧೬೯೮ನೇ ದುರ್ಮುಖಿ ಸಂವತ್ಸರದ ವೈಶಾಖ ಜ್ಯೇಷ್ಠ ಮಾಸದಲ್ಲಿ ಶ್ರೀರಂಗಪಟ್ಟಣಕ್ಕೆ ಹಿಂತಿರುಗಿದರು. ಬರುವಾಗ ಮಾರ್ಗದಲ್ಲಿ ನವಾಬರು ಶ್ರವಣೂರು ಡಂಬಳ ಮುಂತಾದ ಪಾಳ್ಯಗಾರರಿಂದ ಖಂಡಣೆಯನ್ನು ಗೊತ್ತುಮಾಡಿಕೊಂಡು, ಚಿತ್ರಕಲ್ಲು ಮದಿಗಿರಿನಾಯಕನ ಸಂಗಡ ಕೆಲವು ಸೈನ್ಯಗಳನ್ನು ಕಳುಹಿಸಿಕೊಟ್ಟು, ಪೂರ್ವದಲ್ಲಿ ಸಾಧಿಸಿದ ಮಡಕಸೀರ್‍ಯ, ಪೆನಗೊಂಡೆ ಮುಂತಾದ ತುಂಟತನ ಮಾಡಿದ ಪಾಳ್ಯಗಾರರನ್ನು ನಿಗ್ರಹಿಸಿ ಬಂದೋಬಸ್ತು ಮಾಡಿಕೊಂಡು ಬರುವಂತೆ ಕಳುಹಿಸಿಕೊಟ್ಟು, ಅದೇ ಸಂವತ್ಸರದ ಆಷಾಢ ಮಾಸದಲ್ಲಿ ಶ್ರೀರಂಗಪಟ್ಟಣಕ್ಕೆ ಬಂದು ಸೇರಿದರು.

ರಂಗನಾಥಸ್ವಾಮಿ ರಥಕ್ಕೆ ಬೆಂಕಿ ಬಿದ್ದದ್ದು.—ಶಾ॥ ಶಕೆ೧೬೯೨ನೇ ವಿಕೃತಿ ಸಂವತ್ಸರದಲ್ಲಿ ಶ್ರೀರಂಗಪಟ್ಟಣದ ರಂಗನಾಥದೇವರು ರಥದಮೇಲೆ ಇರುವ ಕಾಲದಲ್ಲಿ ರಥವು ಬೆಂದು ಪೂರ್ವದಲ್ಲಿ ಇದ್ದ ಕಸ್ತೂರಿ ರಂಗನಾಥನೆಂಬ ಉತ್ಸವ ವಿಗ್ರಹವು ಕರಗಿ ಹೋದದ್ದರಿಂದ, ಪುನಃ ಪೂರ್ವದಲ್ಲಿ ಪುಚ್ಛ ರಂಗನಾಥನೆಂಬದಾಗಿ ಹೆಸರಾಗಿಯಿದ್ದ ಉತ್ಸವ ವಿಗ್ರಹವನ್ನು ಉತ್ಸವಕ್ಕೆ ನೇಮಕ ಮಾಡಿಸಿದರು.

ದೊಡ್ಡ ಉಗ್ರಾಣಕ್ಕೂ ಮದ್ದಿನ ಮನೆಗೂ ಬೆಂಕಿ ಬಿದ್ದದ್ದು.—ಶಾ॥ ೧೬೯೬ನೇ ಜಯ ಸಂವತ್ಸರದ ವೈಶಾಖ ಮಾಸದಲ್ಲಿ ಶ್ರೀರಂಗಪಟ್ಟಣದಲ್ಲಿ

ಮದ್ದಿನ ಮನೆಯೂ ದೊಡ್ಡ ಉಗ್ರಾಣವೂ ಹತ್ತಿಕೊಂಡು, ವಿಶಿಷ್ಟ ಪದಾರ್ಥಗಳೂ ಹೋಗಿ ಬಹಳ ಮನೆಗಳೂ ಜನಗಳೂ ಲಯವಾದರು ಮತ್ತು ರಂಗನಾಥಸ್ವಾಮಿ ದೇವಸ್ಥಾನದ ಮುಚ್ಚಳದ ಕಲ್ಲು ಮುಂತಾದದ್ದು ಬಿದ್ದು ಹೋಯಿತು. ಈ ವರ್ತಮಾನವು ಕೊಡಗಿನಲ್ಲಿ ಇದ್ದ ನವಾಬರಿಗೆ ತಿಳಿದದ್ದರಿಂದ ನವಾಬರು ಬಹಳ ವ್ಯಸನಪಟ್ಟು "ನಾವು ಶ್ರೀರಂಗಪಟ್ಟಣಕ್ಕೆ ಬರುವ ತಿಂಗಳ ಒಳಗಾಗಿ ಬರುತ್ತೇವೆ. ಅಷ್ಟರಲ್ಲಿ ದೇವಸ್ಥಾನದ ಕಾಮಗಾರಿ ಮಾಡಿಸಿ ದೇವಸ್ಥಾನವನ್ನು ಯಥಾಪ್ರಕಾರ ಇರಸಬೇಕು ಎಂದು" ಬರೆಯಿಸಿ ಕಳುಹಿಸಿದರು. ಪಟ್ಟಣದ ಅಧಿಕಾರಿಯು ಅಗೇಮೇರೆಗೆ ಒಂದು ತಿಂಗಳೊಳಗಾಗಿ ದೇವಸ್ಥಾನವನ್ನು ಯಥಾಪ್ರಕಾರ ಕಟ್ಟಿಸಿದನು.

ದೊರೆಗಳ ಅಪ್ಪಣೆಮೇರೆಗೆ ನವಾಬರು ಮೇಲೆಬರದಿರುವ ಪಾಳ್ಯಗಾರರನ್ನು ಜಯಿಸಿ ಸೀಮೆಗಳನ್ನು ಸಾಧಿಸಿದ ವಿವರ.—

ಗುತ್ತಿ ಮುರಾರಿರಾಯನಸೀಮೆ ಗಡಿಗಳು ೨೭.—(೧) ಹವೇಲಿ, (೨) ಯಾಡಕಿ, (೩) ಲಿಂಗನಮಲಾ, (೪) ತಾಡಮರಿ, (೫) ಮದ್ದಿಕೆರೆ (೬) ಪೆರವಲ್ಲಿ, (೭) ಹಂಪೆ, (೮) ಪೊದಟೂರು ರಾಮೇಶ್ವರ, (೯) ನಿಟ್ಟೂರು ಭೋಗಸಂದ್ರ, (೧೦) ಚನ್ನಂಪಲ್ಲಿ, (೧೧) ಉಯ್ಯಾಲವಾಡಸಂಗಾಪಟ್ಟಣ, (೧೨) ಹಂಡೇ ಅನಂತಪುರ, (೧೩) ಹಿರಿಹಾಳು, (೧೪) ಯಲ್ಲಾನೂರು, (೧೫) ವಜ್ರಕರೂರು, (೧೬) ಕೊತ್ತಚೆರು ಬುಕ್ಕಪಟ್ಟಣ, (೧೭) ವೇಮಲಪಾಡು, (೧೮) ಮುನಿಮಡಗು, (೧೯) ಯರದಿಮ್ಮನಾಯನಚೆರು, (೨೦) ಜನಗಾನಪಲ್ಲಿ, (೨೧) ಪಾಮಡಿ, (೨೨) ಪ್ಯಾಪಲಿ, (೨೩) ಕೊನಕೊಂಡ್ಲಾ, (೨೪) ಸೊಂಡೂರು, (೨೫) ತಾಡಪತ್ರಿ, (೨೬) ನಡಮಿದ್ದೊಡ್ಡಿ, (೨೭) ಕಲ್ಯಾಣದುರ್ಗ.

ಬಳ್ಳಾರಿಸೀಮೆ ಗಡಿಗಳು ೧೦.—(೧) ಹವೇಲಿ, (೨) ಹಾವಳಿಗಿ, (೩) ಕಡತನೀ, (೪) ಗಡೆಹೊತ್ತೂರು, (೫) ದಮ್ಮೂರು, (೬) ಕುರುಗೋಡು, (೭) ಪುರವಕೊಂಡೆ, (೮) ಗಾದಿಗನೂರು, (೯) ಇಡಪನಕಲ್ಲು, (೧೦) ತೆಕ್ಕಲುಕೋಟೂ.

ಮರಾಟಿಯವರಿಂದ ಸಾಧಿಸಿದ ಗಡಿಗಳು ೧೪.—(೧) ಧಾರವಾಡ, (೨) ಛಪದರಬಂಡೆ, (೩) ಬಾದಲಿ, (೪) ಲಾಲಗಡಿ, (೫) ಬಂಕಾಪುರ, (೬) ಹೊಸಹುಬ್ಬಳ್ಳಿ, (೭) ತಡಸಾ, (೮) ಕೊಪ್ಪಳಾ, (೯) ಗಜೇಂದ್ರಗಡಾ, (೧೦) ನವಲುಗುಂದ, (೧೧) ಕುಸುವಗಲ್ಲು (೧೨) ಹಳೇಹುಬ್ಬಳ್ಳಿ, (೧೩) ಗದಗಾ, (೧೪) ಕಲ್ಲಘಟಿಕಿ.

ಕೊಡಗು ಪಾಳ್ಯಗಾರನಿಂದ.—(೧) ಕೊಡಗು, (೨) ಮಡಕೇರಿ, (೩) ಬಾಳೆ ನಾಡು ಮೊದಲಾದವುಗಳು.

ಬೆಟ್ಟದ ಚಾಮರಾಜಒಡೆಯರವರು ಈ ರೀತಿಯಾಗಿ ಧರ್ಮದಿಂದ ದುಷ್ಟನಿಗ್ರಹ ಶಿಷ್ಟಪರಿಪಾಲನೆಯನ್ನು ಮಾಡಿಸುತ್ತಾ ರಾಜ್ಯಪರಿಪಾಲನೆಯನ್ನು ಮಾಡಿಕೊಂಡಿದ್ದು, ಶಾ. ಶಕ ೧೬೯೮ನೇ ದುರ್ಮುಖಿ ಸಂವತ್ಸರದ ನಿಜಭಾದ್ರಪದ ಶುದ್ಧ ೩ ಸೋಮವಾರ ರಾತ್ರಿ ೧೧ ಘಂಟೆಯಲ್ಲಿ ಕಾಲಧರ್ಮವನ್ನು ಹೊಂದಿದರು.

ಇವರಿಗೆ ಉತ್ತರಕ್ರಿಯಾದಿಗಳನ್ನು ಮಾಡಿದವರು ಗುಡಮಾಚನಹಳ್ಳೀ ಚಾಮಯ್ಯನವರಮಗ ಬೆಟ್ಟದಯ್ಯ.

	ವರ್ಷ.	ತಿಂಗಳು.	ದಿನ.
ಬೆಟ್ಟದ ಚಾಮರಾಜಒಡೆಯರವರ ಆದ್ಯಂತ ವಯಸ್ಸು ..	೧೩	೦	೨೮
,, ಆಳಿಕೆ	೬	೧	೮

ಇವರ ಆಳಿಕೆಯಲ್ಲಿ ಅಧಿಕಾರಮಾಡಿದವರು,—

೧. ಒಟ್ಟು ಸರ್ವಾಧಿಕಾರಿ ನವಾಬ ಹೈದರಲ್ಲಿಖಾನ ಬಹದರ.
೨. ಪ್ರಧಾನ ವೆಂಕಪ್ಪಯ್ಯ.

೧೧ನೇ ಅಧ್ಯಾಯ.

೨೦. ಖಾಸಾ ಚಾಮರಾಜ ಒಡೆಯರವರು.

ಜನನ.—ಶಾ॥ ಶಕ ೧೬೯೬ನೇ ವಿಜಯ ಸಂವತ್ಸರದ ಫಾಲ್ಗುನ ಬಹುಳ ೨ ಸೋಮವಾರ ಹಸ್ತಾ ನಕ್ಷತ್ರ ೩ನೇ ಪಾದ ರಾತ್ರಿ ೧೪ ಗಳಿಗೆ ವೃಶ್ಚಿಕಲಗ್ನದಲ್ಲಿ.

ಪಟ್ಟಾಭಿಷೇಕ.—ಶಾ॥ ೧೬೯೯ನೇ ದುರ್ಮುಖಿ ಸಂವತ್ಸರದ ನಿಜಭಾದ್ರಪದ ಶುದ್ಧ ೧೫.

ಪತ್ನಿಯರು.—ಶಾ॥ ೧೭೦೭ನೇ ಕ್ರೋಧಿ ಸಂವತ್ಸರದ ಮಾಘ ಬಹುಳ ೫ ಸ್ಥಿರವಾರ ಬಿವಿ ೬ ಘಂಟೆಗೆ ಸಲ್ಲುವ ಮೀನಲಗ್ನದಲ್ಲಿ (೧) ಸಮುಖದ ನಂಜರಾಜಯ್ಯನವರ ಮಕ್ಕಳು ಕೆಂಪನಂಜಮ್ಮಣ್ಣಿಯವರು, (೨) ಅಮಚವಾಡಿ ನಂಜರಾಜಯ್ಯನವರ ಮಕ್ಕಳು ಕೆಂಪದೇವಾಜಮ್ಮಣ್ಣಿಯವರು; ಶಾ॥ ೧೭೧೫ನೇ ಪರಿಧಾವಿ ಸಂವತ್ಸರದ ಜ್ಯೇಷ್ಠ ಬಹುಳ ೪ ಶುಕ್ರವಾರ ಬಿವಿ ೮ ಗಳಿಗೆಗೆ ಸಲ್ಲುವ ಕರ್ಕಾಟಕ ಲಗ್ನದಲ್ಲಿ (೩) ಅರೇಪುರದ ಚನ್ನರಾಜಯ್ಯನವರ ಮಕ್ಕಳು ಚೆಲುವಾಜಮ್ಮಣ್ಣಿಯವರು, (೪) ಬೀಚನಹಳ್ಳಿ ಮಲ್ಲರಾಜಯ್ಯನವರ ಮಕ್ಕಳು ದೇವೀರಮ್ಮಣ್ಣಿಯವರು, (೫) ಹುಲ್ಲಹಳ್ಳಿ ವೀರರಾಜಯ್ಯನವರ ಮಕ್ಕಳು ನಂಜಮ್ಮಣ್ಣಿಯವರು, (೬) ತೊಂಡವಾಡಿ ಕಾಂತರಾಜಯ್ಯನವರ ಮಕ್ಕಳು ಲಕ್ಷ್ಮಮ್ಮಣ್ಣಿಯವರು, (೭) ಮೂಗೂರು ನಂಜರಾಜಯ್ಯನವರ ಮಕ್ಕಳು ದೇವಾಜಮ್ಮಣ್ಣಿಯವರು.

ಸಂತಾನ.—(೧) ಕೆಂಪದೇವಾಜಮ್ಮಣ್ಣಿಯವರ ಪುತ್ರರು ತತ್ಕಾಲದಲ್ಲಿಯೂ (೨) ಚೆಲುವಾಜಮ್ಮಣ್ಣಿಯವರ ಪುತ್ರರು ಮೂರು ದಿನದಮೇಲೂ, (೩) ಹೊನ್ನಾಜಮ್ಮಯ್ಯನವರ ಪುತ್ರರು ತತ್ಕಾಲದಲ್ಲಿಯೂ ತೀರಿಹೋದರು; (೪) ಕೆಂಪನಂಜಮ್ಮಣ್ಣಿಯವರ ಗರ್ಭಸುಧಾಂಬುಧಿಯಲ್ಲಿ ನಂಜರಾಜಾಭಿದ ಆದ ಮಹಸ್ವಾಮಿಯವರಾದ ಮುಮ್ಮಡಿ ಕೃಷ್ಣರಾಜ ಒಡೆಯರವರು.

ಖಾಸಾಚಾಮರಾಜ ಒಡೆಯರವರ ಪಟ್ಟಾಭಿಷೇಕಕ್ಕೆ ಮುಂಚಿತವಾಗಿ ನಡೆದ ವೃತ್ತಾಂತ.—ಇಮ್ಮಡಿ ಕೃಷ್ಣರಾಜ ಒಡೆಯರವರ ಪತ್ನಿಯರಾದ ಲಕ್ಷ್ಮಮ್ಮಣಿಯವರು, ತಮ್ಮ ಸಪತ್ನೀ ಪುತ್ರರಾದ ನಂಜರಾಜ ಒಡೆಯರವರೂ ಬೆಟ್ಟದಚಾಮರಾಜ ಒಡೆಯರವರೂ ಚಿಕ್ಕವಯಸ್ಸಿನಲ್ಲೇ ತೀರಿಹೋದ ಅನಂತರದಲ್ಲಿ, ತಮಗೆ ಸಂತಾನವಿಲ್ಲದೆ, ಧೊರೆತನಕ್ಕೂ ಯಾರೂ ಇಲ್ಲದೆ, "ನಮ್ಮ ತಂಗೀ ಗಂಡನಾದ ಕಳಲೇ ಮನೆತನದ ಭಾರದ್ವಾಜ ಗೋತ್ರದ

ಮದ್ದೂರು ಕಾಂತರಾಜಯ್ಯನ ಪುತ್ರನಾದ ನರಸರಾಜಯ್ಯನನ್ನಾಗಲೀ, ನಮ್ಮ ಸವತೀ ಮಗಳ ಮಗನಾದ ತಗಡೂರು ಮನೆತನದ ಹರಿತಸಗೋತ್ರದಲ್ಲಿ ಹುಟ್ಟಿದ ಸಿದ್ಧರಾಜಯ್ಯನನ್ನಾಗಲೀ ಸ್ವೀಕಾರಮಾಡಿಕೊಂಡು ಪಟ್ಟವನ್ನು ಕಟ್ಟಬೇಕು ಎಂದು ಆಲೋಚನೆಮಾಡಿ ಇರುತ್ತೇವೆ" ಎಂದು ತಮ್ಮ ಪತಿಯಿಂದ ಬಿಟ್ಟು ಸರ್ವಾಧಿಕಾರವನ್ನು ಪಡೆದು ಎಲ್ಲಾ ಆಡಳಿತಗಳನ್ನೂ ನೋಡಿಕೊಂಡಿರುವ ನವಾಬ ಹೈದರಲ್ಲೀ ಖಾನಬಹದರರ ಬಳಿಗೆ ಹೇಳಿಕಳುಹಿಸಿದರು. ಅನಂತರದಲ್ಲಿ ನವಾಬರು ಅಮ್ಮನವರ ಮನೋಭಿಪ್ರಾಯವನ್ನು ತಿಳಿದು, ಶೀಘ್ರವಾಗಿ ಅರಮನೆಗೆ ಬಂದು, ಸಂಪ್ರದಾಯಾನುಸಾರವಾಗಿ ಅಮ್ಮನವರ ಪಾದಗಳಿಗೆ ಅಡ್ಡಬಿದ್ದು ಬಿನ್ನವಿಸಿದರು. ಏನೆಂದರೆ: "ಸರ್ವೋತ್ತಮವಾದ ತಮ್ಮ ವಂಶವು ಯೋಗ್ಯರಾದ ಪುತ್ರರಿಂದಲೇ ಪ್ರಕಾಶವನ್ನು ಪಡೆಯ ಬೇಕೇಹೊರತು ಮತ್ತೆ ಬೇರೆ ಅಲ್ಲ. ತಮ್ಮ ವಂಶವು ಆಸೇತು ಹಿಮಾಚಲಪರ್ಯಂತವೂ ಪ್ರಸಿದ್ಧವಾದದ್ದು. ತಮ್ಮ ವಂಶಿಕರು ಮಹಾಪರಾಕ್ರಮಶಾಲಿಗಳಾಗಿಯೂ ಮಹಾ ದಾತೃಗಳಾಗಿಯೂ ಧರ್ಮದಲ್ಲಿಯೇ ಆಸಕ್ತರಾಗಿಯೂ ಇದ್ದವರಾದಕಾರಣ, ತಾವು ಅದೇಗುಣಗಳುಳ್ಳ ಪುತ್ರರನ್ನೇ ಪರೀಕ್ಷಿಸಿ ಸ್ವೀಕಾರವನ್ನು ಮಾಡಿಕೊಂಡು ಪಟ್ಟವನ್ನು ಕಟ್ಟಬೇಕು. ಈಗ ತಾವು ಸ್ವೀಕಾರವನ್ನು ಮಾಡಿಕೊಳ್ಳಬೇಕೆಂದು ನಿಶ್ಚಯಿಸಿ ಕೊಂಡಿರುವವರಲ್ಲಿ ಒಬ್ಬರು ವಕ್ರವಾಗಿ ಕುಂಟಕಾಲುಳ್ಳವರಾಗಿಯೂ, ಮತ್ತೊಬ್ಬರು ಮಂಕಾದ ಬುದ್ಧಿಯುಳ್ಳವರಾಗಿಯೂ ಶ್ವೇತ ಕುಷ್ಠರೋಗವುಳ್ಳವರಾಗಿಯೂ ಇರುತ್ತಾರೆ. ಆದ್ದರಿಂದ ಇವರನ್ನು ಬಿಟ್ಟು, ಇವರಿಗಿಂತ ಸೌಂದರ್ಯಾದಿ ಅನೇಕ ಗುಣಾತಿಶಯಗಳುಳ್ಳ ಬಾಲಕರನ್ನು ಕರೆಯಿಸಿ ಅವರನ್ನು ಪರೀಕ್ಷೆ ಮಾಡೋಣ. ಆಕಾಲದಲ್ಲಿ ಅವರವರ ಪೂರ್ವಪುಣ್ಯ ಪ್ರಭಾವದಿಂದ ಈ ಸಂಸ್ಥಾನಕ್ಕೆ ಮುಖ್ಯಾಭಿಮಾನಿಯಾದ ಶ್ರೀಚಾಮುಂಡೇಶ್ವರೀ ಅಮ್ಮನವರು ಯಾರಲ್ಲಿ ಕಟಾಕ್ಷವನ್ನು ಇಡುವರೋ ಅವರೇ ರಾಜಪದಕ್ಕೆ ಯೋಗ್ಯರಾಗಿ ಇರುವರು. ಅವರ ಬುದ್ಧಿಯನ್ನು ಪರೀಕ್ಷೆಮಾಡಿ ಅವರನ್ನು ಸ್ವೀಕಾರ ಮಾಡಿಕೊಂಡು ಪಟ್ಟವನ್ನು ಕಟ್ಟಿಸಬೇಕು." ಹೀಗೆಂದು ನವಾಬ ಹೈದರಲ್ಲೀ ಖಾನರು ಬಿನ್ನವಿಸಿ ಅಪ್ಪಣೆಯನ್ನು ತೆಗದುಕೊಂಡು ಬಂದು, ಶ್ರೀರಂಗಪಟ್ಟಣದಲ್ಲಿಯೂ ಗ್ರಾಮಾಂತರಗಳಲ್ಲಿಯೂ ಇದ್ದ ಧೊರೆಗಳಿಗೆ ಬಂಧುಗಳಾದ

ಅರಸುಗಳ ಚಿಕ್ಕಚಿಕ್ಕ ಮಕ್ಕಳನ್ನು ಕರೆಯಿಸಿ, ತಮ್ಮ ಮನೆಯಲ್ಲಿ ಸಭೆಯನ್ನು ಮಾಡಿಸಿ, ತಮ್ಮ ಸಾಮಾಜಿಕರ ಎದುರಿಗೆ ಈ ಬಾಲಕರನ್ನು ಕರೆಯಿಸಿ, ಆ ಸಭಾಸ್ಥಾನದಲ್ಲಿ ಒಂದು ಕಡೆಯಲ್ಲಿ ಖರ್ಜೂರ ದ್ರಾಕ್ಷಿ ಸಕ್ಕರೆ ನಾನಾವಿಧ ಫಲ ಮೊದಲಾದ ಭಕ್ಷ್ಯಗಳನ್ನೂ, ಒಂದು ಕಡೆಯಲ್ಲಿ ವಿಚಿತ್ರವಾದ ವಸ್ತ್ರಾಭರಣಗಳನ್ನೂ ನಾಣ್ಯಗಳನ್ನೂ, ಮತ್ತೊಂದು ಕಡೆಯಲ್ಲಿ ಆಟದ ಪದಾರ್ಥಗಳನ್ನೂ, ಇನ್ನೊಂದು ಕಡೆಯಲ್ಲಿ ಒಂದು ಕನ್ನಡಿಯನ್ನೂ ಕಠಾರಿಯನ್ನೂ ಇರಿಸಿ, ಆ ಬಾಲಕರನ್ನು ಕರೆದು “ ನಿಮಗೆ ಬೇಕಾದ ಪದಾರ್ಥಗಳನ್ನು ಭಯಪಡದೆ ತೆಗೆದು ಕೊಳ್ಳಿ ” ಎಂದು ಹೇಳಿದರು. ಆಗ ಆ ಬಾಲಕರು ಅವರವರ ಪೂರ್ವ ಪುಣ್ಯಪ್ರಭಾವದಿಂದ ತಮತಮಗೆ ಬೇಕಾದ ಪದಾರ್ಥಗಳನ್ನು ತೆಗೆದುಕೊಳ್ಳುತ್ತಿದ್ದರು. ಆಗ ಅರಿಕುಠಾರದ ದೇವರಾಜ ಅರಸಿನವರ ಪತ್ನಿಯಾದ ಹೊನ್ನಾಜಮ್ಮಣ್ಣಿಯವರ ಗರ್ಭಸುಧಾಂಬುಧಿಯಲ್ಲಿ ಹುಟ್ಟಿದ ಸೌಂದರ್ಯಶಾಲಿಗಳಾದ ಚಾಮರಾಜರೆಂಬ ೩ ವರ್ಷದ ಬಾಲಕರು, ಆ ಸಭಾಜನರೆಲ್ಲರೂ ನೋಡುತ್ತಿರುವಾಗ, ಅಲ್ಲಿ ಇರಿಸಿದ್ದ ಕಠಾರಿಯನ್ನೂ ಕನ್ನಡಿಯನ್ನೂ ತೆಗೆದುಕೊಂಡರು. ನವಾಬರು ಅವರನ್ನು ನೋಡಿ ಸಂತೋಷಪಟ್ಟು, ಇವರೇ ತಮಗೆ ದೊರೆಗಳಾಗುವರೆಂದು ಅಲ್ಲಿದ್ದ ಜನರ ಸಂಗಡ ಹೇಳಿ, ಎಲ್ಲರನ್ನೂ ನಿಂತುಕೊಳ್ಳುವಂತೆ ಆಜ್ಞೆ ಮಾಡಿ, ಮಹಾರಾಜಪದಕ್ಕೆ ಯೋಗ್ಯವಾದ ಹಾಸಿಗೆಯನ್ನು ಮಾಡಿಸಿ, ಅವರನ್ನು ಅಲ್ಲಿ ಮುಹೂರ್ತಮಾಡಿಸಿ, ಸಾಮಾಜಿಕರೆಲ್ಲರಿಂದಲೂ ಮರ್ಯಾದಾನುಗುಣವಾಗಿ ಮುಜರೆಗಳನ್ನು ಮಾಡಿಸಿ, ತಾಪ್ರೂವಮಾಡಿ, ಹೂವಿನಹಾರ ವೀಳ್ಯಗಳನ್ನೂ ವಸ್ತ್ರಾಭರಣಗಳನ್ನೂ ಒಪ್ಪಿಸಿ, ಈ ವಿವರಗಳನ್ನೆಲ್ಲಾ ಮಹಾಮಾತುಶ್ರೀ ಲಕ್ಷ್ಮಮ್ಮಣ್ಣಿಯವರಿಗೆ ಬಿನ್ನವಿಸುವಂತೆ ಹೇಳಿ ರಾಜಮರ್ಯಾದೆಯಿಂದ ಹೇಳಿಕಳುಹಿಸಿದರು.* ಇದನ್ನು ಕೇಳಿದ ಲಕ್ಷ್ಮಮ್ಮಣ್ಣಿಯವರು

* ಹೈದರಖಾನರು ಈರೀತಿಯಾಗಿ ಮಹಾಮಾತುಶ್ರೀ ಲಕ್ಷ್ಮಮ್ಮಣ್ಣಿಯವರ ಇಷ್ಟಕ್ಕೆ ವಿರೋಧವಾಗಿಯೂ ಸ್ವೇಚ್ಛಾನುವರ್ತಿಗಳಾಗಿಯೂ ನಡೆಯುವದಕ್ಕೆ ಪ್ರಾರಂಭಿಸಿದ್ದರಿಂದಲೂ, ಇನ್ನೂ ಇತರ ಚರಿತ್ರೆಗಳಿಂದಲೂ, ಮುಂದೆ ಕಾಣಬರುವ ದಾಖಲೆಗಳಿಂದಲೂ, ಇವರು ನೆವಕ್ಕೆ ಮಾತ್ರ ಒಬ್ಬ ಮಹಾರಾಜರನ್ನು ಸಿಂಹಾಸನದಮೇಲೆ ಕೂರಿಸಿ, ಜನಗಳಿಗೆ ತಾವು ಅಚ್ಛಿನ್ನಭಕ್ತರೆಂದು ನಟಿಸುತ್ತಾ, ದೊರೆಗಳಿಗಿದ್ದ ಸಕಲ ಅಧಿಕಾರವನ್ನೂ

ತಮ್ಮ ಮನಸ್ಸಿನಲ್ಲಿ ಇದ್ದಂತೆ ನಡೆಯಲಿಲ್ಲವಾದ್ದರಿಂದಲೂ, ಇವರಿಗೆ ಪಟ್ಟವಾಗುವದು ತಮಗೆ ಇಷ್ಟವಿಲ್ಲದಿದ್ದರೂ ತಮ್ಮ ಯತ್ನವೇನೂ ನಡೆಯದೆ ಇದ್ದ

ತಾವೇ ಆಕ್ರಮಿಸಿಕೊಂಡು, ಧೊರೆಗಳಿಗಾಗಲೀ ಇವರಕಡೇ ಜನಗಳಿಗಾಗಲೀ ಈ ಷತ್ತಾದರೂ ಸ್ವಾತಂತ್ರ್ಯವನ್ನು ಕೊಡದೆ, ಆ ಜನಗಳಿಗೆ ಇದ್ದ ಅಧಿಕಾರವನ್ನೆಲ್ಲಾ ಕಡಿಮೆಮಾಡಿ, ಸ್ವಜನಗಳನ್ನು ಹೆಚ್ಚಿಸಿ, ಸರಕಾರದ ಹಣವನ್ನೆಲ್ಲಾ ಅಪಹರಿಸಿ, ಮಹೀಶೂರ ಮಹಾರಾಜರ ವಂಶಕ್ಕೆ ಬಹಳ ದ್ರೋಹವನ್ನು ಮಾಡಿದರೆಂದು ತಿಳಿಯಬರುತ್ತದೆ. ಇವರು ಹೀಗೆ ದ್ರೋಹದಿಂದ ನಡೆದು ಕೊಳ್ಳುವದಕ್ಕೆ ಪ್ರಾರಂಭಿಸಲು, ಮಹಾಮಾತುಶ್ರೀ ಲಕ್ಷ್ಮಮ್ಮಣ್ಣಿಯವರು ಈ ಯವನರ ಬಾಧೆಯನ್ನು ತಪ್ಪಿಸಿಕೊಂಡು, ಇಂಗ್ಲಿಷನವರು ಧರ್ಮಾತ್ಮರಾದ್ದರಿಂದ ಅವರ ಛತ್ರಚ್ಛಾಯೆಯಲ್ಲಿ ಇರುವದು ಉತ್ತಮವೆಂದು ಎಣಿಸಿ, ತಮ್ಮಲ್ಲಿ ಆಪ್ತರಾಗಿದ್ದ ತಿರುಮಲರಾಯರು ಮತ್ತು ನಾರಾಯಣರಾಯರು ಎಂಬವರನ್ನು ಇಂಗ್ಲಿಷನವರ ಬಳಿಗೆ ಕಳುಹಿಸಿಕೊಟ್ಟು ರಾಜಕಾರ್ಯಗಳನ್ನು ನಡಿಸಿದರು. ಮುಂದಿನ ಚರಿತ್ರೆಯು ಸರಿಯಾಗಿ ತಿಳಿಯುವದಕ್ಕೋಸ್ಕರ ಈ ತಿರುಮಲರಾಯರು ಮತ್ತು ನಾರಾಯಣರಾಯರು ಎಂಬವರು ಯಾವ ವಂಶಕ್ಕೆ ಸೇರಿದವರು ಎಂಬುವದನ್ನೂ, ಇವರಿಗೂ ಮಹೀಶೂರ ಮಹಾರಾಜರವರಿಗೂ ಇದ್ದ ಸಂಬಂಧವು ಇಂಥಾದ್ದೆಂಬುವದನ್ನೂ ತಿಳಿದುಕೊಳ್ಳತಕ್ಕದ್ದು ಅವಶ್ಯಕವಾಗಿದೆ.

ವಿಜಯನಗರ ಸಂಸ್ಥಾನದಲ್ಲಿ ಗೋವಿಂದಾಚಾರ್ಯರೆಂಬವರು ಅಲ್ಲಿನ ಧೊರೆಗಳಿಗೆ ಗುರುಗಳಾಗಿ ಇದ್ದುಕೊಂಡು ಇದ್ದರೆಂದು ತಿಳಿಯ ಬರುತ್ತದೆ. ಕ್ರಿಸ್ತಶಕದ ೧೫೬೫ನೇ ಇಸವಿಯಲ್ಲಿ ಈ ವಿಜಯನಗರದ ಸಂಸ್ಥಾನವು ನಾಶವಾಯಿತು. ಅನಂತರದಲ್ಲಿ ಈ ಸಂಸ್ಥಾನದ ಸಾಮಂತರಾಜರಲ್ಲಿ ಒಬ್ಬರಾದ ಶ್ರೀರಂಗಪಟ್ಟಣದಲ್ಲಿ ಆಳುತ್ತಿದ್ದ ಅಚ್ಯುತರಾಯರು ಮೇಲ್ಕಂಡ ಗುರುಗಳ ವಂಶಸ್ಥರಲ್ಲಿ ಒಬ್ಬರಾದ ಗೋವಿಂದರಾಜರೆಂಬವರನ್ನು ಕರೆಯಿಸಿಕೊಂಡು, ಅವರಿಗೆ ಮಂಡ್ಯವನ್ನು ಜಹಗೀರಾಗಿ ಕೊಟ್ಟು ತಾಂಬ್ರದ ಶಾಸನವನ್ನು ಬರೆಯಿಸಿಕೊಟ್ಟರು. ಅನಂತರದಲ್ಲಿ ಶ್ರೀರಂಗಪಟ್ಟಣವೂ ಮಹೀಶೂರನಗರವೂ ಎರಡೂ ಒಂದೇ ರಾಜ್ಯವಾದ್ದರಿಂದ, ಈ ಗೋವಿಂದರಾಜರ ವಂಶಸ್ಥರು ಮಹೀಶೂರ ಮಹಾರಾಜರವರಲ್ಲಿ ಆಶ್ರಿತರಾಗಿ ಇರುವದಕ್ಕೆ ಕಾರಣವಾಯಿತು. ಈ ವಂಶಕ್ಕೆ ಸೇರಿದ ತಿರುಮಲರಾಯರು ಮತ್ತು ನಾರಾಯಣರಾಯರೆಂಬ ಇಬ್ಬರು ಅಣ್ಣತಮ್ಮಂದಿರು ಈ ಸಂಸ್ಥಾನದ ಧೊರೆಗಳ ಬಳಿ ಆಶ್ರಿತರಾಗಿ ಇದ್ದು, ಕಡೆಗೆ ನವಾಬರು ಪ್ರಬಲಕ್ಕೆ ಬರುವದಕ್ಕೆ ಮೊದಲು ಪ್ರಧಾನತದಲ್ಲಿ ಇದ್ದರು. ನವಾಬರು ಪ್ರಬಲಕ್ಕೆ ಬಂದಮೇಲೆ ಪೂರ್ವದ ಜನಗಳಿಗೆ ಇದ್ದ ಅಧಿಕಾರಗಳನ್ನೆಲ್ಲಾ ತೆಗೆದು ಹಾಕಿದಾಗ, ಇವರಿಗೆ ಪ್ರಧಾನತನವು ಹೋಗಿ, ಇವರು ಈ ರಾಜ್ಯದಲ್ಲಿಯೇ ಹೈದರಖಾನರ ಬಳಿಗಳಲ್ಲಿ ಗೌರವವಾಗಿ ಜೀವನ ಮಾಡಿಕೊಂಡಿದ್ದರು.

ದ್ದರಿಂದಲೂ, ಸಮ್ಮತಪಟ್ಟವರಂತೆ ನಟನೆಯನ್ನು ಮಾಡಿ, ಹಾಗೆಯೇ ಆಗಲಿ ಎಂದು ಅಪ್ಪಣೆಯನ್ನು ಕೊಟ್ಟು ಕಳುಹಿಸಿದರು. ಅನಂತರದಲ್ಲಿ ನವಾಬರು

ನವಾಬ ಹೈದರಲ್ಲೀ ಖಾನರು ಮೇಲೆ ಹೇಳಿರುವಂತೆ ಪ್ರಬಲಕ್ಕೆ ಬಂದು ಸ್ವೇಚ್ಛೆಯಿಂದ ನಡೆಯುತ್ತಾ ಜನಗಳನ್ನು ಹಿಂಸಿಸುವದಕ್ಕೆ ಪ್ರಾರಂಭಿಸಿದಮೇಲೆ, ಮಹಾ ಮಾತುಶ್ರೀ ಲಕ್ಷ್ಮಮ್ಮಣ್ಣಿಯವರು ಈ ಪ್ರಧಾನತಿರುಮಲರಾಯರು ನಾರಾಯಣರಾಯರಿಗೆ ಅಪ್ಪಣೆ ಕೊಡಿಸಿದವಿವರ “ ಈಗ ನಮ್ಮ ಸಂಸ್ಥಾನವನ್ನು ನಮಗೆ ಸ್ವಾಧೀನ ಮಾಡಿಸಿಕೊಟ್ಟು ಈ ಯವನನನ್ನು ನಿರ್ಮೂಲ ಮಾಡುವಬಗ್ಗೆ ಚೆನ್ನಪಟ್ಟಣದ ಗವರ್ನರವರಾದ ಲಾರ್ಡ್ ಪಿಗಟರವರಿಗೆ ನಾವು ಬರೆಯಿಸಿ ಕಳುಹಿಸಿದ್ದೇವಾದಕಾರಣ, ಅವರು ಬಹಳ ಸಂತೋಷಯುಕ್ತರಾಗಿ ನಮಗೆ ಬರೆಯಿಸಿ ಕಳಿಸಿದವಿವರ : ‘ಈಗ ಹೈದರನಾಯಕನು ಬಲವಂತನಾಗಿ ಇದ್ದಾನೆ. ಈಬಗ್ಗೆಲ್ಲಾ ಸೀಮೆಗೆ ನಮ್ಮ ಧಣಿಗಳ ಬಳಿಗೆ ಬರೆಯಿಸಿ ಕಳುಹಿಸಿ ನಿಮ್ಮ ರಾಜ್ಯ ಸಾಧಿಸಿ ನಿಮಗೆ ಕೊಡುತ್ತೇವೆ. ಸಂದೇಹವಿಲ್ಲ. ಆದರೆ ಈಗ ನೀವೆಲ್ಲರೂ ಶತ್ರುವಿನ ಕೈಯಲ್ಲಿ ಬಂದೀಕೃತರಾಗಿ ಇರುವದರಿಂದ ನಿಮಗೆ ಪ್ರಾಣಾಪ್ತರಾಗಿ ಕೇವಲ ಬುದ್ಧಿವಂತರಾಗಿ ನಿಮ್ಮಿಂದ ವರ್ಧಮಾನರಾದವರನ್ನು ನಮ್ಮ ಬಳಿಗೆ ಕಳುಹಿಸಿಕೊಡಬೇಕು. ಅವರು ಆಡಿದ ಮಾತುಗಳೂ ಅವರು ಬರೆದುಕೊಟ್ಟ ಕೌಲು ಕರಾರುಗಳೂ ಯಾವತ್ತೂ ನಮಗೆ ಸಮ್ಮತಿ ಎಂಬದಾಗಿಯೂ, ಯಾವ ಕಾರ್ಯಕ್ಕೂ ನಾವೇ ಅವರು ಎಂಬ ಅಭೇದವಾಗಿ ನಮಗೆ ಕಾಗದ ಬರೆದುಕೊಟ್ಟು ರಹಸ್ಯವಾಗಿ ಆ ಮಾತುಬರ ಮನುಷ್ಯರ ಕಳುಹಿಸಿದರೆ ನಾವು ಶತ್ರುವನ್ನು ನಿಗ್ರಹಿಸಿ ಸಂಸ್ಥಾನವನ್ನು ನಿಮಗೆ ಬಿಡಿಸಿಕೊಡುತ್ತೇವೆ,’ ಎಂಬದಾಗಿ ನಂಬಿಕೆಯಾಗಿ ಬರೆಯಿಸಿ ಕಳುಹಿಸಿ ಇರುತ್ತಾರೆ. ಅದಕಾರಣ ನೀವು ಪಿತಾದ್ಯಕ ಗುಣಾಪೇಕ್ಷಯಾ ಅಧಿಕರಾದಕಾರಣ, ನಿಮ್ಮನ್ನು ತ್ರಿಕರಣಶುದ್ಧಿಯಾಗಿ ಮನಃಪೂರ್ವಕವಾಗಿ ನಂಬಿ, ಈಕಾರ್ಯಕ್ಕೆ ನಿಮ್ಮನ್ನು ನೇಮಕಮಾಡಿಸಿ ಕಳುಹಿಸಿ ಇದ್ದೇವೆ.” ಹೀಗೆಂದು ಅಪ್ಪಣೆ ಕೊಡಿಸಿ, ಮಾತುಶ್ರೀ ಲಕ್ಷ್ಮಮ್ಮಣ್ಣಿಯವರು ಲಾರ್ಡ್ ಪಿಗಟ್ ಸಾಹೇಬರಿಗೆ ಒಂದು ಕಾಗದವನ್ನು ಇವರ ಮುಖಾಂತರ ಕಳುಹಿಸಿದರು.

ಅನಂತರದಲ್ಲಿ ಈ ತಿರುಮಲರಾಯರೂ ನಾರಾಯಣರಾಯರೂ ಮಹಾಮಾತುಶ್ರೀ ಲಕ್ಷ್ಮಮ್ಮಣ್ಣಿಯವರ ಆಜ್ಞೆಯನ್ನು ಶಿರಸಾ ವಹಿಸಿ ಅಮ್ಮನವರು ಕಳುಹಿಸಿದ ಕಾಗದವನ್ನು ಪಿಗಟ್ ಸಾಹೇಬರಿಗೆ ಒಪ್ಪಿಸಿದರು. ಪಿಗಟ್ ಸಾಹೇಬರವರು ಅದನ್ನು ನೋಡಿಕೊಂಡು, ಬಹಳ ಸಂತೋಷಯುಕ್ತರಾಗಿ “ ಈ ವಿಷಯಗಳನ್ನು ನಾವು ನಮ್ಮ ದಣಿಗಳಿಗೆ ಸೀಮೆಗೆ ಬರೆದು ಪ್ರತ್ಯುತ್ತರವನ್ನು ತರಿಸುವವರಿಗೂ ನೀವು ತಂಜಾವೂರು ಮಹಾರಾಜರವರ ಪೋಷಣೆಯಲ್ಲಿ ಇರತಕ್ಕದ್ದು ” ಎಂದು ಆಜ್ಞಾಪಿಸಿ, ಈ ವಿಷಯದಲ್ಲಿ ಆ ಮಹಾರಾಜರಿಗೆ ಲೇಖನವನ್ನು ಬರೆದು ಕೊಟ್ಟರು. ಆ ಲೇಖನವನ್ನು ತೆಗೆದುಕೊಂಡು, ಇವರಿಬ್ಬರೂ ತಂಜಾವೂರಿಗೆ ಹೋಗಿ ಆ ಮಹಾರಾಜರವರ ಆಶ್ರಯದಲ್ಲಿ ಇದ್ದರು. ಕೆಲವು

ಶಾ ೧೬೯೯ನೇ ದುರ್ಮುಖಿ ಸಂವತ್ಸರದ ನಿಜಭಾದ್ರಪದ ಶುದ್ಧ ೧೧ಯಲ್ಲಿ ಲಕ್ಷ್ಮಮ್ಮಣ್ಣಿಯವರಿಗೆ ಬಲಾತ್ಕಾರದಿಂದ ಸ್ವೀಕಾರವನ್ನು ಮಾಡಿಸಿ, ಯಥಾ ಶಾಸ್ತ್ರೀಯವಾಗಿ ಪಟ್ಟಾಭಿಷೇಕ ಮಹೋತ್ಸವವನ್ನು ಮಾಡಿಸಿದರು.

ದಿನಗಳು ಕಳೆದನಂತರದಲ್ಲಿ ನಾರಾಯಣರಾಯರು ತಂಜಾವೂರನ್ನು ಬಿಟ್ಟು ರಾಜಕಾರ್ಯಾರ್ಥವಾಗಿ ಶ್ರೀರಂಗಪಟ್ಟಣಕ್ಕೆ ಬಂದು, ಮಹಾಮಾತುಶ್ರೀ ಲಕ್ಷ್ಮಮ್ಮಣ್ಣಿಯವರೊಡನೆ ಮಾತನಾಡಿಕೊಂಡು, ಮದರಾಸ್ ಗವರ್ನರ್ ಲಾರ್ಡ್‌ಮೆಕ್ಕಾರ್ಟ್ನಿಯವರು ಮತ್ತು ಜನರಲ್ ಕೂಟ್ ರವರಿಗೆ ಆಮ್ಮಣ್ಣಿಯವರು ಬರೆಯಿಸಿಕೊಟ್ಟ ಕಾಗದಗಳನ್ನು ತೆಗೆದುಕೊಂಡು, ತಂಜಾವೂರನ್ನು ಸೇರಿ, ಅತ್ಯಂತ ಗುಣಶಾಲಿಗಳಾದ ರೆವರೆಂಡ್ ಷ್ವಾರ್ಡ್ಸ್ ಸಾಹೇಬರವರು ಮತ್ತು ತಂಜಾವೂರು ಮಹಾರಾಜರವರು, ಇವರ ಮೂಲಕ ತಮ್ಮ ವೃತ್ತಾಂತವನ್ನು ತಂಜಾವೂರು ರೆಸಿಡೆಂಟರಾದ ಹಾಸಲರ್ವ್ ಸಾಹೇಬರಿಗೆ ತಿಳಿಯಪಡಿಸಿ, ಮಾತುಶ್ರೀಯವರ ಕಾಗದಗಳನ್ನು ಆಯಾ ಸರದಾರರಿಗೆ ಒಪ್ಪಿಸಿ, ಮೈಸೂರ ಮಹಾರಾಣಿಯವರಿಂದ ಕಾಗದ ಪತ್ರಗಳನ್ನು ಬರಮಾಡಿಕೊಳ್ಳುವ ವಿಷಯದಲ್ಲಿ ತಾವು ಮಾಡಿಕೊಂಡಿರುವ ಏರ್ಪಾಡುಗಳನ್ನು ಹಾಸಲರ್ವ್ ಸಾಹೇಬರಿಗೆ ತೃಪ್ತಿಕರವಾಗಿ ವ್ಯಕ್ತಪಡಿಸಿದರು. ಇವರು ತಮ್ಮ ಕಾರ್ಯದ ನಿಜಸ್ಥಿತಿಯನ್ನು ತೋರ್ಪಡಿಸುವದಕ್ಕೋಸ್ಕರ, ೧೭೬೭ನೇ ಇಸವಿಯ ಯುದ್ಧದಲ್ಲಿ ಮಲಬಾರು ಮತ್ತು ಕೊಯಮತ್ತೂರು ಗವರ್ನರಾದ ಮಾದಣ್ಣನೆಂಬವರಿಗೆ ನವಾಬ್ ಮಹಮ್ಮದಲ್ಲೀಖಾನರಿಂದಲೂ ಕರ್ನಲ್ ಉಡ್ ಮತ್ತು ಕರ್ನಲ್ ಸ್ಮಿತ್ ಸಾಹೇಬರವರಿಂದಲೂ ಬರೆಯಲ್ಪಟ್ಟ ಅಸಲು ಕಾಗದಗಳನ್ನು ಹಾಜರು ಮಾಡಿದರು. ಈ ಕಾಗದಗಳು ಹೈದರಖಾನರ ಪೋಲೀಸ ಮಿಲಾಖೆಯವರಲ್ಲಿ ಇವರಿಗಿರುವ ಅತ್ಯಂತ ಆಪ್ತಭಾವವನ್ನು ತೋರಿಸಿದವು. ಈವಿಷಯವಾಗಿ ಮದರಾಸು ಗವರ್ನಮೆಂಟಿನಲ್ಲಿ ಅನೇಕ ಕಾಗದ ಪತ್ರಗಳು ನಡೆದ ಮೇಲೆ, ೧೭೮೨ನೇ ಇಸವಿ ಅಕ್ಟೋಬರ್ ೨೮ರಲ್ಲಿ ಮಹಿಸೂರ ಮಹಾರಾಣಿಯವರಿಗೂ ಕುಂಪಣೀಗವರ್ನಮೆಂಟಿಗೂ ಒಂದು ಕರಾರು ನಡೆಯಿತು. ಏನೆಂದರೆ—

ಸರ್ ೧೭೮೨ನೇ ಇಸವಿಯಲ್ಲಿ ರಾಣಿ ಶ್ರೀ ಲಕ್ಷ್ಮಮ್ಮಣ್ಣಿಯವರ ಪ್ರಧಾನರಾದ ತಿರುಮಲರಾವ್, ನಾರಾಯಣರಾವ್ ಇವರಿಗೂ ಕುಂಪಣಿಯವರಿಗೂ ನಡೆದ ಸವಾಲ ಜವಾಬು ತರ್ಜುಮಾ.

ಮಹಿಶೂರ ಮಹಾರಾಣಿಯವರ ಸವಾಲ್.	ಇಂಗ್ಲೀಷ್ ಜನಗಳ ಜವಾಬು.
೧. ಹೈದರ ನಾಯಕನು ನಮ್ಮ ಯಜಮಾನರ ರಾಜ್ಯವನ್ನು ಅನ್ಯಾಯವಾಗಿ	ಹೈದರನು ಮಹಿಶೂರ ಧೊರೆಗಳ ಚಾಕರನಾಗಿ ಇದ್ದುಕೊಂಡು ರಾಜ್ಯವನ್ನು

ಅನಂತರದಲ್ಲಿ ಸನಾಪುರು ಚಾಮರಾಜ ಒಡೆಯರವರು ಬಿದಿಗೇ ಚಂದ್ರನಂತೆ ದಿನೇದಿನೇ ಪ್ರವರ್ಧಮಾನರಾಗಿ, ಸಕಲ ವಿದ್ಯಾ ಪಾರಂಗತರಾಗಿ ಸ್ವಬುದ್ಧಿ

ಮಹೀಶೂರ ಮಹಾರಾಣಿಯವರ ಸವಾಲ್.	ಇಂಗ್ಲೀಷ್ ಜನಗಳ ಜವಾಬು.
ಆಕ್ರಮಿಸಿಕೊಂಡು ನಮ್ಮ ಯಜಮಾನರು ಮತ್ತು ನಮ್ಮ ಎರಡು ಮಕ್ಕಳನ್ನು ಸಂಹಾರ ಮಾಡಿಬಿಟ್ಟು ಅವರ ಸಂಸಾರವನ್ನು ಸೆರೆಯಲ್ಲಿ ಹಾಕಿಬಿಟ್ಟನು. ಈ ರೀತಿಯಲ್ಲಿ ಇವನು ದ್ರೋಹ ಮಾಡಿ ಇದ್ದಾನೆ. ಹೈದರನು ಚಾಕರನಾಗಿದ್ದನೆಂದು ಕಂಪಣಿಯವರು ಚೆನ್ನಾಗಿ ತಿಳಿದಿದ್ದಾರೆ. ಆದಕಾರಣ ಈ ದ್ರೋಹಿಯನ್ನು ಜಯಿಸಿ ನಮ್ಮ ರಾಜ್ಯಗಳನ್ನು ನಮಗೆ ಕೊಡಿಸಬೇಕೆಂದು ಇಂಗ್ಲಿಷ್ ಜನಗಳನ್ನು ನಾವು ಬೇಡಿಕೊಳ್ಳುತ್ತೇವೆ.	ಅಪಹರಿಸಿಕೊಂಡು ದ್ರೋಹವನ್ನು ಮಾಡಿ ಧೊರೆಗಳಿಗೂ ಅವರ ಮನೆತನಕ್ಕೂ ಹಿಂಸೆಯನ್ನು ಮಾಡಿದನೆಂಬುವದು ಕಂಪಣಿಯವರು ತಿಳಿದೇ ಇದ್ದಾರೆ. ಇಂಗ್ಲಿಷ್ ಜನಗಳು ಮಹೀಶೂರ ರಾಜ್ಯಕ್ಕೆ ಫೌಜನ್ನು ಕಳುಹಿಸಿ ಹೈದರನನ್ನು ಸೋಲಿಸಿದನಂತರ ರಾಜಮನೆತನದವರನ್ನು ರಾಜ ಸ್ಥಾನದಲ್ಲಿ ಇಡುವರು. ಇಂಗ್ಲಿಷ್ ಜನಗಳು ಅಂತರಂಗವಾಗಿ ಕೆಳಗೆ ಕಂಡ ಪ್ರಕಾರ ಸಲಹಾ ಕೊಡುತ್ತಾರೆ.
೨. ಕಂಪಣಿಯವರು ಕೊಯಿಮತ್ತೂರು ಮತ್ತು ಇತರ ದೇಶಗಳನ್ನು ತೆಗೆದುಕೊಂಡು ನಮ್ಮ ಸ್ವಂತ ಅಮಲ್ದಾರರನ್ನೂ ಕಿಲ್ಲೇದಾರರನ್ನೂ ಆ ರಾಜ್ಯಗಳಲ್ಲಿ ನೇಮಿಸಿದ ಕ್ಷಣವೇ ಕಂಪಣಿಯವರಿಗೆ ಮೂರು ಲಕ್ಷ ವರಹಾಗಳನ್ನು ನಾವು ಕೊಡುತ್ತೇವೆ.	ನಾವು ಇದಕ್ಕೆ ಒಪ್ಪಿಕೊಳ್ಳುತ್ತೇವೆ.
೩. ಇಂಗ್ಲಿಷ್ ಜನಗಳು ಕಣಿವೇಮೇಲಕ್ಕೆ ತಮ್ಮ ಸೈನ್ಯಗಳನ್ನು ತೆಗೆದುಕೊಂಡು ಬಂದು ಹರದನಹಳ್ಳಿ ವಿಜಯಪುರಗಳನ್ನು ತೆಗೆದುಕೊಂಡ ತರುವಾಯ ನಾವು ಒಂದು ಲಕ್ಷ ವರಹಾಗಳನ್ನು ಕೊಡುತ್ತೇವೆ.	ನಾವು ಇದಕ್ಕೆ ಒಪ್ಪಿಕೊಂಡೆವು.

ಯಿಂದ ಸಕಲಕಾರ್ಯಗಳನ್ನೂ ನೋಡುವ ಪರ್ಯಂತರಕ್ಕೂ ಈ ಲಕ್ಷ್ಮಮ್ಮಣ್ಣಿಯವರ ಸಮತಿಯಿಂದ ಪುದ್ದುಮಲ್ಲಮ್ಮ ಇವ್ಮುಮ್ಮನವರು ಧೊರೆ

ಮಹೀಶೂರ ಮಹಾರಾಣಿಯವರ ಸವಾಲ್.	ಇಂಗ್ಲೀಷ್ ಜನಗಳ ಜವಾಬು.
೪. ಇಂಗ್ಲಿಷ್ ಜನಗಳು ಮಹೀಶೂರ ಕೋಟೆ ಯನ್ನು ತೆಗೆದು ಕೊಂಡು ಅದನ್ನು ನನಗೆ ಅಥವಾ ನನ್ನ ಕಡೇ ಅಧಿಕಾರಿಗಳಿಗೆ ಬಿಡಿಸಿ ಕೊಟ್ಟ ಅನಂತರ ಮತ್ತೊಂದು ಲಕ್ಷ ವರಹಾಗಳನ್ನು ನಾನು ಕೊಡುತ್ತೇನೆ.	ನಾವು ಇದಕ್ಕೆ ಒಪ್ಪಿಕೊಂಡೆವು.
೫. ಕುಂಪಣಿಯವರು ಶ್ರೀರಂಗಪಟ್ಟಣವನ್ನು ತೆಗೆದುಕೊಂಡು, ಅದನ್ನೂ ನನ್ನವಶಕ್ಕೆ ಕೊಟ್ಟ ಕೂಡಲೆ ನಾನು ಐದು ಲಕ್ಷ ವರಹಗಳನ್ನು ಕೊಟ್ಟು ಹಾಗೆಯೇ ಹತ್ತು ಲಕ್ಷ ವರಹಗಳವರಿಗೂ ಕೊಡುತ್ತಾ ಇರುವೆನು.	ನಾವು ಇದಕ್ಕೆ ಒಪ್ಪಿಕೊಂಡೆವು.
೬. ನಾನಾಗಲೀ ಅಥವಾ ನನ್ನ ಹಕ್ಕುದಾರರಾಗಲೀ ಶ್ರೀರಂಗಪಟ್ಟಣದಲ್ಲಿ ರಾಜ್ಯವಾಡಲ್ಪಟ್ಟಾಗ ನಾನು ಕುಂಪಣಿಯವರಿಗೆ ತಿಂಗಳು ಕಟ್ಟಳೆ ಕಿಸ್ತಿನ ಪ್ರಕಾರ ವರ್ಷಂಪ್ರತಿ ೫ ಲಕ್ಷ ವರಹಾಗಳ ಪೇಷಕಷನ್ನು ಕೊಡುತ್ತೇನೆ. ಇದೂ ಅಲ್ಲದೆ ಇಂಗ್ಲಿಷ್ ಜನಗಳು ಅಪೇಕ್ಷಿಸತಕ್ಕ ವರ್ಷಂಪ್ರತಿ ಒಂದು ಲಕ್ಷವರಹಾ ಉತ್ಪತ್ತಿಯಾಗುವ ದೇಶವನ್ನು ಇಂಗ್ಲಿಷ್ ಜನಗಳಿಗೆ ಬಿಟ್ಟುಕೊಡುತ್ತೇನೆ.	ರಾಜ್ಯವನ್ನು ಕಾಪಾಡಿಕೊಂಡು ಆ ಕೆಲಸಕ್ಕಾಗಿ ಸರಿಯಾದ ಸೈನ್ಯವನ್ನು ಇಡುವದಕ್ಕೆ ನಾವು ಒಪ್ಪಿಕೊಂಡೆವು.
೭. ನೋಲ್ಕಂಡಂತೆ ನಾನು ನಡೆದು ಕೊಂಡರೆ ನನ್ನ ರಾಜ್ಯವನ್ನು ಕಾಪಾಡಿ ಕೊಳ್ಳುವದಕ್ಕೂ ಮತ್ತು ಈ ಕೆಲಸಕ್ಕಾಗಿ ಇಂಗ್ಲಿಷ್ ಜನಗಳು ಶಿಪಾಯಿಗಳನ್ನೂ	ಆದರೆ ಶಿಪಾಯಿಗಳು ಮತ್ತು ಸೋಜರುಗಳ ಸಂಖ್ಯೆಯನ್ನು ನಾವು ನಿಷ್ಕರ್ಷೆ ಮಾಡಲಾರದವಾದ್ದರಿಂದ ಅವಶ್ಯವಾಗಿ ಕಾಣಲ್ಪಡುವ ಮತ್ತು ೫ ಲಕ್ಷಗಳಿಗಿಂತ

ಗಳನ್ನು ಸಂರಕ್ಷಣೆಮಾಡಿಕೊಂಡು ಬರುವಂತೆಯೂ ಅರಮನೇ ಆಡಳಿತ ಗಳನ್ನು ನೋಡಿಕೊಂಡು ಇರುವಂತೆಯೂ ನಿಬಂಧನೆಯನ್ನು ಮಾಡಿಸಿ

ಮಹೀಶೂರ ಮಹಾರಾಣಿಯವರ ಸವಾಲು.	ಇಂಗ್ಲಿಷ್ ಜನಗಳ ಜವಾಬು.
ಸೋಜರುಗಳನ್ನೂ ಮತ್ತು ಅಧಿಕಾರಿಗಳನ್ನೂ ಅವಶ್ಯಕವಾದ ಮದ್ದು ಗುಂಡುಗಳನ್ನೂ ತಂಜಾವೂರುಮಹಾರಾಜರಿಗೆಯಾ ವರೀತಿ ನಡಿಸಿಕೊಂಡು ಬರುತ್ತಾರೋ ಅದೇಮೇರೆಗೆ ಇಂಗ್ಲಿಷ್ ಜನಗಳು ಸರಪರಾಜು ಮಾಡುವದಕ್ಕೆ ಬದ್ಧರಾಗಬೇಕು.	ಹೆಚ್ಚಾದ ಮೊಬಲಗನ್ನು ಕೊಡುವ ಹಾಗೆ ಮಹೀಶೂರ ಸಂಸ್ಥಾನದವರು ವಾಗ್ದಾನ ಮಾಡಬೇಕು.
೮. ಮಹೀಶೂರ ರಾಜ್ಯದ ದವಲತ್ತಿಗೂ ಪೇಷ್ಕಷಿಗೂ ಚೌತಾಯಿಗೂ ಕುಂಪಣಿಯವರು ಯಾವ ಹಕ್ಕನ್ನೂ ಮಾಡಕೂಡದು. ರಾಣೀಸಾಹೇಬರೇನೇ ಅಮಲ್ದಾರ್ ಕಿಲ್ಲೇದಾರ್ ಮುಂತಾದವರನ್ನು ನೇಮಿಸುವರು. ಮತ್ತು ಕುಂಪಣಿ ಶಿಪಾಯಿ ಸೋಜರುಗಳು ಈ ಅಧಿಕಾರಗಳನ್ನು ಕಾಪಾಡಿಕೊಳ್ಳಬೇಕು. ಪಾಳ್ಯಗಾರರ ವಿಷಯಗಳಲ್ಲಿ ಕುಂಪಣಿಯವರು ಪ್ರವೇಶ ಕೂಡದು.	ಮೊಗಲಾಯಿಗೆ ಕೊಡಲ್ಪಡುವ ಪೇಷ್ಕಷೂ ಮತ್ತು ಮರಾಟೆಯವರಿಗೆ ಕೊಡಲ್ಪಡುವ ಚೌತಾಯಿಯೂ, ಕುಂಪಣೀ ಖಜಾನೆಯಲ್ಲಿ ಇಡಲ್ಪಡಬೇಕು. ಮೊಗಲಾಯವರಿಗೂ ಮರಾಟೆಯವರಿಗೂ ಈ ವಿಷಯವಾಗಿ ಕುಂಪಣಿಯವರೇ ಏರ್ಪಾಡು ಮಾಡಿಕೊಳ್ಳುತ್ತಾರೆ. ಮೊಗಲಾಯವರೂ ಮರಾಟೆಯವರೂ ಸ್ನೇಹಭಾವದಿಂದ ಪೇಷ್ಕಷ್ ಚೌತಾಯಿಗಳನ್ನು ಬಿಟ್ಟುಬಿಟ್ಟರೆ, ಈ ಹಣವನ್ನು ಕುಂಪಣಿಯವರು ಬೇರೆ ಫಂಡು ಮಾಡಿಕೊಂಡು,

ಇದನ್ನು ಕಲಹ ಶಮನಕ್ಕಾಗಿ ಇಡಬೇಕಾಗಿರುವ ಹೆಚ್ಚು ದಂಡಿನ ಬಲವಾದ ಖರ್ಚಿಗೂ, ಕೋಟೆಗಳನ್ನು ಕಟ್ಟುವದಕ್ಕೂ ಮತ್ತು ಇತರ ಕಾಮಗಾರಿಗಳಿಗೂ ಉಪಯೋಗಿಸಿ ಕೊಳ್ಳುತ್ತಾರೆ. ಆದಕಾರಣ ರಾಜ್ಯಸಂರಕ್ಷಣೆಗಾಗಿ ಈ ಹಣವನ್ನು ಇಟ್ಟುಕೊಳ್ಳುತ್ತೇವೆ. ಅಮಲ್ದಾರರು ಮುಂತಾದವರನ್ನು ನೇಮಿಸುವ ವಿಷಯದಲ್ಲಿ ಕುಂಪಣಿಯವರು ಪ್ರವೇಶಿಸುವದಿಲ್ಲ. ಮತ್ತು ಅವರನ್ನು ಸಂರಕ್ಷಣೆ ಮಾಡುತ್ತೇವೆ. ಒಪ್ಪಿಕೊಂಡಪ್ರಕಾರ ವರ್ಷಾವಧಿ ಪೇಷ್ಕಷನ್ನು ಕುಂಪಣಿಯವರಿಗೆ ಮಹೀಶೂರ ಸಂಸ್ಥಾನದವರು ಕ್ರಮವಾಗಿ ಕೊಡಬೇಕು. ಕುಂಪಣಿ ಶಿಪಾಯಿಗಳೂ ಸೋಜರುಗಳೂ ಯಾವ ಕೋಟೆಗಳಲ್ಲಿ ಇಡಲ್ಪಟ್ಟಾಗ್ಯೂ ರಾಣೀಸಾಹೇಬರು ೧೦ ತಿಂಗಳ ಸರಬರಾಜನ್ನು ಕೊಡಬೇಕು. ಇದಕ್ಕೆ ತಪ್ಪಿದರೆ ಈ ಸರಬರಾಜಿಗಾಗಿ ಕುಂಪಣಿಯವರೇ ಖುದ್ದು ಹಣವನ್ನು ಜಮಾಯಿಸಿಕೊಳ್ಳುವರು.

ಇವರ ಮೊತುಶ್ರೀಯವರಾದ ಲಕ್ಷ್ಮಮ್ಮಣ್ಣಿಯವರನ್ನು ಧೊರೆಗಳಿಗೆ ಏನಾದರೂ ಅಪಾಯವನ್ನು ಮಾಡ್ಯಾರೆಂಬ ಭಯದಿಂದ, ನಾಟಕಸಾಲೆ

ಮಹೀಶೂರ ಮಹಾರಾಣಿಯವರ ಸವಾಲು.	ಇಂಗ್ಲಿಷ್ ಜನಗಳ ಜವಾಬು.
೯. ಯುದ್ಧದಲ್ಲಿ ತೆಗೆದು ಕೊಳ್ಳಲ್ಪಡುವ ಕೋಟೆಗಳಲ್ಲಿ ಅಥವಾ ಇತರ ಸ್ಥಳಗಳಲ್ಲಿ ಹೈದರನಾಯಕನಿಂದಲಾಗಲೀ ಅಥವಾ ಅವನ ಕಡೆಯವರಿಂದಲಾಗಲೀ ಇಡಲ್ಪಟ್ಟ ಆಭರಣಗಳು ಆನೆಗಳು ಕುದುರೆಗಳು ಹಣಗಳು ಮತ್ತು ಮದ್ದುಗುಂಡುಗಳು ಯಾವದಾದರೂ ಸಿಕ್ಕಿದರೆ, ಅವುಗಳನ್ನು ರಾಣೀ ಸಾಹೇಬರವರಿಗೆ ಕೊಟ್ಟುಬಿಡಬೇಕು.	ಇಂಗ್ಲಾಂಡಿನಲ್ಲಿ ಈಚೆಗೆ ತೀರ್ಮಾನಮಾಡಿರುವ ಮೇರೆ ಯುದ್ಧದಲ್ಲಿ ತೆಗೆದುಕೊಳ್ಳಲ್ಪಡುವ ಕೋಟೆ ಮುಂತಾದವುಗಳಲ್ಲಿ ಸಿಕ್ಕುವ ವಿಶಿಷ್ಟವೂ ಶಿಪಾಯಿಸೋಜರುಗಳ ಸೊತ್ತಾಗಿಇದೆ ; ಅದಕ್ಕೆ ಬದಲಾಗಿ ಇನಾಂ ಮೌಲ್ಯವನ್ನು ಅವರಿಗೆ ಕೊಡುವಹಾಗೆ ವಾಗ್ದಾನಮಾಡಿದರೆ, ಅವರನ್ನು ಲೂಟಿಮಾಡದ ಹಾಗೆ ಅಡ್ಡಿಮಾಡಬಹುದು. ಹೀಗೆ ಅಪೇಕ್ಷೆಯಿದ್ದಲ್ಲಿ ಲೂಟಿಮಾಡದಹಾಗೆ ಮಿಲಟರಿಯವರಿಗೆ ಕುಂಪಣಿಯವರು ಸಲಹಾ ಕೊಡುತ್ತಾರೆ.
೧೦. ಹೈದರನಾಗಲೀ ಅಥವಾ ಅವನ ಮುಖ್ಯ ಹುದ್ದೇದಾರರಾಗಲೀ ಯುದ್ಧದಲ್ಲಿ ಜೀವಸಮೇತ ಹಿಡಿಯಲ್ಪಟ್ಟರೆ, ಅವರನ್ನು ರಾಣೀಸಾಹೇಬರಿಗೆ ಒಪ್ಪಿಸಿ ಕೊಡಬೇಕು.	ಕುಂಪಣಿಯವರು ಹೈದರನೊಡನೆ ಯುದ್ಧಮಾಡುವದರಿಂದ ಇದಕ್ಕೆ ಒಪ್ಪಿಕೊಳ್ಳಲಾರರು ; ಆದರೆ ಈ ವಿಷಯದಲ್ಲಿ ಮಹೀಶೂರು ಸಂಸ್ಥಾನದ ಹಕ್ಕನ್ನು ಆಲೋಚಿಸುವರು.
೧೧. ಶ್ರೀರಂಗಪಟ್ಟಣವು ರಂಗನಾಥಸ್ವಾಮಿಯವರಿಗೆ ವಾಸಸ್ಥಾನವಾದದ್ದರಿಂದ, ತೊಂದರೆಕಾಲಗಳಲ್ಲಿ ವಿನಹಾ ಇತರ ಕಾಲಗಳಲ್ಲಿ ಯಾವ ಸೈನ್ಯವನ್ನೂ ಕುಂಪಣಿಯವರು ಆ ಸ್ಥಳದಲ್ಲಿ ಇಡಕೂಡದು.	ಯಾವ ಕೋಟೆಯು ಸೈನ್ಯಾಕ್ರಮಣಯೋಗ್ಯವಾಗಿದೆ ? ಯಾವದು ನಾಶಕ್ಕೆ ಯೋಗ್ಯವಾಗಿದೆ ? ಯಾವದು ಸಂರಕ್ಷಣೆಮಾಡಲ್ಪಡಬೇಕು ? ಇವುಗಳನ್ನು ಕುಂಪಣಿಯವರು ಆಲೋಚಿಸಿ, ಇನ್ನುಮೇಲೆ ನಿಷ್ಕರ್ಷೆ ಮಾಡುವರು.
೧೨. ರೆವಿನ್ಯೂ, ಸೇನೆ, ಪೊಲೀಸ್, ಪಾಳ್ಯಗಾರರ ಗೊತ್ತು ಮಾಡುವಿಕೆ, ಇವುಗಳಲ್ಲಿ ಕುಂಪಣಿಯವರು ಪ್ರವೇಶಿಸಕೂಡದು.	ನಾವು ಇದಕ್ಕೆ ಒಪ್ಪಿಕೊಂಡೆವು.

ಬೊಕ್ಕಸದ ತೊಟ್ಟಿಯಲ್ಲಿ ಇರಿಸಿ, ತಾವು ಪೂರ್ವದಂತೆ ಧೊರೆಗಳ ಆಜ್ಞಾನುಸಾರವಾಗಿ ಸರ್ವಾಧಿಕಾರದಲ್ಲಿ ಸರ್ವತಂತ್ರ ಸ್ವತಂತ್ರರಾಗಿ ಇದ್ದರು.

ಮಹೀಶೂರ ಮಹಾರಾಣಿಯವರ ಸವಾಲು.	ಇಂಗ್ಲಿಷ್ ಜನಗಳ ಜವಾಬು.
೧೩. ಹೈದರ್ ನಾಯಕನನ್ನೂ ಅವನ ಸೈನ್ಯವನ್ನೂ ಜಯಿಸದೆ ಹೋದರೆ, ಅಥವಾ ಅವನಲ್ಲಿ ಸಂಧಿಮಾಡಿಕೊಂಡರೆ ಕುಂಪಣಿಯವರು ನಮಗೆ ಮತ್ತು ನಮ್ಮ ಮನೆತನಕ್ಕೆ ನಿರಂತರವಾಗಿ ಸರಪರಾಜುಮಾಡಿ, ನಮ್ಮನ್ನು ಕಾಪಾಡಿಕೊಳ್ಳಬೇಕು. ಇದಲ್ಲದೆ ನಮ್ಮಿಂದ ಅಡ್ವಾನ್ಸಾಗಿ ಕೊಡಲ್ಪಡುವ ಹಣಗಳು ವಾಪಸು ಮಾಡಲ್ಪಡಬೇಕು.	ನಾವು ಇದಕ್ಕೆ ಒಪ್ಪಿಕೊಂಡೆವು.
೧೪. ನಾನಾಗಲೀ, ನನ್ನ ಹಕ್ಕುದಾರರಾಗಲೀ, ನಮ್ಮ ರಾಜ್ಯ ಸ್ವಾಧೀನದಲ್ಲಿ ಇಡಲ್ಪಟ್ಟರೆ, ಸಂಸ್ಥಾನದ ಮುಖ್ಯಾಧಿಕಾರವು ನಮ್ಮದೇ ಎಂದು ಇಗ್ಲೆಂಡ್ ದೇಶದ ಧೊರೆಗಳಿಂದ ಕುಂಪಣಿಯವರು ನಮಗೆ ಒಂದು ಸನ್ನದು ತರಿಸಿಕೊಡಬೇಕು.	ಘನವಾದ ಕುಂಪಣಿಯವರು ಸರ್ವಾಧಿಕಾರವನ್ನು ಜನರಲ್ ಕೂಟ ಸಾಹೇಬರಿಗೆ ಕೊಟ್ಟಿರುವದರಿಂದ, ಅವರು ಏನು ಕರಾರು ಮಾಡಿದಾಗ್ಯೂ ನಾವು ಬದ್ಧರಾಗುವೆವು. ಮತ್ತು ನೀವು ಅಪೇಕ್ಷಿಸುವ ರೀತಿಗೆ ಬಂಗಾಳಾದಿಂದ ಒಂದು ಸನ್ನದನ್ನು ತರಿಸಿಕೊಡುವದಕ್ಕೆ ಅವರು

ತಕ್ಕ ಏರ್ಪಾಡು ಮಾಡುತ್ತಾರೆ. ಅಂಥಾ ಏರ್ಪಾಡುಗಳನ್ನು ಅಂಗೀಕಾರ ಮಾಡುವಹಾಗೆ ಇಂಗ್ಲಾಂಡಿನಿಂದ ಕುಂಪಣಿಯವರು ಅಧಿಕಾರವನ್ನು ಹೊಂದುತ್ತಾರೆ. ತಂಜಾವೂರ ರಾಜರಿಗೆ ತರಿಸಿಕೊಡಲ್ಪಟ್ಟ ಸನ್ನದಿನ ಹಾಗೆ ಒಂದು ಸನ್ನದು ಮಹೀಶೂರ ರಾಣಿಯವರಿಗೂ ತರಿಸಿಕೊಡಲ್ಪಡುತ್ತದೆ. ಜನರಲ್ ಕೂಟ ಸಾಹೇಬರಿಗೆ ಕೊಡಲ್ಪಟ್ಟ ಅಧಿಕಾರವು ಕೌನ್ಸಲ್ ಗವರ್ನರಿಗೆ ಈಚೆಗೆ ವರ್ಗಾಯಿಸಲ್ಪಟ್ಟದ್ದರಿಂದ, ಇವರೂ ಇದಕ್ಕೆ ಒಪ್ಪಿಕೊಳ್ಳುತ್ತಾರೆ.

೧೫. ಈಗ ಮಹೀಶೂರ ದೇಶವು ನಿರಂತರವಾದ ಯುದ್ಧದಿಂದ ದುರ್ಭಿಕ್ಷಸ್ಥಿತಿಯಲ್ಲಿ ಇರುವದರಿಂದ, ವರ್ಷಂಪ್ರತಿ ೫ ಲಕ್ಷ ವರಹಗಳಿಗೆ ಹೆಚ್ಚಾದ ಕಿಷ್ಕಕವನ್ನು ನಾವು ಕುಂಪಣಿಯವರಿಗೆ ಕೊಡಲಾರೆವು; ಆದರೆ ಈಗ ಹೈದರ ಸ್ವಾಧೀನದಲ್ಲಿ	ಕೆಲವು ದರ್ಬಾಸುಭೇದಾರರು ಕುಂಪಣೀ ಸ್ನೇಹಿತರಾಗಿ ಇರುವಹಾಗೆ ಕೆಲವು ರಾಜ್ಯಗಳನ್ನು ತಮ್ಮ ಸ್ವಂತದ್ದೆಂಬದಾಗಿ ಕೇಳುತ್ತಾರೆ. ಮರಾಟಿಯವರೂ ಹೀಗೆಯೇ ಹೇಳುತ್ತಾರೆ. ಆದಕಾರಣ ಅವರ ಸ್ವಂತದ್ದನ್ನು ಬಿಡಿಸಿ ಕೊಡು

ಚಿತ್ರದುರ್ಗವನ್ನು ಸಾಧಿಸಿದ ಕ್ರಮ.—ಪೂರ್ವದಲ್ಲಿ ಇಮ್ಮಡಿ ಕೃಷ್ಣರಾಜ ಒಡೆಯರವರ ಆಳಿಕೆಯಲ್ಲಿ ನವಾಬರು ಚಿತ್ರದುರ್ಗಕ್ಕೆ ಮುತ್ತಿಗೆಯನ್ನು ಹಾಕಿ ಅಲ್ಲಿನ ಪಾಳ್ಯಗಾರನಾದ ಮದಗಿರಿನಾಯಕನಿಂದ ೮ ಲಕ್ಷ ದುರ್ಗೀ ವರಹಗಳನ್ನು ಖಂಡನೆಯನ್ನು ಗೊತ್ತುಮಾಡಿಕೊಂಡು, ಇವನ ೧೩ ಗಡಿಗಳನ್ನು ಇವನ ಕೈವಶ ಮಾಡಿದಮೇಲೆ, ಈ ಮದಗಿರಿನಾಯಕನು ನವಾಬರು ಕೆಲವು ಸೀಮೆಗಳನ್ನು ಸಾಧಿಸುವ ಕಾಲದಲ್ಲಿ ಸಹಾಯಕನಾಗಿ ಇದ್ದು, ಅನಂತರ ನವಾಬರಮೇಲೆ ಅಸೂಯೆ ಹುಟ್ಟಿ, ತಾನು ಕೊಡತಕ್ಕ ೮ ಲಕ್ಷ ವರಹಗಳನ್ನು ಬಿಡಿಸಿ ಕೊಂಡು, ತಾನೇ ಸ್ವತಂತ್ರನಾಗಿ ಇರಣೀ

ಮಹೀಶೂರ ಮಹಾರಾಣಿಯರವರ ಸವಾಲು.

ಇರುವ ಸಮಸ್ತ ರಾಜ್ಯಗಳನ್ನೂ ನಮಗೆ ಬಿಡಿಸಿಕೊಟ್ಟರೆ, ಇವಕ್ಕಿಂತ ಹೆಚ್ಚಾಗಿ ಇಪತ್ತು ಮೂರು ಲಕ್ಷವರಹಗಳನ್ನು ಕೊಡುತ್ತೇವೆ. ಇದರ ಜೊತೆಗೆ ಕುಂಪಣಿಯವರು ಅಪೇಕ್ಷಿಸುವಭಾಗದಲ್ಲಿ ೫ ಲಕ್ಷ ವರಹಾ ಹುಟ್ಟುವಳಿ ಯಾಗುವ ಭೂಮಿಯನ್ನು ಕುಂಪಣಿಗೆ ಜಹಗೀರು ಕೊಡುತ್ತೇವೆ. ಅಪಕ್ಷದಲ್ಲಿ ಸಮಸ್ತ ರಾಜ್ಯಗಳನ್ನೂ ಕುಂಪಣಿಯವರು ಕಾಪಾಡಿಕೊಳ್ಳಬೇಕು.

ಇಂಗ್ಲಿಷ್ ಜನಗಳ ಜವಾಬು.

ವರಕ್ಕೆ ಅವರು ಬಾಧ್ಯರಾಗಿ ಇರುತಾರೆ. ಕುಂಪಣಿಯವರು ಅವರ ಸಂಗಡ ತಮ್ಮ ಸ್ವಂತ ನಿರ್ಮಾಣವನ್ನು ಮಾಡುವದಕ್ಕೆ ಸ್ವತಂತ್ರರಾಗಿ ಇರುತಾರೆ. ಬಾಕೀರಾಜ್ಯವು ರಾಣಿಯವರ ಆಳುವಿಕೆಗೆ ನಿಸ್ಸಂದೇಹವಾಗಿ ಬಿಡಲ್ಪಡುವದು. ಮಹೀಶೂರ ಸಂಸ್ಥಾನದ ಪೆಷ್ಕಷ್ ಚೌತಾಯಿಗಳು ಯಾವ ರೀತಿಯಲ್ಲಿ ನಡೆಯಲ್ಪಡುವವೋ, ಹಾಗೆಯೇ ಮರಾಟೀರಾಜ್ಯದವರಿಗೂ ಮೊಗಲಾಯರವರಿಗೂ ಆ ದೇಶಗಳ ಮೇಲೆ ಬರಬೇಕಾಗುವ ಪೆಷ್ಕಷ್ ಚೌತಾಯಿಗಳು ಕುಂಪಣಿ ಯವರಿಗೆ ಕೊಡಲ್ಪಡುತ್ತವೆ. ಕುಂಪಣೀದಂಡುಗಳು ಇಡಲ್ಪಡುವ ಕೋಟೆ ಮುಂತಾದ ಜಾಗಗಳಲ್ಲಿ ೧೦ ತಿಂಗಳ ಸರಬರಾಜು ಸಾಮಾನುಗಳು ಸಿದ್ಧವಾಗಿ ಇಡಲ್ಪಡಬೇಕು. ಈ ಖಲಂಗಳಿಗೆ ರಾಣೀಸಾಹೇಬರು ಒಪ್ಪಿಕೊಂಡರೆ, ಹೈದರನ ರಾಜ್ಯಗಳನ್ನು ರಾಣೀಸಾಹೇಬರಿಗೆ ಅಥವಾ ಅವರ ಹಕ್ಕುದಾರರಿಗೆ ಕೊಡುತ್ತೇವೆಂದು ಕುಂಪಣಿಯವರು ವಾಗ್ದಾನ ಮಾಡುತ್ತಾರೆ.

ಕೆಂದು, ಮರಾಟೆಯವರಲ್ಲಿಯೂ ಮೊಗಲರಲ್ಲಿಯೂ ಸ್ನೇಹವನ್ನು ಬೆಳೆಯಿಸಿ ಕೆಲವು ಸೈನ್ಯಗಳನ್ನು ಕಳುಹಿಸಿ ಕೊಡಬೇಕೆಂಬದಾಗಿ ಪಿತೂರೀ ಕಾಗದವನ್ನು ಬರೆದನು. ಈ ವರ್ತಮಾನವು ಶ್ರೀರಂಗಪಟ್ಟಣದಲ್ಲಿ ಇದ್ದ

ಮಹೀಶೂರ ಮಹಾರಾಣಿಯವರ ಸವಾಲು.	ಇಂಗ್ಲಿಷ್ ಜನಗಳ ಜವಾಬು.
೧೬. ನೈಜಾಂ ಮತ್ತು ಮರಾಟೆಯವರಿಗೆ ನ್ಯಾಯವಾಗಿ ಬರತಕ್ಕ ರಾಜ್ಯಗಳನ್ನು ವಾಪಸುಕೊಡುವದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಹೈದರು ಸೋತು ಹೋದ ಅನಂತರ ಯುದ್ಧಕ್ಕಾಗಿ ಅಡ್ವಾನ್ಸು ಕೊಡುವ ಹಣವನ್ನು ದೌಮಾಷಾಯ ಪ್ರಕಾರ ನನಗೆ ವಾಪಸುಕೊಡಿಸಿಕೊಟ್ಟು, ನ್ಯಾಯವಾಗಿ ಅವರಿಗೆ ಸೇರದಂಥಾ ರಾಜ್ಯಗಳನ್ನು ಅವರಿಗೆ ಕೊಡಕೂಡದೆಂದು ನಾನು ಕೇಳಿಕೊಳ್ಳುತ್ತೇನೆ. ಪೇಷಕಷ್ ಚೌತಾಯಿ ವಿಷಯದಲ್ಲಿ ಕುಂಪಣಿಯವರ ತಿಳುವಳಿಕೇ ಪ್ರಕಾರ ರಾಣೀಸಾಹೇಬರು ಆರೀತಿಯಲ್ಲಿ ಮಾತ್ರವೇ ಮಾಡುವರು.	ನೈಜಾಂ ಮತ್ತು ಮರಾಟೆಯವರ ದೇಶಗಳನ್ನು ಅವರಿಗೆ ಗೊತ್ತು ಮಾಡಿ ಕೊಡುವ ಕಾಲದಲ್ಲಿ ಆದೇಶಗಳ ಉತ್ಪತ್ತಿಗೆ ಅನುಗುಣವಾದ ಮೊಬಲಗನ್ನು ಕುಂಪಣಿಯವರು ರಾಣೀಸಾಹೇಬರಿಗೆ ವಾಪಸು ಕೊಡಿಸುವರು.
೧೭. ಮುರಾರಿರಾಯನು ೩೦ ಲಕ್ಷರೂಪಾಯಿಗಳನ್ನು ರಾಣೀಸಾಹೇಬರಿಗೆ ಪೂರ್ವದಲ್ಲಿಯೇ ಕೊಡಬೇಕಾಗಿ ಇರುವದರಿಂದಲೂ, ಇದಲ್ಲದೆ ಮೋಸಮಾಡಿ ಇರುವದರಿಂದಲೂ, ಗುತ್ತೀ ಸಂಸ್ಥಾನವನ್ನು ಮುರಾರಿರಾಯನ ವಾರಸದಾರರಿಗೆ ಕೊಡಕೂಡದೆಂದು ರಾಣೀಸಾಹೇಬರು ಹೇಳಿಕೊಳ್ಳುತ್ತಾರೆ. (ತಿರುಮಲರಾವ್ ಮೈಸೂರು ಪ್ರಧಾನಿ ಎಂದು ಸೈ ಮೊಹರಿದೆ.) (ನಾರಾಯಣರಾವ್ ಮೈಸೂರು ಪ್ರಧಾನಿ ಎಂದು ಸೈ ಮೊಹರಿದೆ.)	ಗುತ್ತೀ ಸಂಸ್ಥಾನವನ್ನು ಮುರಾರಿರಾಯನ ವಾರಸದಾರರಿಗೆ ವಾಪಸು ಕೊಡುವದಕ್ಕೂ ಅಥವಾ ಕೊಡದೆ ಇರುವದಕ್ಕೂ, ಕುಂಪಣಿಯವರು ಸಂಪೂರ್ಣ ಸ್ವತಂತ್ರರಾಗಿ ಇದಾರೆ. (ದಕ್ಷಿಣದಿಕ್ಕು ರೆಸಿಡೆಂಟ್ ಜಾನ್ ಹಲಿರ್ವ ಎಂದು ಸೈನಿದೆ.)

ಈ ರೀತಿಯಾಗಿ ಮಹಾ ಮಾತುಶ್ರೀ ಲಕ್ಷ್ಮಮ್ಮಣ್ಣಿಯವರ ಸವಾಲಿಗೆ ಇಂಗ್ಲಿಷ್‌ನವರು ಜವಾಬು ಕೊಡಲು, ಈ ಸವಾಲು ಜವಾಬು ಪಟ್ಟಿಯನ್ನು ಮಹಾ ಮಾತುಶ್ರೀ

ನವಾಬರಿಗೆ ತಿಳಿದದ್ದರಿಂದ, ಶಾ॥ ಶಕ ೧೬೯೯ನೇ ದುರ್ಮುಖಿ ಸಂವತ್ಸರದ ಫಾಲ್ಗುನ ಮಾಸದಲ್ಲಿ, ನವಾಬರು ಚಿತ್ರದುರ್ಗಕ್ಕೆ ಮುತ್ತಿಗೆಯನ್ನು ಹಾಕಿ ಸಾಧಿಸುವದಕ್ಕೋಸ್ಕರ ತಮ್ಮ ಮಗನಾದ ಟೀಪೂಸುಲ್ತಾನನ ಸಂಗಡ ಕೆಲವು ಸೈನ್ಯಗಳನ್ನು ಕಳುಹಿಸಿಕೊಟ್ಟರು. ಟೀಪೂಸುಲ್ತಾನನು ಚಿತ್ರದುರ್ಗಕ್ಕೆ ಮುತ್ತಿಗೆಯನ್ನು ಹಾಕಿ ಒಂದು ವರ್ಷದವರಿಗೂ ಯುದ್ಧಮಾಡಿದರೂ ಸ್ವಾಧೀನಮಾಡಿಕೊಳ್ಳದೆ ಇದ್ದದರಿಂದ, ನವಾಬರು ತಮ್ಮ ಮಗನಾದ ಆ ಟೀಪೂಸುಲ್ತಾನನ ಮೇಲೆ ಬಹಳ ಕೋಪಮಾಡಿ, ಅವನಿಗೆ ಜಹಗೀರಾಗಿ ಕೊಟ್ಟಿದ್ದ ಮಳವಳ್ಳಿಯನ್ನು ಜಪ್ತಿಮಾಡಿ, ಪಹರೆಯೊಡನೆ ಶ್ರೀರಂಗಪಟ್ಟಣಕ್ಕೆ ಕಳುಹಿಸಿ ಕೊಟ್ಟರು. ಆ ಸಮಯದಲ್ಲಿ ಅನ್ನದಾನಸೆಟ್ಟಿ, ಶಂಕರಸೆಟ್ಟಿ, ನರಸ್ಸೆಟ್ಟಿ ಎಂಬ ಮೂವರು ಸಾಹುಕಾರರು ಸುಲ್ತಾನನ ಡೇರೆಗೆ ಹೋದರು. ಈ ವರ್ತಮಾನವನ್ನು ನವಾಬರು ಕೇಳಿದ್ದರಿಂದ ಜನ ೧ಕ್ಕೆ ೨೪ ಸಾವಿರ ವರಹಗಳ ಮೇರೆಗೆ ಗುನ್ಹೇಗಾರಿ ತೆಗೆದುಕೊಂಡು ಶ್ರೀರಂಗಪಟ್ಟಣಕ್ಕೆ ಕಳುಹಿಸಿ ಕೊಟ್ಟರು. ಸುಲ್ತಾನನನ್ನು ಪಟ್ಟಣಕ್ಕೆ ಕಳುಹಿಸಿಕೊಟ್ಟಮೇಲೆ, ನವಾಬರು ಶಿರಹಟ್ಟೀಬಳಿ ಇರುವ ವೇಳೆಯಲ್ಲಿ, ಮದಗಿರಿನಾಯಕನು ಚನ್ನಗಿರಿ, ಬಸವಾಪಟ್ಟಣ, ಸಂತೇಬಿದನೂರು ಮೊದಲಾದ ಸೀಮೆಗಳನ್ನು ಲೂಟಿ

ಯವರಿಗೆ ಕಳುಹಿಸುವದಕ್ಕಾಗಿ ಇಟ್ಟುಕೊಂಡು, ಈ ಪ್ರಧಾನಿಗಳೂ ಜಾರ್ಜ ಸಲಿವರ್ನ ಸಾಹೇಬರೂ ಸಹ ಮಹಾಮಾತುಶ್ರೀಯವರ ಇರಾದೆಗೆ ಅನುಸಾರವಾಗಿ ೧೭೮೧ನೇ ಇಸವಿ ಅಕ್ಟೋಬರ್ ೨೮ರಲ್ಲಿ ಒಂದು ಕರಾರನ್ನು ಬರೆದು, ಮೆ॥ ರೆವರೆಂಡ್ ಷ್ವಾರ್ಟ್ಸ್ ಸಾಹೇಬರವರ ಸಾಕ್ಷಿ ಹಾಕಿಸಿ, ಮದರಾಸು ಗವರ್ನಮೆಂಟ್‌ನವರ ಮಂಜೂರಾತಿಬಗ್ಗೆ ಆ ಕರಾರನ್ನು ಕಳುಹಿಸಿದರು. (ಈ ಕರಾರು ಅಚ್ಚಿಸನ್ಸ್ ಕಲೆಕ್ಷನ್ ಅಫ್ ಟ್ರೀಟೀಸ್ ಎಂಬ ಪುಸ್ತಕದಲ್ಲಿ ಬರೆದಿದೆ.)

ಈ ಕರಾರು ನಡೆದ ಅನಂತರದಲ್ಲಿ ಜಾರ್ಜ ಸಲಿವರ್ನ ಸಾಹೇಬರವರು ಮಹೀಶೂರ ಮಹಾರಾಣಿಯವರ ಕಡೆಯವರಾದ ತಿರುಮಲರಾಯರು ಮತ್ತು ನಾರಾಯಣರಾಯರಿಂದ ಒಂದು ಕರಾರನ್ನು ಬರೆಯಿಸಿಕೊಂಡರು. ಏನಂದರೆ :—

ಶಿಗ್ಗೆಗೆ ನಕಲು.—(ಇದರ ಅಸಲು ಮೆ॥ ಜಾರ್ಜ ಸಲಿವರ್ನರವರ ಬಳಿ ಇದೆ.)

ಮೇಸ್ತರ್ ಜಾರ್ಜ ಸಲಿವರ್ನರವರಿಗೆ, ಮಹೀಶೂರ ತಿರುಮಲರಾಯರೂ, ನಾರಾಯಣರಾಯರೂ ಬರೆದುಕೊಟ್ಟ ಕರಾರು ಏನಂದರೆ :—ನೀವು ಮಹಾರಾಜಶ್ರೀ ತಾಳಾ

ಮಾಡಿದನು. ಈ ವರ್ತಮಾನವನ್ನು ನವಾಬರುಕೇಳಿ, ತಾವೇ ಕೆಲವು ಸೈನ್ಯವನ್ನು ತೆಗೆದುಕೊಂಡು ಹೋಗಿ, ದುರ್ಗಕ್ಕೆ ಪುನಃ ಮುತ್ತಿಗೆಯನ್ನು ಹಾಕಿ, ಅವನ ಸ್ವಜನರಿಂದ ಅಲ್ಲಿನ ಮರ್ಮಗಳನ್ನೆಲ್ಲಾ ತಿಳಿದುಕೊಂಡು, ಬಹಳ ಯುದ್ಧಮಾಡಿ, ಈ ದುರ್ಗಕ್ಕೆ ಸೇರಿದ ೧೩ ಗಡಿಗಳನ್ನೂ ಅವನಲ್ಲಿದ್ದ ಆನೆ ಕುದುರೆ ವಸ್ತ್ರಾಭರಣ ದ್ರವ್ಯಮುಂತಾದ ಪದಾರ್ಥಗಳನ್ನೂ ಸಹ ಶಾ॥ ಶಕ ೧೭೦೧ನೇ ವಿಳಂಬಿ ಸಂವತ್ಸರದ ಫಾಲ್ಗುನ ಮಾಸದಲ್ಲಿ ಸ್ವಾಧೀನಮಾಡಿಕೊಂಡು, ಈ ಮದಿಗಿರಿನಾಯಕನನ್ನೂ ಇವನ ತಮ್ಮನಾದ ಪರಶುರಾಮ ನಾಯಕನನ್ನೂ, ಇವನ ಹೆಂಗಸುಮಕ್ಕಳನ್ನೂ ಸಹ ಬಿಕ್ಕಟ್ಟಿನ ಪಹರೆಯಿಂದ ಶ್ರೀರಂಗಪಟ್ಟಣಕ್ಕೆ ಕಳುಹಿಸಿಕೊಟ್ಟರು.

ಪೂರ್ಣಯ್ಯನವರಿಗೂ ಕೃಷ್ಣರಾಯನಿಗೂ ದಫ್ತರ ಕೆಲಸ.—ಪೂರ್ವದಲ್ಲಿ ಸರ್ವಜಿತು ಸರ್ವಧಾರಿ ಸಂವತ್ಸರಗಳನ್ನು ಮೊದಲು ಮಾಡಿಕೊಂಡು ವೆಂಕಟರಮಣಯ್ಯನೆಂಬಾತನು ಕನ್ನಡದ ದಫ್ತರ ಕೆಲಸವನ್ನು ನೋಡಿಕೊಂಡಿದ್ದು ಕಾಲವಾದನು. ಈತನು ಕಾಲವಾದಮೇಲೆ, ಈತನ ಗುಮಾಸ್ತಗಿರಿಯಲ್ಲಿಯೇ ಇದ್ದ ಪೂರ್ಣಯ್ಯನವರು ಬಹು ಬುದ್ಧಿವಂತರಾಗಿ ಇದ್ದದರಿಂದ, ತೋಷೀಖಾನೆಯ ಭಕ್ಷಿ ಅಸದಲ್ಲೀಖಾನನು ನವಾಬರಿಗೆ ಹೇಳಿ, ಆ ಕನ್ನಡದ ದಫ್ತರ ಕೆಲಸವನ್ನು ಈ ಪೂರ್ಣಯ್ಯನವರಿಗೆ ನೇಮಕಮಾಡಿಸಿದನು. ಈ ಪೂರ್ಣಯ್ಯನವರು ಮುಲಕಿ ಫೌಜು ಈ ಎರಡು ಕಾರಖಾನೆಗಳ ಕೆಲಸಗಳನ್ನೆಲ್ಲಾ

ಮಹಾರಾಜರವರೂ ನಮ್ಮಲ್ಲಿ ದಯಮಾಡಿ ಮಹಾರಾಜಶ್ರೀ ಲಾಟಿಸಾಹೇಬರಿಗೆ ಬರಸಿ ಕಳುಹಿಸಿ, ನಮ್ಮ ಶತ್ರುವಾದ ಹೈದರ್‌ನಾಯಕನನ್ನು ನಿಗ್ರಹಿಸಿ, ನಮಗೆ ಪ್ರಾಕಮೇರಗೆ ರಾಜ್ಯ ತೆಗೆದು ಕೊಡುವಂತೆ ನಿಷ್ಕರ್ಷೆ ಮಾಡಿ, ಈ ಕುಂಪಣೀ ಫೌಜಿನ ಸಂಗಡ ಹೋಗಿ, ಸೀಮೆಯನ್ನು ಸ್ವಾಧೀನ ಮಾಡಿಕೊಟ್ಟು, ಫೌಜಿಗೆ ಬೇಕಾದ ಕುಮಕು ಮಾಡಹೇಳಿ ನಮಗೆ ಅಪ್ಪಣೆ ಕೊಟ್ಟದ್ದು ಸರಿಯಷ್ಟೆ. ಈಗ ನಾವು ಸ್ಥಳಬಿಟ್ಟು ೬ ವರ್ಷ ಆಯಿತು. ಇದುವರೆಗೆ ನಮ್ಮ ಕೈಯಿಂದ ನಮ್ಮ ವೆಚ್ಚಮಾತ್ರವೇ ಮೂವತ್ತೈದು ಸಾವಿರ ವರಹಾ ಮುಟ್ಟಿದೆ. ಈಗ ದಂಡಿನ ಸಂಗಡ ಹೋದರೆ ನಾವು ಒಂದು ಫೌಜು ಇರಿಸಬೇಕು. ಇದಕ್ಕೆಲ್ಲಾ ಬಹಳ ದ್ರವ್ಯ ವ್ಯಯವಾಗಬೇಕು. ನಮ್ಮ ಧಣಿಗಳು ಕಾವಲಲ್ಲಿ ಇದಾರೆ. ಅವರಿಂದ ಒಂದು ಸಹಾಯವೂ ನಮಗೆ ನಡೆಯತಕ್ಕದ್ದು ಇಲ್ಲ. ಮಹೀಶೂರ ರಾಣೀಸಾಹೇಬರವರು ನಮಗೆ ಮೂರು ಕವಲು ಕೊಟ್ಟು ಇರುವ

ಮೊಕ್ತೇಸರರಾಗಿ ನೋಡಿ ಕೊಳ್ಳುತ್ತಿದ್ದರು. ಜಗಜ್ಜೀವಣ್ಣರಾಯರ ಮಗ ಗಿರಿಧರರಾಯನ ತಮ್ಮನಾದ ತೋಷೀಖಾನೇ ಹಿಂದವೀ ದಫ್ತರದ ಕೆಲಸ ವನ್ನು ನೋಡಿಕೊಳ್ಳುತ್ತಾ ಇದ್ದ ಕೃಷ್ಣರಾಯನು ನವಾಬರ ಬಳಿಯಲ್ಲಿ ಬಹಳ ಬುದ್ಧಿವಂತನಾಗಿ ಇದ್ದದರಿಂದ ಆ ಹಿಂದವೀ ದಫ್ತರ್ದ ಕೆಲಸವು ಅವನಿಗೇ ನೇಮಕವಾಯಿತು. ಇವರಿಬ್ಬರೂ ಚಿತ್ರದುರ್ಗದ ಬಳಿಯಲ್ಲಿ ಇದ್ದಾಗ ೧೦೦ ವರಹಗಳ ಸಂಬಳವನ್ನು ತೆಗೆದುಕೊಳ್ಳುತ್ತಾ, ದುಶ್ಶಾಲು ಸಹಾ ಇನಾಮಾಗಿ, ಸಕಲ ಕಾರ್ಯಗಳಿಗೂ ಇವರೇ ಓಡಾಡುತ್ತಿದ್ದರು.

ನವಾಬರು ಕಡಪೆಯನ್ನು ಸಾಧಿಸಿದ್ದು.—ಶಾ॥ ೧೭೦೧ನೇ ವಿಕಾರಿ ಸಂವತ್ಸರದಲ್ಲಿ ನವಾಬರು ಕಡಪೆಯನ್ನು ಸಾಧಿಸಬೇಕೆಂದು ಸೈನ್ಯಸಮೇತ ರಾಗಿ ಹೊರಟು ಕಡಪೆಗೆ ಹೋಗಿ ಅದಕ್ಕೆ ಮುತ್ತಿಗೆ ಹಾಕಿದರು. ಅಲ್ಲಿನ ನವಾಬನಾದ ಅಬ್ದುಲ್‌ಹಕೀಂ ಖಾನನು, ೬೦ ಜನ ಪಠಾಣರನ್ನು, ನವಾಬರ ತಲೆಯನ್ನು ತೆಗದುಕೊಂಡು ಬನ್ನಿ ಎಂಬದಾಗಿ, ರಾತ್ರಿವೇಳೆಯಲ್ಲಿ ಕಳು ಹಿಸಿಕೊಟ್ಟನು. ಆ ಜನರು ಕತ್ತಿಗಳನ್ನು ಬಿಚ್ಚಿಕೊಂಡು, ನವಾಬರು ಮಲಗಿದ್ದ ಡೇರಾಕ್ಕೆ ಸುತ್ತಲೂ ಇದ್ದ ಕನಾತನ್ನು ಕುಯಿದು, ಅಲ್ಲಿದ್ದ ಪಹರೆಯವರನ್ನು ಹೊಡೆದು, ನವಾಬರ ಡೇರೆಯೊಳಗೆ ಬರುವದರೊಳಗಾಗಿ ನವಾಬರು ಮಲಗಿದ್ದ ಡೇರೆಯ ಸಮೀಪದಲ್ಲಿದ್ದ ಪಹರೇಯವನು ಕಂಡು ನವಾಬರನ್ನು ಎಬ್ಬಿಸಿ, ಈ ಸಮಾಚಾರವನ್ನು ಹೇಳಿದನು. ನವಾಬರು

ದರಿಂದ, ಆ ಆಸೆಯಿಂದಲಷ್ಟೆ ಈ ಕೆಲಸ ಮಾಡಬೇಕು. ಕಾರಾಗೃಹದಲ್ಲಿ ಇರುವ ಧೊರೆ ಗಳ ನಂಬಿ ಈ ಕೆಲಸ ಮಾಡುವಬಗೆ ಹ್ಯಾಗೆ? ಇದಕ್ಕೆ ನೀವು ಎಲ್ಲರೂ ಯೋಚನೆ ಮಾಡಿ, ಲಾಟ್ ಸಾಹೇಬರವರಿಗೆ ಬರಿಸಿ ಕಳುಹಿಸಿ, ಲಾಟ್ ಸಾಹೇಬರವರ ಕಡೆಯಿಂದ ನಮಗೆ ನಿರ್ಣಯವಾದ ಖರಾರು ತರಿಸಿಕೊಡಬೇಕು. ಆ ಕವಲಿನಲ್ಲಿ "ಕಾಂಪಣಿಯವರಿಗೆ ಖರಾರು ಮಾಡಿರುವ ಹಣವೇ ಹೊರತು ರಾಜ್ಯಕ್ಕೆ ಅಧಿಪತ್ಯಗಳಿಗೆ ಒಂದಕ್ಕೂ ಕಾರಣ ವಿಲ್ಲ. ರಾಣೀ ಸಾಹೇಬರವರು ಯಾರಿಗೆ ಏನು ಜಹಗೀರುಗಳು, ರುಸುಮುಗಳು, ಅಧಿ ಕಾರಗಳು, ಏನು ಕೊಟ್ಟಾಗ್ಯೂ ಅದು ನಮಗೆ ಸಮ್ಮತಿ. ಕುಂಪಣಿಯವರು ಅದಕ್ಕೆ ಅಡ್ಡಿ ಬರತಕ್ಕದ್ದು ಇಲ್ಲ" ಎಂಬದಾಗಿ ಕವಲು ಖರಾರು ಬರಿಸಿ ತರಿಸಿಕೊಡಬೇಕು. ನಾವು ಕಾರಾಗೃಹದಲ್ಲಿ ಇರುವ ಅರಸುಗಳನ್ನು ನಂಬಿ, ಇನ್ನುಮೇಲೆ ದ್ರವ್ಯ ವೆಚ್ಚ ಮಾಡುವ ದಕ್ಕೆ ಭಯವಾಗುತ್ತದೆ. ನಾವು ಅರಸುಗಳನ್ನು ನಂಬಿ ವೆಚ್ಚ ಮಾಡತಕ್ಕದ್ದು ಇಲ್ಲ.

ತಾವು ಮಲಗಿದ್ದ ಮಂಚದ ಸುಪತ್ತಿಗೆಯಮೇಲೆ ತಲೆದಿಂಬಿಗೆ ಶಾಲು ಸಕಲಾತಿಯನ್ನು ತಾವು ಮಲಗಿ ಇದ್ದಂತೆಯೇ ಹೊದ್ದಿಸಿ, ಆ ರಾವಟಿಗೆಯನ್ನು ಕುಯಿದು, ಮತ್ತೊಂದು ಗುಡಾರಕ್ಕೆ ಹೋಗಿ, ಅಲ್ಲಿದ್ದ ಪಹರೇ ಜನಗಳನ್ನು ಎಬ್ಬಿಸಿ, ಒಳಕ್ಕೆ ಕಳುಹಿಸಿ ಕೊಟ್ಟರು. ಇಷ್ಟರೊಳಗಾಗಿ ಆ ೬೦ ಜನ ಪಠಾಣರು ನವಾಬರ ಮಂಚದ ಬಳಿಗೆ ಬಂದು, ಆ ಹಾಸಿಗೇ ಹೊದ್ದಿಕೇ ತಲೆದಿಂಬನ್ನೇ ನವಾಬರೆಂದು ತಿಳಿದು, ಚೂರುಚೂರಾಗಿ ಕಡಿಯುತ್ತಿದ್ದರು. ಅಷ್ಟುಹೊತ್ತಿಗೆ ನವಾಬರಕಡೆ ಬಾರಿನವರು ಛಾಲ್ಯದವರು ರಾಜೇವಾರರು ಸಹಾ ಒಳಕ್ಕೆ ಬಂದು, ಆ ೬೦ ಮಂದಿಯನ್ನೂ ಹಿಡಿದು ಮುಷ್ಕೀಕಟ್ಟಿ ಪಹರೆಯಲ್ಲಿ ಇರಿಸಿದರು. ಮಾರನೇ ದಿನ ಪ್ರಾತಃಕಾಲದಲ್ಲಿ ನವಾಬರು ಈ ಜನಗಳನ್ನೆಲ್ಲಾ ಕೈಕಾಲು ಕುಯಿಸಿ, ಮರಳಿನಲ್ಲಿ ಹೂಳಿಸಿ, ಅನಂತರದಲ್ಲಿ ಕಡಪೆಗೆ ಠಾಣೆ ಹಾಕಿ, ಆ ಸೀಮೆಗೆ ಸೇರಿದ ೨೧ ಗಡಿಗಳನ್ನು ಸ್ವಾಧೀನಮಾಡಿಕೊಂಡು, ಅವನ ಸರ್ವಸ್ವವನ್ನೂ ತೆಗೆದುಕೊಂಡು, ಕಡಪೇನವಾಬನನ್ನು ಹೆಂಗಸರುಮಕ್ಕಳು ಸಹಿತವಾಗಿ ಪಹರೇಹಾಕಿ ಶ್ರೀರಂಗಪಟ್ಟಣಕ್ಕೆ ಕಳುಹಿಸಿ ಕೊಟ್ಟರು.

ಲಾಟ ಸಾಹೇಬರವರು ನಮ್ಮ ಹೆಸರಿನಲ್ಲಿ ಕವಲು ಬರೆದುಕೊಟ್ಟರೆ, ಏನು ವೆಚ್ಚವಾದಾಗ್ಯೂ ನಮ್ಮ ಕೈಯಿಂದ ಮಾಡಿ, ಕುಂಪಣಿಯವರನ್ನು ಒಂದು ಕಾಸೂ ಕೇಳದೆ, ನಮ್ಮ ಕೈಯಲ್ಲಿ ಆದಮಟ್ಟಿಗೂ ಕುಂಪಣೀ ಕಾರ್ಯದಲ್ಲಿ ಸೇವೆ ಮಾಡಿ, ಟಿಪ್ಪುವಿಗೆ ಪ್ರಕಾಶವಾಗಿ ಎದುರಿಸಿ ನಿಲ್ಲುತ್ತಾ ಇದೇವೆ. ಇದಕ್ಕೆ ನೀವು ಉಭಯತ್ರರೂ ಕುಮುಕು ಮಾಡಿ, ನಮ್ಮ ಕೈಯಿಂದ ವೆಚ್ಚವಾದ ಹಣ ಪುನಃ ನಮಗೆ ಬರುವಂತೆಯೂ, ರಾಣೀ ಸಾಹೇಬರು ಕೊಟ್ಟ ಕವಲಿನ ಮೇರೆಗೆ ನಮಗೆ ಅವರಿಗೆ ಬರುವದರಲ್ಲಿ ದಹಾ ಬರುವಂತೆಯೂ, ನಮ್ಮ ಸರ್ವಾಧಿಕಾರ ನಮಗೆ ಶಾಶ್ವತವಾಗಿ ನಡೆಯುವಂತೆಯೂ ಬಂದೋಬಸ್ತು ಮಾಡಿ, ದೈವಕ್ಕೆ ಪ್ರತಿಯಾಗಿ ದಯೆಮಾಡಿಸಬೇಕು. ನಾವು ದೈವ ಮಧ್ಯಸ್ಥವಾಗಿ ನಿಮ್ಮನ್ನು ನಂಬಿ ಇದೇವೆ. ನೀವು ಉಭಯತ್ರರೂ ಹಿಡಿದ ಕಾರ್ಯ ಬಿಡಬಾರದು. ನಿಮ್ಮನ್ನು ನಂಬಿದವರು ನಾವು ಕಡೆತೇರಬೇಕು. ಈಪ್ರಕಾರಕ್ಕೆ ಯೋಚಿಸಿ ಕಾಪಾಡಬೇಕು.

(ತಿರುಮಲರಾಯರ ಒಪ್ಪಿತ ಎಂದು ಇದೆ.)

(ನಾರಾಯಣರಾಯರ ಒಪ್ಪಿತ ಎಂದು ಇದೆ.)

ಕೆಲವು ಅಧಿಕಾರಿಗಳನ್ನು ನೇಮಕ ಮಾಡಿದ್ದು ಮುಂತಾದದ್ದು.— ಕಡಪೇ ಸೀಮೆಯನ್ನು ಸಂಪಾದಿಸಿದ ಮೇಲೆ ದಂಡಿನ ಕೊತ್ವಾಲಗಿರಿಯಲ್ಲಿದ್ದ ವಿಾರಮಹಮ್ಮದ್ ಸಾದಕರಿಗೆ ಅಬೂಮಹಮ್ಮದ್ ಮಿರ್ಜೇ ಶಿಫಾರಸಿನಿಂದ ಮಹಲಾತ್ ಕಚೇರಿಯ ದಿವಾನಗಿರಿಯು ನೇಮಕವಾಯಿತು.

ಹರಿಕಾರ ರಾಮಯ್ಯನಿಗೆ ನಾಯಕ ನರಸಪ್ಪನಾಯಕ ಶೀರಿಹೋದ ಮೇಲೆ ೩೦೦ ಜನ ಹರಿಕಾರರಿಗೂ ಒಟ್ಟು ನಾಯಕತನವು ನೇಮಕ ವಾಯಿತು.

ನವಾಬರು ಅಂಚೇ ತಿಮ್ಮಪ್ಪಯ್ಯನ ಕಡೆಯಿಂದ ೩ ಲಕ್ಷ ವರಹಗಳನ್ನು ದಂಡ ತೆಗೆದುಕೊಂಡು ಅವನ ಬದಲಿ ಶಾಮಯ್ಯನು ಬಹಳ ಬುದ್ಧಿವಂತನಾಗಿ ಇದ್ದದರಿಂದ, ಈ ಒಟ್ಟು ಅಂಚೇ ಅಧಿಕಾರವನ್ನು ಶಾಮಯ್ಯನಿಗೆ ನೇಮಕ ಮಾಡಿದರು. ಈತನು ನವಾಬರಿಗೆ ಆಪ್ತನಾಗಿ ಇದ್ದನು.

ಕರಾಚೂರಿ ನಂಜರಾಜಯ್ಯನು ಮೃತನಾದ ಅನಂತರದಲ್ಲಿ, ನವಾಬರು ಅವನ ಮಗ ವೀರರಾಜಯ್ಯನನ್ನು ಕರೆಯಿಸಿ, ಬಹಳ ಸನ್ಮಾನಗಳನ್ನು ಮಾಡಿ, ಪೂರ್ವದಂತೆ ಅಧಿಕಾರವನ್ನು ಕೊಡಬೇಕೆಂದು ಮಾತನಾಡಿದರು.

ಈ ಖರಾರಿನಲ್ಲಿ ಕಂಡಂತೆ ಮದರಾಸ್ ಗವರ್ನರ್ ಲಾರ್ಡ್ ಮೆಕಾರ್ಟ್ನೀ ಸಾಹೇಬರವರು ಈ ಮಂತ್ರಿಗಳಿಗೆ ಬರೆಯಿಸಿಕೊಟ್ಟ ಖರಾರು ಏನಂದರೆ :—

(ಫಾರ್ಸಿ ಮತ್ತು ಮಹಾರಾಷ್ಟ್ರದಲ್ಲಿರುವ ಅಸಲಿಗೆ ತರ್ಜಮೆ.)

(ಕುಂಪಣೀ ಅರಗು ಮೊಹರಿದೆ.)

ಕವಲ್‌ನಾಮಾ, ತಮ್ಮ ಕಡೇ ಗವರ್ನರ್ ಲಾರ್ಡ್ ಮೆಕಾರ್ಟ್ನೀ, ಚೆನ್ನಪಟ್ಟಣ, ವಗೈರೆ ಸಾಹೇಬರವರು.

ಕಮಾಹೀ ಅಂಕಿ,—ದರೀವಿಲ್ಲಾ—ಮೈಸೂರು ನರಪತಿ ಕರ್ತರ್ ರಾಣೀ ಲಕ್ಷ್ಮಮ್ಮಣ್ಣಿಯವರ ವಕೀಲರು ತಿರುಮಲರಾವ್ ಮತ್ತು ನಾರಾಯಣರಾಯರವರು, ತಮ್ಮ ನೌಕರ ಹೈದರಲ್ಲೀಖಾನ್ ಆಕ್ರಮಿಸಿಕೊಂಡ ರಾಜ್ಯವನ್ನು ಸ್ವಾಧೀನ ಮಾಡಿಕೊಳ್ಳುವದಕ್ಕಾಗಿ ಹಾಮಕು ಮಾಡುವದಕ್ಕೋಸ್ಕರ, ಮೇಸ್ತರ್ ಜಾನ್ ಸಲಿವರ್ಣರವರಿಗೆ ಜಾಹಿರು ಮಾಡಿದರು. ಮತ್ತು ವಕೀಲರು ತೋರಿಸಿದಂಥಾ ಕಾಗದಪತ್ರ ಮತ್ತು ದಸ್ತೈವಜುಗಳನ್ನು ನೋಡುವಲ್ಲಿ, ಖಾನ್ ಮಜಕೂರು ಆಕ್ರಮಿಸಿಕೊಂಡ ತಾಲ್ಲೂಕುಗಳ ಬಂದೋಬಸ್ತು ಮಾಡುವ ವಿಷಯಲ್ಲಿ, ರಾಣಿ ಮತ್ತು ಮಹೀಶೂರ ಧೊರೆಗಳವರ ಮನೆತನದ

ಆ ಸಮಯದಲ್ಲಿ ವೀರಾಜಯ್ಯನು ನವಾಬರ ಸಂಗಡ ವಿನಯೋಕ್ತಿಗಳನ್ನು ಆಡದೆ, ಒರಟು ಮಾತುಗಳನ್ನು ಆಡಿದನು. ಆದ್ದರಿಂದ ನವಾಬರು ಅವನನ್ನು ಪೂರ್ವದಂತೆ ಬಂಧನೆಯಲ್ಲಿರಿಸಿ, ಅವನ ತಂದೆಯಾದ ನಂಜರಾಜಯ್ಯನಿಗೆ ಉಂಬಳಿಯಾಗಿ ಕೊಟ್ಟಿದ್ದ ಕಳಲೇ ಸೀಮೆಯನ್ನು ಜಪ್ತಿಮಾಡಿ ಜೀವನಕ್ಕೆ ತಕ್ಕಷ್ಟುಗೆ ವೆಚ್ಚಕ್ಕೆ ಕೊಡುತ್ತಿದ್ದರು.

ಸೀರ್ಯದ ಅಧಿಕಾರ ಮಾಡುತ್ತಿದ್ದ ಪ್ರಧಾನ ವೆಂಕಪ್ಪಯ್ಯನ ಅಳಿಯನಾದ ರಘುಪತಯ್ಯನು ನವಾಬರು ಬರುವಾಗ್ಯೆ ಇಸ್ತಕಪಾಲ್ ಬಾರದೆ ಇದ್ದದರಿಂದಲೂ, ವೆಂಕಪ್ಪಯ್ಯನ ಮೇಲೆ ಪೂರ್ವದಿಂದಲೂ ಅಸೂಯೆ ಇದ್ದದ್ದರಿಂದಲೂ, ನವಾಬರು ರಘುಪತಯ್ಯನಿಗೆ ಸೀರ್ಯದ ಅಧಿಕಾರವನ್ನು ತೆಗೆದು, ವೆಂಕಪ್ಪಯ್ಯನ ಕೈಯಲ್ಲಿ ೬೦ ಸಾವಿರ ವರಹಗಳನ್ನು ದಂಡ ತೆಗೆದುಕೊಂಡು ಅವನಿಗೆ ಇನ್ನ ದರಮಾಹೆ ಸಾವಿರ ರೂಪಾಯನ್ನು ಮಿನಾಹಿ ಮಾಡಿಸಿ, ಅವರ ಕಡೇ ಜನಗಳ ಅಧಿಕಾರವನ್ನು ತೆಗೆದು, ಪ್ರಧಾನರೆಂಬ ಹೆಸರನ್ನು ಬಿಡಿಸಿ, ಆ ಅಧಿಕಾರವನ್ನೇ ಮೋಕೂಫ್ ಮಾಡಿದರು.

ಅಂಚೇ ಶಾಮಯ್ಯನು ಪೂರ್ಣಯ್ಯನವರ ಮೇಲೆ ಇಲ್ಲದ ಸುಳ್ಳುಪಟ್ಟಿಯನ್ನು ಹುಟ್ಟಿಸಿದ್ದರಿಂದ, ಅವರಿಂದ ೧,೧೧,೦೦೦ ವರಹಗಳನ್ನು ದಂಡ ತೆಗೆದು

ಕಡೆಯವರು ಕುಂಪಣಿಯವರಿಗೆ ವಿಶೇಷ ಸಹಾಯ ಮಾಡ್ಯಾರೆಂದು, ಮೇಸ್ತರ್ ಸಲಿವನ್ನರವರಿಗೆ ತೃಪ್ತಿಕರವಾಯಿತು. ಆ ಕಾರಣದಿಂದ ಟೀಪೂ ಮಜಕೂರು, ಕುಂಪಣಿಯವರ ಮತ್ತು ಅವರ ವಾರಸ್ತಾರರ ಮತ್ತು ಅವರ ಇಲಾಖೆಯ ಜನಗಳ ಸಂಗಡ ಸಹಾ ದ್ವೇಷ ಮಾಡಿ, ಕಮ್ಮರಬಂಧೀ ಮಾಡಿ, ಜನಗಳಿಗೆ ಜುಲುಮ್ ಮತ್ತು ಉಪದ್ರವ ಕೊಟ್ಟದ್ದರಿಂದ, ನಾಲ್ಕು ಕಡೆ ಅವನ ಸೀಮೇನಡುವೆ ಫೌಜು ತರಿಸಿ, ಯಾರಯಾರ ತಾಲ್ಲೋಕು ಮತ್ತು ಮನೆಗಳು ಸಹಾ ಆಕ್ರಮಿಸಿಕೊಂಡಿದಾನೆಯೋ, ಅವುಗಳನ್ನೆಲ್ಲಾ ಆಯಾ ವಾರಸ್ತಾರರಿಗೆ ಕೊಡಿಸಿಕೊಟ್ಟು, ಹಕ್ಕುದಾರರ ಹಕ್ಕನ್ನು ಸಲ್ಲಿಸಬೇಕೆಂತ ಕುಂಪಣಿಯವರ ಇರಾದಾ ನಿಶ್ಚಯಿಸಿ ಇರುವ ಮೇರೆ ನ್ಯಾಯಮಾರ್ಗ ಅಂಗೀಕಾರ ಮಾಡತಕ್ಕದ್ದಿದೆ. ಮತ್ತು ತಾವು ತೆಗೆದುಕೊಳ್ಳತಕ್ಕ ಪರರಾಜ್ಯವನ್ನು ತಾವು ಆಕ್ರಮಿಸಿಕೊಳ್ಳದಂತೆ ಇರತಕ್ಕ ಭಗ್ಯೆ ಫೆಷ್ಟ ಇಂಗ್ರೇಜೀ ಜಾತೀಜನಗಳ ಕುಂಪಣಿಯವರ ಸ್ವಭಾವ ಏನಂದರೆ :—ಇಂಗ್ರೇಜಿಯವರ ಪಾದಷಹಾ ಮತ್ತು ಕುಂಪಣಿ ಡಿರಕ್ಟರ್ ಸಾಹೇಬಜನಗಳು ಯಾವ ಪ್ರಕಾರ ಪ್ರವರ್ತಿಸುತ್ತಾರೋ ಆ ಮಾರ್ಗದ ಶಾಶ್ವತ ಸ್ವರೂಪದಿಂದ ಇರುವ ಪ್ರಯುಕ್ತ ಆ

ಕೊಂಡು ಗಿಡ್ಡಂಗಿಯಲ್ಲಿ ಕೂಡಿಯಿದ್ದರು. ಆ ಸಮಯದಲ್ಲಿ ಬಚ್ಚೀರಾಯರು ಇವರ ಮಾನದ ಮೇಲೆ ದೃಷ್ಟಿ ಯಿಟ್ಟು ಬರಕ್ಕೀ ಶ್ರೀನಿವಾಸರಾಯನಿಗೆ ಹೇಳಿ, ಅವನಿಂದ ನವಾಬರಿಗೆ ತಿಳಿಸಿ, ಈ ಹಣಕ್ಕೆ ಅನ್ನದಾನ ಸೆಟ್ಟಿಯನ್ನು ನರಸೆಟ್ಟಿಯನ್ನೂ ಹವಾಲತೆಯನ್ನು ಕೊಟ್ಟರು. ಅನಂತರ ಇವರಿಗೆ ಪೂರ್ವದಂತೆ ತೋಷೀಖಾನೇ ದಪ್ತರ ಕೆಲಸವನ್ನು ಖಾಯಂ ಮಾಡಿದರು.

ನವಾಬರು ತಮ್ಮ ಅಧಿಕಾರದಲ್ಲಿ ಶ್ರೀರಂಗಪಟ್ಟಣದ ಕೋಟೆಯನ್ನು ವಿಸ್ತಾರವಾಗಿ ಕಟ್ಟಿಸಿದ್ದಲ್ಲದೆ ಮಹೀಶೂರ ಕೋಟೆಗೆ ಸುತ್ತಲೂ ರೇವಣಿಯನ್ನೂ, ಮದ್ದೂರು ಚನ್ನಪಟ್ಟಣ ಮುಂತಾದ ಕೆಲವು ಗಡಿಗಳಿಗೂ ಕೆಲವು ದುರ್ಗಗಳಿಗೂ ಕೋಟೆ ಕೊತ್ತಲಗಳನ್ನೂ ಕಟ್ಟಿಸಿದರು, ಶ್ರೀರಂಗಪಟ್ಟಣದ ಉಭಯ ಕಾವೇರಿಗಳ ಮಧ್ಯೆ 'ಷಹರ್ ಗಂಜಾಂ' ಎಂಬದಾಗಿ ದೊಡ್ಡ ಪೇಟೆಯನ್ನು ಕಟ್ಟಿಸಿದರು; ಎರಡು ಹೊಳೆಗಳೂ ಕೂಡಿರುವ ಸ್ಥಳದಲ್ಲಿ ಲಾಲಬಾಗ್ ಎಂಬ ತೋಟವನ್ನೂ ಕೋಟೇಮೂಡಲ ಬಾಗಲ ಎದುರಿಗೆ ನದಿಗೆ ದಕ್ಷಿಣ ಪಾರ್ಶ್ವದಲ್ಲಿ ದರಿಯಾದವಲತ್ತೆಂಬ ತೋಟವನ್ನೂ ಉಂಟು ಮಾಡಿದರು; ಈ ಎರಡು ತೋಟಗಳಿಗೂ ದಿಳ್ಳಿ ಲಾಹುರ ಕಾಬೂಲ್ ಕಂದಾರ್ ಮುಂತಾದ ಸೀಮೆಗಳಿಂದ ವಿಚಿತ್ರವಾದ ಫಲಪುಷ್ಪಗಳನ್ನು ಬಿಡುವ ವೃಕ್ಷಲತೆಗಳನ್ನೂ ಬೀಜಗಳನ್ನೂ ತರಿಸಿ, ಆಯಾದೇಶದ ಕಾರೇಗಾರರನ್ನು

ನಾಯಕನ ಹೆಸರಿನಲ್ಲಿ ಹುಕುಂ ಸಾದರು ಮಾಡುತ್ತಾರೆ. ಅದರ ಅಭಿಪ್ರಾಯ, ಅದರ ಘನತೆ, ಮತ್ತು ಸಂಭಾವಿತತ್ವ ಎಲ್ಲವೂ ದರ್ಬಾ ಮತ್ತು ಹಿಂದುಸ್ಥಾನ ಸರದಾರರು ಮತ್ತು ಅರಸುಗಳಿಗೆ ದೃಢತರದಿಂದ ತಿಳಿಯಬೇಕೆಂದು ಅಪೇಕ್ಷಿಸುತ್ತಲಿದ್ದಾರೆ. ಈ ವಿಷಯದಲ್ಲಿ ಕುಂಪಣೀ ತಮಾಮು ಇಂಗ್ರೇಜರು ಬರೆದು ಕಳಿಸಿರುವದೇನಂದರೆ.— ಕದಾಚಿತ್ ಈಶ್ವರ ದಯೆಯಿಂದ ಇಂಗ್ರೇಜೀ ಪಾದಷಹಾ ಮತ್ತು ಕುಂಪಣಿಯವರ ಫೌಜು ಮತ್ತು ಅವರ ವಾರಸು ಮತ್ತು ತಾಲ್ಲೋಕಾನವರ ಫೌಜುಗಳು ಬಂದು ಮಹೀಶೂರ ಧೊರೆಗಳ ಮನೆತನದ ಜನಗಳ ಮತ್ತೂ ಅವರ ಕಾರ್ಯಸ್ಥರ ಅನುಕೂಲತಾ ಮತ್ತು ಕುಮಕಿನಿಂದ ತೆಗೆದುಕೊಳ್ಳಲ್ಪಡುವ ಮಹೀಶೂರು ಸೀಮೆ ಅಥವಾ ಮಹೀಶೂರ ಧೊರೆಗಳ ತಾಲ್ಲೂಕು ಪ್ರತ್ಯೇಕಸ್ಥಳ ಮತ್ತು ಮನೆ ವಗೈರೆಗಳು ಎಲ್ಲವೂ ರಾಣೀ ಮಜಕೂರಿಗೆ ಮತ್ತು ಮಹೀಶೂರ ಸಂಸ್ಥಾನದ ವಾರಸ ಜನಗಳಿಗೆ ಬಿಡಿಸಿ ಕೊಡಲಾದೀತು. ಮತ್ತು ಈ ಕಾರ್ಯವನ್ನು ಸಾಧನೆ ಮಾಡತಕ್ಕ ಬಗ್ಯೆ ಫೌಜಿಗೆ ತಗಲಿದ ಖರ್ಚು ಮತ್ತು

ಕರೆಯಿಸಿ, ಈ ಎರಡು ತೋಟಗಳಲ್ಲಿಯೂ ಆ ವೃಕ್ಷಲತಾ ಬೀಜಗಳನ್ನು ಹಾಕಿಸಿ, ಹಾಲು, ಮೊಸರು, ಮಜ್ಜಿಗೆ, ಎಳನೀರು ಮುಂತಾದದ್ದರಿಂದಲೇ ಪೋಷಿಸಿ, ಆ ತೋಟಗಳಲ್ಲಿ ಸೋನೇರಿ ರುಪೇರೀ ಕೆಲಸಗಳಿಂದ ವಿಚಿತ್ರವಾದ ದಿವಾನಖಾನೆಯನ್ನು ಕಟ್ಟಿಸಿ, ಅದೇಮೇರೆಗೆ ಬೆಂಗಳೂರಲ್ಲಿಯೂ ಲಾಲ್‌ಬಾಗ್ ತೋಟವನ್ನೂ ದಿವಾನಖಾನೆಯನ್ನೂ ಕಟ್ಟಿಸಿದರು.

ಖಾಸಾಚಾಮರಾಜ ಒಡೆಯರವರ ಆಳಿಕೆಯಲ್ಲಿ ಸರ್ವಾಧಿಕಾರಿಗಳಾದ ನವಾಬರು, ಆರ್ಕಾಟನ್ನು ಸಾಧಿಸುವದಕ್ಕೋಸ್ಕರ, ಸಕಲಸನ್ನಾಹದಿಂದ ಶಾ॥ ೧೬೮೨ನೇ ಶಾರ್ವರಿ ಸಂವತ್ಸರದ ಜ್ಯೇಷ್ಠಮಾಸದಲ್ಲಿ ಮೊಹಿಮು ಹೊರಡುವ ಕಾಲದಲ್ಲಿ ಗಣಿತಿಯಾದ ಫೌಜುಗಳವಿವರ:—

ಕುದುರೇ ಸವಾರರು.—ಬಾರಗಿರ ತಬೇಲೆ ಕುದುರೇ ಸವಾರರು ೧೩,೦೦೦ ; ಸವಾರ ಕಚೇರೀ ಕುದುರೇ ಸವಾರರು ೧೮,೦೦೦ ; ಕಡಪೇ ಮಿರ್ ಅಲ್ಲೀರಜಾಖಾನನ ಕಡೇ ಸವಾರರು ೬,೦೦೦ ; ಶ್ರವಣೂರು ಹಕೀಂಖಾನನ ಮಕ್ಕಳು ಎಕ್ಕೆ ಸವಾರರು ೭,೦೦೦; ಅಲಿಮಾಸಿನ ಸವಾರರು ೫೦೦ ; ಒಟ್ಟು ಸವಾರರು ೪೯,೫೦೦.

ಬಾರು.—ಬಾರುಕಚೇರಿಯವರು ೬೨,೦೦೦ ; ಕಡ ೧ ಮಿರ್ ಅಲ್ಲೀ ರಜಾಖಾನನ ಕಡೆಯವರು ೪,೦೦೦ ; ಒಟ್ಟುಬಾರು ೬೬,೦೦೦.

ರಾಜ್ಯ ಸಂರಕ್ಷಣೆಗಾಗಿ ರಾಣೀ ಸಾಹೇಬರಿಂದ ಕೇಳಿಕೊಳ್ಳಲ್ಪಟ್ಟ ಫೌಜಿನ ಖರ್ಚು ಶಿಪಾಯಿ ಮದತ್ತು ಮಾಡಿದವರ ತವಜ್ಜಾ ಮತ್ತು ಇನಾಂಸಹ ಕುಂಪಣೀ ನ್ಯಾಯಧಾನಿ ಅಥವಾ ಸರದಾರವರು ಮತ್ತು ಅವರ ಫೌಜಿನ ಸರದಾರವರು ರಾಣಿಯವರ ಕಡೆಯಿಂದ ತೆಗೆದುಕೊಳ್ಳುವದಿಲ್ಲ. ಮತ್ತು ಕದಾಚಿತ್ ಮಹೀಶೂರ ಸಂಸ್ಥಾನವನ್ನ ರಾಣೀ ಮಜಕೂರಿಗೆ ಖಾಯಂ ಮಾಡದಹಾಗೆ ಹೈದರಲ್ಲೀಖಾನನ ಸಂಗಡ ಸಂಧಿ ಮಾಡಿಕೊಳ್ಳುವದು ಅವಶ್ಯಕವಾಗಿ ಕಾಣಬರುವ ಪಕ್ಷದಲ್ಲಿ, ರಾಣೀ ಮಜಕೂರು ವಕೀಲರು, ಪಾಳ್ಯಗಾರರು, ಜಮಾದಾರರು, ಮತ್ತು ಈ ವಿಷಯದಲ್ಲಿ ಕುಂಪಣಿಯವರಿಗೆ ಶಾಮೀಲಾಗುವವರು, ಎಲ್ಲರನ್ನೂ ಸತ್ಯವಾಗಿ ಯಾವರೀತಿಯಲ್ಲೂ ಹ್ಯಾಗಾದರೂ ಖರ್ಚು ಮಜಕೂರಿಗೆ ಒಪ್ಪಿಸಿ ಕೊಡುವದಿಲ್ಲ. ಇದಲ್ಲದೆ ಅಂಥಾ ಜನಗಳನ್ನು ಕುಂಪಣಿಯವರು ಯಾವಾಗ್ಯೂ ವಿಶೇಷವಾಗಿ ಕಾಪಾಡಿಕೊಂಡಾರು. ಕುಂಪಣಿಯವರಿಂದ ಮಜಬೂತು ಕರಾರಾಗಿ ಇರುತ್ತದೆ. ಇನ್ನೂ ಒಂದು ಕರಾರಾಗಿ ಇರುತ್ತದೆ ; ಅದೇನೆಂದರೆ : ಕದಾಚಿತ್ ಸಂಧಿಯಾಗಿ ಹೈದರಲ್ಲೀಖಾನ ಮಹೀಶೂರ ಸೀಮೆಯನ್ನು ಅನುಭವಿಸುತ್ತಲಿದ್ದದ್ದೇ ಆದರೆ, ರಾಣೀಮಜ

ಓಲೇಕಾರರು.—ಸೀಮೇಕಂದಾಚಾರ ೮೦,೦೦೦ ; ಅಹಷಾಂ ೨೦,೦೦೦ ; ಕಡಪೇ ವಿೂರಲ್ಲೀ ರಜಾಖಾನನ ಕಡೆಯವರು ೪೦೦೦ ; ಒಟ್ಟು ಓಲೇಕಾರರು ೧,೦೪,೦೦೦.

ಇತರರು.—ಮೂಸಾಲಾಲೀ ಕಡೆ ಪರಾಷೀರು ೨೦೦೦ ; ಇಂಗ್ಲಿಷ್ ಜಾನಿಗೋರ ೫೦೦, ಪೆಶ್ಶೀಬಾಲ್ಯದವರು ೨,೦೦೦; ಬಾಣದಾರರು ೨,೦೦೦; ಕಲಾಶಿ ಗೋಲಂದಾಜ್ ಚೆಟ್ಟೀದಾರ ಮೊದಲಾದವರು ೪,೦೦೦ ; ಹಬ್ಸಿ ೧,೦೦೦ ; ಅರೆಬಿಸ್ಥಾನದವರು ೧,೦೦೦; ದಂಡಿನ ಕಾವಟಿಗಳು ೬,೦೦೦.

ಹೀಗೆ ಒಟ್ಟು ಖುಲ್ಲು ಇಸಮು—೨,೨೬,೦೦೦

ಇವುಗಳಲ್ಲದೆ ತೋಪು, ಇದಕ್ಕೆ ಬೇಕಾದಷ್ಟು ಗರ್ನಾರ್, ಮಕರಡಿಬ್ಬಿ, ಬಾರೂರು. ಸಹಾ ೬೦೦ ; ಮೋತಿಖಾನೆ ವರದೀಯತ್ತು ೧೨,೦೦೦ ; ಫೀಲಖಾನೇ ಆನೆ ೧,೦೦೦ ; ಷುತರಖಾನೆ ಒಂಟೆ ೬,೦೦೦ ; ಬ್ರಾಹ್ಮಣ, ನಾಯಕ ರಿಕಾರ ಸಹಾ ೧,೦೦೦ ; ಜಾಸೋದರ ಮೊದಲಾದದ್ದು ೧,೦೦೦.

ಈ ಮೇಲೆಹೇಳಿದವರು ಅಲ್ಲದೆ ಚೋಪದಾರ, ಮಶಲದಾರ, ನಕೀಬ, ಖಿಜಮತಗಾರ, ಪರಾಷರು, ಗೊಲ್ಲ, ಭೋಯಿ, ಮಷಾಲಚಿ, ಜೀನಗಾರ, ವೈದ್ಯ, ಸಂಗೀತಗಾರ, ಇವರೇ ಮೊದಲಾದವರು ಅಲಾಹಿದ ಷಾಗಿರ್ದಪೇಷಾಕಚೇರಿಗೆ ಸೇರಿದವರು. ಆಹಲೇ ಕಾರಪೇಷಾ ಅಲಾಹಿದ.

ನವಾಬರು ಮೇಲೆಹೇಳಿರುವ ಸೈನ್ಯದಲ್ಲಿ ೬೦,೦೦೦ ಸೈನ್ಯವನ್ನು ಸೀಮೆಯಮೇಲೆ ಬಂದೋಬಸ್ತಿನ ಬಗ್ಯೆ ಇಟ್ಟು, ನಿಂತ ೧,೬೬,೦೦೦ ಸೈನ್ಯ

ಕೂರು, ಮತ್ತು ರಾಣೀ ಮಜಕೂರು ವಕೀಲರು, ಮತ್ತು ಗುಮಾಸ್ತೇರು, ಈ ವಿಷಯಕ್ಕೆ ಸಂಬಂಧಪಟ್ಟವರು ಕುಂಪಣೀ ಫೌಜಿನ ಖರ್ಚಿಗೆ ಏನು ಕೊಡುತ್ತಲಿದ್ದಾರೋ ಅದನ್ನು ತಿರಿಗಿ ಅವರಿಗೆ ಪಾವತಿ ಮಾಡುತ್ತೇವೆ. ದಕ್ಷಿಣ ದಿಕ್ಕಿನಿಂದ ಕುಂಪಣೀ ಕಾರ್ಯಗಳನ್ನು ನಡಿಸುವಹಾಗೆ ಮೆಸ್ಟರ್ ಜಾರ್ಜ ಸಲಿವರ್ ಸರದಾರರಿಗೆ ಹುಕುಂ ಆಗಿ ಯಿದೆ. ಈ ಮೊಬದ್ದಮಾ ಏರ್ಪಾಡು ವಿಷಯದಲ್ಲಿ ಮೇಲ್ಕಂಡ ವಕೀಲರನ್ನು ನೇಮಿಸುವಹಾಗೆ ಮೇಸ್ತರ್ ಸಲಿವರ್ ಸಾಹೇಬರು ಬರೆಯುತ್ತಲಿದ್ದಾರೆ. ಬತಾರೀಖು ೨೮ನೇ ಮಾಹೆ ಅಕ್ಟೋಬರ ೧೭೮೨ನೇ ಇಸವಿ, ಮುತಾಬಕ್ಛಂದ್ ೨೦ನೇ ಮಾಹೆ ಜಿಲ್ಕಾದ್ ೧೧೯೬ನೇ ಹಿಜರಿ ವಕೀಲ್ ಮಜಕೂರು ಇರಾದಾ ಇದ್ದ ಪ್ರಕಾರ ಬಂದ ಬಮೋಜಿಬ್ ಮೇಸ್ಟರ್ ಸ್ಟೌರಟಿಜ್ ಸರದಾರವರ ಷಾಹಿದಿಯೊಡನೆ ಕವಲು ಬರೆದುಕೊಟ್ಟ ಮತಲಬ್ ಅಲಬತ್ ತಿಳಿಸಿ ಇದೇನೆ.

ಈ ಕಾರಣದಿಂದ ಆ ಜನಗಳ ಮಧ್ಯೆ ವಕೀಲರು ಜಾಹಿರು ಮಾಡಿದ ಪ್ರಕಾರ ಏನು ಬರೆದು ಇದೆಯೋ ಅವು ಉಭಯತ್ರರ ಮಧ್ಯೆ ಚೆನ್ನಾಗಿ ವಿಮರ್ಶೆ ಮಾಡಿಕೊಂಡು

ವನ್ನು ಒಟ್ಟುಮಾಡಿ ಆರ್ಕಾಡಿಗೆ ಹೋಗುವಾಗ ತಮ್ಮ ಸಂಗಡ ಕೆಲವು ಸೈನ್ಯವನ್ನೂ ಪರದೀಯತ್ತು ಫೀಲಖಾನೆ, ಷುತರಖಾನೆ, ನಾಯಕ, ಹರಿಕಾರ, ಜಾಸೂದರ ಮೊದಲಾದ ಜನಗಳನ್ನೂ ತೆಗದು ಕೊಂಡು, ಉಳಿದ ಸೈನ್ಯದಸಂಗಡ ಆ ಹಿರೇಕಾಜನಗಳನ್ನು ಕಳುಹಿಸಿಕೊಟ್ಟು, ಕೆಲವು ಸಂಸ್ಥಾನೀಕರು ಪಾಳ್ಯಗಾರರ ಸೀಮೆಗಳನ್ನು ಸಾಧಿಸುವದಕ್ಕೋಸ್ಕರ, ಶಾ ॥ ೧೭೦೨ನೇ ಶಾರ್ವರಿ ಸಂವತ್ಸರದ ಶ್ರಾವಣ ಬಹುಳ ಕಡೇಶುಕ್ರವಾರ ಏಕ ಮುಹೂರ್ತದಲ್ಲಿ ಜವಾಹಿರಿ ಬಂದರ, ತಂಜಾವೂರು, ಕುಂಭಕೋಣ, ಚಿದಂಬರ, ರಾಯವೇಲೂರು ಮೊದಲುಗೊಂಡು ರಾಮೇಶ್ವರ ಪರ್ಯಂತರಕ್ಕೂ, ಅದೇ ಮುಹೂರ್ತದಲ್ಲಿ ಲೂಟಿ ಮಾಡಿಕೊಂಡು ಬರುವಂತೆ ಹೇಳಿ ಕಳುಹಿಸಿ ಕೊಟ್ಟು, ತಾವು ಮಹಮ್ಮದಲ್ಲೀಖಾನನ ಸಂಗಡ ಬಹಳ ಯುದ್ಧಮಾಡಿ ಆರ್ಕಾಡಿಗೆ ಸೇರಿಯಿದ್ದ ೩೫ ಗಡಿಗಳನ್ನು ಸ್ವಾಧೀನ ಮಾಡಿಕೊಂಡರು.

ಈ ಆಳಿಕೆಯಲ್ಲಿ ಮೇಲೆ ಬರದಿರುವ ಪಾಳ್ಯಗಾರರನ್ನೂ ಸಂಸ್ಥಾನೀಕರನ್ನೂ ಜಯಿಸಿ ಸಾಧಿಸಿದ ಗಡಿಗಳ ೩೫ಕ್ಕೆ ವಿವರ.—

ಚಿತ್ರದುರ್ಗದ ಪಾಳ್ಯಗಾರ ಮದಿಗಿರಿನಾಯಕನಿಂದ—(೧) ಕಸಬಾ, (೨) ಹೊಸದುರ್ಗ, (೩) ಹಿರಿಯೂರು, (೪) ಬೆಳಗೋಡು, (೫) ಐಮಂಗಲ, (೬)ರಾಮಗಿರಿ,

---

ಸ್ವಾಪಾಯ ತಿಳಿದುಕೊಂಡು ಆ ಕವಲಿನ ಮತಲಬ್ ಎಲ್ಲವೂ ಬಿಷರಾ ಗವರ್ನರ್ ಜನರಲ್ ವಾ ಕಾಂಸೆಲ್ ಬಂಗಾಳೀಯವರು ಮಂಜೂರು ಮಾಡ್ಯಾರು. ಆದರೆ ಅದರಂತೆ ನಾವು ಖಬೂಲ್ ಮಾಡಿದೆವು. ಬತಾರೀಖು ಥಂದ್, ೨೧ನೇ ಮಾಹೆ ಜಿಲ್ಹೆಜ್, ೧೧೯೬ನೇ ಹಿಜರೀ ಮುತಾಬಿಕ್ ಥಂದ್ ೨೫ನೇ ಮಾಹೆ ನವೆಂಬರ್ ೧೭೮೨ನೇ ಇಸವಿ.

(ಮಕಾರ್ಟ್ನೆ ಎಂಬದಾಗಿ ಈ ಬಳಿ ಇಂಗ್ಲಿಷ್ ಸೈನು ಇದೆ.)

ಹಿಂದೆ ಹೇಳಿದಂತೆ ಮಹೀಶೂರ ಮಹಾರಾಣಿಯವರು ಗವರ್ನರವರಿಗೆ ಬರೆದ ಕಾಗದಕ್ಕೆ ಆ ಸಾಹೇಬರು ಬರೆದ ಪ್ರತ್ಯುತ್ತರವೇನೆಂದರೆ :—

(ಫಾರ್ಸಿ ಮತ್ತು ಮಹಾರಾಷ್ಟ್ರದಲ್ಲಿ ಇರುವ ಅಸಲಿಗೆ ತರ್ಜುಮೆ.)

ಮೆಹರ್ಬಾನಗಿ ಮಾಡತಕ್ಕ ರಾಣೀಸಾಹೇಬರವರು.

ನಿಮಗೆ ದೇವರು ಒಳ್ಳೇದು ಮಾಡಲಿ. ನಾರಾಯಣರಾಯರು ನಿಮ್ಮ ಕಾಗದವನ್ನು ತಲಪಿಸಿದರು. ಆ ಕಾಗದದ ಅಭಿಪ್ರಾಯದಿಂದ ನನಗೆ ಸಂತೋಷ ಉಂಟಾಯಿತು. ನಾನು ನಿಮ್ಮ ಒಳ್ಳೇದಕ್ಕೋಸ್ಕರ ಸದಾ ನನ್ನ ಮನಸ್ಸನ್ನು ಇಟ್ಟು ಇರುತ್ತೇನೆ.

(೭) ಮಾಯಿಕೊಂಡೆ, (೮) ನಾಯಕನಹಟ್ಟಿ, (೯) ಮೊಣಕಾಲುಮುರಿ, (೧೦) ದಾವಣಗೆರೆ, (೧೧) ದೊಡ್ಡೇರಿ, (೧೨) ಸಕ್ಕರೆ ಬಾಗೂರು, (೧೩) ತಳಕು.

ಕಡಪೇ ಅಬ್ದುಲ್‌ಹಕೀಂ ಖಾನನಿಂದ.—(೧) ಕಡಪೆ, (೨) ಬಿಂಬಿಂ. (೩) ಗಂಜೀಕೋಟೆ, (೪) ಶಿಂತಕುಂಟ, (೫) ಚೆನ್ನೂರು, (೬) ಕೊತ್ತಕೋಟೆ, (೭) ಕೊಯಿಲಕುಂಟ್ಲ, (೮) ಸಿದ್ಧವಟ್ಟಾ, (೯) ಕಾವುಲಾಪುರ, (೧೦) ದೊನ್ನೆವಾಡಾ, (೧೧) ಜಮಲಮಡು, (೧೨) ಮಲ್ಯಾಲಾ, (೧೩) ಪೈಡಿಕಾಲವಾ, (೧೪) ಕೂಟಕೂಳ, (೧೫) ದೂಪಾಡ, (೧೬) ದುವ್ವೂರು, (೧೭) ಇಡಮತಲಾ, (೧೮) ವೇಂಪಲ್ಲಿನಂದಿಮಂಡಲಾ, (೧೯) ಬದ್ದವೇಲ, (೨೦) ಮರೆಳಾ, (೨೧) ಪರವಣಾಮಿಳ.

ಅರ್ಕಾಡಸೀಮೆಯ ಮಹಮದಲ್ಲೀಖಾನನಿಂದ ಶಾ। ೧೭೦೩ನೇ ಶಾರ್ವರಿ ಸಂವತ್ಸರದ ಮಾರ್ಗಶಿರ ಶುದ್ಧ ಬಿದಿಗೇ ಮಂಗಳವಾರದಲ್ಲಿ ಠಾಣ್ಯಾ ಹಾಕಿದ ಗಡಿಗಳು.—(೧) ಕಸಬೆಅರ್ಕಾಡ, (೨) ಶಿಮುರಿ, (೩) ತಿರುಣಾಮಲೆ, (೪) ದೋಭಿಗಡಾ (೫) ಗುಡಿಯಾತ, (೬) ಪೆರಮಕಲ್ಲು, ನಸರತಗಡ, (೭) ಮಹೀಮಂಡಲ, (೮) ಆರಣಿ, (೯) ಚಂಗಮವ್ವ, (೧೦) ಕಾವೇರಿಪಾಕಾ, (೧೧) ಕೈಲಾಸಗಡ, (೧೨) ಚೇತಪಟ್ಟು, (೧೩) ತಿಂಡೀವನ, (೧೪) ಚಂಬರಗಡ, (೧೫) ಸಾತಗಡ, (೧೬) ಚೆಂಗಲ್ಪಟ್ಟುಸೀಮೆ, (೧೭) ತಿರಕಣಿ, (೧೮) ವೇಳೂರು, (೧೯) ಕುಂಭಕೋಣ, (೨೦) ತೆರೆಯೂರು, (೨೧) ತಿರಪಾಸೂರು, (೨೨) ಕಲವೆ, (೨೩) ಮನ್ನಾರಗುಡಿ,

---

ಹೈದರಲ್ಲೀಖಾನನು ನಿಮ್ಮ ವಂಶಕ್ಕೆ ಮಾಡಿದ ಅನ್ಯಾಯ ಕೃತಘ್ನತೆಗಳು ಪ್ರಸಿದ್ಧವಾಗಿ ತಿಳಿಯಲ್ಪಟ್ಟವೆ. ಅವನು ಮಾಡಿದ ಕೆಟ್ಟ ಕೆಲಸಕ್ಕೆ ಪ್ರತಿ ಮಾಡಬೇಕೆಂದು ನಮಗೆ ಸರ್ವ ಜನಗಳಿಗೂ ಜರೂರು ಇರುತ್ತದೆ. ಕವಲ್‌ನಾಮೆಗೆ ಅನುಗುಣವಾಗಿ ಈ ಕಾಗದವು ಕಳುಹಿಸಲ್ಪಟ್ಟಿತು. ಕುಂಪಣಿಯಲ್ಲಿ ನಿಮ್ಮ ಹಕ್ಕಿನಲ್ಲಿ ದೇವರು ದಯೆಯಿಟ್ಟರೆ ತೀರೀತು. ಆದರೆ ನಿಮ್ಮ ಕಡೆ ದೊಡ್ಡಮನುಷ್ಯರು ತಿರುಮಲರಾಯರು ಮತ್ತು ಬುದ್ಧಿವಂತರಾದವರು ಸಹಾಯ ಮಾಡ್ಯಾರು. ನಿಮ್ಮ ರಾಜ್ಯಸಾಧನೇ ಕೆಲಸವು ಆದೀತು. ಹೈದರಲ್ಲೀಖಾನನು ನಮ್ಮ ಮೇಲೂ ನಮ್ಮ ಮಂತ್ರಿಗಳಮೇಲೂ ದ್ವೇಷದಿಂದ ನಹಾ ಕಟ್ಟಿ ಇದಾನೆ. ನಮಗೆ ಜರೂರು ಇರುವದು ಏನಂದರೆ: ಅವನ ಶಿಕ್ಷೆಗೋಸ್ಕರ ನಾಲ್ಕು ಕಡೆಯಿಂದಲೂ ಅವನಮೇಲೆ ಗಲ್ಬಾ ಮಾಡುತ್ತೇವೆ. ಭಗವಂತನ ಕೃಪೆಯಿಂದ ಮೇಲ್ಕಂಡ ಹೈದರು ದಗಾಬಾಜಿಯಿಂದಲೂ ಜುಲುಮಿನಿಂದಲೂ ಕೃತಘ್ನತೆಯಿಂದಲೂ ಯಾವಯಾವ ತಾಲ್ಲೂಕುಗಳು ಆಕ್ರಮಿಸಿಕೊಂಡು ಇದಾನೋ, ಅವುಗಳನ್ನು ಸ್ವಲ್ಪ ದಿವಸದಲ್ಲಿಯೇ ಆಯಾ ಹಕ್ಕುದಾರರಿಗೆ ಕೊಡುತ್ತೇವೆ. ಇಂಗ್ಲಿಷ ಜನಗಳು ಮತ್ತು ಕುಂಪಣಿಯವರು ಈ ಕೇಸನಲ್ಲಿ ಹೆಚ್ಚಾಗಿ ಮುತವಜ್ಜೆ ಇಟ್ಟಾರು. ಆದರೆ ಒಳ್ಳೇ ನಿಯತ್ತಿನಿಂದ ನ್ಯಾಯ

(೨೪) ಪುಲಚೇರಿ, (೨೫) ಘಟಿಕಾಚಲ, (೨೬) ಚೆಂಜಿ, (೨೭) ತಿರಪತ್ತೂರು, (೨೮) ಕರ್ನಾಟಗಡ, (೨೯) ಮಧ್ಯಾರ್ಜುನ, (೩೦) ಕಂಚಿ, (೩೧) ಚೆಂದ್ರಗಿರಿ, (೩೨) ಚಿರಕಾಟಪತ್ತೂರು, (೩೩) ಚಿತ್ತೂರು, (೩೪) ಚಿತಂಬರ, (೩೫) ತಿರುಪತಿ.

(೧) ಹಳ್ಳಿದಾಳಸಾಂಬ್ರಾಣಿ,

ಸಂಸ್ಥಾನೀಕರಿಂದಲೂ ಪಾಳ್ಯಗಾರರಿಂದಲೂ ಸಹಾ ಪೆಷ್ಕಷ್ ಬರುತ್ತಿದ್ದ ೨೦ ಲಕ್ಷ ವರಹಗಳಿಗೆ ೪೧ ಸೀಮೆಗಳ ವಿವರ.—(೧) ಬೀಗಿ (೨) ಹನುಮಂತಗುಂಡ, (೩) ಬಿಕಾ, (೪) ಜರಿಮಲೆ, (೫) ಹಬ್ಬಿಕರಸೀಮೆ, (೬) ಡಂಬಳ, (೭) ಹೆಬಹಳಿದೊಡವಾಡಾ, (೮) ಕೊಚ್ಚಿ, (೯) ಗದ್ದವಾಲಾ, (೧೦) ಸುಜ್ಞಾಕಲು, (೧೧) ಪುಂಗನೂರು, (೧೨) ಚಿಟವೆಲುಮಲ್ಲೆವಾರು, (೧೩) ಬಲ್ಲಾಬಗೂರು, (೧೪) ನಿಡಗಲ್ಲು, (೧೫) ಪರಸಾಮನ ತಿಮ್ಮನಾಯಕನ ಕೋಟೆ, (೧೬) ಕರ್ನೋಲು, (೧೭) ಕಿತ್ತೂರು, (೧೮) ಕನಿಯಾನೂರು, (೧೯) ಸವಣೂರು, (೨೦) ಆದವಾನಿ, (೨೧) ಚಿಲಕನೇರ್ಪ, (೨೨) ಬಾವನೂರು, (೨೩) ಕನಕಗಿರಿ, (೨೪) ಆನೆಗೊಂದಿ, (೨೫) ಹುಲಿಕಲ್ಲು, (೨೬) ಹರಪನಹಳ್ಳಿ, (೨೭) ಗುಮ್ಮನಾಯಕನಹಳ್ಳಿ, (೨೮) ಗೊಬಿಕೊಂಡೆ, (೨೯) ಕೋಟಕೊಂಡೆಪಲುವಾಳ್ಳು, (೩೦) ಮೊಗರಾಲು, (೩೧) ರಾಮರವೆಂಕಟಗಿರಿ, (೩೨) ನರಗುಂದಾ, (೩೩) ಗುಳಪ್ಪನಾಯಕನಪಾಳ್ಯ, (೩೪) ಪಳನೀ, (೩೫) ಘಂಟಮನಾಯಕನಪಾಳ್ಯ, (೩೬) ವಿರೂಪಾಕ್ಷ, (೩೭) ಕನ್ನಂಮೆಟಿ, (೩೮) ಚಿರಕಲ್ಲು, (೩೯) ರಾಯದುರ್ಗ, (೪೦) ತೆಲಚೇರಿ, (೪೧) ಸರಜಾಪುರ, (೪೨) ಪಂದಿಕೋನಾ, (೪೩) ನಾರೇವನಾ,

---

ವನ್ನು ಇಡುತ್ತೇವೆ. ಬಬ್ಬರ ಪದಾರ್ಥವನ್ನಾಗಲೀ ದೇಶವನ್ನಾಗಲೀ ನ್ಯಾಯವಿಲ್ಲದೆ ಅಕ್ರಮವಾಗಿ ನಾವು ತೆಗೆದುಕೊಳ್ಳುವದಿಲ್ಲ. ಮತ್ತು ಆ ಪರಂಗಿಯವರ ಇರಾದೆಯನ್ನು ಹಿಂದೂ ಮತ್ತು ದಖ್ಖನನಲ್ಲಿ ಇರುವ ರಾಜರೂ ಮತ್ತು ದೊಡ್ಡ ಮನುಷ್ಯರೂ ಆಲೋಚಿಸಬೇಕು. ಇತರರ ಹಕ್ಕನ್ನು ಆಸೆಯಿಂದ ಅಪೇಕ್ಷಿಸದೆ ಇರತಕ್ಕಂಥಾದ್ದು ನಮ್ಮ ನ್ಯಾಯವಾಗಿದೆ. ರಾಣೀಸಾಹೇಬರು ಮತ್ತು ಅವರ ಸಂಗಡ ಇರತಕ್ಕವರು ಸದಾ ಕುಂಪಣೀ ಇಲಾಖೆಗಳಲ್ಲಿ ಈ ಕೆಲಸದಲ್ಲಿ ಸೇರತಕ್ಕದ್ದು. ಕುಂಪಣಿಯಿಂದ ಆದೀತು. ಸಕಲ ವಿಷಯದಲ್ಲಿ ರಕ್ಷಣೆ ಆದೀತು.

(ಮೆಕಾರ್ಟ್ನೆ ಎಂಬದಾಗಿ ಇಂಗ್ಲಿಷ್ ಸ್ಹೈನಿದೆ.)

ಪೂರ್ವದಲ್ಲಿ ನಾರಾಯಣರಾಯರು ರಾಜಕಾರ್ಯಾರ್ಥವಾಗಿ ಶ್ರೀರಂಗಪಟ್ಟಣಕ್ಕೆ ಬಂದಿದ್ದರಷ್ಟೆ. ಆ ರಾಜಕಾರ್ಯವೇನೆಂದರೆ :—ಗಜ್ಜಲಹಟ್ಟೀ ಕಾವೇರೀಪುರದ ಮಾರ್ಗವಾಗಿ ಕುಂಪಣೀ ಫೌಜನ್ನು ಸಾಗಿಸಿಕೊಂಡು ತಿರುಮಲರಾಯರು ಶ್ರೀರಂಗಪಟ್ಟಣದ ಸಮೀಪಕ್ಕೆ ಬಂದ ಒಡನೆ, ಶ್ರೀರಂಗಪಟ್ಟಣದಲ್ಲಿ ಇದ್ದ ಅಂಚೇ ಶಾಮಯ್ಯಮುಂತಾದ

(೪೪) ಕಾಳಹಸ್ತಿ, (೪೫) ಮೊಕಲನಾಯಕನಪಾಳ್ಯ, (೪೬) ಅಮ್ಮನಾಯಕನಪಾಳ್ಯ (೪೭) ಅಪ್ಪೆನಾಯಕನಪಾಳ್ಯ, (೪೮) ಗೋಟಿ ನಾಯಕನಪಾಳ್ಯ, (೪೯) ಮಡೂರು, (೫೦) ಅಪ್ಪಾಜಿಗೌಡನ ಪಾಳ್ಯ, (೫೧) ಪುಳ್ಳಪುರಂಗಿ.

ರಾಜಒಡೆಯರವರು ಮೊದಲುಗೊಂಡು ಖಾಸಾಚಾಮರಾಜ ಒಡೆಯರವರ ಆಳಿಕೆಯಲ್ಲಿ ಸರ್ವಾಧಿಕಾರಿಗಳಾದ ನವಾಬರ ಅಧಿಕಾರದ ಕಡೇವರಿಗೆ ಸಾಧಿಸಿದ ಮೇಲೆ ಬರೆದಿರುವ ಗಡಿಗಳಲ್ಲಿ ಚಿಕ್ಕದಾಗಿದ್ದ ತಾಲ್ಲೂಕನ್ನು ದೊಡ್ಡವುಗಳಿಗೆ ಸೇರಿಸಿ ಮಾಡಿದ ಗಡಿಗಳು ೩೩೩.

ಒಟ್ಟು ಸೀಮೇ ಹುಟ್ಟುವಳಿಯ ಲೆಕ್ಕ.—ಮಹೀಶೂರ ಸಂಸ್ಥಾನದ ಧೊರೆಗಳವರು ಶ್ರೀರಂಗಪಟ್ಟಣದಲ್ಲಿ ರತ್ನಸಿಂಹಾಸನಾ ರೂಢರಾಗಿ ಸುಖದಿಂದ ಪೃಥ್ವೀ ಸಾಂಬ್ರಾಜ್ಯವನ್ನು ಗೈಯುತ್ತಲಿರುವ ಸಮಯದಲ್ಲಿ, ನವಾಬರ ಅಧಿಕಾರದ ಕಡೆಯವರಿಗೆ ರಾಮೇಶ್ವರದ ಬಾಗಲಿಂದ ಸುತ್ತಲೂ ಕಲ್ಲೀಕೋಟೇಸಮುದ್ರ ಕೊಡೆಯಾಲ ಕೃಷ್ಣಾನದಿ ಗದ್ವಾಲ ನೆಲ್ಲೂರ ಸರ್ವಾಪಲ್ಲಿ ಮೈಲಾಪುರಿ ಚನ್ನಪಟ್ಟಣದ ಸಮುದ್ರದ ಪರ್ಯಂತರವಲ್ಲದೆ, ಉತ್ತರರಾಜ್ಯದಲ್ಲಿ ಇರುವ ಮೇಲೆಬರೆದಿರುವ ಗಡಿಗಳ ಒಟ್ಟು ಬೇರೀಜು ೨,೧೧,೦೦,೦೦೦ ವರಹ ; ಮೇಲೆ ಬರೆದಿರುವ ಸಂಸ್ಥಾನೀಕರು ಪಾಳ್ಯಗಾರರ ಕಡೆಯಿಂದ ೫೧ ಜನಗಳಿಂದ ೨೦,೦೦,೦೦೦ ವರಹ ; ಒಟ್ಟು ೨,೩೧,೦೦,೦೦೦ ವರಹ.

ಮುಖ್ಯಾಧಿಕಾರಿಗಳು ಹೈದರ್‌ನಾಯಕರ ಮೇಲೆ ಕಲಹ ಪ್ರಾರಂಭಮಾಡಿ, ಕುಂಪಣಿ ಫೌಜಿನ ಸಂಗಡ ಸೇರಿಕೊಂಡು ಈ ಯವನರನ್ನು ನಿರ್ಮೂಲ ಮಾಡಿ, ಮಹೀಶೂರ ಕ್ಷತ್ರಿಯ ಮನೆತನದ ಅರಸುಗಳಿಗೆ ಪಟ್ಟಾಭಿಷೇಕ ಮಾಡಿಸಬೇಕೆಂಬದಾಗಿ, ಪ್ರಧಾನ ತಿರುಮಲರಾಯರು ನಾರಾಯಣರಾಯರು, ಅಂಚೇ ಶಾಮಯ್ಯ ಮುಂತಾದವರೆಲ್ಲರೂ ಮಹಾಮಾತುಶ್ರೀ ಲಕ್ಷ್ಮಮ್ಮಣ್ಣಿಯವರ ಇಷ್ಟಾನುಸಾರವಾಗಿ ಗೋಪ್ಯವಾಗಿ ಏರ್ಪಾಡು ಮಾಡಿಯಿದ್ದರು. ಕುಂಪಣಿಯವರು ಮೇಲೆ ಕಂಡಂತೆ ಕವಲು ಕರಾರುಗಳನ್ನು ಬರೆದುಕೊಟ್ಟು ಅನೇಕ ಭರವಸೆಗಳನ್ನು ಕೊಟ್ಟ ಕಾರಣ, ಈ ಅಂಶಗಳನ್ನೆಲ್ಲಾ ಮಾತುಶ್ರೀ ಲಕ್ಷ್ಮಮ್ಮಣ್ಣಿಯವರಿಗೂ ಮಹೀಶೂರ ಅರಸುಗಳು ಮುಂತಾದ ಆಪ್ತ ಜನಗಳಿಗೂ ತಿಳಿಯಪಡಿಸುವದಕ್ಕೋಸ್ಕರ ನಾರಾಯಣರಾಯರು ಶ್ರೀರಂಗಪಟ್ಟಣಕ್ಕೆ ಬಂದರು.

ನವಾಬರಮರಣ.—ನವಾಬರು ಕಲ್ಲೀಕೋಟೆಯ ನಾಯಮ್ಮಾರರ ಹಂಗಾಂ ಬಹಳ ವಾಗಿದೆ ಎಂಬ ವರ್ತಮಾನವನ್ನು ಕೇಳಿ, ತಾವು ಆರ್ಕಾಡಿನಲ್ಲಿಯೇ ಇದ್ದುಕೊಂಡು, ಆ ಕಲ್ಲೀಕೋಟೆಯನ್ನು ಬಂದೋಬಸ್ತು ಮಾಡತಕ್ಕ ಬಗ್ಯೆ ಶಾ ||೧೭೦೪ನೇ ಶುಭಕೃತು ಸಂವತ್ಸರದ ಭಾದ್ರಪದ ಮಾಸದಲ್ಲಿ ಸುಲ್ತಾನನ ಸಂಗಡ ಕೆಲವು ಸೈನ್ಯಗಳನ್ನು ಕಳುಹಿಸಿದರು. ಹೀಗಿರುವಲ್ಲಿ ಅದೇ ಸಂವತ್ಸರದ ಕಾರ್ತಿಕ ಮಾಸದಲ್ಲಿ ಬೆನ್ನುಪಣಿ ಎಂಬ ವ್ರಣಬಾಧ್ಯವು ಸಂಭವಿಸಿ ಬಹಳ ಉಪದ್ರವಾಯಿತು. ಆಗ ನವಾಬರು ತಮ್ಮ ದೇಹ ನಿಲ್ಲುವದಿಲ್ಲವೆಂದು ತಿಳಿದು, ತಮಗೆ ಆಪ್ತರಾದ ಅಬೂಮಹಮ್ಮದ್ ಮಿರ್ಜೆ, ತೋಷೀಖಾನೆಯ ಕೃಷ್ಣರಾಯ, ಪೂರ್ಣಯ್ಯನವರು, ಅಂಚೇಶಾಮಯ್ಯ, ಮೀರಮಹ್ಮದಸಾದಕ್, ಈ ೫ ಜನಗಳನ್ನು ಕರೆದು “ನೀವು ಕಲ್ಲೀಕೋಟೆಗೆ ಹೋಗಿರುವ ನಮ್ಮ ಮಗನಾದ ಟೀಪೂ ಸುಲ್ತಾನನನ್ನು ಶೀಘ್ರವಾಗಿ ಕರೆಯಿಸಿ ಹೇಳತಕ್ಕ ಮಾತುಗಳೇನೆಂದರೆ:—ಧೊರೆಗಳಾದ ಇಮ್ಮಡಿಕೃಷ್ಣರಾಜ ಒಡೆಯರವರು ಸ್ವಲ್ಪಚಾಕರಿಯಲ್ಲಿದ್ದ ನನಗೆ ಸರ್ವಾಧಿಕಾರವನ್ನೇ ಕೊಟ್ಟದ್ದರಿಂದ, ನಾನು ನಮ್ಮಕ್ ಹರಾಮನೆಂದು ಎನ್ನಿಸಿ ಕೊಳ್ಳದೆ, ಇದುವರಿಗೂ ಸ್ವಾಮಿಭಕ್ತಿಯಿಂದಲೇ ಚಾಕರಿಮಾಡಿಕೊಂಡು ಬಂದೆನು. ಮುಂದೆ ನನ್ನ ಮಗ ಟೀಪೂಸುಲ್ತಾನನು ಇದೇಮೇರೆಗೆ ನಡೆದುಕೊಂಡರೆ ಈ ಅಧಿಕಾರವು ನಡೆಯುತ್ತಲಿದೆ ; ಹಾಗಲ್ಲದೆ ದುಷ್ಟರ ಮಾತುಗಳಿಂದಲೂ ಅವನ ದುರ್ನಡತೆಯಿಂದಲೂ ಏನಾದರೂ ಹೆಚ್ಚುಕಡಿಮೆಯಾಗಿನಡೆದರೆ, ಈ ಅಧಿಕಾರವೂ ಹೋಗಿ ಮುಂದೆ ಅವನೂ ಕೆಟ್ಟುಹೋಗುವನು. ಈ ವಿವರಗಳನ್ನು ನೀವು ಭಯಪಡದೆ ಅವನಿಗೆ ಹೇಳಿ, ನೀವೆಲ್ಲರೂ ಅವನನ್ನು ಈ ಅಧಿಕಾರದಲ್ಲಿ ಕೂರಿಸಿ ಜೀವನವನ್ನು ಮಾಡಿಕೊಂಡು ಹೋಗಿ” ಎಂದು ರಹಸ್ಯವಾಗಿ ಹೇಳಿ ಈ ವಿವರಗಳನ್ನೆಲ್ಲಾ ಧೊರೆಗಳಿಗೆ ಅರ್ಜಿಯನ್ನು ಬರೆದರು. ಅನಂತರದಲ್ಲಿ ನವಾಬರು ಬಹಳ ನಿಸ್ತೂಕವಾಗಿ ಶಾ|| ೧೭೦೪ನೇ ಶುಭಕೃತು ಸಂವತ್ಸರದ ಮಾರ್ಗಶಿರ ಶುದ್ಧ ೩ ಶನಿವಾರದ ದಿನ ಮಧ್ಯಾಹ್ನದಲ್ಲಿ ಆರ್ಕಾಡ ದಂಡಿನಲ್ಲಿ ತೀರಿಹೋದರು.

ಅನಂತರದಲ್ಲಿ ಮೇಲೆಬರೆದಿರುವ ೫ ಜನವೂ ಅತಿಜಾಗರೂಕರಾಗಿ ಈ ವರ್ತಮಾನವನ್ನು ಹೊರಕ್ಕೆ ಪ್ರಕಟಿಸದೆ, ರಹಸ್ಯವಾಗಿ ತಮ್ಮ ಹೆಸರಿ

ನಿಂದ ಟೀಪೂ ಸುಲ್ತಾನನ ಬಳಿಗೆ ಸಾರಣೀ ಸವಾರನ ಸಂಗಡ ಜಾಗ್ರತೆಯಾಗಿ ಬರುವಂತೆ ಅರ್ಜಿಯನ್ನು ಬರೆದು ಕಳುಹಿಸಿ ಕೊಟ್ಟು, ನವಾಬರ ಶರೀರವನ್ನು ತೊಳೆಯಿಸಿ ಸಂದೂಕದಲ್ಲಿ ಇರಿಸಿ, ಹೊರಕ್ಕೆ ದುರ್ವಾಸನೆ ಬಾರದಂತೆ ಗಂಧದ ಹುಡಿ ಪಚ್ಚಕರ್ಪೂರ ಘನಗು ಮುಂತಾದ ಪರಿಮಳದ್ರವ್ಯಗಳನ್ನು ತುಂಬಿ, ಸಂದೂಕಕ್ಕೆ ಮೊಹರುಮಾಡಿ, ಈ ವರ್ತಮಾನವು ದಂಡಿನಲ್ಲಿ ಪ್ರಕಟವಾಗದಂತೆ ೫೦೦ ಕುದುರೇ ಸವಾರರನ್ನೂ ೧೦೦೦ ಬಾರಿನವರನ್ನೂ ಬಂದೋಬಸ್ತಾಗಿ ಕಳುಹಿಸಿಕೊಟ್ಟು, "ಮೊದಲು ಕೋಲಾರದ ಬಳಿ ನವಾಬರ ತಂದೆ ತಾಯಿ ಅಣ್ಣ ಮುಂತಾದವರ ಗುಂಮಸ್ ಆಗಿದ್ದ ಸ್ಥಳದಲ್ಲಿಯೇ ನವಾಬರು ತಮಗೆ ಗುಂಮಸ ಮಾಡಿಕೊಂಡಿರುವದ್ದರಿಂದ ಆ ಸ್ಥಳಕ್ಕೆ ತೆಗೆದುಕೊಂಡುಹೋಗಿ, ಅಬಳಿಯಲ್ಲಿ ಇಟ್ಟುಕೊಂಡಿದ್ದು, ಮುಂದೆ ಅಪ್ಪಣೆ ಬಂದಂತೆ ನಡೆದುಕೊಳ್ಳುವವರಾಗಿ" ಎಂದು ಪೆಟ್ಟಿಗೆಯನ್ನು ಕಳುಹಿಸಿಕೊಟ್ಟು, ಈ ವರ್ತಮಾನವನ್ನು ಹೊರಗೆಹುಟ್ಟಿಸದೆ, ಪ್ರತಿನಿತ್ಯವೂ ನವಾಬರ ಡೇರೆಗೆ ಬಂದು, ಐಕಮತ್ಯದಿಂದ ನವಾಬರು ಇದ್ದಂತೆಯೇ ಸಕಲ ಕಾರ್ಯಗಳನ್ನೂ ಜಾಗರೂಕರಾಗಿ ನಡೆಯಿಸುತ್ತಿದ್ದರು. ಆಗ ಬಾರಗಿರಿ ಕಚೇರೀಬಕ್ಷಿ ಮಹಮ್ಮದ್ ಅಮೀನನು ಚನ್ನಪಟ್ಟಣಕ್ಕೆ ಪಿತೂರೀ ಕಾಗದವನ್ನು ಬರೆದು, ನವಾಬರಿಗೆ ಕುಮಕಿಯಾಗಿ ಬಂದಿದ್ದ ಮರಾಠೀ ಸರದಾರರ ಸಂಗಡ, ನನಗೆ ಈ ದವಲತ್ತನ್ನು ಕೊಡಿಸಿದರೆ ನಿಮಗೆ ಈ ನಮ್ಮ ಸೀಮೆಯಲ್ಲಿ ರೂಪಾಯಿಗೆ ೬ ಆಣೆ ಪ್ರಕಾರ ಕೊಡುತ್ತೇನೆಂದು ತಿಳಿಸಿದನು. ಈ ವರ್ತಮಾನವು ಅಬೂ ಮಹಮ್ಮದು ಮುಂತಾದ ಈ ೫ ಜನಗಳಿಗೂ ತಿಳಿದದ್ದರಿಂದ, ಅವರು ಅವನನ್ನು ಹಿಡಿತರಿಸಿ ಕಾಲಿಗೆ ಸಂಕೋಲೆಗಳನ್ನು ತೊಡಿಸಿ ಸಾವಂದಿ ದುರ್ಗಕ್ಕೆ ಕಳುಹಿಸಿದರು.

ಟೀಪೂ ಸುಲ್ತಾನನಿಗೆ ಅಧಿಕಾರ ಬಂದದ್ದು.—ಇಷ್ಟರಲ್ಲಿಯೇ ಟೀಪೂ ಸುಲ್ತಾನನು ಈ ವರ್ತಮಾನವನ್ನು ತಿಳಿಯದೆ, ಶೀಘ್ರವಾಗಿ ಬರಲು, ಅಬೂ ಮಹಮ್ಮದು ಮುಂತಾದ ೫ ಜನರೂ ನವಾಬರು ತೀರಿ ಹೋದ ವರ್ತಮಾನವನ್ನು ಟೀಪೂ ಸುಲ್ತಾನನಿಗೆ ರಹಸ್ಯವಾಗಿ ಹೇಳಿ, ವ್ಯಸನವನ್ನು ಸಮಾಧಾನ ಮಾಡಿ, ತಾವು ನಡೆಯಿಸಿದ ಕಾರ್ಯಗಳನ್ನೂ ನವಾಬರು ಹೇಳಿಯಿದ್ದ ಮಾತುಗಳನ್ನೂ ತಿಳಿಸಿ, ಅರ್ಕಾಟ ದಂಡಿನಲ್ಲಿ ಇದ್ದರು. ಟೀಪೂ

ಸುಲ್ತಾನನು ಧೊರೆಗಳ ಸನ್ನಿಧಿಯಿಂದ ಬಂದ ಸಿರೂಪದ ಅಭಿಪ್ರಾಯವನ್ನು ನೋಡಿಕೊಂಡು ತನ್ನ ಅಧಿಕಾರವನ್ನು ಸ್ಥಿರಪಡಿಸಿಕೊಂಡು, ಅಲ್ಲಿನ ಕೆಲಸಗಳನ್ನೆಲ್ಲಾ ಭದ್ರಪಡಿಸಿಕೊಂಡು, ಸೇನಾಸಮೇತನಾಗಿ ಶ್ರೀರಂಗಪಟ್ಟಣಕ್ಕೆ ಬಂದು, ಧೊರೆಗಳ ಭೇಟಿಯನ್ನು ಮಾಡಿಕೊಂಡು ಸನ್ಮಾನವನ್ನು ಪಡೆದು, ಕೋಲಾರಕ್ಕೆ ಕಳುಹಿಸಿದ್ದ ತನ್ನ ತಂದೆಯ ಶರೀರವನ್ನು ಶ್ರೀರಂಗಪಟ್ಟಣಕ್ಕೆ ತರಿಸಿ, ಎರಡು ಹೊಳೆಕೂಡಿರುವ ಲಾಲ್‌ಬಾಗ್ ತೋಟದಲ್ಲಿ ತಮ್ಮ ಜಾತಿಸಂಪ್ರದಾಯದಮೇರೆಗೆ ಗೋರಿಯನ್ನು ಮಾಡಿಸಿ, ಆ ಸ್ಥಳದಲ್ಲಿ ಪ್ರತಿದಿವಸವೂ ಫಕೀರರಿಗೆ ಅನ್ನೋದಕಗಳನ್ನು ಕೊಡುತ್ತಾ ೫ ವೇಳೆಗಳಲ್ಲಿಯೂ ನವಪತ್ತು ನಡೆಯುವಂತೆ ನಿಬಂಧನೆಮಾಡಿ, ತನ್ನ ತಂದೆಯಂತೆ ಸೀಮೆಯ ವಿಚಾರಣೆಯನ್ನು ಮಾಡುತ್ತಿದ್ದನು. ಸುಲ್ತಾನನು ಧೊರೆಗಳವರ ಮಾತುಶ್ರೀಯವರಾದ ಲಕ್ಷ್ಮಮ್ಮಣ್ಣಿಯವರು ಅಪ್ಪಣೆಕೊಟ್ಟು ಕಳುಹಿಸಿದಂತೆ ಧೊರೆಗಳಿಗೆ ಮೇಲೆಹೇಳಿರುವ ೨ ವಿವಾಹಗಳನ್ನು ಮಾಡಿಸಿ, ಕೆಲವುದಿವಸ ಹಿತವಾಗಿ ಸಕಲ ಕಾರ್ಯಗಳಲ್ಲಿಯೂ ಜಾಗರೂಕನಾಗಿ ಇದ್ದನು. ಹೀಗಿರುವಲ್ಲಿ ೨ನೇ ಪತ್ನಿಯವರಾದ ಕೆಂಪುದೇವಾಜಮ್ಮಣ್ಣಿಯವರು ಒಬ್ಬ ಪುತ್ರನನ್ನು ಪಡೆದು ಆ ಶಿಶುಸಹಿತವಾಗಿ ತೀರಿಹೋದರು. ಅನಂತರದಲ್ಲಿ ಧೊರೆಗಳು ಬಹುವ್ಯಸನಾಕ್ರಾಂತರಾಗಿ ಇದ್ದು, ಜನಗಳು ಬಿನ್ನೈಸಿಕೊಂಡಂತೆ ಮೇಲೆ ಹೇಳಿರುವ ಮೇರೆಗೆ ಪಂಚ ಕಲ್ಯಾಣ ವಿವಾಹವನ್ನು ಮಾಡಿಕೊಂಡು ಪತ್ನಿಯರೊಡನೆ ಸುಖವಾಗಿದ್ದರು.

ಟೀಪೂ ಸುಲ್ತಾನನ ದುಷ್ಟತ್ವದ ವಿಚಾರ:—ಸರ್ವಾಧಿಕಾರವನ್ನು ಮಾಡುತ್ತಿದ್ದ ಟೀಪೂಸುಲ್ತಾನನು ಕೆಲವುದಿವಸ ತಮ್ಮ ತಂದೆ ನಡೆದುಕೊಳ್ಳುತ್ತಾ ಇದ್ದ ಮೇರೆಗೆ ನವರಾತ್ರಿ ಮುಂತಾದ ಉತ್ಸವಗಳಲ್ಲಿ ಧೊರೆಗಳವರ ಸನ್ನಿಧಿಯಲ್ಲಿ ಸ್ವಾಮಿಭೃತ್ಯನ್ಯಾಯದಿಂದ ನಡೆದುಕೊಳ್ಳುತ್ತಾ ಇದ್ದನು. ಕೆಲವು ದಿನಗಳಾದಮೇಲೆ ಟೀಪೂ ಸುಲ್ತಾನನು ತನ್ನ ತಂದೆ ಹೇಳಿಯಿದ್ದ ಕೀರ್ತಿಪ್ರದವಾದ ಮಾತುಗಳನ್ನೆಲ್ಲಾ ಮರೆತು, ಮುಂದೆ ಕೆಟ್ಟು ಹೋಗತಕ್ಕ ವಿಚಾರವನ್ನು ತಿಳಿದುಕೊಳ್ಳದೆ, ಯುಕ್ತಾಯುಕ್ತ ವಿಚಾರವನ್ನು ಮಾಡದೆ, ಬಲೈಶ್ವರ್ಯಮದದಿಂದ ಮತ್ತನಾಗಿ, ದುಷ್ಟಜನರ ದುರಾಲೋಚನೆಗೆ ಒಳಗಾಗಿ, ಸಜ್ಜನರನ್ನು ಬಾಧಿಸುತ್ತಾ, ವರ್ಣಾಶ್ರಮ ಧರ್ಮಗ

ಳನ್ನು ಕೆಡಿಸುತ್ತಾ, ಉತ್ತಮವಾದ ಎಲ್ಲಾ ಜಾತೀ ಜನಗಳನ್ನೂ ತನ್ನ ಜಾತಿಗೆ ಸೇರಿಸಿಕೊಳ್ಳಬೇಕೆಂದು ಕೆಲವು ಜನರನ್ನು ಚೇಲಿಗಳನ್ನಾಗಿ ಮಾಡಿಕೊಂಡನು; ದೇವದಾಯ ಬ್ರಹ್ಮದಾಯಗಳನ್ನೂ ಸೀಮೋಮೇಲೆ ಇರುವ ದೇವರ ವಸ್ತ್ರಾಭರಣಗಳನ್ನೂ ತೆಗೆದುಕೊಂಡು ಆ ದೇವರನ್ನು ಅಂಗಭಂಗಮಾಡಿದನು; ಗುಡಿ ಗೋಪುರಗಳನ್ನೂ ತಟಾಕಾರಾಮಗಳನ್ನೂ ಕಟ್ಟೆ ಕಾಲುವೆ ಸೇತುವೆ ಸೋಪಾನ ಮುಂತಾದ ಅನೇಕ ಧರ್ಮಕಾರ್ಯಗಳನ್ನೂ ನಾಶಮಾಡಿದನು; ದುಷ್ಟರಾದ ತನ್ನ ಸ್ವಜಾತಿಜನರನ್ನೇ ಪ್ರಾಬಲ್ಯಕ್ಕೆ ತಂದು, ಅರಸುಗಳು ಮುಂತಾದ ಉತ್ತಮವರ್ಣಾಶ್ರಮ ಜನಗಳ ಗ್ರಾಮ, ಭೂಮಿ ಸಂಬಳ ಮುಂತಾದ ಜೀವನಗಳನ್ನು ತಪ್ಪಿಸಿ, ದೇಶಭ್ರಷ್ಟರನ್ನಾಗಿ ಮಾಡಿದನು; ತನ್ನಲ್ಲಿ ಅಧಿಕಾರವನ್ನು ಮಾಡುತ್ತಲಿರುವ ಜನಗಳನ್ನು ಅವರವರ ಅಪರಾಧಾನುಗುಣವಾಗಿ ಶಿಕ್ಷೆಯನ್ನು ಮಾಡಿಸದೆ, ಅವರನ್ನು ಅಧಿಕವಾಗಿ ಅಂಗಭಂಗವನ್ನು ಮಾಡಿಸುತ್ತಲೂ ಪ್ರಾಣಾಂತ ಶಿಕ್ಷೆಯನ್ನು ಮಾಡಿಸುತ್ತಲೂ ಇದ್ದನು. ಈ ರೀತಿಯಾಗಿ ಟೀಪೂಸುಲ್ತಾನನು ದುಷ್ಟರನ್ನು ಪ್ರಾಬಲ್ಯಕ್ಕೆ ತಂದು, ಸಜ್ಜನರಿಗೆ ಅನೇಕ ಬಾಧೆಗಳನ್ನು ಉಂಟುಮಾಡಿ, ಧೊರೆಗಳ ಸಿಂಹಾಸನದಂತೆ ಅನೇಕ ನವರತ್ನಗಳಿಂದ ವ್ಯಾಘ್ರಪೀಠವನ್ನು ಮಾಡಿಸಿಕೊಂಡು, ಅದರ ಮೇಲೆ ಕೂತು ತಾನೆ ಬಾದಷಹಾ ನೆಂಬದಾಗಿ ಅನ್ನಿಸಿಕೊಳ್ಳಬೇಕೆಂಬ ಕುತೂಹಲದಿಂದ ಇದ್ದನು.

ಶಾ॥ ೧೭೦೪-೫ನೇ ಶುಭಕೃತು ಶೋಭಕೃತು ಸಂವತ್ಸರಗಳಲ್ಲಿ ತಿರುಮಲರಾಯರೂ ಇವರ ಕಡೆಯವರೂ ಕರ್ನಲ್ ಲ್ಯಾಂಗ್ ಸಾಹೇಬರೊಡನೆ ಕುಂಪಣೀ ಸೈನ್ಯದಲ್ಲಿ ಸೇರಿಕೊಂಡು ಪ್ರಯಾಣಮಾಡಿ ಬಹು ಧನವ್ಯಯ ಮಾಡಿ ಕುಂಪಣೀ ಸೈನ್ಯಕ್ಕೆ ಸರಬರಾಜು ಮಾಡಿ ಅನೇಕ ಪಾಳ್ಯಗಾರರನ್ನೂ ಅಮಲ್‌ದಾರರನ್ನೂ ಕುಮಕಿಗೆ ಸೇರಿಸಿಕೊಂಡರು. ಸನ್ ೧೭೮೩ನೇ ಇಸವಿ ಏಪ್ರಿಲ್ ತಾ॥ ೨ರಲ್ಲಿ ಕರೂರು ಕೋಟೆಯನ್ನು ಇಂಗ್ಲಿಷರು ಹಿಡಿದು ಅದರಮೇಲೆ ಮಹೀಶೂರ ಬಾವಟವನ್ನು ಹಾಕಿದರು. ಈ ಕರೂರಿನ ಆಧಿಪತ್ಯವು ತಿರುಮಲರಾಯರ ವಶಕ್ಕೆ ಒಪ್ಪಿಸಲ್ಪಟ್ಟಿತು. ಅನಂತರದಲ್ಲಿ ಇಂಗ್ಲಿಷ್‌ನವರು ಆವರಾಂಕುರ್ಚ್ಚಿ, ದಿಂಡುಗಲ್ಲು, ಮೊದಲಾದ ಪ್ರಾಂತ್ಯಗಳನ್ನು ತೆಗೆದುಕೊಂಡರು. ಅನಂತರದಲ್ಲಿ ಲ್ಯಾಂಗ್ ಸಾಹೇಬರಿಗೆ ಬದಲಾಗಿ ಕರ್ನಲ್ ಫುಲ್ಲಾರ್ಟರ್ ಸಾಹೇಬರವರು ಬಂದರು.

ಕರ್ನಲ್ ಫುಲ್ಲಾರ್ಟರ್ ಸಾಹೇಬರವರು ಸೈನ್ಯಾಧಿಪತ್ಯಕ್ಕೆ ಬಂದ ಕೆಲವು ದಿವಸಗಳಮೇಲೆ ಶ್ರೀರಂಗಪಟ್ಟಣದಲ್ಲಿ ಅಂಚೇ ಶಾಮಯ್ಯ ಮುಂತಾದವರು ಮಾಡಿದ್ದ ಪಿತೂರಿ

ಯನ್ನು, ಪೂರ್ತಿಯಾಗುವವರಕ್ಕೆ ಮುಂಚಿತವಾಗಿಯೇ ಟೀಪುವಿನ ಕಡೆ ಅಧಿಕಾರಿಗಳಿಗೆ ಕ್ಷುದ್ರ ಜನಗಳು ತಿಳಿಯಪಡಿಸಿದ್ದರಿಂದ, ಶ್ರೀರಂಗಪಟ್ಟಣದ ಕಿಲ್ಲೇದಾರನು ಆಗ ಅದಕ್ಕೆ ಸಂಬಂಧಪಟ್ಟ ಸರ್ವ ಜನಗಳನ್ನೂ ಬೈದಿನಲ್ಲಿ ಇರಿಸಿ, ಅನೇಕರನ್ನು ಆನೇಕಾಲಿಗೆ ಕಟ್ಟಿ ಎಳಿಸಿ ಕೊಲ್ಲಿಸಿ, ಮಂಗಳೂರು ಪ್ರಾಂತ್ಯಕ್ಕೆ ಹೋಗಿದ್ದ ಟೀಪುವಿಗೆ ಈ ಸಂಗತಿಯನ್ನೆಲ್ಲಾ ಬರೆದು, ಈ ಬೈದಿಗಳಲ್ಲಿ ಮುಖ್ಯರಾದವರ ಶಿಕ್ಷೆಗೋಸ್ಕರ ಅವನ ಅಭಿಪ್ರಾಯವನ್ನು ಅಪೇಕ್ಷಿಸಿದನು. ಟೀಪುವು ಆ ಜನಗಳನ್ನೆಲ್ಲಾ ಕೊಂದುಹಾಕುವಂತೆ ಹುಕುಂ ಮಾಡಿ, ಅಂಚೇ ಶಾಮಯ್ಯನನ್ನೂ ಇವನ ತಮ್ಮ ರಂಗಯ್ಯನನ್ನೂ ಕಬ್ಬಿಣದ ಪಂಜರದಲ್ಲಿ ಇಟ್ಟು ಸಂಹರಿಸಿದನು. ಈ ಕೊಲೆ ನಡೆದಾಗ ಶ್ರೀರಂಗಪಟ್ಟಣದಲ್ಲಿ ಸಿಕ್ಕಿಕೊಂಡಿದ್ದ ನಾರಾಯಣರಾಯರು ಅತ್ಯಂತ ಸಾಹಸ ಕೃತ್ಯದಿಂದ ತಮಗೆ ಪ್ರಾಪ್ತವಾಗಬೇಕಾಗಿದ್ದ ಮರಣವನ್ನು ತಪ್ಪಿಸಿಕೊಂಡು ಕುಂಪಣೀ ಫೌಜಿನಲ್ಲಿದ್ದ ತಮ್ಮ ಅಣ್ಣಂದಿರಾದ ತಿರುಮಲರಾಯರವರನ್ನು ಸೇರಿಕೊಂಡರು.

ಟೀಪೂ ಸುಲ್ತಾನನು ಮಂಗಳೂರಿಗೆ ಮುತ್ತಿಗೆ ಹಾಕಿಕೊಂಡಿದ್ದಾಗ ಕರ್ನಲ್ ಫುಲ್ಲಾರ್ಟನ್ ಸಾಹೇಬರವರು ಪಾಲಘಾಟ ಕೊಯಮುತ್ತೂರು ಪ್ರಾಂತ್ಯಗಳನ್ನು ಜಯಿಸಿ, ಶ್ರೀರಂಗಪಟ್ಟಣದ ಮೇಲೆ ದಂಡೆತ್ತಿ ಬರುವಷ್ಟರಲ್ಲಿಯೇ, ಸುಲ್ತಾನನು ಸಂಧಿ ಮಾಡಿಕೊಳ್ಳುವದಕ್ಕಾಗಿ ಮದರಾಸು ಗವರ್ನರವರಿಗೆ ಹೇಳಿ ಕಳುಹಿಸಿದನು. ಆದಕಾರಣ ಆ ಗವರ್ನರ್ ಸಾಹೇಬರು ಯುದ್ಧ ನಿಲ್ಲಿಸತಕ್ಕದ್ದೆಂದು ಅಜ್ಞಾಪಿಸಿದರು. ಅದೇ ಮೇರೆಗೆ ಸನ್ ೧೭೮೪ನೇ ಇಸವಿಯಲ್ಲಿ ಎರಡು ಪಕ್ಷದವರಿಗೂ ಸಮಾಧಾನವಾಯಿತು.

ಅನಂತರದಲ್ಲಿ ತಿರುಮಲರಾಯರು ಟೀಪುವಿಗೆ ವಿರೋಧವಾಗಿ ಮೇಲ್ಕಂಡಂತೆ ಇಂಗ್ಲಿಷರ ಕಡೆ ಸೇರಿಕೊಂಡು ನಡಿಸಿದ ವೃತ್ತಾಂತವನ್ನೆಲ್ಲಾ ಯವನಾಧಿಕಾರಿಗಳು ಟೀಪುವಿಗೆ ತಿಳಿಯಪಡಿಸಲು, ಆಗ ಟೀಪುವು ಆಗ್ರಹವುಳ್ಳವನಾಗಿ ತಿರುಮಲರಾಯರ ಬಂಧುವರ್ಗಗಳಲ್ಲಿ ಅನೇಕರನ್ನು ಕೊಂದು, ಅವರ ಮನೆಗಳನ್ನು ಲೂಟಿ ಮಾಡಿಸಿ, ಅವರ ಜಹಗೀರಾದ ಮಂಡ್ಯವನ್ನು ಜಪ್ತಿ ಮಾಡಿಕೊಂಡನು. ಈ ಕಾರಣದಿಂದಲೇ ಟೀಪುವು ಮಹಾಮಾತುಶ್ರೀಯವರ ಮೇಲೆ ಆಗ್ರಹ ಮಾಡಲು, ಮಹಾ ಮಾತುಶ್ರೀಯವರು ತಮ್ಮ ಪ್ರಾಣವನ್ನು ಉಳಿಸಿಕೊಳ್ಳುವ ಉದ್ದಿಶ್ಯ, ಟೀಪೂ ಸುಲ್ತಾನನ ಕಡೆಯವರು ಅಪೇಕ್ಷಿಸಿದ ಮೇರೆಗೆ, ತಿರುಮಲರಾಯರನ್ನು ತಾವು ಕಾಣೆವೆಂದು ಬರೆದುಕೊಟ್ಟು, ತಮ್ಮ ಪ್ರಾಣವನ್ನು ಉಳಿಸಿಕೊಂಡರು.

ಸಮಾಧಾನವಾದ ಅನಂತರದಲ್ಲಿ ಯುದ್ಧದ ಬೈದಿಗಳನ್ನು ಪರಸ್ಪರ ಬದಲಾಯಿಸುವ ಕಾಲದಲ್ಲಿ, ಟೀಪೂ ಸುಲ್ತಾನನು ಈ ತಿರುಮಲರಾಯರನ್ನು ಹಿಡಿದುಕೊಂಡು ಬರುವಂತೆ ಜನರನ್ನು ಕಳುಹಿಸಿದನು. ಆಗ ತಿರುಮಲರಾಯರು ಈ ವಿಚಾರವನ್ನು ತಿಳಿದು ಭೀತರಾಗಿ ಮಲಬಾರ್ ತೀರಕ್ಕೆ ಓಡಿಹೋದರು. ಅಲ್ಲಿ ಚಿರಕಾಲ ಇದ್ದು ಬಹು ಬಾಧೆಯಿಲೆ

ಯಾಗಿ ತಂಜಾವೂರಿಗೆ ಬಂದು ತಂಜಾವೂರ ರೆಸಿಡೆಂಟ್ ಡಾ॥ ಹಡಲ್‌ಸ್ಟನ್ ಸಾಹೇಬರಿಗೆ ತಮಗೆ ಪ್ರಾಪ್ತವಾದ ಕಷ್ಟಗಳನ್ನೆಲ್ಲಾ ತಿಳಿಸಲು, ಅವರು ಮೇಲೆ ಹೇಳಿದ ಶ್ರೀರಂಗ ಪಟ್ಟಣದಲ್ಲಿ ನಡೆದ ಕೊಲೆಯಲ್ಲಿ ಮೃತರಾದವರ ಮನೆತನದವರ ಜೀವನಾರ್ಥವಾಗಿ, ಈ ಕೆಳಗೆ ಕಂಡಂತೆ ಶಿಫಾರಸು ಮಾಡಿ, ಮೇಲಕ್ಕೆ ಬರೆದು, ತಿಂಗಳಿಗೆ ೨೦ ವರಹಾ ತಿರುಮಲ ರಾಯರವರ ವಶಕ್ಕೆ ಕೊಡಿಸುತ್ತಾ ಬಂದರು.

ಸನ್ ೧೭೮೫ನೇ ಇಸವಿ ಆಗಸ್ಟ್ ೧೧ರಲ್ಲಿ, ಡಾ॥ ಹಡಲ್‌ಸ್ಟನ್ ಸಾಹೇಬರು ಫೋರ್ಟ್ ಸೆಂಟ್‌ಜಾರ್ಜ್ ಕೌನ್ಸಲ್ ಗವರ್ನರ್, ಮತ್ತು ಪ್ರೆಸಿಡೆಂಟರಾದ ಹಾನರಬಲ್ ಅಲೆಗ್ಸಾಂಡರ್ ಡೇವಿಡ್‌ಸನ್ ಸಾಹೇಬರವರಿಗೆ ಬರೆದ ಕಾಗದದ ಎಕ್ಸ್‌ಟ್ರ್ಯಾಕ್ಟ್:—

"ಕರಾರಿನ ೧೨ನೇ ಕಲಂನಲ್ಲಿ ಹೇಳುವದೇನೆಂದರೆ 'ಕುಂಪಣಿಯವರು ಹೈದರ್ ನಾಯಕನನ್ನು ಜಯಿಸಲಾರದೆ ಹೋಗಿ ಅವನೊಡನೆ ಸಮಾಧಾನ ಮಾಡಿಕೊಂಡ ಪಕ್ಷ ದಲ್ಲಿ, ನಮ್ಮನ್ನೂ ನಮ್ಮೊಡನೆ ಸೇರಬಹುದಾದ ಎಲ್ಲಾ ಜನಗಳನ್ನೂ ಕುಂಪಣಿಯವರು ತಮ್ಮ ಸಂರಕ್ಷಣೆಯಲ್ಲಿ ಇಟ್ಟುಕೊಳ್ಳಬೇಕು. ಮತ್ತು ನಮ್ಮನ್ನೂ ನಮ್ಮ ಮನೆತನ ದವರೆಲ್ಲರನ್ನೂ ಎಂದೆಂದಿಗೂ ಸಂರಕ್ಷಣೆ ಮಾಡುತ್ತಾ ಬರಬೇಕು. ಇದಲ್ಲದೆ ಹಿಂದೆ ಹೇಳಿದ ಕೆಲಸಗಳಿಗಾಗಿ ನಮ್ಮ ರಾಣಿಯವರಿಗಾಗಿ ಅವರಿಗಾಗಿ ನಾವು ವೆಚ್ಚ ಮಾಡಬಹು ದಾದ ಹಣವನ್ನು ನಮಗೆ ಪುನಃ ವಾಪಸು ಕೊಡುವದಕ್ಕೆ ಬದ್ಧರಾಗಬೇಕು' ಹೀಗೆ ಇವ ರಿಗೂ ಖಾತರು ಆದದ್ದರಿಂದ, ಈಗಿನ ಮಹೀಶೂರ ರಾಜ್ಯಭಾರವನ್ನು ನಿರ್ಮೂಲಮಾಡಬೇ ಕೆಂಬ ಕೋರಿಕೆಯಿಂದ ಇವರು ತಮ್ಮ ಸರ್ವಸ್ವವನ್ನೂ ಕಳೆದುಕೊಂಡು ಇರುತ್ತಾರೆ."

"ರಾಣೀಸಾಹೇಬರು ಮತ್ತು ಪೂರ್ವದ ಮಹೀಶೂರು ಮನೆತನದ ಕಡೆಯವರ ಪಕ್ಷವಾಗಿ ಉದ್ದೇಶವಾದ ಪಿತೂರಿಯು ತಿಳಿದಮೇಲೆ, ಶ್ರೀರಂಗಪಟ್ಟಣದಲ್ಲಿ ನಡೆದ ಕೊಲೆ ಯನ್ನು ಇವರ ತಮ್ಮಂದಿರೂ ಮತ್ತು ಕೆಲವು ಬಂಧುಗಳೂ ತಪ್ಪಿಸಿಕೊಂಡರು."

ಅನಂತರದಲ್ಲಿ ತಿರುಮಲರಾಯರೂ ನಾರಾಯಣರಾಯರೂ ಮೇಲ್ಕಂಡ ೨೦ ವರಹ ಗಳನ್ನು ತೆಗೆದುಕೊಂಡು, ತಂಜಾವೂರು ಮಹಾರಾಜರವರ ಆಶ್ರಯದಲ್ಲಿ ಇದ್ದುಕೊಂಡು, ಮೇಲ್ಕಂಡ ಅನಾಥರಾದ ಜನರನ್ನು ಕಾಪಾಡಿಕೊಂಡು ಅಲ್ಲಿಯೇ ೫ ವರ್ಷ ವಾಸವಾಗಿ ಇದ್ದರು.

ಸನ್ ೧೭೯೦ನೇ ಇಸವಿಯಲ್ಲಿ ಟೀಪೂ ಸುಲ್ತಾನನಿಗೂ ಕುಂಪಣಿಯವರಿಗೂ ಪುನಃ ಯುದ್ಧವು ಪ್ರಾಪ್ತವಾದಾಗ ಮದರಾಸ್ ಗವರ್ನರ್ ಮತ್ತು ಜನರಲ್ ಇನ್ ಚೀಫರವರಾದ ಲಾರ್ಡ್ ಮೆಡೋಸ್ ಸರದಾರರು ಸೈನ್ಯಾಧಿಪತ್ಯವನ್ನು ವಹಿಸಲು ತಂಜಾವೂರಿಗೆ ದಯ ಮಾಡಿಸಿದರು. ಆ ಕಾಲದಲ್ಲಿ ಮಹೀಶೂರ ತಿರುಮಲರಾಯರ ಬುದ್ಧಿಕೌಶಲ್ಯವನ್ನೂ ಮಹೀಶೂರ ಸಂಸ್ಥಾನದ ವಿಷಯದಲ್ಲಿ ಇವರಿಗಿರುವ ತಿಳುವಳಿಕೆಯನ್ನೂ ಮಹೀಶೂರ

ಹಿಂದೂ ಮಹಾರಾಜರವರ ಮನೆತನದವರಿಗೂ ಇವರಿಗೂ ಇರತಕ್ಕ ಸಂಬಂಧ ಮುಂತಾದವುಗಳನ್ನೂ ರೆವರೆಂಡ್ ಷ್ವಾರ್ಟ್ಸ್ ಸಾಹೇಬರವರು ಆ ಸರದಾರರಿಗೆ ತಿಳಿಯಪಡಿಸಲು, ಅವರು ಬಹಳ ಸಂತೋಷಯುಕ್ತರಾಗಿ, ಮಹಾಮಾತುಶ್ರೀ ಲಕ್ಷ್ಮಮ್ಮಣ್ಣಿಯವರು ತಮಗೆ ಬರೆಯಿಸಿ ಕಳುಹಿಸಿಯಿದ್ದ ಕಾಗದವನ್ನು ನೋಡಿಕೊಂಡು, ೧೭೯೦ನೇ ಇಸವಿ ಮೇ ತಿಂಗಳಿಗೆ ಸರಿಯಾದ ಸಾಧಾರಣ ಸಂವತ್ಸರದ ವೈಶಾಖ ಶುದ್ಧ ೧೧ಯಲ್ಲಿ ಉತ್ತರವನ್ನು ಬರೆದು ಕಳುಹಿಸಿದರು. ಏನಂದರೆ :—

ಮಹೀಶೂರ ಸಂಸ್ಥಾನಕ್ಕೆ ಅಧಿಪತಿಯಾದ ಮಾತುಶ್ರೀ
ಲಕ್ಷ್ಮಮ್ಮಣ್ಣಿ ರಾಣೀಸಾಹೇಬರಿಗೆ.

ಚೆನ್ನಪಟ್ಟಣದ ಗವರ್ನರ್ ಜನರಲ್ ಮೆಡೋಸ್ ಮಾಡುವ ಬಹಳ ಸಲಾಂ, ತಮ್ಮ ಕಾಗದವನ್ನು ತಮ್ಮ ರಾಯಭಾರಿಗಳಾದ ತಿರುಮಲರಾಯರು ಒಪ್ಪಿಸಿದರು. ಅದರಲ್ಲಿರುವ ಅಭಿಪ್ರಾಯವನ್ನು ತಿಳಿದುಕೊಂಡೆನು. ಟೀಪುವು ಯಾವಾಗ ಸತ್ತು ರಾಜ್ಯವನ್ನು ಬಿಟ್ಟು ಹೋಗುವನೋ ಭಗವಂತ ಬಲ್ಲ. ಜಯಪ್ರದವು ಭಗವಂತನ ಅಧೀನವಾಗಿದೆ. ನ್ಯಾಯವಾದ ಅಧಿಪತಿಗೆ ರಾಜ್ಯವನ್ನು ವಾಪಸು ಕೊಡಿಸುವ ಶಕ್ತಿಯನ್ನು ದೇವರು ನಮಗೆ ಕೊಟ್ಟರೆ, ವಾಸ್ತವ್ಯವಾಗಿ ಬಹಳ ಸಂತೋಷಪಡುತ್ತೇವೆ. ರಾಜ್ಯವನ್ನು ವಿಭಾಗ ಮಾಡುವ ವಿಷಯವನ್ನು ಈಗ ನಾವು ಚರ್ಚೆ ಮಾಡಲಾರೆವು. ನಿಜಾಮರವರೂ ಮರಾಟಿಯವರೂ ನಮ್ಮ ಸ್ನೇಹಿತರಾಗಿ ಇರುವದರಿಂದ ಆ ಅಂಶವನ್ನು ನಾವುಗಳೇ ತೀರ್ಮಾನ ಮಾಡಲಾರೆವು. ತಾವು ಯುದ್ಧದ ಖರ್ಚನ್ನು ವಹಿಸತಕ್ಕದ್ದು ವಿಹಿತವಾಗಿದೆ. ಸೈನ್ಯಗಳಿಗೆ ಇನಾಮು ಕೊಡುವಂತೆ ತಾವು ವಾಗ್ದಾನ ಮಾಡುವದು ಬಹಳ ಉತ್ತಮವಾಗಿದೆ. ನಾವು ರಾಜ್ಯವನ್ನು ಹಿಂತಿರುಗಿಸಿ ಕೊಟ್ಟು ಎಲ್ಲಾ ಕ್ರಮಪಡಿಸಿದರೆ, ನಾವು ಒಂದು ಶ್ರೇಯಸ್ಕರವಾದ ಕೆಲಸವನ್ನು ಮಾಡಿದೆವೆಂದು ಸಂತೋಷಪಡುತ್ತೇವೆ. ನಮ್ಮ ಕೈಲಾದದ್ದೆಲ್ಲಾ ನಾವು ಮಾಡುತ್ತೇವೆ. ದೇವರು ಜಯವನ್ನು ಕೊಡಬೇಕು. ಇದರಮೇಲೆ ಬರೆಯತಕ್ಕದ್ದೇನಿದೆ ?

(ವಿಲ್ಲಿಯಂ ಮೆಡೋಸ್ ಎಂದು ಇಂಗ್ಲಿಷ್ ಸೈನಿದೆ).

ಈ ರೀತಿಯಾಗಿ ಲಾರ್ಡ್ ಮೆಡೋಸ್ ಸಾಹೇಬರವರು ಕಾಗದವನ್ನು ಬರೆದು ಕೊಟ್ಟು, ಮಹಾ ಮಾತುಶ್ರೀ ಲಕ್ಷ್ಮಮ್ಮಣ್ಣಿಯವರಿಗೆ ಆ ಕಾಗದವನ್ನು ಕಳುಹಿಸುವಂತೆ ತಿರುಮಲ ರಾಯರಿಗೆ ಅಪ್ಪಣೆಕೊಡಿಸಿದರು. ತಿರುಮಲರಾಯರು ತಮ್ಮ 'ಗೂಢಚಾರರ' ಮೂಲಕ ಅದನ್ನು ಮಾತುಶ್ರೀ ಲಕ್ಷ್ಮಮ್ಮಣ್ಣಿಯವರಿಗೆ ಕಳುಹಿಸಿ, ಆ ಸರದಾರರ ಇಷ್ಟಾನುಸಾರವಾಗಿ ಕಂಪಣೀ ಸೈನ್ಯದೊಡನೆ ಕೊಯಮುತ್ತೂರಿಗೆ ಪ್ರಯಾಣ ಮಾಡಿದರು. ಈ ಪ್ರಾಂತ್ಯವು ನಿರ್ಜನ ಪ್ರದೇಶವಾಗಿ ಹೋಗಿ ಇದ್ದದ್ದರಿಂದ, ಅದನ್ನು ಜನಭರಿತವಾಗಿ ಮಾಡುವದಕ್ಕಾ

ಗಿಯೂ, ಕುಂಪಣೀ ಸೈನ್ಯಕ್ಕೆ ಒಳ್ಳೇ ಸರಪರಾಜಿಗೆ ಆಸ್ಪದವಾಗುವಂತೆ ಮಾಡುವದಕ್ಕಾಗಿಯೂ, ಕುಂಪಣಿಯವರು ಈ ಪ್ರಾಂತ್ಯದ ಅಮಲ್‌ದಾರ್ ಮತ್ತು ಮ್ಯಾನೇಜರ್ ಎಂಬ ಅಧಿಕಾರವನ್ನು ತಿರುಮಲರಾಯರಿಗೆ ವಹಿಸಿದರು. ತಿರುಮಲರಾಯರು ತಮ್ಮ ಸಾಮರ್ಥ್ಯದಿಂದಲೂ ತಮ್ಮ ಶ್ಲಾಘ್ಯವಾದ ನಡತೆಯಿಂದಲೂ ಓಡಿ ಹೋಗಿದ್ದ ನಿವಾಸಿಗಳನ್ನು ಪುನಃ ಅಲ್ಲಿಗೆ ಬರುವಂತೆ ಮಾಡಿ, ಆ ಪ್ರಾಂತ್ಯವನ್ನು ಆಬಾದು ಮಾಡಿದರು. ಇದಲ್ಲದೆ ಕುಂಪಣೀ ಸೈನ್ಯಕ್ಕೆ ವಿಶೇಷ ಸರಪರಾಜಿಗೆ ಯೋಗ್ಯವಾಗುವಂತೆ ಈ ಸ್ಥಳವನ್ನು ಫಲವತ್ತಿನ ಸ್ಥಿತಿಗೆ ತಂದರು. ಕುಂಪಣಿಯವರು ಕೊಯಮತ್ತೂರಿಗೆ ಕೋಟೆ ಕಟ್ಟಿ, ಅಲ್ಲಿ ಒಂದು ಆಸ್ಪತ್ರಿಯನ್ನು ಸ್ಥಾಪಿಸಿದರು. ಈ ಯುದ್ಧದಲ್ಲಿಯೂ ತಿರುಮಲರಾಯರು ಪಾಳ್ಯಗಾರರನ್ನು ಸೇರಿಸಿಕೊಂಡು, ತಮ್ಮ ಸ್ವಂತ ಶಿಬ್ಬಂದಿಯನ್ನು ಇಟ್ಟುಕೊಂಡು, ಕರೂರಿನಿಂದ ಪುಲಿಕಾಟ್ ಚೇರೀ ವರಿಗಿನ ಪ್ರಾಂತ್ಯಗಳನ್ನು ಕುಂಪಣಿಯವರು ಸ್ವಾಧೀನಕ್ಕೆ ತೆಗೆದುಕೊಂಡಾಗ, ಅವರಲ್ಲಿ ಸೇವೆ ಮಾಡಿ, ಕುಂಪಣೀ ಸೈನ್ಯಕ್ಕೆ ಸರಪರಾಜು ಮಾಡಿದರು.

ಇಂಗ್ಲಿಷ್ ಸೈನ್ಯವು ದಿಂಡಿಗಲ್ಲು ಪಾಲುಘಾಟುಗಳಿಗೆ ಪ್ರಯಾಣ ಮಾಡುವ ಕಾಲದಲ್ಲಿ ಟೀಪುವು ಕೊಯಮುತ್ತೂರಿಗೆ ಬಂದನು. ಆಗ ಇವನನ್ನು ಬಾರಾಮಹಲಿಗೆ ಬೆನ್ನಟ್ಟಿಕೊಂಡು ಹೋಗುವಾಗ, ತಿರುಮಲರಾಯರು ಸಹಕಾರಿಗಳಾಗಿ ಇದ್ದರು. ಇವರ ತಮ್ಮಂದಿರಾದ ನಾರಾಯಣರಾಯರು ಈ ಯುದ್ಧದಲ್ಲಿ ತಮ್ಮ ಅಣ್ಣಂದಿರ ಇಷ್ಟಾನುಸಾರವಾಗಿ ಕೆಲಸಗಳನ್ನು ನೆರವೇರಿಸುತ್ತಿದ್ದರು. ತಿರುಮಲರಾಯರಿಗೆ ಕೊಯಮುತ್ತೂರು ವಾಸಸ್ಥರಿಂದ ಸಂಕಟವು ಪ್ರಾಪ್ತವಾಗುವದೆಂದು ತಿಳಿದು, ನಾರಾಯಣರಾಯರು ಮದರಾಸು ಗವರ್ನಮೆಂಟಿಗೆ ತಮ್ಮ ಅಣ್ಣಂದಿರ ಪಕ್ಷವಾಗಿ ೨ ಅರ್ಜಿಗಳನ್ನು ಬರೆದುಕೊಂಡ ಮೇಲೆ ಅವುಗಳ ಮೇಲೆ ಹುಟ್ಟಿದ ಹುಕುಂ ಏನಂದರೆ:—

(ಸರ್ಕಾರದಿಂದ ಕ್ರಮವಾಗಿ ಸರ್ಟಿಫೈ ಆಗಿರುವ ಇಂಗ್ಲಿಷ್ ಅರ್ಜೀ ನಕಲಿನ ತರ್ಜುಮೆ.)

ಕೊಯಮುತ್ತೂರು ಕಲೆಕ್ಟರ್ ಮೆ॥ ಕಾರ್ಬೆಟ್ ಸಾಹೇಬರಿಗೆ.

ತಿರುಮಲರಾಯರ ವಿಷಯವಾದ ರೆವಿನ್ಯೂ ಬೋರ್ಡಿಗೆ ಕೊಡಲ್ಪಟ್ಟ ಇದರಲ್ಲಿ ಗರ್ಭೀಕರಿಸಿ ಇರುವ ಎರಡು ಅರ್ಜಿಗಳನ್ನು, ಪ್ರೆಸಿಡೆಂಟ್ ಮೆಂಬರುಗಳಿಂದ ನಿಮ್ಮ ತಿಳುವಳಿಕೆಬಗ್ಯೆ ಕಳುಹಿಸುವದಕ್ಕೂ, ಮತ್ತು ನಿಮಗೆ ಅವಶ್ಯಕವಾಗಿ ಇರುವ ವಿವರಣೆಗಳನ್ನು ಕೊಡುವದಕ್ಕೂ ನನಗೆ ಆಜ್ಞೆ ಆಗಿದೆ. ಕಳೆದ ೨೬ನೇ ತಾರೀಖಿನಲ್ಲಿ ತಿರುಮಲರಾಯರ ವಿಷಯವಾಗಿ ಹುಕುಂಗಳು ತಮಗೆ ಕಳುಹಿಸಲ್ಪಟ್ಟವು. ಅವುಗಳನ್ನು ನೀವು ಕ್ರಮವಾಗಿ ಚಲಾವಣೆಯಲ್ಲಿ ತಂದಿರಬಹುದೆಂಬದಾಗಿಯೂ; ಮತ್ತು ವಾಸಸ್ಥರಿಂದ ತಮಗೆ ಬಹಳ ತೊಂದರೆ ಸಂಭವಿಸುವಸಂಬಧವಾಗಿ ತಿರುಮಲರಾಯರು ಕೇಳಿ

ಕೊಂಡಾಗ, ಅವರಿಗೆ ಅವಶ್ಯವಾದ ರಕ್ಷಣೆಯನ್ನು ಮಾಡುವದರಲ್ಲಿ ತಾವು ತಪ್ಪಿಹೋಗೆ ಲಿಲ್ಲವೆಂಬದಾಗಿಯೂ ಬೋರ್ಡಿನವರು ಊಹಿಸುತ್ತಾರೆ. ಮೇಲ್ಕಂಡ ಹುಕುಂ ಸೇರಿದ್ದಕ್ಕೂ, ಅದಕ್ಕಾಗಿ ಮಾಡಲ್ಪಟ್ಟ ಪ್ರಯತ್ನಗಳ ವಿಷಯಕ್ಕೂ, ಪೂರ್ವದಲ್ಲಿಯೇ ತಾವು ಬರೆದಿರಬೇಕಾಗಿತ್ತೆಂದು ಬೋರ್ಡಿನವರು ನಿರೀಕ್ಷಿಸುತ್ತಾರೆ. ಆದರೆ ಒಂದು ತಿಂಗಳಾದಾಗ್ಯೂ ಈ ವಿಷಯವಾಗಿ ಬೋರ್ಡಿನವರಿಗೆ ಒಂದು ಪತ್ರಿಯನ್ನೂ ಕೂಡ ತಾವು ಬರೆಯಲಿಲ್ಲ. ಆದಕಾರಣ ಈ ಸಾವಕಾಶಕ್ಕೆ ಕಾರಣವನ್ನು ಅವರಿಗೆ ಸ್ಪಷ್ಟವಾಗಿ ನೀವು ತಿಳಿಸಬೇಕೆಂಬುವದು ಅವಶ್ಯಕವಾಗಿದೆ.

ಫೋರ್ಟ್ ಸೆಂಟ್ ಜಾರ್ಜ್,
ಜೂನ್ ೧೭೯೧. }
ಹ್ಯಾರಿಂಗ್ಟನ್ ಎಂಬದಾಗಿ ಸೈನಿದೆ.

(ನಿಶ್ಚಯವಾದ ನಕಲು)

ಹ್ಯಾಂಬರ್ಟ್ ಎಂಬದಾಗಿ ಸೈನಿದೆ.

ಸನ್ ೧೭೯೧ನೇ ಜುಲೈ ತಿಂಗಳಲ್ಲಿ ಟೀಪುವಿನ ಸವಾರರು ಗಜ್ಜಲಹಟ್ಟೀ ಕಣಿವೆಗೆ ಬರಲು ಆಗ ತಿರುಮಲರಾಯರು ಕೊಯಮುತ್ತೂರಲ್ಲಿ ಸಿಕ್ಕಿಕೊಂಡಿದ್ದರು. ಆಗ ನಾರಾಯಣರಾಯರು ಮದರಾಸು ಗವರ್ನಮೆಂಟಿಗೆ ಬರೆದುಕೊಂಡ ವಿವರ:—

(ಸರ್ಕಾರದಿಂದ ಕ್ರಮವಾಗಿ ಸ್ವೀಕೃತ ಆದ ಇಂಗ್ಲಿಷ್ ಅರ್ಜೀನಕಲಿಗೆ ತರ್ಜುಮೆ.)

ಬೋರ್ಡ್ ಆಫ್ ರೆವಿನ್ಯೂ ಮೆಂಬರ್ ಮತ್ತು ಪ್ರೆಸಿಡೆಂಟರಾದ
ವರ್ಷಿಪ್‌ಫುಲ್ ವಿಲ್ಲಿಯಂ ಪೀಟರ್ ಎಸ್ಕ್ವೈರರವರಿಗೆ.

ತಿರುಮಲರಾಯರ ತಮ್ಮಂದಿರಾದ ಮತ್ತು ಮಹೀಶೂರ ಮಹಾರಾಣಿಯವರ ಏಜಂಟರಾದ ನಾರಾಯಣರಾಯರು ವಿನಯಪೂರ್ವಕ ಬರೆದುಕೊಂಡ ಅರ್ಜಿ ಅದಾಗಿ, ಕೊಯಮುತ್ತೂರು ತಿರುಮಲರಾಯರು ೭ನೇ ತಾರೀಖಿನಲ್ಲಿ ತಮ್ಮ ಅರ್ಜಿದಾರನಿಗೆ ಒಂದು ಕಾಗದವನ್ನು ಬರೆದು ಇರುತ್ತಾರೆ. ಆದ ಕಾರಣ ತಮ್ಮ ಜನಾಬಿಗೆ ಕೆಲವು ಸಮಾಚಾರವನ್ನು ತಿಳಿಸಬೇಕೆಂಬದಾಗಿ ಅರ್ಜಿದಾರನು ಬಹಳ ವಿನಯದಿಂದ ಬೇಡಿಕೊಳ್ಳುವದೇನಂದರೆ :—೭ನೇ ತಾರೀಖಿನಲ್ಲಿ ಟೀಪುವಿನ ಸವಾರರು ಮೊದಲಾದವರು ೪ ಫಿರಂಗಿ ಮುಂತಾದವುಗಳನ್ನು ತೆಗೆದುಕೊಂಡು ಗಜ್ಜಲಹಟ್ಟೀ ಕಣಿವೆಗೆ ಬಂದದರಿಂದ, ಕೊಯಮುತ್ತೂರು ಡಿಸ್ಟ್ರಿಕ್ಟಿನ ವಾಸಸ್ಥರೆಲ್ಲರೂ ತಮ್ಮ ಸಂಸಾರ ಸಹಿತವಾಗಿ ಸಾಮಾನು ಮುಂತಾದ ವಿಶಿಷ್ಟ ಪದಾರ್ಥಗಳನ್ನೂ ತೆಗೆದುಕೊಂಡು ಓಡಿಹೋದರು. ಈ ವರ್ತಮಾನವನ್ನು ಅಮಲ್ದಾರ್ ಪುಟ್ಟಯ್ಯನು ಮೆ॥ ಕಾರ್ಬೆಟ್ ಸಾಹೇಬರಿಗೆ ತಿಳಿಯಪಡಿಸಲು, ತತ್‌ಕ್ಷಣವೇ ಮೆ॥ ಕಾರ್ಬೆಟ್ ಸಾಹೇಬರು ತಮ್ಮ ಪದಾರ್ಥಗಳನ್ನೆಲ್ಲಾ ಪುಲಿಕಾಟಿಚೇರಿಗೆ ಕಳುಹಿಸಿ

ಬಿಟ್ಟು ಇದಾರೆ. ಮತ್ತು ಮೆ॥ ಕಾರ್ಬೆಟ್ ಸಾಹೇಬರೂ ಅವರ ದುಭಾಷಿಸಹಾ ಕೊಯಮುತ್ತೂರಿಂದ ಫುಲಿಕಾಟ್‌ಚೇರಿಗೆ ಹೊರಟು ಹೋಗುವದಕ್ಕೆ ಸಿದ್ಧವಾಗಿ ಇದಾರೆ. ತಿರುಮಲರಾಯರು ಮಾತ್ರ ತಮ್ಮ ಪದಾರ್ಥಗಳು ಮತ್ತು ಆಳುಗಳೊಡನೆ ಸೆರೆಯಲ್ಲಿ ಇದ್ದರು. ಮತ್ತು ಮೆ॥ ಚಾಲ್ಮರ್ಸ್ ಸಾಹೇಬರು ಕೊಯಮುತ್ತೂರು ಕೋಟೆಯೊಳಗೆ ಇರುತ್ತಾರೆ. ತಿರುಮಲರಾಯರನ್ನು ತಂಜಾವೂರಿಗಾಗಲೀ ಮದರಾಸಿಗಾಗಲೀ ಕಳುಹಿಸುವದಕ್ಕೆ ಮೆ॥ ಕಾರ್ಬೆಟ್‌ಸಾಹೇಬರು ಸಮ್ಮತಿಪಡುವದಿಲ್ಲ. ಆದಕಾರಣ ಬಂದುವೇಳೆ ಟೀಪುವಿನ ಸವಾರರು ಕೊಯಮುತ್ತೂರಿಗೆ ಬಂದರೆ, ಅವರೊಡನೆ ಯುದ್ಧ ಮಾಡುವದಕ್ಕೆ ತಕ್ಕಷ್ಟು ಸೈನ್ಯವು ಮೆ॥ ಚಾಲ್ಮರ್ಸ್ ಸಾಹೇಬರವರಲ್ಲಿ ಇಲ್ಲ. ಮೇಲ್ಕಂಡ ಟೀಪುವಿನ ಸವಾರರು ಬಂದರೆ, ತಿರುಮಲರಾಯರನ್ನು ಜೀವಸಹಿತವಾಗಿ ಬಿಡುವದಿಲ್ಲ. ತಿರುಮಲರಾಯರನ್ನು ಶತ್ರುವು ಹಿಡಿಯುವದಕ್ಕಿಂತ ಮುಂಚೆಯೇ ಅವರನ್ನು ತಾವು ಕರೆಯಿಸಿಕೊಂಡರೆ, ಅವರು ತಮ್ಮ ಇಷ್ಟವಿದ್ದಂತೆ ನಡೆದುಕೊಳ್ಳುತ್ತಾರೆ. ಇದಲ್ಲದೆ ಘನವಾದ ಕುಂಪಣಿಯವರ ಕೆಲವು ಕೆಲಸಗಳು ತಿರುಮಲರಾಯರಿಂದ ಆಗಬೇಕಾಗಿವೆ. ತಾವು ತಿರುಮಲರಾಯರನ್ನು ಕರೆಯಿಸಿಕೊಳ್ಳದೆ ಮೇಲಿಕಂಡ ಟೀಪುವಿನ ಜನಗಳು ಅವರನ್ನು ಹಿಡಿದರೆ, ತತ್‌ಕ್ಷಣವೇ ಅವರನ್ನೂ ಅವರ ವಿಶಿಷ್ಟ ಬಂಧುಮಿತ್ರರು ಮನೆತನದವರನ್ನೂ ಟೀಪುವು ಕೊಂದುಹಾಕಿಬಿಡುತ್ತಾನೆ. ಮತ್ತು ಅದರಿಂದ ಮೇಲಿಕಂಡ ರಾಣಿಯವರ ಕಡೆ ವಿಶಿಷ್ಟ ಜನಗಳಿಗೂ ಬಹಳ ಅಪಾಯವು ಸಂಭವಿಸುವದು. ಆದಕಾರಣ ತಿರುಮಲರಾಯರನ್ನು ಕೊಯಮುತ್ತೂರಿನಿಂದ ತಂಜಾವೂರಿಗಾಗಲೀ ಮದರಾಸಿಗಾಗಲೀ ತಾವು ದಯೆಯಿಟ್ಟು ಕರಸಿಕೊಳ್ಳಬೇಕೆಂದು ತಮ್ಮ ಅರ್ಜಿದಾರನು ಬಹು ವಿನಯವಾಗಿ ಬೇಡಿಕೊಳ್ಳುತ್ತಾನೆ. ೧೯ನೇ ತಾರೀಖಿನಲ್ಲಿ ತಮ್ಮ ಅರ್ಜಿದಾರನು ತಮ್ಮ ಜನಾಬಿಗೆ ಒಂದು ಅರ್ಜಿಯನ್ನು ಬರೆದುಕೊಂಡಿದಾನೆ. ಅದನ್ನು ಚೆನ್ನಾಗಿ ಓದಿ ನೋಡಿಕೊಂಡು ಅದರಲ್ಲಿರುವ ವಿಶಿಷ್ಟ ಸಂಗತಿಗಳನ್ನೂ ಚೆನ್ನಾಗಿ ತಿಳಿದುಕೊಳ್ಳತಕ್ಕದ್ದು.

ಮದರಾಸು, (ಸರಿಯಾದ ನಕಲು),
೧೭೯೧ನೇ ಜುಲಾಯಿ ೨೦. (ಜೆ. ಹ್ಯಾಂಬರ್ಸ್ಟ್ ಸೆಕ್ರೆಟರಿ ಎಂದು ಇಂಗ್ಲಿಷಿನಲ್ಲಿ ಸೈನಿದೆ).

೧೭೯೧ನೇ ಇಸವಿಯಲ್ಲಿ ಕುಂಪಣಿಯವರು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿ ವಾಪಸು ಬಂದುಬಿಟ್ಟರು. ೧೭೯೨ನೇ ಇಸವಿಯಲ್ಲಿ ಶ್ರೀರಂಗಪಟ್ಟಣದ ಕೋಟೆಗೆ ಪುನಃ ಮುತ್ತಿಗೆ ಹಾಕಲು, ಟೀಪುವು ಸಂಧಿ ಮಾಡಿಕೊಳ್ಳುವದಕ್ಕೆ ಹೇಳಿಕಳುಹಿಸಿ, ತನ್ನ ಎರಡು ಮಕ್ಕಳನ್ನೂ ಹೊಣೆಯಾಗಿ ಇಂಗ್ಲಿಷನವರ ಬಳಿಗೆ ಕಳುಹಿಸಿಕೊಟ್ಟನು. ಆಗ ಇಂಗ್ಲಿಷನವರು ಟೀಪುವಿನ ಅರ್ಧರಾಜ್ಯವನ್ನೂ ಅವನಿಂದ ೩,೩೦,೦೦,೦೦೦ ರೂಪಾಯಿಯನ್ನೂ ತೆಗೆದುಕೊಳ್ಳುವಂತೆ ಒಪ್ಪಿ, ಅವನೊಡನೆ ಸಂಧಿ ಮಾಡಿಕೊಂಡು ಹಿಂತಿರುಗಿ ಹೊರಟುಹೋದರು.

ಈಸಾರಿಯೂ ಸಂಧಿಯಾದದ್ದರಿಂದ ತಿರುಮಲರಾಯರು ಬಹು ವ್ಯಸನಾಕ್ರಾಂತರಾಗಿ ಮದರಾಸಿಗೆ ಪುನಃ ಹೊರಟುಹೋದರು. ಅನಂತರದಲ್ಲಿ ಲಾರ್ಡ್ ಹೊಬಾರ್ಟ್ ಸಾಹೇಬರವರು ಮದರಾಸು ಗವರ್ನರಾಗಿ ದಯಮಾಡಿಸಲು ಆ ಸರದಾರರಿಗೆ ತಿರುಮಲರಾಯರು ತಾವು ಕುಂಪಣಿಗಾಗಿ ಮಾಡಿರುವ ನೌಕರೀ ವಿಷಯವನ್ನೆಲ್ಲಾ ಅರಿಕೆ ಮಾಡಿದರು. ಅವರು ಅದನ್ನು ಪರ್ಯಾಲೋಚನೆ ಮಾಡಿ, ತಿರುಮಲರಾಯರಿಗೆ ಕುಂಪಣಿಯಿಂದ ಸಲ್ಲುತ್ತಿದ್ದ ೨೦ ವರಹಾಗಳ ಜೊತೆಗೆ ೧೦೦ ವರಹ ತಿಂಗಳುಗಟ್ಟಲೆ ಖಾಯಂ ವರ್ಷ ೧೭೯೧ನೇ ಇಸವಿ ಮೇ ತಿಂಗಳಿಂದ ಕೊಡಿಸಿಕೊಡತಕ್ಕ ಬಗ್ಗೆ ಮೇಲಕ್ಕೆ ಬರೆದು ಹುಕುಂ ತರಿಸಿಕೊಟ್ಟರು; ಮತ್ತು ಮೇಲ್ಕಂಡ ಯುದ್ಧಗಳಲ್ಲಿ ಇವರ ನೌಕರೀ ವಿಷಯವಾದ ಹಕ್ಕುಗಳನ್ನು ಕೋರ್ಟ್ ಆಫ್ ಡೈರೆಕ್ಟರಸ್ಸರವರಿಗೆ ಬರೆದು ಕಳುಹಿಸಿ ಅದನ್ನು ಅವರ ತಿಳುವಳಿಕೆಗೆ ತಂದರು.

ಚಾಮರಾಜ ಒಡೆಯರವರು ಕೋಟಿ ಪಂಚಾಕ್ಷರಿ ಪುನಶ್ಚರಣೆ ಮಾಡಿದ್ದು.—ಮಹಾತ್ಮರಾದ ಚಾಮರಾಜ ಒಡೆಯರವರು ಟೀಪೂಸುಲ್ತಾನನ ದುಷ್ಕೃತಿಯನ್ನೂ ಜನದ ಕ್ಷೋಭೆಯನ್ನೂ ನೋಡಿ, ಬಹಳ ಚಿಂತಾಕ್ರಾಂತರಾಗಿ, ಇವನನ್ನು ನಾಶ ಮಾಡುವದಕ್ಕೆ ಕಾರಣನಾದ ಕೃಷ್ಣನೆಂತಿರುವ ಪುತ್ರನನ್ನು ಪಡೆಯಬೇಕೆಂದು, ಶ್ರೀಕಂಠೇಶ್ವರಸ್ವಾಮಿಯವರನ್ನು ಕುರಿತು ಕೋಟಿ ಪಂಚಾಕ್ಷರಿ ಜಪ ತರ್ಪಣ ಹೋಮ ಮುಂತಾದ ಕಾರ್ಯಗಳನ್ನು ಮಾಡಿದರು. ಅನಂತರದಲ್ಲಿ ಪರಮೇಶ್ವರನು ಸಂತುಷ್ಟನಾಗಿ ಒಬ್ಬ ಶಿವಯೋಗಿಯ ರೂಪವನ್ನು ಧರಿಸಿ ದೊರೆಗಳ ಸನ್ನಿಧಿಗೆ ಬಂದು, ಪ್ರಾಕೃತ ಜನರಂತೆ ಫಲ ಮಂತ್ರಾಕ್ಷತೆಗಳನ್ನು ಕೊಟ್ಟು "ನೀನು ಮಾಡಿದ ಕೋಟಿ ಪಂಚಾಕ್ಷರಿ ಜಪದಿಂದ ಶ್ರೀಕಂಠೇಶ್ವರನು ಪ್ರಸನ್ನನಾದನು. ನಿಮ್ಮ ಕುಲದೇವತೆಯಾದ ಚಾಮುಂಡೇಶ್ವರಿಯನ್ನು ಕುರಿತು ನವಾಕ್ಷರಿಮಂತ್ರವನ್ನು ಪುನಶ್ಚರಣೆ ಮಾಡಿದರೆ, ಆ ರಾಜರಾಜೇಶ್ವರಿಯು ನಿನಗೆ ಪ್ರಸನ್ನಳಾಗಿ ಅಧರ್ಮಗಳನ್ನು ನಾಶ ಮಾಡಿ ಧರ್ಮವನ್ನು ವೃದ್ಧಿ ಮಾಡುವ ಪುತ್ರನನ್ನು ಕೊಡುವಳು" ಎಂದು ಹೇಳಿ ದೊರೆಗಳಿಗೆ ನವಾಕ್ಷರೀ ಮಂತ್ರೋಪದೇಶವನ್ನು ಮಾಡಿದನು. ೧೦ ದಿವಸ ದಂಪತಿಗಳು ಅತಿ ನೇಮದಿಂದ ಇದ್ದು, ಹೋಮಶೇಷ ಪಾಯಸವನ್ನೇ ಒಪ್ಪಿಸಿಕೊಂಡು ಜಪ ಹೋಮವನ್ನು ಸಾಂಗವಾಗಿ ಜಳೆಯಿಸಿದರು. ಅನಂತರದಲ್ಲಿ ಪೂರ್ಣಾಹುತಿಯ ಕಾಲದಲ್ಲಿ ಅಗ್ನಿಜ್ವಾಲಾ ಮಧ್ಯದಲ್ಲಿ ಶಿಶು ಸಹಿತವಾದ ಸುವರ್ಣ ವಿಕಾರವಾದ ಒಂದು ತೊಟ್ಟಿಲು ಕಾಣಿಸಿತು. ಅದನ್ನು ಕಂಡು ಅಲ್ಲಿದ್ದ ಜನರೆಲ್ಲರೂ ಅತ್ಯಂತ ಆಶ್ಚರ್ಯಪಟ್ಟರು. ಆ ಕಾಲದಲ್ಲಿ ಶಿವಯೋಗಿಯು ಆ ದಂಪತಿಗಳನ್ನು ಕುರಿತು "ನಿಮ್ಮ ಪುಣ್ಯವೆಂಬ ಕಲ್ಪವೃಕ್ಷವು ಆಮೂಲಾಗ್ರವಾಗಿ ಸಫಲವಾಗಿರುವದು. ಆದಕಾರಣ ಶ್ರೀ ಚಾಮುಂಡೇಶ್ವರಿ ಶ್ರೀಕಂಠೇಶ್ವರರ ಅನುಗ್ರಹ ಬಲದಿಂದ, ಪೂರ್ವದಲ್ಲಿ ಶ್ರೀಕೃಷ್ಣನು ವಸುದೇವನಿಂದ ದೇವಕೀ ದೇವಿಯ ಗರ್ಭದಲ್ಲಿ ಜನಿಸಿದಂತೆ, ನಿಮ್ಮ ಗರ್ಭದಲ್ಲಿ ಮಹಾ ವಿಷ್ಣುವಿನ ಅಂಶ.

ವೆಳ್ಳ ಪುತ್ರನು ಜನಿಸುವನು. ಮಹಾತ್ಮನಾದ ಆ ಪುತ್ರನೇ ನಿಮ್ಮ ಶತ್ರುವನ್ನು ಶೀಘ್ರವಾಗಿ ಸಂಹರಿಸಿ ಶಿಥಿಲವಾದ ಧರ್ಮಗಳನ್ನೆಲ್ಲಾ ಸ್ಥಿರ ಪಡಿಸುವನು" ಎಂದು ಹೇಳಿ, ಹೋಮಶೇಷವಾದ ಪರಮಾನ್ನವನ್ನು ಪ್ರಾಶನ ಮಾಡಿಸಿ, ಫಲ ಮಂತ್ರಾಕ್ಷತೆಗಳನ್ನು ಕೊಟ್ಟು, ಆಶೀರ್ವಾದ ಮಾಡಿ ಆ ಕ್ಷಣದಲ್ಲಿಯೇ ತೆರಳಿದನು. ಧೊರೆಗಳು ಆತನಿಗೆ ಪೂಜೆಯನ್ನು ಮಾಡಬೇಕೆಂದು ಎಲ್ಲಾ ಕಡೆಯಲ್ಲಿಯೂ ಹುಡುಕಿಸಿ, ಎಲ್ಲೂ ಸಿಕ್ಕದೆ ಇದ್ದದರಿಂದ, ಆತನೇ ಪ್ರತ್ಯಕ್ಷನಾದ ಶ್ರೀಕಂಠೇಶ್ವರನೆಂದು ನಿಶ್ಚಯಿಸಿ, ಆತನ ಕಟಾಕ್ಷಕ್ಕೆ ಪಾತ್ರರಾದ ತಮ್ಮನ್ನು ಕೃತಾರ್ಥರಾದೆವೆಂದು ತಿಳಿದು, ದಂಪತಿಗಳಿಬ್ಬರೂ ಅತ್ಯಂತ ನೇಮದಿಂದ ಅಲ್ಪಾಹಾರ ಮುಂತಾದ ವ್ರತಗಳನ್ನು ಮಾಡುತ್ತಾ ಸಂತೋಷಚಿತ್ತರಾಗಿ ಇದ್ದರು.

ಆಳಿದ ಮಹಾಸ್ವಾಮಿ ನಂಜರಾಜ ವರ್ಗಾಭಿದ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರ ಜನನ.—ಹೀಗಿರುವಲ್ಲಿ ಕೆಂಪನಂಜಮ್ಮಣ್ಣಿಯವರು ಒಂದಾನೊಂದು ಶುಭ ಮುಹೂರ್ತದಲ್ಲಿ ಗರ್ಭವನ್ನು ಧರಿಸಿ, ಶುಭಕರವಾದ ಆ ಗರ್ಭವು ಕ್ರಮೇಣ ಅಭಿವೃದ್ಧಿಯನ್ನು ಹೊಂದುತ್ತಾ ಇತ್ತು. ಧೊರೆಗಳು ಈ ವೃತ್ತಾಂತವನ್ನು ಕೇಳಿ, ಅತ್ಯಂತ ಸಂತೋಷ ಭರಿತರಾಗಿ, ಆಯಾ ಕಾಲಕ್ಕೆ ಯೋಗ್ಯವಾದ ಉತ್ಸವಗಳನ್ನು ಮಾಡಿಸುವಂತೆ ಆಜ್ಞಾಪಿಸಿದರು. ಆ ಬಳಿಕ ಧೊರೆಗಳವರ ಪತ್ನಿಯವರೆಲ್ಲರೂ ಬಹಳ ಸಂತೋಷಪಟ್ಟು, ೫ನೇ ತಿಂಗಳಲ್ಲಿ ಮಗ್ಗುಗಳನ್ನು ಮುಡಿಸಿ, ೬ನೇ ತಿಂಗಳಲ್ಲಿ ನವರತ್ನ ಖಚಿತವಾದ ಬಳೆಗಳನ್ನು ತೊಡಿಸಿ, ೭ನೇ ತಿಂಗಳಲ್ಲಿ ಅಕ್ಷತೇಪ್ರಸ್ತವನ್ನು ಮಾಡಿ, ಸುವಾಸಿನಿಯರಿಂದೊಡಗೂಡಿ ಬಯಕೇ ಊಟವನ್ನು ಮಾಡಿಸಿದರು. ಅನಂತರದಲ್ಲಿ ಪುಂಸವನ ಸೀಮಂತಗಳು ಬಹು ವೈಭವದೊಡನೆ ನಡೆದವು. ಈ ರೀತಿಯಾಗಿ ಗರ್ಭವು ೯ ತಿಂಗಳು ಬೆಳೆದು ೧೦ನೇ ತಿಂಗಳು ಪ್ರಾಪ್ತವಾಗುತ್ತಿರಲು, ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲೀವಾಹನ ಶಕ ೧೭೧೬ನೇ ಆನಂದನಾಮ ಸಂವತ್ಸರದ ದಕ್ಷಿಣಾಯನ ಗ್ರೀಷ್ಮಋತು ಆಷಾಢ ಮಾಸದಲ್ಲಿ, ಶ್ರವಣ ನಕ್ಷತ್ರ ಪ್ರೀತಿಯೋಗ ತೈತುಲಾಕರಣಗಳಿಂದ ಒಡಗೂಡಿರುವ ಬಹುಳ ೨ ಚಂದ್ರವಾರ ದಿವಿ ೧೫॥ ಗಳಿಗೆಗೆ ಸಲ್ಲುವ ಕನ್ಯಾ ಲಗ್ನದಲ್ಲಿ, ಲಗ್ನಕ್ಕೆ ಧನಸ್ಥಾನದಲ್ಲಿ ಅಂಗಾರಕನೂ, ಭ್ರಾತೃಸ್ಥಾನದಲ್ಲಿ ಕೇತು ಚಂದ್ರರೂ, ನವಮ

ಸ್ಥಾನದಲ್ಲಿ ಶನಿಯೂ, ಲಾಭಸ್ಥಾನದಲ್ಲಿ ಬುಧ ರಾಹುಗಳಿಂದ ಒಡಗೂಡಿರುವ ಸೂರ್ಯನೂ, ದ್ವಾದಶಸ್ಥಾನದಲ್ಲಿ ಶುಕ್ರನೂ ಇರುತ್ತಿರಲಾಗಿ, ಚಂದ್ರದಶಾ ಮಧ್ಯದಲ್ಲಿ ಸಾತ್ವಿಕ ಮುಹೂರ್ತದಲ್ಲಿ, ತೇಜೋರಾಶಿಗಳಾದ ಚಕ್ರವರ್ತಿ ಲಕ್ಷಣಗಳಿಂದ ಒಡಗೂಡಿರುವ ಶ್ರೀ ಕೃಷ್ಣಾಂಶೋತ್ಪನ್ನರಾದ ಪುತ್ರರು, ಪೂರ್ವದಲ್ಲಿ ದಶರಥಮಹಾರಾಜನಿಂದ ಕೌಸಲ್ಯಾ ಗರ್ಭದಲ್ಲಿ ಶ್ರೀರಾಮಚಂದ್ರನು ಜನಿಸಿದಂತೆ, ಶ್ರೀ ಚಾಮರಾಜ ಒಡೆಯರವರ ಧರ್ಮಪತ್ನಿಯವರಾದ ಕೆಂಪನಂಜಮ್ಮಣಿಯವರ ಗರ್ಭಸುಧಾಂಬುಧಿಯಲ್ಲಿ ಅವತರಿಸಿದರು. ಆಗ ಧೊರೆಗಳು ಅತ್ಯಂತ ಸಂತೋಷಪಟ್ಟು ತಮಗೆ ಪುತ್ರೋತ್ಸವವಾಯಿತೆಂಬ ವರ್ತಮಾನವನ್ನು ಟೀಪೂ ಸುಲ್ತಾನನ ಸಮೀಪಕ್ಕೆ ಹೇಳಿ ಕಳುಹಿಸಿದರು. ಟೀಪೂಸುಲ್ತಾನನು ಈ ವೃತ್ತಾಂತವನ್ನು ಕೇಳಿ ಚಿಂತಾಕ್ರಾಂತನಾದಾಗ್ಯೂ, ಸಂತೋಷವನ್ನು ನಟಿಸುತ್ತಾ, ಸಂಪ್ರದಾಯಪ್ರಕಾರ ಫಿರಂಗಿಯನ್ನು ಹಾರಿಸುವಂತೆಯೂ ಬಂಡಿಗಳ ಮೇಲೆ ಸಕ್ಕರೆಯನ್ನು ತುಂಬಿ ಬೀದಿಬೀದಿಗಳಲ್ಲಿ ಹಂಚುವಂತೆಯೂ ಆಜ್ಞಾಪಿಸಿದನು. ಧೊರೆಗಳವರು ಸ್ನಾನವನ್ನು ಮಾಡಿ ಅಲಂಕಾರವನ್ನು ಮಾಡಿಕೊಂಡು, ಜೋಯಿಸರು ಬಂದು ಒಪ್ಪಿಸಿದ ಜನ್ಮಪತ್ರಿಕೆಯನ್ನು ಪೂಜಿಸಿ, ಶರ್ಕರಾ ದಾನ ಬೀಜದಾನ ಗೋದಾನ ವಸ್ತ್ರದಾನಗಳನ್ನು ಮಾಡಿ, ಫಲ ತಾಂಬೂಲ ದಕ್ಷಿಣೆಗಳನ್ನು ಕೊಡಿಸಿ, ಅಧಿಕಾರಸ್ಥರು ಒಪ್ಪಿಸಿದ ಕೈಗಾಣಿಕೆಯನ್ನು ಒಪ್ಪಿಸಿಕೊಂಡು, ಶಿಶುವಿಗೆ ಮಧುಪ್ರಾಶನವನ್ನು ಮಾಡಿಸಿ, ಜನ್ಮಪತ್ರಿಕೆಯನ್ನು ಬೀದಿಗಳಲ್ಲಿ ಮೆರೆವಣಿಗೆ ಮಾಡಿಸಿ, ೫ನೇ ದಿವಸದಲ್ಲಿ ಕಾಲಂದಿಗೇ ಶಾಸ್ತ್ರವನ್ನು ನೆರವೇರಿಸಿ, ೧೧ನೇ ದಿನದಲ್ಲಿ, ಶ್ರೀಕಂಠೇಶ್ವರನ ಅನುಗ್ರಹದಿಂದ ಹುಟ್ಟಿದ ಈ ಶಿಶುವಿಗೆ ಜಾತಕರ್ಮಪೂರ್ವಕವಾಗಿ ನಂಜರಾಜ ಒಡೆಯರವರೆಂಬದಾಗಿ ನಾಮಕರಣವನ್ನು ಮಾಡಿದರು. ಆ ಬಳಿಕ ಈ ದಿನ ರಾತ್ರಿಯಲ್ಲಿ ಕೆಂಪನಂಜಮ್ಮಣ್ಣಿಯವರು ಸುವಾಸಿನಿಯರಿಂದೊಡಗೂಡಿ ಕರ್ಣವೇಧೆಯನ್ನು ಮಾಡಿಸಿ, ಮಗುವನ್ನು ರತ್ನಮಯವಾದ ತೊಟ್ಟಿಲಲ್ಲಿ ಮಲಗಿಸಿ, ಕುಲ ದೇವತೆಯಾದ ಶ್ರೀ ಚಾಮುಂಡೇಶ್ವರೀ ಅಮ್ಮನವರು ಮುಂತಾದ ದೇವತಾ ಸಂಬಂಧವಾದ ತಾಳಿಯನ್ನು ಶಿಶು ಸಂರಕ್ಷಣಾರ್ಥವಾಗಿ ಧಾರಣೆಯನ್ನು ಮಾಡಿಸಿದರು.

ಕೆಂಪನಂಜಮ್ಮಣ್ಣಿಯವರು ಈ ರೀತಿಯಾಗಿ ಲೋಕಸಂರಕ್ಷಣೆಗೆ ಕಾರಣಭೂತರಾದ ಪುತ್ರರನ್ನು ಪ್ರಸವಿಸಿ ಕೃತಾರ್ಥರಾಗಿ ಈ ಶಾ॥ ೧೭೧೭ನೇ ಆನಂದ ಸಂವತ್ಸರದ ಶ್ರಾವಣ ಶುದ್ಧ ೧೦ಯಲ್ಲಿ ಪಾರ್ವತೀದೇವಿಯಲ್ಲಿ ಐಕ್ಯವನ್ನು ಹೊಂದಿದರು. ಅನಂತರದಲ್ಲಿ ಧೊರೆಗಳಾದ ಚಾಮರಾಜ ಒಡೆಯರವರು ತಮ್ಮ ಸ್ವೀಕೃತ ಮಾತೃ ಲಕ್ಷ್ಮಮ್ಮಣ್ಣಿಯವರನ್ನು ಅರಮನೆಯ ಯಾಜಮಾನ್ಯ ಮುಂತಾದವುಗಳ ವಿಚಾರಣೆಯನ್ನು ನೋಡಿಕೊಳ್ಳಬೇಕೆಂದು ಬಿನ್ನವಿಸಿ ನೇಮಕ ಮಾಡಿಸಿದರು. ಕೆಂಪನಂಜಮ್ಮಣ್ಣಿಯವರ ಸವತಿಯರಾದ ಹೊನ್ನಾಜಮ್ಮಯ್ಯನವರ ಉದರದಲ್ಲಿ ಇದೇ ಆಷಾಢ ಮಾಸದಲ್ಲಿ ಒಂದು ಗಂಡುಮಗುವು ಹುಟ್ಟಿ ತತ್ಕಾಲದಲ್ಲಿಯೆ ತೀರಿ ಹೋಯಿತು. ಅದೇ ರೀತಿಯಾಗಿ ಚಲುವಾಜಮ್ಮಣ್ಣಿಯವರ ಗರ್ಭದಲ್ಲಿ ಒಂದು ಗಂಡುಮಗು ಹುಟ್ಟಿ ೩ ದಿನ ಇದ್ದು ತೀರಿಹೋಯಿತು.

ಚಲುವಾಜಮ್ಮಣ್ಣಿಯವರು ತಮಗೆ ಒದಗಿದ ವ್ಯಸನವನ್ನು ಬಿಟ್ಟು, ಲೋಕಸಂರಕ್ಷಣಾರ್ಥವಾಗಿ ವಸುದೇವ ದೇವಕಿದೇವಿಯರ ಉದರದಲ್ಲಿ ಅವತರಿಸಿದ ಶ್ರೀಕೃಷ್ಣನ ಅಂಶದಲ್ಲಿ ಕೆಂಪನಂಜಮ್ಮಣ್ಣಿಯವರ ಗರ್ಭಸುಧಾಂಬುಧಿಯಲ್ಲಿ ಜನಿಸಿ ಪ್ರವರ್ಧಮಾನವಾಗುತ್ತಿರುವ ಬಾಲಕರನ್ನು ಅತ್ಯಂತ ಪ್ರೇಮದಿಂದ ಸಾಕುತ್ತಿದ್ದರು. ಆಕಾಲದಲ್ಲಿ ಧೊರೆಗಳು ಆಯಾ ಕಾಲದಲ್ಲಿ ಈ ಶಿಶುವಿಗೆ ಸೂರ್ಯ ಚಂದ್ರ ಗೋದರ್ಶನವನ್ನೂ ಅನ್ನಪ್ರಾಶನವನ್ನೂ ಮಾಡಿಸಿ, ವರ್ಷವರ್ಧಂತಿ ಮಹೋತ್ಸವ ಕಾಲದಲ್ಲಿ ಮಂಗಳಸ್ನಾನವನ್ನು ಮಾಡಿಸಿ, ನವಚಿರಂಜೀವಿ ಪ್ರತಿಮಾ ಪೂಜಾದಾನ ಮುಂತಾದ ಶುಭಕಾರ್ಯಗಳನ್ನು ನೆರವೇರಿಸಿ, ನೂತನ ವಸ್ತ್ರಾಭರಣ ಗಂಧ ಪುಷ್ಪ ಮೊದಲಾದ ಮಂಗಳದ್ರವ್ಯ ಧಾರಣೆಗಳನ್ನೂ ತಾಂಬೂಲ ಚರ್ವಣವನ್ನೂ ರತ್ನದರ್ಪಣ ದರ್ಶನವನ್ನೂ ಮಾಡಿಸಿ, ಅಧಿಕಾರಸ್ಥರಿಂದ ಕೈಗಾಣಿಕೆಗಳನ್ನು ಒಪ್ಪಿಸಿ, ದೇವರ ದರ್ಶನವನ್ನು ಮಾಡಿಸಿ, ಶ್ರೀರಂಗಪಟ್ಟಣದ ರಾಜಬೀದಿಯಲ್ಲಿ ಮಹೋತ್ಸವವನ್ನು ಮಾಡಿಸಿದರು. ಆ ಬಳಿಕ ಈ ಬಾಲಕರು ಶ್ರೀಕೃಷ್ಣನ ಬಾಲಲೀಲೆಗಳಂತೆ ಕ್ರೀಡಿಸುತ್ತಾ, ಶುಕ್ಲ

ಪಕ್ಷದ ಬಿದಿಗೇ ಚಂದ್ರನಂತೆ ಕಲಾಭಿವೃದ್ಧಿಯನ್ನು ಹೊಂದುತ್ತಾ ಜನಗಳನ್ನೆಲ್ಲಾ ಸಂತೋಷಪಡಿಸುತ್ತಾ ಇದ್ದರು. ಟೀಪೂ ಸುಲ್ತಾನನು ಇದನ್ನೆಲ್ಲಾ ಕಂಡು ಧೊರೆಗಳಲ್ಲಿ ಅತ್ಯಂತ ದ್ವೇಷವನ್ನು ಬೆಳಯಿಸಿದನು.

ಚಾಮರಾಜ ಒಡೆಯರವರ ಮರಣ.—ಹೀಗಿರುವಲ್ಲಿ ಶ್ರೀರಂಗಪಟ್ಟಣದಲ್ಲಿ ಧೊರೆಗಳಾದ ಚಾಮರಾಜಒಡೆಯರವರು ಅಮರಾವತೀ ಪಟ್ಟಣದಲ್ಲಿ ದೇವೇಂದ್ರನಿಂದ ಸನ್ಮಾನಿತರಾಗಬೇಕೆಂದು, ಶಾ|| ೧೭೧೮ನೇ ನಳ ಸಂವತ್ಸರದ ಚೈತ್ರ ಶುದ್ಧ ೧೦ಯಲ್ಲಿ ಸ್ವರ್ಗಸೋಪಾನವನ್ನೈದಿದರು. ಆಗ ಪೂರ್ವದಲ್ಲಿ ಇವರ ಪತ್ನಿಯರು ಕೆಂಪನಂಜಮ್ಮಣ್ಣಿಯವರಿಗೆ ಪುತ್ರಕರ್ತವ್ಯದಿಂದ ಪರಲೋಕ ಕೃತ್ಯವನ್ನು ಮಾಡಿದ ಕಾರಗಳ್ಳಿ ಮರಿರಾಜಯ್ಯನ ಮಗ ದೇವರಾಜಯ್ಯನು ಅದೇಮೇರೆಗೆ ಇವರಿಗೆ ಉತ್ತರ ಕ್ರಿಯಾದಿಗಳನ್ನು ಮಾಡಿದನು.

		ವರ್ಷ.	ತಿಂಗಳು.	ದಿನ.
ಖಾಸಾಚಾಮರಾಜ ಒಡೆಯರವರ ಆದ್ಯಂತ ವಯಸ್ಸು	..	೨೨	೧	೨೩
” ” ಆಳಿಕೆ	..	೧೯	೬	೨೫

ಇವರ ಆಳಿಕೆಯಲ್ಲಿ ಅಧಿಕಾರ ಮಾಡಿದ ಜನಗಳು.—

೧. ಸರ್ವಾಧಿಕಾರಿ ನವಾಬು ಹೈದರಲ್ಲೀ ಖಾ ಬಹದರ್.
೨. ಈತನ ಮಗ ಟೀಪೂಸುಲ್ತಾನ್.
೩. ಪೂರ್ಣಯ್ಯನವರು.
೪. ಜಗಜ್ಜೀವಣ್ಣರಾಯರ ಮಕ್ಕಳು ತೋಷೀಖಾನೇ ಕೃಷ್ಣರಾಯರು.
೫. ಬಚ್ಚೇರಾಯರು.
೬. ಬಾದಾಮಿ ಬಿಷ್ಟಪ್ಪನವರು.
೭. ಮೀರ್‌ಸಾಬ್.
೮. ಮಹಲಾತ ಕಚೇರಿ ಕೇಶವರಾಯರು.
೯. ಅಂಚೇ ಶಾಮಯ್ಯನವರು.
೧೦. ಪ್ರಧಾನ ವೆಂಕಪ್ಪಯ್ಯನವರು.
೧೧. ಅಬೂಮಹಮ್ಮದ್‌ಮಿರ್ಜ್‌.

೧೨ನೇ ಅಧ್ಯಾಯ.

೨೨. ನಂಜರಾಜಾಭಿದ ಮುಮ್ಮಡಿ ಕೃಷ್ಣರಾಜ ಒಡೆಯರವರು.

ಜನನ.—ಶಾ॥ ಶಕ ೧೭೧೬ನೇ ಆನಂದನಾಮ ಸಂವತ್ಸರದ ಆಷಾಢ ಬಹುಳ ೨ ಸೋಮವಾರ ಶ್ರವಣ ನಕ್ಷತ್ರ ದಿವಿ ೧೫॥ ಗಳಿಗೆಗೆ ಸಲ್ಲುವ ಕನ್ಯಾಲಗ್ನದಲ್ಲಿ.

ಪಟ್ಟಾಭಿಷೇಕ.—ಕ್ರಿಸ್ತ ಶಕ ೧೭೯೯ನೇ ಇಸವಿ ಜೂನ್ ತಾರೀಕು ೩೦ಕ್ಕೆ ಸರಿಯಾದ ಶಾ॥ ಶಕ ೧೭೨೧ನೇ ಸಿದ್ಧಾರ್ಥಿ ಸಂವತ್ಸರದ ಜ್ಯೇಷ್ಠ ಬಹುಳ ೧೩ ಭಾನುವಾರ ರೋಹಿಣೀ ನಕ್ಷತ್ರ ದಿವಿ ೧೫ ಗಳಿಗೆಗೆ ಸಲ್ಲುವ ಕನ್ಯಾಲಗ್ನದಲ್ಲಿ ಮಹೀಶೂರ ಲಕ್ಷ್ಮೀರಮಣಸ್ವಾಮಿಯ ದೇವಸ್ಥಾನದಲ್ಲಿ.

ಪತ್ನಿಯರು.—(೧) ಶಾ॥ ೧೭೨೩ನೇ ದುರ್ಮತಿ ಸಂವತ್ಸರದ ವೈಶಾಖ ಶುದ್ಧ ೩ ಗುರುವಾರದಲ್ಲಿ ಪಟ್ಟದ ಗೋಪಾಲರಾಜೆ ಅರಸಿನವರ ಮಕ್ಕಳು ದೇವಾಜಮ್ಮಣ್ಣಿಯವರು; (೨) ಶಾ॥ ೧೭೨೮ನೇ ಅಕ್ಷಯ ಸಂವತ್ಸರದ ವೈಶಾಖ ಶುದ್ಧ ೫ ಬುಧವಾರ ದಿವಿ ೪ ಗಳಿಗೆಯಲ್ಲಿ ಬಾಗೇದೇಶೀ ಅರಸಿನವರ ಮಕ್ಕಳು ಲಕ್ಷ್ಮೀವಿಲಾಸ ಸನ್ನಿಧಾನದ ದೇವಾಜಮ್ಮಣ್ಣಿಯವರು, ಧೊರೆಗಳು ಇಷ್ಟಾನುಸಾರ ಮಾಡಿಕೊಂಡಿರುವವರು; (೩) ಶಾ॥ ೧೭೩೬ನೇ ಭಾವ ಸಂವತ್ಸರದ ವೈಶಾಖ ಶುದ್ಧ ೩ಯಲ್ಲಿ ಮೇಲೆ ಬರೆದಿರುವ ಪಟ್ಟದ ಕೋಟೇ ಗೋಪಾಲರಾಜೆಅರಸಿನವರ ಕಿರೀಮಕ್ಕಳು ರಮಾವಿಲಾಸ ಸನ್ನಿಧಾನದ ಚೆಲುವಾಜಮ್ಮಣ್ಣಿಯವರು (ಅರ್ಕವಿವಾಹ ಪುರಸ್ಸರವಾಗಿ); (೪) ಶಾ॥ ೧೭೪೩ನೇ ವಿಷು ಸಂವತ್ಸರದ ಮಾಘ ಶುದ್ಧ ೬ ಸೋಮವಾರ ರಾತ್ರಿ ೧೮ ಗಳಿಗೆಯಲ್ಲಿ ತುರುವೇಕೆರೇ ವೀರಾಜೇ ಅರಸಿನವರ ಮಕ್ಕಳು ಸೀತಾವಿಲಾಸ ಸನ್ನಿಧಾನದ ದೇವಾಜಮ್ಮಣ್ಣಿಯವರು (ಕದಳೀ ವಿವಾಹ ಪುರಸ್ಸರವಾಗಿ); (೫) ಶಾ॥ ೧೭೪೫ನೇ ಸ್ವಭಾನು ಸಂವತ್ಸರದ ಫಾಲ್ಗುನ ಬಹುಳ ೪ ಶುಕ್ರವಾರ ರಾತ್ರಿ ಹುಲ್ಲಹಳ್ಳೀ ನಂಜರಾಜೇ ಅರಸಿನವರ ಮಕ್ಕಳು ಹೊಸ ಸನ್ನಿಧಾನದ ಲಕ್ಷ್ಮಮ್ಮಣ್ಣಿಯವರು (ಅರಸಿನ ವಿವಾಹ).

ಸಂತಾನ.—(೧) ೩ನೇ ಪತ್ನಿಯರಾದ ರಮಾವಿಲಾಸ ಸನ್ನಿಧಾನದ ಚೆಲುವಾಜಮ್ಮಣ್ಣಿಯವರ ಉದರದಲ್ಲಿ ಶಾ॥ ೧೭೪೦ನೇ ಬಹುಧಾನ್ಯ ಸಂವತ್ಸರದ ಮಾರ್ಗಶಿರ ಶುದ್ಧ ೩ ಸೋಮವಾರ ರಾತ್ರಿ ॥ ಗಳಿಗೆಯಲ್ಲಿ ಜನಿಸಿದ ಕೆಂಪಚಾಮಮ್ಮಣಿಯವರು ಸ್ವಲ್ಪ ದಿನವಿದ್ದು, ಪ್ರಮಾಥಿ ಸಂವತ್ಸರದ ಚೈತ್ರ ಶುದ್ಧ ೧ ಶುಕ್ರವಾರ ಸಾಯಂಕಾಲಕ್ಕೆ ೨ ಗಳಿಗೆ ಇರುವಾಗಲೇ ತೀರಿಹೋದರು; (೨) ಸ್ವೀಕೃತ ಪುತ್ರರು ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರವರು.

ಟೀಪೂ ಸುಲ್ತಾನನ ಅಕೃತ್ಯಗಳು.—ಶ್ರೀರಂಗ ಪಟ್ಟಣದಲ್ಲಿ ಸುಲ್ತಾನನು ಚಾಮರಾಜ ಒಡೆಯರವರು ತೀರಿಹೋದದ್ದರಿಂದ, ಇನ್ನುಮೇಲೆ ನಿಷ್ಕಂಟಕವಾಗಿ ಸಕಲ ರಾಜ್ಯಾಧಿಪತ್ಯವೂ ತನ್ನ ಕೈವಶವಾಯಿತೆಂದು, ಪೂರ್ವಕ್ಕಿಂತ ಅಧಿಕವಾಗಿ ಸಜ್ಜನರ ಬಾಧೆಯನ್ನೂ ದುರ್ಜನರ ಪ್ರಾಬಲ್ಯವನ್ನೂ ಉಂಟುಮಾಡಿ, ದೇವಬ್ರಾಹ್ಮಣರ ಕಂಟಕನಾಗಿ, ಈ ಚಾಮರಾಜ ಒಡೆಯರವರ ಪುತ್ರರಿಗೆ ಪಟ್ಟಾಭಿಷೇಕವನ್ನು ಮಾಡಿಸದೆ ಇದ್ದನು. ಇವನು ಪೂರ್ವದಲ್ಲಿ ಓಲುಕೊಟ್ಟಿದ್ದ ತನ್ನ ಮಕ್ಕಳನ್ನು ಬಿಡಿಸಿಕೊಂಡು ಬರುವದಕ್ಕೆ ಇದೇ ಸಮಯವೆಂದು, ಅರಮನೆಯಲ್ಲಿದ್ದ ಮಹಾಮಾತುಶ್ರೀಯವರು ಮುಂತಾದ ಸರ್ವರನ್ನೂ ಶೋಧಿಸಿಕೊಂಡು, ಅರಮನೆಯಲ್ಲಿದ್ದ ವಸ್ತ್ರಾಭರಣ ದ್ರವ್ಯ ಪಾತ್ರೆಗಳನ್ನು ಸಹ ತೆಗೆದುಕೊಂಡದ್ದಲ್ಲದೆ, ಸೀಮೆ ಮೇಲಣ ದೇವರ ಒಡವೆಗಳನ್ನೂ ಧನಿಕರಾಗಿ ಇದ್ದ ಪ್ರಜೆಗಳ ಧನವನ್ನೂ ಅಧಿಕಾರಸ್ಥರು ಮುಂತಾದವರ ಕಡೆಯಿಂದ ನಜರಾಣೆ ಎಂಬದಾಗಿ ನಿಬಂಧನೆ ಮಾಡಿ ದ್ರವ್ಯವನ್ನೂ ತೆಗೆದುಕೊಂಡು, ಹೂಣ ದೇಶಾಧಿಪತಿಗಳಿಗೆ ಕೊಟ್ಟು ಕಳುಹಿಸಿ, ತನ್ನ ಮಕ್ಕಳನ್ನು ಕರೆಯಿಸಿಕೊಂಡು, ಪುನಃ ಅವರ ಸಂಗಡಲೇ ಯುದ್ಧ ಮಾಡಬೇಕೆಂದು ಯೋಚಿಸುತ್ತಿದ್ದನು.

೧೭೯೮ನೇ ಇಸವಿಯಲ್ಲಿ ಟೀಪೂ ಸುಲ್ತಾನನು ಮಾರಿಷಿಯಸ್ ದ್ವೀಪ ಎಂಬ ಪರಾಸೀಸರ ವಕೀಲನೊಡನೆ ಇಂಗ್ಲಿಷ್ ಜನಗಳಿಗೆ ವಿರೋಧವಾಗಿ ಒಂದು ಕರಾರನ್ನು ಮಾಡಿಕೊಂಡು ತನ್ನ ಕಡೆ ಜನಗಳನ್ನು ಫ್ರೆಂಚರ ಬಳಿಗೆ ಕಳುಹಿಸಿದನು. ಮಹೀಶೂರ ಹಿಂದೂ ಮಹಾರಾಜರವರ ಸಂತತಿಯವರನ್ನು ಬಹಳ ಹಿಂಸೆ ಪಡಿಸುವದಕ್ಕೆ ಪ್ರಾರಂಭಿಸಿದನು. ಆಗ ಇದ್ದ ಚಾಮರಾಜ ಒಡೆಯರನ್ನು ಏನು ಕೃತ್ರಿಮದಿಂದಲೋ ಶೀಘ್ರವಾಗಿ ವ್ಯಾಜವಾಗಿ ದೈವಗತಿ ಹೊಂದಿಸಿದನು. ಮಹಾ ಮಾತುಶ್ರೀ ಲಕ್ಷ್ಮಮ್ಮಣ್ಣಿಯವರನ್ನೂ ಅವರ ಕಡೆಯವರನ್ನೂ ಸಹ ಅರಮನೆಯನ್ನು ಬಿಟ್ಟು ಹೊರಡಿಸಿ, ಒಳಗಿನಿಂದ ಹೊರಟು ಬರುವ ಮಾರ್ಗದಲ್ಲಿ ನಾಲ್ಕು ಕಡೆಯಲ್ಲಿಯೂ ಗಾಡಿಯ ಜೋಡಿರು ಸಹ ಬಿಟ್ಟು ಹೊರಡಿಸಿ, ಇವರ ಕೈಯಲ್ಲಿ ಪೂರ್ವಾರಭ್ಯ ಇದ್ದ ಆಭರಣವನ್ನು ಕಿತ್ತುಕೊಂಡು, ಕಂಠೀರವ ಅರಸಿನವರ ಹಳೇ ಮನೆಯಲ್ಲಿ ೧೦ ಅಂಕಣ ಮನೆಯನ್ನು ಕೊಟ್ಟು ಬಹು ಘೋರವಾಗಿ ಸೆರೆ ಹಾಕಿಬಿಟ್ಟು, ಅವರ ಸಂಗಡ ೧೨ ಜನ ಮಾತ್ರ ಪರಿಚಾರಕಕ್ಕೆ ಇರಿಸಿ, ಮಿಕ್ಕ ಅಪ್ಪೇರುಗಳಲ್ಲಿ ಕೆಲವರನ್ನು ತುರುಕರ ಜಾತಿಗೆ ಸೇರಿಸಿಕೊಂಡು, ತನ್ನ ಮಹಲು,

ಉಗ್ರಾಣ, ಜಾನಸಾಲೆ, ಮುಂತಾದದ್ದಕ್ಕೆ ಹಾಕಿಕೊಂಡನು; ಕೆಲವರನ್ನು ಅಕೃತ್ಯವಾದ ಕೆಲಸಕ್ಕೆ ಕೊಟ್ಟುಬಿಟ್ಟನು; ಕೆಲವರನ್ನು ಕೋಟೆಗೆ ಮಣ್ಣು ಹೊರುವದಕ್ಕೆ ಇರಿಸಿದನು. ಇದಕ್ಕೆಲ್ಲಾ ಕಾರಣವೇನೆಂದರೆ, ಫರಾಶೀಸರಕಡೇ ಮೀಲನು ಈ ಯವನ ರಾಕ್ಷಸನ ಬಳಿಗೆ ಬಂದು, ಅವನಿಗೆ ಅನೇಕ ವಿಧದಲ್ಲಿ ದುರ್ಬೋಧನೆಗಳನ್ನು ಮಾಡಿ, "ಹಿಂದೂ ಮಹಾರಾಜರ ಮನೆತನದವರನ್ನು ಜೀವದಲ್ಲಿ ಇರಿಸಬಾರದು; ಇರಿಸಿದ್ದೇ ಆದರೆ ಇದೇ ನಿನಗೆ ಶಲ್ಯವಾಗಿ ಬರುವದು" ಎಂದು ಅನೇಕ ವಿಧವಾದ ದೃಷ್ಟಾಂತಗಳನ್ನು ಹೇಳಿಕೊಟ್ಟನಾದಕಾರಣ, ಅವನ ಮಾತೇ ಮುಖ್ಯವಾಗಿ ಎಣಿಸಿಕೊಂಡು, ಇವರನ್ನೂ ಇವರ ಆಪ್ತ ಜನರನ್ನೂ ಸಹ ಟೀಪುವು ಸಂಹಾರ ಮಾಡುವದಾಗಿ ಇದ್ದನು. ಇವನಕಡೆ ದುಷ್ಟ ಸಾಮಾಜಿಕರು ಅದೇರೀತಿಗೆ ಟೀಪುವಿನ ಮನಸ್ಸು ಪ್ರಕಾರಕ್ಕೆ ಇವರನ್ನು ಮುಳುಗಿಸುವ ಕಾರ್ಯದಲ್ಲಿಯೇ ಇದ್ದರು. ಮಹಾಮಾತುಶ್ರೀ ಲಕ್ಷ್ಮಮ್ಮಣ್ಣಿಯವರು ಈ ಸನ್ನಾಹಗಳನ್ನು ನೋಡಿ, ಅತ್ಯಂತ ಭೀತರಾಗಿ, ಫರಾಶೀಸರಿಗೂ ಟೀಪುವಿಗೂ ನಡೆದ ಕರಾರಿನ ನಕಲನ್ನು ತಮ್ಮ ಕಡೆ ಬ್ರಾಹ್ಮಣರ ಮೂಲಕ ಮದರಾಸಿನಲ್ಲಿ ಇದ್ದ ತಿರುಮಲರಾಯರಿಗೆ ಕಳುಹಿಸಿಕೊಟ್ಟದ್ದಲ್ಲದೆ, ಟೀಪುವಿನ ದುಷ್ಕೃತ್ಯ ವಿಚಾರವನ್ನೂ, ಇವನ ದುರ್ಬಲ ಸ್ಥಿತಿಯನ್ನೂ, ಸರ್ವ ಜನರೂ ಇವನ ಅಶ್ರೇಯಸ್ಸನ್ನು ಪ್ರಾರ್ಥಿಸಿಕೊಂಡಿರುವ ವಿಷಯವನ್ನೂ, ಇವೇ ಮೊದಲಾದ ಅನೇಕ ಸಂಗತಿಗಳನ್ನು ತಮ್ಮ ಪ್ರಧಾನಿಗಳಿಗೆ ಬರದು ಕಳುಹಿಸಿದರು. ತಿರುಮಲರಾಯರು ಈ ವೃತ್ತಾಂತಗಳನ್ನೆಲ್ಲಾ ಮೆ|| ವೆಬ್ ಸಾಹೇಬರವರಿಗೆ ಕೂಡಲೆ ತಿಳಿಯಪಡಿಸಿ, ಲಾರ್ಡ್ ಹೊಬಾರ್ಟ್ ಸಾಹೇಬರಿಗೆ ಅರಿಕೆ ಮಾಡಿ, ಆ ಸರದಾರರ ಅಭಿಪ್ರಾಯದಂತೆ ಮೇಲೆ ಕಂಡ ಟೀಪುವಿಗೂ ಫರಾಶೀಸರಿಗೂ ನಡೆದ ಕರಾರಿನ ನಕಲನ್ನು ಒಪ್ಪಿಸಿದರು. ಲಾರ್ಡ್ ಹೊಬಾರ್ಟ್ ಸಾಹೇಬರು ಆ ಕರಾರಿಗೆ ನಕಲುಗಳನ್ನು ಬರಿಸಿ, ಬಂಗಾಳಾ ಗವರ್ನಮೆಂಟ್, ನಿಜಾಮರು ಮತ್ತೂ ಇವರ ರೆಸಿಡೆಂಟರಿಗೆ ಸಹ ಆ ನಕಲುಗಳನ್ನು ಕಳುಹಿಸಿದರು.

ಅನಂತರದಲ್ಲಿ ಕೆಲವು ದಿವಸಗಳು ಕಳೆದಮೇಲೆ. ಅಂದರೆ ಶಾ|| ೧೭೨೦ನೇ ಕಾಳಾಯುಕ್ತಿ ಸಂವತ್ಸರದ ಪುಷ್ಯ ಬಹುಳ ೧೦ಯಲ್ಲಿ ಬಂಗಾಳಾ ಗವರ್ನರ್ ಲಾರ್ಡ್ ಮಾರ್ನಿಂಗ್ಟನ್ ಮತ್ತು ಮದರಾಸು ಗವರ್ನರ್ ಲಾರ್ಡ್ ಕ್ಲೈವ್ ಸರದಾರರಿಗೆ ಮಾತುಶ್ರೀ ಲಕ್ಷ್ಮಮ್ಮಣ್ಣಿಯವರು ಪ್ರಧಾನ ತಿರುಮಲರಾಯರ ಮೂಲಕ ಬರಿಸಿ ಕಳುಹಿಸಿದ ವಿವರ:

ಶ್ರೀಮತ್ ಸಮಸ್ತ ಸದ್ಗುಣಾಭರಣ ಭೂಷಿತರಾದ ರಾಜಮಾನ್ಯರಾಜಶ್ರೀ ಬಂಗಾಳೇ ಗವರ್ನರ್ ಲಾಟ್ ಸಾಹೇಬರವರಿಗೆ, ಲಾಟ್ ಕ್ಲೈವ್ ಸಾಹೇಬರಿಗೆ ಸಹ.

ಲಕ್ಷ್ಮಮ್ಮಣ್ಣಿಯವರ ಸಲಾಂ. ಅದಾಗಿ—ಆದಿಯಲ್ಲಿ ಭಗವಂತನು ಈ ಮಹೀಶೂರ ರಾಜ್ಯವನ್ನು ನಮ್ಮ ಹಿರಿಯರಿಗೆ ದಯಮಾಡಿಸಿ, ನಮ್ಮ ಕೈಯಿಂದ ಅನೇಕ

ಧರ್ಮದಿಂದಲೂ ನೀತಿಯಿಂದಲೂ ರಾಜ್ಯಭಾರ ಮಾಡಿಸಿದೆ. ಈಚೆಗೆ ನಮ್ಮ ಚಾಕರನಾದ ಹೈದರನಾಯಕ ಪ್ರಬಲಿಸಿ, ಸ್ವಾಮಿದ್ರೋಹಾ ಮಾಡಿ, ನಮ್ಮ ಸ್ವಾಮಿಯಾದ ಧೊರೆಗಳನ್ನೂ ನಮ್ಮ ಮಕ್ಕಳನ್ನೂ ನಮ್ಮ ಬಂಧು ಜನಗಳನ್ನೂ ನಮ್ಮ ಆಶ್ರಿತರು ಮುಂತಾದ ಸರ್ವ ಜನರನ್ನೂ ಕೊಂದುಹಾಕಿ, ನಾಲ್ಕು ಸಾರಿ ನಮ್ಮ ಅರಮನೆಯನ್ನು ಸೂರೆ ಮಾಡಿ, ಆ ದ್ರವ್ಯ ಬಲದಿಂದ ಕೆಲವು ರಾಜ್ಯವನ್ನು ಸಾಧಿಸಿ, ಈ ದೇಶದಲ್ಲಿ ಅನೇಕ ದ್ರೋಹಗಳನ್ನು ಮಾಡಿ, ಅನೇಕ ಪಾಳ್ಯಗಾರರು ರೈತರು ಮುಂತಾದ ಕೋಟ್ಯವಧಿ ಮನುಷ್ಯರನ್ನು ಅನ್ಯಾಯವಾಗಿ ಕೊಂದುಹಾಕಿದನಾದ್ದರಿಂದ, ಈ ಹೈದರನಾಯಕನ ಉಪದ್ರವ ಸಹಿಸಲಾರದೆ "ಇಂಗ್ಲಿಷರು ಸತ್ಯವಂತರು ; ಇವರ ಸ್ನೇಹಾ ಮಾಡಿದರೆ, ಅನೇಕಕಾಲ ಸಾಖ್ಯ ಅನುಭವ ಮಾಡಬಹುದು" ಎಂಬದಾಗಿ, ಮಹಮ್ಮದಲ್ಲಿಖಾನರ ಮುಖಾಂತರ ಪ್ರಮಾಥಿ ಸಂವತ್ಸರದಲ್ಲಿ ಆಗಿನ ಗವರ್ನರಿಗೆ ಹೇಳಿ ಕಳುಹಿಸಿದೆವು. ಆಗ್ಯೆ ಮಹಮ್ಮದಲ್ಲೀಖಾನರು ಹೇಳಿ ಕಳುಹಿಸಿದ ವಿವರ: "ಪ್ರಾಕ್ಕು ತಿರುಚನಾಪಳ್ಳಿಗೆ ಬರೆದು ಕೊಟ್ಟ ಕರಾರು ೧, ನಂಜರಾಜಯ್ಯನ ಕೈಯಲ್ಲಿ ಶ್ರೀರಂಗಪಟ್ಟಣದಲ್ಲಿ ಚಂದಾಖಾನನ ಕಲಾಪದಲ್ಲಿ ಸಾಲಾ ತೆಗೆದುಕೊಂಡ ದ್ರವ್ಯದ ಬಗ್ಯೆ ಬರೆದುಕೊಟ್ಟಿರುವ ಪತ್ರ ೧ ಸಹಾ ಕಳುಹಿಸಿದರೆ, ನಮ್ಮ ಅಪ್ಪಾಜಿ ಕತ್ತಿ ಗೋಪಾಲರಾಜಯ್ಯನವರನ್ನು ಕಾವಲಿಂದ ಬಿಟ್ಟು, ಇವರ ಸಂಗಡ ಇಂಗ್ಲಿಷರ ಫೌಜು ಸಹಾ ಕೊಡಿಸಿ, ಈ ಹೈದರನ್ನು ನಿಗ್ರಹಿಸಿ, ನಿಮ್ಮ ಸಂಸ್ಥಾನಕ್ಕೆ ಯಾವಾಗಲೂ ಇಂಗ್ಲಿಷರ ಸಹಾಯವೂ ಮಾಡುತ್ತೇವೆ." ಹೀಗೆಂಬದಾಗಿ ಮಹಮ್ಮದಲ್ಲೀಖಾನರು ಸತ್ಯಾ ಮಾಡಿಕೊಟ್ಟರಾದಕಾರಣ, ಆ ಸಂವತ್ಸರದಲ್ಲಿಯೇ ವಕೀಲನ ಕಳುಹಿಸಿದೆವು. ಆಗಿನ ಗವರ್ನರಿಗೆ ವಿಸ್ತಾರವಾಗಿ ಬರೆದು ಇದೇವೆ, ಅದು ನೋಡಿದರೆ ನಿಮಗೆ ತಿಳಿದೀತು. ಈಚೆಗೆ ದುರ್ಮುಖಿ ಸಂವತ್ಸರದಲ್ಲಿ ಲಾಟ ಪಿಕ್ಕಟ್ಟು ಮಹಾ ಉತ್ತಮರಾದ್ದರಿಂದ, ಅವರ ಭರವಸ ನಂಬಿ, ನಮ್ಮ ಪ್ರಧಾನ ತಿರುಮಲರಾಯರ ಕಳುಹಿಸಿದೆವು. ಆಗ್ಯೆ ಆ ಗವರ್ನರಿಂದ ವಂಚನೆ ಯಿಲ್ಲ., ಅವರಿಗೆ ಶ್ರಮ ಬಂತು. ಈಚೆಗೆ ಶುಭಕೃತು ಸಂವತ್ಸರದಲ್ಲಿ ಲಾಟ ಮಕ್ಕಾರ್ಟನಿಯವರ್‍ನ ಅನೇಕ ಭರವಸ ಬರೆದುಕೊಟ್ಟರಾಗಿ ಬಹುಜನ ನಮ್ಮ ಸಂಗಡ ಸೇರಿದರು. ಟೀಪುವನ್ನು ಕೈಹಿಡಿಯಾಗಿ ಹಿಡಿದು, ನಮ್ಮ ಸಂಸ್ಥಾನ ನಮಗೆ ಬರುವ ಸಮಯದಲ್ಲಿ, ಕೆಲವು ಕ್ಷುದ್ರಜನರು ಪಿತೂರಿ ನಡಿಸಿ ಟೀಪುವಿಗೆ ತಿಳಿಯಪಡಿಸಿದ್ದರಿಂದ, ನಮ್ಮ ಬಂಧುಜನವಾದ ರಾಜವರ್ಗದಲ್ಲಿಯೂ, ನಮ್ಮ ಪ್ರಧಾನ ತಿರುಮಲರಾಯರ ಬಂಧುಗಳಾದ ಬ್ರಾಹ್ಮಣರಲ್ಲಿಯೂ, ಏಳುನೂರು ಸಂಸಾರ, ಸ್ತ್ರೀ ಪುರುಷರು ಬಾಲರು ಮುಂತಾಗಿ ಟೀಪುವು ಸಂಹಾರ ಮಾಡಿಸಿಬಿಟ್ಟನು. ಈಚೆಗೆ ಸಾಧಾರಣ ಸಂವತ್ಸರದಲ್ಲಿ ಜನರಲ್ ಮೆಡೋಸ್ ಲಾಟ ಪಾಲೀಸರ ದಿವಸದಲ್ಲಿ ನಡೆದ ವಿವರವು ನಿಮಗೆ ತಿಳಿದೇ ಇದೆಯಷ್ಟೆ. ಇವರು ಸಲ್ಲಾ ಮಾಡಿಕೊಂಡಮೇಲೆ, ಪರಾಸೀಸರ ಮಾತು ಕೇಳಿ, ಈಚೆಗೆ ಪಟ್ಟಕ್ಕೆ ಇರಿಸಿದ್ದವರನ್ನೂ ದೈವಗತಿ ಹೊಂದಿಸಿ, ಅರಮನೆಯನ್ನು ಸೂರೆ ಮಾಡಿ·

ನಮ್ಮನ್ನು ಉಟ್ಟಬಟ್ಟೆಸಂಗಡ ಬೇರೇ ಮನೆಯಲ್ಲಿ ಬಹಳ ಬಿಗಿಯಾಗಿ ಕಾವಲು ಮಾಡಿ ಇದ್ದಾನೆ. ಹೀಗೆ ಇರುವಲ್ಲಿ ನಮ್ಮನ್ನು ಉದ್ಧಾರ ಮಾಡುವಬಗ್ಯೆ ಭಗವಂತನು ನಿಮಗೆ ದೊಡ್ಡ ಅಧಿಕಾರವನ್ನು ಕೊಟ್ಟು, ಈ ದೇಶಕ್ಕೆ ಕಳುಹಿಸಿದ್ದಾಗಿ ಕೇಳಿದೆವು. ಇದೂ ಅಲ್ಲದೆ ನೀವು ಮಹಾ ಸತ್ಯವಂತರು, ಪರಿಶುದ್ಧರೆಂಬದಾಗಿ ನಿಮ್ಮ ಕೀರ್ತಿ ಅನೇಕವಾಗಿ ಕೇಳಿ, ನಿಮ್ಮ ನಂಬಿ ಮರೆಹೊಕ್ಕು ಬರಸಿ ಕಳುಹಿಸಿದೇವೆ. ನಮ್ಮಲ್ಲಿ ದಯಮಾಡಿ, ಕೀರ್ತಿಯಲ್ಲಿಯೂ ಧರ್ಮದಲ್ಲಿಯೂ ಭಗವಂತನಲ್ಲಿಯೂ ಸಹ ದೃಷ್ಟಿ ಯಿರಿಸಿ, ಈ ಶತ್ರುವನ್ನು ನಿರ್ಮೂಲ ಮಾಡಿ, ಸಂಸ್ಥಾನವನ್ನು ಪ್ರಾಕ್ಕು ನೀವು ಕೊಟ್ಟಕವಲು ಮೇರೆಗೆ ನಡಿಸಿಕೊಡಬೇಕು. * * * ಇದು ಅಲ್ಲದೆ ಇನ್ನೂ ಕೆಲವು ವಿವರ ವನ್ನು ನಮ್ಮ ಪ್ರಧಾನ ತಿರುಮಲರಾಯರಿಗೆ ಬರಸಿ ಕಳುಹಿಸಿದೇವೆ. ಅವರು ನಮಗೆ ಪ್ರಾಣಾಪ್ತರಾದಕಾರಣ ಅವರು ಏನು ಹೇಳಿದಾಗ್ಯೂ ಏನು ಬರೆದು ಕೊಟ್ಟಾಗ್ಯೂ ಅದೆಲ್ಲಾ ನಾವೇ ಮಾಡಿದೇವೇ ಹೊರತು ಲೇಶವೂ ಭೇದವಾಗಿ ಎಣಿಸಕಾರಣವಿಲ್ಲ. ನಾವು ಶತ್ರುವಿನ ಕೈಯಲ್ಲಿ ಸಿಕ್ಕಿರುವದ್ದರಿಂದ ನಮ್ಮ ಜೀವಗತಿ ಹ್ಯಾಗೆ ಇರುವದೋ ತಿಳಿಯದು. ಕದಾಚಿತ್ತು ನಮ್ಮ ಜೀವಕ್ಕೆ ವ್ಯತ್ಯಾಸ ಬಂದಾಗ್ಯೂ, ಈ ಪ್ರಧಾನ ತಿರುಮಲರಾಯ ರನ್ನು ಇರಿಸಿಕೊಂಡು ನ್ಯಾಯ ಮಾರ್ಗವಾಗಿ ಪಟ್ಟವನ್ನು ಸ್ಥಾಪಿಸಿ, ಈ ಭೂಮಿಯುಳ್ಳ ವರಿಗೂ ಕೀರ್ತಿ ಸಂಪಾದಿಸಿಕೊಳ್ಳಬೇಕೆಂಬ ಇತ್ಯಾದಿ ವಿವರಗಳನ್ನು ಅಂತಃಕರಣಕ್ಕೆ ಸರಿತಂದು, ಇತ್ತಲಾಗತಕ್ಕ ಕಾರ್ಯಗಳಿಗೂ ತಮ್ಮ ಸುಕ್ಷೇಮಾತಿಶಯಗಳಿಗೂ ಆಗಿಂ ದಾಗ್ಯೆ ಬರಸಿ ಕಳುಹಿಸಿ ಸಂತೋಷ ಪಡಿಸುವದು. ಕಾಳಾಯುಕ್ತಿ ಸಂವತ್ಸರದ ಪುಷ್ಯ ಬಹುಳ ೧೪.

ಈ ಉಭಯ ಲಾರ್ಡುಗಳ ಇಷ್ಟಾನುಸಾರವಾಗಿ ಮದ್ರಾಸು ಗವರ್ನಮೆಂಟ್ ಸೆಕ್ರೆಟರಿ ಮೆ॥ ವೆಬ್ ಸಾಹೇಬರವರು ೧೭೯೯ನೇ ಇಸವಿ ಏಪ್ರಿಲ್ ೧೬ರಲ್ಲಿ ಮಹಾ ಮಾತುಶ್ರೀ ಲಕ್ಷ್ಮಮ್ಮಣ್ಣಿಯವರಿಗೆ ಬರೆದು ಕಳುಹಿಸಿದ ಉತ್ತರವೇನಂದರೆ :—

ಮಹಾರಾಜ್ಞಿ ನರಪತಿ ಮಾತುಶ್ರೀ ರಾಣಾಸಾಹೇಬರವರಿಗೆ.

ವೆಬ್ ಸಾಹೇಬರವರ ಕುಶಲ. ಇಲ್ಲಿನ ಲಾರ್ಡರವರಿಗೆ ಬಂದು, ಬಂಗಾಳಾ ಲಾರ್ಡರವರಿಗೆ ಬಂದು, ನನಗೆ ಬಂದು, ತಾವು ಕಳಿಸಿದ ೩ ಕಾಗದಗಳನ್ನು ನಿಮ್ಮ ಪ್ರಧಾನ ತಿರುಮಲರಾಯರು ಒಪ್ಪಿಸಿದರು. ಅದರಿಂದ ನಮಗೆ ಬಹಳ ಸಂತೋಷವಾ ಯಿತು. * * * ಬಹುಕಾಲದಿಂದ ನಿಮ್ಮ ಪ್ರಧಾನ ತಿರುಮಲ ರಾಯರು ನಿಮ್ಮ ವಿಷಯವಾದ ಸಮಾಚಾರವನ್ನು ನಮಗೆ ತಿಳಿಯಪಡಿಸುತ್ತಾ ಇದ್ದಾರೆ. ಉಭಯ ಲಾರ್ಡುಗಳೂ ತಮ್ಮ ಸೇವೆಮಾಡುವಂತೆ ದೃಢವಾಗಿ ವಾಗ್ದಾನ ಮಾಡುತ್ತಾರೆ.

ಈ ಸಂಗತಿಯನ್ನು ನಿಮ್ಮ ಪ್ರಧಾನಿಗಳು ನಿಮಗೆ ತಿಳಿಸಬೇಕಷ್ಟೆ. ನಮ್ಮ ಸ್ನೇಹಕ್ಕೆ ಎಂದಿಗೂ ಚ್ಯುತಿಯಿಲ್ಲವೆಂದು ನೀವು ಖಂಡಿತವಾಗಿ ಇರಬಹುದು. ನಾವು ಈಗ ಟೀಪು ವಿನಮೇಲೆ ಯುದ್ಧವನ್ನು ಪ್ರಕಟ ಮಾಡಿ ಇದ್ದೇವೆ. ಆದರೆ ಅದು ಹ್ಯಾಗೆ ಪರ್ಯವಸಾನ ವಾಗುವದೋ ಕಾಣೆವು. ಅದು ಭಗವಂತನಿಗೇ ಗೋಚರವಾಗಿದೆ. ಆ ವಿಷಯದಲ್ಲಿ ನಾನು ಬಹಳ ಬರೆಯಲಾರೆ. ಅದು ಮುಗಿದಮೇಲೆ ಅವರು ನಿಮ್ಮ ಕಾರ್ಯವನ್ನು ವ್ಯವಸ್ಥೆ ಮಾಡುತ್ತಾರೆ. ಸಂಶಯವಿಲ್ಲ.

(ಜೆ. ವೆಬ್ ಎಂದು ಸೈನಿದೆ).

ಶ್ರೀರಂಗಪಟ್ಟಣವನ್ನು ತೆಗೆದುಕೊಂಡದ್ದು.—ಇಂಗ್ಲಿಷ್‌ಬಹದ್ದರವರು ಸುಲ್ತಾನನ ವೃತ್ತಾಂತವನ್ನು ಕೇಳಿ “ಈ ದುಷ್ಟನಾದ ಟೀಪೂ ಸುಲ್ತಾನನು ಪೂರ್ವದಲ್ಲಿ ನಮ್ಮ ಸಂಗಡ ಯುದ್ಧ ಮಾಡುವದಕ್ಕೆ ಸಾಮರ್ಥ್ಯವಿಲ್ಲದೆ ಸಂಧಿಯನ್ನು ಮಾಡಿಕೊಂಡು, ದ್ರವ್ಯವನ್ನು ಕೊಡುವದಕ್ಕೂ ಗತಿಯಿಲ್ಲದೆ, ಲಜ್ಜೆಯನ್ನು ಬಿಟ್ಟು ತನ್ನ ಪುತ್ರರನ್ನು ಒಲುಕೊಟ್ಟು, ದುರ್ಮಾರ್ಗದಿಂದ ದ್ರವ್ಯವನ್ನು ಸಂಪಾದಿಸಿ ನಮಗೆ ಕೊಟ್ಟು, ತನ್ನ ಮಕ್ಕಳನ್ನು ಬಿಡಿಸಿ ಕೊಂಡನು. ಇವನ ದುರ್ನಡತೆಗಳನ್ನು ತಿಳಿದ ಇವನ ಧೊರೆಗಳು ಇವ ನನ್ನು ನಿಗ್ರಹಿಸಬೇಕೆಂಬ ಅಭಿಪ್ರಾಯವಾಗಿ ಪತ್ರವನ್ನು ಬರೆಯಿಸಿ ಕಳು ಹಿಸಿ ಇರುತ್ತಾರೆ. ಆದ್ದರಿಂದ ಇನ್ನುಮೇಲೆ ಇವನನ್ನು ನಿಗ್ರಹಿಸುವದು ಯೋಗ್ಯವೇ ಹೊರತು ಉಪೇಕ್ಷೆ ಮಾಡುವದು ಯುಕ್ತವಲ್ಲ” ಎಂದು ಪರ್ಯಾಲೋಚನೆ ಮಾಡಿ, ಅನೇಕ ಯುದ್ಧಸನ್ನಾಹದಿಂದ ಜನರಲ್ ಹಾರಿಸ್, ಜನರಲ್ ವೆಲ್ಲಿಸ್ಲೀ ಸಾಹೇಬರು ಮುಂತಾದ ಸರದಾರರನ್ನು ಕಳುಹಿಸಿದರು. ಇವರು ತಮ್ಮ ಧಣಿಯ ಆಜ್ಞಾನುಸಾರವಾಗಿ, ಹೈದರಾಬಾದು ನಿಜಾಂ ದೌಲತಿನಕಡೆ ಸೇನಾ ಸಮೇತನಾದ ಮೀರ್ ಅಲಂ ಎಂಬ ಸರದಾರನನ್ನು ಸಂಗಡ ಕರೆದುಕೊಂಡು ಶ್ರೀರಂಗಪಟ್ಟಣದ ಕಡೆಗೆ ಹೊರಟರು.

ಈ ವರ್ತಮಾನವನ್ನು ತಿಳಿದು, ಟೀಪೂ ಸುಲ್ತಾನನು ಪೂರ್ವದಲ್ಲಿದ್ದ ಮಹೀಶೂರ ಕೋಟೆ ಪೇಟೆ ತ್ರಿನಯನೇಶ್ವರ ಲಕ್ಷ್ಮೀರಮಣ ಮುಂತಾದ ದೇವಸ್ಥಾನಗಳ ಗೋಪುರಗಳನ್ನೂ ಅರಮನೆ ಮುಂತಾದ ವಿಶಿಷ್ಟ ಜನರ ಮನೆಗಳನ್ನೂ ಕೆಡಹಿ, ದೇವರುಗಳನ್ನು ಕಿತ್ತುಹಾಕಿ, ಈ ಮಹೀಶೂರ

ಕೋಟೆಗೆ ಪೂರ್ವಪಾರ್ಶ್ವದಲ್ಲಿರುವ ಕಾಡ ಬಸವನ ತಿಟ್ಟನಮೇಲೆ ಚಿಕ್ಕದಾಗಿ ಒಂದು ಕೋಟೆಯನ್ನು ಕಟ್ಟಿಸಿ, ಇದಕ್ಕೆ ನಜರಬಾದು ಎಂಬದಾಗಿ ಹೆಸರನ್ನಿಟ್ಟು, ಈ ಕೋಟೆಯೊಳಗೆ ಚಿಕ್ಕದಾಗಿ ಅರಮನೆಯನ್ನೂ ಇನ್ನೂ ಕೆಲವು ಮನೆಗಳನ್ನೂ ಕಟ್ಟಿಸಿ, ಮಹೀಶೂರ ಕೋಟೆ ಪೇಟೆಗಳಲ್ಲಿದ್ದ ಬ್ರಾಹ್ಮಣರು ಸೆಟ್ಟಿ ವರ್ತಕರು ಮುಂತಾದ ಹವಾಕೋಮಿನ ಜನರ ಮನೆಗಳನ್ನೂ ಕೆಡಿಸಿ, ಈ ಮಹೀಶೂರಿಗೆ ಉತ್ತರಪಾರ್ಶ್ವ ಒಂದು ಹರದಾರಿಯಲ್ಲಿ ಸುಬೇದಾರ ವೀರಣ್ಣನ ತೋಟದ ಬಳಿ ನೀರು ಹರಿಯುವ ಹಳ್ಳದ ಸಮೀಪದಲ್ಲಿ ಈ ಜನಗಳಲ್ಲಿ ಅನೇಕರಿಗೆ ಮನೆಗಳನ್ನು ಕಟ್ಟಿಸಿ, ನವಾಷಹರು ಎಂಬದಾಗಿ ಹೆಸರಿಟ್ಟು, ಈ ಪೇಟೆಗಳಲ್ಲಿರುವವರು ಮುಂತಾದವರು ಬರುವ ಮಾರ್ಗಗಳಲ್ಲಿ ಅನೇಕ ಪೇಟೆಗಳೂ ಗ್ರಾಮಗಳೂ ಇದ್ದರೆ ಶತ್ರುಗಳು ನಿಲ್ಲುವದಕ್ಕೆ ಅವಕಾಶವಾಗುವದೆಂಬದಾಗಿ ತಿಳಿದು ಅವಕ್ಕೆ ಬೆಂಕಿಯನ್ನು ಹಾಕಿಸಿ, ಮಹೀಶೂರ ಕೆರೆ ಮುಂತಾದ ಅನೇಕ ಕೆರೆಗಳ ಕಟ್ಟೆಗಳನ್ನು ಒಡಿಸಿ ದುಷ್ಕೃತ್ಯವನ್ನು ಮಾಡುತ್ತಾ ಇದ್ದನು. ಅನಂತರದಲ್ಲಿ ಮೇಲೆ ಬರೆದಿರುವ ಸರದಾರರು ಬಂದು, ಶ್ರೀರಂಗಪಟ್ಟಣಕ್ಕೆ ಮುತ್ತಿಗೆಯನ್ನು ಹಾಕಿ, ಒಂದೂವರೆ ತಿಂಗಳು ಬಹಳ ಯುದ್ಧ ಮಾಡಿ, ಶಾ. ಶಕ ೧೭೨೧ನೇ ಸಿದ್ಧಾರ್ಥಿ ಸಂವತ್ಸರದ ಚೈತ್ರ ಬಹುಳ ೩೦ ಸ್ಥಿರವಾರಕ್ಕೆ ಸರಿಯಾದ ಕ್ರಿ. ಶ. ೧೭೯೯ನೇ ಇಸವಿ ಮೇ ತಾರೀಖು ೪ನೇ ಮಧ್ಯಾಹ್ನದಲ್ಲಿ, ಈ ಟೀಪೂ ಸುಲ್ತಾನನನ್ನು ಸಂಹಾರಮಾಡಿ ಶ್ರೀರಂಗಪಟ್ಟಣವನ್ನು ಕಟ್ಟಿಕೊಂಡರು.

ಇಂಗ್ಲಿಷಿನವರ ಏರ್ಪಾಡುಗಳು.—ಅನಂತರದಲ್ಲಿ ಇಂಗ್ಲಿಷ್ ಬಹದರ್ ಸರದಾರರು ತೋಷೀಖಾನೆ ಸುಲ್ತಾನನ ಮನೆ ಮುಂತಾದ ಸ್ಥಳಗಳಲ್ಲೆಲ್ಲಾ ಜನ್ಮ ಕಾಪಾಡುವವರನ್ನು ಪಹರೆ ಇಟ್ಟು, ಬಂದೋಬಸ್ತು ಮಾಡಿ, ಸುಲ್ತಾನನು ಎಲ್ಲಿ ಇದಾನೋ ಎಂದು ವಿಚಾರಣೆ ಮಾಡುವಲ್ಲಿ, ಶ್ರೀರಂಗಪಟ್ಟಣದ ಕೋಟೆ ಮೂಡಣ ಬಾಗಿಲ ಬಳಿಪಾರ್ಶ್ವದ ಹೊಸ ಕಂದಕದ ಸಮೀಪದಲ್ಲಿ ಗುಂಡು ತಗಲಿ ಮೃತನಾಗಿ ಬಿದ್ದಿರುತ್ತಾನೆಂದು ವರ್ತಮಾನ ತಿಳಿಯಿತು. ಆಗ ಇಂಗ್ಲಿಷ್ ಸರದಾರರು ಅವನ ಸಂಬಂಧಿಗಳನ್ನು ಕರೆಯಿಸಿ, ಆತನು

ಮೃತನಾಗಿ ಬಿದ್ದಿರುವ ಸ್ಥಳಕ್ಕೆ ಹೋಗಿ ಸುಲ್ತಾನನು ಅಹುದೋ ಅಲ್ಲವೋ ನೋಡಿಕೊಂಡು ಬನ್ನಿ ಎಂಬದಾಗಿ ಹೇಳಿ, ಅನಂತರ ಅವನ ಹೆಂಗಸರು, ಮಕ್ಕಳಿಗೂ ಸಂಬಂಧಿಗಳಿಗೂ "ವ್ಯಸನ ಪಡಬೇಡಿ, ನಿಮ್ಮನ್ನು ಸಂರಕ್ಷಣೆ ಮಾಡುತ್ತೇವೆ" ಎಂದು ಸಮಾಧಾನೋಕ್ತಿಯನ್ನು ಹೇಳಿ ಕಳುಹಿಸಿ, ಅವರ ಜಾತಿ ಸಂಪ್ರದಾಯದ ಮೇರೆಗೆ, ಟೀಪೂ ಸುಲ್ತಾನನ ಗೋರೀ ಸಮೀಪ ಲಾಲಬಾಗ್ ತೋಟದಲ್ಲಿಯೇ ಈತನ ಗೋರಿಯನ್ನು ಮಾಡಿಸುವಂತೆ ಕೆಲವು ದ್ರವ್ಯವನ್ನು ಕೊಟ್ಟು, ಅದೇ ಸ್ಥಳದಲ್ಲಿ ಗೋರಿಯನ್ನು ಮಾಡಿಸಿದರು. ಅನಂತರದಲ್ಲಿ ಇಂಗ್ಲಿಷರು, ಸೇನಾಜನರು ಮುಂತಾದ ತಮ್ಮ ಕಡೇ ಜನಗಳಿಗೆ ಅರ್ಧ ದಿವಸ ಪರ್ಯಂತರವೂ ಕೋಟೆಯಲ್ಲಿರುವ ಮನೆಗಳನ್ನು ಲೂಟಿಮಾಡಿ ಅದರಲ್ಲಿ ಸಿಕ್ಕಿದ ಪದಾರ್ಥಗಳು ವಿಶಿಷ್ಟವನ್ನೂ ನೀವೇ ತೆಗೆದುಕೊಳ್ಳಿ ಎಂಬದಾಗಿ ಹುಕುಂ ಕೊಟ್ಟರು. ಮಾರನೇ ದಿನ ಪ್ರಾತಃಕಾಲದಲ್ಲಿ ಮೃತರಾಗಿಯಿದ್ದ ಅನೇಕ ಜನರ ಶವಗಳನ್ನು ಕೋಟೆಯೊಳಗಿದ್ದ ಅಗಳು ಮುಂತಾದ ಸ್ಥಳಗಳಿಗೆ ಎಳೆದು ಹಾಕಿಸಿದರು. ಆ ದಿನವೇ ಅಖಂಡ ವೃಷ್ಟಿಯಾಗಿ ಕಾವೇರೀ ಪ್ರವಾಹವು ಸಂಪೂರ್ಣವಾಗಿ ಬಂದು, ಶ್ರೀರಂಗಪಟ್ಟಣದಲ್ಲಿ ಯುದ್ಧದಿಂದ ಉಂಟಾದ ರಕ್ತ ಪ್ರವಾಹವು ತೊಳೆದಂತೆ ಆಯಿತು.

ಮಾರನೇದಿನ ಇಂಗ್ಲಿಷ್ ಸರದಾರರು, ಶ್ರೀರಂಗಪಟ್ಟಣದ ಮರ್ಮವನ್ನು ತಿಳಿದ ಪೂರ್ಣಯ್ಯನವರನ್ನೂ ಬಾದಾಮಿ ಬಿಷ್ಟೋಪಂತರನ್ನೂ ಮೀರಕಮ ರ್ದೀನನನ್ನೂ ಕರೆಯುಕಳುಹಿಸಿ, ಅವರಿಗೆ ನಯಭಯಗಳಿಂದ ಸಮಾಧಾನೋಕ್ತಿಯನ್ನು ಹೇಳಿ, ಸುಲ್ತಾನನ ಮಕ್ಕಳಿಗೆ ಆಪ್ತರಾದ ಪೂರ್ಣಯ್ಯನವರೊಬ್ಬರನ್ನೇ ಏಕಾಂತದಲ್ಲಿ ಕರೆಯಿಸಿ, ಕರೀಘಟ್ಟದ ಬಳಿಯಲ್ಲಿ ಸೇನಾ ಸಮೇತನಾಗಿರುವ ಸುಲ್ತಾನನ ಮಗ ಫತ್ತೇಹೈದರ್ ಮುಂತಾದವರನ್ನು ಕರೆದುಕೊಂಡು ಬಂದರೆ ಅವರನ್ನು ಸಂರಕ್ಷಣೆ ಮಾಡುತ್ತೇವೆಂತಲೂ ಅಸೇನಾಜನಗಳಿಗೆ ಜೀವನವನ್ನು ಮಾಡಿಕೊಡುತ್ತೇವೆಂತಲೂ ಹೇಳಿ ಕಳುಹಿಸಿ ಕೊಟ್ಟು, ಅಲ್ಲಿಂದ ಅವರನ್ನು ಕರೆಯಿಸಿ, ಸುಲ್ತಾನನ ಮಗನನ್ನು ದರಿಯಾದ ಮೌತ್ತು ತೋಟಕ್ಕೆ ಕಳುಹಿಸಿ, ಖೈದು ಮಾಡಿ, ಆ ಸೇನಾ ಜನರಿಗೆ ಪೂರ್ವದಂತೆ ಜೀವನವನ್ನು ಕಲ್ಪಿಸಿಕೊಟ್ಟು ತಮ್ಮ ಸ್ವಾಧೀನದಲ್ಲಿ ಇಟ್ಟುಕೊಂಡರು.

ಅನಂತರ ಜನರಲ್ ಹಾರಿಸ್ ಮತ್ತು ವೆಲ್ಲೆಸ್ಲೀಸಾಹೇಬರು ಮುಂತಾದ ಸರದಾರರು ಪೂರ್ವದಲ್ಲಿ ತಮಗೆ ಪತ್ರವನ್ನು ಬರೆದಿದ್ದ ಧೊರೆಗಳಾದ ಚಾಮರಾಜ ಒಡೆಯರವರು ತೀರಿಹೋದ ವರ್ತಮಾನವನ್ನು ಕೇಳಿ, ಬಹಳ ವ್ಯಸನಪಟ್ಟು, ಈ ಸಂಸ್ಥಾನಕ್ಕೆ ಪರಂಪರಾ ಪ್ರಾಪ್ತವಾಗಿ ಬಂದ ಈ ಚಾಮರಾಜ ಒಡೆಯರವರ ಪುತ್ರರು, ಮಹಾ ತೇಜಶ್ಶಾಲಿಗಳಾಗಿ ಮಹಾ ರಾಜಲಕ್ಷಣದಿಂದೊಡಗೂಡಿ, ೫ ವರ್ಷ ವಯಸ್ಸುಳ್ಳವರಾಗಿ, ಪ್ರವರ್ಧಮಾನರಾಗಿದಾರೆಂದು ತಿಳಿದು, ಅತ್ಯಂತ ಕುತೂಹಲದಿಂದ ಭೇಟಿಯನ್ನು ಮಾಡಿಕೊಳ್ಳಬೇಕೆಂದು, ಪೂರ್ಣಯ್ಯನವರ ಮುಖದಿಂದ ಮಹಾ ಮಾತುಶ್ರೀಲಕ್ಷ್ಮಮ್ಮಣ್ಣಿಯವರ ಸನ್ನಿಧಿಗೆ, ತಾವು ಧೊರೆಗಳವರ ಭೇಟಿಗೆ ಬರುತ್ತೇವೆಂದು ಹೇಳಿ ಕಳುಹಿಸಿ, ಮರುದಿನ ಪ್ರಾತಃಕಾಲದಲ್ಲಿ, ಮಹಾರಾಜಯೋಗ್ಯವಾದ ಪೀಠದಲ್ಲಿ ಮುಹೂರ್ತಮಾಡಿ ಯಿರುವ ಧೊರೆಗಳ ದರ್ಶನಕ್ಕೆ ಬರುವ ವೇಳೆಯಲ್ಲಿ, ತಮ್ಮ ಕಿಂಗ ಪಾದಷಹಾರ ಭೇಟಿಗೆ ಬರುವ ಮರ್ಯಾದೆಯಿಂದ ಬಂದು, ಮರ್ಯಾದೆಯನ್ನು ಮಾಡಿ ಕೂತುಕೊಂಡು, ಧೊರೆಗಳ ವಂಶಪಾರಂಪರ್ಯವನ್ನು ವಿಚಾರಿಸಿ, ತಮ್ಮ ಸಮೀಪದಲ್ಲಿ ಇದ್ದ ಪತ್ರವನ್ನು ಸರಿನೋಡಿಕೊಂಡು, ಮಹಾ ಮಾತುಶ್ರೀಯವರಾದ ಲಕ್ಷ್ಮಮ್ಮಣ್ಣಿಯವರ ಸನ್ನಿಧಿಗೆ, ಹಿಂದವೀ ಮಾತು ತುರುಕಮಾತು ಕನ್ನಡಮಾತು ಸಹಾ ಬಂದ ಸ್ತ್ರೀಮುಖದಿಂದ "ನೀವು ವಂಶಪಾರಂಪರ್ಯವಾಗಿ ಸಿಂಹಾಸನಾರೂಢರಾಗಿ ಧೊರೆತನವನ್ನು ಮಾಡಿದವರು. ನಾವು ನಿಮ್ಮ ವೃತ್ತಾಂತವನ್ನೆಲ್ಲಾ ವಿಸ್ತಾರವಾಗಿ ವಿಚಾರಿಸಿ ಇದೇವೆ. ಇಷ್ಟು ದಿವಸವೂ ಅನುಸರಿಸಿ ಬಂದಂಥಾಯೋಚನೆಯನ್ನು ಬಿಟ್ಟು ಸಂತೋಷದಿಂದ ಇರುವವರು ಆಗಬೇಕು. ನಿಮ್ಮ ಭಾಗ್ಯದಿಂದ ನಿಮ್ಮ ಮನೋರಥವು ಸ್ಸಫಲವಾಗುವದು. ಧೈರ್ಯದಲ್ಲಿರುವವರು ಆಗಬೇಕು" ಎಂದು ಹೇಳಿಕಳುಹಿಸಿ, ಅವರ ಮರ್ಯಾದಾನುಸಾರವಾಗಿ ಸಂರಕ್ಷಣೆ ಮಾಡುವಂತೆ ಅಜ್ಞಾಪಿಸಿ, ತಾವೂ ಅಜಾಸ್ಥಾನಕ್ಕೆಯೋಗ್ಯವಾದ ಸನ್ಮಾನಗಳನ್ನು ಹೊಂದಿ, ಇಳಿದಿದ್ದ ಸ್ಥಳಕ್ಕೆ ಬಂದು, ತಮ್ಮ ಧಣಿಯ ಸನ್ನಿಧಿಗೆ ಅಲ್ಲಿನ ವೃತ್ತಾಂತವನ್ನೆಲ್ಲಾ ವಿಸ್ತಾರವಾಗಿ ಕಾಣಿಸಿ ಪತ್ರವನ್ನು ಬರೆದು ಕಳುಹಿಸಿ, ದುಷ್ಟರಿಗೆ ಅವಕಾಶವಾಗದಂತೆ ಜನಗಳಿಗೆ ಸಮಾಧಾನವನ್ನು ಹೇಳಿ ಜಾಗರೂಕರಾಗಿ ಶ್ರೀರಂಗಪಟ್ಟಣವನ್ನು ಸಂರಕ್ಷಿಸಿಕೊಂಡು ಇದ್ದರು.

ಅನಂತರದಲ್ಲಿ ಮೇಲೆ ಹೇಳಿದ ಇಂಗ್ಲಿಷ್ ಸರದಾರರಿಗೆ ಅವರ ಅಭಿಪ್ರಾಯಾನುಸಾರವಾಗಿ ವಿಜ್ಞಾಪನಾ ಪತ್ರಿಕೆಯು ಬರಲು, ಆ ಸರದಾರರು ಆ ಪತ್ರಿಕೆಯನ್ನು ಕಂಡು ಬಹಳ ಸಂತೋಷಪಟ್ಟು, ಟೀಪೂ ಸುಲ್ತಾನನ ಹೆಂಗಸರು ಮಕ್ಕಳನ್ನು ತಮ್ಮ ಕಡೇ ಪಹರೇ ಚೌಕಿಯಿಂದ ರಾಯವೇಲೂರಿಗೆ ಕಳುಹಿಸಿ, ಅವನ ಮನೆಯಲ್ಲಿದ್ದ ಸರ್ವಸ್ವವನ್ನೂ ತೋಷೀಖಾನೆಯಲ್ಲಿ ಇದ್ದ ಹಣವನ್ನೂ ತೆಗೆದುಕೊಂಡು, ಅವನು ಮಾಡಿಸಿಕೊಂಡಿದ್ದ ರತ್ನಮಯವಾದ ವ್ಯಾಘ್ರಾಸನವನ್ನು ಮುರಿದು, ಅದನ್ನು ಆ ದ್ರವ್ಯದ ಕೂಡಲೆ ತಮ್ಮ ದೇಶಕ್ಕೆ ಕಳುಹಿಸಿ, ಪೂರ್ಣಯ್ಯನವರನ್ನು ಕರೆಯಿಸಿ "ಧೊರೆಗಳಿಗೆ ಪರಂಪರಾ ಪ್ರಾಪ್ತವಾಗಿ ಬಂದ ಮಹೀಶೂರಲ್ಲಿಯೇ ಪಟ್ಟಾಭಿಷೇಕವನ್ನು ಮಾಡಿಸಬೇಕಾಗುತ್ತದೆ. ನೀನು ಮಹೀಶೂರಿಗೆ ಹೋಗಿ, ಅಲ್ಲಿ ಧೊರೆಗಳ ಸಂಪ್ರದಾಯಾನುಸಾರವಾಗಿ ಪಟ್ಟಾಭಿಷೇಕ ಮಹೋತ್ಸವಕ್ಕೆ ಬೇಕಾದ ಸಾಮಗ್ರಿಗಳನ್ನು ಸಿದ್ಧಪಡಿಸು" ಎಂದು ಅಪ್ಪಣೆಯನ್ನು ಕೊಟ್ಟರು. ಪೂರ್ಣಯ್ಯನವರು ಮಹಾಮಾತುಶ್ರೀ ಲಕ್ಷ್ಮಮ್ಮಣ್ಣಿಯವರ ಸನ್ನಿಧಾನಕ್ಕೆ ಬಂದು, ಈ ವಿವರಗಳನ್ನು ಬಿನ್ನವಿಸಿ, ರಾಜಒಡೆಯರವರು ಆದಿಯಾಗಿ ಆಳುತ್ತಿದ್ದ ಸಿಂಹಾಸನವನ್ನು ತೆಗೆಯಿಸಿಕೊಂಡು, ಧೊರೆಗಳನ್ನೂ ಇವರ ಮಾತುಶ್ರೀಯವರು ಮುಂತಾದ ಅರಮನೇ ಜನಗಳನ್ನೂ ಬಂಧುಜನ ಸೇನಾಜನ ಮುಂತಾದವರನ್ನೂ ಸಹಾ ಮಹೀಶೂರಿಗೆ ಕರೆದುಕೊಂಡು ಬಂದು, ಕೋಟೆಗೆ ಸಮೀಪದಲ್ಲಿ ಕಟ್ಟಿಸಿ ಯಿದ್ದ ನಜರಬಾದು ಎಂಬ ಕೋಟೇ ಅರಮನೆಯಲ್ಲಿ ಧೊರೆಗಳನ್ನು ಇಳಿಸಿದರು. ಆ ಸರದಾರರೂ ಮಹೀಶೂರಿಗೆ ಬಂದು ಗುಡಾರಗಳನ್ನು ಹಾಕಿಸಿಕೊಂಡು ಅಲ್ಲಿಯೇ ಇದ್ದರು.

ಪಟ್ಟಾಭಿಷೇಕ ಮಹೋತ್ಸವ ಕಾಲದಲ್ಲಿ ನಡೆದ ವೃತ್ತಾಂತ.—ಮಹಾಮಾತುಶ್ರೀ ಲಕ್ಷ್ಮಮ್ಮಣ್ಣಿಯವರು ವೃದ್ಧರಾಗಿ ಇರುವ ಸುವಾಸಿನಿಯರನ್ನು ಕರೆಯಿಸಿ, ಧೊರೆಗಳಿಗೆ ಮಂಗಳಸ್ನಾನ ಮುಂತಾದ ಶುಭಕಾರ್ಯಗಳನ್ನು ಮಾಡಿಸಿ, ಅರಮನೇ ಸಂಪ್ರದಾಯಾನುಸಾರವಾಗಿ ಶ್ರೀ ಚಾಮುಂಡೇಶ್ವರೀ ಜ್ವಾಲಾಮುಖೀ ನಂಜುಂಡೇಶ್ವರ ವೆಂಕಟರಮಣಸ್ವಾಮಿ ದೇವರಿಗೆ ಕಾಣಿಕೆ ಕಪ್ಪಗಳನ್ನು ಕಟ್ಟಿ, ಸುವಾಸಿನಿಯರ ಪ್ರಾರ್ಥನೆಗಳನ್ನು ಮಾಡಿಸಿ' ಆಭರಣಗಳಿಂದ ಅಲಂಕಾರವನ್ನು ಮಾಡಿಸಿ, ಚೇಟಿಕಾ ಸ್ತ್ರೀಯರಿಂದ ಅಂತಃಪುರ

ದಲ್ಲಿ ಮಾಡಿಸತಕ್ಕ ರಾಜೋಪಚಾರಗಳನ್ನು ಮಾಡಿಸಿದರು. ಆಸಮಯ ದಲ್ಲಿ ಪೂರ್ಣಯ್ಯನವರು ಸರದಾರರ ಅಪ್ಪಣೆಮೇರೆಗೆ ಲಕ್ಷ್ಮೀರಮಣ ಸ್ವಾಮಿಯ ದೇವಸ್ಥಾನದಲ್ಲಿ ಚಪ್ಪರವನ್ನು ಹಾಕಿಸಿ, ಮೇಲುಕಟ್ಟನ್ನು ಕಟ್ಟಿಸಿ, ಅಭಿಷೇಕಮಂಟಪವನ್ನು ಅಲಂಕರಿಸಿ, ಅಲಂಕಾರ್ಯವನ್ನು ಮಾಡಿಸಿ ಸಿಂಹಾಸನವನ್ನು ತಂದಿರಿಸಿ, ಪಟ್ಟಾಭಿಷೇಕ ಸಾಮಗ್ರಿಗಳನ್ನು ಸಿದ್ಧಪಡಿಸಿ, ಸರ್ವಜನರೂ ಬಂದು ಕಾದುಕೊಂಡಿರುವಂತೆ ಆಜ್ಞೆ ಮಾಡಿ, ನಜರಬಾದು ಕೋಟೆಗೆ ಬಂದು, ಸರ್ವಾಲಂಕಾರ ಭೂಷಿತರಾಗಿ ಮುಹೂರ್ತ ಮಾಡಿರುವ ಧೊರೆಗಳ ಹಸ್ತಲಾಘವವನ್ನು ಕೊಟ್ಟು ಪಲ್ಲಕ್ಕಿಯಲ್ಲಿ ಮುಹೂರ್ತ ಮಾಡಿಸಿ, ಪಟ್ಟದ ಕತ್ತಿಯನ್ನೂ ಶಿಖಾಸರವನ್ನೂ ಸಹ ಇರಿಸಿ, ಪಟ್ಟಕ್ಕೆ ಯೋಗ್ಯ ವಾದ ಆನೆ ಕುದುರೆಗಳಿಗೆ ಅಲಂಕಾರ ಮಾಡಿಸಿ; ಶ್ವೇತಚ್ಛತ್ರ, ಉಭಯ ಚಾಮರ, ಸೂರಿಪಾನೆ, ಅಷ್ಟ ಮಂಗಳದ್ರವ್ಯ, ಆನೆ, ಕುದುರೆ, ಧ್ವಜ, ಶಂಖ, ಚಕ್ರ, ಅಂಕುಶ, ಹನುಮದ್ಗರುಡ, ಕಂಠೀರವ ಮೊದಲಾದ ಸಮಸ್ತ ಬಿರುದುಗಳಿಂದಲೂ, ವೀಣಾ ವೇಣು ಮೃದಂಗ ಮೊದಲಾದ ಸಮಸ್ತ ವಾದ್ಯ ಗಳಿಂದಲೂ, ನರ್ತನ ಮಾಡುತ್ತಿರುವ ವಾರಾಂಗನೆಯರಿಂದಲೂ, ಬಿರುದಾ ವಳಿಯ ಗದ್ಯ ಪದ್ಯಗಳನ್ನು ಹೊಗುಳುತ್ತಿರುವ ಭಟರಿಂದಲೂ, ಮಹಾರಾಜ ಮರ್ಯಾದೆಯನ್ನು ಮಾಡಿಸುತ್ತಾ ಲಕ್ಷ್ಮೀರಮಣಸ್ವಾಮಿ ದೇವಸ್ಥಾನಕ್ಕೆ ಕರೆದುಕೊಂಡು ಬಂದರು. ಆ ಸಮಯದಲ್ಲಿ ಉಭಯಪಾರ್ಶ್ವಗಳಲ್ಲಿಯೂ ಇಂಗ್ಲಿಷ್ ಬಹದರವರಕಡೆ ಸೇನಾಜನರು ಸಾಲುಸಾಲಾಗಿ ನಿಂತುಕೊಂಡು, ಗಾಟು ಪರ್ಜೀಟು ಸಲ್ಲಾಂಗಳನ್ನು ಮಾಡುತ್ತಿದ್ದರು; ಕಟ್ಟಿಗೆಯವರು ಚೋಪದಾರರು ಪರಾಕು ಪರಾಕೆಂದು ಹೊಗಳುತ್ತಿದ್ದರು. ಇಷ್ಟು ವೈಭವ ದೊಡನೆ ಮಹಾರಾಜರವರ ಸವಾರಿಯು ದೇವಸ್ಥಾನದ ಸಮೀಪಕ್ಕೆ ಬಂದ ನಂತರ, ಪೂರ್ಣಯ್ಯನವರು ಹಸ್ತಲಾಘವವನ್ನು ಒಪ್ಪಿಸಿ ಪಟ್ಟಾಭಿಷೇಕ ಮಂಟಪದ ಭದ್ರಾಸನದಲ್ಲಿ ಮುಹೂರ್ತ ಮಾಡಿಸಿದರು.

ಅನಂತರದಲ್ಲಿ ಯಥಾ ಶಾಸ್ತ್ರೀಯವಾಗಿ ಕಂಕಣ ಧಾರಣೆಯಾಗಿ, ಸಭಾನುಜ್ಞೆ ಪುಣ್ಯಾಹ ನವಗ್ರಹ ದೇವತಾರಾಧನೆ ಅಭಿಷೇಕಾರ್ಥವಾಗಿ ಕಲ್ಪೋಕ್ತ ದೇವತಾಕಲಶಪೂಜಾ ಹವನ ಹೋಮ ಮುಂತಾದ ಶುಭ ಕಾರ್ಯಗಳನ್ನು ನೆರವೇರಿಸಿದರು. ಮುಹೂರ್ತ ಬಂದ ಬಳಿಕ, ಜನರಲ್

ಹಾರಿಸ ಸಾಹೇಬರು, ವೆಲ್ಲೆಸ್ಲಿ ಸಾಹೇಬರು, ಕ್ಲೋಸಬಹದರವರು, ರೀಟ ಸಾಹೇಬರು, ಮೊಗಲೋಟಸಾಹೇಬರು ಮುಂತಾದ ಸರ್ದಾರರು ತಮ್ಮತಮ್ಮ ಮರ್ಯಾದೆಮೇರೆಗೆ ಟೋಪಿಗಳನ್ನು ತೆಗೆದು ಕೈಗಳಲ್ಲಿ ಹಿಡಿದುಕೊಂಡು, ಸಿಂಹಾಸನದ ಬಳಿಗೆ ಬಂದು ಧೊರೆಗಳ ಕೈಹಿಡಿದು ಸಲ್ಲಾಂಗಳನ್ನು ಮಾಡಿದರು. ಅನಂತರ ಹೈದರಾಬಾದು ನಿಜಾಮದ್ಧವಲಾಕಡೆ ಮಿರ್ ಅಲಂ ಸಹ ಮರ್ಯಾದೆ ಮಾಡಿದಮೇಲೆ, ಜನರಲ್ ಹಾರಿಸ ಸಾಹೇಬರು ಹೈದರಾಬಾದು ಮಿರ ಅಲಂ ಇವರಿಬ್ಬರೂ, ತೇಜಶ್ಶಾಲಿಗಳಾದ ಈ ಧೊರೆಗಳ ಬಲದ ಎಡದ ಭುಜಗಳನ್ನು ಕ್ರಮವಾಗಿ ಹಿಡಿದುಕೊಂಡು, ಸುಮುಹೂರ್ತದಲ್ಲಿ ಸಿಂಹಾಸನದಲ್ಲಿ ಮುಹೂರ್ತಮಾಡಿಸಿ ಪಟ್ಟಾಭಿಷೇಕವನ್ನು ಮಾಡಿಸಿದರು. ಆ ಕಾಲದಲ್ಲಿ ಅನೇಕ ಫಿರಂಗಿಗಳನ್ನು ಹಾರಿಸಿದರು. ಸರ್ವರೂ ಲಾಜಾಪುಷ್ಪಗಳನ್ನು ಸಮರ್ಪಿಸಿದ ಅನಂತರ, ಪುರೋಹಿತರು ಜೋಯಿಸರು ಋತ್ವಿಕ್ಕುಗಳು ಮುಂತಾದ ಬ್ರಾಹ್ಮಣರು ಉತ್ತಮ ಲಕ್ಷಣಗಳಿಂದ ಒಡಗೂಡಿರುವ ಪಟ್ಟಕ್ಕೆ ಯೋಗ್ಯವಾದ ಆನೆ ಕುದುರೆಗಳಿಗೆ ಅದೇ ಲಗ್ನದಲ್ಲಿ ಧೊರೆಗಳ ಆಜ್ಞಾನುಸಾರವಾಗಿ ಪಟ್ಟಾಭಿಷೇಕವನ್ನು ಮಾಡಿ, ಹಣೇಮೇಲೆ ಚಿನ್ನದ ಪಟ್ಟೆಯನ್ನು ಕಟ್ಟಿ, ಆನೆಗೆ ಹಂಸರಾಜನೆಂಬದಾಗಿಯೂ ಕುದುರೆಗೆ ಜಯರಾಮನೆಂಬದಾಗಿಯೂ ಹೆಸರನ್ನು ಉಂಟುಮಾಡಿದರು. ಆ ಕಾಲದಲ್ಲಿ ಜನರಲ್ ಹಾರಿಸ್ ಸಾಹೇಬರು ಧೊರೆಗಳಿಗೆ ರತ್ನಾಭಿಷೇಕವನ್ನು ಮಾಡಿ, ವಿಲಾಯತಿ ಕಿಂಗ್ ಪಾದಷಹಾರು ಕಳುಹಿಸಿ ಕೊಟ್ಟಿದ್ದ ಪತ್ರಿಕೆಯನ್ನು ಒಪ್ಪಿಸಿ, ಧೊರೆಗಳ ವಂಶಕ್ರಮವಾಗಿ ಬಂದಿರುವ ಶಿಖಾಸರವನ್ನೂ ಪಟ್ಟದ ಕತ್ತಿಯನ್ನೂ ಧೊರೆಗಳಿಗೆ ಒಪ್ಪಿಸಿ, ಶ್ರೀ ಕೃಷ್ಣರಾಜ ಒಡೆಯರೆಂಬದಾಗಿ ಪಟ್ಟಾಭಿಷೇಕ ನಾಮಧೇಯವನ್ನು ಉಂಟುಮಾಡಿ, ಧೊರೆಗಳಿಗೆ ಯೋಗ್ಯವಾದ ವಸ್ತ್ರಾಭರಣ ಆನೆ ಕುದುರೆ ರಥ ಮುಂತಾದ ವಸ್ತುಗಳನ್ನು ಕೈಗಾಣಿಕೆಯಾಗಿ ಒಪ್ಪಿಸಿ, ಸಲ್ಲಾಂಗಳನ್ನು ಮಾಡಿ "ಮಹಾಸ್ವಾಮಿ! ನಮ್ಮ ಧಣಿಗಳ ಆಜ್ಞಾನುಸಾರವಾಗಿ ಈ ವಸ್ತುಗಳನ್ನು ಒಪ್ಪಿಸಿ ಯಿರುವೆನು" ಎಂದು ಹೇಳಿದರು. ಅನಂತರದಲ್ಲಿ ವೆಲ್ಲೆಸ್ಲಿ ಸಾಹೇಬರು ಮುಂತಾದ ಸರದಾರರೂ ಹೈದರಾಬಾದು ಮಿರ್ ಅಲಂರವರೂ ಪೂರ್ಣಯ್ಯನವರು ಮುಂತಾದ ಸಮಸ್ತ ಅಧಿಕಾರಿಗಳೂ ಧೊರೆಗಳ ಬಂಧುಜನರೂ ಪಟ್ಟ

ವರ್ತಕರೂ ಪಟ್ಟಣದಲ್ಲಿರುವ ಜನರೂ ಸಹ ಕೈಕಾಣಿಕೆಗಳನ್ನು ಒಪ್ಪಿಸಿ ಮುಜರೆಗಳನ್ನು ಮಾಡಿದರು.

ಆಬಳಿಕ ಬುದ್ಧಿಶಾಲಿಗಳಾದ ಜನರಲ್ ಹಾರಿಸ ಸಾಹೇಬರವರು ಧೊರೆಗಳಿಗೆ ಹಿತಕಾರ್ಯವನ್ನು ಮಾಡಬೇಕೆಂದು ಆಲೋಚಿಸಿ, ರಾಜ್ಯತಂತ್ರದಲ್ಲಿ ಜಾಗರೂಕರಾದ, ಸಕಲ ಕಾರ್ಯಗಳಲ್ಲಿಯೂ ಅನುಭವಶಾಲಿಗಳಾದ, ಹಿಂದೆ ನಡೆದ ಮತ್ತು ಮುಂದೆ ನಡೆಯುವ ವಿಚಾರಗಳನ್ನು ಸಹ ತಿಳಿದಿರುವ ಪ್ರಾಜ್ಞರಾದ ಪೂರ್ಣಯ್ಯನವರನ್ನು ಸಭಾಮಧ್ಯದಲ್ಲಿ ಕರೆದು ಹೇಳಿದ ಮಾತು ಏನೆಂದರೆ :—"ನಾವು ಈಗ ಧೊರೆಗಳ ಸನ್ನಿಧಿಯಲ್ಲಿ ನಿನಗೆ ಮುಖ್ಯವಾದ ಮಂತ್ರಿ ಪದವಿಯನ್ನು ಕೊಡುತ್ತೇವೆ. ನೀನು ಇಂದು ಮೊದಲುಗೊಂಡು ಸಮಸ್ತ ಕಾರ್ಯಗಳಲ್ಲಿಯೂ ಜಾಗರೂಕನಾಗಿ ಇದ್ದು, ಧೊರೆಗಳಿಗೆ ಹಿತಕಾರ್ಯವನ್ನೇ ಆಚರಿಸುತ್ತಾ, ಈ ಸಂಸ್ಥಾನದ ಪೂರ್ವಮರ್ಯಾದೆಯನ್ನು ಮೀರದೆ, ಧೊರೆಗಳಿಗೆ ಬಾಲ್ಯವು ಕಳೆದು ಸರ್ವಸ್ವತಂತ್ರವಾಗಿ ರಾಜ್ಯಕೋಶಗಳ ವಿಚಾರಣೆಯನ್ನು ಮಾಡತಕ್ಕ ವಯಸ್ಸು ಬರುವವರಿಗೂ, ನೀನೇ ಸಕಲ ಕಾರ್ಯಗಳನ್ನೂ ವಿಚಾರಣೆ ಮಾಡಿಕೊಂಡಿದ್ದು, ಆ ಬಳಿಕ ಧೊರೆಗಳ ಆಜ್ಞಾನುಸಾರವಾಗಿ ಇರುವವನಾಗು. ನೀನು ಈ ರೀತಿಯನ್ನು ಬಿಟ್ಟು ಮತ್ತೊಂದು ರೀತಿಯಾಗಿ ನಡೆದರೆ, ಸ್ವಾಮಿದ್ರೋಹ ಮಾಡಿದ ಜನಗಳಿಗೆ ಮಾಡತಕ್ಕ ಶಿಕ್ಷೆಗೆ ಒಳಗಾಗುತ್ತೀಯೆ. ನಿನ್ನ ಮನಸ್ಸಿನಲ್ಲಿ ಸುಲ್ತಾನನ ಮಗನಿಗೆ ರಾಜ್ಯವನ್ನು ಕೊಡಿಸಬೇಕೆಂದಿದ್ದ ಅಭಿಪ್ರಾಯವನ್ನು ತಿಳಿದು ಇದ್ದಾಗ್ಯೂ, ಆ ಅಪರಾಧವನ್ನು ಕ್ಷಮಿಸಿ ಇಲ್ಲಿನ ಮಂತ್ರಿ ಪದವಿಯನ್ನು ಕೊಡಿಸಿ ಇದೇವೆ" ಎಂದು ಹೇಳಿ ನಮ್ರಭಾವದಿಂದ ಇರುವ ಪೂರ್ಣಯ್ಯನವರಿಗೆ ಧೊರೆಗಳಿಂದ ಮುಖ್ಯವಾದ ಮಂತ್ರಿ ಪದವಿಯನ್ನು ಕೊಡಿಸಿದರು.

ಜನರಲ್ ಹಾರಿಸಸಾಹೇಬರು, ಇಂಗ್ಲಿಷ್ ಬಹದರ್ ಸರದಾರರಿಗೂ ಧೊರೆಗಳಿಗೂ ಪರಸ್ಪರವಾಗಿ ನಡೆಯತಕ್ಕ ಮಾತುಗಳ ಅಭಿಪ್ರಾಯವನ್ನೆಲ್ಲಾ ಯಥಾರ್ಥವಾಗಿ ತಿಳಿಸುವಂತೆ ಬಕ್ಷೀರಾಯರಿಗೆ ವಕಾಲತ್ತನವನ್ನೂ ತೋಷೀಖಾನೆಯ ಅಧಿಕಾರವನ್ನೂ ಕೊಡಿಸಿದರು ; ಅತ್ಯಂತ ಬಲಶಾಲಿಗಳಾದ ಬಾದಾಮಿ

ಬಿಷ್ಟೋಪಂತರಿಗೆ ಸವಾರ ಕಚೇರೀ ಭಕ್ಷೀಗಿರಿಯನ್ನೂ, ಅಣ್ಣಾಜಿರಾಯರಿಗೆ ಈ ಕಚೇರೀ ಶಿರಸ್ತೇ ಕೆಲಸವನ್ನೂ, ಕಾನಜಾ ಖಾನನಿಗೆ ಬಾರಕಚೇರೀ ಭಕ್ಷೀಗಿರಿಯನ್ನೂ ಕೊಟ್ಟರು; ದಿವಾನ ಕಚೇರೀ ಶಿರಸ್ತೇ ಕೆಲಸಕ್ಕೆ ಬಾಬೂರಾಯರು, ಕೇಶವರಾಯರು, ಮಳವಳ್ಳೀ ಶ್ರೀನಿವಾಸರಾಯರು, ರಘುನಾಥರಾಯರು, ಇವರನ್ನು ನೇಮಿಸಿದರು; ವ್ಯಾಸರಾಯರಿಗೆ ಕಮರೀ ಕಚೇರೀ ಅಧಿಕಾರವನ್ನೂ, ತಿಪ್ಪಯ್ಯನವರಿಗೆ ಕಿಲ್ಲೇ ಕಚೇರೀ ಅಧಿಕಾರವನ್ನೂ ಕೊಟ್ಟರು. ಈ ರೀತಿಯಾಗಿ ಜನರಲ್ ಹಾರಿಸ್ ಸಾಹೇಬರು ಆಯಾ ಅಧಿಕಾರಗಳಿಗೆ ಯೋಗ್ಯರಾದ ಜನಗಳಿಗೆ ಆಯಾ ಅಧಿಕಾರವನ್ನು ಕೊಡಿಸಿದಮೇಲೆ, ತಮ್ಮ ಧಣಿಗಳ ಆಜ್ಞಾನುಸಾರವಾಗಿ ಕ್ಲೋಸ್ ಬಹದರರೆಂಬ ಸರದಾರರಿಗೆ, ಧೊರೆಗಳ ಯೋಗಕ್ಷೇಮವನ್ನು ವಿಚಾರಿಸಿ ತಮ್ಮ ಧಣಿಗೆ ತಿಳಿಸತಕ್ಕ ರೆಸಿಡೆಂಟ್ ಎಂಬ ಅಧಿಕಾರವನ್ನು ನೇಮಿಸಿ ಇಲ್ಲೇ ಯಿಟ್ಟು, ಈದೇಶಕಸ್ಥ ಧೊರೆಗಳ ಸಂರಕ್ಷಣಾರ್ಥವಾಗಿಯೂ ವೆಲ್ಲಸ್ಲಿ ಸಾಹೇಬರನ್ನೂ ಕೆಲವು ಸೈನ್ಯವನ್ನೂ ಶ್ರೀರಂಗ ಪಟ್ಟಣದಲ್ಲಿರುವಂತೆ ನೇಮಕ ಮಾಡಿದರು.

ಅನಂತರದಲ್ಲಿ ಧೊರೆಗಳು ಜನರಲ್ ಹಾರಿಸ್ ಸಾಹೇಬರು ಮುಂತಾದ ಸರದಾರರಿಗೆ ಅವರವರ ಮಾನಾನುಗುಣವಾಗಿ ವಸ್ತ್ರಾಭರಣ ಹೂವಿನ ಹಾರ ವೀಳ್ಯಗಳನ್ನು ಕೊಟ್ಟು ಮರ್ಯಾದೆ ಮಾಡಿದರು; ಅಧಿಕಾರಸ್ಥರು ಬಂಧುಜನರು ಮುಂತಾದ ಜನಗಳಿಗೂ, ಸೆಟ್ಟಿ ವರ್ತಕರು ಮೊದಲಾದ ಪಣಕಟ್ಟಿನ ಜನಗಳಿಗೂ ಹೂವಿನಹಾರ ವೀಳ್ಯಗಳನ್ನು ಕೊಡಿಸಿ, ಅವರು ತಂದು ಒಪ್ಪಿಸಿದ ಕೈ ಗಾಣಿಕೆಗಳನ್ನು ಒಪ್ಪಿಸಿಕೊಂಡು, ಅವರಿಂದ ನಜರು ಮುಜರೆಗಳನ್ನು ತೆಗೆದು ಕೊಂಡರು.

ಈ ಪೂರ್ವೋಕ್ತ ಪ್ರಕಾರವಾಗಿ ಪಟ್ಟಾಭಿಷೇಕ ಮಹೋತ್ಸವವು ಬೆಳೆದ ಮೇಲೆ, ಪೂರ್ಣಯ್ಯನವರು ಧೊರೆಗಳ ಹಸ್ತಲಾಘವನ್ನು ಹಿಡಿದು, ಧೊರೆಗಳನ್ನು ಪಲ್ಲಕ್ಕಿಯಲ್ಲಿ ಮುಹೂರ್ತ ಮಾಡಿಸಿದರು. ಅನಂತರದಲ್ಲಿ ಸವಾರಿಯು ನೆಜರಬಾದು ಅರಮನೆಗೆ ಚಿತ್ತಯಿಸುತ್ತಿರುವ ಸಮಯದಲ್ಲಿ, ಇಂಗ್ಲೀಷ ಸರದಾರರು ಬಹದರುಗಳೆಲ್ಲಾ ತಮ್ಮ ತಮ್ಮ ಮರ್ಯಾದಾನುಗುಣವಾಗಿ ಪಲ್ಲಕ್ಕಿಯ ಮುಂದುಗಡೆಯಲ್ಲಿ ಉಭಯ ಪಾರ್ಶ್ವಗಳಲ್ಲಿಯೂ ತಮ್ಮ ಸೇನೆಗಳಿಂದ

ಗಾಟು ಫರ್ಜೀಟು ಸಲ್ಲಾಂ ಮುಂತಾದ ಮರ್ಯಾದೆಗಳನ್ನು ಮಾಡಿಸುತ್ತಾ ಪೂರ್ವದಂತೆ ಅನೇಕ ವೈಭವದಿಂದ ನಜರಬಾಧ್ ಅರಮನೆಗೆ ಕರೆದುಕೊಂಡು ಹೋಗಿಬಿಟ್ಟು ತಮ್ಮ ಗುಡಾರಕ್ಕೆ ಹೊರಟು ಹೋದರು. ಪೂರ್ಣಯ್ಯನವರು ಧೊರೆಗಳ ಹಸ್ತಲಾಘವನ್ನು ಹಿಡಿದು ನಜರಬಾದು ಅರಮನೆಯ ಬಾಗಿಲಲ್ಲಿ ಮುತ್ತೈದೆಯರಿಂದ ಆರ್ತಿಗಳನ್ನು ಮಾಡಿಸಿದ ಅನಂತರ, ಧೊರೆಗಳು ಅಂತಃಪುರಕ್ಕೆ ಚಿತ್ತಯಿಸಿದರು. ಆಸಮಯದಲ್ಲಿ ಮಹಾಮಾತುಶ್ರೀ ಲಕ್ಷ್ಮಮ್ಮಣ್ಣಿಯವರ ಆಜ್ಞಾನುಸಾರವಾಗಿ, ಅರಮನೆಯ ಸಂಪ್ರದಾಯದ ಮೇರೆಗೆ, ಚೇಟಿಕಾ ಸ್ತ್ರೀಯರು ಚಿನ್ನದ ಹರಿವಾಣದಲ್ಲಿ ರನ್ನದ ಕಲಶಗಳಿಂದ ಪಾದಗಳನ್ನು ತೊಳದು ಬಾಗಿಲಲ್ಲಿ ದೃಷ್ಟಿ ಪರಿಹಾರಾರ್ಥವಾಗಿ ಆರ್ತಿಗಳನ್ನು ಮಾಡಿದರು. ಅನಂತರದಲ್ಲಿ ಮಹಾರಾಜಮರ್ಯಾದೆಗಳನ್ನು ತಿಳಿದಿರುವ ಚೇಟಿಕಾ ಸ್ತ್ರೀಯರು ಬಂದು, ಧೊರೆಗಳ ಉಭಯ ಪಾರ್ಶ್ವಗಳಲ್ಲಿಯೂ ಹಸ್ತಲಾಘವವನ್ನು ಹಿಡಿದು, ಉಮಾ ಪಕ್ಷಿಗಳಿಂದ ಮಾಡಲ್ಪಟ್ಟ ಮೋರ್ಚಾಲ್‌ಗಳಿಂದಲೂ, ಶ್ವೇತಛತ್ರ, ಉಭಯಚಾಮರ ವೀಳ್ಯ ಕಾಳಾಂಜಿ ಪಟಪಾವಡೆ ಕನ್ನಡಿ ಬೀಸಣಿಗೆ ಮುಂತಾದವುಗಳಿಂದಲೂ ಮಹಾ ರಾಜೋಪಚಾರಗಳನ್ನು ಮಾಡಿ, ನವರತ್ನದ ಪೀಠದಲ್ಲಿ ಮುಹೂರ್ತ ಮಾಡಿಸಿ, ನವರತ್ನದ ಆರ್ತಿಗಳನ್ನು ಎತ್ತಿದರು. ಅನಂತರದಲ್ಲಿ ಮಹಾ ಮಾತುಶ್ರೀಯವರು ಮುಂತಾದ ಬಂಧುಜನ ಮೊದಲಾದ ಸ್ತ್ರೀಯರು ತಮ್ಮ ತಮ್ಮ ಮರ್ಯಾದಾನುಗುಣವಾಗಿ ಅಡ್ಡಬೀಳತಕ್ಕವರು ಅಡ್ಡಬಿದ್ದು ಆಶೀರ್ವಾದ ಮಾಡತಕ್ಕವರು ಆಶೀರ್ವಾದವನ್ನು ಮಾಡಿದಮೇಲೆ, ಧೊರೆಗಳು ಬಂಧುಜನ ಸಮೇತರಾಗಿ ಆರೋಗಣೆಯನ್ನು ಒಪ್ಪಿಸಿಕೊಂಡರು. ಆದಿನ ರಾತ್ರಿ ಮೊದಲು ೫ ದಿವಸ ಆರ್ತ್ಯಕ್ಷತೆ ಮುಂತಾದ ಉತ್ಸವಗಳು ಅತಿ ಸಂಭ್ರಮದೊಡನೆ ಜೆಳೆದವು.

ಇಂಗ್ಲಿಷ್ ಸರದಾರರಿಗೂ, ಮಹಾಮಾತುಶ್ರೀಯವರು ಮತ್ತು ಧೊರೆಗಳಿಗೂ ಭೇಟಿ.—ಮರುದಿನ ಪ್ರಾತಃಕಾಲದಲ್ಲಿ ಪೂರ್ಣಯ್ಯನವರು ಜನರಲ್ ರಿಸ್ ಮುಂಹಾತಾದ ಮುಖ್ಯ ಸರದಾರರ ಬಳಿಗೆ ಹೋಗಿ, ಅವರನ್ನು ಕರೆದುಕೊಂಡುಬಂದು, ತೆರೇಮರೆಯಲ್ಲಿರುವ ಮಹಾ ಮಾತುಶ್ರೀ ಲಕ್ಷ್ಮಮ್ಮಣ್ಣಿಯವರಿಗೂ, ಮಹಾರಾಜಯೋಗ್ಯವಾದ ಪೀಠದಲ್ಲಿ ಮುಹೂರ್ತ ಮಾಡಿರುವ ಧೊರೆಗಳಿಗೂ ಭೇಟಿಯನ್ನು ಮಾಡಿಸಿದರು. ಆ ಕಾಲದಲ್ಲಿ ಆ ಸರದಾರರು

ತಮ್ಮ ತಮ್ಮ ಮರ್ಯಾದೆ ಮೇರೆಗೆ ಬಂದು ಸಲ್ಲಾಂಗಳನ್ನು ಮಾಡಿ ಕುಳಿತು ಕೊಂಡು, ದೇಶ ಕೋಶ ವ್ಯವಸ್ಥೆಗಳನ್ನು ಚೆನ್ನಾಗಿ ನಿಬಂಧನೆ ಮಾಡಿ, ಅಲ್ಲಿರಿಸಿದ ತಮ್ಮ ಫೌಜಿನ ಖರ್ಚು ಮುಂತಾದ ಖರ್ಚುಗಳಿಗೆ ಈ ಸೀಮೆ ಯಿಂದ ಕೆಲವು ದ್ರವ್ಯವನ್ನು ಕೊಡಬೇಕೆಂಬದಾಗಿ ನಿಬಂಧನೆ ಮಾಡಿ ದ್ದಲ್ಲದೆ "ನಮಗೆ ಕಾರ್ಯ ಬಿದ್ದಾಗ ನಿಮ್ಮ ಫೌಜನ್ನು ನಮಗೆ ಸಹಾಯ ರ್ಥವಾಗಿ ಕಳುಹಿಸಿ ಕೊಡಬೇಕು. ನಿಮ್ಮಲ್ಲಿ ನಡೆಯತಕ್ಕ ನವರಾತ್ರಿಯ ಉತ್ಸವ ಮುಂತಾದ ಉತ್ಸವಗಳಿಗೆ ನೀವು ಅಪ್ಪಣೆ ಕೊಟ್ಟು ಕಳುಹಿಸಿದರೆ, ನಮ್ಮ ಕಡೇ ಸರದಾರರು ಬಂದು ಆ ಮಹೋತ್ಸವಗಳನ್ನು ನೋಡಿ ಅಪ್ಪ ಣೆಯನ್ನು ತೆಗೆದುಕೊಂಡು ಹೊರಟು ಹೋಗುತ್ತಾರೆ" ಎಂದು ಹೇಳಿದರು. ಅನಂತರದಲ್ಲಿ ಲಕ್ಷ್ಮಮ್ಮಣ್ಣಿಯವರು "ನಮ್ಮ ಚಾಕರನಾಗಿದ್ದ ಸುಲ್ತಾನನು ನಮ್ಮ ದೇಶಕೋಶಗಳನ್ನು ತಾನೇ ಆಕ್ರಮಿಸಿಕೊಂಡು ಲೋಕ ಕಂಟಕ ನಾಗಿ ಇದ್ದನು. ನೀವು ಅವನನ್ನು ಸಂಹಾರಮಾಡಿ ಸ್ವಾಧೀನ ಮಾಡಿ ಕೊಂಡವರಾದಾಗ್ಯೂ, ಸತ್ಯಸಂಧರಾಗಿ ಸರ್ವಕಾಲದಲ್ಲಿಯೂ ನೀರಮೇಲೆ ಸಂಚಾರ ಮಾಡುತ್ತಲಿರುವವರಾದಕಾರಣ, ಜೀರ್ಣೋದ್ಧಾರಮಾಡಿ ನಮ್ಮ ದೇಶವನ್ನು ಪೂರ್ವದಂತೆ ನಮ್ಮ ಸ್ವಾಧೀನ ಮಾಡಿದಿರಿ. ಅಂಥಾ ನಿಮಗೂ ನಮಗೂ ಸೂರ್ಯಚಂದ್ರರು ಇರುವವರಿಗೂ ಕಪಟವಿಲ್ಲದೆ ಶಾಶ್ವತವಾಗಿ ಸ್ನೇಹ ಇರಬೇಕು" ಎಂದು ಹೇಳಿ, ಹೂವಿನಹಾರ ವೀಳ್ಯಗಳನ್ನು ಕೊಟ್ಟು ಕಳುಹಿಸಿಕೊಟ್ಟರು.

ಟೀಪೂ ಸುಲ್ತಾನನು ಗತಿಸಿದಮೇಲೆ ಮುಮ್ಮಡಿ ಕೃಷ್ಣರಾಜಒಡೆಯ ರವರಿಗೆ ಮಹೀಶೂರ ದೇಶವನ್ನು ವಿಭಾಗ ಮಾಡಿಕೊಡುವ ವಿಷಯದಲ್ಲಿ ಇಂಗ್ಲಿಷಿನವರಿಗೂ ನಿಜಾಮರವರಿಗೂ ೧೭೯೯ನೇ ಇಸವಿ ಜೂನ್ ೨೨ರಲ್ಲಿ ಒಂದು ತಹನಾಮೆಯು ನಡೆಯಿತು. ಅದರ ತಾತ್ಪರ್ಯವೇನಂದರೆ:—

ಟೀಪೂ ಸುಲ್ತಾನನು ಫ್ರೆಂಚ್ ಜನರಲ್ಲಿ ಸ್ನೇಹವನ್ನು ಮಾಡಿಕೊಂಡು, ಇಂಗ್ಲಿಷಿನವರ ಮೇಲೂ ನಿಜಾಮರಮೇಲೂ ಯುದ್ಧ ಮಾಡುವದಕ್ಕೋಸ್ಕರ ಫ್ರೆಂಚ್ ಸೈನ್ಯವನ್ನು ಬರಮಾಡಿ ಕೊಂಡು, ನಿಷ್ಕಾರಣವಾಗಿ ದ್ವೇಷವನ್ನು ಬೆಳೆಯಿಸಿದ್ದರಿಂದ, ಇಂಗ್ಲಿಷಿನವರೂ ನಿಜಾಮರೂ ತಮ್ಮ ಸೈನ್ಯಗಳನ್ನು ಸೇರಿಸಿಕೊಂಡು, ತಮ್ಮ ದೇಶವನ್ನು ಸಂರಕ್ಷಣೆ ಮಾಡಿಕೊಳ್ಳುವದ ಕ್ಕೋಸ್ಕರವೂ, ಈ ಟೀಪೂ ಸುಲ್ತಾನನ ಕ್ರೌರ್ಯದಿಂದ ಉಂಟಾಗುವ ಕಂಟಕಗಳನ್ನು

ತಪ್ಪಿಸುವದಕ್ಕೋಸ್ಕರವೂ, ಅವನ ಮೇಲೆ ಯುದ್ಧಮಾಡಿ ಜಯಿಸಿ, ಅವನನ್ನು ಸಂಹರಿಸಿ, ಅವನ ದೇಶವನ್ನು ಸ್ವಾಧೀನಪಡಿಸಿಕೊಂಡಮೇಲೆ, ದೈವಬಲದಿಂದಲೂ ತಾವು ಅನುಸರಿಸುತ್ತಿದ್ದ ಧರ್ಮದಿಂದಲೂ ತಮಗೆ ಪ್ರಾಪ್ತವಾದ ಅಧಿಕಾರಬಲದಿಂದ ಈ ಯುದ್ಧಕ್ಕೋಸ್ಕರ ಆಗಿರತಕ್ಕ ಖರ್ಚನ್ನು ಬರಮಾಡಿಕೊಳ್ಳುವದಕ್ಕೆ ತಕ್ಕ ಏರ್ಪಾಡನ್ನು ಮಾಡಿ, ತಮಗೂ ಈ ದೇಶದ ಪ್ರಜೆಗಳಿಗೂ ಈ ದೇಶದ ನೆರೆಹೊರೇ ರಾಜ್ಯಗಳಿಗೂ ಕೂಡ ನಿರ್ಭೀತಿಯನ್ನೂ ಸಮಾಧಾನವನ್ನೂ ಉಂಟುಮಾಡಿದಾರೆ. ಈ ವಿಷಯದಲ್ಲಿ ಇಂಗ್ಲಿಷರಿಗೂ ನಿಜಾಮರವರಿಗೂ ಆದ ಕರಾರು ಏನೆಂದರೆ:—

(೧) ಇಂಗ್ಲಿಷಿನವರ ಪಾಲಿಗೆ ಬಂದ ೭,೭೭,೧೭೦ ಕಂಠೀರಾಯಿ ವರಹಗಳ ಸೀಮೆಯಲ್ಲಿ ಟೀಪ್ಪೂ ಸುಲ್ತಾನನ ಮಕ್ಕಳು ಮೊದಲಾದವರ ಜೀವನಾರ್ಥವಾಗಿ ೨,೪೦,೦೦೦ ಕಂಠೀರಾಯಿ ವರಹಗಳು ಹೋಗಲಾಗಿ ನಿಂತ ೫,೩೭,೧೭೦ ವರಹಗಳ ಸೀಮೆಯು ಇಂಗ್ಲಿಷಿನವರಿಗೆ ಸೇರತಕ್ಕದ್ದು.

(೨) ನಿಜಾಮರವರ ಭಾಗಕ್ಕೆ ಬಂದ ೬,೦೭,೩೩೨ ಕಂಠೀರಾಯಿ ವರಹಗಳ ಸೀಮೆಯಲ್ಲಿ, ಮೀರ್ ಕೊಮರುದ್ದೀನ್‌ಖಾನರಿಗೆ ಕೊಟ್ಟ ಗುರುಂಕೊಂಡ ಜಹಗೀರು ಬಾ॥ ೭೦,೦೦೦ ವರಹಗಳು ಹೋಗಲಾಗಿ ನಿಂತ ೫,೩೭,೩೩೨ ವರಹಗಳ ಸೀಮೆಯು ನಿಜಾಮರವರಿಗೆ ಸೇರತಕ್ಕದ್ದು.

(೩) ಕಾವೇರಿಯಿಂದ ಆವರಿಸಲ್ಪಟ್ಟ ಶ್ರೀರಂಗಪಟ್ಟಣವನ್ನು ಕುಂಪಣಿಯವರು ತಮ್ಮ ಸ್ವಾಧೀನದಲ್ಲಿಯೇ ಇಟ್ಟುಕೊಳ್ಳುವರು.

(೪) ಮಹೀಶೂರ ಸೀಮೆಯು ಧೊರೆತನಕ್ಕೆ ಅರ್ಹರಾದ ಶ್ರೀಕೃಷ್ಣರಾಜ ಒಡೆಯರ್ ಬಹದ್ದರವರು ಉಳಿದ ರಾಜ್ಯಗಳಿಗೆ ಬಾಧ್ಯರಾಗಿ ಇರತಕ್ಕದ್ದು.

(೫) ಟೀಪ್ಪುವಿನ ವಂಶಸ್ಥರಿಗೋಸ್ಕರ ನೇಮಕ ಮಾಡಿರತಕ್ಕ ೨,೪೦,೦೦೦ ಕಂಠೀರಾಯಿ ವರಹಗಳಲ್ಲಿ ಆ ವಂಶಸ್ಥರು ಗತಿಸಿದಹಾಗೆಲ್ಲಾ, ಕುಂಪಣಿಯವರು ಮುಂದೆ ತಮಗೆ ಇಷ್ಟಬಂದಹಾಗೆ ಕಡಿಮೆ ಮಾಡುವದಕ್ಕೂ ತಮಗೆ ಯುಕ್ತವಾಗಿ ತೋರಿದ ಪಕ್ಷದಲ್ಲಿ ಸಂಪೂರ್ಣವಾಗಿ ನಿಲ್ಲಿಸಿಬಿಡುವದಕ್ಕೂ ಅವರಿಗೆ ಅಧಿಕಾರವಿರತಕ್ಕದ್ದು.

(೬) ಮರಾಟೆಯವರಿಗೂ ಇಂಗ್ಲಿಷಿನವರಿಗೂ ನಿಜಾಮರವರಿಗೂ ಕೂಡ ಇರತಕ್ಕ ಕೆಲವು ವಿವಾದಗಳನ್ನು, ಈ ತಹನಾಮೆ ತಿಳುಹಿಸಿದ ೧ ತಿಂಗಳೊಳಗಾಗಿ, ಅವರು ಫೈಸಲು ಮಾಡಿಕೊಂಡರೆ, ಅವರು ಈ ಯುದ್ಧದಲ್ಲಿ ಯಾವ ವೆಚ್ಚವನ್ನೂ ಮಾಡದೆಯೂ ಯಾವ ಕಷ್ಟವನ್ನೂ ಅನುಭವಿಸದೆಯೂ ಇದ್ದರೂ, ಅವರಿಗೂ ಅವರಿಗೋಸ್ಕರ ಪ್ರತ್ಯೇಕವಾಗಿ ತೆಗೆದು ಇರಿಸಲ್ಪಟ್ಟ ಕೆಲವು ದೇಶಗಳು ಸಲ್ಲತಕ್ಕದ್ದು.

(೭) ಹಾಗೆ ಮರಾಟೆಯವರು ರಾಜಿಗೆ ಬಾರದ ಪಕ್ಷದಲ್ಲಿ, ಆ ದೇಶಗಳನ್ನು ನಿಜಾಮರವರೂ ಕುಂಪಣಿಯವರೂ ಹಂಚಿಕೊಳ್ಳುವರು. ಅಥವಾ ಅವುಗಳನ್ನು ಮಹೀ

ಕೂರ ರಾಜರಿಗೆ ಕೊಟ್ಟು, ಆರಾಜರಿಂದ ಅವುಗಳಿಗೆ ಬದಲಾಗಿ ತಮ್ಮ ದೇಶದ ಹತ್ತಿರ ಇರುವ ಅವರಿಗೆ ಸೇರಿದ ಇತರ ಸೀಮೆಗಳನ್ನು ತೆಗೆದುಕೊಳ್ಳುವರು.

(೪) ಮಹೀಶೂರಲ್ಲಿ ಯುದ್ಧಾದಿಗಳು ಯಾವವೂ ನಡೆಯದೆ ಇರುವದಕ್ಕೋಸ್ಕರ ಇಂಗ್ಲಿಷರು ತಾವೇ ಬೇಕಾದ ಸೈನ್ಯವನ್ನು ಅಲ್ಲಿ ಇಡುವರು. ಇದರ ವಿಷಯದಲ್ಲಿ ಇಂಗ್ಲಿಷ್ ನವರಿಗೂ ಕೃಷ್ಣರಾಜ ಒಡೆಯರವರಿಗೂ ಬೇರೆ ಒಂದು ಖರಾರು ಆಗಿದೆ.

(೫) ಈ ಖರಾರುನಡೆದಾಗ ಜನರಲ್ ಹಾರಿಸ್ ಸಾಹೇಬರವರು ಕರ್ನಲ್ ವೆಲ್ಲೆಸ್ಲಿ ಸಾಹೇಬರವರು ಕರ್ನಲ್ ಕರ್ಕ್‌ಪ್ಯಾಟ್ರಿಕ್ ಸಾಹೇಬರವರು ಕರ್ನಲ್ ಕ್ಲೋಸ್ ಸಾಹೇಬರವರು ಸಹಾ ಗವರ್ನರ್ ಜನರಲ್ ಲಾರ್ಡ್ ಮೊರ್ನಿಂಗ್ಟನ್ ಸಾಹೇಬರವರಿಗೆ ಪ್ರತಿನಿಧಿಗಳಾಗಿಯೂ, ಮೀರ್ ಅಲಂಬಹದರವರು ನಿಜಾಮರವರಿಗೆ ಪ್ರತಿನಿಧಿಗಳಾಗಿಯೂ ಇದ್ದರು. ಈ ಖರಾರಿಗೆ ಜುಲೈ ೧೩ರಲ್ಲಿ ನಿಜಾಮರವರ ರುಜು ಆಯಿತು.

ಮಹೀಶೂರ ಮಹಾರಾಜರಾದ ಶ್ರೀಕೃಷ್ಣರಾಜ ಒಡೆಯರ್ ಬಹದೂರವರಿಗೂ, ಗವರ್ನರ್ ಜನರಲ್‌ರವರಾದ ಅರಲ್ ಆಫ್ ಮೊರ್ನಿಂಗ್ಟನ್‌ರವರಿಗೆ ಪ್ರತಿನಿಧಿಗಳಾದ ಜನರಲ್ ಹಾರಿಸ್ ಸಾಹೇಬರವರು, ಕರ್ನಲ್ ಆರ್ಥರ್ ವೆಲ್ಲೆಸ್ಲಿ ಸಾಹೇಬರವರು, ಆನರೆಬಲ್ ಹೆನ್ರಿ ವೆಲ್ಲೆಸ್ಲಿಯವರು, ಕರ್ನಲ್ ವಿಲ್ಲಿಯಂ ಕರ್ಕ್ ಪ್ಯಾಟ್ರಿಕ್‌ರವರು, ಲೆಫ್ಟಿನೆಂಟ್ ಕರ್ನಲ್‌ಬರಿ ಕ್ಲೋಸ್‌ರವರು, ಇವರಿಗೂ ಮಹೀಶೂರ ವಿಷಯದಲ್ಲಿ ನಡೆದ ತಹನಾಮೆ:—

(೧.) ನಿಜಾಮರವರಿಗೂ ಕುಂಪಣಿಯವರಿಗೂ ೧೭೯೯ನೇ ಇಸವಿ ಜೂನ್ ೨೨ರಲ್ಲಿ ಟೀಪುವಿನ ರಾಜ್ಯಗಳ ಸೆಟಲ್‌ಮೆಂಟ್ ಮಾಡುವದಕ್ಕೋಸ್ಕರ ನಡೆದಿರತಕ್ಕ ತಹನಾಮೆಗೆ ಅನುಸಾರವಾಗಿ ಶ್ರೀಕೃಷ್ಣರಾಜ ಒಡೆಯರವರು ಮಹೀಶೂರ ಸಂಸ್ಥಾನಕ್ಕೆ ಧೊರೆಗಳಾಗಿ ಇರತಕ್ಕದ್ದು. ಈ ರಾಜ್ಯದ ತಹಬಂದಿಗೋಸ್ಕರವೂ, ಶ್ರೀಕೃಷ್ಣರಾಜ ಒಡೆಯರವರಿಗೂ ಇಂಗ್ಲಿಷನವರಿಗೂ ಆಚಂದ್ರಾರ್ಕವಾಗಿ ಸ್ನೇಹವು ಇರುವದಕ್ಕೂ, ಕುಂಪಣಿಯವರು ಈದೇಶದಲ್ಲಿ ಒಂದು ಸಬ್‌ಸಿಡಿಯರಿ ಸೈನ್ಯವನ್ನು ಇಡುವರು. ಕುಂಪಣಿಯವರೂ ಧೊರೆಗಳೂ ಪರಸ್ಪರವಾಗಿ ಮಿತ್ರಶತ್ರುಗಳನ್ನು ತಮ್ಮ ಮಿತ್ರಶತ್ರುಗಳಂತೆಯೇ ಕಾಣಬೇಕ್ಕು.

(೨.) ಮಹೀಶೂರ ಸಂಸ್ಥಾನದ ಸಂರಕ್ಷಣೆಗೋಸ್ಕರ ಕುಂಪಣಿಯವರು ಒಂದು ಸೈನ್ಯವನ್ನಿಟ್ಟು ಮೇಲ್ವಿಚಾರಣೆಯನ್ನು ನೋಡಿಕೊಳ್ಳುವದಕ್ಕೆ ಕುಂಪಣಿಯವರು ಒಪ್ಪಿಕೊಳ್ಳುವರು. ಇದರ ಸಂರಕ್ಷಣಾರ್ಥವಾಗಿ ವರ್ಷಕ್ಕೆ ೭ ಲಕ್ಷ ವರಹಗಳನ್ನು ಕೊಡುವಂತೆ ಮಹಾರಾಜರವರು ಒಪ್ಪಿಕೊಳ್ಳತಕ್ಕದ್ದು.

(೩.) ಕುಂಪಣಿಯವರ ಸೀಮೆಯೊಳಾಗಲೀ ಅಥವಾ ಮಹಾರಾಜರವರ ಸೀಮೆಯೊಳಾಗಲೀ ಶತ್ರುಗಳು ಬಂದು ಬಿದ್ದರೆ, ಆ ದೇಶಗಳ ಸಂರಕ್ಷಣಾರ್ಥವಾಗಿಯಾಗಲೀ

ಅಥವಾ ಯಾವದಾದರೂ ರಾಜ್ಯದ ಮೇಲೆ ಕುಂಪಣಿಯವರೂ ಮಹಾರಾಜರವರೂ ಮಾಡತಕ್ಕ ಯುದ್ಧಕ್ಕೋಸ್ಕರವಾಗಿಯಾಗಲೀ ಅನಿವಾರ್ಯವಾದ ಖರ್ಚು ತಗಲಿದರೆ, ಮಹಾರಾಜರವರು ಮಹೀಶೂರು ಸಂಸ್ಥಾನದ ಆದಾಯವೆಚ್ಚಗಳಿಗೆ ಅನುಸಾರವಾಗಿ ತೊಂದರೆಯಿಲ್ಲದೆ *ಎಷ್ಟು ಹಣವನ್ನು ಕೊಡಬೇಕೆಂದು ಗವರ್ನರ್ ಜನರಲ್‌ರವರು ನಿಷ್ಕರ್ಷೆ ಮಾಡುತ್ತಾರೋ ಅಷ್ಟನ್ನು ಕೊಡಬೇಕು.

(೪) ಸೈನ್ಯಗಳಿಗೋಸ್ಕರ ವರ್ಷಂಪ್ರತಿ ಕೊಡತಕ್ಕ ಮೊಬಲಗಿಗಾಗಲೀ ಅಥವಾ ವಿಶೇಷಕಾಲಗಳಲ್ಲಿ ಅಪೇಕ್ಷಿಸತಕ್ಕ ಮೊಬಲಗುಗಳಿಗಾಗಲೀ ಯಾವ ಕುಂದಕವೂ ಬರದೆ ಇರುವದಕ್ಕೋಸ್ಕರ ತಕ್ಕ ಏರ್ಪಾಡು ಮಾಡುವದು ಅವಶ್ಯಕವಾದದರಿಂದ, ಈ ಮಹೀಶೂರ ದೇಶದ ಉತ್ಪತ್ತಿಯು ಕಡಿಮೆಯಾಗತಕ್ಕ ಸೂಚನೆ ಏನಾದರೂ ತೋರಿದ ಪಕ್ಷದಲ್ಲಿ, ಮಹೀಶೂರ ರಾಜ್ಯದ ಹುಟ್ಟುವಳಿ ಮುಂತಾದ ಒಳ ಆಡಳಿತಗಳನ್ನು ಕ್ರಮಪಡಿಸುವದಕ್ಕೋಸ್ಕರ ಪ್ರವೇಶಿಸಬೇಕಾದ ಕಾನೂನುಗಳನ್ನು ಜಾರಿಯಲ್ಲಿ ತರುವದಕ್ಕಾಗಲೀ, ಯಾವ ಇಲಾಖೆಗಳಲ್ಲಿಯಾಗಲೀ ತಿದ್ದುಪಾಟು ಮಾಡುವದಕ್ಕಾಗಲೀ, ಎಲ್ಲಾ ಕಾಲದಲ್ಲಿ ತಮಗೆ ಬರತಕ್ಕ ಮೊಬಲಗಿಗೆ ಲೋಪ ಬರದಹಾಗೆ ಮಾಡಿಕೊಳ್ಳುವದಕ್ಕೋಸ್ಕರ

---

*ಈ ಮೊಬಲಗು ಖರಾರಾದಾಗ ಗೊತ್ತಿಲ್ಲದೆ ಇತ್ತು. ೧೮೦೪ನೇ ಜನವರಿ ೨ರಲ್ಲಿ ಈ ಅಂಶವನ್ನು ಗೊತ್ತು ಮಾಡಬೇಕಾದ ಆವಶ್ಯಕ ಬಿದ್ದದ್ದರಿಂದ ಆಗ ಗವರ್ನರ್ ಜನರಲ್‌ರಾಗಿದ್ದ ಸರ್ ಜಾರ್ಜ್ ಬಾರ್ಲೋ ಸಾಹೇಬರು, ಮಹಾರಾಜರವರು ೪೫೦೦ ಸಿಲೇದಾರ ಕುದುರೆಗಳನ್ನೂ ೨೦೦೦ ಬಾರುಸಿಪಾಯಿಗಳನ್ನೂ ಇಡಬೇಕೆಂಬದಾಗಿಯೂ, ಇವುಗಳನ್ನು ಇಂಗ್ಲಿಷ್‌ನವರು ಅಪೇಕ್ಷಿಸಿದ ಕಾಲದಲ್ಲಿ ಅವರ ಸಹಾಯಕ್ಕೆ ಹೋಗುವದಕ್ಕೆ ಸಿದ್ಧವಾಗಿರಬೇಕೆಂಬದಾಗಿಯೂ, ೧ ತಿಂಗಳಿಗಿಂತ ಹೆಚ್ಚಾಗಿ ಕೆಲಸ ಬಿದ್ದ ಪಕ್ಷದಲ್ಲಿ, ಮಹೀಶೂರ ಸರಹದ್ದನ್ನು ದಾಟಿ ಕುಂಪಣಿಯವರ ಸಹಾಯಕ್ಕೆ ಹೋದಕಾಲ ಮೊದಲುಗೊಂಡು ಹೆಚ್ಚು ಖರ್ಚಿಗಾಗಿ ಪ್ರತಿಯೊಬ್ಬ ರಾವುತನಿಗೂ ಕುಂಪಣಿಯವರು ೪ ವರಹಾ ಸಂಬಳ ಕೊಡುವರೆಂಬದಾಗಿಯೂ ಹೇಳಿದರು. ಈ ಅಂಶಕ್ಕೆ ಮಹೀಶೂರ ಮಹಾರಾಜರವರೂ ಒಪ್ಪಿಕೊಂಡರು. ಕುಂಪಣಿಯವರಿಗೆ ಆವಶ್ಯಕ ಬಿದ್ದು ೪೦೦೦ಕ್ಕಿಂತಲೂ ಹೆಚ್ಚಾದ ಕುದುರೇಸವಾರರು ಬೇಕೆಂದು ಅಪೇಕ್ಷಿಸಿದಾಗ ಅವರು ಹೇಳಿದಷ್ಟು ಸವಾರರನ್ನು ಕೊಡಬೇಕೆಂತಲೂ, ಕುಂಪಣಿಯವರು ಅಂಥಾ ಸವಾರರಿಗೆ ಮಹೀಶೂರಲ್ಲಿ ಇರುವಾಗ ತಿಂಗಳಿಗೆ ೮ ವರಹ ಸಂಬಳವನ್ನೂ, ಮಹೀಶೂರ ಸರಹದ್ದು ಬಿಟ್ಟು ಹೋದಮೇಲೆ ೪ ವರಹ ಭತ್ಯವನ್ನೂ ಸೇರಿಸಿ ಕೊಡುವರೆಂತಲೂ ಹೇಳಿದ್ದರಿಂದ, ಅದಕ್ಕೂ ಮಹಾರಾಜರವರು ಒಪ್ಪಿದರು. ಅದು ಮೊದಲುಗೊಂಡು ಗವರ್ನರ್ ಜನರಲ್‌ರವರ ಇಷ್ಟಾನುಸಾರವಾಗಿ ೪೦೦೦ ಚಿಲ್ಲರೇ ಕುದುರೇ ಸವಾರರನ್ನು ಇಟ್ಟುಕೊಂಡಿರುವದರಿಂದ, ಮಹಾರಾಜರವರು ೩ನೇ ಕಲಂನಲ್ಲಿ ಕಂಡಿರತಕ್ಕ ಒಡಂಬಡಿಕೆಗೆ ಸರಿಯಾಗಿ ನಡೆದ ಹಾಗಾಯಿತೆಂತಲೂ, ಆದಕಾರಣ ಅವರು ಮತ್ತಾವ ಹೆಚ್ಚು ಖರ್ಚನ್ನು ಕೊಡುವದಕ್ಕೂ ಬದ್ಧರಲ್ಲವೆಂತಲೂ ೧೮೧೧ನೇ ಇಸವಿಯಲ್ಲಿ ಏರ್ಪಾಡಾಯಿತು.

ಮಹಾರಾಜರವರ ದೇಶದಲ್ಲಿ ಬೇಕಾದಷ್ಟು ಭಾಗವನ್ನು ತಮ್ಮ ವಶಕ್ಕೆ ತೆಗೆದುಕೊಂಡು ಅದನ್ನು ರೂಢಿಸುವದಕ್ಕಾಗಲೀ, ಗವರ್ನರ್ ಜನರಲ್‌ರವರು ಸ್ವತಂತ್ರರಾಗಿ ಇರುವರು.

(೪) ಈ ನಾಲ್ಕನೇ ಕಲಂನಲ್ಲಿ ಕಂಡಂತೆ ಮಾಡಬೇಕಾದ ಏರ್ಪಾಡುಗಳನ್ನು ಮಾಡತಕ್ಕ ಸಂದರ್ಭವು ಬಿದ್ದ ಕಾಲದಲ್ಲಿ, ಗವರ್ನರ್ ಜನರಲ್ ಸಾಹೇಬರವರು ಮಹಾರಾಜರವರಿಗೆ ತಿಳಿಸಿದ ೧೦ ದಿನಗಳ ಒಳಗಾಗಿ, ಮಹಾರಾಜರವರು ತಮ್ಮ ಕೈಕೆಳಗಿರುವ ಸಮಸ್ತ ಅಧಿಕಾರಿಗಳಿಗೂ "ಗವರ್ನರ್ ಜನರಲ್ ಸಾಹೇಬರವರ ಆಜ್ಞಾನುಸಾರವಾಗಿಯೂ ಅವರ ಕಾನೂನುಗಳು ಮತ್ತು ಏರ್ಪಾಡುಗಳಿಗೆ ಅನುಸಾರವಾಗಿಯೂ ನಡೆದುಕೊಳ್ಳಬೇಕು" ಎಂದು ತಾಕೀತು ಮಾಡಬೇಕು. ಹಾಗೆ ಮಾಡದೆ ತಪ್ಪಿದ ಪಕ್ಷದಲ್ಲಿ ಗವರ್ನರ್ ಜನರಲ್‌ರವರು ತಮಗೆ ಬರತಕ್ಕ ವೊಬಲಗು ಸರಳವಾಗಿ ಬರುವದಕ್ಕೆ ತಕ್ಕ ಏರ್ಪಾಡುಗಳನ್ನು ತಾವೇ ಮಾಡಿಕೊಳ್ಳುವರು. ಆದರೆ ಮಹಾರಾಜರವರು ತಮ್ಮ ದೇಶವನ್ನು ಕುಂಪಣಿಯವರ ಸ್ವಾಧೀನಕ್ಕೆ ಬಿಟ್ಟುಕೊಟ್ಟ ಪಕ್ಷದಲ್ಲಿ ಗವರ್ನರ್ ಜನರಲ್ ಸಾಹೇಬರವರು ಈ ದೇಶದ ಸಮಸ್ತ ಹುಟ್ಟುವಳೀ ವಿಷಯದಲ್ಲಿಯೂ ಪ್ರಾಮಾಣಿಕವಾದ ಲೆಕ್ಕವನ್ನು ಮಹಾರಾಜರಿಗೆ ಒಪ್ಪಿಸುವರು; ಇದಲ್ಲದೆ ವರ್ಷಂಪ್ರತಿ ಈ ಸಂಸ್ಥಾನದಲ್ಲಿ ಖರ್ಚು ಕಳೆದು ಉಳಿದ ವೊಬಲಗಿನಲ್ಲಿ ೫೦ರಲ್ಲಿ ೧ ಪಾಲು ಮತ್ತು ಒಂದು ಲಕ್ಷ ವರಹಗಳು, ಇಷ್ಟಕ್ಕೆ ಎಂಥಾ ಸಂದರ್ಭಗಳಲ್ಲಿಯೂ ಕಡಿಮೆಯಿಲ್ಲದೆ ಮಹಾರಾಜರಿಗೆ ಸಲ್ಲುವಂತೆ ಏರ್ಪಾಡು ಮಾಡುವರು.

(೬) ಶ್ರೀಕೃಷ್ಣರಾಜ ಒಡೆಯರ್ ಬಹದರವರು, ಕುಂಪಣಿ ಯವರೊಡನೆಯೂ ಅವರ ಮಿತ್ರರೊಡನೆಯೂ ಸತ್ಯವಾದ ಸ್ನೇಹವುಳ್ಳವರಾಗಿ ಇರುತ್ತೇವೆಂಬದಾಗಿಯೂ, ಕುಂಪಣಿಯವರ ಸ್ನೇಹದಲ್ಲಿರತಕ್ಕ ಅಥವಾ ಸ್ನೇಹವಾಗಿ ಇಲ್ಲದ ಯಾವ ದೇಶಗಳ ಗೊಡವೆಗೂ ತಾವು ಹೋಗುವದಿಲ್ಲವೆಂಬದಾಗಿಯೂ, ಕುಂಪಣಿಯವರ ಅನುಮತಿಯೂ ತಿಳುವಳಿಕೆಯೂ ಇಲ್ಲದೆ ಇತರ ದೇಶಾಧಿಪತಿಗಳೊಡನೆ ಕಾಗದಪತ್ರಗಳನ್ನು ನಡೆಯಿಸುವದಿಲ್ಲವೆಂತಲೂ ಒಪ್ಪಿಕೊಳ್ಳುತ್ತಾರೆ.

(೭) ಕುಂಪಣಿಯವರ ಅನುಮತಿ ಯಿಲ್ಲದೆ ಯೂರೋಪ್ ಖಂಡದ ಇಂಗ್ಲಿಷರು ವಿನಹಾ ಇತರ ದೇಶಸ್ಥರನ್ನು ಸೇರಿಸಿಕೊಳ್ಳುವದಿಲ್ಲವೆಂತಲೂ, ಅಂಥಾಜನಗಳು ಕುಂಪಣಿಯವರ ಪ್ಯಾಸ್ ಇಲ್ಲದೆ ತಮ್ಮ ದೇಶದಲ್ಲಿ ಸಿಕ್ಕಿದರೆ, ಅವರನ್ನು ಹಿಡಿದು ಕುಂಪಣಿಯವರಿಗೆ ಒಪ್ಪಿಸುತ್ತೇವೆಂಬದಾಗಿಯೂ ಮಹಾರಾಜರವರು ಒಪ್ಪಿಕೊಳ್ಳುತ್ತಾರೆ.

(೮) ಯುದ್ಧ ಕಾಲದಲ್ಲಿಯೂ ಸಮಾಧಾನ ಕಾಲದಲ್ಲಿಯೂ ದೇಶದಲ್ಲಿ ಕಲಹಗಳು ನಡೆಯದೆ ಇರುವದಕ್ಕೋಸ್ಕರ, ಎಲ್ಲಾ ಕೋಟೆಗಳಲ್ಲಿಯೂ ಊರುಗಳಲ್ಲಿಯೂ ಸೈನ್ಯಗಳನ್ನು ಇಟ್ಟಿರುವದು ಅವಶ್ಯಕವಾದದರಿಂದ, ಹಾಗೆ ಸೈನ್ಯಗಳನ್ನು ಇಟ್ಟು ಜನಗಳಿಗೆ ಕ್ಷೇಮವನ್ನು ಉಂಟುಮಾಡತಕ್ಕ ವಿಷಯದಲ್ಲಿ ಕುಂಪಣಿಯವರು ಸ್ವತಂತ್ರರಾಗಿ ಇದ್ದಾರೆಂದು ಮಹಾರಾಜರವರು ಒಪ್ಪಿಕೊಳ್ಳುತ್ತಾರೆ.

(೯) ದೇಶ ಸಂರಕ್ಷಣಾರ್ಥವಾಗಿ ಕೋಟೆಗಳನ್ನೂ ಊರುಗಳನ್ನೂ ಕಟ್ಟಬೇಕಾದರೂ, ಕೆಡವಬೇಕಾದರೂ, ಅಥವಾ ದುರಸ್ತಿ ಮಾಡಬೇಕಾದರೂ, ಅದರ ಆವಶ್ಯಕತೆಯನ್ನು ಗೊತ್ತು ಮಾಡತಕ್ಕದ್ದು ಕುಂಪಣಿಯವರಿಗೇ ಸೇರಿಯಿದೆ. ಇಂಥಾ ಕೆಲಸಗಳಿಗಾಗಿ ಏನಾದರೂ ಖರ್ಚಾದಪಕ್ಷದಲ್ಲಿ, ಅದರಲ್ಲಿ ಅರ್ಧವೊಬಲಗನ್ನು ಕುಂಪಣಿಯವರೂ ಅರ್ಧವೊಬಲಗನ್ನು ಮಹಾರಾಜರವರೂ ಕೊಡತಕ್ಕದ್ದು.

(೧೦) ಮಹಾರಾಜರವರ ಸಂಸ್ಥಾನದಲ್ಲಿ ಯಾರಾದರೂ ಅವರಿಗೆ ವಿರೋಧಿಗಳಾದರೆ, ಅಂಥಾವರ ಬಂದೋಬಸ್ತಿಗೋಸ್ಕರ ಈಸಬ್‌ಸಿಡಿಯರಿ ಸೈನ್ಯವನ್ನು ಯುದ್ಧಕ್ಕೆ ಕಳುಹಿಸಿಕೊಡಬೇಕೆಂದು ಕೇಳಿಕೊಂಡರೆ, ಕುಂಪಣಿಯವರು ಯುಕ್ತವಾಗಿತೋರುವ ರೀತಿಯಲ್ಲಿ ಆಸೈನ್ಯವನ್ನು ವಿನಿಯೋಗಿಸುವರು. ಆದರೆ ಈ ಸೈನ್ಯವನ್ನು ರೆವಿನ್ಯೂ ವಸೂಲಾತಿ ಕೆಲಸದಲ್ಲಿ ಉಪಯೋಗಿಸಕೂಡದು.

(೧೧) ದೇಶವು ಯುದ್ಧವಿಲ್ಲದೆ ನಿಷ್ಕಂಟಕವಾಗಿ ಇರುವದಕ್ಕೋಸ್ಕರ ಟೀಪುವಿನ ಬಳಿಯಲ್ಲಿ ಪ್ರಬಲವಾಗಿದ್ದ ಅಧಿಕಾರಿಗಳಿಗೆ ಯಾವದಾದರೂ ಒಂದು ಏರ್ಪಾಡನ್ನು ಮಾಡಬೇಕಾಗಿರುವದರಿಂದ, ಈ ವಿಷಯದಲ್ಲಿ ತಿಳಿಯಬೇಕಾದ ವಿಷಯಗಳನ್ನೆಲ್ಲಾ ತಿಳಿದು ಇದಕ್ಕೋಸ್ಕರ ಒಂದು ವೊಬಲಗನ್ನು ಗೊತ್ತು ಮಾಡಿ, ಆ ವಿಷಯವನ್ನು ಪ್ರತ್ಯೇಕವಾಗಿ ಈ ತಹನಾಮೆಗೆ ಸೇರಿಸುತ್ತೇವೆಂದು ಮಹಾರಾಜರವರು ಒಪ್ಪಿಕೊಂಡಿರುತ್ತಾರೆ.

(೧೨) ಶ್ರೀರಂಗಪಟ್ಟಣದಲ್ಲಿ ಇಟ್ಟು ಇರುವ ಇಂಗ್ಲಿಷ್ ಸೈನ್ಯಗಳಿಗೆ ಬೇಕಾದ ಪದಾರ್ಥಗಳು ಅಗ್ಗವಾಗಿ ಸಿಕ್ಕುವದಕ್ಕೋಸ್ಕರ, ಸುಂಕವಿಲ್ಲದೆ ಸಕಲ ಪದಾರ್ಥಗಳೂ ಶ್ರೀರಂಗಪಟ್ಟಣಕ್ಕೆ ಹೋಗುವದಕ್ಕೆ ತಕ್ಕ ಏರ್ಪಾಡು ಮಾಡುತ್ತೇವೆಂದು ಮಹಾರಾಜರವರು ಒಪ್ಪಿಕೊಳ್ಳುತ್ತಾರೆ.

(೧೩) ಕುಂಪಣೀ ಸೀಮೆಯವರಿಗೂ ಮಹಾರಾಜರವರ ಸೀಮೆಯವರಿಗೂ ವ್ಯಾಪಾರವು ಸುಲಭವಾಗಿ ನಡೆಯುವದಕ್ಕೋಸ್ಕರ ತಕ್ಕ ಏರ್ಪಾಡುಗಳನ್ನು ಮಾಡುತ್ತೇವೆಂದು ಮಹಾರಾಜರವರು ಒಪ್ಪಿಕೊಳ್ಳುತ್ತಾರೆ.

(೧೪) ಸರ್ಕಾರದ ದ್ರವ್ಯವನ್ನು ಮಿತವಾಗಿ ವ್ಯಯ ಮಾಡತಕ್ಕ ವಿಷಯದಲ್ಲಿಯೂ ರೆವಿನ್ಯೂ ವಸೂಲೀ ವಿಷಯದಲ್ಲಿಯೂ ನ್ಯಾಯವಿಮರ್ಶೆ ವಿಷಯದಲ್ಲಿಯೂ, ವ್ಯಾಪಾರವನ್ನು ವೃದ್ಧಿ ಮಾಡತಕ್ಕ ವಿಷಯದಲ್ಲಿಯೂ, ವ್ಯಾಪಾರಕ್ಕೂ ವ್ಯವಸಾಯಕ್ಕೂ ಶಿಲ್ಪಕ್ಕೂ ಪ್ರೋತ್ಸಾಹವನ್ನು ಮಾಡತಕ್ಕ ವಿಷಯದಲ್ಲಿಯೂ, ಮಹಾರಾಜರವರಿಗೂ ಈ ದೇಶದ ಪ್ರಜೆಗಳಿಗೂ ಸೌಖ್ಯವನ್ನು ಉಂಟುಮಾಡತಕ್ಕ ವಿಷಯದಲ್ಲಿಯೂ, ಕುಂಪಣಿಯವರಿಗೂ ಮಹಾರಾಜರವರಿಗೂ ಪರಸ್ಪರ ಸೌಖ್ಯ ಉಂಟುಮಾಡತಕ್ಕ ವಿಷಯದಲ್ಲಿಯೂ, ಕುಂಪಣಿಯವರು ಹೇಳತಕ್ಕ ಬುದ್ಧಿವಾದಗಳ ಪ್ರಕಾರ ನಡೆದುಕೊಳ್ಳುವಂತೆ ಮಹಾರಾಜರವರು ಒಪ್ಪಿಕೊಳ್ಳುತ್ತಾರೆ.

(೧೪.) ಕುಂಪಣಿಗೆ ಸೇರಿದ ಡಿಸ್ಟ್ರಿಕ್ಟುಗಳೂ ಮಹಾರಾಜರವರಿಗೆ ಸೇರಿದ ಡಿಸ್ಟ್ರಿಕ್ಟುಗಳೂ ಅವರವರ ದೇಶಗಳಿಗೆ ದೂರವಾಗಿದ್ದು ಅನನುಕೂಲವಾಗಿ ಇರುವಂತೆ ಇರುವ ಪಕ್ಷದಲ್ಲಿ, ಅಂಥಾ ಡಿಸ್ಟ್ರಿಕ್ಟುಗಳನ್ನು ಯಾರಿಗೂ ನಷ್ಟವಿಲ್ಲದ ವಿಧದಲ್ಲಿ ಪರಸ್ಪರ ಬದಲಾಯಿಸತಕ್ಕದ್ದು.

(೧೫.) ಈ ೧೫ ಕಲಂಗಳಲ್ಲಿ ತಹನಾಮೆಯು ೧೭೯೯ನೇ ಇಸವಿ ೮ನೇ ಜುಲೈನಲ್ಲಿ ಶ್ರೀರಂಗಪಟ್ಟಣದಲ್ಲಿರುವ ನಜರಬಾಗ್ ಕೋಟೆಯಲ್ಲಿ ವ್ಯವಸ್ಥೆ ಆಯಿತು. ಕುಂಪಣಿಯವರ ಪಕ್ಷದಲ್ಲಿ ಜನರಲ್ ಜಾರ್ಜ್ ಹಾರಿಸ್, ಕರ್ನಲ್ ಅರ್ಥರ್ ವೆಲ್ಲೆಸ್ಲಿ, ಆನರೆಬಲ್ ಹೆನ್ರಿ ವೆಲ್ಲೆಸ್ಲಿ, ಲೆಫ್ಟಿನೆಂಟ್‌ಕರ್ನಲ್ ವಿಲ್ಲಿಯಂ ಕರ್ಕ್‌ಪ್ಯಾಟ್ರಿಕ್, ಲೆಫ್ಟಿನೆಂಟ್ ಕರ್ನಲ್ ಬರಿ ಕ್ಲೋಸ್ ಸಾಹೇಬರೂ, ಮಹೀಶೂರ ಸಂಸ್ಥಾನದ ಕಡೆ ಮಹೀಶೂರ ಮಹಾರಾಜರವರಾದ ಶ್ರೀಕೃಷ್ಣರಾಜ ಒಡೆಯರವರೂ ಹಾಜರು ಇದ್ದರು. ಮೇಲೆ ಹೇಳಿದ ಇಂಗ್ಲಿಷ್ ಸರದಾರರು ಈ ತಹನಾಮೆಗೆ ಇಂಗ್ಲಿಷ್ ಮತ್ತು ಪಾರಿಷ್ಯನ್ ಭಾಷೆಯಲ್ಲಿ ಬರೆದ ಒಂದು ನಕಲಿಗೆ ಸೈನ್ ಮೊಹರು ನಿಸಿ ಮಹಾರಾಜರವರಿಗೆ ಒಪ್ಪಿಸಿದರು. ಶ್ರೀಮಹಾರಾಜರವರು ಇದೇ ಎರಡು ಭಾಷೆಯಲ್ಲಿ ಬರೆದ ಮತ್ತೊಂದು ನಕಲಿಗೆ ತಾವು ರುಜುಮಾಡಿ, ಮಹಾಮಾತುಶ್ರೀ ಲಕ್ಷ್ಮಮ್ಮಣ್ಣಿಯವರಿಂದಲೂ ಪೂರ್ಣೈಯ್ಯನವರಿಂದಲೂ ರುಜು ಮೊಹರು ಮಾಡಿಸಿ ಮೇಲೆ ಕಂಡ ಸರದಾರರಿಗೆ ಒಪ್ಪಿಸಿದರು. ಆಗ ಸರದಾರರು ಶೀಘ್ರವಾಗಿಯೇ ಗವರ್ನರ್ ಜನರಲ್‌ರವರಿಂದ ಸೈನ್ ಮೊಹರು ಮಾಡಿಸಿ ಮಹಾರಾಜರವರಿಗೆ ಒಪ್ಪಿಸಿ ತಾವು ಬರೆದು ಕೊಟ್ಟ ನಕಲನ್ನು ವಾಪಸು ತೆಗೆದುಕೊಳ್ಳುತ್ತೇವೆಂದು ಒಪ್ಪಿಕೊಂಡರು.

ಪ್ರಧಾನ ತಿರುಮಲರಾಯರ ವಿಚಾರ.—ಶ್ರೀರಂಗಪಟ್ಟಣವು ಇಂಗ್ಲಿಷ್ ಜನಗಳ ಕೈವಶವಾದ ಸಂಗತಿಯು ಮದರಾಸ್ ಗವರ್ನಮೆಂಟಿಗೆ ತಿಳಿಯಲು, ಲಾರ್ಡ್ ಮಾರ್ನಿಂಗ್ಟನ್ ಸರದಾರರು ಲಾರ್ಡ್ ಕ್ಲೈವ್ ಮಿ॥ ವೆಬ್ ಮುಂತಾದ ಸರದಾರರೊಡನೆ ಆಲೋಚಿಸಿ, ೧೭೬೮ನೇ ಇಸವಿಯಲ್ಲಿ ಮಹೀಶೂರ ಮಹಾರಾಣಿಯವರಿಗೂ ಕುಂಪಣಿಯವರಿಗೂ ಹಿಂದೆ ಹೇಳಿದಂತೆ ನಡೆದಿದ್ದ ಮಿತ್ರಭಾವದ ಕರಾರಿನ ಸಂಗತಿಯನ್ನೂ ಅದೇ ಇಸವಿಯಿಂದ ೧೭೯೯ನೇ ಇಸವಿಯ ವರೆಗೆ ಮಹಾರಾಣಿಯವರ ಕಾರ್ಯಸ್ಥರಾದ ವಕೀಲರು ಮೊದಲಾದವರು ಕುಂಪಣಿಯಲ್ಲಿ ಮಾಡಿದ ಕಾರ್ಯಗೌರವವನ್ನೂ ಪರ್ಯಾಲೋಚಿಸಿ, ಮಹಾಮಾತುಶ್ರೀ ಲಕ್ಷ್ಮಮ್ಮಣ್ಣಿಯವರ ಪೌತ್ರರಾದ ಮುಮ್ಮಡಿ ಕೃಷ್ಣರಾಜ ಒಡೆಯರವರಿಗೆ ಮಹೀಶೂರ ಸಂಸ್ಥಾನದ ರಾಜ್ಯಭಾರವನ್ನು ಕೊಡತಕ್ಕದ್ದೆಂದು ನಿಷ್ಕರ್ಷೆ ಮಾಡಿದರು. ಮಹಾಮಾತುಶ್ರೀ ಲಕ್ಷ್ಮಮ್ಮಣ್ಣಿಯವರ ಕವಲಿಗೆ ಅನುಸಾರವಾಗಿ, ತಿರುಮಲರಾಯರಿಗೆ ಮಹೀಶೂರ ಸಂಸ್ಥಾನದ ದಿವಾನಗಿರಿ ಮುಂತಾದದ್ದನ್ನು ನಡೆಯಿಸಬೇಕೆಂದು ನಿಶ್ಚಯಿಸಿದರು. ಆಗ ಮಿ॥ ವೆಬ್ ಸಾಹೇಬರವರು ತಿರುಮಲರಾಯರಿಗೆ “ ಗವರ್ನರ್ ಜನರಲ್ ಬಹದ್ದೂರವರ ಭೇಟೀಕಾಲದಲ್ಲಿ ತಮ್ಮ ಪ್ರಸಂಗ ಸಮಗ್ರವನ್ನೂ ಬಹದ್ದೂರವರಿಗೆ ಶೃತಪಡಿಸಿದ್ದ

ರಿಂದ, ತಾವು ಶ್ರೀರಂಗಪಟ್ಟಣಕ್ಕೆ ಹೋಗಬೇಕೆಂದು ಹುಕುಂ ಮಾಡಿ ಇರುತ್ತಾರೆ" ಎಂದು ಇತ್ಯಾದಿ ವಿವರಗಳನ್ನು ಬರೆಯಿಸಿ ಕಳುಹಿಸಿದರು. ಕೂಡಲೆ ಲಾರ್ಡ್ ಕ್ಲೈವ್ ಸಾಹೇಬರು ತಿರುಮಲರಾಯರನ್ನು ಕರೆಯಿಸಿ "ನೀವು ಈಗಲೇ ಶ್ರೀರಂಗಪಟ್ಟಣಕ್ಕೆ ಹೋಗಬೇಕು. ನಾವು, ಅರಲ್ ಮಾರ್ನಿಂಗ್ಟನ್, ಮೆ॥ ವೆಬ್ ಮೊದಲಾದವರು ಅಲ್ಲಿಗೆ ಬಂದು, ನಿಮಗೂ ಕುಂಪಣಿಯವರಿಗೂ ೧೭೯೯ನೇ ಇಸವಿಯಲ್ಲಿ ನಡೆದ ಕರಾರಿನಂತೆ ಎಲ್ಲವನ್ನೂ ನಡೆಯಿಸಿ ಕೊಡುತ್ತೇವೆ" ಎಂದು ಆಜ್ಞಾಪಿಸಿದರು. ಆಗ ತಿರುಮಲರಾಯರು ಪ್ರಯಾಣ ಮಾಡಿ ಗವರ್ನಮೆಂಟಿ ಹುಕುಂಪ್ರಕಾರ ಕೃಷ್ಣಗಿರಿಯಲ್ಲಿ ಕಾದುಕೊಂಡಿದ್ದರು. ಆಗ ವೆಬ್ ಸಾಹೇಬರು "ನಮ್ಮ ಶ್ರೀರಂಗಪಟ್ಟಣದ ಪ್ರಯಾಣವು ನಿಂತುಹೋಯಿತು. ನೀವು ಅಲ್ಲಿಗೆ ಹೋಗಿ, ಅಲ್ಲಿ ಮೊಕರರಾಗಿರುವ ಕಮ್ಮಿಟಿಯವರ ಮುಂದೆ ಹಾಜರಾದಲ್ಲಿ ನಿಮ್ಮ ಕಾರ್ಯವನ್ನು ವ್ಯವಸ್ಥೆ ಮಾಡುತ್ತಾರೆ" ಎಂದು ತಿರುಮಲರಾಯರಿಗೆ ಬರೆದು ಕಳುಹಿಸಲು, ಇವರು ೨೦ ದಿವಸಗಳವರೆಗೂ ಪ್ರಯಾಣಮಾಡಿ, ಶ್ರೀರಂಗಪಟ್ಟಣದ ದಂಡಿನಲ್ಲಿ ಜನರಲ್ ಹಾರಿಸ್ ಮೊದಲಾದ ಕಮ್ಮಿಟಿ ಸರದಾರರ ಮುಂದೆ ಹಾಜರಾದರು. ಈ ವೇಳೆಗೆ ಮಹೀಶೂರ ಸಂಸ್ಥಾನದ ಉದ್ಯೋಗಗಳೆಲ್ಲಾ ಪರಭಾರೇ ಜನಗಳಿಗೆ ನೇಮಕವಾಗಿ ಹೋಗಿ ಇದ್ದದ್ದರಿಂದ, ತಿರುಮಲರಾಯರು ಮಹಾರಾಣಿಯವರ ಸಂದರ್ಶನಕ್ಕೂ ಅವಕಾಶವನ್ನು ಹೊಂದದೆ ಮದರಾಸಿಗೆ ಹಿಂತಿರುಗಿ ಹೊರಟು ಹೋಗಬೇಕಾಯಿತು. ಈ ವೃತ್ತಾಂತವನ್ನೆಲ್ಲಾ ಮಹಾಮಾತುಶ್ರೀಯವರು ತಿಳಿದು, ತಮ್ಮ ಪ್ರಧಾನಿಗಳಿಗೆ ಮಾಡಿದ ವಾಗ್ದಾನವನ್ನು ಪೂರಯಿಸಬೇಕೆಂದು ಎಷ್ಟು ಪ್ರಯತ್ನ ಪಟ್ಟಾಗ್ಯೂ ಎಲ್ಲವೂ ವ್ಯರ್ಥವಾಯಿತು. ಕಡೆಗೆ ಮಹಾಮಾತುಶ್ರೀಯವರು ಮೆ॥ ವೆಬ್ ಸಾಹೇಬರಿಗೆ ಈ ವಿಷಯದಲ್ಲಿ ಬರೆದ ಕಾಗದಕ್ಕೆ, ಆ ಸಾಹೇಬರು "ಮೇಲಾಗಿ, ತಮ್ಮ ಭಾದ್ರಪದ ಶುದ್ಧ ೩ ಕಾಗದ ಕಳುಸಿದ್ದು ತಲಪಿದ್ದರಿಂದ ಸಕಲ ಅಭಿಪ್ರಾಯವೂ ತಿಳಿಯಬಂತು. ಅದರಲ್ಲಿ ತಾವು ಚಿಂತಾಗ್ರಸ್ತರಾಗಿ ತಮ್ಮ ಮನೋದುಃಖ ಈ ವಿಧವಾಗಿ ಬಂದದರಿಂದ ನಮಗೆ ಬಹಳ ವ್ಯಸನ ತೋರಿತು. ತಾವು ಸರ್ವಜ್ಞರಾದ್ದರಿಂದ ಈ ಪೃಥ್ವಿಯಲ್ಲಿ ಮನುಷ್ಯ ಧರ್ಮಾನುಸಾರವಾಗಿ ಸರ್ವ ಮನೋಭೀಷ್ಟ ಸಿದ್ಧಿ ಆಗಲಾರದೆಂಬುವದು ತಮಗೆ ತಿಳಿದೇ ಇದೆಯಷ್ಟೆ. ಹೀಗಿರುವಲ್ಲಿ ರಾಜ್ಯತಂತ್ರದ ಆಚರಣೆಯಲ್ಲಿ ಪ್ರಸಂಗದ ಅಗತ್ಯತ್ವಕ್ಕೆ ಮನುಷ್ಯರು ಅಂಗೀಕಾರ ಮಾಡಬೇಕು. ಇದರಿಂದ ಟೀಪೂ ಸುಲ್ತಾನನನ್ನು ಅಪಜಯಪಡಿಸಿ ಸಂಹಾರ ಮಾಡಿದ ಅನಂತರ ಮಹೀಶೂರ ಸೀಮೆಗೋಸ್ಕರ ಕರಾರು ಮಾಡಿದ ಕಾರ್ಯದ ಅಗತ್ಯತೆಯಿಂದ ಸ್ಥಾಪನೆ ಮಾಡಿತು" ಎಂದು ಮಹಾ ಮಾತುಶ್ರೀಯವರಿಗೆ ಬರೆದು ಕಳುಹಿಸಿದರು. ಮಹಾ ಮಾತುಶ್ರೀಯವರು ಈ ವಿಷಯದಲ್ಲಿ ತಮ್ಮ ಯತ್ನವೇನೂ ನಡೆಯುವದಿಲ್ಲವೆಂದು ತಟಸ್ಥರಾದರು.

ಈ ಕಡೆಯಲ್ಲಿ ತಿರುಮಲರಾಯರು ತಮಗೆ ಪ್ರಾಪ್ತವಾದ ಕಷ್ಟಗಳನ್ನೆಲ್ಲಾ ಮದರಾಸು ಗವರ್ನಮೆಂಟಿಗೆ ತಿಳಿಯಪಡಿಸಲು, ಆಗ ಆ ಗವರ್ನಮೆಂಟಿನವರು ಮಹೀ

ಶೂರ ಸಂಸ್ಥಾನದ ದಿವಾನಗಿರೀ ಸಂಬಳಕ್ಕೆ ಬದಲಾಗಿ ಈ ಸಂಸ್ಥಾನದಿಂದ ೩೫,೦೦೦ ವರಹ ಹೆಚ್ಚು ಪೆನ್ಷನ್ ಇವರಿಗೆ ಕೊಡಿಸಿಕೊಡಬೇಕೆಂದು ಕೋರ್ಟ್ ಆಫ್ ಡೈರೆಕ್ಟರಸ್ ರವರಿಗೆ ಬರೆದು ಹುಕುಂ ತರಿಸಿ, ಇವರಿಗೆ ಅದೇ ಮೇರೆಗೆ ಪೆನ್ಷನ್ ಕೊಡುತ್ತಾ ಬಂದರು. ಅಲ್ಲಿಂದ ಅವರ ಹುಕುಂ ಮೇರೆ, ಮಹೀಶೂರ ಸಂಸ್ಥಾನದ ಸರದಾರರಲ್ಲಿ ತಿರುಮಲರಾಯರು ಮೀರ್ ಮಿರಾನ್ ಎಂಬುವರ ದರ್ಜೆಗೆ ಸೇರತಕ್ಕವರೆಂದು ಗೊತ್ತು ಮಾಡಿದರು. ೧೮೧೫ನೇ ಇಸವಿ ಜನವರಿ ೨ರಲ್ಲಿ ಲೆಫ್ಟಿನೆಂಟ್ ಜನರಲ್ ಹಾರಿಸ್ ಸರದಾರರು ಸಿಫಾರಸು ಮಾಡಿ, ಕೋರ್ಟ್ ಆಫ್ ಡೈರೆಕ್ಟರವರಿಂದ ಮಂಜೂರಾಗಿ ಬಂದ ಪ್ರಕಾರ, ಮಹೀಶೂರ ಪ್ರಧಾನಿಗಳು ಹಿಂದೆ ಹೇಳಿದ ಮಹೀಶೂರ ಯುದ್ಧಗಳಲ್ಲಿ ಕುಂಪಣಿಗಾಗಿ ಮಾಡಿದ ಕಾರ್ಯಗೌರವಕ್ಕಾಗಿ ಕಂಪೆನ್ಸೇಷನ್ ತರೀಕು ೧೦,೦೦೦ ವರಹಗಳನ್ನು ಈ ತಿರುಮಲರಾಯರಿಗೆ ಕುಂಪಣಿಯವರು ಕೊಡಿಸಿದರು. ಪೂರ್ಣಯ್ಯನವರ ಕಾಲಾನಂತರದಲ್ಲಿ ಮಹಾಮಾತುಶ್ರೀಯವರ ಇಷ್ಟವನ್ನು ಪೂರ್ತಿ ಮಾಡಬೇಕೆಂಬ ಅಭಿಪ್ರಾಯದಿಂದ ಆಳಿದ ಮಹಾಸ್ವಾಮಿಯವರಾದ ಮುಮ್ಮಡಿ ಕೃಷ್ಣರಾಜ ಒಡೆಯರವರು ಪ್ರಧಾನ ನಾರಾಯಣರಾಯರವರ ಮಕ್ಕಳಾದ ತಿರುಚನಾಪಳ್ಳಿಯಲ್ಲಿ ದಿವಾನಗಿರಿ ಮಾಡುತ್ತಿದ್ದ ತಿರುಮಲರಾಯರೆಂಬವರಿಗೆ ಮಹೀಶೂರ ಸಂಸ್ಥಾನದ ದಿವಾನಗಿರಿಯನ್ನು ನೇಮಕ ಮಾಡಿ ಅವರನ್ನು ಇಲ್ಲಿಗೆ ಕರೆಯಿಸಿದರು. ಈ ತಿರುಮಲರಾಯರು ಮಹೀಶೂರಿಗೆ ಬಂದ ಒಡನೆಯೇ ದೈವಗತಿಯನ್ನು ಹೊಂದಿದರು.

ಪೂರ್ಣಯ್ಯನವರು ಜನರಲ್ ಹಾರಿಸ್ ಸಾಹೇಬರು ಹೇಳಿದ್ದ ಮೇರೆಗೆ ಮಹೀಶೂರ ಪಟ್ಟಣಕ್ಕೆ ಸುತ್ತಲೂ ದೃಢವಾಗಿ ಮನೋಹರವಾದ ಕೋಟೆ ಕೊತ್ತಲ ಪೇಟೆ ಮುಂತಾದವುಗಳನ್ನು ಜಾಗ್ರತೆಯಿಂದ ಕಟ್ಟಿಸಿ, ಆ ಕೋಟೆಯ ಮಧ್ಯಭಾಗದಲ್ಲಿ ಅನೇಕವಾದ ಉಪ್ಪರಿಗೆಗಳಿಂದಲೂ, ಸುತ್ತಲೂ ಅಧಿಕಾರಕ್ಕೆ ಯೋಗ್ಯವಾದ ಹಜಾರಗಳಿಂದಲೂ, ಮನೋಹರವಾದ ಉದ್ಯಾನವನಗಳಿಂದಲೂ, ವಿಚಿತ್ರವಾದ ಅರಮನೆಯನ್ನು ನಿರ್ಮಿಸಿ, ಅರಮನೆಯ ಉಭಯ ಪಾರ್ಶ್ವಗಳಲ್ಲಿಯೂ ೧೮ ಕಚೇರಿಗಳನ್ನು ಕ್ರಮವಾಗಿ ಕಟ್ಟಿಸಿ, ಮುಂದುಗಡೆಯಲ್ಲಿ ನವಪತ್ತು ಖಾನೆಯನ್ನು ನಿರ್ಮಿಸಿ, ಈ ಸ್ಥಳದಲ್ಲಿ ಜಾಗರೂಕರಾದ ಪಹರೆಯವರನ್ನು ನೇಮಿಸಿದರು.

ಆ ಬಳಿಕ ಮಹಾ ಮಾತುಶ್ರೀಯವರು ದೊರೆಗಳಿಗೆ ವಿದ್ಯಾಭ್ಯಾಸವನ್ನು ಮಾಡಿಸಬೇಕೆಂದು ಆಲೋಚಿಸಿ, ಸಕಲ ಕಾರ್ಯಗಳಿಗೂ ಉಪಯುಕ್ತವಾದ ರಾಜನೀತಿ ಮುಂತಾದ ಶಾಸ್ತ್ರಗಳನ್ನೂ ಕರ್ನಾಟಕ ಮಹಾ

ರಾಷ್ಟ್ರ ಪಾರ್ಷಿ ಮುಂತಾದ ವಿದ್ಯೆಗಳನ್ನೂ, ಸಂಗೀತ ಸಾಹಿತ್ಯಗಳನ್ನೂ, ಉತ್ತಮವಾದ ಗಣಿತ ವಿದ್ಯೆಯನ್ನೂ, ಧನುರ್ವಿದ್ಯೆಯನ್ನೂ, ಶಸ್ತ್ರಾಸ್ತ್ರಗಳ ವಿದ್ಯೆಯನ್ನೂ, ಶರೀರಕ್ಕೆ ಪುಷ್ಟಿಯನ್ನುಂಟುಮಾಡುವ ಗರಡೀಸಾಧನೆಯನ್ನೂ, ಅಶ್ವವಿದ್ಯೆ ಮೊದಲಾದ ಅನೇಕ ಇತರ ವಿದ್ಯೆಗಳನ್ನೂ ಅಭ್ಯಾಸ ಮಾಡಿಸುವವರಾಗಿ ಎಂದು, ವಂಶಕ್ರಮದಿಂದ ಆಪ್ತರಾಗಿ ಬಂದಿರುವ ಆಯಾ ವಿದ್ಯೆಯಲ್ಲಿ ಕುಶಲರಾದ ಜನಗಳನ್ನು ನೇಮಿಸಿ ಪ್ರಾರಂಭ ಮಾಡಿಸಿದರು.

ನವರಾತ್ರ್ಯುತ್ಸವ.—ಅಷ್ಟರಲ್ಲಿಯೇ ನವರಾತ್ರ್ಯುತ್ಸವವು ಪ್ರಾಪ್ತವಾದದ್ದರಿಂದ, ಶಾ ೧೭೨೧ನೇ ಸಿದ್ಧಾರ್ಥಿ ಸಂವತ್ಸರದ ಆಶ್ವಯುಜ ಶುದ್ಧ ೧ ಸೋಮವಾರದಲ್ಲಿ, ಧೊರೆಗಳಾದ ಮುಮ್ಮಡಿ ಕೃಷ್ಣರಾಜ ಒಡೆಯರವರು ಮಂಗಳಸ್ನಾನವನ್ನು ಮಾಡಿ, ದೀಕ್ಷಾ ವಸ್ತ್ರವನ್ನು ಧರಿಸಿಕೊಂಡು, ಅರಮನೇ ಚಾಮುಂಡೇಶ್ವರೀ ಸನ್ನಿಧಿಯಲ್ಲಿ ಕಂಕಣ ಧಾರಣೆಯಾದನಂತರ, ಸರ್ವಾಲಂಕಾರ ಭೂಷಿತರಾಗಿ, ಸಮಸ್ತ ರಾಜೋಪಚಾರಗಳಿಂದ ಪಲ್ಲಕ್ಕಿಯಲ್ಲಿ ಮುಹೂರ್ತಮಾಡಿ, ಸಕಲ ಸೇನಾಜನರು ಮುಂತಾದವರೊಡಗೂಡಿ, ನಜರಬಾದು ಅರಮನೆಯಿಂದ ರಾಜ್ಯಲಕ್ಷ್ಮಿಗೆ ಆವಾಸಸ್ಥಾನವಾದ ಮಹೀಶೂರ ಅರಮನೇ ಸೆಜ್ಜೆಗೆ ಚಿತ್ತಯಿಸಿ, ಕಾಳಿಕಾ ಪುರಾಣೋಕ್ತ ಪ್ರಕಾರವಾಗಿ ರತ್ನಸಿಂಹಾಸನಕ್ಕೆ ಪೂಜೆಯನ್ನು ಮಾಡಿ ನಮಸ್ಕರಿಸಿ, ಶಿಬಾಸರದ ಮೊಹರು ಪಟ್ಟದ ಕತ್ತಿಯನ್ನು ಒಪ್ಪಿಸಿಕೊಂಡು ಸುಮುಹೂರ್ತದಲ್ಲಿ ಸಿಂಹಾಸನವನ್ನು ಆರೋಹಣ ಮಾಡಿದರು. ಅನಂತರ ೨೧ ಕುಶಾಲ ಫಿರಂಗಿಗಳನ್ನು ಹಾರಿಸಿದರು. ಪೂರ್ಣಯ್ಯ ಮುಂತಾದ ಅನೇಕ ಅಧಿಕಾರಸ್ಥರು ಅರಸುಗಳು ಮುಂತಾದವರು ತಮ್ಮತಮ್ಮ ಮರ್ಯಾದಾನುಗುಣವಾಗಿ ನಜರು ಕಾಣಿಕೆಗಳನ್ನು ಒಪ್ಪಿಸಿ ಕೂತುಕೊಂಡರು. ಧೊರೆಗಳು ಸಕಲ ವೈಭವಗಳಿಂದಲೂ ಓಲಗವನ್ನು ತೆಗೆದುಕೊಳ್ಳುತ್ತಾ, ಪೂರ್ವ ಪದ್ಧತಿ ಮೇರೆಗೆ ಆನೆ ಕುದುರೆಗಳು ಕೆರೆಗೆ ಹೋಗಿ ಅರಮನೆಗೆ ಬರುತ್ತಿರುವ ಸಮಯದಲ್ಲಿ, ಸೆಜ್ಜೆಮೇಲೆ ಸರ್ವರಿಗೂ ಹೂವಿನ ಹಾರ ವೀಳ್ಯಗಳನ್ನು ಕೊಟ್ಟು ಮುಜರೆ ಮಾಡಿಸಿ ಕಳುಹಿಸಿ, ತಾವು ರಾಜೋಪಚಾರಗಳನ್ನು ಅಂಗೀಕರಿ

ಸುತ್ತಾ ಸಿಂಹಾಸನದಿಂದ ಇಳಿದು, ನಜರಬಾದು ಅರಮನೆಗೆ ಚಿತ್ತಯಿಸಿ, ಅಂತಃಪುರದಲ್ಲಿ ನಡೆಯುವ ಸೇವೆಗಳನ್ನು ಅಂಗೀಕರಿಸಿ ಆರೋಗಣೆಯನ್ನು ಒಪ್ಪಿಸಿಕೊಂಡರು.

ಅನಂತರ ಮೂರನೇ ಜಾವದಲ್ಲಿ ಧೊರೆಗಳು ನಜರಬಾದು ಅರಮನೆಯಿಂದ ಮಹೀಶೂರ ಅರಮನೇ ಸೆಜ್ಜೆಗೆ ಚಿತ್ತಯಿಸಿ, ಸಿಂಹಾಸನಾರೋಹಣಾನಂತರದಲ್ಲಿ, ಅರಸುಗಳು ಮುಂತಾದವರಿಂದ ಮರ್ಯಾದೆಗಳನ್ನು ಹೊಂದಿ, ಜಟ್ಟೀ ಕಾಳಗ ಮುಂತಾದ ಉತ್ಸವಗಳನ್ನು ಅವಲೋಕಿಸುತ್ತಾ, ಆ ಸಮಯದಲ್ಲಿ ಬಂದ ರೆಸಿಡೆಂಟ್ ಕ್ಲೋಸ್ ಬಹದರ ಮುಂತಾದ ಸರದಾರರಿಗೆ ಸನ್ಮಾನ ಮಾಡಿ, ಪ್ರಾತಃಕಾಲದಂತೆ ಪಟ್ಟದಾನೆ ಕುದುರೆಗಳು ಕೆರೆಗೆ ಹೋಗಿ ಅರಮನೆಗೆ ಬರುವಷ್ಟರಲ್ಲಿ ಕೆಮ್ಮಣ್ಣು ಮಟ್ಟಿಯಲ್ಲಿ ದೀವಟಿಗೆ ಸಲ್ಲಾಂ ಮಾಡಿದ ಮೇಲೆ, ಸಕಲರೂ ತಮ್ಮತಮ್ಮ ಪದ್ಧತಿ ಮೇರೆಗೆ ಮುಜರೆ ಸಲ್ಲಾಂಗಳನ್ನು ಮಾಡಿ ಅನಂತರ ಆನೆ ಕುದುರೆಗಳು ಒಳಕ್ಕೆ ಬಂದಮೇಲೆ, ಓಲಗಕ್ಕೆ ಬಂದಿದ್ದ ಸರದಾರರು ಮುಂತಾದ ವಿಶಿಷ್ಟ ಜನರಿಗೂ ಹೂವಿನ ಹಾರ ವೀಳ್ಯಗಳನ್ನು ಅಪ್ಪಣೆ ಕೊಡಿಸಿ ಮುಜರೆಯನ್ನು ತೆಗೆದುಕೊಂಡು, ೫೯ ಕುಶಾಲು ಫಿರಂಗಿಯನ್ನು ಹಾರಿಸುತ್ತಿರುವ ಸಮಯದಲ್ಲಿ ಸಿಂಹಾಸನದಿಂದ ಇಳಿದು, ಮೂರನೇ ಜಾವದಂತೆ ಅತಿ ವೈಭವದಿಂದ ನಜರಬಾದು ಕೋಟೇ ಅರಮನೆಗೆ ಚಿತ್ತಯಿಸಿ, ಸಕಲ ರಾಜೋಪಚಾರಗಳನ್ನೂ ಸ್ವೀಕರಿಸಿ ಆರೋಗಣೆಯನ್ನು ಒಪ್ಪಿಸಿಕೊಂಡರು.

ಈ ರೀತಿಯಾಗಿ ನವರಾತ್ರ್ಯುತ್ಸವವು ಪ್ರತಿ ದಿವಸವೂ ನಡೆಯುತ್ತಿರಲು, ಕೃಷ್ಣರಾಜ ಒಡೆಯರವರು ಪೂರ್ವದಲ್ಲಿ ರಾಜಒಡೆಯರವರು ನಿಬಂಧನೆ ಮಾಡಿಯಿರುವ ಮೇರೆಗೆ ಮೂಲಾ ನಕ್ಷತ್ರದಲ್ಲಿ ಸರಸ್ವತಿ ಪೂಜೆ, ನವಮೀದಿನ ಪಟ್ಟದ ಕತ್ತಿ ಆನೆಕುದುರೆಗಳ ಪೂಜೆ, ಕಂಕಣ ವಿಸರ್ಜನೆ, ಅಮಲದೇವತಾ ಪೂಜೆ, ಶಿಬಾಸರದ ಪೂಜೆ, ಇದೇ ನವಮೀದಿನ ಬೆಟ್ಟದ ಚಾಮುಂಡೇಶ್ವರೀ ಸನ್ನಿಧಿಯಲ್ಲಿ ಚಂಡೀಜಪ ಪಾರಾಯಣ ಪೂರ್ಣಾಹುತಿ ಮೊದಲಾದ ಕಾರ್ಯಗಳನ್ನು ನೆರವೇರಿಸಿದರು; ವಿಜಯದಶಮೀದಿವಸ,

ಧೊರೆಗಳು ಪ್ರಾತಃಕಾಲದಲ್ಲಿ ನಡೆಯತಕ್ಕ ಆಯುಧಗಳ ಉತ್ತರಪೂಜೆ ಜಟ್ಟೀಕಾಳಗ ಕೂಶ್ಮಾಂಡ ಛೇದನ ಮುಂತಾದ ಕಾರ್ಯಗಳನ್ನು ನೆರವೇರಿಸಿ, ಪಟ್ಟದ ಆನೆ ಕುದುರೆ ಆಯುಧಗಳನ್ನು ಬನ್ನೀಮರದ ಮಂಟಪದ ಬಳಿಗೆ ಕಳುಹಿಸಿಕೊಟ್ಟು, ಅಮಲದೇವತೆಯಮ್ಮನವರನ್ನು ಪೂಜಿಸುವ ತಮ್ಮಡೀ ಮನೆಗೆ ಬಿಜಮಾಡಿಸಿ, ಆ ದಿನ ೩ನೇ ಜಾವದಲ್ಲಿ ಸರ್ವಾಲಂಕಾರ ಭೂಷಿತರಾಗಿ ಅನೇಕ ಸೇನಾಜನ ಪರಿವೃತರಾಗಿ ಬನ್ನೀಮರದ ಮಂಟಪಕ್ಕೆ ಚಿತ್ತಯಿಸಿ, ಅಲ್ಲಿ ಅರಣ್ಯ ದುಷ್ಟ ಮೃಗಗಳನ್ನು ತರಿಸಿ ಬಿಡಿಸಿ ಸಂಹರಿಸಿ, ಅಲ್ಲಿಗೆ ಬಂದಿದ್ದ ಜನರು ಮುಜರೆ ಮಾಡಿದಮೇಲೆ ಹೂವಿನ ಹಾರ ವೀಳ್ಯಗಳನ್ನು ಕೊಡಿಸಿ, ಬನ್ನೀ ಮಹಾಕಾಳಿಯಮ್ಮನವರ ಪ್ರಸಾದವನ್ನು ಸ್ವೀಕರಿಸಿ, ಅನೇಕ ವೈಭವಗಳಿಂದ ಅರಮನೆಗೆ ಚಿತ್ತಯಿಸಿ, ಭದ್ರಾಸನದಲ್ಲಿ ಮುಹೂರ್ತ ಮಾಡಿ, ಓಲಗವನ್ನು ತೆಗೆದುಕೊಳ್ಳುತ್ತಾ, ಬಂದ ಸರದಾರರು ಮುಂತಾದ ವಿಶಿಷ್ಟ ಜನರಿಗೂ ಅವರವರ ಮರ್ಯಾದಾನುಸಾರವಾಗಿ ವಸ್ತ್ರಾಭರಣ ಹೂವಿನ ಹಾರ ವೀಳ್ಯಗಳನ್ನು ಕೊಡಿಸಿ, ಬನ್ನೀ ಮಹಾಕಾಳಿಯ ಆಶೀರ್ವಾದ ಪಟ್ಟಿಯನ್ನು ಓದಿದ ವಂಶಾವಳಿ ಸುಬ್ಬಯ್ಯನಿಗೆ ಹೂವಿನಹಾರ ವೀಳ್ಯಗಳನ್ನು ಕೊಟ್ಟು, ಆ ಪಟ್ಟಿಯನ್ನು ಪಟ್ಟದ ಕತ್ತಿಯೊಳಗೆ ಇರಿಸಿ ಮೊಹರು ಮಾಡಿಸಿ, ಆ ದಿನ ತೋಷೀಖಾನೆ ಮುಂತಾದ ಸ್ಥಳಗಳಲ್ಲಿ ಚಾಳಿಗೆ ಪೂಜೆ ಮಾಡಿಸಿದರು. ಈ ರೀತಿಯಾಗಿ ಕಾಳಿಕಾ ಪುರಾಣೋಕ್ತ ಪ್ರಕಾರವಾಗಿಯೂ ರಾಜ ಒಡೆಯರವರ ನಿಬಂಧನೆ ಮೇರೆಗೂ ನವರಾತ್ರಿಯ ಉತ್ಸವವು ಪ್ರತಿವರ್ಷವೂ ಸಕಲ ವೈಭವಗಳಿಂದಲೂ ನಡೆಯಿತು.

ಧರ್ಮಕಾರ್ಯಗಳನ್ನು ಮಾಡಿದ್ದು.—ಮುಮ್ಮಡಿ ಕೃಷ್ಣರಾಜ ಒಡೆಯರವರು, ತಮ್ಮ ಸಂಸ್ಥಾನದ ಗಡಿಗಳಲ್ಲಿ ಇದ್ದ ದೇವಸ್ಥಾನ ಗುಡಿ ಗೋಪುರ ದೇವರನ್ನೂ, ದೇವದಾಯ ಬ್ರಹ್ಮದಾಯ ತಟಾಕಾರಾಮ ಸಾಲುಮರ ಕಟ್ಟೆ ಕಾಲುವೆ ಸೇತುವೆ ಸೋಪಾನ ಮಂಟಪ ಸತ್ರ ಧರ್ಮಶಾಲೆ ಮುಂತಾದ ಅನೇಕ ಧರ್ಮಕಾರ್ಯಗಳನ್ನೂ ಸುಲ್ತಾನನು ನಾಶಮಾಡಿರುವ ವರ್ತಮಾನವನ್ನು ಪರಾಂಬರಿಸಿ, ಆ ಧರ್ಮಕಾರ್ಯಗಳನ್ನು ಪೂರ್ವ

ಇಮ್ಮಡಿಯಾಗಿ ಜೀರ್ಣೋದ್ಧಾರ ಮಾಡಿಸಿ, ನೂತನವಾಗಿ ಆಚಂದ್ರಾರ್ಕವಾಗಿ ಇರುವಂತೆ ಅನೇಕ ಧರ್ಮಕಾರ್ಯಗಳನ್ನು ಮಾಡಿರುವ ವಿವರ ಏನಂದರೆ:—

ಚಾಮುಂಡೇಶ್ವರಿ ಮತ್ತು ಜ್ವಾಲಾಮುಖಿಯಮ್ಮನವರಿಗೆ ಮಾಡಿರುವ ಸೇವಾರ್ಥ.—ಮುಮ್ಮಡಿ ಕೃಷ್ಣರಾಜಒಡೆಯರವರು ತಮಗೆ ಪಟ್ಟವಾದ ೬ನೇ ವರ್ಷ ಶಾ॥ ೧೭೨೬ನೇ ರಕ್ತಾಕ್ಷಿಸಂವತ್ಸರದ ಫಾಲ್ಗುನ ಶುದ್ಧ ೩ ಶುಕ್ರವಾರದಲ್ಲಿ ಮಹಾಮಾತುಶ್ರೀಯವರು ಮುಂತಾದ ಸನ್ನಿಧಾನದ ಸವಾರಿಗಳಿಂದಲೂ, ದಿವಾನ್ ಪೂರ್ಣಯ್ಯನವರು ಮುಂತಾದ ಅನೇಕ ಅಧಿಕಾರಿಗಳಿಂದಲೂ, ಶ್ರೀಚಾಮುಂಡೇಶ್ವರಿ ಮತ್ತು ಉತ್ತನಹಳ್ಳೀ ಜ್ವಾಲಾಮುಖಿ ಅಮ್ಮನವರ ದರ್ಶನ ಮಾಡುವದಕ್ಕೆ ಅನೇಕ ವೈಭವಗಳಿಂದ ಬೆಟ್ಟಕ್ಕೆ ಚಿತ್ತಯಿಸಿ, ಅಮ್ಮನವರ ದರ್ಶನವನ್ನು ಮಾಡಿಕೊಂಡು, ಕಾಣಿಕೆ ಕೆಪ್ಪಗಳನ್ನು ಒಪ್ಪಿಸಿ, ಉತ್ತನ ಹಳ್ಳಿಯಲ್ಲಿಯೂ ಇದೇ ರೀತಿಯಾಗಿ ದೇವರ ದರ್ಶನವನ್ನು ಮಾಡಿ, ಮಹೀಶೂರಿಗೆ ಚಿತ್ತಯಿಸಿದರು. ಅದು ಮೊದಲುಗೊಂಡು ಧೊರೆಗಳ ಸವಾರಿಯು, ಇದೇ ರೀತಿಯಾಗಿ ದೇವರ ದರ್ಶನಗಳಿಗೆ, ಮಹಾಮಾತುಶ್ರೀಯವರು ತಮ್ಮ ಜನಾನಿಸವಾರಿಗಳು ಚಿತ್ತಯಿಸಿದ ಕಾಲದಲ್ಲಿ, ಪ್ರಾರ್ಥನೆ ಇದ್ದಂತೆಯೂ ಇಚ್ಛೆ ಬಂದಾತೆಯೂ, ತುರಚೀಕಾಸು ಬಹದರೀ ವರಹ ಮುಂತಾದ ಚಿನ್ನದ ನಾಣ್ಯಗಳಿಂದ ಅಷ್ಟೋತ್ತರ ತ್ರಿಶತಿ ಸಹಸ್ರನಾಮಗಳಿಂದ ಅರ್ಚನೆಗಳನ್ನು ಮಾಡಿಸಿ, ಅನೇಕ ರುಂಡಮಾಲಾ ಸಹಿತವಾದ ಬೆಳ್ಳೀ ಮಂಟಪ, ಚಿನ್ನಬೆಳ್ಳಿಗಳ ಪೂಜೋಪಕರಣ, ಸೇವೋಪಕರಣ ಮುಂತಾದ ಅನೇಕ ಪಾತ್ರೆಗಳನ್ನೂ, ಅಪೂರ್ವಗಳಾಗಿಯೂ ಅಮೌಲ್ಯಗಳಾಗಿಯೂ ಇರುವ ನವರತ್ನ ಖಚಿತ ಕಂಠಿ ಮುಂತಾದ ಚಿನ್ನ ಬೆಳ್ಳೀ ಆಭರಣಗಳನ್ನೂ, ಅಮೌಲ್ಯವಾದ ವಸ್ತ್ರಗಳನ್ನೂ ಕೊಟ್ಟು ದೇವತಾ ಸೇವೆಯನ್ನು ಮಾಡಿದರು.

ಪೂರ್ವದಲ್ಲಿ ಅಮ್ಮನವರಿಗೆ ಮಾಡಿಯಿದ್ದ ಅಷ್ಟಬಂಧನವು ಶಿಥಿಲವಾಗಿ ಇದ್ದದ್ದರಿಂದ, ಧೊರೆಗಳು ಶಾ॥ ೧೭೩೩ನೇ ಪ್ರಮಾಥಿ ಸಂವತ್ಸರದ ಕಾರ್ತಿಕ

ಶುದ್ಧ ೫ ಯಲ್ಲಿ ಅಷ್ಟಬಂಧನವನ್ನು ಮಾಡಿಸಿ, ದೇವೀಆಗಮೋಕ್ತಪ್ರಕಾರವಾಗಿ ಪಂಚಲೋಹದ ಉತ್ಸವ ವಿಗ್ರಹವನ್ನೂ, ಅಸ್ತ್ರಮೂರ್ತಿಗಳನ್ನೂ, ಶಿಲೆಯಿಂದ ಬಲಿಪೀಠ ಧ್ವಜಸ್ತಂಭ ದ್ವಾರಪಾಲಕರು ಮುಂತಾದವರನ್ನೂ ನೂತನವಾಗಿ ಮಾಡಿಸಿ, ಪ್ರತಿಷ್ಠೆ ಮಾಡಿಸಿ ಬೊಂಬೇ ರಥವನ್ನು ಮಾಡಿಸಿದರು.

ಆಳಿದಮಹಾಸ್ವಾಮಿಯವರು ಈ ಬೆಟ್ಟದಲ್ಲಿ ಇದ್ದ ಅನೇಕ ಕಮರಿಗಳನ್ನು ಮುಚ್ಚಿಸಿ ೪ ಬೀದಿಗಳನ್ನು ಮಾಡಿಸಿ, ಸುತ್ತಲೂ ಕಲ್ಲು ಗಾರೆಗಳಿಂದ ಕೋಟೆಯನ್ನು ಕಟ್ಟಿಸಿ, ಈ ಬೀದಿಯಲ್ಲಿ ರಥೋತ್ಸವ ಮುಂತಾದ ಉತ್ಸವಗಳು ಬರುವಂತೆ ನಿಬಂಧನೆಯನ್ನು ಮಾಡಿ, ಶಾ॥ ೧೭೪೪ನೇ ವಿಕ್ರಮಸಂವತ್ಸರದ ಮಾಘಶುದ್ಧ ೩ಯಲ್ಲಿ ನೂತನವಾಗಿ ರಥೋತ್ಸವವನ್ನು ಮಾಡಿಸಿ, ಮುಂದೆ ಪ್ರತಿಸಂವತ್ಸರದಲ್ಲಿಯೂ ಶರತ್ಕಾಲದಲ್ಲಿ ಚಾಮುಂಡೇಶ್ವರೀ ಪೂಜೆಯು ವಿಶೇಷವಾದದ್ದರಿಂದ, ನವರಾತ್ರಿಯ ಉತ್ಸವ ಬೆಳೆದ ಮೇಲೆ ಖಾಸಾ ಜನ್ಮನಕ್ಷತ್ರದಲ್ಲಿ ಅಂಕುರಾರೋಪಣವೂ, ತಮ್ಮ ಧರ್ಮಪತ್ನಿಯರಾದ ಕೃಷ್ಣವಿಲಾಸ ಸನ್ನಿಧಾನದ ಲಿಂಗಾಜಮ್ಮಣ್ಣಿಯವರ ನಾಮನಕ್ಷತ್ರದಲ್ಲಿ ರಥೋತ್ಸವವೂ, ತಮ್ಮ ಪಟ್ಟಾಭಿಷೇಕಮಹೋತ್ಸವವು ಬೆಳೆದ ರೋಹಿಣೀ ನಕ್ಷತ್ರದಲ್ಲಿ ಅವಭೃತ ಸ್ನಾನಾನಂತರ ಮಂಟಪೋತ್ಸವ ಮುಂತಾದ ಉತ್ಸವಗಳೂ ನಡೆಯುವಂತೆ ಕಟ್ಟಲೆ ಮಾಡಿದರು ; ಆಗಾಗ್ಯೆ ನಡೆಯುವ ಉತ್ಸವಗಳಿಗೆ ಬಣ್ಣದ ವಾಹನಗಳನ್ನು ಮಾಡಿಸಿದ್ದಲ್ಲದೆ, ಚಿನ್ನ ಬೆಳ್ಳಿಗಳಿಂದ ಅತ್ಯುನ್ನತವಾದ ಸಿಂಹಾಸನವನ್ನೂ, ಬೆಳ್ಳಿಯ ಪೀಠ ಪ್ರಭಾವಳಿಯನ್ನೂ, ತಾವು ಮಾಡಿದ ಅಷ್ಟೋತ್ತರ ತ್ರಿಶತಿನಾಮಗಳನ್ನು ಕೆತ್ತಿರುವ ಚಿನ್ನದ ನಕ್ಷತ್ರಮಾಲಿಕೆಯನ್ನೂ ಒಪ್ಪಿಸಿದರು.

ಅನಂತರದಲ್ಲಿ ಧೊರೆಗಳು ತಮ್ಮ ಪೂರ್ವಿಕರಾದ ರಾಜಒಡೆಯರವರು ರಾಯಗೋಪುರವನ್ನು ಕಟ್ಟಿಸಬೇಕೆಂದು ನಿಲ್ಲಿಸಿಯಿದ್ದ ೪ ದ್ವಾರಶಾಖೆಯನ್ನು ತೆಗಿಸಿ, ನೂತನವಾಗಿ ಅಧಿಷ್ಠಾನುಶುದ್ಧಿಯಾಗಿ, ಶಿಲೆಗಳಿಂದಲೂ ಇಟ್ಟಿಗೆ ಗಾರೆಗಳಿಂದಲೂ ಅತ್ಯುನ್ನತವಾಗಿಯೂ ವಿಚಿತ್ರವಾಗಿಯೂ ೭ ನೆಲೆಗೋಪುರಗಳನ್ನು ಕಟ್ಟಿಸಿ, ಶಕ ೧೭೫೧ನೇ ಸರ್ವಜಿತು ಸಂವತ್ಸರದ ಫಾಲ್ಗುನ ಬಹುಳ ೩ ಸೋಮವಾರದಲ್ಲಿ ಎರಡು ಕೊರಂಬವನ್ನೂ ೭ ಕಲಶಕ್ಕಿಂತ

ಗಳನ್ನೂ ಹಾಕಿಸಿ ಗೋಪುರಪ್ರತಿಷ್ಠೆಯನ್ನು ಮಾಡಿದರು ; ಬೆಟ್ಟದಲ್ಲಿರುವ ದೇವೀಕೆರೆ ಎಂಬ ತಟಾಕವನ್ನು ಜೀರ್ಣೋದ್ಧಾರಮಾಡಿಸಿದರು.

ಮಹಾಬಲೇಶ್ವರ ಸ್ವಾಮಿಯವರಿಗೆ ಅಷ್ಟಬಂಧನವು ಶಿಥಿಲವಾಗಿ ಇದ್ದದರಿಂದ,ಧೊರೆಗಳು ಶಾ|| ೧೭೭೬ನೇ ಆನಂದ ಸಂವತ್ಸರದ ಶ್ರಾವಣ ಶುದ್ಧ ೬ ಸೋಮವಾರದಲ್ಲಿ ನೂತನವಾಗಿ ಅಷ್ಟಬಂಧನವನ್ನು ಮಾಡಿಸಿ, ನಾಗಾಭರಣ ಸಹಿತವಾದ ಬೆಳ್ಳೀಕೊಳಗವನ್ನೂ ಹೀರಪ್ರಭಾವಳಿ ಜೋಡಿ ರಥ ವಾಹನಗಳನ್ನೂ ಒಪ್ಪಿಸಿದರು ; ಬೆಟ್ಟದಲ್ಲಿರುವ ನಾರಾಯಣಸ್ವಾಮಿ ಮುಂತಾದ ದೇವರಿಗೂ ಉತ್ತನಹಳ್ಳೀ ಜ್ವಾಲಾಮುಖಿಗೂ ಚಿನ್ನ ಬೆಳ್ಳಿ ರತ್ನಗಳ ಆಭರಣಗಳನ್ನೂ ಬೆಳ್ಳಿಯ ಸೇವೋಪಕರಣ ಪೂಜೋಪಕರಣ ಪಾತ್ರೆಗಳನ್ನೂ ಒಪ್ಪಿಸಿದರು. ಚಾಮುಂಡೇಶ್ವರೀ ದೇವಸ್ಥಾನದ ಒಳಗೆ ಉತ್ಸವದ ಸನ್ನಿಧಿಯ ಎದುರಿಗೆ ಶಿಲೆಯಿಂದ ಕೈ ಜೋಡಿಸಿಕೊಂಡಿರುವಂತೆ ಖಾಸಾ ಭಕ್ತವಿಗ್ರಹವನ್ನು ಮಾಡಿಸಿರುವದಲ್ಲದೆ, ತಮ್ಮ ಧರ್ಮಪತ್ನಿಯರಾದ ಲಕ್ಷ್ಮೀವಿಲಾಸ ಕೃಷ್ಣವಿಲಾಸ ರಮಾವಿಲಾಸದ ಸನ್ನಿಧಾನದವರ ಭಕ್ತವಿಗ್ರಹಗಳನ್ನು ಮಾಡಿಸಿ ಪ್ರತಿಷ್ಠೆಯನ್ನು ಮಾಡಿಸಿದರು. ಈ ಬೆಟ್ಟದ ಮೇಲೆ ಇರುವ ಎಲ್ಲಾ ದೇವರಿಗೂ ಉತ್ತನಹಳ್ಳಿಯಲ್ಲಿರುವ ಅಮ್ಮನವರಿಗೂ ಅಲ್ಲಿರುವ ಸಿದ್ಧೇಶ್ವರನಿಗೂ ಸಹ ನಿತ್ಯಕಟ್ಟಳೆ ಪಡಿತರ ದೀಪಾರಾಧನೆಗಳಿಗೂ, ಬೆಟ್ಟದ ಮೇಲೆ ದೇವೀಕೂಟ ಮುಂತಾದ ಸಂತರ್ಪಣೆಗಳಿಗೂ, ರಥೋತ್ಸವ ಮುಂತಾದ ಉತ್ಸವಗಳಿಗೂ, ಅರ್ಚಕ ಆಗಮಿಕ ಮುಂತಾದ ಉಪಾಧಿ ಬ್ರಾಹ್ಮರು ಪಾರುಪತ್ಯಗಾರ ಶಾನುಭೋಗ ತಮ್ಮಡಿ ಗೊಲ್ಲ ಕಾವಲುಗಾರ ಓಲಗ ತಾಳ ಮೇಳದವರು ಮುಂತಾದ ಜನಗಳ ಜೀವನ ನಡಿಯುವದಕ್ಕೂ ಸಹ ಭಾರೀ ತಸ್ತೀಕನ್ನು ಉಂಟುಮಾಡಿ, ಕೆಲವು ಬ್ರಾಹ್ಮಣರಿಗೂ ತಮ್ಮಡಿಗಳಿಗೂ ಸಂಬಳವಲ್ಲದೆ ಭೂರೂಪವಾಗಿಯೂ ಜೀವನ [illegible] ಕೊಟ್ಟು, ಆಚಂದ್ರಾರ್ಕವಾಗಿ ದೇವತಾ ಸೇವೆ ನಡೆಯುವಂತೆ ಕಟ್ಟಳೆ ಮಾಡಿಸಿದರು.

ನಂಜನಗೂಡು ಶ್ರೀಕಂಠೇಶ್ವರಸ್ವಾಮಿಯವರಿಗೆ ಮಾಡಿರುವ ಸೇವಾರ್ಥ.—ಶಾ|| ೧೭೮೭ನೇ ಕ್ರೋಧನ ಸಂವತ್ಸರದ ಫಾಲ್ಗುನ ಶುದ್ಧ ೩ ಶುಕ್ರವಾರದಲ್ಲಿ.

ಆಳಿದ ಮಹಾಸ್ವಾಮಿಯವರಾದ ಮುಮ್ಮಡಿ ಕೃಷ್ಣರಾಜ ಒಡೆಯರವರು ಪೆತಮ್ಮಯ್ಯನವರು ಮೊದಲಾದ ಮಾತುಶ್ರೀಯವರು ದಿವಾನ್ ಪೂರ್ಣಯ್ಯನವರು ಮುಂತಾದ ಅಧಿಕಾರಸ್ಥರು ರೆಸಿಡೆಂಟ್ ಮಾಲ್ಕಂ ಸಾಹೇಬರು ಮೊದಲಾದವರನ್ನು ಕರೆದುಕೊಂಡು ಅತಿ ವೈಭವದಿಂದ ಅಂಬಾರೀಮೇಲೆ ನಂಜನಗೂಡಿಗೆ ಚಿತ್ತಯಿಸಿದರು. ನಂಜನಗೂಡು ಅರಮನೆಯ ಬಾಗಲಿಗೆ ಬಂದು ಇಳಿಯುವ ಸಮಯದಲ್ಲಿ, ಧೊರೆಗಳು ಏರಿಯಿದ್ದ ಆನೆಯು ಮದ ಹತ್ತಿದಂತೆ ಆವೇಶ ಬಂದು ಮಾವಟಿಗನ ಸ್ವಾಧೀನಕ್ಕೆ ನಿಲ್ಲದೆ ನದಿಯ ಸಮೀಪಕ್ಕೆ ಓಡಿಹೋಯಿತು. ಆಗ ರೆಸಿಡೆಂಟರು ಪೂರ್ಣಯ್ಯನವರು ಅಂತಃಪುರದಲ್ಲಿನ ಮಾತುಶ್ರೀಯವರು ಮುಂತಾದವರು ಬಹಳ ಗಾಬರಿಯಾದರು. ಆಗ ಮಾತುಶ್ರೀಯವರು "ಧೊರೆಗಳಿಗೆ ಪಟ್ಟವಾಗಿ ೭ ವರ್ಷವಾದಾಗ್ಯೂ ಸ್ವಾಮಿಯ ದರ್ಶನಕ್ಕೆ ಬಾರದೆ ಪೂರ್ವದಂತೆ ಕಾಣಿಕೆ ಕಪ್ಪಗಳನ್ನು ಒಪ್ಪಿಸದೆ ಇದ್ದದ್ದು ನಮ್ಮಿಂದ ಬಹಳ ತಪ್ಪಾಯಿತು" ಎಂದು ಪ್ರಾರ್ಥನೆ ಮಾಡಿಕೊಂಡರು. ಆ ಬಳಿಕ ನಂಜುಂಡೇಶ್ವರಸ್ವಾಮಿಯು ಧೊರೆಗಳಿಂದ ಸೇವೆಯನ್ನು ಪಡೆದು ಬಹುಕಾಲ ಸಂರಕ್ಷಣೆ ಮಾಡಬೇಕೆಂಬ ಕೃಪೆಯಿಂದ, ಓಡಿಹೋದ ಆನೆಯು ಮಾವುತನ ಸ್ವಾಧೀನಕ್ಕೆ ಬರುವಂತೆ ಅದಕ್ಕೆ ಬುದ್ಧಿಯನ್ನು ಉಂಟುಮಾಡಲು, ಆನೆಯು ಪೂರ್ವದಂತೆ ಅರಮನೇ ಬಾಗಲಿಗೆ ಬಂತು. ಅನಂತರದಲ್ಲಿ ಧೊರೆಗಳು ಆನೆಯಿಂದ ಇಳಿದು, ಸ್ನಾನ ಸಂಧ್ಯಾವಂದನೆಗಳನ್ನು ನೆರವೇರಿಸಿಕೊಂಡು, ದೇವಸ್ಥಾನಕ್ಕೆ ಚಿತ್ತಯಿಸಿ, ದೇವರ ದರ್ಶನವನ್ನು ಮಾಡಿಕೊಂಡು, ಪ್ರಾರ್ಥನೆಯಿದ್ದಂತೆ ಕಾಣಿಕೆ ಕಪ್ಪಗಳನ್ನು ಒಪ್ಪಿಸಿ, ತೀರ್ಥ ಪ್ರಸಾದವನ್ನು ಸ್ವೀಕರಿಸಿಕೊಂಡು, ಪುನಃ ಪ್ರದಕ್ಷಿಣೆಯಾಗಿ ಚಿತ್ತಯಿಸುವ ಸಮಯದಲ್ಲಿ, ದೇವಸ್ಥಾನದ ಉತ್ತರಪಾರ್ಶ್ವದ ಬೀಳು ಕೈಸಾಲೇ ಅಂಕಣಗಳನ್ನು ಪರಾಂಬರಿಸಿ, ಇನ್ನೂ ಕೆಲವು ಕೈಸಾಲೆಗಳನ್ನೂ ಅಂಕಣಗಳನ್ನೂ ಹೆಚ್ಚಿಸಿ ಪಂಚವಿಂಶತಿ ಲೀಲಾಮೂರ್ತಿಗಳನ್ನು ಪ್ರತಿಷ್ಠೆ ಮಾಡಿಸುವಂತೆ ಪೂರ್ಣಯ್ಯನವರಿಗೆ ಅಪ್ಪಣೆ ಕೊಡಿಸಿ, ಅರಮನೆಗೆ ಚಿತ್ತಯಿಸಿದರು. ಮಹಾಮಾತುಶ್ರೀಯವರು ಮುಂತಾದವರೆಲ್ಲರೂ ದೇವರ ದರ್ಶನಕ್ಕೆ ಚಿತ್ತಯಿಸುವ ಸಮಯದಲ್ಲಿ, ಧೊರೆಗಳ ಜನಕ ಜನನಿಯವರಾದ

ಹೊನ್ನಾಜಮ್ಮಣ್ಣಿಯವರು, ತಾವು ಪ್ರಾರ್ಥನೆ ಮಾಡಿಕೊಂಡು ಇದ್ದಂತೆ ೪ ಜನ ಅಮ್ಮೇರುಗಳಿಗೂ ಬಾಯಿಬೀಗವನ್ನು ಚುಚ್ಚಿಸಿ, ತಾವೂ ನದಿಯಲ್ಲಿಯೇ ಬಾಯಿಬೀಗವನ್ನು ಚುಚ್ಚಿಸಿಕೊಂಡು, ಕನಾತಿನ ಒಳಗೆ ಹೆಜ್ಜೇ ನಮಸ್ಕಾರಗಳನ್ನು ಮಾಡುತ್ತಾ ದೇವಸ್ಥಾನಕ್ಕೆ ಚಿತ್ತಯಿಸಿ, ಪ್ರಾರ್ಥನೆ ಮಾಡಿ ಯಿದ್ದಂತೆ ಕಾಣಿಕೆ ಕಪ್ಪಗಳನ್ನು ಸಮರ್ಪಿಸಿ, ದೇವರ ದರ್ಶನ ಮಾಡಿಕೊಂಡು ಪ್ರಸಾದಗಳನ್ನು ಒಪ್ಪಿಸಿಕೊಂಡರು. ಅನಂತರದಲ್ಲಿ ಧೊರೆಗಳು ಅಲ್ಲಿ ನಾಲ್ಕುದಿನ ಇದ್ದು ಈ ಶುದ್ಧ ೭ ಮಂಗಳವಾರ ಮಹೀಶೂರಿಗೆ ಚಿತ್ತಯಿಸಿದರು. ಅದು ಮೊದಲುಗೊಂಡು ಖಾಸ್ಸವಾರಿ, ಮಹಾಮಾತುಶ್ರೀಯವರ ಸವಾರಿ, ಖಾಸಾ ಜನಾನಿ ಮುಂತಾದವರ ಸವಾರಿಗಳು ಸಹ ಅನೇಕಾವರ್ತಿ ಚಿತ್ತಯಿಸಿದ ಸಮಯದಲ್ಲಿ, ಪ್ರಾರ್ಥನೆಗಳು ಇದ್ದಂತೆಯೂ ಇಚ್ಛೆ ಬಂದಾತೆಯೂ ಮುಂದೆ ಹೇಳುವ ರೀತಿಯಾಗಿ ದೇವತಾ ಸೇವೆಗಳನ್ನು ಅನೇಕಾವರ್ತಿ ಮಾಡಿ ಇರುತ್ತಾರೆ.

ಮುಮ್ಮಡಿ ಕೃಷ್ಣರಾಜ ಒಡೆಯರವರು ಪೂರ್ಣಯ್ಯನವರಿಗೆ ಅಪ್ಪಣೆ ಕೊಟ್ಟು, ದಕ್ಷಿಣೋತ್ತರ ಕೈಸಾಲೆಗಳಲ್ಲಿ ಕೆಲವು ಅಂಕಣಗಳನ್ನು ಹೆಚ್ಚಿಸಿ, ೨೫ ಗುಡಿಗಳಲ್ಲಿಯೂ ಯಥಾ ಶಾಸ್ತ್ರವಾಗಿ ಶಿಲೆಯಿಂದ ಪಂಚವಿಂಶತಿ ಲೀಲಾಮೂರ್ತಿಗಳನ್ನು ಮಾಡಿಸಿ ಪ್ರತಿಷ್ಠೆಯನ್ನು ಮಾಡಿಸಿದ ಅನಂತರ, ಪೂರ್ವದಲ್ಲಿ ಇದ್ದ ಚಿಕ್ಕ ಗೋಪುರಕ್ಕೆ ಸುವರ್ಣದ ೫ ಕಳಶಗಳನ್ನೂ ೨ ಕೋರಂಬಿಗಳನ್ನೂ ಸಹ ಪ್ರತಿಷ್ಠೆ ಮಾಡಿಸಿದರು; ಇದೇ ದಕ್ಷಿಣೋತ್ತರ ಕೈಸಾಲೆಗಳಲ್ಲಿ ಅತಿಗೇಮನೆ ಶಿವಕೂಟದ ಮನೆ ಉಗ್ರಾಣದ ಮನೆಗಳನ್ನು ನೂತನವಾಗಿ ಮಾಡಿಸಿದರು; ದೇವಸ್ಥಾನದ ಹೊರಗಿನ ಪ್ರಾಕಾರದಲ್ಲಿ ಇದ್ದ ಕೈಸಾಲೆಯು ಹೆಚ್ಚು ತಗ್ಗಾಗಿ ಇದ್ದದ್ದರಿಂದ ಅದನ್ನು ಒಂದೇ ಸಮವಾಗಿ ಹೊಸದಾಗಿ ಮಾಡಿಸಿ, ಈ ಹೊಸದಾಗಿ ಮಾಡಿಸಿದ ಒಳಕೈಸಾಲೆ ಹೊರ ಕೈಸಾಲೆ ಮೇಲಿನ ಭಾಗ ನಾಲ್ಕು ಕಡೆಯಲ್ಲಿಯೂ ಗಾರೆಯ ಗೂಡುಗಳನ್ನು ಮಾಡಿಸಿ, ಅವುಗಳಲ್ಲಿ ಅಷ್ಟದಿಕ್ಪಾಲಕರು ನವಗ್ರಹಗಳು ೧೨ ಸುಬ್ರಹ್ಮಣ್ಯರು ಸಪ್ತತಾಂಡವರು ದಕ್ಷಿಣಾಮೂರ್ತಿಗಳು ಪಂಚವಿಂಶತಿ ಲೀಲಾಮೂರ್ತಿಗಳು ಕೆಲವು ಪುರಾತನರು ದ್ವಾತ್ರಿಂಶದ್ಗಣಪತಿಗಳು ಮುಂತಾದ ವಿಗ್ರಹಗಳನ್ನು ಗಾರೆಯಿಂದ ಅತಿ ವಿಚಿತ್ರವಾಗಿಯೂ ಯಥಾಶಾಸ್ತ್ರವಾಗಿಯೂ

ಮಾಡಿಸಿ, ದೇವರ ವೈವಾಳಿಗೇ ಉತ್ಸವಕ್ಕೆ ಚಿತ್ರಮಂಟಪವನ್ನು ನಿರ್ಮಿಸಿದರು. ತಾಂಡವೇಶ್ವರಸ್ವಾಮಿಯು ಒಳಗಡೆ ಇದ್ದು, ಜಾತ್ರೇಕಾಲದಲ್ಲಿ ಸಂದಣಿಯಲ್ಲಿ ಸರ್ವರಿಗೂ ದರ್ಶನವಾಗದೆ ಇದ್ದದರಿಂದ, ಚಿಕ್ಕ ಗೋಪುರದ ಬಾಗಿಲ ಮುಂಭಾಗದಲ್ಲಿ ಗುಡಿಯನ್ನು ಕಟ್ಟಿಸಿ, ಪುರಾತನ ಭಕ್ತರಿಗೆ ಅಭಿಮುಖವಾಗಿ ಆ ತಾಂಡವೇಶ್ವರಸ್ವಾಮಿಯನ್ನು ಪ್ರತಿಷ್ಠೆ ಮಾಡಿಸಿದರು.

ಭೂಕೈಲಾಸಪತಿಯಾದ ನಂಜುಂಡೇಶ್ವರ ಸ್ವಾಮಿಗೂ ಜಗಜ್ಜನನಿಯಾದ ಪಾರ್ವತೀ ದೇವಿಗೂ, ಗೌತಮಾರಾಧಿತರಾದ ಶ್ರೀಕಂಠೇಶ್ವರಸ್ವಾಮಿ ಮುಂತಾದ ಈ ದೇವಸ್ಥಾನದಲ್ಲಿರುವ ದೇವರಿಗೆಲ್ಲಾ ಸಮರ್ಪಣೆ ಮಾಡಿರುವ ವಸ್ತುಗಳು ಯಾವವೆಂದರೆ :—ಮೂಲಸ್ವಾಮಿಗೆ, ಸುವರ್ಣದ ೩ ವಿಭೂತಿ ರೇಖೆಗಳಿಂದ ಒಡಗೂಡಿರುವ ನಾಗಾಭರಣದಿಂದ ಅಲಂಕೃತವಾದ ಚಿನ್ನ ಬೆಳ್ಳಿ ರುದ್ರಾಕ್ಷಿ ಕೊಳಗಗಳು, ಉತ್ಸವರ ಸನ್ನಿಧಿಗೆ ಸುವರ್ಣದ ಬಾಳೇ ಕಂಬ ಮಾವಿನೆಲೆ ತೋರಣಗಳಿಂದ ಅಲಂಕೃತವಾದ ಬೆಳ್ಳೀಮಂಟಪ ಮತ್ತು ಚಿನ್ನಬೆಳ್ಳೀ ಪೀಠ ಪ್ರಭಾವಳಿಗಳು, ಈ ಸನ್ನಿಧೀ ಬಾಗಿಲಿಗೆ ಚಿನ್ನದ ಮುಲಾಮಿನ ಬಾಗಿಲವಾಡ, ನವಾಹೋತ್ಸವವಾದ ಬ್ರಹ್ಮೋತ್ಸವ ಕೃತ್ತಿಕೋತ್ಸವದ ತಿರುನಾಳಿನಲ್ಲಿ ಶ್ರೀಕಂಠೇಶ್ವರಸ್ವಾಮಿಯವರಿಗೆ ಧರಿಸುವದಕ್ಕೆ ಅಪೂರ್ವವಾದ ಅಮೌಲ್ಯ ರತ್ನಗಳಿಂದ ನಿರ್ಮಿಸಿದ ಶ್ರೀಕಂಠ ಮುಡಿ ಎಂಬ ಕಿರೀಟ, (ಶಾ॥ ೧೭೪೭ನೇ ಪ್ರಮಾಥಿ ಸಂವತ್ಸರದ ಚೈತ್ರ ಶುದ್ಧ ೮ ಸ್ಥಿರವಾರದಲ್ಲಿ ಈ ಕಿರೀಟವನ್ನು ಸಮರ್ಪಣೆ ಮಾಡಿ, ಈ ಉತ್ಸವಗಳು ಬೆಳೆದ ನಂತರ ಮೊಹರು ಮಾಡಿ ಅರಮನೇ ಬೊಕ್ಕಸಕ್ಕೆ ಬರುವಂತೆ ಕಟ್ಟಳೆ ಅಪ್ಪಣೆ ಮಾಡಿಸಿದರು.) ಕಿರೀಟ, ಕೋರಂಬ, ಹಸ್ತಾಭರಣ, ಪಾದಾಭರಣ, ಕಂಠಾಭರಣ, ಕರ್ಣಾಭರಣ, ನಾಸಿಕಾಭರಣ, ಮಕರಕಂಠಿ, ನಾಗಾಭರಣ ಸಹಿತವಾದ ಜಡೆ, ಸರಸಾತಲಡಿ, ಅನೇಕ ಪದಕಗಳಿಂದ ಯುಕ್ತವಾದ ಬಗೆಬಗೆಯಾದ ಮುಕ್ತಾಹಾರಗಳು ಮುಂತಾದ ಅನೇಕ ನವರತ್ನಾಭರಣಗಳು, ಚಿನ್ನದ ಕಿರೀಟ, ಕವಚ, ಒಡ್ಯಾಣ, ಒಂದಿ, ತಾವು ಮಾಡಿದ ಅಷ್ಟೋತ್ತರ ನಾಮಗಳನ್ನು ಬರೆದಿರುವ ಚಿನ್ನದ ನಕ್ಷತ್ರಮಾಲಿಕೆ ಮೊದಲಾದ ಅನೇಕ ಚಿನ್ನದ ಆಭರಣಗಳು, ಪೀತಾಂಬರಾದಿ ಬಗೆಬಗೆಯಾದ ವಸ್ತ್ರಗಳು,

ಅಮ್ಮನವರಿಗೆ ಚಿನ್ನದ ಘಂಟೆಗಳನ್ನು ಹಾಕಿರುವ ನೆರೀಬಳೆ, ಪೂಜೋಪಕರಣ ಸೇವೋಪಕರಣಕ್ಕೆ ಸಹ ಚಿನ್ನಬೆಳ್ಳಿಗಳಿಂದ ಮಾಡಿಸಿದ ಕೊಪ್ಪರಿಕೆ, ಬಿಂದಿಗೆ, ಚೊಂಬು, ಪಂಚಪಾತ್ರೆ, ಉದ್ಧರಣೆ, ಅಡ್ಡಣಿಗೆ, ತಟ್ಟೆ, ಬಟ್ಟಲು, ಗಿಂಡಿ, ಸಹಸ್ರಧಾರಾಪಾತ್ರೆ, ದೀಪದ ಕಂಬ, ತೂಗು ದೀವಿಗೆ, ಘಂಟೆ, ಧೂಪಾರ್ತಿ, ದೀಪದ ಬಗ್ಗೆ ಏಕಾರ್ತಿ ಮೊದಲು ಬಗೆಬಗೆಯದಾದ ಅನೇಕ ಆರ್ತಿಗಳು, ಕುಂಭಾರ್ತಿ, ಸನ್ನಿಧಿಯ ಉಪಚಾರಕ್ಕೆ ಬೆಳ್ಳಿಯ ಛತ್ರ, ಚಾಮರ, ವ್ಯಜನ, ದರ್ಪಣ, ದೊಣ್ಣೆ, ಬೆಳ್ಳೀ ದೀವಟಿಗೆ, ಕನ್ನಡಿ, ಸನ್ನಿಧಿಯಲ್ಲಿರುವ ವೃಷಭನಿಗೆ ಬೆಳ್ಳೀ ಕವಚ, ವಾಹನದ ದಟ್ಟಿಗೆ ಬೆಳ್ಳೀ ಸಿಂಹಲಲಾಟದ ಕೊಳಗ. ಇವು ಮುಂತಾದ ಇನ್ನೂ ಅನೇಕ ಪದಾರ್ಥಗಳನ್ನು ಒಪ್ಪಿಸಿ ಇರುವದಲ್ಲದೆ, ಈ ದೇವಸ್ಥಾನದಲ್ಲಿರುವ ನಾರಾಯಣಸ್ವಾಮಿ, ತಾಂಡವೇಶ್ವರ, ಸುಬ್ರಹ್ಮಣ್ಯೇಶ್ವರ ಮುಂತಾದ ದೇವರಿಗೆ ಬೆಳ್ಳೀ ಪೀಠಪ್ರಭಾವಳಿ, ಕಿರೀಟ, ಕವಚ ಮುಂತಾದ ಚಿನ್ನಬೆಳ್ಳೀ ಆಭರಣಗಳನ್ನೂ ವಸ್ತ್ರಗಳನ್ನೂ ಕೊಟ್ಟು ಇರುತ್ತಾರೆ.

ಪೂರ್ವದಲ್ಲಿ ಇದ್ದ ಕೃತ್ತಿಕೋತ್ಸವ ಮಂಟಪ ಮುಂತಾದ ಮಂಟಪಗಳನ್ನು ಜೀರ್ಣೋದ್ಧಾರ ಮಾಡಿಸಿದ್ದಲ್ಲದೆ, ಸ್ವಾಮಿ ದೇವಸ್ಥಾನದ ಸಮೀಪದಲ್ಲಿ ನಿತ್ಯಗಟ್ಟಲೆ ಹೆಚ್ಚುಗಟ್ಟಲೆ ಮಂಟಪೋತ್ಸವಗಳಿಗಾಗಿ ನೂತನವಾಗಿ ಮಂಟಪಗಳನ್ನು ಕಟ್ಟಿಸಿದರು; ಗೌತಮರಥ ಮೊದಲಾದ ೫ ರಥಗಳನ್ನು ದೃಢವಾಗಿಯೂ ನೂತನವಾಗಿಯೂ ಜೀರ್ಣೋದ್ಧಾರ ಮಾಡಿಸಿ, ಈ ರಥಗಳು ಬೀದಿಯಲ್ಲಿ ಸುಪಥವಾಗಿ ಬರುವದಕ್ಕೆ ವಿಸ್ತಾರವಾಗಿ ಮಾರ್ಗಗಳನ್ನು ಮಾಡಿಸಿ, ಕೆಲವುಕಡೆ ಕಲ್ಲುಗಳನ್ನು ಬಿಗಿಸಿ, ಈ ರಥಕ್ಕೂ ಪುಷ್ಪಮಂಟಪ ಕುರುಜು ಮುಂತಾದ ವಿಚಿತ್ರವಾದ ಮಂಟಪಗಳನ್ನು ಕಟ್ಟುವದಕ್ಕೂ ಧ್ವಜಪತಾಕಾದಿಗಳಿಗೂ ಬಗೆಬಗೆಯದಾಗಿಯೂ ನಾನಾ ವರ್ಣಗಳುಳ್ಳದ್ದಾಗಿಯೂ ಇರುವ ವಸ್ತ್ರಗಳನ್ನು ಕೊಟ್ಟರು; ನದಿಯಲ್ಲಿ ಅನೇಕ ಜನರು ಬಂದು ಆಯಾಸ ಪಡದಂತೆ ಸ್ನಾನಪಾನಗಳನ್ನು ಮಾಡುವದಕ್ಕೆ ಕಾಶೀ ಕೆಲಸಗಳಿಂದ ಗೌರೀಕಡು ಮಣಿಕರ್ಣಿಕಾಘಟ್ಟ ತೀರ್ಥದಘಟ್ಟ ಮುಂತಾದ ಸ್ಥಳಗಳಲ್ಲಿ ನದಿಗೆ ಸೋಪಾನವನ್ನು ಕಟ್ಟಿಸಿ, ದೇವರ ಉತ್ಸವ ಬರುವದಕ್ಕೆ ಕಲ್ಲು ಮಂಟಪಗಳನ್ನು ಮಾಡಿಸಿ, ಕಪಿಲಾನದೀ ಕೌಂಡಿನ್ಯ ನದಿಗಳ

ಸುತ್ತಲೂ ದೇವರ ದರ್ಶನಕ್ಕೆ ದೇಶಾಂತರಗಳಿಂದ ಬಂದ ಜನರು ಬಿಸಲಿನಲ್ಲಿ ಆಯಾಸ ಪಡದಂತೆ ಸುಖವಾಗಿ ವಾಸ ಮಾಡುವದಕ್ಕೆ ಅನೇಕ ತೋಪುಗಳನ್ನೂ ಮಂಟಪಗಳನ್ನೂ ನಿರ್ಮಿಸಿ, ಅನಂತರದಲ್ಲಿ ಪರಶುರಾಮ ದೇವರ ಗುಡಿಯನ್ನು ಜೀರ್ಣೋದ್ಧಾರ ಮಾಡಿಸಿದರು.

ಮುಮ್ಮಡಿ ಕೃಷ್ಣರಾಜ ಒಡೆಯರವರು ೭ನೇ ಸಾರಿ ಶಾ ೧೭೫೯ನೇ ಹೇವಿಳಂಬಿ ಸಂವತ್ಸರದ ಪುಷ್ಯ ಬಹುಳ ೨ ಸ್ಥಿರವಾರದಲ್ಲಿ ತುಲಾಭಾರ ದಾನವನ್ನು ಮಾಡಿದ ಮೇಲೆ, ಶ್ರೀಕಂಠೇಶ್ವರಸ್ವಾಮಿ ಪ್ರೀತಿಯಾಗಿ ವೃಷಭೈಕಶತಗೋದಾನವನ್ನು ಮಾಡಬೇಕೆಂದು ಸಂಕಲ್ಪಿಸಿ, ಒಂದು ಬಾಣ ಲಿಂಗವನ್ನು ಪೂಜಿಸಿ, ಆ ಬಾಣಲಿಂಗದ ಎದುರಿಗೆ ಒಂದು ವೃಷಭಸಹಿತ ಶತಗೋದಾನವನ್ನು ಧಾರೆಯೆರೆದು ಸ್ವಾಮಿಯವರಿಗೆ ಒಪ್ಪಿಸಿ, ಆ ಬಾಣ ಲಿಂಗವನ್ನು ಅಮ್ಮನವರ ದೇವಸ್ಥಾನದ ಎಡಗಡೆ ಕೈಸಾಲೆಯಲ್ಲಿ ಹಾವದ ಗುಡಿಯ ಅಂಕಣದಲ್ಲಿ ಪ್ರತಿಷ್ಠೆ ಮಾಡಿಸಿ, ಗೌರೀಪತೀಶ್ವರನೆಂಬದಾಗಿ ನಾಮವನ್ನಿಟ್ಟು, ಪೂಜೆ ನಡೆಯುವಂತೆ ಕಟ್ಟಲೆ ಮಾಡಿಸಿ, ಗೋವುಗಳ ಸಂರಕ್ಷಣಾರ್ಥವಾಗಿ ನಂಜನಗೂಡು ಕಳ್ಳೂರಿಗೆ ಸಮೀಪದಲ್ಲಿರುವ ಮಸಗೆ ಎಂಬ ಗ್ರಾಮ ಮುಂತಾದ ಸ್ಥಳಗಳಲ್ಲಿ ಕೆಲವು ಹುಲ್ಲುಗಾವಲುಗಳನ್ನು ಕೊಟ್ಟು, ಹಾಲು ಮೊಸರು ಬೆಣ್ಣೆಗಳು ದೇವಸ್ಥಾನಕ್ಕೆ ಬರುವಂತೆ ನಿಬಂಧನೆ ಮಾಡಿಸಿದರು.

ಆಗಮೋಕ್ತ ಪ್ರಕಾರವಾಗಿ ನಡೆಯುತ್ತಲಿರುವ ನಿತ್ಯೋತ್ಸವ ವಾರೋತ್ಸವ ಪಕ್ಷೋತ್ಸವ ಮಾಸೋತ್ಸವ ಸಂವತ್ಸರೋತ್ಸವ ರಥೋತ್ಸವ ಮುಂತಾದ ಉತ್ಸವಗಳಿಗೆ ಕಲಾಬತ್ತು ಪಲ್ಲಕ್ಕಿ ಛತ್ರಿ ಚಾಮರಿ ಸೂರಿಪಾನಿ ಟೇಬಲ್ ಕರ್ಚಾಲ್ ಬೆಳ್ಳಿ ಕೈಬಸವ ಚಿನ್ನದ ಆನೆ ಕುದುರೆ ವೃಷಭ ಕೈಲಾಸ ನಂದಿ ಚಂದ್ರಮಂಡಲ ಮುಂತಾದ ನಾನಾ ವಿಧಗಳಾದ ಅನೇಕ ವಾಹನಗಳನ್ನು ಒಪ್ಪಿಸಿದರು. ಇವುಗಳಲ್ಲದೆ ಚಿತ್ರವಿಚಿತ್ರವಾಗಿಯೂ ಉನ್ನತವಾಗಿಯೂ ಚಿನ್ನ ಬೆಳ್ಳಿಗಳಿಂದ ಮಾಡಿಸಿರುವ ವಾಹನಗಳು ಯಾವವೆಂದರೆ:—ಶಾ॥ ೧೭೬೯ನೇ ಪ್ಲವಂಗ ಸಂವತ್ಸರದ ಶ್ರಾವಣ ಶುದ್ಧ ೧೧ ಬುಧವಾರದಲ್ಲಿ ಆನೆ ಸಹಿತವಾಗಿ ಗಜರಥ, ಅದೇ ಕಾರ್ತಿಕ ಶುದ್ಧ ೧೧ ಸೋಮ

ವಾರದಲ್ಲಿ ಚಕ್ರಾಕಾರವಾಗಿ ತಿರುಗುವ ಬೆಳ್ಳೀ ಕುದುರೆ, ಶಾ॥ ೧೭೭೪ನೇ ವಿರೋಧಿಕೃತು ಸಂವತ್ಸರದ ಮಾಘ ಬಹುಳ ೧೪ಯಲ್ಲಿ ಬೆಳ್ಳೀ ಕೈಲಾಸ ವಾಹನ. ಈ ಉತ್ಸವದ ಸಂಗಡ ಬರುವದಕ್ಕೆ ಕಲಾಬತ್ತು ಜೀನಿನಿಂದ ಅಲಂಕೃತವಾದ ಹಿಡಿಕೆ ಕುದುರೆಗಳನ್ನೂ ಡಂಕಾದ ಕುದುರೆಯನ್ನೂ ನಗಾರೀ ಆನೆಯನ್ನೂ ಅಗ್ರೋದಕಕ್ಕೆ ಆನೆಯನ್ನೂ ಒಪ್ಪಿಸಿರುವದಲ್ಲದೆ, ಕೆಲವು ಬಾಗಿಲುಗಳಿಗೆ ಹಿತ್ತಾಳೀ ಚೌಕಟ್ಟುಗಳನ್ನು ಮಾಡಿಸಿ ಒಪ್ಪಿಸಿದರು.

ದೇವಸ್ಥಾನದ ಪೂರ್ವ ಪಾರ್ಶ್ವದಲ್ಲಿ ಅಧಿಷ್ಠಾನ ಶುದ್ಧಿಯಾಗಿ ಭಾರೀ ಕಲ್ಲುಗಳಿಂದ ಚಿತ್ರ ವಿಚಿತ್ರವಾಗಿ ಮಹಾದ್ವಾರವನ್ನು ನಿರ್ಮಿಸಿ, ತಮ್ಮ ಸಾಪತ್ನಿ ಮಾತುಶ್ರೀಯವರಾದ ದೇವಾಜಮ್ಮಣ್ಣಿಯವರ ನಾಮಾಂಕಿತದಿಂದ ಅತ್ಯುನ್ನತವಾಗಿ ೭ ನೆಲೇ ಗೋಪುರವನ್ನು ಯಥಾ ಶಾಸ್ತ್ರವಾಗಿ ನಿರ್ಮಿಸಿ, ಚಿನ್ನದ ೭ ಭಾರೀ ಕಳಶಗಳನ್ನೂ ೨ ಕೋರಂಬಗಳನ್ನೂ ಹಾಕಿಸಿ, ಶಾ॥ ೧೭೭೧ನೇ ಕೀಲಕ ಸಂವತ್ಸರದ ಜ್ಯೇಷ್ಠ ಶುದ್ಧ ೭ ಗುರುವಾರದಲ್ಲಿ ಪ್ರತಿಷ್ಠೆ ಮಾಡಿಸಿದರು ; ಉತ್ಸವರ ಸನ್ನಿಧಿ ಪೂರ್ವ ಭಾಗದ ಅಂಕಣದಲ್ಲಿ ಶಾ॥ ೧೭೭೦ನೇ ಪ್ಲವಂಗ ಸಂವತ್ಸರದ ಮಾರ್ಗಶಿರ ಶುದ್ಧ ೧ ಬುಧವಾರದಲ್ಲಿ ಮಹಾ ರಂಗೇಶ್ವರನೆಂಬ ಶಿವಪ್ರತಿಷ್ಠೆಯನ್ನು ಮಾಡಿಸಿದರು.

ಶಾ॥ ೧೭೭೧ನೇ ಕೀಲಕ ಸಂವತ್ಸರದ ಅಧಿಕ ಜ್ಯೇಷ್ಠ ಶುದ್ಧ ೧೪ ಸ್ಥಿರವಾರ ದಲ್ಲಿ ಶ್ರೀಕಂಠೇಶ್ವರಸ್ವಾಮಿಗೆ ಜವಾಹಿರ ಪಾನದಾನವನ್ನೂ, ಆ ನಿಜಜ್ಯೇಷ್ಠ ಶುದ್ಧ ೧೫ ಸೋಮವಾರದಲ್ಲಿ ಚಿನ್ನ ಬೆಳ್ಳಿಗಳಿಂದ ಚಿತ್ರ ವಿಚಿತ್ರವಾಗಿ ನಿರ್ಮಿಸಿ ರುವ ರುದ್ರಾಕ್ಷಿಮಂಟಪವನ್ನೂ, ಆ ಆಶ್ವಯುಜ ಶುದ್ಧ ೧೫ ಸ್ಥಿರವಾರದಲ್ಲಿ ಬೆಳ್ಳಿಯ ಆನೇ ವಾಹನವನ್ನೂ, ಪುಷ್ಯಶುದ್ಧ ೧೫ ಬುಧವಾರದಲ್ಲಿ ಬೆಳ್ಳೀ ವೃಷಭವನ್ನೂ, ಈ ಫಾಲ್ಗುನಶುದ್ಧ ೧೪ಯಲ್ಲಿ ಕಲಾಬತ್ತು ಬೀಸಣಿಗೆ ಮುಂತಾದ ವಸ್ತ್ರಾಭರಣಗಳನ್ನೂ ಒಪ್ಪಿಸಿ, ನಿತ್ಯಗಟ್ಟಳೆಯಲ್ಲಿಯೂ ಅಮ್ಮ ನವರ ಸನ್ನಿಧಿಗೆ ಕುಂಕುಮಾರ್ಚನೆ ಮತ್ತು ನೈವೇದ್ಯ ನಡೆಯುವಂತೆ ಕಟ್ಟಳೆ ಮಾಡಿಸಿದರು ; ಶಾ॥ ೧೭೭೦ನೇ ಪ್ಲವಂಗ ಸಂವತ್ಸರದ ಭಾದ್ರಪದ ಶುದ್ಧ ೧೫ ಶುಕ್ರವಾರದಲ್ಲಿ ಉತ್ಸವರಿಗೆ ಕಲಾಬತ್ತು ಚಾಂದನೀ ಮಂಟಪ ವನ್ನು ಒಪ್ಪಿಸಿದರು.

ಧೊರೆಗಳವರು ಮಾಡಿಸಿರುವ ಇತರ ಶಿವಪ್ರತಿಷ್ಠೆಗಳು ಯಾವ ವೆಂದರೆ :—ಶಾ॥ ೧೭೫೬ನೇ ಜಯ ಸಂವತ್ಸರದ ಕಾರ್ತಿಕ ಶುದ್ಧ ೨ ಸೋಮವಾರದಲ್ಲಿ ಬಸವೇಶ್ವರ, ಅದೇ ಶ್ರಾವಣ ಬಹುಳ ೧೦ ಶುಕ್ರವಾರದಲ್ಲಿ ದೇವೇಶ್ವರ, ಶಾ ೧೭೭೧ನೇ ಸೌಮ್ಯ ಸಂವತ್ಸರದ ವೈಶಾಖಶುದ್ಧ ೨ ಬುಧವಾರದಲ್ಲಿ ಮುದ್ದುಕೃಷ್ಣೇಶ್ವರ, ಶಾ॥ ೧೭೭೨ನೇ ಸಾಧಾರಣ ಸಂವತ್ಸರದ ಫಾಲ್ಗುನ ಬಹುಳ ೨ಯಲ್ಲಿ ಬಾಲ ಕೆಂಪನಂಜೇಶ್ವರ ಮತ್ತು ಬಾಲಕೆಂಪದೇವಾಜೇಶ್ವರ, ಶಾ॥ ೧೭೭೩ನೇ ವಿರೋಧಿಕೃತು ಸಂವತ್ಸರದ ಜ್ಯೇಷ್ಠ ಶುದ್ಧ ೬ ಗುರುವಾರದಲ್ಲಿ ಭದ್ರಕಾಳೇಶ್ವರ.

ಧೊರೆಗಳು ಈರೀತಿಯಾಗಿ ಶಿವಪ್ರತಿಷ್ಠೆಗಳನ್ನು ಮಾಡಿಸಿ, ದೇವಸ್ಥಾನದ ಹೊರಗೆ ಬಲಗಡೆಯ ಸಮೀಪದಲ್ಲಿ ಮಂಟಪೋತ್ಸವಕ್ಕೆ ಮಂಟಪವನ್ನು ಕಟ್ಟಿಸಿ, ಈ ದೇವರಿಗೆಲ್ಲಾ ಬೆಳ್ಳೀಕೊಳಗ ಪೂಜೋಪಕರಣ ಪಾತ್ರೆಗಳನ್ನೂ ವಸ್ತ್ರಾಭರಣಗಳನ್ನೂ ಕೊಟ್ಟು ಅಪರಿಮಿತವಾಗಿ ದೇವತಾ ಸೇವೆ ಮಾಡಿದರು ; ಇದಲ್ಲದೆ ಉತ್ಸವರ ಗುಡಿಯ ಎದುರಿಗೆ ಒಂದು ದೊಡ್ಡ ಅಂಕಣದ ಗುಡಿಯಲ್ಲಿ ಖಾಸಾ ಭಕ್ತವಿಗ್ರಹಗಳನ್ನೂ ಕೆಲವು ಪತ್ನೀ ಪುತ್ರರ ವಿಗ್ರಹಗಳನ್ನೂ ಲೋಹದಿಂದಲೂ ಶಿಲೆಯಿಂದಲೂ ಮಾಡಿಸಿ ಪ್ರತಿಷ್ಠೆಯನ್ನು ಮಾಡಿಸಿ ವಸ್ತ್ರಾಭರಣಗಳನ್ನು ಕೊಟ್ಟರು. ಶ್ರೀಕಂಠೇಶ್ವರ ಸ್ವಾಮಿಯವರಿಗೆ ಪ್ರತಿನಿತ್ಯವೂ ಷಟ್ಕಾಲಪೂಜೆ ಶಾಲ್ಯನ್ನಾಭಿಷೇಕ ಶಿವಕೂಟ ನಿತ್ಯೋತ್ಸವ ವಾರೋತ್ಸವ ಪಕ್ಷೋತ್ಸವ ಮಾಸೋತ್ಸವ ಸಂವತ್ಸರೋತ್ಸವ ರಥೋತ್ಸವಾದಿ ಅನೇಕ ಉತ್ಸವಗಳಿಗೂ, ನವರಾತ್ರಿಯಲ್ಲಿ ನಡೆಯತಕ್ಕ ಜಪ ಪಾರಾಯಣ ಪುರಾಣ ಸಮಾರಾಧನೆ ಮೊದಲಾದವುಗಳು ನಡೆಯುವದಕ್ಕೂ, ಅರ್ಚಕ ಆಗಮಿಕ ಉಪಾಧಿ ಬ್ರಾಹ್ಮಣರು ಪಾರುಪತ್ಯ ಶಿರಸ್ತೆ ಶಾನುಭೋಗ ಅಡ್ಡಿಕ ಮುದ್ರೆ ಮಣಿಯ ಕಾವಲು ತಮ್ಮಡಿ ಓಲಗ ತಾಳ ಮೇಳ ಆನೆ ಕುದುರೆ ಕೈವಾಡದ ಜನರು ದೇವಸ್ಥಾನದಲ್ಲಿ ೪ ವೇಳೆ ನಿಪತ್ತು ಮುಂತಾದ ಕೆಲಸಗಳಲ್ಲಿ ನೆಲೆಗೊಂಡಿರುವ ಜನಗಳ ಜೀವನ ನಡೆಯುವದಕ್ಕೂ, ಸಾರೋದ್ಧಾರವಾಗಿ ಇರುವಂತೆ ಭೂರೀತಸ್ತೀಕನ್ನು ಉಂಟುಮಾಡಿ, ಈರೀತಿಯಾಗಿ ಶ್ರೀಕಂಠೇಶ್ವರಸ್ವಾಮಿಯವರಿಗೆ ಇನ್ನೂ ಬಹು ಸೇವೆಗಳನ್ನು ಮಾಡಿ ಇರುತ್ತಾರೆ.

ನಂಜನಗೂಡಿನಲ್ಲಿ ಮಹೀಶೂರ ಅರಮನೆಯಂತೆ ಅಂತಃಪುರದ ಸ್ತ್ರೀಯರು ಇರುವದಕ್ಕೆ ಯೋಗ್ಯವಾದ ವಿಸ್ತಾರವಾದ ಅರಮನೆಯನ್ನೂ ನಗಾರಖಾನೆ ಕರೆಹೋಪಟ್ಟಿ ಬಿಡದಿ ಉಗ್ರಾಣ ಮುಂತಾದವುಗಳನ್ನೂ ಕಟ್ಟಿಸಿ, ಅರಮನೆಯ ಹಿಂದುಗಡೆಯಲ್ಲಿ ಶೃಂಗಾರದ ತೋಟವನ್ನು ನಿರ್ಮಿಸಿ, ದೇವಸ್ಥಾನದ ಈಶಾನ್ಯಭಾಗದಲ್ಲಿ ಚಿಕ್ಕ ಅರಮನೆಯನ್ನು ಕಟ್ಟಿಸಿ, ಸವಾರಿ ಚಿತ್ತಯಿಸಿದಾಗ ಅಲ್ಲಿಯೇ ದರ್ಬಾರು ಮಾಡಿಕೊಂಡು ಇರುವದು ಎಂದು ನಿಬಂಧನೆಯನ್ನು ಮಾಡಿದರು.

ಚಾಮರಾಜ ನಗರ.—ಆಳಿದ ಮಹಾಸ್ವಾಮಿಯವರಾದ ನಂಜರಾಜಾಭಿದ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರು, ತಮ್ಮ ತಂದೆಗಳಾದ ಮುಮ್ಮಡಿ ಚಾಮರಾಜೇಂದ್ರ ಒಡೆಯರವರು ಅರಿಕುಠಾರವೆಂಬ ಗ್ರಾಮದಲ್ಲಿ ಆವಿರ್ಭವಿಸಿದ ರಾದಕಾರಣ, ಅವರ ಯಶಸ್ಸು ಆಚಂದ್ರಾರ್ಕವಾಗಿ ಇರಬೇಕೆಂದು ಪರ್ಯಾಲೋಚನೆಮಾಡಿ, ಈ ಅರಿಕುಠಾರವೆಂಬ ಗ್ರಾಮಕ್ಕೆ, ಹರದನಹಳ್ಳಿ ಗುಂಡ್ಲು ಕಳಲೆ ನಂಜನಗೂಡು ತಾಯೂರು ತಳಕಾಡು ಮುಂತಾದ ತಾಲ್ಲೂಕುಗಳಲ್ಲಿ ಇರುವ ಕೆಲವು ಉತ್ತಮವಾದ ಗ್ರಾಮ ಗಳನ್ನೂ ಹೊಂಗನೂರು ತಾಲ್ಲೂಕನ್ನೂ ಸೇರಿಸಿ, ಒಟ್ಟು ೬೦ ಸಾವಿರ ಸೀಮೆಯನ್ನು ನಿಬಂಧನೆ ಮಾಡಿ, ಈ ಅರಿಕುಠಾರಕ್ಕೆ ಚಾಮರಾಜ ನಗರವೆಂಬದಾಗಿ ನಾಮಧೇಯವನ್ನು ಉಂಟುಮಾಡಿದರು. ಈ ನಗರದಲ್ಲಿ ಶಿವ ವಿಷ್ಣು ಮುಂತಾದ ದೇವಸ್ಥಾನಗಳನ್ನೂ, ಬ್ರಾಹ್ಮಣರ ಮನೆಗಳನ್ನೂ, ಅರಸುಗಳು ಅಧಿಕಾರಸ್ಥರು ಗುರಿಕಾರರು ಸಮುಖದ ಊಳಿಗದವರು ವೀಣೆ ಸಂಗೀತಗಾರ ವೈದ್ಯರು ಮುಂತಾದ ಅರಮನೇ ಪಣಕಟ್ಟಿಗೆ ಸೇರಿದ ವಿಶಿಷ್ಟ ಜನರ ಮನೆಗಳನ್ನೂ, ಪೂರ್ವದಲ್ಲಿದ್ದ ರೈತರಲ್ಲದೆ ಅನೇಕಜನ ರೈತರು ಸೆಟ್ಟಿ ವರ್ತಕರು ದೇವಾಂಗದವರು ಜಟ್ಟಿಗಳು ಜೋತಿಪಣದವರು ಅನೇಕ ಕೈವಾಡದ ಜನಗಳ ಮನೆಗಳನ್ನೂ, ಸಿಪಾಯಿತನದಲ್ಲಿ ಜೀವನ ಮಾಡುವ ರಜಪುತ್ರ ಮರಾಟ ಮುಸಲ್ಮಾನ ಮತ್ತು ಮಹೀಶೂರ ಮಹಾಸಂಸ್ಥಾನದಲ್ಲಿ ನಾನಾಪ್ರಕಾರವಾಗಿ ಜೀವನಮಾಡಿಕೊಂಡಿರುವ ಪಣಕಟ್ಟಿನ ಜನಗಳ ಮನೆಗಳನ್ನೂ ಕಟ್ಟಿಸಿ, ಬಗೆಬಗೆಯಾದ ವ್ಯಾಪಾರವನ್ನು ಮಾಡಿಕೊಂಡು ಜೀವನ ಮಾಡುವದಕ್ಕೆ ಯೋಗ್ಯ

ಗಳಾದ ಅಂಗಡೀ ಬೀದಿಗಳನ್ನು ಕಟ್ಟಿಸಿ, ಶುಕ್ರವಾರದ ಕಟ್ಟಳೆ ಮೇರೆಗೆ ಸಂತೆಯಾಗುವಂತೆ ನಿಬಂಧನೆ ಮಾಡಿದರು.

ಧೊರೆಗಳು ಈ ನಗರದಲ್ಲಿ ತಮ್ಮ ತಂದೆಗಳಾದ ಮುಮ್ಮಡಿ ಚಾಮರಾಜೇಂದ್ರ ಒಡೆಯರವರು ಇಸಿಸಿದ ಮನೆಯು ಸುತ್ತಲೂ ವಿಸ್ತಾರವಾಗಿ ಹೆಚ್ಚಿಸಿಕೊಂಡು, ಮಹೀಶೂರ ಅರಮನೆಯಂತೆ ಅಂಬಾವಿಲಾಸ, ಆತ್ಮವಿಲಾಸ, ಕೃಷ್ಣವಿಲಾಸ, ರಮಾವಿಲಾಸ, ಚಂದ್ರವಿಲಾಸ, ಮನೋವಿಲಾಸ, ಸಮುಖದ ತೊಟ್ಟಿ ಮುಂತಾದ ವಿಲಾಸದ ತೊಟ್ಟಿಗಳನ್ನೂ; ನಾಮತೀರ್ಥದ ತೊಟ್ಟಿ, ಚಾಮುಂಡೇಶ್ವರೀತೊಟ್ಟಿ, ಬಿಡದಿ, ಬೊಕ್ಕಸದ ಉಗ್ರಾಣ ಮುಂತಾದವುಗಳನ್ನೂ ಕಟ್ಟಿಸಿದ್ದಲ್ಲದೆ, ಓಲಗದ ಸಜ್ಜೆ, ಆನೇಬಾಗಿಲು, ಮಹೀಶೂರ ಅರಮನೆಯ ಉಭಯ ಪಾರ್ಶ್ವಗಳಲ್ಲಿಯೂ ಇರುವಂತೆ ೧೮ ಕಚೇರಿಗಳು, ನಗಾರಖಾನೆ, ಕೆಮ್ಮಣ್ಣುಮಟ್ಟಿ, ಅರಮನೆಯ ಹಿಂದುಗಡೆಯಲ್ಲಿ ಶೃಂಗಾರದ ತೋಟ, ಈ ಚಾಮರಾಜನಗರದ ಸ್ಥಳಕಂದಾಚಾರ ಅಠವಣೆ, ಕೊತ್ವಾಲ ಚಾವಡಿ, ಸುಂಕದ ಚಾವಡಿ ಮುಂತಾದವುಗಳನ್ನು ಕಟ್ಟಿಸಿ, ಇವಕ್ಕೆ ಬುದ್ಧಿವಂತರಾದ ಸುಬೇದಾರ್ರು, ಪೇಷ್ಕಾರ, ಶಿರಸ್ತೇದಾರ, ಗುಮಾಸ್ತ, ಮುನಷಿ; ಕಂದಾಚಾರದ ಕಿಲ್ಲೇದಾರ, ಶಿರಸ್ತೇದಾರ, ಹೋಬಳೀದಾರ, ದಫೇದಾರ, ಓಲೇಕಾರ, ಅಂಚೇಮುತ್ಸದ್ದಿ, ಊಳಿಗದವರು ಮುಂತಾದ ಅಠವಣೆ ಕಂದಾಚಾರದ ಸಿಬ್ಬಂದಿಯನ್ನು ನಿಬಂಧನೆ ಮಾಡಿದರು.

ಈ ಚಾಮರಾಜನಗರವು ಕಾಶಿ, ರಾಮೇಶ್ವರ, ಶ್ರೀರಂಗ, ಕುಂಭಕೋಣ, ಅನಂತಶಯನ ಮುಂತಾದ ಮಹಾ ಸ್ಥಳಗಳಿಗೆ ಸಂಚಾರ ಮಾಡುವದಕ್ಕೆ ಭಾಟಾ ಮಾರ್ಗವಾದ್ದರಿಂದ, ಇಲ್ಲಿ ನಿತ್ಯಗಟ್ಟಳೆಯಲ್ಲಿಯೂ ಅನ್ನದಾನ ನಡೆಯುವಂತೆ ಅನ್ನಸತ್ರವನ್ನೂ ಗಣಾರಾಧನೆ ಸತ್ರವನ್ನೂ ಕಟ್ಟಿಸಿದರು.

ಈ ರೀತಿಯಾಗಿ ಪ್ರಾಬಲ್ಯಕ್ಕೆ ತಂದ ಚಾಮರಾಜನಗರದಲ್ಲಿ ಹೊಸದಾಗಿ ವಿಸ್ತಾರವಾಗಿ ಕಟ್ಟಿಸಿರುವ ಅರಮನೆಯಲ್ಲಿ ಗೃಹಪ್ರವೇಶ ಮಹೋತ್ಸವವನ್ನು ಬೆಳೆಯಿಸಬೇಕೆಂದು, ಮುಮ್ಮಡಿ ಕೃಷ್ಣರಾಜ ಒಡೆಯರವರು ಶಾ॥ ೧೭೬೬ನೇ ಸ್ವಭಾನು ಸಂವತ್ಸರದ ಮಾಘ ಶುದ್ಧ ೧೦ ಗುರುವಾರದ ದಿನ ಅಂತಃಪುರದ ಸನ್ನಿಧಾನಗಳ ಸವಾರಿಗಳೊಡನೆ ಮಹೀಶೂರಿಂದ ಚಿತ್ತೈಸಿ,

ಅದೇ ಮಾಘ ಬಹುಳ ೫ ಗುರುವಾರ ಚಿತ್ತಾ ನಕ್ಷತ್ರದಲ್ಲಿ ಅತಿ ಸಂಭ್ರಮದಿಂದ ಗೃಹಪ್ರವೇಶ ಮಹೋತ್ಸವವನ್ನು ನೆರವೇರಿಸಿ, ಅನೇಕ ಜನ ಬ್ರಾಹ್ಮಣರಿಗೆ ದಕ್ಷಿಣೆಗಳನ್ನು ಕೊಟ್ಟು, ಸಮಾರಾಧನೆಯನ್ನು ಮಾಡಿಸಿ, ಅರಸುಗಳು ಅಧಿಕಾರಿಗಳು ಗುರಿಕಾರರು ವಿದ್ವಾಂಸರು ಮುಂತಾದ ವಿಶಿಷ್ಟ ಜನಗಳಿಗೂ ಉಡುಗೊರೆಗಳನ್ನು ಕೊಟ್ಟು, ಊಟಗಳನ್ನು ಮಾಡಿಸಿ, ಅತ್ಯಂತ ವೈಭವದಿಂದ ಮಹೀಶೂರಲ್ಲಿ ಬೆಳೆಯುವ ನವರಾತ್ರಿಯ ಓಲಗದಂತೆ ಈ ನೆಜ್ಜೆಯಲ್ಲಿ ಭದ್ರಾಸನದ ಮೇಲೆ ಮುಹೂರ್ತಮಾಡಿ, ಒಡ್ಡೋಲಗವನ್ನು ತೆಗೆದುಕೊಳ್ಳುತ್ತಾ, ಏಟ್ಟೇಕಾಳಗವನ್ನು ಮಾಡಿಸಿ, ವಿಶಿಷ್ಟ ಪಣಕಟ್ಟಿನ ಜನಗಳಿಗೂ ಊಟವನ್ನು ಮಾಡಿಸಿ, ಅವರವರ ವಿಧವರಿತು ಅನೇಕವಾಗಿ ಉಡುಗೊರೆಗಳನ್ನು ಕೊಡಿಸಿದರು. ಈ ರೀತಿಯಾಗಿ ಗೃಹಪ್ರವೇಶ ಮಹೋತ್ಸವವನ್ನು ನೆರವೇರಿಸಿಕೊಂಡು, ಆಳಿದ ಮಹಾಸ್ವಾಮಿಯವರು ಆ ಮಾಘ ಬಹುಳ ೧೦ ಗುರುವಾರದಲ್ಲಿ ಮಹೀಶೂರಿಗೆ ಚಿತ್ತಯಿಸಿದರು.

ಅನಂತರದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರವರು, ತಮ್ಮ ತಂದೆಗಳಾದ ಮುಮ್ಮಡಿ ಚಾಮರಾಜ ಒಡೆಯರವರು ಬಹಳವಾಗಿ ಈಶ್ವರಾರಾಧನೆಯನ್ನು ಮಾಡಿದ್ದಲ್ಲದೆ, ಕೋಟಿ ಶಿವ ಪಂಚಾಕ್ಷರಿ ಮಹಾ ಮಂತ್ರ ಪುನಶ್ಚರಣೆಯನ್ನು ಮಾಡಿ, ಸಕಲ ಇಷ್ಟಾರ್ಥಗಳನ್ನು ಪಡೆದು, ಸಾಕ್ಷಾತ್ಪರಮೇಶ್ವರನಲ್ಲಿ ಐಕ್ಯವನ್ನು ಹೊಂದಿದವರಾದಕಾರಣದಿಂದಲೂ, ಇವರ ಪತ್ನಿ ಯುವರಾಜ ಮಹಾಮಾತುಶ್ರೀ ಕೆಂಪನಂಜಮ್ಮಣ್ಣಿಯವರು ಪತಿಯ ಅಜ್ಞಾನುಸಾರವಾಗಿ ಗೌರೀವ್ರತ ಮುಂತಾದ ಅನೇಕವ್ರತಗಳನ್ನು ಮಾಡಿ, ಸಕಲ ಇಷ್ಟಾರ್ಥಗಳನ್ನೂ ಪಡೆದು ಪಾರ್ವತೀ ದೇವಿಯಲ್ಲಿಯೇ ಐಕ್ಯರಾದ್ದರಿಂದಲೂ, ಇವರಿಬ್ಬರ ನಾಮಾಂಕಿತವಾಗಿ ದೇವರನ್ನು ಪ್ರತಿಷ್ಠೆ ಮಾಡಿಸಿದರೆ ಜನಗಳಿಗೆ ಸಕಲ ಇಷ್ಟಾರ್ಥಗಳನ್ನೂ ಕೊಟ್ಟು ಸಲಹುವರೆಂತಲೂ, ಇವರ ಯಶಸ್ಸು ಆಚಂದ್ರಾರ್ಕವಾಗಿ ಇರಬೇಕೆಂತಲೂ ಪರ್ಯಾಲೋಚನೆಮಾಡಿ, ಅರಮನೆಗೆ ಬಲಗಡೆ ಪೂರ್ವಭಾಗದಲ್ಲಿ ಶೈವಾಗಮೋಕ್ತಪ್ರಕಾರವಾಗಿ ಬಾಲಾಲಯ ಪೂರ್ವಕವಾಗಿ ದೊಡ್ಡದಾಗಿ ಗುಡಿ ಗೋಪುರ ವಿಮಾನ ಪ್ರಾಕಾರ ಕೈಸಾಲೆ ಮಂಟಪ ಉಗ್ರಾಣ ಅಡಿಗೇಮನೆ ದೇವಸ್ಥಾನದ ಮುಂದುಗಡೆಯಲ್ಲಿ ಸರೋವರ ಮೊದಲಾದವುಗಳನ್ನು ವಿಸ್ತಾರವಾಗಿ

ಕಟ್ಟಿಸಿ, ಈ ವಿಮಾನಗಳಿಗೆ ೧೧ ಚಿನ್ನದ ಕಳಶಗಳನ್ನು ಹಾಕಿಸಿ, ಸನ್ನಿಧಿ ಮುಂತಾದ ಗುಡಿ ಬಾಗಿಲುಗಳಿಗೆ ಹಿತ್ತಾಳೇಬಾಗಿಲ ವಾಡಗಳನ್ನು ಮಾಡಿಸಿ, ದೇವಾಲಯಪ್ರತಿಷ್ಠೆಯನ್ನು ನೆರವೇರಿಸಿ ದೇವರನ್ನು ಪ್ರತಿಷ್ಠೆ ಮಾಡಿಸಿದರು. ಹೀಗೆ ಪ್ರತಿಷ್ಠೆ ಮಾಡಿರುವ ದೇವರ ವಿವರವೇನೆಂದರೆ:—

ಶಾ॥ ೧೭೪೮ನೇ ವ್ಯಯ ಸಂವತ್ಸರದ ಜ್ಯೇಷ್ಠ ಶುದ್ಧ ೩ ಗುರುವಾರ ದಲ್ಲಿ ಮೊದಲು ಶ್ರೀಕೆಂಪನಂಜಮಾಂಬಾ ಸಮೇತವಾಗಿ ಶ್ರೀಚಾಮರಾಜೇಶ್ವರಸ್ವಾಮಿ ಎಂಬ ಶಿವಪ್ರತಿಷ್ಠೆಯನ್ನು ಮಾಡಿಸಿ, ಈ ಸ್ವಾಮಿಯವರ ನವರಂಗದ ಉಭಯಪಾರ್ಶ್ವಗಳಲ್ಲಿಯೂ ತಮ್ಮ ಸಾಪತ್ನಿ ಮಾತುಶ್ರೀಯವರ ನಾಮಾಂಕಿತದಿಂದ ದೇವಾಂಬೇಶ್ವರ, ಚೆಲುವಾಂಬೇಶ್ವರ, ದೇವೀರಾಂಬೇಶ್ವರ, ಲಕ್ಷ್ಮಾಂಬೇಶ್ವರ, ನಂಜಾಂಬೇಶ್ವರ, ದೇವಾಜಾಂಬೇಶ್ವರ ಎಂಬದಾಗಿ ನಾಮಗಳನ್ನು ಇಟ್ಟು ವೃಷಭ ಸಹಿತವಾಗಿ ೬ ಶಿವಪ್ರತಿಷ್ಠೆಯನ್ನು ಮಾಡಿಸಿದರು; ನವ ಬೇರುಗಳಿಂದ ಸಾಂಗಾಲಯವೆನಿಸಬೇಕೆಂದು ಪರ್ಯಾಲೋಚನೆ ಮಾಡಿ ಅಮ್ಮನವರಿಂದ ಒಡಗೂಡಿರುವ ಚಂದ್ರಶೇಖರಸ್ವಾಮಿ, ಮನೋನ್ಮನಾಂಬಾ, ತಾಂಡವೇಶ್ವರ, ನಿತ್ಯಕಲ್ಯಾಣಮೂರ್ತಿ, ಸೋಮಸ್ಕಂದ, ಕಿರಾತಾರ್ಜುನ, ಉಮಾಮಹೇಶ್ವರ ಎಂಬದಾಗಿ ಹೆಸರುಗಳುಳ್ಳ ವಿಗ್ರಹಗಳನ್ನೂ, ಅಮ್ಮನವರುಗಳನ್ನೂ, ಗಣಪತಿ ಚಂಡೀಶ್ವರ, ಅಸ್ತ್ರಮೂರ್ತಿ ಸರಸ್ವತಿ ಮುಂತಾದ ದೇವರ ಲೋಹವಿಗ್ರಹಗಳನ್ನೂ ಪ್ರತಿಷ್ಠೆ ಮಾಡಿಸಿದರು; ಪ್ರಸನ್ನಗಣಪತಿ, ದ್ವಾರಪಾಲಕರು, ಚಾಮುಂಡೇಶ್ವರಿ, ಆಲಯದಕ್ಷಿಣಾಮೂರ್ತಿ, ಶ್ರೀದೇವಿ ಭೂದೇವಿಯರಿಂದೊಡಗೂಡಿದ ಆಲಯ ನಾರಾಯಣಸ್ವಾಮಿ, ಕುಮಾರಸ್ವಾಮಿ, ಸೂರ್ಯಚಂದ್ರಮೂರ್ತಿಗಳು, ಚಂಡಿಕೇಶ್ವರ, ಪ್ರಸ್ರಾದಿಯಾಗಿ ಅನ್ನಪೂರ್ಣೇಶ್ವರಿ, ಇದಲ್ಲದೆ ಅಂಕಣ ೧ ಕ್ಕೆ ೩ ವಿಗ್ರಹಗಳ ಮೇರೆಗೆ ಅಂಕಣ ೨೨ಕ್ಕೆ ಪುರಾತನ ಭಕ್ತವಿಗ್ರಹಗಳು ೬೬, ಈ ರೀತಿಯಾಗಿ ಗಣಪತಿ ಮೊದಲಾಗಿ ಹೇಳಿರುವ ಶಿಲಾವಿಗ್ರಹಗಳನ್ನೂ, ಉತ್ತರ ಪಾರ್ಶ್ವದಕೈಸಾಲೇ ಅಂಕಣದಲ್ಲಿ ಯಥಾಶಾಸ್ತ್ರವಾಗಿ ಪಂಚವಿಂಶತಿ ಲೀಲಾಮೂರ್ತಿಗಳನ್ನೂ, ಕ್ಷೇತ್ರಪಾಲಕ ಮುಂತಾದ ವಿಗ್ರಹಗಳನ್ನೂ, ಚಿನ್ನದ ಕಳಶಗಳಿಂದ ಕೂಡಿದ ೧೧ ವಿಮಾನಗಳನ್ನೂ, ಇದೇ ರೀತಿಯಾಗಿ ಕೆಳಗಡಿಂದ ಸಹಿತವಾದ ಧ್ವಜಸ್ತಂಭವನ್ನೂ, ದೊಡ್ಡ ಬಸವೇಶ್ವರ, ದ್ವಾರಪಾಲಕ, ಬಲಿ

ಹಿತ, ಚಾಮುಂಡೇಶ್ವರೀ ಪಾದಪದ್ಮಗಳನ್ನೂ ಪ್ರತಿಷ್ಠೆ ಮಾಡಿಸಿದರು ; ಪಶ್ಚಿಮ ದಿಕ್ಕಿನ ಕೈಸಾಲೇ ಮಧ್ಯದ ಅಂಕಣದಲ್ಲಿ ಸ್ವನಾಮಾಂಕಿತವಾಗಿ ಪ್ರಸನ್ನ ನಂಜರಾಜೇಶ್ವರನೆಂಬದಾಗಿ ವೃಷಭಸಹಿತನಾದ ಶಿವಪ್ರತಿಷ್ಠೆಯನ್ನು ಮಾಡಿಸಿ, ಈ ದೇವರ ಉಭಯಪಾರ್ಶ್ವಗಳಲ್ಲಿಯೂ ಚಲುವೇಶ್ವರ, ದೇವೇಶ್ವರಿ, ಗಣಪತೀಶ್ವರ, ಸಿದ್ಧೇಶ್ವರ, ಬಸವೇಶ್ವರ, ಮುದ್ದುಕೃಷ್ಣೇಶ್ವರ (ಸ್ವಾಮಿಯ ಗುಡಿಯ ಉತ್ತರಪಾರ್ಶ್ವದಲ್ಲಿ) ಎಂಬ ಶಿವಪ್ರತಿಷ್ಠೆಗಳನ್ನು ಮಾಡಿಸಿದರು ; ಇದೇ ಪಶ್ಚಿಮದಿಕ್ಕಿನ ಕೈಸಾಲೇ ಅಂಕಣಗಳಲ್ಲಿ ಮಹಾಲಿಂಗೇಶ್ವರ, ಮರಿದೇವೇಶ್ವರ, ಬಾಲಚಾಮರಾಜೇಶ್ವರ, ಪುಟ್ಟರಂಗೇಶ್ವರ, ಮುದ್ದುಲಿಂಗೇಶ್ವರ, ಮಲ್ಲೇಶ್ವರ, ಲಕ್ಷ್ಮೀಶ್ವರ, ದೇವಾಜೇಶ್ವರ, ಮಹಾದೇವೇಶ್ವರ, ಭದ್ರೇಶ್ವರ, ಬಾಲನಂಜರಾಜೇಶ್ವರ (ಸ್ವಾಮಿಯ ಗುಡಿಯ ಪೂರ್ವಭಾಗದಲ್ಲಿ), ಬಾಲಕೆಂಪನಂಜೇಶ್ವರ, ಬಾಲಕೆಂಪದೇವಾಜೇಶ್ವರ ಎಂಬದಾಗಿ ಶಿವಪ್ರತಿಷ್ಠೆಗಳನ್ನು ಮಾಡಿಸಿದರು.

ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರು ಈ ಪೂರ್ವೋಕ್ತವಾಗಿ ಶಿವಪ್ರತಿಷ್ಠೆಗಳನ್ನು ಮಾಡಿಸಿ, ವಿಶಿಷ್ಟ ಶಿವಲಿಂಗಗಳಿಗೂ ಬೆಳ್ಳೀ ಕೊಳಗ ಮುಂತಾದ ಪೂಜೋಪಕರಣ ಸೇವೋಪಕರಣ ಪಾತ್ರೆ ಪದಾರ್ಥಗಳನ್ನು ಕೊಟ್ಟಿದ್ದಲ್ಲದೆ, ಚಾಮುಂಡೇಶ್ವರಿ ಕೆಂಪನಂಜಮಾಂಬಾ ಸಮೇತ ಚಾಮರಾಜೇಶ್ವರಸ್ವಾಮಿ ಮೊದಲಾದ ದೇವರ ಸನ್ನಿಧಿಗೆ ಒಪ್ಪಿಸಿರುವ ಆಭರಣ ಮುಂತಾದ ಪದಾರ್ಥಗಳು : ಸ್ವಾಮಿಯವರ ಸನ್ನಿಧಿಗೆ ನಾಗಾಭರಣ ಸಹಿತವಾದ ಚಿನ್ನದ ಕೊಳಗ, ಉತ್ಸವರಿಗೆ ಚಾಮರಾಜಮುಡಿ, ಬೆಳ್ಳೀ ಪೀಠಪ್ರಭಾವಳಿ, ನವರತ್ನಮಯ ಪದಕಸಹಿತವಾದ ನಾನಾವಿಧ ಮುಕ್ತಾಹಾರಗಳು, ಚಿನ್ನ ಬೆಳ್ಳಿಗಳಿಂದ ಮಾಡಿದ ಹಸ್ತಾಭರಣ ಕಂಠಾಭರಣ ನಾಸಿಕಾಭರಣ ಕರ್ಣಾಭರಣ ಪಾದಾಭರಣ ಮುಂತಾದ ಅನೇಕ ಆಭರಣಗಳು, ಬಗೆಬಗೆಯಾದ ಚಿತ್ರವಿಚಿತ್ರವಾದ ವಸ್ತ್ರಗಳು, ಬೆಳ್ಳೀ ಕೊಪ್ಪರಿಕೆ, ಬಿಂದಿಗೆ, ಚಂಬು, ಪಂಚಪಾತ್ರೆ, ತಟ್ಟೆ, ಬಟ್ಟಲು, ಉದ್ಧರಣೆ, ಶಠಗೋಪುರ ಗಿಂಡಿ, ಅಡ್ಡಣಿಗೆ, ದೀಪಸ್ತಂಭ, ಬೆಳ್ಳೀ ದೀವಟಿಗೆ, ಬೆಳ್ಳೀದೊಣ್ಣೆ, ಛತ್ರ, ಚಾಮರ, ವ್ಯಜನ, ದರ್ಪಣ, ಘಂಟೆ, ಧೂಪಾರ್ತಿ, ಕುಂಭಾರ್ತಿ, ಬಗೆಬಗೆಯಾದ ಇತರ ಆರ್ತಿಗಳು ಮುಂತಾದ ಪೂಜೋಪ

ಕರಣಗಳು, ಖಾಸಾ ವರ್ಧಂತಿ ಮಹೋತ್ಸವದಲ್ಲಿಯೂ ಫಾಲ್ಗುನ ಮಾಸದಲ್ಲಿಯೂ ಪ್ರತಿಮಾಸ ಶ್ರವಣನಕ್ಷತ್ರದಲ್ಲಿಯೂ ಮಾರ್ಕಂಡೇಯ ತಿರುನಾಳು ಮುಂತಾದ ಕಾಲಗಳಲ್ಲಿಯೂ ಉತ್ಸವಗಳು ನಡೆಯುವದಕ್ಕೆ ಬೊಂಬೇರಥ ಮುಂತಾದ ರಥಗಳು, ಗಜಾಶ್ವ ವೃಷಭ ರುದ್ರಾಕ್ಷಿ ಮಂಟಪಗಳು, ಬಗೆಬಗೆಯಾದ ಬಣ್ಣದವಾಹನಗಳು, ಪಲ್ಲಕ್ಕಿ, ಛತ್ರ, ಚಾಮರ, ಚೌರಿ, ಮೋರ್ಚಲ್, ಆಗ್ರೋದಕಕ್ಕೂ ನಗಾರಿಗೂ ಆನೇ ಉತ್ಸವದ ಸಂಗಡ ಬರ ತಕ್ಕದ್ದಕ್ಕೋಸ್ಕರ ಕುದುರೆ.

ಇದಲ್ಲದೆ ತಮ್ಮ ಧರ್ಮಪತ್ನಿಯರ ನಾಮಾಂಕಿತದಿಂದ ಸೇವಾರ್ಥವಾಗಿ ಮಾಡಿಸಿ ಒಪ್ಪಿಸಿರುವದು: ಸ್ವಾಮಿಸನ್ನಿಧಿಗೂ ಅಮ್ಮನವರ ಸನ್ನಿಧಿಗೂ ಬೆಳ್ಳೀಮಂಟಪವನ್ನೂ, ನಂಜನಗೂಡು ಶ್ರೀಕಂಠೇಶ್ವರಸ್ವಾಮಿಯವರಿಗೆ ಕೃತ್ತಿಕೋತ್ಸವ ಕಾಲದಲ್ಲಿ ರಥೋತ್ಸವ ನಡೆಯುವಂತೆ ಚಾಮರಾಜೇಶ್ವರ ಸ್ವಾಮಿಗೂ ನಡೆಯಬೇಕೆಂದು ಶಾ|| ೧೭೮೧ನೇ ಕಾಳಾಯುಕ್ತಿ ಸಂವತ್ಸರದ ಕಾರ್ತಿಕ ಮಾಸ ಮೊದಲು ಕೃತ್ತಿಕೋತ್ಸವಕಾಲದಲ್ಲಿ ರಥೋತ್ಸವ ನಡೆಯುವಂತೆ ಕಟ್ಟಳೆಮಾಡಿಸಿ, ಸುವರ್ಣಮಯವಾದ ರಜತ ಪೀಠ ಅನೇಕ ಸ್ತಂಭ ಪುತ್ಥಳಿಕೆ ಕಮಾನು ಲೋವೆ ಬುಗುರಿ ತೋರಣದ ತಳುಕು ಕಿಂಕಿಣಿ ಮುಕ್ತಾಪ್ರವಾಳ ದಾಮ ವಿತಾನ ಸಿಂಹಲಲಾಟ ಭೇರಿಯಿಂದೊಡಗೂಡಿ ಅನೇಕ ಸುವರ್ಣ ಕಲಶಗಳಿಂದ ಅಲಂಕೃತವಾಗಿ ಬೆಳ್ಳೀ ಸರಪಣಿಗಳಿಂದ ಡೋಲಾಯಮಾನವಾಗಿ ಅತ್ಯಾಶ್ಚರ್ಯಕರವಾದ ಚಿತ್ರದರ್ಪಣ ರಥವನ್ನೂ, ಕೆಂಪನಂಜಮಾಂಬಾ ಅಮ್ಮನವರಿಗೆ ವಜ್ರದ ಅಡ್ಡಿಕೆ ಮುಂತಾದ ವಸ್ತ್ರಾಭರಣಗಳನ್ನೂ ಒಪ್ಪಿಸಿದರು.

ಕೆಲವು ಜನ ಬ್ರಾಹ್ಮಣರು ಅರಸುಗಳು ಗುರಿಕಾರರು ಮುಂತಾದ ಭಕ್ತರು ಇಷ್ಟಾರ್ಥಗಳನ್ನು ಪಡೆಯಬೇಕೆಂದು ತಮ್ಮತಮ್ಮ ಭಕ್ತಿಯಿಂದ ದೇವಸ್ಥಾನಗಳಲ್ಲಿ ಮಂಟಪಗಳನ್ನು ಕಟ್ಟಿಸಿ ಚಿನ್ನ ಬೆಳ್ಳಿಗಳ ಪೂಜೋಪಕರಣ ಸೇವೋಪಕರಗಳನ್ನು ಒಪ್ಪಿಸಿ ಸ್ವಾಮಿಯ ಒಳಗುಡಿ ನವರಂಗದಲ್ಲಿಯೂ ಪಶ್ಚಿಮದಿಕ್ಕಿನ ಕೈಸಾಲೆಯಲ್ಲಿಯೂ ಸಾಲು ಲಿಂಗಗಳನ್ನು ಪ್ರತಿಷ್ಠೆ ಮಾಡಿಸಿದ್ದರು. ಆ ಲಿಂಗಗಳ ಗುಡಿಯ ಬಾಗಿಲುಗಳಿಗೆ ಹಿತ್ತಾಳೆ

ಬಾಗಿಲವಾಡಗಳನ್ನು ಹಾಕಿಸಿ, ಉತ್ಸವರಿಗೆ ಪಚ್ಚೇ ತಾಳಿ ಹಾಕಿದ ಒಂಬಿಯನ್ನೂ ಶಯನಮಂಟಪಕ್ಕೆ ಲವಾಜಮೆ ಸಹಿತವಾಗಿ ಚಪ್ಪರಗಾಲುಮಂಚವನ್ನೂ ಸೇವಾರ್ಥವಾಗಿ ಒಪ್ಪಿಸಿರುತ್ತಾರೆ.

ಆಳಿದ ಮಹಾಸ್ವಾಮಿಯವರಾದ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರು ಈ ರೀತಿಯಾಗಿ ದೇವತಾಸೇವೆ ಮುಂತಾದದ್ದನ್ನು ಆಚಂದ್ರಾರ್ಕವಾಗಿ ಇರುವಂತೆ ಮಾಡಿಸಿ, ಈ ದೇವಸ್ಥಾನದಲ್ಲಿ ತಮ್ಮ ಖಾಸಾ ಭಕ್ತವಿಗ್ರಹವನ್ನೂ ತಮ್ಮ ಧರ್ಮಪತ್ನಿಯರ ಭಕ್ತವಿಗ್ರಹಗಳನ್ನೂ ಶಿಲೆಯಿಂದಲೂ ಲೋಹದಿಂದಲೂ ಮಾಡಿಸಿ, ಪ್ರತಿಷ್ಠೆ ಮಾಡಿಸಿ ವಸ್ತ್ರಾಭರಣಗಳನ್ನು ಕೊಟ್ಟಿರುತ್ತಾರೆ.

ಈ ಊರ ಬಲಗಡೆಯಲ್ಲಿ ಪ್ರತ್ಯೇಕವಾಗಿ ಗುಡಿಯನ್ನು ಕಟ್ಟಿಸಿ, ವಿಮಾನಕ್ಕೆ ಚಿನ್ನದ ಕಲಶಗಳನ್ನು ಹಾಕಿಸಿ, ಉಭಯನಾಚಾರು ಸಹಿತವಾಗಿ ನಾರಾಯಣ ಸ್ವಾಮಿಯವರನ್ನೂ ಈ ಉತ್ಸವದ ಲೋಹದ ವಿಗ್ರಹಗಳನ್ನೂ ಪ್ರತಿಷ್ಠೆ ಮಾಡಿಸಿ, ಈ ದೇವರಿಗೆಲ್ಲಾ ವಸ್ತ್ರಾಭರಣ ಮುಂತಾದ ಸೇವೆಗಳನ್ನು ಮಾಡಿದರು.

ಕೃಷ್ಣರಾಜೇಂದ್ರ ಒಡೆಯರವರು ಕೆಂಪನಂಜಮ್ಮಾಂಬಾ ಸಮೇತ ಶ್ರೀಚಾಮರಾಜೇಶ್ವರಸ್ವಾಮಿಯವರಿಗೆ ನಿತ್ಯೋತ್ಸವ ಪಕ್ಷೋತ್ಸವ ನಕ್ಷತ್ರೋತ್ಸವ ಮಾಸೋತ್ಸವ ಕೃತ್ತಿಕೋತ್ಸವ ಸಂವತ್ಸರೋತ್ಸವ ರಥೋತ್ಸವಾದಿ ಅನೇಕ ಉತ್ಸವಗಳು ನಡೆಯುವದಕ್ಕೂ, ಶಿವಕೂಟ ಮುಂತಾದ ಸಮಾರಾಧನೆ ಅರ್ಚಕ ಆಗಮಿಕ ಉಪಾಧಿ ಬ್ರಾಹ್ಮಣರು ದೇವಸ್ಥಾನದ ಸುಬೇದಾರ ಶಿರಸ್ತೇದಾರ ಗುಮಾಸ್ತರು ಕಾವಲುಗಾರ ತಮ್ಮಡಿ ಓಲಗ ತಾಳ ಮೇಳ ಮುಂತಾದ ಕೈವಾಡದ ಜನಗಳ ಜೀವನ ನಡೆಯುವದಕ್ಕೂ, ಮೇಲೆ ಹೇಳಿರುವ ವಿಶಿಷ್ಟ ದೇವರಿಗೂ ನಿತ್ಯೈಕಟ್ಟಳೆ ಪಡಿತರ ದೀಪಾರಾಧನೆ ಮೊದಲಾದ ಸೇವೆಗಳು ನಡೆಯುವದಕ್ಕೂ ಭಾರೀ ತಸ್ತೀಕನ್ನು ಉಂಟುಮಾಡಿ, ಆ ಮೊಬಲಗಿಗೆ ಸರಿಯಾಗಿ ಉಮ್ಮತ್ತೂರು ನವಿಲೂರು ಬೆಂಡರವಾಡಿ ಮುಂತಾದ ಹದಿನಾಲ್ಕು ಗ್ರಾಮಗಳನ್ನು ವಿಂಗಡಿಸಿ ಕೊಟ್ಟು ಶಿಲಾಪ್ರತಿಷ್ಠೆಯನ್ನು ಮಾಡಿಸಿ, ದೇವಸ್ಥಾನಕ್ಕೆ ಶಿಲಾಶಾಸನ

ವನ್ನು ಬರೆಯಿಸಿ ಒಪ್ಪಿಸಿರುವದಲ್ಲದೆ, ಕೃತ್ತಿಕೋತ್ಸವದಲ್ಲಿ ರಥೋತ್ಸವಾದಿ ಉತ್ಸವಗಳು ನಡೆಯುವದಕ್ಕೆ ಕೆಲವು ನಗದು ಹಣವನ್ನು ಕೊಡುವಂತೆ ಕಟ್ಟಲೆ ಮಾಡಿಸಿದರು.

ಈ ಚಾಮರಾಜನಗರದ ಬಲಭಾಗದಲ್ಲಿ ಇರುವ ಅಮಚವಾಡೀ ಗುಡ್ಡದಲ್ಲಿ ದ್ವಾತ್ರಿಂಶ ದ್ಭುಜಯುಕ್ತವಾಗಿ ನೆಲಸಿರುವ ವೀರಭದ್ರಸ್ವಾಮಿಗೂ ಅಲ್ಲಿರುವ ಮಹಾಲಿಂಗೇಶ್ವರಸ್ವಾಮಿಗೂ ಸಹ ತಮ್ಮ ಧರ್ಮಪತ್ನಿಯರು ವಿಜ್ಞಾಪನೆ ಮಾಡಿಕೊಂಡಂತೆ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿಸಿದ್ದಲ್ಲದೆ ವಿಸ್ತಾರವಾಗಿ ಗುಡಿ ಗೋಪುರ ಪ್ರಾಕಾರಗಳನ್ನು ನೂತನವಾಗಿ ಕಟ್ಟಿಸಿ, ಈ ಗೋಪುರಕ್ಕೆ ಚಿನ್ನದ ಕಲಶಗಳನ್ನೂ ಕೋರಂಬವನ್ನೂ ಶಾ॥ ೧೭೬೬ನೇ ಕ್ರೋಧಿ ಸಂವತ್ಸರದ ಮಾಘ ಶುದ್ಧ ೩ ಗುರುವಾರದಲ್ಲಿ ಹಾಕಿಸಿ, ಕಲಶ ಪ್ರತಿಷ್ಠೆಯನ್ನು ಮಾಡಿಸಿ, ಈ ವೀರಭದ್ರದೇವರಿಗೆ ಚಿನ್ನದ ಕವಚವನ್ನೂ, ಈಶ್ವರನಿಗೆ ನಾಗಾಭರಣ ಸಹಿತವಾದ ಬೆಳ್ಳಿಕೊಳಗ ಮುಂತಾದ ಅನೇಕ ವಸ್ತ್ರಾಭರಣ ಪೂಜೋಪಕರಣ ಸೇವೋಪಕರಣ ಪಾತ್ರೆ ಪದಾರ್ಥಗಳನ್ನೂ ಒಪ್ಪಿಸಿ, ಈ ದೇವಸ್ಥಾನಕ್ಕೆ ನಿತ್ಯಗಟ್ಟಲೆ ಪಡಿತರ ದೀಪಾರಾಧನೆ ಮುಂತಾದ ಸೇವೆ ನಡೆಯುವಂತೆ ತಸ್ತೀಕನ್ನು ಉಂಟುಮಾಡಿ ಇರುತ್ತಾರೆ.

ತ್ರಿಮಕೂಟಕ್ಷೇತ್ರ.—ಶಾ॥ ೧೭೨೪ನೇ ದುಂದುಭಿ ಸಂವತ್ಸರದಲ್ಲಿ ಅಗಸ್ತ್ಯೇಶ್ವರಸ್ವಾಮಿ ದೇವಸ್ಥಾನದಲ್ಲಿ ಚನ್ನಬಸವೇಶ್ವರನೆಂಬದಾಗಿ ಶಿವ ಪ್ರತಿಷ್ಠೆಯನ್ನು ಮಾಡಿಸಿದರು.

ವರಾಹಸ್ವಾಮಿ ದೇವಸ್ಥಾನ.—ಪೂರ್ವದಲ್ಲಿ ಚಿಕ್ಕದೇವರಾಜ ಒಡೆಯರವರು ಶ್ರೀಮುಷ್ಣವೆಂಬ ಕ್ಷೇತ್ರದಲ್ಲಿ ನೆಲಸಿಯಿದ್ದ ಶ್ವೇತವರಾಹಸ್ವಾಮಿಯವರನ್ನೂ ತಂಜಾವೂರಲ್ಲಿ ಇದ್ದ ಉಭಯನಾಚಾರು ಸಹಿತವಾದ ನೀಲಮೇಘಶ್ಯಾಮಸ್ವಾಮಿಗಳುವರೆಂಬ ಲೋಹದ ಉತ್ಸವಮೂರ್ತಿಯವರನ್ನೂ ಶ್ರೀರಂಗಪಟ್ಟಣಕ್ಕೆ ತರಿಸಿ, ಅಲ್ಲಿ ನೂತನವಾಗಿ ದೇವಸ್ಥಾನ ಗೋಪುರವನ್ನು ಉಂಟುಮಾಡಿ, ಈ ಮೂಲದೇವರಿಗೆ ಅಂಬುಜವಲ್ಲಿ ಎಂಬ ಅಮ್ಮನವರನ್ನು ನಿರ್ಮಿಸಿ ಪ್ರತಿಷ್ಠೆಯನ್ನು ಮಾಡಿಸಿ ಪೂಜೋತ್ಸವಾದಿಗಳು ನಡೆಯುತ್ತಿದ್ದವು. ಟೀಪೂಸುಲ್ತಾನನು ಈ ಗುಡಿ ಗೋಪುರವನ್ನು ಕೆಡಹಿ

ದೇವರನ್ನು ಕಿತ್ತು ಹಾಕಿಸಿದನಂತರ, ಈ ವರಾಹಸ್ವಾಮಿಯವರನ್ನು ಪಟ್ಟಣದ ರಂಗಸ್ವಾಮಿಯ ಗುಡಿಯಲ್ಲಿ ಒಂದು ಮಂಟಪದಲ್ಲಿ ಇರಿಸಿ ಪೂಜೆ ನಡಿಸುತ್ತಾ ಇದ್ದರು. ಈ ವರ್ತಮಾನವನ್ನು ಕೃಷ್ಣರಾಜೇಂದ್ರ ಒಡೆಯರವರು ತಿಳಿದು, ಮಹೀಶೂರಲ್ಲಿ ವಿಸ್ತಾರವಾಗಿ ಗುಡಿಯನ್ನೂ ೫ನೆಲೆ ಗೋಪುರ ಪ್ರಾಕಾರ ಮಂಟಪವಿಮಾನಗಳನ್ನೂ ಕಟ್ಟಿಸಿ, ಈ ಗೋಪುರಕ್ಕೆ ೫ ಸುವರ್ಣದ ಕಲಶಗಳನ್ನೂ ೬ ಕೋರಂಬಗಳನ್ನೂ ವಿಮಾನಗಳಿಗೆ ಚಿನ್ನದ ಕಲಶಗಳನ್ನೂ ಸಹ ಹಾಕಿಸಿ, ಶಾ॥ ೧೭೩೧ನೇ ಶುಕ್ಲ ಸಂವತ್ಸರದ ವೈಶಾಖ ಬಹುಳ ೭ ಸ್ಥಿರವಾರದಲ್ಲಿ ಗೋಪುರ ಪ್ರತಿಷ್ಠೆಯನ್ನು ಮಾಡಿಸಿ, ಅಮ್ಮನವರು ಸಹಿತವಾಗಿ ಶ್ವೇತವರಾಹಸ್ವಾಮಿಯನ್ನೂ ಉತ್ಸವ ವಿಗ್ರಹವನ್ನೂ ಶ್ರೀರಂಗಪಟ್ಟಣದಿಂದ ತರಿಸಿ, ಈ ಜ್ಯೇಷ್ಠ ಬಹುಳ ೧ಯಲ್ಲಿ ಪ್ರತಿಷ್ಠೆ ಮಾಡಿಸಿದರು; ಪಡಿತರ ದೀಪಾರಾಧನೆ ನಿತ್ಯೋತ್ಸವ ರಥೋತ್ಸವಾದಿ ಉತ್ಸವಗಳು ನಡೆಯುವದಕ್ಕೂ ಉಪಾಧಿ ಬ್ರಾಹ್ಮಣರು ಮುಂತಾದವರ ಜೀವನ ನಡೆಯುವದಕ್ಕೂ ತಸ್ತೀಕನ್ನು ಉಂಟುಮಾಡಿ, ಚಿನ್ನ ಬೆಳ್ಳಿಗಳಿಂದ ಮಾಡಿಸಿದ ಪೂಜೋಪಕರಣ ಸೇವೋಪಕರಣಗಳನ್ನೂ ವಸ್ತ್ರಾಭರಣಗಳನ್ನೂ ಉತ್ಸವಕ್ಕೆ ಬಣ್ಣದ ವಾಹನಗಳನ್ನೂ ಚಿನ್ನದ ಸೂರ್ಯಮಂಡಲವನ್ನೂ ಒಪ್ಪಿಸಿ, ಪಾಂಚರಾತ್ರಾಗಮದಿಂದ ಸಾಂಗಾಲಯವೆನಿಸಿ, ಈ ದೇವತಾ ಸೇವೆಯು ಸಾರೋದ್ಧಾರವಾಗಿ ನಡೆಯುವಂತೆ ಕಟ್ಟಳೆಮಾಡಿಸಿ, ಇನ್ನೂ ಅನೇಕ ಸೇವೆಗಳನ್ನು ಮಾಡಿ ಇರುತ್ತಾರೆ.

ಮಹೀಶೂರ ತ್ರಿನಯನೇಶ್ವರಸ್ವಾಮಿ.—ಟೀಪೂಸುಲ್ತಾನನು ಲಕ್ಷ್ಮೀರಮಣಸ್ವಾಮಿ, ಅರಮನೆಯ ಬಲಗಡೆಯಲ್ಲಿದ್ದ ಹೂಡ್ಯದ ನರಸಿಂಹ, ಬಿಸಿಲ ಮಾರಮ್ಮ ಮುಂತಾದ ದೇವರಗುಡಿ ಗೋಪುರಗಳನ್ನು ಕೆಡಹಿ ದೇವರನ್ನು ಕಿತ್ತು ಹಾಕಿಸಿ ಇದ್ದನು. ಮುಮ್ಮಡಿ ಕೃಷ್ಣರಾಜ ಒಡೆಯರವರು ನಜರಬಾದು ಕೋಟೆಯಲ್ಲಿ ಬಂದುಸ್ಥಳದಲ್ಲಿ ಇರಿಸಿದ್ದ ತ್ರಿನಯನೇಶ್ವರಸ್ವಾಮಿಯನ್ನೂ, ಶಿಲೆಯಿಂದಲೂ ಲೋಹದಿಂದಲೂ ನೂತನವಾಗಿ ಮಾಡಿಸಿದ ತ್ರಿಪುರಸುಂದರಿ ಅಮ್ಮನವರನ್ನೂ, ದಕ್ಷಿಣಾಮೂರ್ತಿ ತಾಂಡವೇಶ್ವರ ಉತ್ಸವಮೂರ್ತಿ ಮುಂತಾದ ವಿಗ್ರಹಗಳನ್ನೂ, ಪೂರ್ವದಿಕ್ಕಿನ ಸಾಲಿನಲ್ಲಿ ಪೂರ್ವದಲ್ಲಿ ರಣಧೀರ ಕಂಠೀರವ ನರಸರಾಜ ಒಡೆಯರವರಿಗೆ ಪೇರಿಪಟ್ಟಿದ್ದ

ಪ್ರಸನ್ನವಾಗಿ ಬಂದಿದ್ದ ಚಾಮುಂಡೇಶ್ವರೀ ಶಿಲಾವಿಗ್ರಹವನ್ನೂ, ಗಣಪತಿ ಮೊದಲಾದ ದೇವರನ್ನೂ ಪ್ರತಿಷ್ಠೆ ಮಾಡಿಸಿದರು. ಇವುಗಳಲ್ಲದೆ ಮಾಡಿಸಿರುವ ಶಿವಪ್ರತಿಷ್ಠೆಗಳು ಚಾಮರಾಜೇಶ್ವರ, ಸೋಮೇಶ್ವರ, ಗಂಗಾಧರೇಶ್ವರ, ಕಾಶೀವಿಶ್ವೇಶ್ವರ, ಪ್ರಸನ್ನನಂಜುಂಡೇಶ್ವರ, ದೇವೇಶ್ವರ, ದೇವದೇವೇಶ್ವರ, ದೇವರಾಜೇಶ್ವರ, ದೇವಾಂಬೇಶ್ವರ, ಮಹಾಲಿಂಗೇಶ್ವರ, ಮುದ್ದುಕೃಷ್ಣೇಶ್ವರ.

ಪೂರ್ವದಲ್ಲಿ ಈ ತ್ರಿನಯನೇಶ್ವರಸ್ವಾಮಿ ದೇವಸ್ಥಾನದಲ್ಲಿ ಇದ್ದ ರಣಧೀರ ಕಂಠೀರವನರಸರಾಜ ಒಡೆಯರವರ ಭಕ್ತವಿಗ್ರಹ, ದೊಡ್ಡದೇವರಾಜ ಒಡೆಯರವರ ಭಕ್ತವಿಗ್ರಹ, ಈ ೨ ಶಿಲಾವಿಗ್ರಹಗಳನ್ನೂ, ಉತ್ಸವಮೂರ್ತಿಯ ಎದುರಿಗೆ ಕೈಸಾಲೆಯಲ್ಲಿ ಪ್ರತಿಷ್ಠೆಮಾಡಿಸಿ, ಮೂಲಸ್ವಾಮಿ ಮತ್ತು ಅಮ್ಮನವರ ವಿಮಾನ ೨ಕ್ಕೆ ಚಿನ್ನದ ಕಲಶಗಳನ್ನು ಹಾಕಿಸಿದರು.

ಶ್ರೀಕೃಷ್ಣರಾಜ ಒಡೆಯರವರು ತಮ್ಮ ಪೂರ್ವಿಕರಾದ ರಾಜಒಡೆಯರವರಿಗೆ ವಿಷವನ್ನು ಅಮೃತಮಾಡಿದ ಅರವಿಂದನಾಯಕೀ ಸಮೇತ ಲಕ್ಷ್ಮೀರಮಣಸ್ವಾಮಿಯನ್ನೂ, ಉಭಯನಾಚಾರು ಸಹಿತವಾಗಿ ಉತ್ಸವವಿಗ್ರಹ ಮುಂತಾದ ದೇವರುಗಳನ್ನೂ ಪ್ರತಿಷ್ಠೆ ಮಾಡಿಸಿದ್ದಲ್ಲದೆ, ಈ ದೇವಸ್ಥಾನಕ್ಕೆಅಧಿಷ್ಠಾನ ಶುದ್ಧಿಯಾಗಿ ೫ನೆಲೆ ಗೋಪುರವನ್ನು ಕಟ್ಟಿಸಿ, ಸುವರ್ಣದ ೫ ಕಲಶಗಳನ್ನೂ ೨ ಕೋರಂಬಗಳನ್ನೂ ಹಾಕಿಸಿ, ಶಾ|| ೧೭೩೩ನೇ ವಿರೋಧಿಕೃತು ಸಂ|| ಮಾರ್ಗಶಿರ ಶುದ್ಧ ೩ ಸ್ಥಿರವಾರದಲ್ಲಿ ಪ್ರತಿಷ್ಠೆಮಾಡಿಸಿದ್ದಲ್ಲದೆ, ರಾಜಒಡೆಯರವರ ಭಕ್ತವಿಗ್ರಹವನ್ನು ಪ್ರತಿಷ್ಠೆ ಮಾಡಿಸಿದರು.

ಅರಮನೆಗೆ ಬಲಗಡೆ ಪೂರ್ವದಲ್ಲಿ ಪ್ರತಿಷ್ಠೆಯಾಗಿ ಇದ್ದ ಹೊಯ್ಸಳ ನರಸಿಂಹಸ್ವಾಮಿಯು ಛಿನ್ನವಾದ್ದರಿಂದ ಅದೇ ದೇವಸ್ಥಾನದಲ್ಲಿ ವೆಂಕಟರಮಣಸ್ವಾಮಿಯನ್ನು ಪ್ರತಿಷ್ಠೆ ಮಾಡಿಸಿದರು.

ಧೊರೆಗಳು, ಮೇಲೆ ಬರೆದಿರುವ ತ್ರಿನಯನೇಶ್ವರ ಮುಂತಾದ ದೇವರಿಗೆಲ್ಲಾ ಪೂಜೋಪಕರಣ ಸೇವೋಪಕರಣ ಪಾತ್ರ ವಸ್ತ್ರಾಭರಣ

ಗಳನ್ನು ಕೊಟ್ಟು, ಪಡಿತರ ದೀಪಾರಾಧನೆ ರಥೋತ್ಸವಾದಿ ಉತ್ಸವಗಳು ನಡೆಯುವದಕ್ಕೆ ಆಯಾ ದೇವಸ್ಥಾನದ ಶಾಶ್ವತನ್ಯಾಯಿಪ್ರಕಾರ ತಸ್ತೀಕನ್ನು ಉಂಟುಮಾಡಿಸಿದರು. ಈ ಊರಲ್ಲಿರುವ ಪಂಚಮುಖೀ ಆಂಜನೇಯ, ಕೋಟೇ ಬಾಗಿಲ ಆಂಜನೇಯ, ವೀರಣಗೆರೇ ಆಂಜನೇಯ, ಬಸವೇಶ್ವರ, ಮಹಾದೇಶ್ವರ, ದಕ್ಷಿಣೋತ್ತರ ಬಾಗಿಲ ಗಣಪತಿ, ಕೋಟೆಯೊಳಗೆ ಇರುವ ಬಿಸಲು ಮಾರಮ್ಮ ಮುಂತಾದ ದೇವರಿಗೆ ಪೂಜೆ ನಡೆಯುವಂತೆ ಕಟ್ಟಳೆ ಮಾಡಿಸಿದರು; ನೂತನವಾಗಿ ಪಶ್ಚಿಮ ದಿಕ್ಕಿನಲ್ಲಿ ಕೋಟೆಗೆ ಬ್ರಹ್ಮಪುರೀ ಬಾಗಿಲನ್ನು ನಿರ್ಮಿಸಿ, ಗಣಪತಿಯನ್ನೂ ಚಿನ್ನದ ಕಲಶದಿಂದ ಶೋಭಾಯಮಾನವಾಗಿರುವ ವಿಮಾನದ ಗುಡಿಯಲ್ಲಿ ಅಮೃತಶಿಲಾ ಆಂಜನೇಯನನ್ನೂ ಪ್ರತಿಷ್ಠೆ ಮಾಡಿಸಿ, ಪೂಜೆ ನಡೆಯುವಂತೆ ನಿಬಂಧನೆ ಮಾಡಿದರು. ಈ ರೀತಿಯಾಗಿ ದೊರೆಗಳು ಶಾ॥ ೧೭೮೧ನೇ ಸಿದ್ಧಾರ್ಥಿ ಸಂವತ್ಸರ ಮೊದಲುಗೊಂಡು ಅನೇಕ ದೇವತಾಪ್ರತಿಷ್ಠೆಗಳನ್ನು ಮಾಡಿಸಿ ಇರುತ್ತಾರೆ.

ಪ್ರಸನ್ನಕೃಷ್ಣ ಸ್ವಾಮಿ.—ಮುಮ್ಮಡಿ ಕೃಷ್ಣರಾಜ ಒಡೆಯರವರು ಅರಮನೆಯ ಬಲಗಡೆಯಲ್ಲಿ ಬಾಲಾಲಯಪೂರ್ವಕ ಪಂಚೋಪನಿಷನ್ಮಯವಾದ ೨೧ ಸುವರ್ಣ ಕಲಶಗಳಿಂದ ಕೂಡಿದ ೧೩ ವಿಮಾನಗಳಿಂದ ಶೋಭಿಸುತ್ತಲಿರುವಂತೆ ವಿಸ್ತಾರವಾಗಿ ಗುಡಿಗೋಪುರಗಳನ್ನೂ, ಕೈಸಾಲೆಯನ್ನೂ, ಕೊಠಾರೋತ್ಸವಕ್ಕೆ ಭುವನೇಶ್ವರೀ ಮಂಟಪ ಮುಂತಾದವುಗಳನ್ನೂ ನೂತನವಾಗಿ ಕಟ್ಟಿಸಿ, ದಿವ್ಯದೇಶದಂತೆ ಸರ್ವರೂ ತೀರ್ಥ ಪ್ರಸಾದಗಳನ್ನು ಸ್ವೀಕರಿಸಿ ಕೃತಾರ್ಥರಾಗಬೇಕೆಂದು, ಈ ದೇಶದಲ್ಲಿ ಪ್ರಸಿದ್ಧವಾಗಿರುವ ಯಾದವಾದ್ರಿಯಿಂದ ಚಲುವರಾಯ ಸ್ವಾಮಿಯ ಪಾದುಕೆಯನ್ನೂ, ಕಂಚಿಯಿಂದ ಬಂದು ತೆರಕಣಾಂಬಿಯಲ್ಲಿ ನೆಲಸಿದ್ದ ಪೆರಂದೇವಿ ಅಮ್ಮನವರನ್ನೂ ಸಹ ಬಿಜಮಾಡಿಸಿಕೊಂಡು ಬಂದು, ದಿವ್ಯದೇಶ ಸಂಬಂಧವನ್ನು ಉಂಟುಮಾಡಿ, ರುಕ್ಮಿಣಿ ಸತ್ಯಭಾಮಾ ಸಮೇತವಾಗಿ ಅಂಬೆಗಾಲು ಕೃಷ್ಣಸ್ವಾಮಿಯನ್ನೂ, ರಂಗನಾಥ ಚಲುವರಾಯ ಸೀತಾ ಲಕ್ಷ್ಮಣ ಸಮೇತ ಶ್ರೀರಾಮ ಲಕ್ಷ್ಮೀನೃಸಿಂಹ ವರದರಾಜ ವೆಂಕಟರಮಣ ಅನಂತ ಗರುಡ ವಿಷ್ವಕ್ಸೇನ ಮೊದಲಾದ ದೇವರನ್ನೂ, ರಾಮಾನುಜಾಚಾರ್ಯರು ನಮ್ಮಾಳ್ವಾರು ವೇದಾಂತಾಚಾರ್ಯರು ಜೀಯರು ಮುಂತಾದ ೭೪ ಆಳ್ವಾರು ಮೊದಲಾದ ಶಿಲಾ

ವಿಗ್ರಹ ಲೋಹದ ವಿಗ್ರಹಗಳನ್ನೂ, ಉಭಯನಾಚಾರು ಸಹಿತನಾಗಿರುವ ಲೋಹದ ವೇಣು ಗೋಪಾಲ ಸ್ವಾಮಿಯನ್ನೂ, ಶಯನೋತ್ಸವಕ್ಕೆ ಅಮ್ಮನವರಿಂದ ಸಹಿತವಾದ ಬೆಳ್ಳೀ ವೇಣುಗೋಪಾಲಸ್ವಾಮಿಯನ್ನೂ, ಮಹಾದ್ವಾರದ ಬಲಗಡೆ ಗಣಪತಿಯನ್ನೂ ಸಹ ಶಾ ೧೭೫೧ನೇ ಸರ್ವಧಾರಿ ಸಂವತ್ಸರದ ಫಾಲ್ಗುನ ಬಹುಳ ೧೦ ಸ್ಥಿರವಾರದಲ್ಲಿ ಪಾಂಚರಾತ್ರ್ಯಾಗಮೋಕ್ತಪ್ರಕಾರವಾಗಿ ಪ್ರತಿಷ್ಠೆ ಮಾಡಿಸಿದರು.

ಧೊರೆಗಳು ಅಂಬೆಗಾಲು ಕೃಷ್ಣದೇವರಿಗೆ ಪ್ರಸನ್ನಕೃಷ್ಣಸ್ವಾಮಿ ಎಂಬ ನಾಮಧೇಯವನ್ನು ಉಂಟುಮಾಡಿ, ಕೃಷ್ಣ ಜಯಂತೀ ಉತ್ಸವ ಕೊಠಾರೋತ್ಸವ ರಥೋತ್ಸವಾದಿ ಉತ್ಸವಗಳಲ್ಲಿ, ಸ್ವಾಮಿಗೂ ಅಮ್ಮನವರಿಗೂ ಅಲಂಕಾರದಬಗ್ಗೆ ನವರತ್ನಮಯವಾದ ಪದಕಗಳಿಂದೊಡಗೂಡಿರುವ ಅನೇಕ ಮುಕ್ತಾಹಾರಗಳನ್ನೂ, ಬಂದಿ ಮೊದಲಾದ ಬಗೆಬಗೆಯಾದ ರತ್ನಾಭರಣಗಳನ್ನೂ, ಕವಚ ಪದ್ಮಪೀಠ ಕಿರೀಟ ಕೋರಂಬ ಹಸ್ತಾಭರಣ ಪಾದಾಭರಣ ಮುಂತಾದ ಚಿನ್ನ ಬೆಳ್ಳಿಗಳ ಆಭರಣಗಳನ್ನೂ, ಪೂಜಾಸೇವೆಗಳಿಗೆ ಚಿನ್ನ ಬೆಳ್ಳಿಗಳಿಂದ ಮಾಡಿದ ಅನೇಕ ಪಾತ್ರೆಗಳನ್ನೂ, ಅಮೂಲ್ಯವಾದ ಪೀತಾಂಬರಾದಿ ವಸ್ತ್ರಗಳನ್ನೂಸಹ ಒಪ್ಪಿಸಿದರು; ಇದಲ್ಲದೆ ಈ ದೇವಸ್ಥಾನದಲ್ಲಿ ಇರತಕ್ಕ ದೇವರಿಗೆಲ್ಲಾ ಚಿನ್ನ ಬೆಳ್ಳಿ ಮೊದಲಾದ ಲೋಹಗಳಿಂದ ಪೂಜೋಪಕರಣಕ್ಕೆ ಪಾತ್ರೆಗಳನ್ನೂ, ಇನ್ನೂ ಅನೇಕವಾದ ಆಭರಣಗಳನ್ನೂ ಕೊಟ್ಟರು; ರಥೋತ್ಸವಕ್ಕೆ ಬೊಂಬೇರಥವನ್ನೂ, ಬೆಳ್ಳೀ ಗರುಡವಾಹನವನ್ನೂ, ಆಂಜನೇಯ ಮೊದಲಾದ ಅನೇಕ ಬಣ್ಣದ ವಾಹನಗಳನ್ನೂ, ಪಲ್ಲಕ್ಕಿ ಛತ್ರ ಚೌರಿ ಸೂರಿಪಾನೆ ಚಾಮರ ಮುಂತಾದ ಸೇವೋಪಕರಣಗಳನ್ನೂ ಒಪ್ಪಿಸಿದರು.

ಕೃಷ್ಣರಾಜ ಒಡೆಯರವರು, ಮೇಲೆಕಂಡ ದೇವರಿಗೆಲ್ಲಾ ನಿತ್ಯಗಟ್ಟಳೆ ಪಡಿತರ ದೀಪಾರಾಧನೆ ರಾಮಾನುಜಕೂಟ ನಡೆಯುವದಕ್ಕೂ, ನಿತ್ಯೋತ್ಸವ ವಾರೋತ್ಸವ ಪಕ್ಷೋತ್ಸವ ನಕ್ಷತ್ರೋತ್ಸವ ರಥೋತ್ಸವ ಕೊಠಾರೋತ್ಸವಗಳಲ್ಲಿಯೂ ಜನ್ಮವರ್ಧಂತೀ ಮಹೋತ್ಸವದಲ್ಲಿಯೂ ಸಹಸ್ರಕಲಶಾಭಿಷೇಕ ಮುಂತಾದ ಅನೇಕ ಉತ್ಸವಗಳು ನಡೆಯುವದಕ್ಕೂ, ಧರ್ಮಾ

ಧ್ಯಯನ ಅರ್ಚಕ ಮೊದಲಾದ ಉಪಾಧಿ ಬ್ರಾಹ್ಮಣರು ಸುಬೇದಾರ ಶಿರಸ್ತೇದಾರ ಗುಮಾಸ್ತರು ಸ್ಥಾನಿಕ ಮಣಿಯ ಅಧಿಕ ಮುದ್ರೆ ಓಲಗ ತಾಳ ಮೇಳ ನವಪತ್ತು ಕೈವಾಡದ ಜನ ಮುಂತಾದವರ ಜೀವನ ನಡೆಯುವದಕ್ಕೂ ಸಹ ಭಾರೀತಸ್ತೀಕನ್ನು ಉಂಟುಮಾಡಿ, ಈ ದೇವಸ್ಥಾನದ ಶಿಲಾಶಾಸನದಲ್ಲಿ ತಾವು ಮಾಡಿರುವ ದೇವತಾಸೇವೆ ದಾನ ಧರ್ಮ ಗ್ರಂಥ ನಿರ್ಮಾಣ ಮೊದಲಾದ ಅನೇಕ ಕಾರ್ಯಗಳನ್ನು ಸಂಕ್ಷೇಪವಾಗಿ ಬರೆಯಿಸಿ, ನವರತ್ನವೆಂಬ ಹೆಸರನ್ನಿಟ್ಟು ಒಪ್ಪಿಸಿದರು ; ತಮ್ಮ ಪತ್ನಿಯರಿಂದ ಒಡಗೂಡಿದ ಖಾಸಾ ಭಕ್ತವಿಗ್ರಹವನ್ನು ಶಿಲೆಯಿಂದಲೂ ಲೋಹದಿಂದಲೂ ಮಾಡಿಸಿ, ಈ ಭಕ್ತವಿಗ್ರಹಗಳಿಗೆ ಪ್ರತಿದಿನದಲ್ಲಿಯೂ ದೇವತಾಸೇವೆ ಅದನಂತರ ದೀವಟಿಗೆ ಸಲಾಂ ವರದಿ ಮುಂತಾದ ಮರ್ಯಾದೆಗಳು ನಡೆಯುವಂತೆ ಕಟ್ಟಳೆಮಾಡಿಸಿ, ದೇವತಾಸೇವೆಯು ಸಾರೋದ್ಧಾರವಾಗಿ ನಡೆಯುವಂತೆ ಮಾಡಿ, ಅನೇಕವಾಗಿ ಸೇವೆಮಾಡಿ ಇರುತ್ತಾರೆ.

ಶ್ರೀರಂಗಪಟ್ಟಣದ ದೇವಸ್ಥಾನಗಳು.—ಮುಮ್ಮಡಿ ಕೃಷ್ಣರಾಜಒಡೆಯರವರು ರಂಗನಾಥ, ಗಂಗಾಧರೇಶ್ವರ, ಕರೀಘಟ್ಟದ ವೆಂಕಟರಮಣಸ್ವಾಮಿ ಮುಂತಾದ ದೇವರ ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡಿಸಿದರು ; ತಮ್ಮ ಪೂರ್ವಿಕರಾದ ರಣಧೀರ ಕಂಠೀರವನರಸರಾಜ ಒಡೆಯರವರು ದೊಡ್ಡದಾಗಿ ಗುಡಿ ಗೋಪುರಗಳನ್ನು ಕಟ್ಟಿಸಿ ಪ್ರತಿಷ್ಠೆಮಾಡಿಸಿದ್ದ ಲಕ್ಷ್ಮೀನೃಸಿಂಹ ಮುಂತಾದ ದೇವರುಗಳನ್ನು ಟೀಪೂ ಸುಲ್ತಾನನು ಕಿತ್ತು ಹಾಕಿಸಿ ಇದ್ದಾನೆಂಬ ವರ್ತಮಾನವನ್ನು ಕೇಳಿ, ಆ ದೇವಸ್ಥಾನವನ್ನು ಜೀರ್ಣೋದ್ಧಾರಮಾಡಿಸಿ, ರಂಗನಾಥನ ಗುಡಿಯಲ್ಲಿ ಇರಿಸಿದ್ದ ಆ ಲಕ್ಷ್ಮೀನೃಸಿಂಹ ಸ್ವಾಮಿಯನ್ನೂ ರಣಧೀರ ಕಂಠೀರವನರಸರಾಜ ಒಡೆಯರವರ ಭಕ್ತವಿಗ್ರಹವನ್ನೂ ಪುನಃ ಶಾ॥ ೧೭೩೦ನೇ ಸರ್ವಧಾರಿ ಸಂವತ್ಸರದಲ್ಲಿ ಪ್ರತಿಷ್ಠೆ ಮಾಡಿಸಿದರು ; ಈ ದೇವರಿಗೆಲ್ಲಾ ಪೂಜೋಪಕರಣ ಸೇವೋಪಕರಣ ವಸ್ತ್ರಾಭರಣ ಮುಂತಾದ ಪದಾರ್ಥಗಳನ್ನೂ ರಥವಾಹನಗಳನ್ನೂ ಕೊಟ್ಟು, ನಿತ್ಯಗಟ್ಟಳೆ ಪಡಿತರ ದೀಪಾರಾಧನೆ ನಿತ್ಯೋತ್ಸವ ರಥೋತ್ಸವ ಕೋತಾರೋತ್ಸವ ಮುಂತಾದ ಉತ್ಸವಗಳಿಗೆ ತಸ್ತೀಕುಗಳನ್ನು ಉಂಟುಮಾಡಿದರು ; ಚಂದ್ರವನದಲ್ಲಿ ತಮ್ಮ ತಂದೆಗಳಾದ ಮುಮ್ಮಡಿ ಚಾಮರಾಜೇಂದ್ರ ಒಡೆಯ

ರವರ ದಹನವಾದಬಳಿ ನದೀ ತೀರದಲ್ಲಿ ದೇವಸ್ಥಾನವನ್ನು ಕಟ್ಟಿಸಿ, ಚಾಮರಾಜೇಶ್ವರನೆಂಬ ಶಿವಪ್ರತಿಷ್ಠೆಯನ್ನು ಮಾಡಿಸಿ, ಪಶ್ಚಿಮವಾಹಿನಿಯ ತೀರದಲ್ಲಿ ಮಹಾಮಾತುಶ್ರೀಯವರಾದ ಕೆಂಪನಂಜಮ್ಮಣ್ಣಿಯವರ ದಹನಸ್ಥಳದಲ್ಲಿ ಬೃಂದಾವನವನ್ನು ಕಟ್ಟಿಸಿ, ಈ ಎರಡು ಕಡೆಯಲ್ಲಿಯೂ ಪೂಜೆ ನಡೆಯುವಂತೆಯೂ ೪ ವೇಳೆ ನವಪತ್ತು ನಡೆಯುವಂತೆಯೂ ಕಟ್ಟಳೆ ಮಾಡಿಸಿದರು.

ಮೇಲುಕೋಟೆ.—ಮುಮ್ಮಡಿ ಕೃಷ್ಣರಾಜ ಒಡೆಯರವರು, ಚಲುವರಾಯಸ್ವಾಮಿ, ನಾರಾಯಣಸ್ವಾಮಿ, ಯೋಗನೃಸಿಂಹಸ್ವಾಮಿ ಮುಂತಾದ ದೇವರ ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡಿಸಿ, ಪೂಜೋಪಕರಣ ಸೇವೋಪಕರಣಗಳಿಗೆ ಚಿನ್ನ ಬೆಳ್ಳಿಗಳಿಂದ ಮಾಡಿದ ತಟ್ಟೆ ಬಟ್ಟಲು ಅರ್ಘ್ಯಪಾತ್ರೆ ಕೊಪ್ಪರಿಗೆ ಬಿಂದಿಗೆ ದೀಪಸ್ತಂಭ ದೀವಟಿಗೆ ಮುಂತಾದ ಬಗೆಬಗೆಯಾದ ಅನೇಕ ಪಾತ್ರೆಗಳನ್ನೂ, ಚಿನ್ನದ ಸರದೊಡನೆ ಕೂಡಿದ ನವರತ್ನಮಯವಾದ ಗಂಡಭೇರುಂಡ ಪದಕ ಶಂಖ ಚಕ್ರ ಪಚ್ಚೆ ಬಾಹುಪುರಿ ಜವಾಹಿರು ಪದಕದೊಡನೆ ಕೂಡಿದ ೫ ಎಳೇ ಮುತ್ತಿನಕಂಠಿ ಮೊದಲಾದ ನಾನಾವಿಧ ಮುಕ್ತಾಹಾರಗಳನ್ನೂ, ಹಸ್ತಾಭರಣ ಪಾದಾಭರಣ ಕಂಠಾಭರಣ ನಾಸಿಕಾಭರಣ ಕಿರೀಟ ಮುಂತಾದ ಚಿನ್ನ ಬೆಳ್ಳಿ ಮುತ್ತುಗಳಿಂದಲೂ ರತ್ನಗಳಿಂದಲೂ ಮಾಡಿಸಿದ ಅನೇಕ ಆಭರಣಗಳಲ್ಲದೆ ಅಮೂಲ್ಯವಾದ ನಾನಾ ವಿಧವಾದ ಪೀತಾಂಬರಾದಿ ವಸ್ತ್ರಗಳನ್ನೂ ಒಪ್ಪಿಸಿದರು; ರಾಜಮುಡಿಗೆಸರಿಯಾದ ಅಮೂಲ್ಯವಾದ ರತ್ನಗಳಿಂದ ಅತ್ಯಂತ ಶೋಭಾಯಮಾನವಾಗಿರುವ ಕೃಷ್ಣರಾಜಮುಡಿ ಎಂಬ ಕಿರೀಟವನ್ನು ನೂತನವಾಗಿ ಮಾಡಿಸಿ, ಶಾ ೧೭೫೯ನೇ ಈಶ್ವರಸಂವತ್ಸರದ ಆಷಾಢ ಬಹುಳ ೬ ಶುಕ್ರವಾರದಲ್ಲಿ ಚಲುವರಾಯಸ್ವಾಮಿಗೆ ಒಪ್ಪಿಸಿ, ಜಾಸಾವರ್ಧಂತೀ ಮಹೋತ್ಸವದಲ್ಲಿ ಈ ದೇವರಿಗೆ ಕಲ್ಯಾಣಮಹೋತ್ಸವ ಪೂರ್ವಕ ಕೃಷ್ಣರಾಜತಿರುನಾಳೆಂಬ ರಥೋತ್ಸವವು ನಡೆಯುವಂತೆ ಬೊಂಬೇರಥವನ್ನು ಮಾಡಿಸಿ ಒಪ್ಪಿಸಿ, ಈ ರಥೋತ್ಸವದಲ್ಲಿ ಕೃಷ್ಣರಾಜಮುಡಿಯನ್ನು ಸಮರ್ಪಣೆ ಮಾಡಿ, ಈ ಉತ್ಸವ ಬೆಳೆದ ಮೇಲೆ, ವೈರಮುಡಿ ರಾಜಮುಡಿಗಳಂತೆ ಈ ಕೃಷ್ಣರಾಜಮುಡಿಯು ಮೊಹರಾಗಿ ಮಹೀಶೂರ ಅರಮನೇ ಬೊಕ್ಕಸಕ್ಕೆ ತಂದು ಇರಿಸುವಂತೆ ನಿಬಂಧನೆ ಮಾಡಿ, ಈ ಉತ್ಸವಾರ್ಥವಾಗಿ ಬರುವ ತಮ್ಮ ಗುರು

ಗಳಾದ ಶ್ರೀಪರಕಾಲಸ್ವಾಮಿಗಳಿಗೂ ಕೆಲವು ಆಚಾರ್ಯಪುರುಷರಿಗೂ
ಮರ್ಯಾದೆಗಳು ನಡೆಯುವಂತೆ ಕಟ್ಟಳೆಮಾಡಿಸಿದ್ದರು.

ಧೊರೆಗಳು, ಮೇಲುಕೋಟೆಯಲ್ಲಿ ಶ್ರೀಮತಸ್ಥ ಬ್ರಾಹ್ಮಣರ ಮನೆಗ
ಳಲ್ಲಿರುವ ಸ್ತ್ರೀಬಾಲವೃದ್ಧರು ಮುಂತಾದ ಶಿಷ್ಟ ಜನಗಳಿಗೂ ಜನ ೧ಕ್ಕೆ
ಪಾವು ಸೇರು ಅಕ್ಕೀ ಮೇರೆಗೆ ಪ್ರತಿದಿನದಲ್ಲಿಯೂ ಕೊಡುವಂತೆ 'ದಾಜಾ
ಕಟ್ಟಳೆ' ಎಂಬದಾಗಿ ನಿಬಂಧನೆ ಮಾಡಿದರು; ನಿತ್ಯೋತ್ಸವ ರಥೋತ್ಸವ
ವೈರಮುಡಿ ಬ್ರಹ್ಮೋತ್ಸವ ಕೃಷ್ಣರಾಜತಿರುನಾಳು ಮುಂತಾದ ಅನೇಕ
ಉತ್ಸವಗಳು ನಡೆಯುವದಕ್ಕೂ, ನಿತ್ಯಕಟ್ಟಳೆ ಪಡಿತರ ದೀಪಾರಾಧನೆ
ಉಪಾಧಿ ಬ್ರಾಹ್ಮಣರು ಮುಂತಾದ ವಿಶಿಷ್ಟ ಜನಗಳ ಜೀವನ ನಡೆಯುವ
ದಕ್ಕೂ ಸಹ ಭಾರೀತಸ್ತೀಕನ್ನು ಉಂಟುಮಾಡಿದರು; ಕಲ್ಯಾಣಿ ಎಂಬ
ತೀರ್ಥದ ಸಮೀಪದಲ್ಲಿ ನೂತನವಾಗಿ ವಿಸ್ತಾರವಾಗಿ ಭುವನೇಶ್ವರಿ ಮಂಟಪ
ವನ್ನು ಕಟ್ಟಿಸಿ, ಈ ಮಂಟಪದಲ್ಲಿ ಕೃಷ್ಣರಾಜತಿರುನಾಳಿನಲ್ಲಿ ಮಂಟಪೋತ್ಸ
ವವಾಗುವಂತೆ ಕಟ್ಟಳೆ ಮಾಡಿಸಿದರು; ಇದಲ್ಲದೆ ನಾನಾವಿಧವಾದ ಬಣ್ಣದ
ವಾಹನಗಳನ್ನು ಮಾಡಿಸಿ, ಉತ್ಸವದ ಅಮ್ಮನವರಿಗೆ ಸುವರ್ಣದ ಕಂಠಾ
ಭರಣ ಮುಂತಾದ ಆಭರಣಗಳನ್ನೂ, ಬೆಟ್ಟದ ಮೇಲಿರುವ ಯೋಗನೃಸಿಂಹ
ಸ್ವಾಮಿಯವರಿಗೆ ಚಿನ್ನದ ಕಿರೀಟವನ್ನೂ ಒಪ್ಪಿಸಿ, ಈ ದೇವತಾ ಸೇವೆಯು
ಸಾರೋದ್ಧಾರವಾಗಿ ನಡೆಯುವಂತೆ ಕಟ್ಟಳೆ ಮಾಡಿಸಿ, ಇನ್ನೂ ಅನೇಕವಾಗಿ
ಸೇವೆಯನ್ನು ಮಾಡಿ ಇರುತ್ತಾರೆ; ಖಾಸಾ ಸವಾರಿಯು ದೇವರ ದರ್ಶನಕ್ಕೆ
ಚಿತ್ತೈಸಿದಾಗ ವಾಸಮಾಡುವದಕ್ಕೆ ಇಲ್ಲಿ ಅರಮನೆಯನ್ನು ನಿರ್ಮಿಸಿ
ಇರುತ್ತಾರೆ.

ತಿರುಪತಿ.—ಕೃಷ್ಣರಾಜ ಒಡೆಯರವರು, ಪೂರ್ವದಲ್ಲಿ ರಾಜಒಡೆ
ಯರವರು ಒಪ್ಪಿಸಿಯಿದ್ದ ಮುತ್ತಿನ ಛತ್ರಿಯೂ ಚಿಕ್ಕದೇವರಾಜ ಒಡೆಯ
ರವರು ಒಪ್ಪಿಸಿಯಿದ್ದ ಎರಡು ಚಿನ್ನದ ಛತ್ರಿಗಳೂ ಶಿಥಿಲವಾಗಿ ದೇವರ ಸೇವೆಗೆ
ಉಪಯೋಗಿಸದೆ ಇರುವ ವರ್ತಮಾನವನ್ನು ಪರಾಂಬರಿಸಿ, ಬಹು ದ್ರವ್ಯ
ವನ್ನು ಮುಟ್ಟಿಸಿ ಅವುಗಳನ್ನು ಜೀರ್ಣೋದ್ಧಾರ ಮಾಡಿಸಿ ಒಪ್ಪಿಸಿದರು;
ತಮ್ಮ ಸೇವಾರ್ಥವಾಗಿ ಅನೇಕ ಚಿನ್ನ ಬೆಳ್ಳೀ ಆಭರಣಗಳನ್ನೂ ಪೂಜೋ
ಪಕರಣ ಸೇವೋಪಕರಣ ಪಾತ್ರೆಗಳನ್ನೂ, ಪೀತಾಂಬರಾದಿ ವಸ್ತ್ರಗಳನ್ನೂ

ಒಪ್ಪಿಸಿದರು ; ಭಾರಿ ಎರಡು ಚಿನ್ನದ ಗಂಗಾಳಗಳನ್ನು ಮಾಡಿಸಿ, ಎರಡು ಗಂಗಾಳಗಳಲ್ಲಿಯೂ ತುಂಬ ಪೊಂಗಲು ನೈವೇದ್ಯವನ್ನು ಮಾಡಿ, ಈ ಪ್ರಸಾದವು ಪರಸ್ಥಳದಿಂದ ಬಂದ ಬ್ರಾಹ್ಮಣರಿಗೆ ಪ್ರತಿನಿತ್ಯದಲ್ಲಿಯೂ ಕೊಡುವಂತೆಯೂ, ಪ್ರಾತಃಕಾಲದಲ್ಲಿ ಪುಣುಗು ಕಸ್ತೂರಿ ಪಚ್ಚಕರ್ಪೂರ ಕೇಸರಿ ಮುಂತಾದ ಪರಿಮಳದ್ರವ್ಯಗಳಿಂದ ಯುಕ್ತವಾದ ಎರಡು ದೊಡ್ಡ ಗಂಧದ ಉಂಡೆಗಳನ್ನು ಎರಡು ಪಾದಕ್ಕೂ ಸಮರ್ಪಿಸುವಂತೆಯೂ, ನೂರೆಹಾಲು ಬೆಣ್ಣೆ ಸಕ್ಕರೆ ದ್ರಾಕ್ಷಿ ಖರ್ಜೂರ ಮುಂತಾದ ಪದಾರ್ಥಗಳು ನಿವೇದನವಾಗುವಂತೆಯೂ ನಿಬಂಧನೆ ಮಾಡಿದರು ; ಈ ಬೆಟ್ಟದ ಮೇಲೆ ಬಂದ ವಿಶಿಷ್ಟ ಬ್ರಾಹ್ಮಣರಿಗೂ ಸರ್ವಕಾಲದಲ್ಲಿಯೂ ಮೃಷ್ಟಾನ್ನ ಭೋಜನ ನಡೆಯುವಂತೆ ಅನ್ನ ಛತ್ರವನ್ನು ಹಾಕಿಸಿ, ಈ ಛತ್ರದಲ್ಲಿ ಬಡವರಾದ ಬ್ರಾಹ್ಮಣರು ಬಂದು ಮುಂಜಿ ಮದುವೆ ಮಾಡಿಸಬೇಕೆಂದು ಕೇಳಿಕೊಂಡರೆ, ಧರ್ಮೋಪನಯನ ವಿವಾಹಗಳನ್ನು ಮಾಡುವಂತೆ ನೇಮಿಸಿದರು ; ಹೌದಾಸಹಿತವಾದ ಆನೆ, ಕಲಾಪತ್ತು ಜೀನಿನಿಂದ ಅಲಂಕೃತವಾದ ಕುದುರೆ, ಛತ್ರ, ಚಾಮರ ಚೌರಿ ಮುಂತಾದ ಅನೇಕ ಸೇವೋಪಕರಣಗಳನ್ನು ಒಪ್ಪಿಸಿ, ಬ್ರಹ್ಮೋತ್ಸವ ಪ್ರತಿ ಶ್ರವಣನಕ್ಷತ್ರೋತ್ಸವ ಮುಂತಾದ ಉತ್ಸವಕಾಲಗಳಲ್ಲಿ ಈ ಉಪಚಾರ ಸೇವೆಯನ್ನು ಮಾಡುವ ಜನಗಳ ಜೀವನ ನಡೆಯುವದಕ್ಕೆ ಭಾರೀ ತಸ್ತೀಕನ್ನು ಉಂಟುಮಾಡಿ, ಈ ತಸ್ತೀಕಿನ ಹಣವನ್ನು ಮುಳುಬಾಗಿಲು ತಾಲ್ಲೂಕಿನಿಂದ ಕೊಡುವಂತೆ ನಿಬಂಧನೆ ಮಾಡಿ, ದೇವತಾಸೇವೆಯು ಸಾರೋದ್ಧಾರವಾಗಿ ನಡೆಯುವಂತೆ ಕಟ್ಟಲೆ ಮಾಡಿ, ಇನ್ನೂ ಅನೇಕವಾಗಿ ಸೇವೆಯನ್ನು ಮಾಡಿ ಇರುತ್ತಾರೆ.

ಶಿವಗಂಗೆ.—ಮುಮ್ಮಡಿ ಕೃಷ್ಣರಾಜ ಒಡೆಯರವರು ಶಾ॥ ೧೭೫೧ನೇ ಬಹುಧಾನ್ಯ ಸಂವತ್ಸರದ ಆಷಾಢ ಬಹುಳ ೫ಯಲ್ಲಿ ಶಿವಗಂಗೆಗೆ ಚಿತ್ತೈಸಿ, ಗಂಗಾಧರೇಶ್ವರಸ್ವಾಮಿ ಹೊನ್ನಾದೇವಿಯರ ದರ್ಶನವನ್ನು ಮಾಡಿ, ದೇವರಿಗೆ ಅನೇಕ ವಸ್ತ್ರಾಭರಣ ಪಾತ್ರೆಗಳನ್ನು ಒಪ್ಪಿಸಿ, ಈ ಬೆಟ್ಟದ ಕಮರಿಯ ಬಳಿಯಲ್ಲಿರುವ ಕೋಡುಗಲ್ಲಿನ ಕೆಳಗೆ ಪೂರ್ವದಲ್ಲಿ ಇದ್ದ ತೊಟ್ಟಿಯು ಬಿದ್ದುಹೋಗಿಯಿದ್ದ ವರ್ತಮಾನವನ್ನು ತಿಳಿದು, ನೂತನವಾಗಿ ೫ ಹೆಚ್ಚೇ

ಘಂಟೆಗಳನ್ನು ಮಾಡಿಸಿ, ಅವುಗಳನ್ನು ನಿರಾಲಂಬ ಪ್ರದೇಶದ ಕೋಡಗಳ್ಲಿಗೆ ಅತಿಚಮತ್ಕಾರವಾಗಿ ಹಾಕಿಸಿದರು.

ಇತರ ದೇವಸ್ಥಾನಗಳಿಗೆ ಸೇವಾರ್ಥಗಳು.—ಮುಮ್ಮಡಿ ಕೃಷ್ಣರಾಜ ಒಡೆಯರವರು ನೋಸಲೇ ಹೊನ್ನಾದೇವಿ, ಮಾಗೂರು ಶಿಬ್ಬಾಬದೇವಿ, ಮುಡುಕತೊರೆ ಮಲ್ಲಿಕಾರ್ಜುನಸ್ವಾಮಿ, ಭ್ರಮರಾಂಬಿಕೆ, ತಿರುಮಕೂಡಲು ಅಗಸ್ತ್ಯೇಶ್ವರ, ಚಾಮುಂಡೇಶ್ವರಿ, ಬಿಳಿಗಿರಿ ರಂಗಸ್ವಾಮಿ, ಹಿಮವದ್ಗೋಪಾಲಸ್ವಾಮಿ, ತಲಕಾಡು ವೈದ್ಯೇಶ್ವರ ಮೊದಲಾದ ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡಿಸಿ, ದೇವರ ದರ್ಶನಕ್ಕೆ ಚಿತ್ತೈಸಿದ ವೇಳೆಯಲ್ಲಿ ಆಯಾ ದೇವಸ್ಥಾನಗಳ ವಿಧವರಿತು ಅನೇಕ ವಸ್ತ್ರಾಭರಣಗಳನ್ನು ಸಮರ್ಪಿಸಿದ್ದಲ್ಲದೆ, ೧೦೫ ಗುಡಿಗಳಲ್ಲಿ ಇರತಕ್ಕ ಶಿವ ವಿಷ್ಣು ಗಣಪತಿ ಮಹಾದೇಶ್ವರ ಬಸವೇಶ್ವರ ಮೊದಲಾದ ದೇವರಿಗೂ, ಮಾರಿ ಮುಂತಾದ ಶಕ್ತಿ ದೇವತೆಗಳಿಗೂ, ಆಯಾ ದೇವಸ್ಥಾನಗಳ ತಾರತಮ್ಯವಿದ್ದಂತೆ ತಸ್ತೀಕನ್ನು ಉಂಟುಮಾಡಿ, ಪೂಜೆಯೂ ರಥೋತ್ಸವಾದಿ ಉತ್ಸವಗಳೂ ನಡೆಯುವಂತೆ ಕಟ್ಟಳೆ ಮಾಡಿಸಿದರು; ಕಂಚೀ ವರದರಾಜಸ್ವಾಮಿಗೆ ಗರುಡೋತ್ಸವ ನಡೆಯುವದಕ್ಕೂ, ಶ್ರೀರಂಗನಾಥಸ್ವಾಮಿಗೆ ನಂದಾದೀಪ ಸಹಸ್ರನಾಮಾರ್ಚನೆ ಯಜ್ಞೋಪವೀತ ಮುಂತಾದ ಸೇವೆಗಳು ಪ್ರತಿದಿನವೂ ನಡೆಯುವದಕ್ಕೂ, ತಿರಚನಗೂಡು ಅರ್ಧನಾರೀಶ್ವರಸ್ವಾಮಿಗೆ ಸೇವೆ ನಡೆಯುವದಕ್ಕೂ ತಸ್ತೀಕನ್ನು ಉಂಟುಮಾಡಿದರು; ಮಧುರಾ ಸಮೀಪದಲ್ಲಿ ವೃಷಭಾದ್ರಿಯಲ್ಲಿರುವ ಸುಂದರಬಾಹು ದೇವರಿಗೆ ಮುಕ್ತಾಹಾರ ಮೊದಲಾದ ಆಭರಣಗಳನ್ನೂ, ದಿವ್ಯವಸ್ತ್ರಗಳನ್ನೂ ಸಮರ್ಪಿಸಿದರು; ಶ್ರೀಶೈಲದಲ್ಲಿರುವ ಮಲ್ಲಿಕಾರ್ಜುನಸ್ವಾಮಿಗೆ ರುದ್ರಾಕ್ಷಿಮಂಟಪವನ್ನೂ ಬೆಳ್ಳೀ ಕಂಬಿಯನ್ನೂ ಒಪ್ಪಿಸಿದರು: ಕಂಚೀ ಏಕಾಂಬರೇಶ್ವರಸ್ವಾಮಿಯ ದೇವಸ್ಥಾನಕ್ಕೆ ೧ ಆನೆಯನ್ನು ಕೊಡಿಸಿ, ಈ ಪೂರ್ವೋಕ್ತ ಪ್ರಕಾರವಾಗಿ ಅನೇಕ ದೇವತಾ ಸೇವೆಗಳನ್ನು ಮಾಡಿ ಇರುತ್ತಾರೆ.

ಸುಬ್ರಹ್ಮಣ್ಯದ ಸವಾರಿ.—ಆಳಿದ ಮಹಾಸ್ವಾಮಿಯವರಾದ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರು ತಮ್ಮ ಧರ್ಮಪತ್ನಿಯರಿಂದಲೂ

ಸಾಮಾಜಿಕರಿಂದಲೂ, ಅರಮನೇ ಇಲಾಖೇ ಜನಗಳಿಂದಲೂ, ೧೮ ಕಚೇರಿ ಜನಗಳಿಂದಲೂ, ಸೇನಾ ಜನಗಳಿಂದಲೂ ಸಮೇತರಾಗಿ, ಅನೇಕ ವೈಭವ ಗಳಿಂದ ಶಾ॥ ೧೭೪೨ನೇ ವಿಕ್ರಮ ಸಂವತ್ಸರದ ಮಾರ್ಗಶಿರ ಬಹುಳ ೮ ಬುಧವಾರದಲ್ಲಿ ಮಹಿಶೂರ ನಗರವನ್ನು ಬಿಟ್ಟು, ಯಡತೊರೆ, ಚುಂಚನಕಟ್ಟೆ, ರಾಮನಾಥಪುರ, ಅರಲಗೂಡು, ಕೆಂಚಮ್ಮನಹೊಸ ಕೋಟೆ, ಇವುಗಳ ಮಾರ್ಗವಾಗಿ ಹೊರಟು, ಆ ಪುಷ್ಯ ಶುದ್ಧ ೨ ಶನಿವಾರ ದಲ್ಲಿ ಘಟ್ಟ ಯಿಳಿದು, ಬಿಸಲೇ ಘಾಟಿಗೆ ಚಿತ್ತಯಿಸಿ, ಅಲ್ಲಿ ಐಗೂರು ಶ್ರೀನಿ ವಾಸಯ್ಯನು ಮಾಡಿಸಿದ ಆರೋಗಣೆಯನ್ನು ಒಪ್ಪಿಸಿಕೊಂಡು, ಆ ಶುದ್ಧ ೫ ಸೋಮವಾರದ ದಿನ ಸುಬ್ರಹ್ಮಣ್ಯಕ್ಕೆ ಚಿತ್ತಯಿಸಿದರು ; ಮಾರನೇ ದಿನ ಕೊಮಾರಧಾರೇ ತೀರ್ಥದಲ್ಲಿ ಸ್ನಾನಮಾಡಿ, ದೇವರ ದರ್ಶನವನ್ನು ಮಾಡಿದ ನಂತರ, ಉತ್ಸವಾರ್ಥವಾಗಿ ಚಿನ್ನದ ಸುಬ್ರಹ್ಮಣ್ಯಸ್ವಾಮಿಯನ್ನು ಒಪ್ಪಿಸಿ, ನೂತನವಾಗಿ ಬೊಂಬೇರಥವನ್ನು ಮಾಡಿಸಿ, ಈ ರಥದಮೇಲೆ ಮಾರ್ಗಶಿರ ಪುಷ್ಯ ಮಾಸ ಮೊದಲಾದ ರಥೋತ್ಸವ ಕಾಲಗಳಲ್ಲಿ ಉತ್ಸವ ನಡೆಯು ವಂತೆ ನಿಬಂಧನೆ ಮಾಡಿದರು ; ಈ ಮಾರ್ಗಶಿರ ಮಾಸ ರಥೋತ್ಸವ ಕಾಲ ದಲ್ಲಿ ೧೨ ಸಾವಿರ ಬ್ರಾಹ್ಮಣರಿಗೆ ಸಂತರ್ಪಣೆಯೂ ಪ್ರತಿ ದಿವಸದಲ್ಲಿಯೂ ೧೦೦ ಜನ ಬ್ರಾಹ್ಮಣರಿಗೆ ಭೋಜನವೂ ನಡೆಯುವದಕ್ಕೆ, ಮಂಜರಾಬಾದು ತಾಲ್ಲೂಕಿನಿಂದ ಹಣವನ್ನು ಕೊಡುವಂತೆ ತಸ್ತೀಕನ್ನು ಉಂಟುಮಾಡಿದರು ; ಪೂಜೋಪಕರಣ ಸೇವೋಪಕರಣಗಳಿಗೆ ಚಿನ್ನ ಬೆಳ್ಳಿ ಜವಾಹಿರು ಮೊದ ಲಾದ ಆಭರಣಗಳನ್ನೂ ಪಾತ್ರೆಗಳನ್ನೂ ಒಪ್ಪಿಸಿದರು.

ಅನಂತರದಲ್ಲಿ ಕುಂಪಣೀ ಬಹದರವರಾದ, ರೆಸಿಡೆಂಟರು ಕಲೆಕ್ಟರವರು ಮೊದಲಾದ ಸರದಾರರು ಧೊರೆಗಳಿಗೆ ಇಸ್ತಕಬಾಲಬರಲು, ಧೊರೆಗಳು ಅವ ರೆಲ್ಲರಿಗೂ ವಸ್ತ್ರಾಭರಣಗಳನ್ನು ಕೊಟ್ಟು ಮೇಜು ಮುಂತಾದ್ದು ಮಾಡಿಸಿ, ಕುಂಪಣೀ ಬಹದರವರ ಕಡೆಯಿಂದ ತಾವು ಅನೇಕ ಸನ್ಮಾನಗಳನ್ನು ಪಡೆದ ಬಳಿಕ, ಈ ಪುಷ್ಯ ಶುದ್ಧ ೧೩ ಮಂಗಳವಾರದ ದಿನ ಅಲ್ಲಿಂದ ಹೊರಟು, ಕಡಬ, ನ್ಯಾರಂಗಿ, ಉಪ್ಪಿನಅಂಗಡಿ, ಸಪಾಡಿ, ಬಂಟವಾಳ, ಫರಂಗೀಪೇಟೇ ಮಾರ್ಗವಾಗಿ ಹೊರಟು, ಆ ಬಹುಳ ಸೋಮವಾರದಲ್ಲಿ ಕೊಡಿಯಾಲಕ್ಕೆ

ಚಿತ್ತೈಯಿಸಿ, ನೇತ್ರಾವತೀ ಫಲ್ಗುನೀ ನದಿಗಳಿಂದ ಸಂಗಮವಾಗಿರುವ ಪಶ್ಚಿಮಸಮುದ್ರ ಸ್ನಾನವನ್ನು ಮಾಡಿ, ಸಮುದ್ರರಾಜನನ್ನು ಅನೇಕ ವಸ್ತ್ರಾಭರಣ ರತ್ನಕಾಣಿಕೆಗಳಿಂದ ಪೂಜಿಸಿ ಅಲ್ಲಿ ಬಂದು ಸಪ್ತಕವಿದ್ದರು; ಆಬಳಿಕ ಅಲ್ಲಿಂದ ಹೊರಟು, ಗುರುಪುರ, ಮೂಡಬಿದರೆ, ಧರ್ಮಸ್ಥಳ, ಕಾರಕಳ, ಹಿರಡಕಗಳ ಮಾರ್ಗವಾಗಿ ಈ ಬಹುಳ ೩೦ ಶುಕ್ರವಾರದಲ್ಲಿ ಉಡುಪಿಗೆ ಚಿತ್ತೈಯಿಸಿ, ಅಲ್ಲಿ ಸಮುದ್ರಸ್ನಾನವಾದನಂತರ, ರಜತಪೀಠ ಪುರದಲ್ಲಿ (ಉಡುಪಿ) ರುವ ಶ್ರೀಕೃಷ್ಣದೇವರ ದರ್ಶನವನ್ನು ಮಾಡಿ, ಅನೇಕ ರತ್ನಗಳಿಂದೊಡಗೂಡಿರುವ ಮುಕ್ತಾಹಾರಗಳನ್ನೂ, ರತ್ನದ ಕಿರೀಟ ಚಿನ್ನದ ಕವಚ ಮುಂತಾದ ಅನೇಕ ಅಭರಣಗಳನ್ನೂ, ವಸ್ತ್ರಗಳನ್ನೂ, ಚಿನ್ನ ಬೆಳ್ಳಿಗಳ ಪೂಜೋಪಕರಣ ಸೇವೋಪಕರಣಗಳನ್ನೂ ಒಪ್ಪಿಸಿ, ಪ್ರತಿದಿವಸವಲ್ಲಿಯೂ ನಡೆಯತಕ್ಕ ದೇವತಾಸೇವೆ ಸಂತರ್ಪಣೆ ರಥೋತ್ಸವ ಮೊದಲಾದ ಉತ್ಸವಗಳು ವಿಶೇಷವಾಗಿ ನಡೆಯುವದಕ್ಕೆ ಭಾರೀ ತಸ್ತೀಕನ್ನು ಉಂಟುಮಾಡಿ, ಈ ಹಣವನ್ನು ನಗರದ ಫೌಜು ಕಚೇರಿಯಿಂದ ಕೊಡುವಂತೆ ಕಟ್ಟಳೆಮಾಡಿಸಿದರು; ಮಾಘ ಶುದ್ಧ ೪ ಮಂಗಳವಾರದಲ್ಲಿ ಉಡುಪಿಯಿಂದ ಹೊರಟು, ಬ್ರಹ್ಮಾವಾರ, ಹಿರೀದೇವತೇಗುಡಿ, ಕುಂದಾಪುರ, ಕೊಡಲೂರು, ಸಿದ್ದಾಪುರ, ಹೊಸಅಂಗಡಿ, ಹೈದರಘಟ್ಟಗಳ ಮಾರ್ಗವಾಗಿ ಈ ಶುದ್ಧ ೧೩ ಬುಧವಾರದದಿನ ನಗರಕ್ಕೆ ಚಿತ್ತೈಯಿಸಿ, ಅಲ್ಲಿನ ಅರಮನೇ ದಿವಾಣಾನೆಯ ಮುಂದುಗಡೆ ಒಟ್ಟೇಕಾಳಗ ಮುಂತಾದ ಉತ್ಸವಗಳನ್ನು ನವರಾತ್ರಿಯ ಓಲಗದಂತೆ ಮಾಡಿಸಿದರು; ಅನಂತರ ಆ ಬಹುಳ ೧ದಲ್ಲಿ ಅಲ್ಲಿಂದ ಹೊರಟು ಪತ್ತೇಪೇಟೆ, ಮಾವಿನಹೊಳೆ, ಅನಂತಪುರ, ಕುಂಶಿ, ಮುದ್ದನಕೊಪ್ಪಲು, ಶಿವಮೊಗ್ಗಾ, ಕೂಡ್ಲಿ, ಬೆಂಕೀಪುರ, ತರೀಕೆರೆ, ಕಡೂರು, ಸಕ್ಕರೇಪಟ್ಟಣಗಳ ಮಾರ್ಗವಾಗಿ ಆ ಬಹುಳ ೩೦ ಭಾನುವಾರಕ್ಕೆ ಸೂರ್ಯಗ್ರಹಣವಾದದರಿಂದ ಚಂದ್ರದ್ರೋಣಪರ್ವತಕ್ಕೆ ಚಿತ್ತೈಯಿಸಿ, ಅದರಲ್ಲಿರುವ ದತ್ತಾತ್ರೇಯ ಪೀಠಕ್ಕೆ ಕಾಣಿಕೆ ಬೆಳ್ಳಿದೀಪಸ್ತಂಭ ಆನೆ ಮುಂತಾದ ಪದಾರ್ಥಗಳನ್ನೂ ವಸ್ತ್ರಾಭರಣಗಳನ್ನೂ ಕೊಟ್ಟು, ಫಾಲ್ಗುನ ಶುದ್ಧ ೧ ಸೋಮವಾರದವರಿಗೆ ಅಲ್ಲಿಯೇ ಇದ್ದರು; ಆ ಮಾರನೇದಿನ ಅಲ್ಲಿಂದ ಹೊರಟು ಚಿಕ್ಕಮಗಳೂರು, ಬೇಲೂರು, ಮಾದೇನಹಳ್ಳಿ, ಹಾಸನ, ಗ್ರಾಮ, ಚನ್ನರಾಯ

ಪಟ್ಟಣ, ಶ್ರವಣಬೆಳಗುಳ, ಮೇಲುಕೋಟೆ, ಬಾಳೇಅರಸಿನವರ ಸತ್ರ, ಹರಸಕುಪ್ಪೆಗಳ ಮಾರ್ಗವಾಗಿ ಫಾಲ್ಗುನ ಶುದ್ಧ ೧೫ ಭಾನುವಾರಕ್ಕೆ ಶ್ರೀರಂಗ ಪಟ್ಟಣಕ್ಕೆ ಚಿತ್ತಯಿಸಿದರು.

ಮುಮ್ಮಡಿಕೃಷ್ಣರಾಜ ಒಡೆಯರವರು ಈ ರೀತಿಯಾಗಿ ಅನೇಕ ಸೀಮೆಗಳನ್ನು ಸಂಚಾರಮಾಡಿ, ಬರುವ ಮಾರ್ಗದಲ್ಲಿ ಆಯಾಸ್ಥಳಗಳಲ್ಲಿ ರುವ ದೇವತಾ ದರ್ಶನವನ್ನು ಮಾಡಿಕೊಂಡು, ಆಯಾ ದೇವಸ್ಥಾನಗಳ ತಾರತಮ್ಯವಿದ್ದಂತೆ ಸೇವಾರ್ಥಗಳನ್ನು ನಡಿಸಿ, ಮಾರ್ಗದಲ್ಲಿ ಜನರು ತಂದು ಒಪ್ಪಿಸಿದ ಕಾಣಿಕೆ ಕಪ್ಪಗಳನ್ನು ಸ್ವೀಕರಿಸಿ, ದೀನಜನರು ಶೂರಜನರು ಯಾಚಕರು ಮುಂತಾದವರಿಗೆಲ್ಲಾ ಅವರವರ ಮರ್ಯಾದಾನುಸಾರವಾಗಿ ವಸ್ತ್ರಾ ಭರಣ ದ್ರವ್ಯಗಳನ್ನು ಕೊಟ್ಟು, ಶಾ॥ ೧೭೪೨ನೇ ವಿಕ್ರಮ ಸಂವತ್ಸರದ ಫಾಲ್ಗುನ ಬಹುಳ ೧ ಸೋಮವಾರದಲ್ಲಿ ಅಂಬಾರೀಮೇಲೆ ಮುಹೂರ್ತ ಮಾಡಿಕೊಂಡು, ಅನೇಕ ವೈಭವಗಳಿಂದ ಅಭಿಜಿನ್ಮುಹೂರ್ತದಲ್ಲಿ ಮಹೀ ಶೂರಿಗೆ ಚಿತ್ತಯಿಸಿ, ಅರಮನೇ ಬಾಲಾಖಾನೆಯಲ್ಲಿ ದರಬಾರುಮಾಡಿ, ಸರ್ವರೂ ನಜರು ಮುಜರೆಗಳನ್ನು ಮಾಡಿದ ಮೇಲೆ, ಅವರಿಗೆ ಹೂವಿನ ಹಾರ ವೀಳ್ಯಗಳನ್ನು ಅಪ್ಪಣೆ ದಯಪಾಲಿಸಿದರು. ಹೀಗೆ ಸುಬ್ರಹ್ಮಣ್ಯದ ವಾರಿಯು ನಡೆದದ್ದು ೨ ತಿಂಗಳೂ ೨೩ ದಿನ.

ಅಗ್ರಹಾರಗಳನ್ನು ಮಾಡಿ ಇರುವದು.—ಮುಮ್ಮಡಿ ಕೃಷ್ಣರಾಜಒಡೆ ಯರವರು ಸ್ವನಾಮಾಂಕಿತವಾಗಿಯೂ, ಮಹಾಮಾತುಶ್ರೀಯವರ ನಾಮಾಂ ಕಿತವಾಗಿಯೂ, ತಮ್ಮ ಪತ್ನಿಯರ ನಾಮಾಂಕಿತವಾಗಿಯೂ ಅಗ್ರಹಾರ ಗಳನ್ನು ಮಾಡಿಸಿ, ಮನೆಗಳನ್ನು ಕಟ್ಟಿಸಿ, ದೇವಾಲಯ ತಟಾಕಾರಾಮ ಸರೋವರಗಳನ್ನು ನಿರ್ಮಿಸಿ, ಅನೇಕ ಫಲಸಮೃದ್ಧಿಯಾಗಿರುವ ಗ್ರಾಮಗಳ ಲ್ಲಿರುವ ಕಟ್ಟೇ ಕ್ಕಾಲುವೆಸಹಿತವಾಗಿ ಧಾರೆಯನ್ನು ಎರೆದು ಕೊಟ್ಟಿರುವ ವಿವರ ಏನೆಂದರೆ:—

ಕೃಷ್ಣರಾಜೇಂದ್ರಪುರ ಅಗ್ರಹಾರ.—ಮುಮ್ಮಡಿ ಕೃಷ್ಣರಾಜ ಒಡೆಯ ರವರು ಶಾ॥ ೧೭೪೧ನೇ ಪ್ರಮಾಥಿ ಸಂವತ್ಸರದ ಶ್ರಾವಣ ಶುದ್ಧ ೧೦ ಭಾನುವಾರ ದಲ್ಲಿ ತ್ರಿಮತಸ್ಥ ಬ್ರಾಹ್ಮಣರ ದಂಪತಿಗಳನ್ನೂ ವಸ್ತ್ರಗಳಿಂದಲೂ ಚಿನ್ನಬೆಳ್ಳಿ

ಗಳಿಂದ ಮಾಡಿದ ಆಭರಣಗಳಿಂದಲೂ ಅಲಂಕರಿಸಿ, ಪರಾಪೇಕ್ಷೆಯಿಲ್ಲದಂತೆ, ಗೃಹೋಪಕರಣ ಭೋಗೋಪಕರಣ ವಸ್ತ್ರಪಾತ್ರೆಗಳನ್ನೂ, ಮುಂದಿನ ಫಲ ಬರುವವರಿಗೆ ಸೋಪಸ್ಕರ ಗೋಮಹಿಷಿ ಮುಂತಾದವುಗಳನ್ನೂ ಕೊಟ್ಟರು; ಆದಿನ ಧಾರೆಯೆರೆದುಕೊಟ್ಟ ೭೦ ವೃತ್ತಿ, ಮತ್ತು ೪ ದೇವರ ವೃತ್ತಿ, ಅಂತು ೭೪ ವೃತ್ತಿಗಳಿಗೂ, ನಂಜನಗೂಡು ಸಮೀಪದ ಕಪಿಲಾನದೀ ತೀರದಲ್ಲಿ ಕತ್ತವಾಡೀಪುರವೆಂಬ ಗ್ರಾಮಕ್ಕೆ ಉತ್ತರದಲ್ಲಿ ೭೪ ಮನೆಗಳನ್ನೂ, ಗೋಪಾಲಕೃಷ್ಣಸ್ವಾಮಿ ಮತ್ತು ಕೃಷ್ಣರಾಜೇಶ್ವರಸ್ವಾಮಿ ದೇವಸ್ಥಾನಗಳನ್ನೂ, ಕಪಿಲಾನದಿಗೆ ಸೋಪಾನ ಸಂಧ್ಯಾಮಂಟಪಗಳನ್ನೂ ಸಹ ಕಟ್ಟಿಸಿ, ದೇವರ ಪ್ರತಿಷ್ಠೆ, ಅಗ್ರಹಾರದ ಪ್ರತಿಷ್ಠೆಗಳನ್ನು ಮಾಡಿಸಿದರು; ಮೇಲೆ ಬರೆದಿರುವ ೭೪ ವೃತ್ತಿಗಳಿಗೂ ವೃತ್ತಿಯೊಂದಕ್ಕೆ ಕಂಠೀರಾಯಿ ೩೬ ವರಹಗಳ ಪ್ರಕಾರ ೨,೬೬೪ ವರಹ ಹುಟ್ಟುವಂಥಾ ಕಳಲೇ ತಾಲ್ಲೂಕಿಗೆ ವಳತವಾದ ಕೂಡಲಾಪುರ ಮುಂತಾದ ಅಸಲಿಗ್ರಾಮ ೧೪ನ್ನೂ, ದಾಖಲೇ ಗ್ರಾಮ ೩ನ್ನೂ, ಸಹಿರಣ್ಯೋದಕ ದಾನಧಾರಾಪೂರ್ವಕವಾಗಿ ಧಾರೆಯನ್ನೆರೆದುಕೊಟ್ಟು, ಈ ಅಗ್ರಹಾರಕ್ಕೆ ಕೃಷ್ಣರಾಜೇಂದ್ರಪುರ ಅಗ್ರಹಾರವೆಂಬದಾಗಿ ನಾಮಧೇಯವನ್ನಿಟ್ಟುಮಾಡಿ, ಈ ಅಗ್ರಹಾರದ ಸಮೀಪದಲ್ಲಿ ಪ್ರತಿ ಮಂಗಳವಾರದಲ್ಲಿಯೂ ಸಂತೇ ಕಟ್ಟುವಂತೆ ನಿಬಂಧನೆಯನ್ನು ಮಾಡಿಸಿದರು; ಈ ಅಗ್ರಹಾರದ ಚೌತರಫುಗಳಿಗೂ, ಕೂಡ್ಲಾಪುರ ಮುಂತಾದ ಅಸಲೀಗ್ರಾಮಗಳಿಗೂ ದಾಖಲೇ ಗ್ರಾಮಗಳಿಗೂ ವಾಮನಮುದ್ರೆ ಶಿಲಾಪ್ರತಿಷ್ಠೆಗಳನ್ನು ಮಾಡಿಸಿ ಕೊಡುವಂತೆಯೂ, ಇವುಗಳನ್ನು ಆಯಾ ವೃತ್ತಿವಂತರ ಪುತ್ರಪೌತ್ರ ಪಾರಂಪರ್ಯವಾಗಿ ನಡಿಸಿಕೊಂಡು ಬರುವಂತೆಯೂ, ಕಳಲೇ ತಾಲ್ಲೂಕು ಸುಬೇದಾರನಿಗೆ ದಾತೃ ಪ್ರತಿಗ್ರಹಿತೃ ತ್ರಿಪುರುಷೋಚ್ಚಾರಣ ಪೂರ್ವಕವಾಗಿ ಬಟ್ಟು ದಾನಶಾಸನವನ್ನು ಬರಿಸಿಕೊಟ್ಟಿರುವದಲ್ಲದೆ, ಈ ವೃತ್ತಿವಂತರಿಗೆ ಪ್ರತ್ಯೇಕ ಪ್ರತ್ಯೇಕವಾಗಿ ದಾನಶಾಸನವನ್ನು ಬರೆಯಿಸಿ ಕೊಟ್ಟರು. ಈ ಕೃಷ್ಣರಾಜಪುರದ ಅಗ್ರಹಾರದವರು ಕಳ್ಳರ ಬಾಧೆಯನ್ನು ತಾಳಲಾರದೆ ಬಂದು ಧೊರೆಗಳಿಗೆ ವಿಜ್ಞಾಪಿಸಿಕೊಳ್ಳಲು, ಆಳಿದ ಮಹಾಸ್ವಾಮಿಯವರು ಮಹೀಶೂರ ಕೋಟೆಗೆ ನೈರುತ್ಯದಿಕ್ಕಿನಲ್ಲಿ ಎಲ್ಲರಿಗೂ ಮನೆಗಳನ್ನು ಕಟ್ಟಿಸಿಕೊಟ್ಟು, ಸುಖವಾಗಿ ಇರುವಂತೆ ಕಟ್ಟಳೆ ಮಾಡಿಸಿದರು.

ನಂಜಮ್ಮಾಂಬಾ ಅಗ್ರಹಾರ.—ಶಾ|| ೧೭೬೬ನೇ ತಾರಣ ಸಂವತ್ಸರದ ಮಾಘ ಶುದ್ಧ ೧೫ ಗುರುವಾರದಲ್ಲಿ, ಸಪತ್ನಿ ಮಾತೃಗಳಾದ ನಂಜಮ್ಮಣ್ಣಿಯವರ ಕೈಯಿಂದ ತುಲಾಭಾರದಾನವನ್ನು ಮಾಡಿಸಿ, ಈ ದಿನವೇ ಗೋಪಾಲ ಕೃಷ್ಣದೇವರಿಗೆ ಸಹ ೩೧ ವೃತ್ತಿಯನ್ನು ಧಾರೆಯನ್ನೆರಿಸಿ, ಈ ವೃತ್ತಿಯೊಂದಕ್ಕೆ ಕಂಠೀರಾಯಿ ೩೦ ವರಹಗಳು ಹುಟ್ಟುವಂತೆ, ಯಡತೊರೇ ತಾಲ್ಲೂಕು ಹಳಿಯೂರು, ಕಾಳೇನಹಳ್ಳಿ, ಹೊಸೂರು, ಅರಕೆರೆ ಎಂಬ ಗ್ರಾಮಗಳನ್ನು ಕೊಟ್ಟು, ಗೋಪಾಲ ಕೃಷ್ಣಸ್ವಾಮಿಯನ್ನು ಪ್ರತಿಷ್ಠೆ ಮಾಡಿಸಿ, ಕೆಲವು ಬ್ರಾಹ್ಮಣರಿಗೆ ಅವರು ಕೇಳಿಕೊಂಡ ಸ್ಥಳದಲ್ಲಿ ಗದ್ದೆ ಬೆದ್ದಲು ಸಹ ೬ ವರಹಾ ಭಟ್ಟಮಾನ್ಯದ ಭೂಮಿಯನ್ನು ಧಾರೆಯನ್ನೆರೆದು ಕೊಟ್ಟರು.

ದೇವೀರಾಂಬಾ ಅಗ್ರಹಾರ.—ಶಾ|| ೧೭೬೮ನೇ ವ್ಯಯಸಂವತ್ಸರದ ಜ್ಯೇಷ್ಠ ಶುದ್ಧ ೧೫ಯಲ್ಲಿ ಸಪತ್ನಿ ಮಾತೃಗಳಾದ ದೇವೀರಮ್ಮಣ್ಣಿಯವರ ಕೈಯಿಂದ, ೨೪ ವೃತ್ತಿಯನ್ನು ತ್ರಿಮತಸ್ಥ ಬ್ರಾಹ್ಮಣರಿಗೂ ಧಾರೆಯನ್ನೆರಿಸಿ, ವೃತ್ತಿಯೊಂದಕ್ಕೆ ಕಂಠೀರಾಯಿ ೩೬ ವರಹಾ ಹುಟ್ಟುವ ಮೇರೆಗೆ, ಮಳವಳ್ಳೀ ತಾಲ್ಲೂಕು ಕೊಂಡಾಪುರ, ಮಾದಾಪುರ, ಹೊನ್ನಾಯಕನಹಳ್ಳಿ ಮುಂತಾದ ೬ ಗ್ರಾಮಗಳನ್ನು ಕೊಟ್ಟರು; ಮತ್ತು ಕೆಲವು ಬ್ರಾಹ್ಮಣರಿಗೆ ಗದ್ದೆ ಬೆದ್ದಲು ಸಹಿತವಾಗಿ ೬ ವರಹಗಳ ಭಟ್ಟಮಾನ್ಯದ ಭೂಮಿಯನ್ನು ಧಾರೆಯನ್ನೆರಿಸಿ, ಅವರು ಕೇಳಿಕೊಂಡ ಸ್ಥಳದಲ್ಲಿ ಕೊಡಿಸಿದರು; ಈ ೨೪ ವೃತ್ತಿವಂತ ಬ್ರಾಹ್ಮಣರಿಗೆ ಮಹೀಶೂರ ಕೋಟೆಗೆ ದಕ್ಷಿಣಪಾರ್ಶ್ವದ ಸಮೀಪದಲ್ಲಿ ೨೪ ಮನೆಯನ್ನೂ, ಅರಮನೇ ಋತ್ವಿಕ್ಕು ವೆಂಕಟರಮಣಶಾಸ್ತ್ರಿಗಳಿಗೆ ೧ ಮನೆಯನ್ನೂ, ಅಂತು ೨೫ ಮನೆಗಳನ್ನು ಕಟ್ಟಿಸಿ, ಗೃಹೋಪಕರಣ ಸೋಪಸ್ಕರ ಸಹಿತವಾಗಿ, ವಿಶ್ವಾವಸು ಸಂವತ್ಸರದ ಜ್ಯೇಷ್ಠ ಬಹುಳ ೭ ಗುರುವಾರದಲ್ಲಿ ಅಗ್ರಹಾರ ಪ್ರತಿಷ್ಠೆಯನ್ನು ಮಾಡಿಸಿ ಧಾರೆಯನ್ನೆರಿಸಿದರು.

ದೇವಾಜಾಂಬಾ ಅಗ್ರಹಾರ.—ಶಾ|| ೧೭೬೮ನೇ ವ್ಯಯ ಸಂವತ್ಸರದ ಆಷಾಢ ಶುದ್ಧ ೧೦ ಶುಕ್ರವಾರ ಕರ್ಕಾಟಕ ಸಂಕ್ರಮಣದ ದಿವಸ ಸಪತ್ನಿ ಮಾತೃ ದೊಡ್ಡಮ್ಮನವರಾದ ದೇವಾಜಮ್ಮಣ್ಣಿಯವರ ಕೈಯಿಂದ ತುಲಾ

ಭಾರ ದಾನವನ್ನು ಮಾಡಿಸಿ, ತಾವು ಪ್ರತಿಷ್ಠೆಮಾಡಿಸಿದ ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನಕ್ಕೆ ೧, ಶ್ರೀಮತಸ್ಥ ಬ್ರಾಹ್ಮಣರಿಗೆ ೫೪, ಜೈನರಿಗೆ ೫, ಅಂತು ೬೦ ವೃತ್ತಿಯನ್ನು ಧಾರೆಯೆರಿಸಿ, ವೃತ್ತಿಯೊಂದಕ್ಕೆ ೩೬ ಹಣದ ಮೇರೆಗೆ ಹುಟ್ಟುವಂಥ ಹೊಳೇನರಸೀಪುರದ ತಾಲ್ಲೂಕು ಬಂಡುಹೊಳೆ, ಯಾಚನಹಳ್ಳಿ, ಮಡವನಕೋಡಿ ಮುಂತಾದ ೧೨ ಗ್ರಾಮಗಳನ್ನು ಕೊಟ್ಟು, ಈ ಬಂಡುಹೊಳೇಗ್ರಾಮದಲ್ಲಿ ದುರ್ಮತಿ ಸಂವತ್ಸರದ ಮಿಥುನ ಮಾಸ ಆಷಾಢ ಶುದ್ಧ ೫ಯಲ್ಲಿ ಶ್ರೀಕಂಠೇಶ್ವರನೆಂಬ ಶಿವಪ್ರತಿಷ್ಠೆಯನ್ನು ಮಾಡಿಸಿದರು.

ಲಕ್ಷ್ಮಾಂಬಾ ಅಗ್ರಹಾರ.—ಶಾ ೧೭೫೦ನೇ ಸರ್ವಜಿತು ಸಂವತ್ಸರದ ಆಷಾಢ ಬಹುಳ ೬ ಸ್ಥಿರವಾರ ಕರ್ಕಾಟಕ ಸಂಕ್ರಮಣದ ದಿವಸ ಸಪತ್ನಿ ಮಾತೃಗಳಾದ ಲಕ್ಷ್ಮಮ್ಮಣ್ಣಿಯವರ ಕೈಯಿಂದ ತುಲಾಭಾರ ದಾನವನ್ನು ಮಾಡಿಸಿ, ಶ್ರೀಮತಸ್ಥ ಬ್ರಾಹ್ಮಣರಿಗೂ ೬೦ ವೃತ್ತಿಯನ್ನು ಧಾರೆಯೆರಿಸಿ, ವೃತ್ತಿ ೧ಕ್ಕೆ ಕಂಠೀರಾಯಿ ೩೦ ವರಹಾ ಹುಟ್ಟುವಂತೆ ಕೃಷ್ಣರಾಜಕಟ್ಟೇ ತಾಲ್ಲೂಕು ಪೈಕಿ ಹೊಸಕೋಟೆ, ಎಲೆಮನಗನಹಳ್ಳಿ, ಗುಡಗನಹಳ್ಳಿ, ಚನ್ನಮ್ಮಗೆರೆ ಮುಂತಾದ ೧೪ ಗ್ರಾಮಗಳನ್ನು ಕೊಟ್ಟರು; ಕೆಲವು ಮಂದಿ ಬ್ರಾಹ್ಮಣರಿಗೆ ಅವರವರು ಕೇಳಿಕೊಂಡ ಸ್ಥಳಗಳಲ್ಲಿ ಗದ್ದೆ ಬೆದ್ದಲುಸಹ ೬ ವರಹಗಳ ಭಟ್ಟಮಾನ್ಯದ ಭೂಮಿಯನ್ನು ಕೊಟ್ಟರು; ಈ ವೃತ್ತಿವಂತರಿಗೆ ಹಿಡತೊರೆಯಲ್ಲಿ ೬೦ ಮನೆಗಳನ್ನು ಕಟ್ಟಿಸಿ, ಗೃಹೋಪಕರಣ ಸಹಿತವಾಗಿ ಶಾ ೧೭೫೧ನೇ ವಿರೋಧಿ ಸಂವತ್ಸರದ ಶ್ರಾವಣ ಬಹುಳ ೧ದಲ್ಲಿ ಅಗ್ರಹಾರ ಪ್ರತಿಷ್ಠೆಯನ್ನು ಮಾಡಿಸಿ ಕೊಟ್ಟರು.

ಕೆಂಪನಂಜಮಾಂಬಾ, ಕೆಂಪದೇವಾಂಬಾ, ಚೆಲುವಾಂಬಾ ಅಗ್ರಹಾರಗಳು.—ಮೇಲೆ ಕಂಡ ಶಾ॥ ೧೭೫೦ನೇ ಸರ್ವಜಿತು ಸಂವತ್ಸರದ ಆಷಾಢ ಬಹುಳ ೬ ಸ್ಥಿರವಾರ ಕರ್ಕಾಟಕ ಸಂಕ್ರಮಣದಲ್ಲಿ ಮಹಾ ಮಾತುಶ್ರೀಯವರಾದ ಖಾಸಾ ಕೆಂಪನಂಜಮ್ಮಣ್ಣಿಯವರಿಗೂ, ಸಪತ್ನಿ ಮಾತೃಗಳಾದ ಕೆಂಪದೇವಾಜಮ್ಮಣ್ಣಿಯವರಿಗೂ, ಚೆಲುವಾಜಮ್ಮಣ್ಣಿಯವರಿಗೂ, ಶಾಶ್ವತ ಪುಣ್ಯಲೋಕ ಬರಬೇಕೆಂದು, ಆಳಿದ ಮಹಾಸ್ವಾಮಿಯವರು ಸನ್ನಿ-

ಧಾನೆ ೧ಕ್ಕೆ ೨೪ರ ಪ್ರಕಾರ ವೃತ್ತಿ ೧ಕ್ಕೆ ೩೬ ವರಹಾ ಹುಟ್ಟುವ ಮೇರೆಗೆ ೭೦ ವೃತ್ತಿಗಳನ್ನು ಧಾರೆಯೆರೆದು ಕೊಟ್ಟು, ೩ ಅಗ್ರಹಾರಗಳನ್ನು ಕಟ್ಟಿಸಿಕೊಟ್ಟರು. ಇವುಗಳಲ್ಲಿ ಕೆಂಪನಂಜಮಾಂಬಾ ಅಗ್ರಹಾರದ ವೃತ್ತಿ ವಂತರಿಗೆ ಚೆನ್ನಪಟ್ಟಣದ ತಾಲ್ಲೂಕು ಕೂಡ್ಲೂರು ಮುಂತಾದ ಗ್ರಾಮ ಗಳು; (೨) ಕೆಂಪದೇವಮಾಂಬಾ ಅಗ್ರಹಾರದ ವೃತ್ತಿವಂತರಿಗೆ ಮದ್ದೂರು ತಾಲ್ಲೂಕು ಕೆಸ್ತೂರು, ಅಡಗನಹಳ್ಳಿ, ಕಂಪಲಾಪುರದ ದೊಡ್ಡಿ ಮುಂತಾದ ೪ ಗ್ರಾಮಗಳು; (೩) ಚೆಲುವಾಂಬಾ ಅಗ್ರಹಾರದವರಿಗೆ ಮಂಡ್ಯದ ತಾಲ್ಲೂಕು ಕಸಲಗೆರೆ ಮುಂತಾದ ಗ್ರಾಮಗಳು. ಈ ಮೂರು ಅಗ್ರಹಾರಗಳಿಗೆ ಸೇರಿದ ೭೦ ಮಂದಿ ವೃತ್ತಿವಂತರಿಗೂ, ಮಹೀಶೂರ ಕೋಟೆಗೆ ನೈರುತ್ಯ ಪಾರ್ಶ್ವದಲ್ಲಿ ೭೨ ಮನೆಗಳನ್ನು ಕಟ್ಟಿಸಿ, ಶಾ॥ ೧೭೫೨ನೇ ವಿರೋಧಿ ಸಂವತ್ಸ ರದ ಮಾಘ ಶುದ್ಧ ೫ಯಲ್ಲಿ ಅಗ್ರಹಾರ ಪ್ರತಿಷ್ಠೆಯನ್ನು ಮಾಡಿಸಿ, ಧಾರೆಯ ನ್ನೆರೆದು ಕೊಟ್ಟರು.

ದೇವಾಂಬಾ, ಚೆಲುವಾಂಬಾ, ಲಿಂಗಾಂಬಾ ಅಗ್ರಹಾರಗಳು.—ಶಾ॥ ೧೭೪೪ನೇ ವಿಷು ಸಂವತ್ಸರದ ಕಾರ್ತಿಕ ಶುದ್ಧ ೨ ಸ್ಥಿರವಾರದಲ್ಲಿ ಆಳಿದ ಮಹಾ ಸ್ವಾಮಿಯವರು ತ್ರಿಮತಸ್ಥ ಬ್ರಾಹ್ಮಣರಿಗೆ, ಕೃಷ್ಣರಾಜೇಂದ್ರ ಪುರದ ಅಗ್ರಹಾರದ ಬ್ರಾಹ್ಮಣರಿಗೆ ಕೊಟ್ಟಂತೆ, ವಸ್ತ್ರಾಭರಣ ಮುಂತಾದ ಪದಾ ರ್ಥಗಳನ್ನು ಕೊಟ್ಟು, ಪ್ರಸನ್ನ ನಂಜುಂಡೇಶ್ವರನಿಗೆ ೧ ವೃತ್ತಿ, ಅಹೋ ಬಲಮಠದ ಲಕ್ಷ್ಮೀನೃಸಿಂಹಸ್ವಾಮಿಗೆ ೧ ವೃತ್ತಿ, ಶ್ರೀಪರಕಾಲಸ್ವಾಮಿಗಳ ಮಠದ ಹಯಗ್ರೀವದೇವರಿಗೆ ೧ ವೃತ್ತಿ, ಬ್ರಾಹ್ಮಣರಿಗೆ ೬೧ ವೃತ್ತಿ, ಒಟ್ಟು ೬೪ ವೃತ್ತಿಯನ್ನು ಧಾರೆಯೆರೆದು ಕೊಟ್ಟು, ಮಹೀಶೂರ ಅಷ್ಟ ಗ್ರಾಮದ ತಾಲ್ಲೂಕು ಚಂಪಗಾಲು ಕಾವೇರೀ ನದಿಗೆ ದಕ್ಷಿಣಪಾರ್ಶ್ವದಲ್ಲಿ ೬೪ ಮನೆಗಳನ್ನೂ ಈ ಶಿವದೇವಸ್ಥಾನವನ್ನೂ ಕಟ್ಟಿಸಿ, ಈ ವೃತ್ತಿಯೊಂದಕ್ಕೆ ಕಂಟೀರಾಯಿ ೩೬ ವರಹಗಳ ಮೇರೆಗೆ ಗ್ರಾಮಗಳನ್ನು ಬಿಟ್ಟು ಕೊಟ್ಟರು. ಇದಕ್ಕೆ ವಿವರ: (೧) ಲಕ್ಷ್ಮೀವಿಲಾಸದ ದೇವಾಂಬಾ ಅಗ್ರಹಾರದವರಿಗೆ ಧಾರೆಯೆರೆದು ಕೊಟ್ಟಿರುವ ೨೦ ವೃತ್ತಿಗಳಿಗೆ ಸೇರಿದವುಗಳು, ಯಡ ತೊರೆ ತಾಲ್ಲೂಕು ಕುಂದೂರು, ಕಲ್ಲಹಳ್ಳಿ, ಬಸ್ತರಹಳ್ಳಿ ಮುಂತಾದ ಗ್ರಾಮಗಳು ೫; (೨) ರಮಾವಿಲಾಸದ ಚಲುವಾಂಬಾ ಅಗ್ರಹಾರದವರಿಗೆ

ಧಾರೆಯೆರೆದು ಕೊಟ್ಟ ೨೧ ವೃತ್ತಿಗಳಿಗೆ ಸೇರಿದವುಗಳು, ಬೂಕನಕೆರೆ ತಾಲ್ಲೂಕು ಬೇಬಿ, ಡಿಂಕ, ಹೊನ್ನಾಯಕನಹಳ್ಳಿ ಎಂಬ ೩ ಗ್ರಾಮಗಳು; (೩) ಲಿಂಗಾಂಬಾ ಅಗ್ರಹಾರದವರಿಗೆ ಧಾರೆಯೆರೆದು ಕೊಟ್ಟ ೨೧ ವೃತ್ತಿಗಳಿಗೆ ಸೇರಿದವುಗಳು ಅತ್ತಿಕುಪ್ಪ ತಾಲ್ಲೂಕು ಮೊದೂರು, ಚಿಟ್ಟನಹಳ್ಳಿ, ಶೆಟ್ಟಿಹಳ್ಳಿ, ಕಾಮನಾಯಕನಹಳ್ಳಿ ಎಂಬ ೪ ಗ್ರಾಮಗಳು. ಈ ಅಗ್ರಹಾರಗಳಲ್ಲಿನ ಬ್ರಾಹ್ಮಣರು ಕೆಲವು ದಿವಸ ಸುಖವಾಗಿದ್ದು, ಅನಂತರ ರೋಗಾದ್ಯುಪದ್ರವಗಳು ಬಲವಾಗಿ ಜನಗಳಿಗೆ ಬಹಳ ತೊಂದರೆಯಾದ್ದರಿಂದ, ಮಹಾಸನ್ನಿಧಾನದಲ್ಲಿ ಒಂದು ಅರಿಕೆ ಮಾಡಿಕೊಂಡರು. ಅನಂತರದಲ್ಲಿ ಆಳುವ ಮಹಾಸ್ವಾಮಿಯವರು ಮಹೀಶೂರ ಕೋಟೆಗೆ ಪಶ್ಚಿಮ ಪಾರ್ಶ್ವದಲ್ಲಿ ಅದೇ ೩ ಅಗ್ರಹಾರದ ಮನೆಗಳನ್ನು ಕಟ್ಟಿಸಿ, ಶಾ॥ ೧೭೪೭ನೇ ಪಾರ್ಥಿವ ಸಂವತ್ಸರದ ವೈಶಾಖ ಬಹುಳ ೬ ಭಾನುವಾರದಲ್ಲಿ ಪ್ರತಿಷ್ಠೆಯನ್ನು ಮಾಡಿಸಿ, ಈ ಬ್ರಾಹ್ಮಣರು ಸುಖವಾಗಿ ವಾಸಮಾಡಿಕೊಂಡಿರುವಂತೆ ನಿಬಂಧನೆ ಮಾಡಿದರು; ಈ ಅಗ್ರಹಾರದ ಬ್ರಾಹ್ಮಣರು ಮುಂತಾದ ಸರ್ವಜನರೂ ಸಂಚಾರ ಮಾಡುವದಕ್ಕೆ ಕೋಟೆಗೆ ಹೊಸದಾಗಿ ಬ್ರಹ್ಮಪುರೀ ಬಾಗಿಲನ್ನು ನಿರ್ಮಿಸಿ, ಈ ಅಗ್ರಹಾರಕ್ಕೆ ಪೇಟೆಯನ್ನು ಕಟ್ಟಿಸಿ, ಪ್ರತಿ ಶುಕ್ರವಾರದಲ್ಲಿಯೂ ಸಂತೇಕಟ್ಟೆ ವ್ಯಾಪಾರ ನಡೆಯುವಂತೆ ನಿಬಂಧನೆ ಮಾಡಿಸಿದರು; ಈ ಅಗ್ರಹಾರದಲ್ಲಿ ನೂತನವಾಗಿ ಪ್ರಸನ್ನನಂಜುಂಡೇಶ್ವರಸ್ವಾಮಿ ದೇವಸ್ಥಾನವನ್ನು ಕಟ್ಟಿಸಿ, ಪಂಚಬೇರು ಅಮ್ಮನವರು ಸಹಿತವಾಗಿ ಶಿವಪ್ರತಿಷ್ಠೆಯನ್ನು ಮಾಡಿಸಿ, ರಥೋತ್ಸವಾದಿ ಉತ್ಸವಗಳಿಗೂ ಪ್ರತಿದಿವಸದಲ್ಲಿಯೂ ಪೂಜೆ ನಡೆಯುವದಕ್ಕೂ ತಸ್ತೀಕನ್ನು ಉಂಟುಮಾಡಿದರು; ಪೂರ್ವದ ಅಗ್ರಹಾರದಲ್ಲಿ ಪ್ರತಿಷ್ಠೆಯಾಗಿ ಹಿಂದಗಾಲದಲ್ಲಿದ್ದ ದೇವರಿಗೆ ಅಲ್ಲಿಯೇ ಪೂಜೆ ನಡೆಯುವಂತೆ ನಿಬಂಧನೆ ಮಾಡಿದರು.

ಗೌರಾಂಬಾ ಅಗ್ರಹಾರ.—ಶಾ॥ ೧೭೫೨ನೇ ವಿಕೃತಿ ಸಂವತ್ಸರದ ಭಾದ್ರಪದ ಶುದ್ಧ ೧೫ ಚಂದ್ರಗ್ರಹಣ ಕಾಲದಲ್ಲಿ ೨೧ ವೃತ್ತಿಯನ್ನು ಧಾರೆಯೆರೆಯಿಸಿ, ವೃತ್ತಿ ೧ಕ್ಕೆ ೩೬ ವರಹಾ ಹುಟ್ಟುವಂಥಾ ಚಾಮರಾಜನಗರದ ತಾಲ್ಲೂಕು ತಮ್ಮಡೀಹಳ್ಳಿ, ಸಾಗಡೆ ಮುಂತಾದ ೪ ಗ್ರಾಮಗಳಿಗೆ ಬಂದು ಅಗ್ರಹಾರವನ್ನು ಕಟ್ಟಿಸಿ, ಅಲ್ಲಿನ ಬ್ರಾಹ್ಮಣರಿಗೆ ಚಾಮರಾಜನಗ

ರದ ಛಾಟಾ ಮಾರ್ಗ ಕೋಣನೂರೆಂಬ ಗ್ರಾಮದ ಸಮೀಪದಲ್ಲಿ ೨೧ ಮನೆಗಳನ್ನೂ ಶಿವದೇವಸ್ಥಾನವನ್ನೂ ಕಟ್ಟಿಸಿ, ಮಂಗಳಗೌರೀ ಸಹಿತ ಗೌರೀಪತೀಶ್ವರನನ್ನೂ, ನಾರಾಯಣಸ್ವಾಮಿ ಗಣಪತಿ ಮುಂತಾದ ವಿಗ್ರಹಗಳನ್ನೂ, ಲೋಹದ ಅಸ್ತ್ರಮೂರ್ತಿಗಳನ್ನೂ, ಅಮ್ಮನವರು ಸಹಿತವಾಗಿ ಚಂದ್ರಶೇಖರ ಸ್ವಾಮಿಯನ್ನೂ ಪ್ರತಿಷ್ಠೆ ಮಾಡಿಸಿದರು; ಈ ವೃತ್ತಿವಂತ ಮಹಾಜನಗಳಿಗೆ ಅಗ್ರಹಾರ ಪ್ರತಿಷ್ಠೆಯನ್ನು ಮಾಡಿಸಿ ಧಾರೆಯೆರೆದು ಕೊಟ್ಟು, ಗೌರಾಂಬಾ ಅಗ್ರಹಾರವೆಂಬ ನಾಮಧೇಯವನ್ನು ಉಂಟುಮಾಡಿದರು; ಈ ವೃತ್ತಿಗಳಲ್ಲಿ ದೇವರಿಗೆ ಒಂದು ವೃತ್ತಿಯನ್ನು ಕೊಟ್ಟಿರುವದಲ್ಲದೆ ರಥೋತ್ಸವಾದಿ ಉತ್ಸವಗಳು ನಡೆಯುವದಕ್ಕೂ, ನಿತ್ಯಗಟ್ಟಳೆ ಪಡಿತರ ದೀಪಾರಾಧನೆ ನಡೆಯುವದಕ್ಕೂ ವಿಶೇಷ ತಸ್ತೀಕನ್ನು ಉಂಟುಮಾಡಿದರು; ಛಾಟಾ ಮಾರ್ಗಸ್ಥಳವಾದದ್ದರಿಂದ ಪ್ರತಿದಿನವೂ ಅನ್ನಸತ್ರವು ನಡೆಯುವಂತೆ ನಿಬಂಧನೆಯನ್ನು ಮಾಡಿ, ಈ ಅಗ್ರಹಾರಕ್ಕೆ ಪಶ್ಚಿಮ ಪಾರ್ಶ್ವದಲ್ಲಿ ಒಂದು ತಟಾಕವನ್ನು ನಿರ್ಮಿಸಿ, ಆ ತಟಾಕದಲ್ಲಿ ನೀರು ನಿಲ್ಲದೆ ಇದ್ದದ್ದರಿಂದ, ಚಾಮರಾಜ ನಗರಕ್ಕೆ ಹೋಗಿ ಬರುವ ಮಾರ್ಗ ಬೆಂಡರವಾಡಿ ಎಂಬ ಗ್ರಾಮದ ಸಮೀಪದಲ್ಲಿ ನೂತನವಾಗಿ ದೊಡ್ಡ ತಟಾಕವನ್ನು ನಿರ್ಮಿಸಿ, ಶಾ। ೧೭೭೨ನೇ ಸೌಮ್ಯ ಸಂವತ್ಸರದ ಚೈತ್ರ ಬಹುಳ ೨ ಸೋಮವಾರದಲ್ಲಿ ಪ್ರತಿಷ್ಠೆ ಮಾಡಿಸಿದರು.

ಮುಮ್ಮಡಿ ಕೃಷ್ಣರಾಜ ಒಡೆಯರವರು ಮೇಲೆ ಬರೆದಿರುವ ಕೃಷ್ಣರಾಜೇಂದ್ರಪುರ ಮೊದಲಾದ ೧೨ ಅಗ್ರಹಾರಗಳ ಆಯಾಯ ತಾಲ್ಲೂಕಿನ ಅಮಲ್ದಾರರಿಗೆ, ವೃತ್ತಿವಂತ ಬ್ರಾಹ್ಮಣರ ತ್ರಿಪುರುಷೋಚ್ಚಾರಣಪೂರ್ವಕವಾಗಿ, ವೃತ್ತಿವಂತರ ಪುತ್ರ ಪೌತ್ರ ಪಾರಂಪರ್ಯವಾಗಿ ನಡಿಸಿಕೊಂಡು ಬರುವಂತೆ ಬಿಟ್ಟು ದಾನಶಾಸನವನ್ನು ಬರೆಯಿಸಿ, ಶಾಸನದಸಕತ್ತು ಮೊಹರ್ ಮಾಡಿಸಿಕೊಟ್ಟಿರುವದಲ್ಲದೆ, ಅಗ್ರಹಾರವನ್ನು ಮಾಡಿರುವ ಯಜಮಾನರ ತ್ರಿಪುರುಷೋಚ್ಚಾರಣ ಪೂರ್ವಕವಾಗಿಯೂ, ಪ್ರತಿಗ್ರಹೀತೃ ತ್ರಿಪುರುಷೋಚ್ಚಾರಣಪೂರ್ವಕವಾಗಿಯೂ, ಪ್ರತ್ಯೇಕ ಪ್ರತ್ಯೇಕವಾಗಿ ದಾನಶಾಸನವನ್ನು ಬರೆಯಿಸಿ, ಅವರವರ ದಸಕತ್ತು ಮಾಡಿಸಿ ಕೊಟ್ಟು, ಈ ಅಗ್ರಹಾರಕ್ಕೆ

ಅವರವರ ನಾಮಾಂಕಿತವಾಗಿ ಹೆಸರನ್ನು ಇಟ್ಟಿರುವದಲ್ಲದೆ ಭಟ್ಟಮಾನ್ಯದ ಬ್ರಾಹ್ಮಣರಿಗೆ ಸನ್ನದನ್ನು ಬರೆದು ಕೊಟ್ಟಿರುತ್ತಾರೆ.

ಆಳಿದಮಹಾಸ್ವಾಮಿಯವರು ಈ ಮೇರೆಗೆ ಅಧಿಕಾರಸ್ಥರು ವಿದ್ವಾಂಸರು, ಅರಸುಗಳು, ಸಾಹುಕಾರರು, ಜೈನರು, ತಪಸ್ವಿಗಳು, ಅರಮನೇ ಸೇವಾಜನರು, ಮಠಗಳ ಯತೀಶ್ವರರು, ಮುಂತಾದ ಅನೇಕ ಜನಗಳಿಗೆ ಅವರವರ ಯೋಗ್ಯತಾನುಸಾರವಾಗಿ ಭಟ್ಟಮಾನ್ಯರೂಪವಾಗಿ ಭೂಮಿಯನ್ನೂ ನಗದನ್ನೂ ಕೊಟ್ಟಿರುವದಲ್ಲದೆ, ಅನೇಕ ಜೋಡೀ ಗ್ರಾಮಗಳು ಜೋಡೀ ಭಟ್ಟಮಾನ್ಯದ ಭೂಮಿ ಕಾಯಂಗುತ್ತಿಗೇ ಗ್ರಾಮ ಸಂಬಳ ಮುಂತಾದವುಗಳನ್ನು ಕೊಟ್ಟು ಸಕಲರನ್ನೂ ಸಂರಕ್ಷಣೆ ಮಾಡುತ್ತಿದ್ದರು.

ಸತ್ರಗಳು—ಆಳಿದ ಮಹಾಸ್ವಾಮಿಯವರು ತಮ್ಮ ಸೀಮೇ ಭಾಟಾ ಮಾರ್ಗಗಳಲ್ಲಿ ಗಾವುದಕ್ಕೆ ಒಂದು ಸ್ಥಳದಲ್ಲಿ ಅನ್ನಸತ್ರಗಳು, ಸಾಲುಮರ, ತೋಪು, ಧರ್ಮಶಾಲೆ, ಬಂಗಲೆ, ಕೆಲವು ಸರೋವರ ತಟಾಕಗಳನ್ನು ಮಾಡಿಸಿ ಇರುವದಲ್ಲದೆ, ಕಾಶಿ ಕಂಚಿ ಶ್ರೀರಂಗ ಮುಂತಾದ ದಿವ್ಯ ಕ್ಷೇತ್ರಗಳಲ್ಲಿ ಪ್ರತಿದಿನದಲ್ಲಿಯೂ ಅನ್ನದಾನ ನಡೆಯುವಂತೆ ಸತ್ರಗಳನ್ನು ಉಂಟುಮಾಡಿದರು; ಲಕ್ಷ್ಮೀವಿಲಾಸ ಸನ್ನಿಧಾನದ ದೇವಾಜಮ್ಮಣ್ಣಿಯವರ ಹೆಸರಿನಿಂದ ತಿರಮಕೂಡಲು ಮಾರ್ಗ ಹೊರಣವೆಂಬ ಗ್ರಾಮದ ಬಳಿ ದೇವಾಂಬುಧಿ ಎಂಬ ತಟಾಕವನ್ನೂ ದೇವೇಶ್ವರನೆಂಬ ಶಿವದೇವಸ್ಥಾನವನ್ನೂ ಅನ್ನಸತ್ರ ತೋಪು ಮೊದಲಾದವುಗಳನ್ನೂ ಮಾಡಿಸಿ, ಈ ದೇವರಿಗೆ ವಸ್ತ್ರಾಭರಣಗಳನ್ನು ಕೊಟ್ಟು, ರಥೋತ್ಸವಾದಿ ಉತ್ಸವಗಳೂ ಪೂಜೆಯೂ ನಡೆಯುವದಕ್ಕೆ ತಸ್ತೀಕನ್ನು ಉಂಟುಮಾಡಿದರು.

ಹೆಗ್ಗಡದೇವನಕೋಟೆ ತಲಚೇರೀ ಮಾರ್ಗವಾಗಿ ಮಹೀಶೂರ ಸಮೀಪದಲ್ಲಿ ಭಾರಿಯಾಗಿ ಒಂದು ಕೆರೆಯನ್ನು ಕಟ್ಟಿಸಿ, ಲಿಂಗಾಂಬುಧಿ ಎಂಬ ನಾಮಧೇಯವನ್ನಿಟ್ಟು, ಇದರ ಸಮೀಪದಲ್ಲಿಯೇ ಒಂದು ಶಿವ ದೇವಸ್ಥಾನವನ್ನು ಕಟ್ಟಿಸಿ, ಮಹಾ ಲಿಂಗೇಶ್ವರನೆಂಬ ಶಿವಪ್ರತಿಷ್ಠೆಯನ್ನು ಮಾಡಿಸಿ, ವಸ್ತ್ರಾಭರಣಾದಿಗಳನ್ನು ಕೊಟ್ಟರು; ಪೂಜೆಗಳೂ ರಥೋತ್ಸವಾದಿ ಉತ್ಸವಗಳೂ ನಡೆಯುವದಕ್ಕೆ ತಸ್ತೀಕನ್ನು ಉಂಟುಮಾಡಿ

ಇರುವದಲ್ಲದೆ, ಬ್ರಾಹ್ಮಣರಿಗೆ ಅನ್ನದಾನ ನಡೆಯುವದಕ್ಕೆ ಸತ್ರವನ್ನು ಹಾಕಿಸಿದರು ; ಯಡತೊರೆ ಸುಬ್ರಹ್ಮಣ್ಯಗಳಿಗೆ ಹೋಗಿ ಬರುವ ಮಾರ್ಗ ಗಳಲ್ಲಿ, ಅನ್ನಸತ್ರ ಅರವಟ್ಟಿಗೆ ಧರ್ಮಶಾಲೆ ಚಿತ್ರರಂಜನಮಹಲೆಂಬ ಬಂಗಲೆ ತಟಾಕ ತೋಪು ಸಾಲುಮರ ಮುಂತಾದ ಧರ್ಮಕಾರ್ಯಗಳನ್ನು ಮಾಡಿಸಿದರು.

ನಂಜನಗೂಡು ಮಾರ್ಗದಲ್ಲಿಯೂ ಶ್ರೀರಂಗಪಟ್ಟಣದ ಮಾರ್ಗ ದಲ್ಲಿಯೂ ಅನ್ನಸತ್ರ ಧರ್ಮಶಾಲೆ ದೇವಸ್ಥಾನ ಸರೋವರ ತೋಪು ಅರ ವಟ್ಟಿಗೆ ಮುಂತಾದವುಗಳನ್ನು ಮಾಡಿಸಿದರು.

ಕೊಳ್ಳೇಗಾಲ, ಮಾದೇಶ್ವರನಬೆಟ್ಟ, ತಿರಮಕೂಡಲು, ಗರ್ಗೇಶ್ವರಿ ಮುಂತಾದ ಸ್ಥಳಗಳಿಗೆ ಜನಗಳು ಸಂಚಾರಮಾಡುವ ಭೂಮಾರ್ಗ ಮಹೀ ಶೂರ ಸಮೀಪದಲ್ಲಿ ಮನೋಹರವಾದ ಸರೋವರವನ್ನೂ ಚಿನ್ನದ ಕಲಶ ದಿಂದಶೋಭಾಯಮಾನವಾಗಿರುವ ದೇವಸ್ಥಾನವನ್ನೂಕಟ್ಟಿಸಿ, ಮುದ್ದು ಕೃಷ್ಣೇಶ್ವರನೆಂಬ ಶಿವಪ್ರತಿಷ್ಠೆಯನ್ನು ಮಾಡಿಸಿ, ಪೂಜೆ ನಡೆಯುವಂತೆ ತಸ್ತೀಕನ್ನು ಉಂಟುಮಾಡಿದರು ; ಬ್ರಾಹ್ಮಣರಿಗೂ ಗಣಗಳಿಗೂ ಅನ್ನ ಸತ್ರವೂ ಅರವಟ್ಟಿಗೆಯೂ ನಡೆಯುವಂತೆ ಕಟ್ಟಳೆಮಾಡಿಸಿ, ಧರ್ಮಶಾಲೆ ಯನ್ನೂ ಮನೋರಂಜನ ಮಹಲೆಂಬ ಚಿತ್ರವಿಚಿತ್ರವಾದ ಬಂಗಲೆಯನ್ನೂ ನಿರ್ಮಿಸಿ, ಸಾಲುಮರ ಹಾಕಿಸಿ, ಚಂಪಕಬಿಲ್ವ ಮೊದಲಾದ ನಾನಾಜಾತಿ ವೃಕ್ಷಗಳಿಂದ ವನವನ್ನು ಉಂಟುಮಾಡಿದರು ; ಬಡವರಾಗಿ ಬಂದ ಜನಗಳಿಗೆ ಈ ಸತ್ರದಲ್ಲಿ ಧರ್ಮಾರ್ಥವಾಗಿ ಮದುವೆ ಮುಂಜಿಗಳನ್ನು ಮಾಡಿಸಿ, ಅವರಿಗೆ ವಸ್ತ್ರಾಭರಣದ್ರವ್ಯಗಳನ್ನುಕೊಟ್ಟು, ಸಂತೋಷಪಡಿಸುತ್ತಿದ್ದರು ; ಇದಲ್ಲದೆ ಈ ಸ್ಥಳದಲ್ಲಿ ತುರವೇಕೆರೆಯ ಸೋಮಯಾಜಿಗಳು ಮುಂತಾದ ಬ್ರಾಹ್ಮಣರ ಕೈಯಿಂದ ಅತಿರಾತ್ರಯಾಗ ಮುಂತಾದ ಧರ್ಮಕಾರ್ಯ ಗಳನ್ನು ಅನೇಕವಾಗಿ ಮಾಡಿಸಿದರು.

ಆಳದ ಮಹಾಸ್ವಾಮಿಯವರು ಮಹೀಶೂರ ಮಧುವನದ ಬಳಿಯಲ್ಲಿ ಧರ್ಮಶಾಲೆಯನ್ನು ಕಟ್ಟಿಸಿ ಮಾರ್ಗಸ್ಥರಾಗಿ ಬಂದ ಗೋಸಾವಿಗಳಿಗೂ ಬೈರಾಗಿಗಳಿಗೂ ದೀನರಾಗಿ ಬಂದ ಜನಗಳಿಗೂ ಪ್ರತಿದಿನವಲ್ಲಿಯೂ ಸದಾ

ಬರ್ತು ಕೊಡುವಂತೆಯೂ ಮಂಗಳವಾರಗಳಲ್ಲಿ ಬಂದ ಈ ಜಾತಿ ಸ್ತ್ರೀ ಪುರುಷರಿಗೆ ಖಾದಿ ಮುಂತಾದ್ದು ಕೊಡುವಂತೆಯೂ ಕಟ್ಟಲೆ ಮಾಡಿಸಿದರು ; ಸಂವತ್ಸರಕ್ಕೆ ಒಂದುಸಾರಿ ಅನೇಕ ಜನ ಮುತ್ತೈದೆಯರಿಗೆ ಅರಿಸಿನ ಕುಂಕುಮ ಸೀರೆ ರವಿಕೆ ದಕ್ಷಿಣೆಗಳನ್ನು ಕೊಡುವದಲ್ಲದೆ ಅನೇಕ ಬೈರಾಗಿ ಗೋಸಾವಿಗಳಿಗೆ ಧೋತ್ರ ಧಾವಳಿ ಖಾದಿ ಚಂಬು ರೂಪಾಯಿ ಶಾಲು ಮುಂತಾದವುಗಳನ್ನು ಅಪ್ಪಣೆ ದಯಪಾಲಿಸುತ್ತಿದ್ದರು.

ಲೋಕೋಪಕಾರಾರ್ಥವಾಗಿ ಸೇತುವೆ ಮುಂತಾದ ಧರ್ಮಕಾರ್ಯಗಳನ್ನು ಮಾಡಿಸಿ ಇರುವದು.—ಶ್ರೀರಂಗಪಟ್ಟಣದ ಕಾವೇರೀನದಿ, ಶಿವನ ಸಮುದ್ರ, ಲೋಕ್ಪಾನಿ, ರಾಮಗಿರಿ, ಅರ್ಕಾವತಿ ಮುಂತಾದ ಅನೇಕ ನದಿಗಳಿಗೆ ಸೇತುವೆಗಳನ್ನು ಕಟ್ಟಿಸಿದ್ದಲ್ಲದೆ, ಕೃಷ್ಣರಾಜಕಟ್ಟೆ, ಲಕ್ಷ್ಮಣತೀರ್ಥಕಟ್ಟೆ, ಕಪಿಲಾನದಿ ಮೊದಲಾದವುಗಳಿಗೆ ಕಟ್ಟೆಗಳನ್ನೂ, ಪಶ್ಚಿಮವಾಹಿನೀ ಕಾವೇರೀನದಿಗೆ ಕಾಶೀಕೆಲಸದಿಂದ ಅತಿವಿಸ್ತಾರವಾಗಿಯೂ ಮನೋಹರವಾಗಿಯೂ ಇರುವ ಕೃಷ್ಣರಾಜಸೋಪಾನ ಸಂಧ್ಯಾ ಮಂಟಪ ಧರ್ಮಶಾಲೆಗಳನ್ನೂ, ಚಂದ್ರವನದಲ್ಲಿ ಸೋಪಾನಘಟ್ಟವನ್ನೂ, ತೋಟದಲ್ಲಿ ಶ್ರೀರಂಗಪಟ್ಟಣದ ಖಾಸಮಹಲೆಂಬ ಬಂಗಲೆಯನ್ನೂ ಕಟ್ಟಿಸಿದರು ; ಕಾವೇರೀ ನದಿಗೆ ರಮಣೀಯವಾಗಿ ಕಾಶೀಕೆಲಸದ ಸೋಪಾನ ಮಂಟಪಗಳನ್ನೂ, ನದೀತೀರದಲ್ಲಿ ಗುಡಿಯನ್ನೂ ಕಟ್ಟಿಸಿ, ಈಗುಡಿಯಲ್ಲಿ ಅಮೃತಶಿಲಾ ರಾಮದೇವರನ್ನೂ ಸಾಧಾರಣವಾದ ಶಿಲೆಯಿಂದ ಆಂಜನೇಯನನ್ನೂ ಗಣಪತಿಯನ್ನೂ ಪ್ರತಿಷ್ಠೆ ಮಾಡಿಸಿ, ಪೂಜೆ ನಡಿಯುವಂತೆ ನೇಮಕಮಾಡಿಸಿದರು ; ನಂಜನಗೂಡು ಕಪಿಲಾನದಿಯಲ್ಲಿ ಅನೇಕ ಸಂಧ್ಯಾಮಂಟಪಗಳನ್ನೂ ಸೋಪಾನಗಳನ್ನೂ ಕಟ್ಟಿಸಿದರು ; ಮಹೀಶೂರಲ್ಲಿ ಕಾರಂಜೀಕೆರೆಯನ್ನೂ ಬೆಂಗಳೂರಲ್ಲಿರುವ ದೊಡ್ಡ ಕೆರೆಯನ್ನೂ ಚಿಕ್ಕಬಳ್ಳಾಪುರದ ಸಮೀಪದಲ್ಲಿ ಗುಪ್ತವಾಗಿ ಪ್ರವಹಿಸುತ್ತಿರುವ ಕ್ಷೀರನದಿಯಲ್ಲಿ ಪನಸಭಾವಿ ಎಂಬದಾಗಿ ಪ್ರಸಿದ್ಧವಾಗಿರುವ ಸರೋವರವನ್ನೂ ಕಟ್ಟಿಸಿದ್ದಲ್ಲದೆ, ತಮ್ಮ ಸಂಸ್ಥಾನಕ್ಕೆ ಸೇರಿತವಾದ ಅನೇಕ ನದಿಗಳು ತಟಾಕ ಸರೋವರ ಸೋಪಾನ ಮಂಟಪ ಮುಂತಾದವುಗಳನ್ನು ಜೀರ್ಣೋದ್ಧಾರ ಮಾಡಿಸಿದವುಗಳಲ್ಲದೆ, ನೂತನವಾಗಿ ಅನೇಕವಾಗಿ ಮಾಡಿಸಿದರು.

ಆಳಿದ ಮಹಾಸ್ವಾಮಿಯವರು ಮಠಪತಿಗಳಿಗೂ ಆಯಾ ಮಠಗಳ ದೇವಸ್ಥಾನಗಳಿಗೂ ಸಹ ಸೇವೆಯನ್ನು ಮಾಡಿರುವ ವಿವರ.—ಮುಮ್ಮಡಿ ಕೃಷ್ಣರಾಜ ಒಡೆಯರವರು ತಮ್ಮ ಮುತ್ತಜ್ಜಂದಿರಾದ ದೊಡ್ಡಕೃಷ್ಣ ರಾಜ ಒಡೆಯರವರಿಗೆ ಸಮಾಶ್ರಯಣವನ್ನು ಮಾಡಿದ ಪರಕಾಲಸ್ವಾಮಿಗಳ ಕರಕಮಲಸಂಜಾತ ಪರಂಪರೆಯಾಗಿ ಬಂದ ಘಂಟಾವತಾರ ಶ್ರೀಪರ ಕಾಲ ಸ್ವಾಮಿಗಳನ್ನು ಕರೆಯಿಸಿಕೊಂಡು, ಸಮಾಶ್ರಯಣವನ್ನು ಮಾಡಿ ಕೊಂಡು, ಸ್ವಾಮಿಗಳಿಗೂ ಮಠದ ಹಯಗ್ರೀವ ಲಕ್ಷ್ಮೀನಾರಾಯಣದೇವ ರಿಗೂ ಸೇವಾರ್ಥವಾಗಿ ಕೃಷ್ಣಾಪುರ, ಮೇಲುಕೋಟೆ, ಪಟ್ಟಣ ಅಷ್ಟ ಗ್ರಾಮದ ಕೊಪ್ಪಲು, ಮಹೀಶೂರು ಮುಂತಾದ ಸ್ಥಳಗಳಲ್ಲಿ ವಿಸ್ತಾರ ವಾಗಿ ಮಠಗಳನ್ನು ಕಟ್ಟಿಸಿಕೊಟ್ಟರು. ದೇವರಿಗೆ ಕೊಟ್ಟಿರುವ ಆಭರಣಗಳು ಯಾವವೆಂದರೆ: ಚಿನ್ನದ ನವರತ್ನಮಯವಾದ ತೊಟ್ಟಿಲು, ಇದೇರೀತಿಯಾದ ಶಠಗೋಪುರ, ನವರತ್ನಪೀಠಸಹಿತವಾದ ಬಲಮುರೀ ಶಂಖ, ನವರತ್ನದ ಹಿಡಿಯುಳ್ಳ ಚಾಮರದ ಜೊತೆ, ಇದೇರೀತಿಯಾದ ಕನ್ನಡಿ, ಪಚ್ಚೇ ಮಕರ ಕಂಠಿ, ಪಚ್ಚೇ ಚಂಪಾಕಲ್ಲೀಸರ, ವಜ್ರದ ಪಂಚ ಪಾತ್ರೆ ಮತ್ತು ಉದ್ಧರಣೆ, ನವರತ್ನದ ಪದಕಗಳಿಂದೊಡಗೂಡಿದ ಅನೇಕ ಮುಕ್ತಾಹಾರಗಳು, ಚಿನ್ನ ಬೆಳ್ಳೀಪೀಠ ಪ್ರಭಾವಳಿಗಳಿಂದ ಸಹಿತವಾದ ಸೀತಾರಾಮಲಕ್ಷ್ಮಣ ಮುಂತಾದ ಅನೇಕ ದೇವರ ವಿಗ್ರಹಗಳು, ತಳಕಿನಸರ ಸಹಿತವಾದ ಚಿನ್ನದ ಮಂಟಪ, ಇದೇರೀತಿಯಾದ ಬೆಳ್ಳೀಮಂಟಪ, ಬೆಳ್ಳೀ ಸರಪಣಿ ಸಹಿತವಾದ ಚಿನ್ನದತೊಟ್ಟಿಲು, ಚಿನ್ನದ ಶಠಗೋಪುರ, ಚಿನ್ನದ ಪಾದುಕೇಜೊತೆ, ಚಿನ್ನದ ಕೊಪ್ಪರಿಗೆ, ಗಿಂಡಿ, ಪಾಸಾಲೆ, ತಟ್ಟೆ, ಅನೇಕ ಬಟ್ಟಲುಗಳು, ಗುಂಬಾರ್ತಿ ಏಕಾರ್ತಿ ಮೊದಲಾದ ಅನೇಕ ಆರ್ತಿಗಳು, ಚಿನ್ನದಹಿಡಿ ಹಾಕಿದ್ದುವ ಚಾಮರಿ ಮುಂತಾದ ಚಿನ್ನದ ಸಾಮಾನುಗಳು, ಬೆಳ್ಳೀ ತಳಕಿನ ಸಹಿತವಾದ ಮಂಟಪ, ಕೊಪ್ಪರಿಗೆ, ಬಿಂದಿಗೆ, ದೀವಿಗೆ ಕಂಬಗಳು, ದೀವಟಿಗೆ, ತಟ್ಟೆ, ಬಟ್ಟಲು, ಗಿಂಡಿ, ಪಾಸಾಲೆ, ಚಂಬು, ಪಂಚ ಪಾತ್ರೆ, ಉದ್ಧರಣೆ, ದೊಣ್ಣೆ, ಕಲಾಬತ್ತು ಛತ್ರಿ, ಚಾಮರಿ, ಸೂರೆಪಾನೆ, ಪಲ್ಲಕ್ಕಿ, ಆನೆ, ಕುದುರೆ, ಅಂಬಾರಿ, ಹಿತ್ತಾಳೇ ತಾಂಬ್ರಗಳಿಂದ ಮಾಡಿದ ಅನೇಕ ಪದಾರ್ಥಗಳು, ಮತ್ತು ನಗಾರಿ ನವಪತ್ತು ಮುಂತಾದ ಬಿರುದುಗಳು.

ಅಳಿಯ ಮಹಾಸ್ವಾಮಿಯವರು ಈ ಮೇಲೆಕಂಡ ವಸ್ತುಗಳನ್ನು ಕೊಟ್ಟಿದ್ದಲ್ಲದೆ, ಶ್ರೀಸ್ವಾಮಿಗಳಿಗೆ ತಿರುಪತಿ ರಾಮೇಶ್ವರ ಶ್ರೀರಂಗ ಮುಂತಾದ ದಿವ್ಯದೇಶಗಳ ಯಾತ್ರಾರ್ಥವಾಗಿ ಅನೇಕವಾಗಿ ದ್ರವ್ಯವನ್ನು ಕೊಟ್ಟು, ಸನ್ಮಾನಪೂರ್ವಕವಾಗಿ ಕಳುಹಿಸಿ, ಅನೇಕ ಯಾತ್ರೆಗಳನ್ನು ಮಾಡಿಸಿ, ಮಠಕ್ಕೆ ವರ್ಷಕ್ಕೆ ಅಷ್ಟಗ್ರಾಮದ ಫೌಜು ಕಛೇರಿಯಿಂದ ೧೩೪೦ ವರಹಾ ತಸ್ತೀಕು ಕೊಡುವಂತೆ ಕಟ್ಟಳೆ ಮಾಡಿಸಿ, ಮತ್ತು ಮೂರುಸಾವಿರ ಹುಟ್ಟುವ ಕೆಲವು ಗ್ರಾಮಭೂಮಿಗಳನ್ನು ಸರ್ವಮಾನ್ಯವಾಗಿ ಕೊಟ್ಟು ಮಠವನ್ನು ಜೀರ್ಣೋದ್ಧಾರ ಮಾಡಿಸಿದರು ; ಘಂಟಾವತಾರ ಪರಕಾಲಸ್ವಾಮಿಗಳ ಕರಕಮಲಸಂಜಾತರಾದವೇದಾಂತ ಬ್ರಹ್ಮತಂತ್ರಪರಕಾಲಸ್ವಾಮಿಗಳಿಗೆ ಅನೇಕ ವಸ್ತ್ರಾಭರಣ ಪಾತ್ರೆಗಳನ್ನೂ, ಪಾಲಕ್ಕಿ ಛತ್ರಿ ಚಾಮರ ಸೂರಿಪಾನ ಮುಂತಾದವುಗಳನ್ನೂ ಒಪ್ಪಿಸಿದರು ; ಇವರ ಕರಕಮಲ ಸಂಜಾತರಾದ ಶ್ರೀನಿವಾಸ ಬ್ರಹ್ಮತಂತ್ರ ಪರಕಾಲಸ್ವಾಮಿಗಳ ಸನ್ನಿಧಿಯಲ್ಲಿ ಭಗವದ್ಗೀತೋಪದೇಶವನ್ನು ಮಾಡಿಕೊಂಡು, ಅನೇಕ ವಸ್ತ್ರಾಭರಣಗಳನ್ನು ಒಪ್ಪಿಸಿ, ಅವರಿಗೆ ಯಥಾಶಾಸ್ತ್ರವಾಗಿ ಉಗ್ರರಥಶಾಂತಿಯನ್ನು ಮಾಡಿಸಿ, ಈ ಸ್ವಾಮಿಗಳು ಪಂಚವಟಿ ಕೃಷ್ಣಾನದಿ ಮುಂತಾದ ತೀರ್ಥಯಾತ್ರಾರ್ಥವಾಗಿ ಹೊರಡುವಲ್ಲಿ ಪಂಚಕಲಶದ ಪಲ್ಲಕ್ಕಿ ಎಂಬ ಬಿರುದನ್ನು ಕೊಟ್ಟು ಕಳುಹಿಸಿ, ಅವರು ಯಾತ್ರೆಯನ್ನು ಮಾಡಿಕೊಂಡು ಬರುವಲ್ಲಿ, ಪಂಚಕಲಶಗಳಿಂದೊಡಗೂಡಿರುವ ಚಿನ್ನದಪಲ್ಲಕ್ಕಿ ಛತ್ರ ಚಾಮರ ವಸ್ತ್ರಾಭರಣಗಳನ್ನು ಬಹಳವಾಗಿ ಒಪ್ಪಿಸಿ, ತಮ್ಮ ಉಗ್ರರಥಶಾಂತಿ ಮುಂತಾದ ಉತ್ಸವಕಾಲಗಳಲ್ಲಿ ತಾವು ಮಾಡಿದ ಅಷ್ಟೋತ್ತರವನ್ನು ಹೇಳುತ್ತಾ, ಚಿನ್ನ ಬೆಳ್ಳೀ ಹೂವುಗಳಿಂದ ಪಾದಪೂಜೆಯನ್ನು ಮಾಡಿ, ಅನಂತರದಲ್ಲಿ ಸ್ವಾಮಿಗಳಿಗೆ ಭೀಮರಥಶಾಂತಿಯನ್ನು ಮಾಡಿಸಿದರು ; ಈ ಸ್ವಾಮಿಗಳ ಕರಕಮಲಸಂಜಾತರಾದ ಶ್ರೀನಿವಾಸದೇಶಿಕೇಂದ್ರ ಬ್ರಹ್ಮತಂತ್ರಪರಕಾಲಸ್ವಾಮಿಗಳಿಗೆ ಅನೇಕವಸ್ತ್ರಾಭರಣಾದಿಗಳನ್ನು ಒಪ್ಪಿಸಿ, ಅನೇಕ ಜನರಕಡೆಯಿಂದ ಪಾದಪೂಜೆಯನ್ನು ಮಾಡಿಸಿ, ಸ್ವಾಮಿಗಳ ಆಚಾರ್ಯನಗಳಿಗೆಲ್ಲಾ ಶಾಲು ಮುಂತಾದ ವಸ್ತ್ರಗಳನ್ನು ಮರ್ಯಾದೆಮಾಡಿದನಂತರ, ಸ್ವಾಮಿಗಳಿಗೆ ಉಗ್ರರಥಶಾಂತಿ ಉತ್ಸವವನ್ನು ಮಾಡಿಸಿ, ಮೊದಲಿನಿಂದ

ಹೇಳಿದ ನಾಲ್ಕುಮಂದಿ ಸ್ವಾಮಿಗಳಪಾದುಕೆಗಳನ್ನೂ ಸ್ವೀಕರಿಸಿ, ದೇವರ ಮನೆಯಲ್ಲಿರಿಸಿ ಪ್ರತಿನಿತ್ಯದಲ್ಲಿಯೂ ಪೂಜೆ ಮಾಡುತ್ತಿದ್ದರು.

ಶೃಂಗೇರೀ ಮಠ.—ಆಳಿದಮಹಾಸ್ವಾಮಿಯವರಾದ ಮುಮ್ಮಡಿಕೃಷ್ಣರಾಜ ಒಡೆಯರವರು ಶೃಂಗೇರೀ ನೃಸಿಂಹಭಾರತಿ ಸ್ವಾಮಿಗಳ ಪರಮ ಗುರುಗಳು ೩ ಸಾರಿ ಬಂದಕಾಲದಲ್ಲಿಯೂ ವಸ್ತ್ರಾಭರಣ ಕಾಣಿಕೆಗಳಿಂದ ಬಹು ಸನ್ಮಾನಗಳನ್ನು ಮಾಡಿ, ಅವರ ಅನಂತರದಲ್ಲಿ ನೃಸಿಂಹಭಾರತಿ ಸ್ವಾಮಿಗಳು ಅನೇಕಾವರ್ತಿ ದಯಮಾಡಿದ್ದ ಕಾಲದಲ್ಲಿಯೂ ಬಹಳವಾಗಿ ವಸ್ತ್ರಾಭರಣ ಕಾಣಿಕೆಗಳನ್ನು ಒಪ್ಪಿಸಿದರು; ಸರ್ವಧಾರಿಸಂವತ್ಸರದಲ್ಲಿ ಸ್ವಾಮಿಗಳಿಗೆ ಅಮೂಲ್ಯವಾದ ನವರತ್ನ ಕಿರೀಟವನ್ನೂ ಅನೇಕ ಆಭರಣ ಗಳನ್ನೂ ಗ್ರಾಮಗಳನ್ನೂ ಕೊಟ್ಟು, ಚಂದ್ರಮೌಳೀಶ್ವರನಿಗೆ ರತ್ನದ ನಾಗಾಭರಣ ಸಹಿತವಾದ ಕೊಳಗ ಮುಂತಾದ ಅನೇಕ ಆಭರಣಗಳನ್ನು ಸಮರ್ಪಿಸಿ, ತಮ್ಮ ಮಾತುಶ್ರೀಯವರಿಂದಲೂ ಧರ್ಮಪತ್ನಿಯವರಿಂದಲೂ ಭಿಕ್ಷ ಪಾದಪೂಜೆಗಳನ್ನು ಮಾಡಿಸಿ, ವಸ್ತ್ರಾಭರಣ ಕಾಣಿಕೆಗಳನ್ನು ಕೊಡಿಸಿ, ತಮ್ಮ ಅಳಿಯಂದಿರು ಮುಂತಾದ ಅರಸುಗಳಿಂದ ಭಿಕ್ಷ ಪಾದಪೂಜೆ ಕಾಣಿಕೆ ಗಳನ್ನು ಕೊಡಿಸಿದರು; ದುರ್ಮತಿ ಸಂವತ್ಸರದಲ್ಲಿ ಕೋಟಿ ಪಂಚಾಕ್ಷರಿ ಜಪವನ್ನು ಮಾಡುತ್ತಿದ್ದ ಸಮಯದಲ್ಲಿ ಸ್ವಾಮಿಗಳು ರಾಮೇಶ್ವರಯಾತ್ರಾರ್ಥವಾಗಿ ಬರಲು, ಪೂರ್ವೋಕ್ತವಾಗಿ ಸೇವೆಯನ್ನು ಮಾಡಿ, ರಾಮೇಶ್ವರದಿಂದ ದಯಮಾಡುತ್ತಿರುವ ಕಾಲದಲ್ಲಿ, ಘಂಟೆಗಳಿಂದ ಅಲಂಕೃತವಾದ ಬರಗುವ ಮಣಿಯೊಡನೆ ಕೂಡಿದ ಬೆಳ್ಳಿಪೀಠವನ್ನು ಒಪ್ಪಿಸಿ, ಶ್ರೀಸ್ವಾಮಿಗಳನ್ನು ಬಹಳ ಸನ್ಮಾನ ಪೂರ್ವಕವಾಗಿ ಉತ್ತರದೇಶದಲ್ಲಿರುವ ಸಿಂಧ್ಯಾ ಲಷ್ಕರು, ಬರೋಡ, ಬ್ರಹ್ಮಾವರ್ತ, ದ್ವಾರಕಿ, ಮುಂತಾದ ಸ್ಥಳಗಳಲ್ಲಿರುವ ಅವರ ಶಿಷ್ಯರಿಗೆ ಆಚಾರ ವ್ಯವಸ್ಥೆಯನ್ನು ಮಾಡಿದರು. ಸ್ವಾಮಿಗಳು ಅಲ್ಲಿರುವ ಕಾಲದಲ್ಲಿ ಮಠಕ್ಕೆ ಬಹಳ ಋಣವಾಗಿದೆ ಎಂಬ ವರ್ತಮಾನವನ್ನು ಕೇಳಿ, ಆಳಿದ ಮಹಾ ಸ್ವಾಮಿಯವರು ಸ್ವಾಮಿಗಳನ್ನು ಇಲ್ಲಿಗೆ ದಯೆ ಮಾಡಬೇಕೆಂದು ವಿಜ್ಞಾಪನಾಪತ್ರಿಕೆಯನ್ನು ಬರೆದು ಕರೆತರಿಸಿ, ಆನಂದ ಸಂವತ್ಸರದ ನಿಜಆಷಾಢ ಬಹುಳ ೧೩ಯಲ್ಲಿ ಮಹೀಶೂರಿಗೆ ಬರುತ್ತಿರುವ ಸಮಯದಲ್ಲಿ, ಪಶ್ಚಿಮ

ವಾಹಿನಿಗೆ ಚಿತ್ತೈಯಿಸಿ, ಸ್ವಾಮಿಗಳ ದರ್ಶನವನ್ನು ಮಾಡಿ, ಪುನಃ ಅಮೂಲ್ಯವಾದ ನವರತ್ನದ ಕಿರೀಟವನ್ನೂ ಅನೇಕ ವಸ್ತ್ರಾಭರಣಗಳನ್ನೂ ಕೊಟ್ಟು ಬಂದರು ; ಅನಂತರ ಮಾರ್ಗದಲ್ಲಿ ತಾವು ಕಟ್ಟಿಸಿರುವ ಸತ್ರದ ಬಳಗೆ ತಮ್ಮ ಚತುರಂಗ ಸೇನಾಸಮೇತರಾಗಿ ಅತಿ ವೈಭವದಿಂದ ಚಿತ್ತೈಯಿಸಿ, ಸ್ವಾಮಿಗಳಿಗೆ ಪರಂಪರಾಪ್ರಾಪ್ತವಾಗಿಬಂದ ಪಂಚಕಲಶಗಳಿಂದ ಅತ್ಯಂತ ಶೋಭಾಯಮಾನವಾಗಿರುವ ಚಿನ್ನದ ಪಲ್ಲಕ್ಕಿಯನ್ನೂ, ಇದೇರೀತಿಯೊದ ಛತ್ರ ಸೂರಿಪಾನ ಚೌರಿ ಮೋರ್ಛಾಲು ಚಿನ್ನದ ಮಕರತೋರಣ ಬೆಳ್ಳಿಪಂಚದೀಪಟಿಗೇ ಜೊತೆ ಮುಂತಾದ ಪದಾರ್ಥಗಳನ್ನು ಒಪ್ಪಿಸಿ ಕರೆದುಕೊಂಡು ಬಂದು, ಅರಮನೇ ಕರೀಕಲ್ಲು ತೊಟ್ಟಿಯಲ್ಲಿ ಇಳಿಸಿದರು ; ಆಬಳಿಕ ಚಾತುರ್ಮಾಸ್ಯ ಸಂಕಲ್ಪವನ್ನೂ ೮—೧೦ ಲಕ್ಷ ಬ್ರಾಹ್ಮಣ ಸಮಾರಾಧನೆಯನ್ನೂ ಮಠದಲ್ಲಿ ನಡೆಯತಕ್ಕ ನವರಾತ್ರ್ಯುತ್ಸವ ಮುಂತಾದ ಉತ್ಸವಗಳನ್ನೂ ಮಾಡಿಸಿ, ಅನಶನವ್ರತದಿಂದ ತಪೋನಿಷ್ಠರೂ ಮಹಾಜ್ಞಾನಿಗಳೂ ಆದ ಈ ನೃಸಿಂಹ ಭಾರತಿ ಸ್ವಾಮಿಗಳಿಂದ ಶಿವಗೀತೋಪದೇಶವನ್ನು ಮಾಡಿಸಿಕೊಂಡು, ಅದ್ವೈತವಿಚಾರಣೆಯನ್ನು ಚನ್ನಾಗಿಮಾಡಿ, ಈ ಗೀತಾ ಮಂಗಳಕಾಲದಲ್ಲಿ ತಾವುಮಾಡಿದ ಅಷ್ಟೋತ್ತರನಾಮಗಳನ್ನು ಹೇಳುತ್ತಾ ಸ್ವಾಮಿಗಳ ಪಾದಪೂಜೆಯನ್ನು ಮಾಡಿ, ಅಮೌಲ್ಯವಾದ ವಜ್ರ ಪಚ್ಚೆ ಮುಂತಾದ ರತ್ನಗಳಿಂದ ಒಡಗೂಡಿರುವ ಮಕರಕಂಠಿಯನ್ನೂ, ನವರತ್ನ ಮಯವಾದ ಅನೇಕ ಮುಕ್ತಾಹಾರಗಳನ್ನೂ, ಚಂದ್ರಮೌಳೀಶ್ವರಸ್ವಾಮಿಗೆ ಬೆಳ್ಳಿನಾಗಾಭರಣವನ್ನೂ, ಅಮೌಲ್ಯವಾದ ಅನೇಕ ವಸ್ತ್ರ ಪಾತ್ರೆ ಕಾಣಿಕೆಗಳನ್ನೂ ಒಪ್ಪಿಸಿ ಶ್ರೇಯಸ್ಸನ್ನು ಪಡೆದರು ; ಅನಂತರದಲ್ಲಿ ತಮ್ಮ ಎಲ್ಲಾ ಧರ್ಮಪತ್ನಿಯರಿಂದಲೂ ಅನೇಕ ವಜ್ರಗಳಿಂದ ಅಲಂಕೃತವಾದ ವಜ್ರದ ಪಂಚಪಾತ್ರೆ, ರತ್ನದ ಉದ್ಧರಣೆ, ಅಷ್ಟಕೋಣದ ನವರತ್ನದ ಸಂಪುಟ, ರತ್ನಮಯವಾದ ಬಟ್ಟಲು, ರತ್ನಮಯವಾದ ಬಲಮುರೀ ಶಂಖ ಮುಂತಾದ ಅನೇಕ ವಸ್ತ್ರಾಭರಣ ಕಾಣಿಕೆಗಳನ್ನು ಒಪ್ಪಿಸಿ ಭಿಕ್ಷ ಪಾದಪೂಜೆಗಳನ್ನು ಮಾಡಿಸಿದರು ; ಅಳಿಯಂದಿರು ಮುಂತಾದ ಅರಸುಗಳು, ಗುರಿಕಾರರು, ತ್ರಿಮತಸ್ಥ ಅಧಿಕಾರಿಗಳು, ಸಮುಖದ ವಿದ್ವಾಂಸರು, ಗೋಸಾವಿಗಳು, ವೈಶ್ಯರು, ಗುಜರಾತಿಯವರು ಮುಂತಾದ ಅನೇಕ ವರ್ತಕರು, ಚಿತ್ರಗಾರರು ಮುಂತಾದ

ಅನೇಕ ಪಣಕಟ್ಟಿನವರು ಮೊದಲಾದ ಸಮಸ್ತ ಜನಗಳಿಂದಲೂ ಅವರವರ ಯೋಗ್ಯತಾನುಸಾರವಾಗಿ ಭಿಕ್ಷ ಪಾದಪೂಜೆಗಳನ್ನು ಮಾಡಿಸಿ, ಅನೇಕ ವಸ್ತ್ರಾಭರಣ ಕಾಣಿಕೆ ಕಪ್ಪಗಳನ್ನು ಕೊಡಿಸಿದರು; ಮಠಕ್ಕೆ ಪೂರ್ವ ದಲ್ಲಿದ್ದ ಕೆಲವು ಸಾಲವನ್ನು ತೀರಿಸಿ, ವಿಶೇಷವಾಗಿ ಪರ್ಯೋಶನವನ್ನು ಮಾಡಿ ಕೊಟ್ಟು, ಚಂದ್ರಮೌಳೀಶ್ವರಸ್ವಾಮಿಗೆ ಚಿನ್ನ ಬೆಳ್ಳಿಗಳಿಂದ ನಿರ್ಮಿತವಾದ ಮಂಟಪವನ್ನು ಒಪ್ಪಿಸಿ, ಮಠಕ್ಕೆ ನೂತನವಾಗಿ ಅನೇಕ ಸೇವೆಗಳನ್ನು ಮಾಡಿ, ಸ್ವಾಮಿಗಳ ಪಾದುಕಗಳನ್ನು ಸ್ವೀಕರಿಸಿ ಪ್ರತಿನಿತ್ಯದಲ್ಲಿಯೂ ಪೂಜಿಸುತ್ತಾ, ಮಠವನ್ನು ಪ್ರೇಮದಿಂದ ಸಂರಕ್ಷಿಸುತ್ತಾ ಬಂದರು.

ತಮ್ಮ ಸಂಸ್ಥಾನದಲ್ಲಿಯೂ ದೇಶಾಂತರಗಳಲ್ಲಿಯೂ ಇರುವ ಶ್ರೀವೈಷ್ಣವ ಸ್ಮಾರ್ತ ಮಾಧ್ವರಲ್ಲಿ ಪ್ರಸಿದ್ಧರಾದ ಅನೇಕ ಮಠಪತಿಗಳನ್ನು ಕರೆಯಿಸಿ ಸನ್ಮಾನಗಳನ್ನು ಮಾಡಿರುವ ವಿವರ.—ಅಹೋಬಲ ಮಠಪತಿಗಳಾದ ಶ್ರೀನಿವಾಸಸ್ವಾಮಿಗಳನ್ನು ಕರೆಸಿಕೊಳ್ಳಿಸಿ, ಅವರ ಶಿಷ್ಯರಿಗೆ ಸಮಾಶ್ರಯಣವನ್ನು ಮಾಡಿಸಿ, ಅನೇಕ ಕಾಣಿಕಗಳನ್ನು ಕೊಡಿಸಿ, ಅರಮನೆಯಲ್ಲಿ ದೇವರ ಪೂಜೆಯನ್ನೂ ಭಿಕ್ಷ ಪಾದಪೂಜೆಗಳನ್ನೂ ಮಾಡಿಸಿ, ಅಮೂಲ್ಯವಾದ ಅನೇಕ ವಸ್ತ್ರಾಭರಣಗಳನ್ನು ಒಪ್ಪಿಸಿ, ಶ್ರೀರಂಗಪಟ್ಟಣ ಮೇಲುಕೋಟೆ ಮಹೀಶೂರು ಮುಂತಾದ ಸ್ಥಳಗಳಲ್ಲಿ ಮಠವನ್ನು ಕಟ್ಟಿಸಿ ಕೊಟ್ಟರು.

ರಂಗನಾಥಸ್ವಾಮಿಗಳು ದಯೆಮಾಡಿ ಇದ್ದಾಗ, ಮೇಲೆಕಂಡ ರೀತಿಯಾಗಿ ಪೂಜೆಯನ್ನು ಮಾಡಿ, ಮಠದ ಲಕ್ಷ್ಮೀನೃಸಿಂಹದೇವರಿಗೆ ಅನೇಕ ವಸ್ತ್ರಾಭರಣಗಳು, ಜವಾಹಿರು ಹೂಜೆ, ದಶಾವತಾರದ ನವರತ್ನದ ಪೆಟ್ಟಿಗೆ, ಇದೇ ರೀತಿಯಾದ ಸಂಪುಟ, ಬೆಳ್ಳಿಮಂಟಪ, ಶ್ರೀಗಂಧದ ಪಲ್ಲಕ್ಕಿ, ಛತ್ರ, ಚಾಮರ, ಸೂರಿಪಾನೆ, ಆನೆ, ಕುದುರೆ, ನವರತ್ನದ ಪಾದುಕೆ, ಚಿನ್ನ ಬೆಳ್ಳಿ ಮೊದಲಾದ ಲೋಹಗಳಿಂದ ಮಾಡಿದ ಪೂಜೋಪಕರಣ ಸೇವೋಪಕರಣಗಳು, ನವರತ್ನದ ಪದಕಗಳಿಂದ ಒಡಗೂಡಿರುವ ಮುಕ್ತಾಹಾರಗಳು ಮುಂತಾದವುಗಳನ್ನು ಸಮರ್ಪಿಸಿದರು; ಇದಲ್ಲದೆ ಸೋಸಲೆ ತಲಕಾಡಿಗೆ ಸೇರಿತವಾದ ಒಂದು ಸಾವಿರ ವರಹಾಗಳ ಮೇಲೆ

ಹುಟ್ಟುವಳಿಯಾಗುವ ನಾಗನಹಳ್ಳಿ, ಮೇಗಳಹಳ್ಳಿ, ಚಿನಕನಹಳ್ಳಿ ಎಂಬ ೩ ಗ್ರಾಮಗಳನ್ನು ಕೊಟ್ಟರು.

ಶಾ ॥ ೧೭೭೭ನೇ ಆನಂದ ಸಂವತ್ಸರದ ಫಾಲ್ಗುನ ಶುದ್ಧ ೪ ಮಂಗಳವಾರದಲ್ಲಿ ಮೇಲೆ ಕಂಡ ಅಹೋಬಲ ಮಠದ ಸ್ವಾಮಿಗಳು ತಿರುಮಕೂಡಲು ಮಾರ್ಗವಾಗಿ ಅಲಸಹಳ್ಳಿಯ ಸರೋವರ ಅನ್ನಸತ್ರದ ಧರ್ಮಶಾಲೆಗೆ ಬಂದು ಇಳಿದುಕೊಂಡ ಬಳಿಕ, ಮುಮ್ಮಡಿ ಕೃಷ್ಣರಾಜ ಒಡೆಯರವರು ಅಲ್ಲಿಗೆ ಚಿತ್ತಯಿಸಿ, ಸನ್ನಿಧಾನದಿಂದ ದೇವಪೂಜಾದಿಗಳನ್ನು ಮಾಡಿಸಿ, ವಸ್ತ್ರಭೂಷಣಾದಿ ಮರ್ಯಾದೆಗಳನ್ನು ಮಾಡಿ, ಈ ಶುದ್ಧ ೫ ಬುಧವಾರದಲ್ಲಿ ಮಹೀಶೂರಿಗೆ ಕರೆದುಕೊಂಡು ಬಂದು, ವರಾಹಸ್ವಾಮಿ ದೇವಸ್ಥಾನದಲ್ಲಿ ಇಳಿಸಿದರು; ಈ ಶುದ್ಧ ೯ ಭಾನುವಾರದಲ್ಲಿ ಅರಮನೇ ಕನ್ನಡೀ ತೊಟ್ಟಿಯಲ್ಲಿ ದೇವರ ಪೂಜೆಯೂ ಡೋಲೋತ್ಸವವೂ ಆದನಂತರ, ದೇವಸ್ಥಾನದಲ್ಲಿ ಭಿಕ್ಷವನ್ನು ಮಾಡಿಸಿ, ಜವಾಹಿರು ಪದಕದಿಂದೊಡಗೂಡಿದ ೪ ಎಳೇ ಕಂಠಿ ಮೊದಲಾದ ಮುಕ್ತಾಹಾರಗಳು, ಪೀತಾಂಬರಾದಿ ವಸ್ತ್ರಗಳು, ಮ್ಯಾನಾ, ಚಿನ್ನದ ಕಲಶವುಳ್ಳ ಛತ್ರ, ಚೌರಿ, ಮೋರ್ಚಾಲ್, ಗಂಧದ ಚೌರಿ, ಬೀಸಣಿಗೆ, ಖಾಸಾ ದೇವರ ಮನೆಯಿಂದ ಚಿನ್ನದ ರಾಮಾನುಜಾಚಾರ್ಯರು ಮತ್ತು ವೇದಾಂತಾಚಾರ್ಯರ ವಿಗ್ರಹಗಳು, ಮುಂತಾದ ಅನೇಕ ವಸ್ತುಗಳನ್ನೂ ದ್ರವ್ಯವನ್ನೂ ಕೊಟ್ಟು ಮರ್ಯಾದೆ ಮಾಡಿದರು.

ತೋತಾದ್ರಿ ಮಠ—ಆಳದ ಮಹಾಸ್ವಾಮಿಯವರು ತೋತಾದ್ರಿ ಮಠದ ವಾನಮಾಲೆ ರಾಮಾನುಜಸ್ವಾಮಿಗಳು ದಯೆ ಮಾಡಿಯಿದ್ದಾಗ, ಅವರಿಗೆ ಅನೇಕ ವಸ್ತ್ರಗಳನ್ನೂ ಮಕರಕಂಠಿ ಮೊದಲಾದ ಆಭರಣಗಳನ್ನೂ ಕೊಟ್ಟು ಮರ್ಯಾದೆ ಮಾಡಿ, ಈ ಮಠದ ಪರಂಪರೆಯ ಸ್ವಾಮಿಗಳಿಗೂ ಅನೇಕವಾಗಿ ಮರ್ಯಾದೆ ಮಾಡಿದರು.

ವ್ಯಾಸರಾಯ ಮಠ—ಮುಮ್ಮಡಿ ಕೃಷ್ಣರಾಜ ಒಡೆಯರವರು ವ್ಯಾಸರಾಯ ಮಠದ ವಿದ್ಯಾವಲ್ಲಭ ಸ್ವಾಮಿಗಳನ್ನು ಕುಂಭಕೋಣದಿಂದ ಕರೆಯ ಕಳುಹಿಸಿ, ಸೋಸಲೆಯಲ್ಲಿ ದೊಡ್ಡದಾಗಿ ಮಠವನ್ನು ಕಟ್ಟಿಸಿಕೊಟ್ಟು,

ನವರತ್ನದ ಪದಕಗಳಿಂದೊಡಗೂಡಿರುವ ಮುಕ್ತಾಹಾರ ಮುಂತಾದ ಆಭರಣಗಳನ್ನೂ ವಸ್ತ್ರಗಳನ್ನೂ ಕೊಟ್ಟರು ; ಇವರು ಮೊದಲಾದ ಈ ಮಠದ ಪರಂಪರೆಯ ಸ್ವಾಮಿಗಳಿಗೂ, ಗೋಪಾಲಕೃಷ್ಣ ಸೇವೆ ನಡೆಯುವದಕ್ಕೂ, ಬ್ರಾಹ್ಮಣರ ಸಂತರ್ಪಣೆ ನಡೆಯುವದಕ್ಕೂ, ತಿಂಗಳು ೧ಕ್ಕೆ ೧೫೦ ವರಹಾದ ಮೇರೆಗೆ ವರ್ಷಾಶನವನ್ನು ಮಾಡಿ, ಗ್ರಾಮವನ್ನು ಕೊಟ್ಟು, ದೇವರಿಗೆ ಮಕರ ಕಂಠಿಯನ್ನೂ, ನಿತ್ಯಕಟ್ಟಲೆ ದೀಪಾರಾಧನೆ ನಡೆಯುವದಕ್ಕೆ ಬೆಳ್ಳೀ ಹಣತೆಗಳಿಂದೊಡಗೂಡಿರುವ ಖಾಸಾ ಶಿವಪೂಜೆಯಲ್ಲಿದ್ದ ದೀಪ ಮಾಲಿಕಾ ಸ್ತಂಭವನ್ನೂ ಒಪ್ಪಿಸಿ, ಅನೇಕವಾಗಿ ಸೇವೆ ಮಾಡಿದರು.

ಉತ್ತರಾದಿ ಮಠ.—ಉತ್ತರಾದಿ ಮಠದ ಸತ್ಯಧರ್ಮಸ್ವಾಮಿಗಳು ಶ್ರವಣೂರಲ್ಲಿ ಇದ್ದರು. ಶ್ರೀ ಕೃಷ್ಣರಾಜ ಒಡೆಯರವರು, ತಮ್ಮ ದಿವಾನ್ ಪೂರ್ಣಯ್ಯನವರು ಮುಂತಾದ ಅಧಿಕಾರಸ್ಥರಿಗೆ ಮುದ್ರಾಧಾರಣೆ ಯಿಲ್ಲದೆ ಇದ್ದದ್ದರಿಂದ, ಆಸ್ವಾಮಿಗಳನ್ನು ಕರೆಯು ಕಳುಹಿಸಿ, ತಮ್ಮ ಸಂಸ್ಥಾನದಲ್ಲಿ ಹೇಮಾವತೀ ನದೀ ತೀರದಲ್ಲಿ ಪ್ರಸಿದ್ಧವಾಗಿರುವ ನರಸಿಂಹಪುರದಲ್ಲಿ ದೊಡ್ಡದಾಗಿ ಮಠವನ್ನು ಕಟ್ಟಿಸಿ ಕೊಟ್ಟರು ; ಮಠಕ್ಕೆ ಚಿನ್ನದ ಮಂಟಪ, ಸರಪಣಿಯಿಂದೊಡಗೂಡಿದ ಚಿನ್ನದ ತೊಟ್ಟಿಲು, ಚಿನ್ನ ಬೆಳ್ಳೀ ತಟ್ಟೆ ಬಟ್ಟಲು, ಧೂಪಾರ್ತಿ ಮೊದಲಾದ ಬಗೆಬಗೇ ಆರ್ತಿಗಳು, ನವರತ್ನದ ಪದಕಗಳಿಂದೊಡಗೂಡಿದ ಅನೇಕ ಮುಕ್ತಾಹಾರ ವಸ್ತ್ರಾಭರಣ ಮುಂತಾದ ಅನೇಕ ಪೂಜೋಪಕರಣ ಸೇವೋಪಕರಣಗಳನ್ನೂ, ಚಿನ್ನ ಬೆಳ್ಳಿಗಳಿಂದ ಮಾಡಿದ ಪಾತ್ರೆಗಳನ್ನೂ ಒಪ್ಪಿಸಿದರು ; ರಾಮದೇವರ ಸಮಾರಾಧನೆ ನಡೆಯುವದಕ್ಕೆ ತಿಂಗಳು ೧ಕ್ಕೆ ೩೦೦ ಕಂಪಣೀ ರೂಪಾಯಿ ಮೇರೆಗೆ ನಡೆಯುವದಕ್ಕೆ ನರಸಿಂಹಪುರದ ತಾಲ್ಲೂಕಿನ ವರ್ಷಾಶನ ನಡೆಯುವಂತೆ ಕಟ್ಟಲೆ ಮಾಡಿಸಿ, ಅನೇಕ ಗ್ರಾಮ ಭೂಮಿಗಳನ್ನು ಕೊಟ್ಟರು ; ಇವರು ಮೊದಲು ಈ ಮಠದ ಪರಂಪರೆಯ ಸ್ವಾಮಿಗಳು ಮಹೀಶೂರಿಗೆ ಅನೇಕಾವರ್ತಿ ಬಂದಿದ್ದ ಸಮಯದಲ್ಲಿ ಅವರಿಗೆ ಪೀತಾಂಬರಾದಿ ಅನೇಕ ವಸ್ತ್ರಾಭರಣಗಳನ್ನೂ ದ್ರವ್ಯವನ್ನೂ ಕೊಟ್ಟು ಭಿಕ್ಷೆ ಮಾಡಿಸಿ, ಈ ಮಠದ ರಾಮದೇವರ ಸೇವೆಯನ್ನು ಅನೇಕವಾಗಿಮಾಡಿದರು.

ಮುಂಬಾಳೇ ಮಠ.—ಶ್ರೀಕೃಷ್ಣರಾಜ ಒಡೆಯರವರು ರಾಘವೇಂದ್ರ ಸ್ವಾಮಿಗಳ ಪರಂಪರೆಯಲ್ಲಿದ್ದ ಸುಜನೇಂದ್ರ ಸ್ವಾಮಿಗಳನ್ನು ಮುಂಬಾಳೆಯಿಂದ ಕರಿಸಿ, ನಂಜನಗೂಡಿನಲ್ಲಿ ವಿಸ್ತಾರವಾಗಿ ಮಠವನ್ನು ಕಟ್ಟಿಸಿಕೊಟ್ಟು, ಹಗಲು ದೀವಟಿಗೆ ಬಿರುದುಗಳನ್ನು ನೂತನವಾಗಿ ಕೊಟ್ಟು, ಅನೇಕ ಗ್ರಾಮ ಭೂಮಿಗಳನ್ನೂ ಚಿನ್ನ ಬೆಳ್ಳೀ ಪಾತ್ರೆಗಳನ್ನೂ ವಸ್ತ್ರಾಭರಣ ಮುಂತಾದ ಪೂಜೋಪಕರಣದ ಸಾಮಗ್ರಿಗಳನ್ನೂ ಒಪ್ಪಿಸಿದರು; ಇವರು ಮೊದಲು ಈ ಮಠದ ಪರಂಪರೆಯ ಸ್ವಾಮಿಗಳು ಅನೇಕಾವರ್ತಿ ಬಂದಿದ್ದ ಸಮಯದಲ್ಲಿ, ಅವರಿಗೆ ವಸ್ತ್ರಾಭರಣಗಳನ್ನೂ ದ್ರವ್ಯವನ್ನೂ ಕೊಟ್ಟು ಭಿಕ್ಷವನ್ನು ಮಾಡಿಸಿದ್ದಲ್ಲದೆ, ಈ ಸ್ವಾಮಿಗಳ ನಾಮಾಂಕಿತವಾಗಿ ಬೆಳ್ಳೀ ವೃಂದಾವನವನ್ನು ಮಾಡಿಸಿ, ಕವರ್ಥ ತೋಟ್ಟಿಯಲ್ಲಿ ದಿನಗಟ್ಟಲೆ ಪೂಜೆ ನಡೆಯುವಂತೆಯೂ, ಹಗಲು ರಾತ್ರಿ ಅನ್ನಸಂತರ್ಪಣೆ ನಡೆಯುವಂತೆಯೂ ಕಟ್ಟಲೆ ಮಾಡಿಸಿದರು.

ಕೂಡ್ಲೀಮಠ.—ಪುಷ್ಪಗಿರಿ ಶಿವಗಂಗೆ ಅವನಿ ಮುಂತಾದ ಸ್ಮಾರ್ತ ಮಠಗಳಿಗೂ ಉಡುಪಿಯ ಎಂಟು ಮಠಗಳಿಗೂ ಅನೇಕವಾಗಿ ವಸ್ತ್ರಾಭರಣಗಳನ್ನೂ ಚಿನ್ನ ಬೆಳ್ಳಿಗಳ ಪಾತ್ರೆಗಳನ್ನೂ ಕೊಟ್ಟು, ಗ್ರಾಮ ಭೂಮಿ ವರ್ಷಾಶನವನ್ನು ಮಾಡಿಕೊಟ್ಟರು.

ಈ ಮಠಪತಿಗಳು ಸರ್ವಕಾಲದಲ್ಲಿಯೂ ತಮ್ಮ ತಮ್ಮ ದೇವತಾ ಪೂಜೆ ಪಾಠ ಪ್ರವಚನ ಮುಂತಾದ ಸದ್ವ್ಯಾಸಂಗದಲ್ಲಿಯೇ ಇರುತ್ತಿರುವ ಸಮಯದಲ್ಲಿ, ಮಳಯಾಳಿ ಅನಂತಶಯನ ಕೊಚ್ಚಿ ಮುಂತಾದ ಪಾಳ್ಯಪಟ್ಟನಲ್ಲಿರುವ ಬ್ರಾಹ್ಮಣರು ಮುಂತಾದ ಜನರ ಆಚಾರ ವಿಚಾರವನ್ನು ಮಾಡಿಕೊಂಡು ಇದ್ದ ಶೃಂಗೇರೀ ಮಠಕ್ಕೆ ಸೇರಿತವಾದ ಸುರೇಶ್ವರಾಚಾರ್ಯರ ಸಂಪ್ರದಾಯದ ಕೃಷ್ಣಭಾರತಿ ಸ್ವಾಮಿಗಳು, ಮಹೀಶೂರಿಗೆ ದಯಮಾಡಿಯಿದ್ದ ಶೃಂಗೇರೀ ನೃಸಿಂಹ ಭಾರತಿ ಸ್ವಾಮಿಗಳ ದರ್ಶನ ನಿಮಿತ್ತವಾಗಿ, ೧೭೬೭ನೇ ರಾಕ್ಷಸ ಸಂವತ್ಸರದ ಫಾಲ್ಗುನ ಮಾಸದಲ್ಲಿ ಬಂದಿದ್ದರು. ಆಗ ಆಳಿದ ಮಹಾಸ್ವಾಮಿಯವರು ಅರಮನೆಯಲ್ಲಿ ಈ ಸ್ವಾಮಿಗಳವರ ಪೂಜೆಯನ್ನು ಮಾಡಿಸಿ, ನವರತ್ನದ ಮುಕ್ತಾಹಾರ ಮುಂತಾದ ಆಭರಣಗಳನ್ನೂ ವಸ್ತ್ರ

ಗಳನ್ನು ಕೊಟ್ಟು, ಛತ್ರ ಚಾಮರ ಆನೆ ಮುಂತಾದ ಮರ್ಯಾದೆಗಳನ್ನು ಮಾಡಿಸಿ ಅವರ ಸ್ಥಳಕ್ಕೆ ಕಳುಹಿಸಿ ಕೊಟ್ಟರು.

ಜೈನಮತಕ್ಕೆ ಮುಖ್ಯಸ್ಥಳವಾದ ಮೂಡಬಿದರೆ, ಧರ್ಮಸ್ಥಳ ಮುಂತಾದ ಸ್ಥಳಗಳಲ್ಲಿರುವ ಜಿನ ದೇವರಿಗೆ ಅನೇಕ ವಸ್ತ್ರಾಭರಣಗಳನ್ನು ಕೊಟ್ಟಿದ್ದಲ್ಲದೆ, ಮಹೀಶೂರ ಸಂಸ್ಥಾನದಲ್ಲಿ ಜೈನಮತಕ್ಕೆ ಪ್ರಸಿದ್ಧಸ್ಥಾನವಾದ ಶ್ರವಣಬೆಳಗೊಳದಲ್ಲಿ ಇರುವ ಜಿನ ದೇವರಿಗೆ ಅನೇಕಾವರ್ತಿ ಮಸ್ತಕಾಭಿಷೇಕವನ್ನು ಮಾಡಿಸಿ, ತಸ್ತೀಕು ನಡೆಯುವದಕ್ಕೂ ಈ ಮಠದಲ್ಲಿರುವ ಜೈನಸಂನ್ಯಾಸಿಗಳಿಗೂ ಗ್ರಾಮ ಭೂಮಿಗಳನ್ನು ಕೊಟ್ಟು, ಮಹೀಶೂರು ಮುಂತಾದ ೧೨ ಗಡಿಗಳಲ್ಲಿ ಇರತಕ್ಕ ಜಿನ ದೇವರಿಗೆ ವಿಧ ಮೇರೆ ತಸ್ತೀಕನ್ನು ಉಂಟುಮಾಡಿ, ಅನೇಕ ಜೈನ ಪಂಡಿತರಿಗೆ ಸಂಬಳ ಗ್ರಾಮಭೂಮಿಗಳನ್ನು ಕೊಟ್ಟರು; ಇದೇ ರೀತಿಯಾಗಿ ಗಜ್ಜೀ ಮಠ ಜಪದ ಕಟ್ಟೇಮಠ ಮೊದಲಾದ ಅನೇಕ ಶೈವ ಮಠಗಳಿಗೂ ಗ್ರಾಮ ಭೂಮಿಗಳನ್ನು ಕೊಟ್ಟು ಸಂರಕ್ಷಿಸುತ್ತಾ ಬಂದರು.

ದಾನಗಳು.—ಧೊರೆಗಳು ತುಲಾಪುರುಷದಾನಗಳನ್ನು ಮಾಡಿಕೊಟ್ಟದ್ದು: ಶಾ|| ೧೭೬೫ನೇ ಸ್ವಭಾನು ಸಂವತ್ಸರದ ವೈಶಾಖ ಶುದ್ಧ ೫ಯಲ್ಲಿ ೧೯,೫೦೦ ಕಂಪಣೀ ರೂಪಾಯಿಗಳು, ಶಾ|| ೧೭೬೦ನೇ ಹೇವಿಳಂಬಿ ಸಂವತ್ಸರದ ಪುಷ್ಯ ಬಹುಳ ೨ ಸ್ಥಿರವಾರದಲ್ಲಿ ೩,೦೪೪ ರಾಜಾ ರೂಪಾಯಿಗಳು, ಶಾ|| ೧೭೭೫ನೇ ಪರಿಧಾವಿ ಸಂವತ್ಸರದ ಚೈತ್ರ ಶುದ್ಧ ೧೫ ಭಾನುವಾರದಲ್ಲಿ ೭,೫೦೦ ಕಂಪಣೀ ರೂಪಾಯಿ. ಶಾ|| ೧೭೬೬ನೇ ತಾರಣ ಸಂವತ್ಸರದ ಮಾಘ ಶುದ್ಧ ೧೫ ಗುರುವಾರದಲ್ಲಿ ಮಾತುಶ್ರೀಯವರು ನಂಜಮ್ಮಣ್ಣಿಯವರಿಂದ ೪,೯೭೨ ರೂಪಾಯಿ; ಶಾ|| ೧೭೬೮ನೇ ವ್ಯಯ ಸಂವತ್ಸರದ ಆಷಾಢ ಶುದ್ಧ ೧೦ ಶುಕ್ರವಾರದಲ್ಲಿ ಮಾತುಶ್ರೀ ದೊಡ್ಡಮ್ಮನವರಾದ ದೇವಾಜಮ್ಮಣ್ಣಿಯವರಿಂದ ೫,೭೪೦ ರೂಪಾಯಿ, ಶಾ|| ೧೭೫೦ನೇ ಸರ್ವಜಿತು ಸಂವತ್ಸರದ ಆಷಾಢ ಬಹುಳ ೬ ಸ್ಥಿರವಾರ ಕರ್ಕಾಟಕ ಸಂಕ್ರಮಣದಲ್ಲಿ ಮಾತುಶ್ರೀ ಲಕ್ಷ್ಮಮ್ಮಣ್ಣಿಯವರಿಂದ ೫,೪೩೦ ರೂಪಾಯಿ, ಶಾ|| ೧೭೭೮ನೇ ನಳ ಸಂವತ್ಸರದ ಆಶ್ವಯುಜದಲ್ಲಿ ೬,೦೦೦ ರೂಪಾಯಿ, ಅದೇ

ನಳ ಸಂವತ್ಸರದ ಪುಷ್ಯಮಾಸದಲ್ಲಿ ೬,೫೧೦ ರೂಪಾಯಿ. ಹಿರಣ್ಯಗರ್ಭ ದಾನಮಾಡಿ ಕೊಟ್ಟದ್ದು: ಶಾ|| ೧೭೬೧ನೇ ವಿಳಂಬಿ ಸಂವತ್ಸರದ ವೈಶಾಖ ಶುದ್ಧ ೩ ಶುಕ್ರವಾರ ದಿವಿ ೧೩| ಗಳಿಗೇ ಕರ್ಕಾಟಕ ಲಗ್ನದಲ್ಲಿ ಚಿನ್ನ ೪೧ ಸೇರೂ ೫೩ ವರಹವೂ ೩ ಹಣದ ತೂಕ, ದಕ್ಷಿಣೆ ೪೦೦ ರೂಪಾಯಿ, ಮುತ್ತು ೩೦೬ ; ಶಾ|| ೧೭೮೯ನೇ ಅಕ್ಷಯ ಸಂವತ್ಸರದ ವೈಶಾಖ ಶುದ್ಧ ೧೫ ಭಾನುವಾರದಲ್ಲಿ ಚಿನ್ನ ೪೧ ಸೇರೂ ೧೩ ವರಹವೂ ೩ ಹಣದ ತೂಕ, ದಕ್ಷಿಣೆ ೪೦೦ ರೂಪಾಯಿಗಳು, ಮುತ್ತು ೩೦೪. ಮೂರು ಸಾರಿ ತಿಲ ಗರ್ಭದಾನ ಮಾಡಿದ್ದಕ್ಕೆ ರೂಪಾಯಿ ೩,೭೦೦. ಶ್ರೀಕೃಷ್ಣರಾಜ ಒಡೆಯರವರು ಇವುಗಳಲ್ಲದೆ ತಿಲಪರ್ವತ ತಿಲರಾಶಿ ಸಾಲಂಕಾರ ತ್ರಿಮೂರ್ತಿ ದಾನ ಗುಪ್ತ ಕೂಶ್ಮಾಂಡದಾನದ ದ್ವಾದಶ ಸಹಸ್ರ ಗೋದಾನ ಗಜಾಶ್ವರಥಾದಿಗಳದಾನ ಮೊದಲಾದ ಅನೇಕ ದಾನಗಳನ್ನು ಮಾಡಿದ್ದಲ್ಲದೆ, ಯಥಾವಿಧಿಯಾಗಿ ಕೋಟಿಪಂಚಾಕ್ಷರಿ ಪುನಶ್ಚರಣೆ ಮಾಡಿಸಿದರು; ತಮ್ಮ ಮಾತುಶ್ರೀಯವರುಗಳಿಂದಲೂ, ಧರ್ಮಪತ್ನಿಯರುಗಳಿಂದಲೂ ಅಸಂಖ್ಯಾತವಾಗಿ ದಾನಗಳನ್ನು ಮಾಡಿಸಿದರು.

ಆಳಿದ ಮಹಾಸ್ವಾಮಿಯವರಾದ ಶ್ರೀಕೃಷ್ಣರಾಜ ಒಡೆಯರವರಿಗೆ, ಶಾಲೀವಾಹನ ಶಕ ೧೭೩೬ನೇ ಪ್ರಮಾದೀಚ ಸಂವತ್ಸರದ ಮಾಘ ಬಹುಳ ೩ ಗುರುವಾರದಲ್ಲಿ ಉಗ್ರರಥ ಶಾಂತಿಯೂ; ಶಾ|| ೧೭೮೬ನೇ ರಕ್ತಾಕ್ಷಿ ಸಂವತ್ಸರದ ಆಷಾಢ ಶುದ್ಧ ೮ ಮಂಗಳವಾರದಲ್ಲಿ ಭೀಮರಥ ಶಾಂತಿಯೂ, ವಿಧ್ಯುಕ್ತವಾಗಿ ಸಕಲ ವೈಭವಗಳಿಂದಲೂ ನಡೆದವು. ಅದೇ ರಕ್ತಾಕ್ಷಿ ಸಂವತ್ಸರದ ಫಾಲ್ಗುನ ಬಹುಳ ೭ ಭಾನುವಾರದಲ್ಲಿ ರಮಾವಿಲಾಸದವರಿಗೂ, ಅದೇ ಕಾರ್ತೀಕ ಬಹುಳ ೩ ಬುಧವಾರದಲ್ಲಿ ಸೀತಾವಿಲಾಸದವರಿಗೂ ಉಗ್ರರಥ ಶಾಂತಿಯು ನಡೆಯಿತು.

ಕ್ರತುಗಳು.— ಶ್ರೀಕೃಷ್ಣರಾಜ ಒಡೆಯರವರು ಮಹೀಶೂರು, ನಂಜನಗೂಡು, ಚಾಮರಾಜನಗರ, ಶ್ರೀರಂಗಪಟ್ಟಣ, ಯಡತೊರೆ, ರಾಮನಾಥಪುರ, ಮೇಲುಕೋಟೆ, ಮಹದೇವಪುರ, ಬೆಂಗಳೂರು, ಶಿವಗಂಗೆ ಮುಂತಾದ ಅನೇಕ ಕ್ಷೇತ್ರಗಳಲ್ಲಿ ತ್ರಿಮತಸ್ಥ ಬ್ರಾಹ್ಮಣರಲ್ಲಿ ಯಾರು

ಯಾರು ಯಾವಯಾವ ಕ್ರತುಗಳನ್ನು ಮಾಡಬೇಕೆಂದು ಕೇಳಿಕೊಂಡಂತೆ ಅಗ್ನಿಷ್ಟೋಮ, ಅತಿರಾತ್ರ, ಉಕ್ಥ್ಯ, ವಾಜಪೇಯ, ಗರುಡಚಯನ, ಸರ್ವತೋಮುಖ, ಬೃಹಸ್ಪತಿ ಸವನ ಮುಂತಾದ ಅನೇಕ ಕ್ರತುಗಳನ್ನು ಮಾಡಿಸಿದರು.

ರಥಗಳು.—ಧೊರೆಗಳು ಅತ್ಯುನ್ನತವಾಗಿಯೂ ಚಿತ್ರವಿಚಿತ್ರವಾಗಿಯೂ ಅನೇಕ ಕಂಬಗಳಿಂದಲೂ ಕನ್ನಡಿಯಿಂದಲೂ ಬಗೆಬಗೆಯಾದ ಕುಚ್ಚುಗಳಿಂದಲೂ ಚಿನ್ನದ ಕಳಶಗಳಿಂದಲೂ ಅಲಂಕೃತವಾಗಿರುವ ಒಂದು ಆನೆ ಮೊದಲಾಗಿ ೮ ಆನೆ ಕಟ್ಟತಕ್ಕ ಗಜರಥಗಳನ್ನೂ, ಸುವರ್ಣದ ಪಂಚ ಕಳಶಗಳಿಂದ ಅಲಂಕೃತವಾದ ಒಂದು ಕುದುರೆಯಿಂದ ೮ ಕುದುರೇವರೆಗೂ ಕಟ್ಟತಕ್ಕ ನಾನಾಬಗೆಯಾದ ಅಶ್ವರಥಗಳನ್ನೂ, ಉಷ್ಟ್ರರಥ ಮುಂತಾದ ಅನೇಕ ರಥಗಳನ್ನೂ ಕೀಲು ಕುದುರೆ ಮುಂತಾದ ಚಮತ್ಕಾರವಾದ ಶಿಲ್ಪಗಳನ್ನೂ ಮಾಡಿಸಿದರು.

ಇತರ ಲೋಕೋಪಕಾರಗಳು.—ಧೊರೆಗಳು ಲೋಕೋಪಕಾರಾರ್ಥವಾಗಿ ಲೋಕರಂಜನ ಮಹಲಿಗೆ ಉತ್ತರದಲ್ಲಿ ವೈದ್ಯಶಾಲೆಯನ್ನು ನಿರ್ಮಿಸಿ, ಅಲ್ಲಿ ಸಕಲರಿಗೂ ಧರ್ಮಾರ್ಥವಾಗಿ ಔಷಧಗಳನ್ನು ಕೊಡುವಂತೆ ಕಟ್ಟಳೆಮಾಡಿ, ಔಷಧವನ್ನು ಕೊಡುವದಕ್ಕೆ ಸಮರ್ಥರಾದ ಪ್ರವೀಣ ವಿದ್ವಾಂಸರನ್ನು ಕರಿಸಿ, ಅವರಿಗೆ ಭಾರೀ ಸಂಬಳವನ್ನು ಕೊಟ್ಟು ಸಂರಕ್ಷಿಸುತ್ತಾ ಬಂದರು; ಚತುರ್ವೇದಗಳನ್ನೂ ಶಾಸ್ತ್ರಗಳನ್ನೂ ಓದತಕ್ಕ ಅನೇಕ ವಿದ್ಯಾರ್ಥಿಗಳಿಗೆ ಪಾಠಹೇಳುವದಕ್ಕೆ ತಕ್ಕ ವಿದ್ವಾಂಸರಿಗೆ ಅಟ್ಟವಣೇ ಕಚೇರಿಯಲ್ಲಿ ಸಂಬಳ ಮಾಡಿಕೊಟ್ಟು, ವಿದ್ಯಾರ್ಥಿಗಳ ಅನ್ನ ವಸ್ತ್ರಗಳಿಗೂ ಮಾರ್ಗ ಮಾಡಿಕೊಟ್ಟು, ಸಂಸ್ಕೃತ ಕನ್ನಡ ಇಂಗ್ಲಿಷ್ ಮೊದಲಾದ ಭಾಷೆಗಳನ್ನೆಲ್ಲಾ ಹೇಳುವದಕ್ಕೆ ಪಾಠಶಾಲೆಗಳನ್ನು ಸ್ಥಾಪಿಸಿ ವಿದ್ಯಾಭಿವೃದ್ಧಿಯನ್ನು ಮಾಡಿದರು.

ಆಳಿದ ಮಹಾಸ್ವಾಮಿಯವರು ಅಗಾಗ್ಯೆ ಬೇಟೆಗೆ ಚಿತ್ತಯಿಸಿ, ಈ ರಾಜ್ಯದಲ್ಲಿ ಅಗಮ್ಯವಾದ ಅಡವಿಗಳಲ್ಲಿ ಸೇರಿಕೊಂಡು ಜನಗಳಿಗೆ ಬಾಧೆಯನ್ನುಂಟುಮಾಡುತ್ತಲಿದ್ದ ಹುಲಿ, ಕರಡಿ, ಕಾಡಾನೆ, ಕೋರೇಹಂದಿ, ಮುಂತಾದ ದುಷ್ಟಮೃಗಗಳನ್ನು ಬೇಟೆಯಾಡಿ ಸಂಹರಿಸಿ, ಜನಗಳಿಗೆ ಕ್ಷೇಮ

ವನ್ನು ಉಂಟುಮಾಡಿದ್ದಲ್ಲದೆ, ವಿನೋದಾರ್ಥವಾಗಿ ಕೆಲವನ್ನು ಹಿಡಿದು ತಂದು ಸಾಕುತ್ತಲಿದ್ದರು.

ಸಂಸ್ಕೃತ ಪ್ರಾಕೃತ ಗ್ರಂಥಗಳನ್ನು ನಿರ್ಮಿಸಿ ಇರುವದು.—ಶ್ರೀತತ್ವನಿಧಿ, ಗಣಿತಸಂಗ್ರಹ, ಸ್ವರಚೂಡಾಮಣಿ, ಸೌಗಂಧಿಕಾಪರಿಣಯ, ಸಂಖ್ಯಾರತ್ನಕೋಶ, ಇದಕ್ಕೆ ವ್ಯಾಖ್ಯಾನ ಪ್ರಭಾವಳಿ, ಶ್ರೀಕೃಷ್ಣಕಥಾಸಾರಸಂಗ್ರಹ, ನವಗ್ರಹ ಪೂಜಾಮಂಜರಿ, ಆರ್ಯರಾಮಾಯಣ, ಶ್ರೀಚಕ್ರಸಂಗ್ರಹಮಂಜರಿ, ಸೂರ್ಯಚಂದ್ರವಂಶಾವಳಿ, ಶ್ರೀಚಾಮುಂಡಿಕಾ ಲಘುನಿಘಂಟು, ಮಹಾಕೋಶಸುಧಾಕರ, ಚತುರಂಗಸಾರಸರ್ವಸ್ವ, ಪುರಾತನ ನಾಟಕ ವ್ಯಾಖ್ಯಾನಗಳು, ಶ್ರೀಮದ್ಭಾಗವತ ಭಾರತ ರಾಮಾಯಣಗಳಿಗೆ ಕರ್ಣಾಟಕ ಭಾಷಾವ್ಯಾಖ್ಯಾನ ಗ್ರಹಣದರ್ಪಣಗಳು, ಅನೇಕ ಗದ್ಯ ಪದ್ಯಗಳು, ಮಹಾಸಂಕಲ್ಪ, ದಶಾವಿಭಾಗಪದಕ, ಶ್ರೀಚಾಮುಂಡೇಶ್ವರಿ ಶ್ರೀಕಂಠೇಶ್ವರ ಮಹಾವಿಷ್ಣು ಮೊದಲಾದ ದೇವರ ಸ್ತೋತ್ರಗಳು, ಅನೇಕ ಭೇದಗಳಿಂದ ಪ್ರಕಾಶಿಸುತ್ತಲಿರುವ ಬಹಳ ಅರ್ಥಗಳನ್ನು ಸೂಚಿಸುತ್ತಿರುವ ವಿಷ್ಣು ನಾಮಯುಗ್ಮಗಳ ಪಂಚಶತಿ, ಶ್ರೀಚಾಮುಂಡೇಶ್ವರಿ ಶ್ರೀಕಂಠೇಶ್ವರ ಶ್ರೀಮಹಾವಿಷ್ಣು ಗಣಪತಿ ತ್ರಿಶತಿಗಳು, ೧೦೮ ಅಷ್ಟೋತ್ತರಗಳು, ಶ್ರೀಚಾಮುಂಡೇಶ್ವರೀ ಮಂಗಳ ಸ್ತೋತ್ರ ಮೊದಲುಗೊಂಡು ಅಷ್ಟೋತ್ತರ ಶತಸಂಖ್ಯಾಕಾಷ್ಟೋತ್ತರ ಶತಪರ್ಯಂತವಾಗಿ ಹೇಳಿರುವ ದೇವತಾನಾಮ ಕುಸುಮಮಂಜರಿ, ಸಂಖ್ಯಾಮಾಲಾ ಮೊದಲಾದ ಗ್ರಂಥಗಳನ್ನು ಬಹಳವಾಗಿ ನಿರ್ಮಿಸಿ, ಶ್ರೀಕೃಷ್ಣರಾಜ ಒಡೆಯರವರು, ಮೇಲೆ ಬರೆದಿರುವ ಗ್ರಂಥಗಳನ್ನೂ, ಭಗವದ್ಗೀತೆ ಮೊದಲಾದ ಅನೇಕ ಪ್ರಾಚೀನಗ್ರಂಥಗಳನ್ನೂ ತಯಾಗ್ರಂಥೋಕ್ತ ದೇವತಾಚಿತ್ರಗಳಿಂದ ಒಡಗೂಡಿರುವಂತೆ ಅಂಬಾವಿಲಾಸದ ಮುದ್ರಾಕ್ಷರಶಾಲಾ ಶಿಲಾಯಂತ್ರದಲ್ಲಿ ಅಚ್ಚು ಹಾಕಿಸಿ, ಸಮುಖದ ವಿದ್ವಾಂಸರು ಮೊದಲಾದ ವಿದ್ವಾಂಸರು, ಅಧಿಕಾರಸ್ಥರು, ದೇಶಾಂತರಗಳಲ್ಲಿರುವ ವಿದ್ವಾಂಸರು ಮುಂತಾದವರಿಗೆ ಉಚಿತವಾಗಿ ಕೊಟ್ಟು, ಸಂತೋಷ ಪಡಿಸಿದರು.

ಮಹಲುಗಳು.—ಶ್ರೀ ಕೃಷ್ಣರಾಜ ಒಡೆಯರವರು ಕೋಟೆಯ ಹೊರಗೆ ಅರಮನೆಗೆ ಪೂರ್ವಪಾರ್ಶ್ವ ಕಾರಂಜೀ ಕೆರೆಯ ಸಮೀಪದಲ್ಲಿ

ಅತ್ಯಾಶ್ಚರ್ಯಕರವಾದ ಲೋಕರಂಜನ ಮಹಲೆಂಬ ಬಂಗಲೆಯನ್ನು ಕಟ್ಟಿಸಿ, ಈ ಬಂಗಲೆಯ ಕಾರಂಜೀ ಕೊಳದ ತೊಟ್ಟಿಯಲ್ಲಿ ಹರಿಹರೇಶ್ವರ ಅರ್ಧನಾರೀಶ್ವರ ಗಣಪತಿ ಕೃಷ್ಣ ಅಮೃತಶಿಲಾ ವೃಷಭ ಸಹಿತವಾದ ಈಶ್ವರ, ಈ ದೇವರನ್ನು ಪ್ರತಿಷ್ಠೆ ಮಾಡಿಸಿ ಪೂಜೆನಡೆಯುವಂತೆ ಕಟ್ಟಳೆ ಮಾಡಿಸಿದರು; ಅರಮನೆಗೆ ಪಶ್ಚಿಮ ಪಾರ್ಶ್ವದಲ್ಲಿ ಬ್ರಹ್ಮಪುರೀ ಬಾಗಿಲಹೊರಗೆ ಅನೇಕ ಕನ್ನಡಿ, ಕಂದೀಲು, ಗಡಿಯಾರ, ರಾಗಮಾಲು, ಕುರಚಿ, ಕೌಚು, ಮೇಜು ಛಾಪಚಿತ್ರ ಮತ್ತು ದೇವತಾ ಪಟಗಳಲ್ಲದೆ ಸಮಸ್ತ ಜನಗಳೂ ಆಶ್ಚರ್ಯಪಡುವಂತೆ ಕೀಲು ಹುಲಿ ಮುಂತಾದ ಚಮತ್ಕಾರವಸ್ತುಗಳಿಂದಲೂ, ದ್ವೀಪಾಂತರಗಳಿಂದ ತರಿಸಿದ ನಾನಾ ಫಲಪುಷ್ಪಲತಾ ಭರಿತವಾದ ವನದಿಂ ಅಲಂಕೃತವಾಗಿರುವ ಉದ್ಯಾನ ವನಗಳಿಂದಲೂ ಪ್ರಕಾಶಮಾನವಾಗಿ ಅಂತಸ್ತುಗಳಿಂದ ಅತ್ಯುನ್ನತವಾದ ಜಗನ್ಮೋಹನ ಮಹಲೆಂಬ ಬಂಗಲೆಯನ್ನು ಕಟ್ಟಿಸಿ, ಶಾ॥ ೧೭೮೩ನೇ ದುರ್ಮತಿ ಸಂವತ್ಸರದ ಜ್ಯೇಷ್ಠ ಬಹುಳ ೨ ಸೋಮವಾರದದಿನ ಗೃಹಪ್ರವೇಶವನ್ನು ಮಾಡಿಸಿದರು; ಅದಲ್ಲದೆ ಮಹೀಶೂರು ಇಲವಾಲ, ಚಾಮುಂಡೀಬೆಟ್ಟ ನಂಜನಗೂಡು ಮುಂತಾದ ಸ್ಥಳಗಳಲ್ಲಿ ಅನೇಕ ಬಂಗಲೆಗಳನ್ನು ಕಟ್ಟಿಸಿದರು.

ಅರಮನೆಯಲ್ಲಿರುವ ತೊಟ್ಟಿಗಳು.—ಕರೀಕಲ್ಲುತೊಟ್ಟಿ, ರಂಗಮಂಟಪದತೊಟ್ಟಿ, ಜಂತದತೊಟ್ಟಿ, ಸಮುಖದತೊಟ್ಟಿ, ಮಹಾಮಾತುಶ್ರೀಯವರ ಸನ್ನಿಧಾನಗಳ ತೊಟ್ಟಿಗಳು, ಕನ್ನಡೀತೊಟ್ಟಿ, ಕುದುರೇಸವಾರೀ ತೊಟ್ಟಿ, ದರಬಾರ ಬಾಲಾಖಾನೆ, ನವರಾತ್ರಿಯ ಓಲಗದ ಸಜ್ಜೆ, ೯ ಚಿನ್ನದ ಕಲಶಗಳಿಂದಲೂ ೧ ಧ್ವಜದಿಂದಲೂ ಅಲಂಕೃತವಾದ ಬಂಗಲೆ, ಹೊಸತೊಟ್ಟಿ, ಮದನ ವಿಲಾಸದತೊಟ್ಟಿ, ದೊಕ್ಕಸದತೊಟ್ಟಿ, ಕಮಾಣ ತೊಟ್ಟಿ, ಚಾಮುಂಡೇಶ್ವರೀತೊಟ್ಟಿ, ಆತ್ಮವಿಲಾಸ, ಕಾಂತವಿಲಾಸ, ಜವಾಹಿರು ಚಿನ್ನ ಬೆಳ್ಳಿ ಕೆಟ್ಟಡಿಗಳಿಂದ ಅಲಂಕೃತವಾದ ಅಂಬಾವಿಲಾಸ, ರಾಜರಾಜೇಂದ್ರವಿಲಾಸ, ಲಕ್ಷ್ಮೀವಿಲಾಸ, ರಮಾವಿಲಾಸ, ಸೀತಾವಿಲಾಸ ಮೊದಲಾದ ವಿಲಾಸದ ತೊಟ್ಟಿಗಳು.

ಅರಮನೇ ಫಿರಕಾಗಳು.—ಅರಸುಗಳದುಚ್ಚಿ, ಸಮುಖದವೋಲಗ, ಖಾಸಾ ಬಿಡದಿ ಹಾಸಿಗೇ ಚೊಕ್ಕಸ, ಇಟ್ಟೀ ಓಲಗ, ಚಾಮುಂಡೇಶ್ವರೀತೊಟ್ಟಿ,

ಮುತ್ಸದ್ದಿೀರು, ಅಂಬಾವಿಲಾಸ ಮತ್ತು ಶಿಲಾಯಂತ್ರ ಕಾರಖಾನೆ, ಖಾಸಾ ಚಾರ್ಮ ಮಧುವನ ಮುಂತಾದದ್ದು, ಅವಸರದ ಹೋಬಳಿ, ಖಾಸಾತಬೇಲೆ, ಪೀಲಖಾನೆ, ಶ್ರೀರಂಗಪಟ್ಟಣದ ಖಾಸಾಮಹಲು ತೋಟಗಳು ಮುಂತಾದದ್ದು, ಅಂಚೆ, ಗೋಕಾಯಿ, ಅಮೃತಮಹಲು, ಸಮುದ್ರದ ಕರೆಯುವ ಪಟ್ಟಿ, ಗೊಲ್ಲರು, ವೀಣೆ ಸಂಗೀತಗಾರ ವೈದ್ಯರು ಸಹ, ಖಾಸಾಬೊಕ್ಕಸ, ಒಳಬೊಕ್ಕಸ, ಕತ್ತೀಬೊಕ್ಕಸ, ಕಾಣಿಕೇಬೊಕ್ಕಸ, ಸರಸ್ವತೀಭಂಡಾರ.

ರಾಜ್ಯಭಾರ.—ಟೀಪೂ ಸುಲ್ತಾನನು ರಾಜ್ಯಭಾರ ಮಾಡುವಾಗ, ಎಲ್ಲಾ ಪಾಳ್ಯಗಾರರನ್ನೂ ಜಯಿಸಿ ಅವರ ಪಾಳ್ಯಗಳನ್ನು ಸೇರಿಸಿ ಕೊಳ್ಳ ಬೇಕೆಂದು ಪ್ರಯತ್ನ ಮಾಡುತ್ತಿದ್ದನು. ಆದರೆ ಆಕಾಲದ ಸರ್ಕಾರದ ಉದ್ಯೋಗಸ್ಥರಲ್ಲಿ ರಾಜಭಕ್ತಿಯು ಬಹಳ ಕಡಮೆಯಾಗಿತ್ತು. ಈ ಪಾಳ್ಯಗಾರರು ಅಮಿಲರನ್ನು ವಶಮಾಡಿಕೊಂಡು, ಹೆಸರಿಗೆ ಸರ್ಕಾರದ ಕೈಕೆಳಗೆ ಇದ್ದಾಗ್ಯೂ, ತಮ್ಮ ಪಾಳ್ಯಗಳಿಗೆ ತಾವೇ ಸ್ವತಂತ್ರ ಪ್ರಭುಗಳಾಗಿದ್ದರು. ಟೀಪುವಿನ ರಾಜ್ಯಭಾರ ಹೋಗಿ, ಶ್ರೀಕೃಷ್ಣರಾಜ ಒಡೆಯರವರ ಆಳಿಕೆಯು ಪ್ರಾರಂಭವಾದ ಕೂಡಲೆ, ಕೆಲವರು ಪಾಳ್ಯಗಾರರು ಸ್ವತಂತ್ರ ಪ್ರಭುಗಳೆಂದು ಎನ್ನಿಸಿಕೊಳ್ಳುವದಕ್ಕೆ ಉದ್ಯುಕ್ತರಾದರು. ಕೆಲವು ಪ್ರದೇಶಗಳಲ್ಲಿ, ಪಟೇಲರೂ ಪೋಲೀಸ್ ಅಧಿಕಾರಿಗಳೂ ಪಾಳ್ಯಗಾರರಂತೆ ತಮ್ಮ ಕೈಕೆಳಗೆ ಇರತಕ್ಕ ಪ್ರದೇಶಗಳಿಗೆ ತಾವೇ ಅಧಿಕಾರಿಗಳೆಂಬದಾಗಿ ಹೇಳಿಕೊಳ್ಳುತ್ತಾ, ಶಾನುಭೋಗ ಮುಂತಾದವರಿಗೆ ಲಂಚಾ ಕೊಟ್ಟು ತಮಗೆ ಬೇಕಾದಷ್ಟು ಭೂಮಿಗಳು ತಮ್ಮಲ್ಲಿ ಅನಾದಿಯಾಗಿ ಇದ್ದಂತೆ ಲೆಕ್ಕ ಪತ್ರಗಳನ್ನು ಹುಟ್ಟಿಸುತ್ತಾ, ತುಂಟಾಟಗಳನ್ನು ಮಾಡುವದಕ್ಕೆ ಉಪಕ್ರಮಿಸಿದರು. ಇವರು ಈ ಪುಂಡನ್ನು ನಿಲ್ಲಿಸಬೇಕೆಂದು ಪ್ರಯತ್ನ ಮಾಡಿದ ಅಮಿಲರನ್ನೆಲ್ಲಾ ಯಾರಿಗೂ ತಿಳಿಯದಂತೆ ಕೊಲ್ಲುತ್ತಾ ಬಂದರು. ಈ ತುಂಟತನಕ್ಕೆ ಸರ್ಕಾರದ ಉದ್ಯೋಗಸ್ಥರೂ ಸಹ ಹೆದರಿ, ತಕ್ಕ ಏರ್ಪಾಡುಗಳನ್ನು ಮಾಡದೆ ಉದಾಸೀನರಾಗಿ ಇದ್ದದರಿಂದ, ದೇಶದ ಆಡಳಿತವು ಕೆಡುತ್ತಾ ಬಂತು.

ಪೂರ್ಣಯ್ಯನವರು, ದಿವಾನಗಿರಿಯನ್ನು ವಹಿಸಿದ ಕೂಡಲೆ, ಅದುವರಿಗೂ ಬಾಕಿ ಬರಬೇಕಾಗಿದ್ದ ಕಂದಾಯ ಮುಂತಾದವುಗಳನ್ನು ಬಿಟ್ಟು

ಬಿಟ್ಟು ಇದೆ ಎಂಬದಾಗಿಯೂ, ಅಲ್ಲಿಂದ ಮುಂದಕ್ಕೆ ಹಿಂದೂ ಧರ್ಮಶಾಸ್ತ್ರ ಪ್ರಕಾರವಾಗಿ ಕಂದಾಯ ಸುಂಕ ಮೊದಲಾದವುಗಳು ಏರ್ಪಾಡು ಆಗುತ್ತವೆ ಎಂಬದಾಗಿಯೂ ಪ್ರಕಟಿಸಿದರು ; ಸರ್ಕಾರದ ನಿಬಂಧನೆಗಳನ್ನು ಅನುಸರಿಸಿ ನಡೆಯುವಂತೆ ಜನಗಳಿಗೆ ಭೀತಿಯನ್ನು ಉಂಟು ಮಾಡುವದಕ್ಕೋಸ್ಕರ, ಟೀಪೂಸುಲ್ತಾನನು ಸೈನ್ಯದಿಂದ ತೆಗೆದುಹಾಕಿದ್ದ ಕೆಲವು ಜನಗಳನ್ನು ಸಂಬಳಕ್ಕೆ ಇಟ್ಟುಕೊಂಡರು.

ಪೂರ್ವದ ಸೇನಾಜನಗಳು .ವ್ಯವಸಾಯಕಾಲದಲ್ಲಿ ವ್ಯವಸಾಯವನ್ನು ಮಾಡಿಕೊಳ್ಳುತ್ತಾ, ಉಳಿದ ಕಾಲದಲ್ಲಿ ರಾಜರ ಬಳಿಯಲ್ಲಿ ಸಿಪಾಯಿಗಳ ಕೆಲಸದಲ್ಲಿ ಇರುತ್ತಿದ್ದರು. ಹಾಗೆ ರಾಜರ ಬಳಿ ಕೆಲಸ ಸಿಕ್ಕದೆ ಹೋದರೆ, ಗುಂಪು ಕಟ್ಟಿಕೊಂಡು ಲೂಟಿಗೆ ಹೊರಡತಕ್ಕದ್ದು ಇವರ ಸಹಜ ವೃತ್ತಿಯಾಗಿ ಇತ್ತು. ಹೈದರ್ ಟೀಪು ಮುಂತಾದವರ ಕಾಲದಲ್ಲಿ ಈ ಪೈಕಿ ಕೆಲವರಿಗೆ ಸೈನ್ಯದಲ್ಲಿ ಕೆಲಸ ಕೊಡುತ್ತಾ ಇದ್ದರು ; ಉಳಿದವರು ತುಂಟಾಟ ಮಾಡಿದರೆ, ಬಹಳ ಸೈನ್ಯಗಳು ಇದ್ದದ್ದರಿಂದ, ಅವರನ್ನು ಜಯಿಸುವದು ಅಸಾಧ್ಯವಾಗಿ ಇರಲಿಲ್ಲ. ಪೂರ್ಣಯ್ಯನವರು, ಅಧಿಕಾರವನ್ನು ವಹಿಸಿದ ಕೂಡಲೆ, ಮಿಲಿಟರಿ ವಂಶಕ್ಕೆ ಸೇರಿದ ಸಮಸ್ತ ಮನೆತನಗಳಿಂದಲೂ ಒಬ್ಬೊಬ್ಬನನ್ನು ಕರಿಸಿ ಅವನಿಗೆ ಅಧಿಕಾರ ಕೊಟ್ಟರು ; ಬಹು ಕಾಲದಿಂದ ಸರ್ಕಾರದ ಉದ್ಯೋಗದಲ್ಲಿ ಇರತಕ್ಕವರಿಗೆ ಆ ಉದ್ಯೋಗವನ್ನು ನಡಿಸಿಕೊಂಡು ಬರುತ್ತೇವೆಂತಲೂ, ಸಿಫಾಯಿ ಖರ್ಚಿಯವರಿಗೆ ಸಂಬಳದಲ್ಲಿ ಅರ್ಧ ಹಣ ಕೊಟ್ಟು, ಉಳಿದ ಅರ್ಧಕ್ಕೆ ಬಂಜರು ಭೂಮಿಗಳನ್ನು ಕೊಡುವಂತೆಯೂ ಏರ್ಪಾಡು ಮಾಡಿದರು ; ಆ ಸಿಪಾಯಿಗಳು ತಮ್ಮನ್ನು ಯಾವ ದುರ್ಗಗಳಲ್ಲಿ ಕಾವಲು ಇಡುತ್ತಾರೋ ಅಲ್ಲಿ ಇದ್ದುಕೊಂಡು, ಪೊಲೀಸ್ ಅಧಿಕಾರಿಗಳು ಹೇಳುವಂತೆ ನಡೆದು ಕೊಳ್ಳಬೇಕೆಂದು ಕಟ್ಟುಮಾಡಿಇದ್ದರು. ಅವರಿಗೆ ಬಂದೀಕಣಿ ಇದ್ದಾಗ ೧—೩ ರೂಪಾಯಿ ಮೇರೆ ಸಂಬಳ ಸಲ್ಲುತ್ತಾ ಇತ್ತು. ಬೇರೇ ಪ್ರದೇಶಕ್ಕೆ ಹೋಗಬೇಕಾಗಿ ಬಂದರೆ ಬತ್ಯಕ್ಕೋಸ್ಕರ ೩॥ ರೂಪಾಯಿ ಹೆಚ್ಚಾಗಿ ಕೊಡುತ್ತಿದ್ದರು. ಇದಲ್ಲದೆ ಪ್ರಯಾಣಕಾಲದಲ್ಲಿ ಇವರಿಗೆ ತಕ್ಕಮಟ್ಟಿಗೆ ಸರಫರಾಜು ನಡೆಯುತ್ತಿತ್ತು. ಜವಾನರ ಸಂಬಳಗಳೂ ಸಹ ಇದೇ ಮೇರೆಗೆ ಇದ್ದವು.

ಕುಂಪಣಿಯವರ ಕೈಕೆಳಗೆ ಇದ್ದ ಮೇನಾ ಹೊರುವದಕ್ಕೆ ೪೫೦ ಜನಗಳನ್ನು ಕೊಟ್ಟಿದ್ದರು. ಈ ಮಹೀಶೂರ ಅಂಚೆಯನ್ನು ತೆಗೆದು ಕೊಂಡುಹೋಗುವದಕ್ಕೋಸ್ಕರ ೮೧೩ ಮಂದಿ ಇದ್ದರು. ರಾಜ್ಯಭಾರವು ಕೈಸೇರಿದ ೨ ವರ್ಷಗಳಲ್ಲಿ ಖಾಯಂ ಕೆಲಸದಲ್ಲಿ ಇದ್ದ ಜವಾನರಲ್ಲದೆ ಹಂಗಾಮಿಯಾಗಿ ಏರ್ಪಾಡಾಗಿದ್ದ ಜನಗಳು ೨೦೦೨೩ಕ್ಕೆ ಆದ ಖರ್ಚು ವರ್ಷ ೧ಕ್ಕೆ ೨,೨೫,೮೬೨ ಕಂಠೀರಾಯಿ ವರಹಗಳು. ದಿವಾನರವರು ೩ನೇ ವರ್ಷದಲ್ಲಿ ಈ ಖರ್ಚನ್ನು ೧,೮೪,೩೧೮ ವರಹಗಳಿಗೆ ಇಳಿಸಿದರು ; ೪ನೇ ೫ನೇ ವರ್ಷಗಳಲ್ಲಿ ೧,೪೮,೪೩೮ ಕಂಠೀರಾಯಿ ವರಹಗಳಿಗೆ ಇಳಿಸಿ, ಇದೇ ರೀತಿಯಲ್ಲಿ ಎಂದೆಂದಿಗೂ ನಡೆಯುತ್ತಿರಬೇಕೆಂದು ಕಟ್ಟುಮಾಡಿದರು.

೧೭೯೨ನೇ ಇಸವಿ ಮೇ ೧೫ರಲ್ಲಿ, ಟೀಪೂಸುಲ್ತಾನನು, ಲಾರ್ಡ್ ಕಾರ್ನ್‌ವಾಲಿಸ್‌ರಿಂದ ಪರಾಜಯ ಹೊಂದಿದ ಕೂಡಲೆ, ಖೈದಿನಲ್ಲಿದ್ದ ಜನಗಳನ್ನೆಲ್ಲಾ ಕೊಲ್ಲಿಸಿದನು. ಆಗ ದೊಡ್ಡಪಾಳ್ಯಗಾರರ ವಂಶಸ್ಥರಲ್ಲಿ ಅನೇಕರು ಮೃತಿಯನ್ನು ಹೊಂದಿದರು. ಆದಾಗ್ಯೂ ಇನ್ನೂ ಕೆಲವರು, ಕಾಲಾಂತರದಲ್ಲಿ ತಮ್ಮ ಪಾಳ್ಯಗಳನ್ನು ಸಾಧಿಸಿಕೊಳ್ಳಬೇಕೆಂದು ಯೋಚಿಸಿ, ದೇಶವನ್ನು ಬಿಟ್ಟು ಹೋದರು ; ಕೆಲವರು ಖೈದಿಗಳಾಗಿದ್ದರು ; ಅನೇಕರು ಪಿಂಚಣಿ ತೆಗೆದು ಕೊಂಡು, ಸಿವಿಲ್ ಮತ್ತು ಮಿಲಿಟರಿ ಅಧಿಕಾರಗಳಲ್ಲಿ ಸೇರಿ ಕೊಂಡಿದ್ದರು. ಸಂಸ್ಥಾನದಲ್ಲಿ ಇವರ ಅವಾಂತರ ಬಹಳವಾಗಿ ಇತ್ತು. ಇವರು ಒಂದಾನೊಂದು ಕಾಲದಲ್ಲಿ ಅಮಿಲ್‌ದಾರರನ್ನೇ ಖೂನಿ ಮಾಡಬೇಕೆಂದು ಉದ್ಯುಕ್ತರಾಗಿದ್ದರು. ಪೋಲೀಸಿನವರು ಇವರನ್ನೆಲ್ಲಾ ಹಿಡಿದು ದಂಡಿಸಿದ್ದರಿಂದ, ಈ ತುಂಟತನವು ನಿಂತು ಹೋಯಿತು.

ಟೀಪೂ ಸುಲ್ತಾನನ ರಾಜ್ಯಭಾರವು ಹೋಗಿ, ಮಹಾರಾಜರವರ ರಾಜ್ಯಭಾರವು ಪ್ರಾರಂಭವಾದ ಮೇಲೆ, ಜಮೀನುದಾರರಿಗೆ ಅವರ ಜಮೀನುಗಳಮೇಲೆ ಇರತಕ್ಕ ಹಕ್ಕಿನ ವಿಷಯದಲ್ಲಿ, ಏನೂ ಬದಲಾವಣೆಗಳು ನಡೆಯಲಿಲ್ಲ. ಯಾವನಾಗಲೀ ಜಮೀನಿನಲ್ಲಿ ವ್ಯವಸಾಯ ಮಾಡುತ್ತಾ ಕ್ಲುಪ್ತವಾದ ಕಂದಾಯವನ್ನು ಕೊಡುತ್ತಾ ಇರುವವರಿಗೂ ಆ ಜಮೀನಿಗೆ ಅವನೇ ಹಕ್ಕುದಾರನೆಂಬದಾಗಿಯೂ, ವ್ಯವಸಾಯ ಮಾಡದೆ ಬಂಜರು ಬಿಟ್ಟ

ಕೊಂಡಿದ್ದರೆ ಆ ಜಮೀನಿನ ಹಕ್ಕು ಅವನಿಗೆ ಹೋಗುವದು ಎಂಬದಾಗಿಯೂ, ಅಂಥಾ ಜಮೀನನ್ನು ಸರ್ಕಾರದವರು ತಮಗೆ ತಿಳಿದ ಇತರರಿಗೆ ಕೊಡಬಹುದು ಎಂಬ ದಾಗಿಯೂ ಏರ್ಪಾಡು ಆಯಿತು. ಆದರೆ ಬಿಡ್ನೂರು (ಬಿದಲೂರು) ಮತ್ತು ಬಾಲಂ ಎಂಬ ಪ್ರದೇಶಗಳಲ್ಲಿ ಜಮೀನುದಾರನಿಗೆ ತನ್ನ ಆಸ್ತಿಯಮೇಲೆ ಸಂಪೂರ್ಣವಾದ ಹಕ್ಕು ಇತ್ತು. ಜಮೀನುದಾರನು ಕಂದಾಯ ಕೊಡುತ್ತಾ ಬರುವವರೆಗೂ, ಅವನು ಜಮೀನನ್ನು ಬಂಜರು ಹಾಕಿಕೊಂಡಿದ್ದರೂ ಸರ್ಕಾರದವರು ಅದಕ್ಕೆ ಪ್ರವೇಶ ಮಾಡಕೂಡದೆಂದು ಏರ್ಪಾಡಾಯಿತು. ಹೀಗೆ ಕ್ಲೃಪ್ತವಾದ ಕಂದಾಯ ಕೊಟ್ಟುಕೊಂಡು ಜಮೀನನ್ನು ಪಾರಂಪರ್ಯವಾಗಿ ಅನುಭವಿಸಿಕೊಂಡು ಬರಬಹುದೆಂಬದಾಗಿ ಶಿವಪ್ಪನಾಯಕರು ಕಟ್ಟುಮಾಡಿದ್ದರು. ಈ ಕಟ್ಟಲೆಯು ಹೈದರಲ್ಲಿಯ ವರಿಗೂ ಇತ್ತು. ಅನಂತರದಲ್ಲಿ ಕ್ಲೃಪ್ತವಾಗಿದ್ದ ಕಂದಾಯಗಳನ್ನು ವಿಶೇಷಕಾಲಗಳಲ್ಲಿ ಹೆಚ್ಚಿಸುವದಕ್ಕೂ ಯುದ್ಧಕಾಲದಲ್ಲಿ ಅವರಿಂದ ಸಹಾಯಮಾಡಿಸಿ ಕೊಳ್ಳುವದಕ್ಕೂ ಉಪಕ್ರಮವಾಯಿತು. ಹೈದರಲ್ಲಿಯು, ೧೭೬೩ನೇ ಇಸವಿಯಲ್ಲಿ ಬಿಡ್ನೂರನ್ನು ತೆಗೆದುಕೊಂಡಾಗ, ಮೊದಲು ಜಮೀನುದಾರರ ಅನುರಾಗಕ್ಕೆ ಪಾತ್ರನಾಗಬೇಕೆಂದು ಪ್ರಯತ್ನಮಾಡುತ್ತಿದ್ದನು. ಆದರೆ ಆ ಜಮೀನ್ದಾರರೂ ಆತನಕಡೆ ಇರುವ ಉದ್ಯೋಗಸ್ಥರೂ ಸೇರಿ ಆತನನ್ನು ಕೊಲ್ಲಬೇಕೆಂದು ಪ್ರಯತ್ನ ಮಾಡಿದರು. ಈ ಅಂಶವು ತಿಳಿದ ಕೂಡಲೆ, ಹೈದರಲ್ಲಿಯು ಇದಕ್ಕಾಗಿ ಮಸಲತ್ತಿನಲ್ಲಿ ಸೇರಿದ್ದ ೩೦೦ ಜನಗಳನ್ನು ಗಲ್ಲಿಗೆ ಹಾಕಿಸಿ, ಜಮೀನುದಾರರ ಬಳಿ ಸಂಬಳಕ್ಕೆ ಇದ್ದವರನ್ನೆಲ್ಲಾ ತೆಗೆದುಹಾಕಿ, ಪೂರ್ವದಂತೆ ಅರ್ಧ ಕಂದಾಯಕ್ಕೆ ಬದಲಾಗಿ ಸೈನ್ಯಕ್ಕೆ ಜನಗಳನ್ನು ಸರಬರಾಜ್ ಮಾಡಲವಶ್ಯಕವಿಲ್ಲವೆಂತಲೂ, ಅದಕ್ಕೆ ಬದಲಾಗಿ ಪೂರಾಕಂದಾಯವೇ ಕೊಡಬೇಕೆಂತಲೂ ನಿಬಂಧನೆ ಮಾಡಿದನು; ಇವರನ್ನು ಸ್ವಾಧೀನದಲ್ಲಿ ಇಟ್ಟುಕೊಳ್ಳುವದಕ್ಕೋಸ್ಕರ ೨೫,೦೦೦ ಜನಗಳುಳ್ಳ ಒಂದು ಸೈನ್ಯವನ್ನು ಏರ್ಪಾಡು ಮಾಡಿದನು. ಈ ಕಂದಾಯ ಹಣದ ವಸೂಲಿಯು ೧೭೯೨ನೇ ಇಸವಿಯ ವರಿಗೂ ನಡೆಯುತ್ತಿತ್ತು. ಆಗ ಇಂಗ್ಲಿಷಿನವರು ಅರ್ಧದೇಶವನ್ನು ಕಿತ್ತುಕೊಂಡದ್ದರಿಂದ, ಟೀಪೂಸುಲ್ತಾನನು ಹೀಗೆ ಅನ್ಯಾಕ್ರಾಂತವಾದ ದೇಶಗಳ ಹುಟ್ಟುವಳಿಯು ಹೋಯಿತಲ್ಲಾ ಎಂಬದಾಗಿ ವ್ಯಥೆಪಟ್ಟು, ಆ ಹುಟ್ಟುವಳಿ

ಯನ್ನು ಉಳಿದ ಅರ್ಧದೇಶದಲ್ಲಿಯೇ ಪಡೆಯಬೇಕೆಂಬ ದುರಾಶೆಯಿಂದ, ತನಗೆ ಉಳಿದಿರತಕ್ಕ ದೇಶದಲ್ಲಿ ಕಂದಾಯಗಳನ್ನು ಒಂದಕ್ಕೆ ಎರಡಾಗಿ ಹೆಚ್ಚಿಸಿದನು.

ಈ ಸಂಸ್ಥಾನವು ಶ್ರೀ ಕೃಷ್ಣರಾಜ ಒಡೆಯರವರಿಗೆ ಬಂದ ಕೂಡಲೆ, ಬೆಡ್ನೂರು ಜಮೀನುದಾರರು, ಶಿವಪ್ಪನಾಯಕನು ಹಾಕಿದ ದರದ ಪ್ರಕಾರ ಕಂದಾಯ ತೆಗೆದುಕೊಳ್ಳಬೇಕೆಂಬದಾಗಿಯೂ, ತಮ್ಮಿಂದ ಪೂರ್ವದಂತೆಯೇ ಸೈನ್ಯದ ಕೆಲಸವನ್ನು ಮಾಡಿಸಿಕೊಂಡು ಅದಕ್ಕೆ ಬದಲಾಗಿ ಹಾಕಿರತಕ್ಕ ಕಂದಾಯ ಮಾಫ್ ಮಾಡಬೇಕೆಂಬದಾಗಿಯೂ, ಮಹಾರಾಜರ ಸರ್ಕಾರಕ್ಕೆ ವಿಜ್ಞಾಪನೆ ಮಾಡಿಕೊಂಡರು. ಆಗ ಮಹಾರಾಜರವರು, ಹೈದರಲ್ಲಿಯು ಮಿಲಿಟರಿ ನೌಕರಿಗೆ ಬದಲಾಗಿ ಪೂರಾ ಕಂದಾಯವನ್ನೇ ಕೊಡಬೇಕೆಂದು ಮಾಡಿರುವ ನಿಬಂಧನೆಯನ್ನು ಬದಲಾಯಿಸಲು ಆಗುವದಿಲ್ಲವೆಂತಲೂ, ಆದರೆ ಕಂದಾಯವನ್ನು ಶಿವಪ್ಪನಾಯಕನಿಂದ ನಿಷ್ಕೃಷ್ಟವಾದ ದರವನ್ನೇ ಕೊಡತಕ್ಕದ್ದೆಂತಲೂ ನಿಬಂಧನೆ ಮಾಡಿದರು.

೧೮೦೧–೨ನೇ ಇಸವಿಗಳಲ್ಲಿ ಜನರಲ್ ವೆಲ್ಲೆಸ್ಲಿ ಸಾಹೇಬರವರು ಬಾಲಂ ಎಂಬದಕ್ಕೆ ಕಾಡುಮಾರ್ಗವಾಗಿ ರಸ್ತೆ ಹಾಕಿಸುವವರಿಗೂ ಈ ಭಾಗವು ಸ್ವಾಧೀನವಾಗಲಿಲ್ಲ. ಹೈದರ್ ಮತ್ತು ಟೀಪೂ ಕಾಲದಲ್ಲಿಯೂ ಕೂಡ, ಒಂದು ಸೈನ್ಯವನ್ನು ತೆಗೆದುಕೊಂಡು ಹೋದ ಹೊರತು, ಕಂದಾಯ ವಸೂಲು ಆಗುತ್ತಿರಲಿಲ್ಲ. ಇದಲ್ಲದೆ ಹೈದರ್ ಮತ್ತು ಟೀಪುಗಳ ರಾಜ್ಯಭಾರದಲ್ಲಿ ಕಂದಾಯದ ದರವು ಆಗಾಗ್ಯೆ ವ್ಯತ್ಯಾಸವಾಗುತ್ತಾ ಇತ್ತು. ಇಲ್ಲಿಯೂ ಕೂಡ ಮಹೀಶೂರ ಸರ್ಕಾರದವರು ಜಮೀನುದಾರರ ಸಮ್ಮತಿಯಿಂದ ಕಂದಾಯದ ದರವನ್ನು ನಿಷ್ಕರ್ಷೆ ಮಾಡಿದರು.

ದಿವಾನ್ ಪೂರ್ಣಯ್ಯನವರು, ಜಮೀನಿಗೆ ಪಾರಂಪರ್ಯವಾಗಿ ಬಂದ ಹಕ್ಕನ್ನೂ, ವ್ಯತ್ಯಾಸವಾಗದೆ ಒಂದೇ ವಿಧವಾಗಿರುವ ಕಂದಾಯವನ್ನೂ ನಿಷ್ಕರ್ಷೆ ಮಾಡುವದರಿಂದ, ಜಮೀನುದಾರರಿಗೂ ಸರ್ಕಾರಕ್ಕೂ ಬಹಳ ಲಾಭವುಂಟೆಂದು ತಿಳಿದುಕೊಂಡು, ಅಡಿಕೆ ತೆಂಗು ಮುಂತಾದ ಧೃವ ಪೈರನ್ನು ಹಾಕಿಕೊಂಡಿರತಕ್ಕ ಜಮೀನಿನ ಹಕ್ಕು ಪಾರಂಪರ್ಯವಾಗಿ ಜಮೀನುದಾರರನ್ನು

ಸೇರಿದ್ದು ಎಂಬದಾಗಿ ಗೊತ್ತು ಮಾಡಿದರು. ಪೂರ್ವದ ರಾಜ್ಯಭಾರದಲ್ಲಿ ಹೆಚ್ಚು ಕಂದಾಯವಿದ್ದದ್ದರಿಂದ ಅನೇಕ ಜಮೀನುಗಳು ವ್ಯವಸಾಯವಿಲ್ಲದೆ ಬಂಜರು ಬಿದ್ದಿದ್ದವು. ಅಂಥಾ ಜಮೀನುಗಳ ಸ್ವಂತಗಾರರನ್ನು ಕರೆಯಿಸಿ, ಅವರ ಸಮ್ಮತಿಮೇರೆ ಮುನಾಸಬು ಕಂದಾಯಹಾಕಿ ಸಾಗುವಳಿ ಮಾಡಿಸಿದರು. ರೆವಿನ್ಯೂ ಬಾಬೆಲ್ಲಾ ಅಮಾನೆಯಲ್ಲಿಯೇ ಇತ್ತು. ಖುಷ್ಕೀ ಜಮೀನಿಗೆ ಅದರಲ್ಲಿ ಆಗುವ ಉತ್ಪತ್ತಿಯಲ್ಲಿ ಮೂರು ಭಾಗದಲ್ಲಿ ಒಂದು ಭಾಗದ ಬೆಲೆಯು ಎಷ್ಟಾಗುವದೋ ಅಷ್ಟೇ ಕಂದಾಯವನ್ನು ಕೊಡಬೇಕೆಂತಲೂ, ತರೀಜಮೀನಿಗೆ ಅದರ ಉತ್ಪತ್ತಿಯಲ್ಲಿ ಅರ್ಧವನ್ನು ದವಸವಾಗಿಯೇ ಕೊಡಬೇಕೆಂತಲೂ ನಿಷ್ಕರ್ಷೆ ಮಾಡಿದರು. ಆದರೆ ಕೆಲವುವೇಳೆ ಈ ಎನೇ ಸಂದರ್ಭದಲ್ಲಿ ಸುಗ್ಗೀಧಾರಣೆ ಮೇರೆಗೆ ಆದ ಉತ್ಪತ್ತಿಯಲ್ಲಿ ಅರ್ಧ ಉತ್ಪತ್ತಿಯ ಕ್ರಯವನ್ನು ತೆಗೆದುಕೊಳ್ಳುತ್ತಿದ್ದರು. ಸರ್ಕಾರದವರಿಗೂ ರೈತರಿಗೂ ಈ ದವಸದ ಕ್ರಯವಿಷಯದಲ್ಲಿ ಚರ್ಚೆಬಿದ್ದರೆ, ಹಣಕ್ಕೆ ಬದಲಾಗಿ ಅರ್ಧ ದವಸವನ್ನೇ ತೆಗೆದುಕೊಳ್ಳುತ್ತಿದ್ದರು. ಅನೇಕ ಜಮೀನುದಾರರು ತಮ್ಮ ತರೀ ಜಮೀನುಗಳನ್ನು ವಾರಕ್ಕೆ ಕೊಟ್ಟು, ತಮಗೆ ಬಂದ ವಾರದಲ್ಲಿ ಅರ್ಧಸರಕಾರಕ್ಕೆ ಕೊಡುತ್ತಾ ಬಂದರು. ಇದರಿಂದ ಸರ್ಕಾರಕ್ಕೆ ಬಹಳವಾಗಿ ನಷ್ಟನಾಗುವದಕ್ಕೆ ಪ್ರಾರಂಭವಾಯಿತು.

ಸಿವಿಲ್ ಅಡಳಿತಗಳು ಖಜಾನೆ ಕಂದಾಯ ಚಿಲ್ಲರೇಬಾಬು ಎಂದು ೩ ಭಾಗವಾಗಿಯೂ, ಮಿಲಿಟರಿ ಇಲಾಖೆಯು ಕುದುರೇ ರಾವುತರು ಮತ್ತು ಕಾಲುಬಲ ಎಂದು ಎರಡು ಭಾಗವಾಗಿಯೂ ಇದ್ದವು. ಇದಲ್ಲದೆ ಕಂದಾಚಾರದ ಇಲಾಖೆ ಎಂಬದಾಗಿ ಒಂದು ಇತ್ತು. ಈ ಇಲಾಖೆಗೆ ಸೇರಿದ ಜವಾನರು ಪೋಲೀಸ, ಅಂಚೆ, ಸಿವಿಲ್, ಮಿಲಿಟರಿ ಮೊದಲಾದ ಎಲ್ಲಾ ಕೆಲಸಗಳಲ್ಲಿಯೂ ಇರುತ್ತಿದ್ದರು. ಈ ಇಲಾಖೆಗಳೆಲ್ಲಾ ದಿವಾನರ ಕೈಕೆಳಗೆ ಇದ್ದವು. ಪ್ರತಿ ಡಿಸ್ಟ್ರಿಕ್ಟ್ ಖಜಾನೆಗೂ ಒಬ್ಬ ಗೊಲ್ಲ ಇರುತ್ತಿದ್ದನು. ಖಜಾನೆಯ ಬೀಗದ ಕೈ ಇವನ ಬಳಿ ಇರುತ್ತಿತ್ತು. ಇದಲ್ಲದೆ ಈ ಖಜಾನೆಯ ಮೇಲಿನ ಒಬ್ಬ ವಿಚಾರಣೆಗೆ ಅಮಿಲನೂ ಒಬ್ಬ ಶಿರಸ್ತೇದಾರನೂ ಇದ್ದರು. ಈ ಮೂರು ಜನವೂ ಸೇರಿದಾಗ ವಿನಾ ಖಜಾನೇ ಬಾಗಿಲು ತೆಗೆಯಕೂಡದೆಂದು ನಿಬಂಧನೆಯಿತ್ತು. ಎಲ್ಲಾ ಖಜಾನೆಗಳಲ್ಲಿಯೂ ಒಬ್ಬೊಬ್ಬ

ಸರಾಫನು ಇದ್ದನು. ಇವನು ಇರಿಸಾಲಿನಲ್ಲಿ ಬಂದ ಹಣವನ್ನು ಸರಿ ನೋಡಿ, ಚೀಲಗಳಿಗೆ ಹಾಕಿಸಿ, ತನ್ನ ಮೊಹರುಮಾಡಿ, ರಾಜಧಾನಿಗೆ ಕಳಿಸುತ್ತಿದ್ದನು. ತಾಲೂಕಿನಿಂದ ಕಳಿಸಿದ್ದರಲ್ಲಿ ಯಾವದಾದರೂ ಕೊರವಿ ಇದ್ದರೆ ಅದಕ್ಕೆ ಈ ಸರಾಫನು ಜವಾಬುದಾರನಾಗಿದ್ದನು. ಚಿಲ್ಲರೇ ಇಲಾಖೆಯಲ್ಲಿ ಶ್ರೀಮಹಾರಾಜರವರ ಸಿಬ್ಬಂದಿ ಮತ್ತು ಅರಮನೇ ಇಲಾಖೆ ಮತ್ತು ರಿಕಾರ್ಡು ಇಲಾಖೆ ಎಂಬದಾಗಿ ಎರಡು ಇಲಾಖೆಗಳಿದ್ದವು.

ನ್ಯಾಯ ತೀರಿಸಲು ಇದಕ್ಕಾಗಿ ಪ್ರತ್ಯೇಕವಾಗಿ ಒಂದು ಇಲಾಖೆ ಇರಲಿಲ್ಲ. ಆದರೆ ಮುಖ್ಯವಾದ ಪಟ್ಟಣಗಳಲ್ಲಿ ಮಾತ್ರ ಮತ ಸಂಬಂಧವಾದ ವ್ಯಾಜ್ಯಗಳು ಬಿದ್ದರೆ, ಮಹಮ್ಮದೀಯರ ವ್ಯಾಜ್ಯಗಳು ಖಾಜಿಗಳಿಂದಲೂ, ಹಿಂದೂ ವ್ಯಾಜ್ಯಗಳು ಮಾಮೂಲು ಮೇರೆಗೂ, ಹಾಗೆ ಮಾಮೂಲಿಲ್ಲದ ಕಡೆ ಧರ್ಮಶಾಸ್ತ್ರಾನುಸಾರವಾಗಿಯೂ ಫೈಸಲಾಗುತ್ತಿದ್ದವು.

ಪ್ರತಿತಾಲ್ಲೂಕಿನ ಅಮಿಲ್ದಾರರೂ ಪೊಲೀಸ್ ಇಲಾಖೆಯ ಅಧಿಕಾರವನ್ನೂ ನೋಡಿಕೊಳ್ಳುತ್ತಿದ್ದರು. ಇವರ ಕೈಕೆಳಗೆ ಬೇಕಾದಹಾಗೆ ಕಂದಾಚಾರದ ರೈತರು ಇದ್ದರು. ಜುಜಬಿ ಕ್ರಿಮಿನಲ್ ಮೊಕದ್ದಮೆಗಳನ್ನೆಲ್ಲಾ ವಿಚಾರಮಾಡಿ ಇವರೇ ಫೈಸಲು ಮಾಡುತ್ತಿದ್ದರು. ಬೆಂಗಳೂರು ಚಿತ್ರದುರ್ಗ ಬಿದನೂರುಗಳಲ್ಲಿ ಮೂವರು ಸುಬೇದಾರರು ಇದ್ದರು. ಇವರು ಎಲ್ಲಾ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನೂ ವಿಚಾರಣೆ ಮಾಡುತ್ತಿದ್ದರು. ಅಪರಾಧ ಮಾಡಿದವನನ್ನು, ೫ ಜನ ಪಂಚಾಯಿತರನ್ನು ನೇಮಿಸಿ, ಸುಬೇದಾರರು ಅಥವಾ ಅಮಲ್‌ದಾರರ ಎದುರಿಗೆ ವಿಚಾರಣೆ ಮಾಡುತ್ತಿದ್ದರು. ಪಂಚಾಯಿತಿಗೆ ಅಪರಾಧಿಯ ಸಂಬಂಧಿಗಳಲ್ಲದೆ ಮಿಕ್ಕವರನ್ನೆಲ್ಲಾ ಸೇರಿಸಿಕೊಳ್ಳುತ್ತಿದ್ದರು. ಈ ಪಂಚಾಯಿತರು ಅಪರಾಧಿ ಮತ್ತು ಸಾಕ್ಷಿಗಳ ಕೈಫಿಯತ್ತನ್ನು ತಿಳಿದುಕೊಂಡು, ಅಮಲ್‌ದಾರರು ಅಥವಾ ಸುಬೇದಾರರಿಗೆ ಒಪ್ಪಿಸುತ್ತಿದ್ದರು. ಅವರು ಅದರ ಮೇಲೆ ತಮಗೆ ತಿಳಿದದ್ದನ್ನು ರಿಪೋರ್ಟ್ ಮಾಡಿ ಆ ಕಟ್ಟನ್ನು ದಿವಾನರ ಬಳಿಗೆ ಕಳುಹಿಸುತ್ತಿದ್ದರು. ದಿವಾನರು ರೆಸಿಡೆಂಟರೊಡನೆ ಯೋಚಿಸಿ ಆ ಮೊಕದ್ದಮೆಯನ್ನು ಫೈಸಲು ಮಾಡುತ್ತಿದ್ದರು. ಸಿವಿಲ್ ಮೊಕದ್ದಮೆಗಳಲ್ಲಿಯೂ ಇದೇ ಮೇರೆಗೆ ಫೈಸಲು ನಡೆಯುತ್ತಾ ಇತ್ತು. ಬಾಕಿಯಲ್ಲಿದ್ದ ಕಂದಾಯಗಳನ್ನೆಲ್ಲಾ ಬಿಟ್ಟು ಬಿಡುತ್ತೇವೆಂದು

ಮಾಡಿದ ಪ್ರಕಟನೆಯಿಂದ, ಕೋರ್ಟಿಗೆ ಬಹಳ ಮೊಕದ್ದಮೆಗಳು ಬರುವದು ನಿಂತಿತು. ೫ ವರಹಗಳೊಗಾಗಿ ಇರತಕ್ಕ ವ್ಯಾಜ್ಯಗಳನ್ನು ಅಮಿಲ್ದಾರರು ಸ್ವತಂತ್ರವಾಗಿಯೂ ಇದಕ್ಕೆ ಮೇಲ್ಪಟ್ಟ ವ್ಯಾಜ್ಯಗಳನ್ನು ಪಂಚಾಯಿತರನ್ನು ಇಟ್ಟುಕೊಂಡೂ ದರ್ಯಾಫ್ತು ಮಾಡುತ್ತಾ ಇದ್ದರು. ಕಕ್ಷಿಗಾರರು ಇಬ್ಬರೂ ಹಿಂದುಗಳಾದರೆ ಹಿಂದೂ ಪಂಚಾಯಿತರನ್ನೂ, ಅನ್ಯ ಮತಸ್ಥರಾಗಿದ್ದರೆ ವಾದಿಯ ಜಾತಿಯವರಿಬ್ಬರನ್ನೂ ಪ್ರತಿವಾದಿಯ ಜಾತಿಯವರು ಮೂವ ರನ್ನೂ ಪಂಚಾಯಿತಿಗೆ ಸೇರಿಸಿ ಕೊಳ್ಳುತ್ತಿದ್ದರು. ಈ ೫ ಜನ ಪಂಚಾಯಿ ತರೂ ಏಕಾಭಿಪ್ರಾಯವುಳ್ಳವರಾಗಿದ್ದರೆ ಅವರ ಫೈಸಲನ್ನೇ ಜಾರಿಗೆ ತರು ತ್ತಿದ್ದರು. ಹಾಗೆ ಅವರ ಫೈಸಲಿನಲ್ಲಿ ಐಕಮತ್ಯವಿಲ್ಲದಿದ್ದರೆ, ತಮ್ಮ ಮತ್ತು ಪಂಚಾಯಿತರ ಇರಾದೆಯ ಕಟ್ಟನ್ನು ದಿವಾನರಿಗೆ ಕಳುಹಿಸುತ್ತಾ ಇದ್ದರು. ದಿವಾನರವರು ಕೆಲವು ವೇಳೆ ರೆಸಿಡೆಂಟರೊಡನೆ ಯೋಚಿಸಿಯೂ, ಕೆಲವು ಸಂದರ್ಭಗಳಲ್ಲಿ ಪುನಃ ತಾವೇ ವಿಚಾರಣೆಮಾಡಿಯೂ ಫೈಸಲು ಮಾಡುತ್ತಾ ಇದ್ದರು. ದಿವಾನರವರು ಪದೇಪದೇ ಜಮಾಬಂದಿ ಹೊರಟು ಆಯಾ ಗ್ರಾಮಕ್ಕೆ ಹೋದಾಗ, ಅವರವರು ಅಪ್ಪೀಲು ಮಾಡುತ್ತಾ ಇದ್ದರು. ಮೊಕದ್ದಮೆ ಪ್ರಾರಂಭವಾದ ಕೂಡಲೆ, ವಾದಿಯು ತನ್ನ ಮೊಕದ್ದಮೆಗೆ ಸಂಬಂಧಪಟ್ಟ ಸಕಲ ಅಂಶಗಳನ್ನೂ ಹೇಳುತ್ತಿದ್ದನು. ಅದನ್ನು ಬರೆದು ಕೊಂಡು, ಅವನಿಗೆ ಎರಡುಸಾರಿ ಓದಿಹೇಳಿ, ಅನಂತರದಲ್ಲಿ ಅವನ ರುಜುವನ್ನೂ ಇಬ್ಬರು ಸಾಕ್ಷಿಗಳು ಮತ್ತು ಒಬ್ಬ ಸರ್ಕಾರದ ಅಧಿಕಾರಿಯ ರುಜುಗಳನ್ನೂ ತೆಗೆದುಕೊಳ್ಳುತ್ತಿದ್ದರು. ಪ್ರತಿವಾದಿಯ ಕೈಫಿಯತ್ತನ್ನೂ ಹೀಗೆಯೇ ತೆಗೆದು ಕೊಳ್ಳುತ್ತಿದ್ದರು. ಇದರಿಂದ ಮೊಕದ್ದಮೆಯ ಸಾರಾಂಶವೂ ನಿಶ್ಚಯವೂ ಬೇಗನೆಗೊತ್ತಾಗುತ್ತಿತ್ತು. ವಾದಿ ಪ್ರತಿವಾದಿಗಳ ಕೈಫಿಯತ್ತು ಆದಮೇಲೆ, ಮೊದಲು ಫಿರ್ಯಾದಿಯಕಡೆ ಸಾಕ್ಷಿಗಳ ಕೈಫಿಯತ್ತನ್ನೂ, ಅನಂತರದಲ್ಲಿ ಪ್ರತಿವಾದಿಗಳಕಡೆ ಸಾಕ್ಷಿಗಳ ಕೈಫಿಯತ್ತನ್ನೂ, ಕಡೆಗೆ ಪಂಚಾಯಿತರ ಕೈಫಿಯತ್ತುನ್ನೂ ತೆಗೆದು ಕೊಳ್ಳುತ್ತಿದ್ದರು. ಸಾಕ್ಷಿಗಳು ಹೇಳತಕ್ಕ ಸಕಲ ಅಂಶಗಳೂ ನಿಜವೆಂದು ರುಜುವಾತಾದ ಹೊರತು, ಅವುಗಳನ್ನು ತಮ್ಮ ಫೈಸ ಲಿಗೆ ಆಧಾರವಾಗಿ ಇಟ್ಟು ಕೊಳ್ಳುತ್ತಿರಲಿಲ್ಲ. ಇದರಿಂದ ಒಂದು ವಿಷಯವನ್ನು ನಿಶ್ಚಯಿಸುವದಕ್ಕಾಗಿ ಅನೇಕ ವಿಷಯಗಳನ್ನು ಚರ್ಚಿಸಬೇಕಾಗಿತ್ತು.

ರೆವಿನ್ಯೂ ವಸೂಲಿನ ಸೌಲಭ್ಯಕ್ಕೋಸ್ಕರ ಸಂಸ್ಥಾನವನ್ನು ೧೨೦ ತಾಲ್ಲೂಕಾಗಿ ಭಾಗ ಮಾಡಿದ್ದರು. ಪ್ರತಿ ತಾಲ್ಲೂಕಿಗೂ ಒಬ್ಬ ಅಮಿಲ್ದಾರನು ಇದ್ದನು. ಈ ಅಮಿಲ್ದಾರರೆಲ್ಲರೂ ತಮ್ಮತಮ್ಮ ಡಿಸ್ಟ್ರಿಕ್ಟ್ ಸುಬೇದಾರರ ಅಧಿಕಾರಕ್ಕೆ ಒಳಪಟ್ಟಿದ್ದರು.

ರೆವಿನ್ಯೂನಲ್ಲಿ ಭೂಮಿಯ ಕಂದಾಯ, ಸುಂಕ, ಅಬ್ಕಾರಿ, ಹೊಗೆಸೊಪ್ಪು ಎಂಬ ನಾಲ್ಕು ಬಾಬುಗಳಿದ್ದವು. ಭೂಮಿಯ ಕಂದಾಯದಲ್ಲಿಯೇ ಮನೆಯ ತೆರಿಗೆಯೂ ಏರು ಕಂದಾಯವೂ ಸೇರಿದ್ದವು. ಮನೆಗೆ ೧ ಹಣವನ್ನೂ ಏರಿಗೆ ೧ ಹಣವನ್ನೂ ತೆಗೆದುಕೊಳ್ಳುತ್ತಿದ್ದರು. ಮೊದಲು ಬೆಡ್ನೂರು ಬಾಲಂ ತುಮಕೂರು ಈ ಮೂರು ಪ್ರದೇಶಗಳಲ್ಲಿಯೂ ಕಂದಾಯವನ್ನು ದ್ರವ್ಯ ರೂಪವಾಗಿ ಕೊಡಬೇಕೆಂದು ನಿಷ್ಕರ್ಷೆ ಮಾಡಿದರು. ಮಹೀಶೂರಲ್ಲಿಯೂ ಅದೇ ಪದ್ಧತಿಯು ಏರ್ಪಾಡಾಯಿತು. ಕಂದಾಯವನ್ನು ದ್ರವ್ಯರೂಪವಾಗಿ ಕೊಡಬೇಕೆಂದು ನಿಷ್ಕರ್ಷೆ ಮಾಡುವದಕ್ಕೆ ಮುಂಚೆ, ರೈತರು ಸರಿಯಾಗಿ ವ್ಯವಸಾಯ ಮಾಡುತ್ತಾರೋ ಇಲ್ಲವೋ ಎಂದು ಸರ್ಕಾರದವರು ವಿಚಾರಣೆ ತೆಗೆದುಕೊಳ್ಳಬೇಕಾಗಿತ್ತು. ಮೇಲೆ ಕಂಡ ಏರ್ಪಾಡಿನಿಂದ ಸರ್ಕಾರಕ್ಕೆ ಈ ಕಷ್ಟವು ತಪ್ಪಿತು. ಅವಶ್ಯಕವಾದಾಗ ತಕಾವಿ ಅಡ್ವಾನ್ಸನ್ನು ಕೊಡುವದಕ್ಕೆ ಅಮಿಲ್ದಾರರಿಗೆ ಅಧಿಕಾರ ಕೊಟ್ಟಿದ್ದರು. ಕೆರೆಕುಂಟೆ ಮುಂತಾದವುಗಳ ಕೆಳಗೆ ಇರತಕ್ಕ ಕೆಲವು ಭೂಮಿಗಳಲ್ಲಿ ಮಳೆಯಿಂದ ನೀರು ತುಂಬಿಕೊಂಡರೆ ತರೀ ಫಸಲು ಆಗುತ್ತಿತ್ತು; ಅಲ್ಲದಿದ್ದರೆ ಖುಷ್ಕೀ ಫಸಲು ಮಾಡುತ್ತಾ ಇದ್ದರು. ಇಲ್ಲಿ ದ್ರವ್ಯರೂಪವಾಗಿ ಕಂದಾಯವನ್ನು ಏರ್ಪಾಡು ಮಾಡುವದರಿಂದ ರೈತರಿಗೆ ಕಷ್ಟನಾಗುವದೆಂದು, ಅದ ಫಸಲಿನಲ್ಲಿ ವಾರ ತೆಗೆದುಕೊಳ್ಳುತ್ತಿದ್ದರು. ಕಾವೇರಿ ಮುಂತಾದ ನದಿಗಳಿಂದ ಸಾಗುವಳಿಯಾಗುವ ಭೂಮಿಗಳಲ್ಲಿ ವ್ಯವಸಾಯವು ಕ್ಲಪ್ತವಾಗಿ ನಡೆಸುವದಕ್ಕೆ ಅಟ್ಟಂಕವಿಲ್ಲದ್ದರಿಂದ, ಅಲ್ಲಿ ಕ್ಲಪ್ತವಾದ ಕಂದಾಯವನ್ನು ಏರ್ಪಾಡು ಮಾಡಿದ್ದರು. ಅಹಲ್ಲದೆ ಆಗಿನ ಕಂದಾಯವು ಈಗಿನದಕ್ಕಿಂತ ಕಡಮೆ. ಸುಂಕದ ದರಗಳು ಒಂದೊಂದು ಡಿಸ್ಟ್ರಿಕ್ಟಿನಲ್ಲಿ ಒಂದೊಂದು ವಿಧವಾಗಿ ಇತ್ತೇ ಹೊರತು ಯಾವ ಕಟ್ಟಳೆಯು ಪ್ರಕಾರವೂ ಇರಲಿಲ್ಲ. ಕೆಲವು ಡಿಸ್ಟ್ರಿಕ್ಟುಗಳಲ್ಲಿ ಸಾಯರು ಅಮಾನಿ

ಯಾಗಿಯೂ ಇನ್ನು ಕೆಲವು ಡಿಸ್ಟ್ರಿಕ್ಟುಗಳಲ್ಲಿ ಶಿಕ್ಕಿಯಾಗಿಯೂ ನಡೆಯುತ್ತಿತ್ತು. ಅಬ್ಕಾರಿಯನ್ನೂ ಹೊಗೇಸೊಪ್ಪನ್ನೂ ಗುತ್ತಿಗೆಗೆ ಕೊಡುತ್ತಿದ್ದರು. ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಮಾತ್ರ ವೀಳ್ಯದೆಲೆಗೆ ಸುಂಕವಿತ್ತು.

ಹೈದರಲ್ಲೀ ಕಾಲದಲ್ಲಿ ಧರ್ಮಾರ್ಥವಾಗಿ ಕೊಟ್ಟ ಜಹಗೀರುಗಳವಿವರ.— ದೇವಸ್ಥಾನಗಳಿಗೂ ಅಗ್ರಹಾರಗಳಿಗೂ ೧,೯೩,೯೫೯ ಕಂಠೀರವ ವರಹ; ಬ್ರಾಹ್ಮಣರ ಮಠಗಳಿಗೆ ೨೦ ಸಾವಿರ ಕಂಠೀರವ ವರಹ; ಮಹಮ್ಮದ್ ಮಕಾನುಗಳಿಗೆ ಟೀಪೂ ಸುಲ್ತಾನನು ಕೊಟ್ಟಿದ್ದು ೨೦ ಸಾವಿರ ಕಂಠೀರವ ವರಹ.

ದಿವಾನರವರು ಎಲ್ಲಾ ಜಮೀನುಗಳ ಸನ್ನದುಗಳನ್ನೂ ತರಿಸಿ, ನ್ಯಾಯವಾದ ಹಕ್ಕುದಾರರಿಗೆ ಜಮೀನುಗಳನ್ನು ಬಿಡಿಸಿಕೊಟ್ಟು, ಹಕ್ಕಿಲ್ಲದೆ ಅನುಭವಿಸುತ್ತಿದ್ದವರಿಂದ ಅವುಗಳ ಮೊಬಲಗನ್ನು ಸರ್ಕಾರಕ್ಕೆ ತೆಗೆದುಕೊಂಡು ಆ ಜಮೀನುಗಳನ್ನು ಅವರ ವಶ ಮಾಡಿದರು.

ಟೀಪೂ ಮತ್ತು ಹೈದರಲ್ಲಿಯ ಆಳಿಕೆಯಲ್ಲಿ ಅನೇಕ ಕೆರೆಗಳು ಅನುಪಯೋಗವಾಗಿ ಹೋಗಿದ್ದವು. ಪೂರ್ಣಯ್ಯನವರ ದಿವಾನಗಿರಿಯ ಕಾಲದಲ್ಲಿ ಖರ್ಚು ಹೆಚ್ಚಾದದಕ್ಕೆ ಎಲ್ಲಾ ಕೆರೆಗಳನ್ನೂ ಆಬಾದು ಮಾಡಿದ್ದೇ ಮುಖ್ಯ ಕಾರಣ. ಇವರ ದಿವಾನಗಿರಿಯ ನಾಲ್ಕನೇ ವರ್ಷದಲ್ಲಿ ಈ ಬಾಬಿನಲ್ಲಿ ಖರ್ಚಾದ ಮೊಬಲಗು ೫,೧೦,೦೦೦ ಕಂಠೀರವ ವರಹಗಳು. ಈ ಮೊಬಲಗಿನಲ್ಲಿಯೇ ಬೆಂಗಳೂರು ಮತ್ತು ಚನ್ನಪಟ್ಟಣದ ಕೋಟೆಗಳ ದುರಸ್ತಿಗೆ ಮುಟ್ಟಿನ ಹಣವೂ ಸೇರಿದೆ. ೫ನೇ ವರ್ಷದಲ್ಲಿ ೪,೮೬,೦೧೧ ಕಂಠೀರವ ವರಹ ಖರ್ಚಾಯಿತು.

ಪೂರ್ಣಯ್ಯನವರ ದಿವಾನಗಿರಿಯ —	ಒಟ್ಟು ಉತ್ಪತ್ತಿ.	ಕೆರೇ ಕಟ್ಟೆಗಳಿಗೆ ಆದ ಖರ್ಚು ಜಾತಾ ಬಾಕಿ ನಿಂತದ್ದು.
೧ನೇ ವರ್ಷದಲ್ಲಿ ...	೨೧,೫೩,೬೦೩	೧೫,೯೯,೮೬೨
೨ನೇ ,, ..	೨೩,೧೦,೫೨೧	೧೬,೯೪,೧೦೨
೩ನೇ ,, ..	೨೫,೪೬,೭೯೬	೧೭,೩೮,೮೯೯
೪ನೇ ,, ..	೨೫,೦೧,೫೬೦	೧೭,೨೯,೪೬೨
೫ನೇ ,,	೨೫,೮೧,೫೫೦	೨೧,೨೩,೫೦೨

ಇದರಲ್ಲಿ ಕುಂಪಣಿಯವರಿಗೆ ಪ್ರೊಗ್ರೆಸಿವಾಗಿ ಕೊಡತಕ್ಕದ್ದು ೮,೩೩,೨೪೯-೦ ವರಹ. ಇದು ಕ್ಲಿಷ್ಟವು.

ಇಂಗ್ಲಿಷ್ ಸೈನ್ಯವಲ್ಲದೆ ಮಹಾರಾಜರವರ ಸ್ವಂತಕ್ಕೆ, ಖಾಯಂ ಆಗಿ ೨,೦೦೦ ಕುದುರೆ, ೪,೦೦೦ ಬಾರು, ೨,೫೦೦ ಜವಾನರು ಇರುವಹಾಗೂ, ೧,೦೦೦ ಜನಗಳಿರುವ ಒಂದು ಪಟಾಲಂ ಮಹಿಶೂರಲ್ಲಿ ಇರುವಹಾಗೂ, ಮತ್ತೊಂದು ಸಾವಿರ ಜನಗಳಿರುವ ಸೈನ್ಯವು ಹುಂಜರಾಬಾದಿನಲ್ಲಿರುವ ಹಾಗೂ ಏರ್ಪಾಡು ಆಗಿತ್ತು.

೧೮೦೫ನೇ ಇಸವಿಯಲ್ಲಿ ನ್ಯಾಯ ವಿಚಾರಣೆಗೋಸ್ಕರ ಇಬ್ಬರು ಬಕ್ಷಿಗಳುಳ್ಳ ಒಂದು ಅದಾಲತ್ ಕೋರ್ಟನ್ನು ಏರ್ಪಾಡು ಮಾಡಿದರು. ಈ ಕೋರ್ಟಿಗೆ ಇಬ್ಬರು ಶಿರಸ್ತೇದಾರರನ್ನೂ ೬ ಜನ ಪಂಚಾಯಿತರನ್ನೂ ಒಬ್ಬ ಖಾಜಿಯನ್ನೂ ಧರ್ಮಶಾಸ್ತ್ರಜ್ಞನಾದ ಒಬ್ಬ ಪಂಡಿತನನ್ನೂ ನೇಮಕ ಮಾಡಿದರು.

ಜಡ್ಜಿಗಳ ಎದುರಿಗೆ ಪಂಚಾಯಿತರು ಮೊಕದ್ದಮೆಗಳನ್ನು ವಿಚಾರಣೆ ಮಾಡುತ್ತಿದ್ದರು. "ನಿಮ್ಮ ತೀರ್ಪಿಗೆ ಅನುಸಾರವಾಗಿ ನಡೆಯುವೆವು" ಎಂದು ಕಕ್ಷಿಗಾರರಿಂದ ಮುಚ್ಚಳಿಕೆ ತೆಗೆದುಕೊಳ್ಳತಕ್ಕ ಸಂಪ್ರದಾಯವಿರಲಿಲ್ಲ. ವಾದಿ ಪ್ರತಿವಾದಿಗಳು ಖುದ್ದು ಹಾಜರಾಗುತ್ತಿದ್ದರು. ಅವರ ಕೈಫಿಯತ್ತುಗಳನ್ನೂ ಸಾಕ್ಷಿಗಳ ಕೈಫಿಯತ್ತುಗಳನ್ನೂ ತೆಗೆದುಕೊಳ್ಳುತ್ತಿದ್ದರು. ಆದರೆ ಸಾಕ್ಷಿಗಳ ಕೈಯಲ್ಲಿ ಪ್ರಮಾಣ ಮಾಡಿಸಿ ಕೈಫಿಯತ್ತು ತೆಗೆದುಕೊಳ್ಳುತ್ತಿರಲಿಲ್ಲ. ಈಗಿನಂತೆ ದಾವಾ ಅರ್ಜಿ ದಾಖಲು, ರಿಟನ್‌ಸ್ಟೇಟುಮೆಂಟು, ರಿಪ್ಲೈ, ರಿಜಾಯಿಂಡರು ಮುಂತಾದವುಗಳು ಇರಲಿಲ್ಲ.

ಮೊದಲನೇ ಜಡ್ಜಿಗಳು ವ್ಯಾಸರಾಯರು ಮತ್ತು ಅಹಮದ್‌ಖಾನರು. ವ್ಯಾಸರಾಯರು ಬಹು ಅನುಭವಶಾಲಿಗಳಾಗಿದ್ದೂ, ದಿವಾನರಿಗೆ ಆಪ್ತರಾಗಿಯೂ ಇದ್ದರು. ಇವರು ಎಲ್ಲಾ ಬಾಬುಗಳನ್ನೂ ದಿವಾನರವರ್ಜೊತೆನೆ ಯೋಚನೆಮಾಡಿ ಫೈಸಲು ಮಾಡುತ್ತಿದ್ದರು. ಅಹಮದ್‌ಖಾನರು ಸಹ ದಿವಾನರಲ್ಲಿ ಆಗಾಗ್ಯೆ ಯೋಚಿಸುತ್ತಾ ಕಾರ್ಯಗಳನ್ನು ಜರುಗಿಸುತ್ತಿದ್ದರು.

ವ್ಯಾಸರಾಯರು ಸಿವಿಲ್ ಮೊಕದ್ದಮೆಗಳಲ್ಲಿ ಅಮೀನ್ ದಿವಾನರೊಡನೆ ಸೇರಿ ಫೈಸಲು ಮಾಡುತ್ತಿದ್ದದ್ದಲ್ಲದೆ, ರೆವಿನ್ಯೂ ಮೊಕದ್ದಮೆಗಳಲ್ಲಿ ಪ್ರತ್ಯೇಕವಾಗಿ ದರ್ಯಾಪ್ತು ಮಾಡಿ ಫೈಸಲು ಮಾಡುತ್ತಿದ್ದರು. ಈ ರೆವಿನ್ಯೂ ಮೊಕದ್ದಮೆಗಳಲ್ಲಿ ಕಕ್ಷಿಗಾರರಿಂದ 'ಕೋರ್ಟಿನ ಫೈಸಲಿಗೆ ಅನುಸಾರವಾಗಿ ನಡೆಯುತ್ತೇವೆ' ಎಂದು ಮುಚ್ಚಳಿಕೆ ಬರಸಿಕೊಳ್ಳುವ ಸಂಪ್ರದಾಯವಿತ್ತು. ವ್ಯಾಸರಾಯರು ಈ ೨ ಕೆಲಸಗಳಲ್ಲದೆ, ಷಾಗಿರ್ದ್ ಪೇಷ್ ಮತ್ತು ಸಂದಲು ಕಚೇರಿಗಳ ಭಕ್ಷಿಗಳಾಗಿದ್ದರು. ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳಲ್ಲಿ ಈ ಇಬ್ಬರು ಜಡ್ಜಿಗಳೂ, ಪಂಚಾಯಿತರೂ, ಎಲ್ಲರೂ ಸೇರಿ ಫೈಸಲು ಮಾಡಿ, ಮಂಜೂರಾತಿಯ ಬಗ್ಗೆ ದಿವಾನರಿಗೆ ಕಳುಹಿಸುತ್ತಿದ್ದರು. ಮೊಕದ್ದಮೆಗಳಲ್ಲಿ ಏನಾದರೂ ಕಷ್ಟವಾದ ಅಂಶಗಳಿದ್ದರೆ, ಅವುಗಳನ್ನು ದಿವಾನರಿಗೆ ರಿಪೋರ್ಟು ಮಾಡಿ ತಿಳಿದು ಕೊಳ್ಳುತ್ತಿದ್ದರು.

ಜಾತಿ ವಿಷಯಕವಾದ ಜಗಳಗಳು ಬಂದರೆ, ಆ ವಿಷಯದಲ್ಲಿ ಪ್ರಾರ್ಥಿತರಾದ ಪಂಚಾಯಿತರನ್ನು ಕರೆಸಿ, ಖಾಜಿ ಅಥವಾ ಕೋರ್ಟು ಪಂಡಿತರನ್ನು ಇಟ್ಟುಕೊಂಡು ಫೈಸಲು ಮಾಡುತ್ತಿದ್ದರು. ತಾಲ್ಲೂಕುಗಳಲ್ಲಿಯೂ ವ್ಯಾಜ್ಯಗಳು ಈ ರೀತಿಯಲ್ಲಿಯೇ ಫೈಸಲಾಗುತ್ತಿದ್ದವು. ಕಕ್ಷಿಗಾರರೇ ಪಂಚಾಯಿತರನ್ನು ಏರ್ಪಾಡು ಮಾಡಿದ ಪಕ್ಷದಲ್ಲಿ ಅಂಥಾ ಪಂಚಾಯಿತರೇ ವ್ಯಾಜ್ಯವನ್ನು ಫೈಸಲು ಮಾಡುತ್ತಿದ್ದರು. ಹಾಗಿಲ್ಲದಿದ್ದರೆ ಕೋರ್ಟಿನವರೇ ತಾಲ್ಲೂಕಿನಲ್ಲಿ ಮುಖಂಡರಾಗಿರುವ ಯಜಮಾನರು ಸೆಟ್ಟಿಗಳು ಕಿಲ್ಲೇದಾರರು ಮುಂತಾದವರನ್ನು ಪಂಚಾಯಿತರನ್ನಾಗಿ ನೇಮಿಸಿ ಫೈಸಲು ಮಾಡುತ್ತಿದ್ದರು. ಈ ಪಂಚಾಯಿತರು ತಾವು ಮೊಕದ್ದಮೆಯ ವಿಚಾರಣೆಗೆ ಮೊದಲೇ ಕಕ್ಷಿಗಾರರಿಂದ ಮುಚ್ಚಳಿಕೆ ಬರಸಿ ಕೊಳ್ಳುತ್ತಿದ್ದರು. ಪೂರ್ಣಯ್ಯನವರು ಅಧಿಕಾರ ಮಾಡುತ್ತಿದ್ದವರಿಗೂ ಈ ಸಂಪ್ರದಾಯಗಳೇ ಆಚರಣೆಯಲ್ಲಿದ್ದವು.

೧೮೧೧ನೇ ಇಸವಿಯಲ್ಲಿ ಪೂರ್ಣಯ್ಯನವರು ದಿವಾನಗಿರಿಯನ್ನು ಬಿಟ್ಟುಬಿಟ್ಟರು. ಅನಂತರ ಶ್ರೀಕೃಷ್ಣರಾಜ ಒಡೆಯರವರು ಖುದ್ದು ರಾಜ್ಯಭಾರ ಮಾಡುವದಕ್ಕೆ ಉಪಕ್ರಮಿಸಿದರು. ಈ ಲಾಗಾಯಿತು ೧೮೩೧ನೇ ಇಸವಿಯವರಿಗೂ ಮಹಾರಾಜರವರೇ ಸ್ವಂತವಾಗಿ ರಾಜ್ಯಭಾರ ಮಾಡಿದರು.

೧೮೩೧ನೇ ಇಸವಿಯಲ್ಲಿ ಇಂಗ್ಲಿಷಿನವರಿಗೆ ರಾಜ್ಯವನ್ನು ವಹಿಸಿದಾಗ ಈ ಸಂಸ್ಥಾನವನ್ನು ೬ ಫೌಜುದಾರಿಗಳಾಗಿಯೂ ೧೧೧ ತಾಲ್ಲೂಕುಗಳಾಗಿಯೂ ವಿಂಗಡಿಸಿ ಇತ್ತು.

ನಂಬರು.	* ಫೌಜುದಾರಿಗಳ ಹೆಸರು.	ಫೌಜುದಾರಿಗಳಿಗೆ ಸೇರಿದ ತಾಲ್ಲೂಕುಗಳ ಸಂಖ್ಯೆ.
೧	ಬೆಂಗಳೂರು	೨೩
೨	ಮದ್ದಗಿರಿ	
೩	ಚಿತ್ರದುರ್ಗ	೧೩
೪	ಅಷ್ಟಗ್ರಾಮ	೨೫
೫	ಮಂಜರಾಬಾದು	೧೧
೬	ನಗರ	೨೫

ಭೂಮಿಯ ಕಂದಾಯ:—ಹೈದರನಾಯಕನು ಬರುವವಕ್ಕೆ ಮುಂಚೆ ಬೆಂಗಳೂರು ಮತ್ತು ಮದ್ದಗಿರಿ ಡಿಸ್ಟ್ರಿಕ್ಟುಗಳಲ್ಲಿ, ಮಹಾರಾಷ್ಟ್ರದ ದೊರೆಗಳು, ೧ ಕಂಡೀ ತರೀ ಭೂಮಿಗೆ ೨ರಿಂದ ೧೨ ವರಹವರೆಗೂ, ಖುಷ್ಕಿಜಮೀನು ಕಂಡಿಗೆ ೨॥ ಯಿಂದ ೩೦ ವರಹಗಳವರೆಗೂ. ಕಬ್ಬು ಫಸಲು ಆಗುವ ತರೀಜಮೀನುಗಳಿಗೆ ೧೬ರಿಂದ ೩೨ ವರಹಗಳವರೆಗೂ ಕಂದಾಯವನ್ನು ವಸೂಲು ಮಾಡುತ್ತಿದ್ದರು. ಹೈದರಲ್ಲಿ ಮತ್ತು ಟೀಪೂಸುಲ್ತಾನರು ಈ ದೇಶವು ತಮ್ಮ ವಶವಾದಮೇಲೆ ಅದೇ ಕಂದಾಯವನ್ನು ವಸೂಲು ಮಾಡುತ್ತಾ ಇದ್ದರು. ಪೂರ್ಣಯ್ಯನವರು ಈ ಜಮೀನುಗಳನ್ನೆಲ್ಲಾ ಸರ್ವೇಮಾಡಿದರು. ಆದರೆ ಕಂದಾಯದ ಸೆಟಲ್ ಮೆಂಟನ್ನು ಮಾಡಲಿಲ್ಲ. ಇವರ ದಿವಾನಗಿರಿಯಲ್ಲಿ ವ್ಯವಸಾಯವು ಬಹಳ ಚನ್ನಾಗಿ ನಡೆಯುತ್ತಿತ್ತು, ರಾಜ್ಯಭಾರವೂ ಬಹಳ ಚನ್ನಾಗಿತ್ತು. ಚಿತ್ರದುರ್ಗದಲ್ಲಿ ವಿಜಯನಗರದ ದೊರೆಗಳ ರಾಜ್ಯಭಾರವು ಬಹಳ ಚನ್ನಾಗಿತ್ತು. ಚಿತ್ರದುರ್ಗದಲ್ಲಿ ವಿಜಯನಗರದ ದೊರೆಗಳ ರಾಜ್ಯಭಾರದಲ್ಲಿ

* ಪೂರ್ವದಲ್ಲಿ ಡಿಸ್ಟ್ರಿಕ್ಟುಗಳಿಗೆ ಫೌಜದಾರಿ ಎಂದು ಹೆಸರು ಇತ್ತು.

ರೈತರು ತಮ್ಮ ಭೂಮಿಯಲ್ಲಿ ಉತ್ಪತ್ತಿಯಾಗುವ ಫಸಲಿನಲ್ಲಿ ಮೂರರಲ್ಲಿ ೧ ಪಾಲು ಸರ್ಕಾರಕ್ಕೆ ಕೊಡುತ್ತಿದ್ದರು. ಇದಲ್ಲದೆ ಆಗ ೧ ದುರ್ಗೀವರಹ ಏರು ಕಂದಾಯವನ್ನು ವಸೂಲು ಮಾಡುತ್ತಿದ್ದರು. ಅನಂತರದಲ್ಲಿ ಚಿತ್ರದುರ್ಗವು ನಾಯಕರೆಂಬ ದೊರೆಗಳಿಗೆ ಸೇರಿತು. ಇವರು ಪೂರ್ವದವುಗಳಲ್ಲದೆ ಅನೇಕ ಹೊಸತೆರಿಗೆಗಳನ್ನು ಏರ್ಪಾಡು ಮಾಡಿದರು. ಶುಭಾಶುಭ ಕರ್ಮಗಳು ನಡೆದರೆ ಅವುಗಳಿಗೆ ತೆರಿಗೆ ಹಾಕಿದರು. ಹೈದರಲ್ಲೀಖಾನನು ತನ್ನ ಆಳಿಕೆಯಲ್ಲಿ ಈ ತೆರಿಗೆಗಳನ್ನೆಲ್ಲಾ ಕಂದಾಯಕ್ಕೆ ಸೇರಿಸಿಬಿಟ್ಟನು. ಟೀಪುವಿನ ರಾಜ್ಯಭಾರದಲ್ಲಿ ಯಾತ ಕಪಿಲೆಗಳಿಂದ ವ್ಯವಸಾಯವಾಗುವ ಭೂಮಿಗಳಿಗೆ ೧೦ ರಿಂದ ೩೦ ವರಹದವರಿಗೂ ಕಂದಾಯವಿತ್ತು. ಆದರೆ ಟೀಪುವು ಒಂದು ಏರಿನಲ್ಲಿ ವ್ಯವಸಾಯ ಮಾಡುವಷ್ಟು ಖುಷ್ಕೀ ಭೂಮಿಯನ್ನು ತರೀ ಫಸಲುಮಾಡುವ ರೈತರಿಗೆ ಇನಾಮಾಗಿ ಕೊಟ್ಟನು.

ಚಿಕ್ಕದೇವರಾಜ ಒಡೆಯರವರ ಕಾಲದಲ್ಲಿ ಅಷ್ಟಗ್ರಾಮದಲ್ಲಿ ೧ ಕೊಳಗ ಖುಷ್ಕೀ ಜಮೀನಿಗೆ ೨ ಹಣ ಕಂದಾಯವಿತ್ತು. ತರಿ ಬಾಗಾಯತಿನಲ್ಲಿ ಆಗುವ ಉತ್ಪತ್ತಿಯಲ್ಲಿ ರೈತನಿಗೂ ಸರ್ಕಾರಕ್ಕೂ ಸಮಭಾಗ ಸಲ್ಲುತ್ತಿತ್ತು. ಇದೇ ರಾಜ್ಯಭಾರದಲ್ಲಿ ರೈತರಿಗೆ ಇನ್ನೂ ಅನೇಕ ತೆರಿಗೆಗಳು ಬಿದ್ದದರಿಂದ ರೈತರು ಅವುಗಳನ್ನು ಕೊಡುವದಕ್ಕೆ ಸಮ್ಮತಿಸಲಿಲ್ಲ. ಆದರೂ ಸರ್ಕಾರದವರು ಆ ತೆರಿಗೆಗಳನ್ನು ಬಲಾತ್ಕಾರವಾಗಿ ಜಾರಿಯಲ್ಲಿ ತಂದರು. ಸೋಸಲೆ ಮತ್ತು ತಲಕಾಡಿನಲ್ಲಿ ಹೈದರಲ್ಲಿಯ ಕಾಲದಲ್ಲಿ ಕಂದಾಯವನ್ನು ಧಾನ್ಯ ರೂಪಕವಾಗಿಯೇ ತೆಗೆದು ಕೊಳ್ಳುತ್ತಿದ್ದರು. ಈ ದವಸವನ್ನೆಲ್ಲಾ ಸರ್ಕಾರದ ಕಣಜಗಳಲ್ಲಿ ಭದ್ರವಾಗಿ ಇಡುತ್ತಿದ್ದರು. ಪೂರ್ಣಯ್ಯನವರ ಕಾಲದಲ್ಲಿ ಈ ಪ್ರಾಂತ್ಯದಲ್ಲಿರುವ ಸಮಸ್ತ ಭೂಮಿಗಳನ್ನೂ ಸರ್ವೆ ಮಾಡಿಸಿ ಕಂದಾಯ ಸಹ ನಿಷ್ಕರ್ಷೆಮಾಡಿದರು.

ಮಂಜರಾಬಾದು ಫೌಜದಾರಿಗೆ ಕೃಷ್ಣರಾಜಕಟ್ಟೆ, ಅರಕಲಗೂಡು, ಹಾರನಹಳ್ಳಿ, ಗರುಡನಗಿರಿಗಳು ಸೇರಿದ್ದವು. ಇವುಗಳೆಲ್ಲಾ ಪೂರ್ವದಲ್ಲಿ ಮೈಸೂರ ದೊರೆಗಳಿಗೆ ಸೇರಿದ್ದವುಗಳು. ಕೃಷ್ಣರಾಜಕಟ್ಟೆಯಲ್ಲಿ ಖಂಡಿ ೧ಕ್ಕೆ ೫॥ ವರಹವೂ, ಅರಕಲಗೂಡಿನಲ್ಲಿ ೩ ವರಹವೂ ಕಂದಾಯ ಇತ್ತು.

ಖುಷ್ಕಿ ಭೂಮಿಗೆ ೨ ರಿಂದ ೩೪ ವರಹಗಳವರಿಗೂ ಕಂದಾಯವಿತ್ತು. ಇತರ ತಾಲ್ಲೂಕುಗಳಲ್ಲಿ ತರೀಫಸಲನ್ನು ಸರ್ಕಾರದವರೂ ರೈತರೂ ಹಂಚಿಕೊಳ್ಳುತ್ತಿದ್ದರು. ಐಗೂರು ಪಾಳ್ಯದಲ್ಲಿ ಶಿವಪ್ಪನಾಯಕರು ಷಿಸ್ತನ್ನು ಏರ್ಪಾಡು ಮಾಡಿದ್ದರು. ಈ ಪಾಳ್ಯಕ್ಕೆ ಮಹಾರಾಜದುರ್ಗ ಮಂಜರಾಬಾದು ಸಕ್ಕರೇಪಟ್ಟಣ ಬೇಲೂರು ಹಾಸನ ಇವುಗಳೆಲ್ಲಾ ಸೇರಿದ್ದವು. ಈ ಪ್ರಾಂತ್ಯದಲ್ಲಿ ಸರ್ವೆಯಾದಂತೆ ಕಾಣುವದಿಲ್ಲ. ಸ್ವಲ್ಪ ತರೀ ಖುಷ್ಕಿ ಬಾಗಾಯತು ಎಲ್ಲಾ ಸೇರಿ, ಇಷ್ಟು ಭೂಮಿ ಯಿದ್ದರೆ ಇಷ್ಟು ಕಂದಾಯ ಕೊಡಬೇಕೆಂದು ಗೊತ್ತು ಮಾಡುತ್ತಿದ್ದರು. ಇದಕ್ಕೆ ಷಿಸ್ತೆಂದು ಹೆಸರು. ಹೈದರಲ್ಲಿ ಮತ್ತು ಟೀಪೂವಿನ ಕಾಲದಲ್ಲಿ ಕಂದಾಯದ ಏರ್ಪಾಡು ಕ್ರಮವಾಗಿ ಇರಲಿಲ್ಲ. ಕಂದಾಯವನ್ನು ಪೋಟಾಪೋಟಿ ಮಾಡಿ ಹೆಚ್ಚು ದರಖಾಸ್ತಿಗೆ ಒಪ್ಪಿಕೊಂಡವರಿಗೆ ಭೂಮಿಯನ್ನು ಸ್ವಾಧೀನಪಡಿಸುತ್ತಿದ್ದರು. ಪೂರ್ಣಯ್ಯನವರ ಕಾಲದಲ್ಲಿ ರೈತ್ವಾರಾಗಿ ಪ್ರತಿಯೊಬ್ಬನ ಸ್ಥಿತಿಯನ್ನೂ ಸರ್ಕಾರದವರು ವಿಚಾರಿಸುತ್ತಿದ್ದರು. ಮಹಾರಾಜರವರು ಅಧಿಕಾರವನ್ನು ವಹಿಸಿದಮೇಲೆ ಪೋಟಾಪೋಟಿಗೆ ಪ್ರಾರಂಭವಾಯಿತು. ನರಸೀಪುರದ ಪಾಳ್ಯಗಾರನ ಕಾಲದಲ್ಲಿ ತರೀ ಭೂಮಿಗೆ ೬ರಿಂದ ೧೨ರ ವರಿಗೂ, ಖುಷ್ಕಿಗೆ ೧ರಿಂದ ೬ರವರಿಗೂ, ಅಡಿಕೆ ಮತ್ತು ತೆಂಗಿಗೆ ಮರಕ್ಕೆ ೧ರಿಂದ ೩ ಹಣದವರಿಗೂ ಕಂದಾಯ ಇತ್ತು. ಪೂರ್ಣಯ್ಯನವರು ಹೇಮಾವತಿಗೆ ಅಣೇಕಟ್ಟು ಹಾಕಿಸಿ ೬ ಕಾಲುವೆಗಳವರಿಗೂ ತೆಗಿಸಿದರು. ಇದರಿಂದ ವ್ಯವಸಾಯಕ್ಕೆ ಬಹಳ ಉಪಯೋಗವಾಯಿತು. ಬಾಣಾವಾರವು ಪೂರ್ವದಲ್ಲಿ ತರೀಕೆರೇ ಪಾಳ್ಯಗಾರನಿಗೆ ಸೇರಿತ್ತು.

ನಗರದಲ್ಲಿ ಶಿವಪ್ಪನಾಯಕನು ಷಿಸ್ತನ್ನು ಮಾಡಿದ್ದನು. ಈ ಪ್ರದೇಶಕ್ಕೆ ಇದು ಬಹಳ ಅನುಕೂಲವಾಗಿತ್ತು. ಈ ಏರ್ಪಾಡಿನಿಂದ ಜನಗಳಿಗೆ ಸೌಲಭ್ಯವು ಹೆಚ್ಚಿ, ಆ ರಾಜ್ಯದ ಜೇರೀಜು ಒಂದಕ್ಕೆ ಎರಡಾಯಿತು.

೧೮೩೧—೩೨ನೇ ಇಸವಿಯಲ್ಲಿ ಮೈಸೂರು ಸಂಸ್ಥಾನದ ಉತ್ಪತ್ತಿಯು ೨೦,೮೮,೯೭೯ ವರಹಗಳು. ಇದರಲ್ಲಿ ಭೂಮಿಯ ಕಂದಾಯವೇ ೧೬,೧೮,೮೩೧ ವರಹಗಳು. ಸಾಯರ್ ಅಬ್ಕಾರಿ ಎಲ್ಲಾ ಒಟ್ಟು ೪,೧೧,೧೦೮ ವರಹಗಳು, ಇತರ ಬಾಬು ೬೯,೧೪೯ ವರಹಗಳು.

ಭೂಮಿಯು ಕಂದಾಯದಲ್ಲಿ ಖರ್ಚ ಭೂಮಿ ಕಂದಾಯವಲ್ಲದೆ ಇನ್ನೂ ಮನೆ ತೆರಿಗೆ ವಿರುಕಂದಾಯ ಮುಂತಾದ ೮೩ ಬಾಬುಗಳು ಸೇರಿದ್ದವು. ಈ ಬಾಬಲ್ಲದೆ ೧೦೮ ಚಿಲ್ಲರೇ ಬಾಬುಗಳು ಬೇರೆ ಇದ್ದವು.

೧೮೦೧ನೇ ಇಸವಿಯಿಂದ ೧೮೧೦ನೇ ಇಸವಿಯ ವರಿಗೂ ಪೂರ್ಣಯ್ಯನವರು ದಿವಾನಗಿರಿ ಮಾಡಿದರು. ೧೮೦೯ನೇ ಇಸವಿಯಲ್ಲಿ ೩೧,೭೯,೦೦೦ ಕಂಠೀರವ ವರಹಗಳ ರೆವಿನ್ಯೂ ಉತ್ಪತ್ತಿಯಾಯಿತು. ಪೂರ್ಣಯ್ಯನವರ ದಿವಾನಗಿರಿಯಲ್ಲಿ ಎಲ್ಲಾ ವರ್ಷಗಳ ಉತ್ಪತ್ತಿಯನ್ನೂ ಹಾಕಿದರೆ ಸರಾಸರಿ ವರ್ಷಕ್ಕೆ ೨೩,೮೪,೩೭೩ ವರಹ ಮೇರೆಗೆ ಉತ್ಪತ್ತಿಯಾದಂತೆ ಆಗುವದು. ೧೮೧೧ ರಿಂದ ೧೮೩೧ರ ವರಿಗೂ ಮಹಾರಾಜರವರೇ ಸ್ವಂತವಾಗಿ ಅಧಿಕಾರ ಮಾಡಿದರು. ಈ ಕಾಲದಲ್ಲಿ ಸರಾಸರಿ ಹಾಕಿದರೆ ವರ್ಷಕ್ಕೆ ೨೩,೫೩,೬೧೪ ವರಹ ಆಗುವದು.

ಪೂರ್ವದಲ್ಲಿ ಎಲ್ಲಾ ಗ್ರಾಮದ ಶಾನುಭೋಗರೂ ಪಟೇಲರೂ ಶೇಕದಾರರೂ ಸಹ ಸೇರಿ ವರ್ಷದ ಪ್ರಾರಂಭದಲ್ಲಿ ತಮ್ಮ ಗ್ರಾಮದಲ್ಲಿ ಇರತಕ್ಕ ರೈತರನ್ನೆಲ್ಲಾ ಕರಿಸಿ, ಇಷ್ಟು ಭೂಮಿಯನ್ನು ಇಂಥಾವನು ವ್ಯವಸಾಯ ಮಾಡಬೇಕೆಂತಲೂ, ಇಷ್ಟು ಕಂದಾಯ ಅಥವಾ ವಾರಾ ಕೊಡಬೇಕು ಎಂತಲೂ ನಿಷ್ಕರ್ಷೆ ಮಾಡಿ, ಅವರಿಗೆ ಒಂದು ಚೀಟಿ ಬರೆದು ಕೊಡುತ್ತಿದ್ದರು.

ಮಹೀಶೂರಲ್ಲಿ ಇರುವ ಭೂಮಿಗಳಲ್ಲಿ ೮ ರಲ್ಲಿ ೩ ಭಾಗ ತರೀ ಜಮೀನೂ ೫ ಭಾಗ ಖುಷ್ಕೀಜಮೀನೂ ಇದೆ. ಈ ಪೈಕಿ ೧೬ ಭಾಗದಲ್ಲಿ ೫ ಭಾಗ ಕೆಂಪುಮಣ್ಣಿನ ಭೂಮಿಯು, ೩ ಭಾಗ ಕಪ್ಪು ಭೂಮಿಯು, ೪ ಭಾಗ ಈ ಎರಡೂ ಮಿಶ್ರವಾದದ್ದು, ಉಳಿದದ್ದೆಲ್ಲಾ ಸುಣ್ಣ ಕಲ್ಲುಗಳಿಂದ ಮಿಶ್ರವಾದದ್ದು. ಈ ಸಂಸ್ಥಾನದಲ್ಲಿ ಇರುವ ನದಿಗಳೂ ಕಾಲುವೆಗಳೂ ಸಣ್ಣ ಸಣ್ಣ ಗಿರಿನದಿಗಳೂ ೧,೮೩೭; ಕೆರೆಗಳು ೧೯,೮೧೨, ಕೊಳಗಳು ೧೬,೩೭೯. ಇವುಗಳ ಸಮೀಪದಲ್ಲಿರುವ ಭೂಮಿಯಲ್ಲೆಲ್ಲಾ ತರೀ ಸಾಗುವಳಿಯಾಗುತ್ತಿತ್ತು.

ಫಸಲು ಕಟಾವಾದಕೂಡಲೆ ಧಾನ್ಯವು ಕಣದಲ್ಲಿ ಇದ್ದಹಾಗೆಯೇ ಬಾರಾಬಲೂತಿಯ ರುಸುಮುಗಳನ್ನು ತೆಗೆಯುತ್ತಿದ್ದರು. ಈ ರುಸುಮು

ತೆಗೆದಮೇಲೆ ಉಳಿದದ್ದನ್ನು ಸರ್ಕಾರದವರೂ ರೈತರೂ ಹಂಚಿಕೊಳ್ಳು ತ್ತಿದ್ದರು.

ಕಂದಾಯವು ಬಿಟ್ಟು ಹುಟ್ಟುವಳಿಯಲ್ಲಿ ಮೂರರಲ್ಲಿ ಒಂದು ಪಾಲು ಇತ್ತು. ಈ ಪದ್ಧತಿಯು ಮುಖ್ಯವಾಗಿ ಬೆಂಗಳೂರು ಮಧುಗಿರಿ ಅಷ್ಟ ಗ್ರಾಮಗಳಲ್ಲಿ ನಡೆಯುತ್ತಿತ್ತು. ಚಿತ್ರದುರ್ಗದಲ್ಲಿ ಮೂರರಲ್ಲಿ ಒಂದು ಪಾಲಿ ಗಿಂತ ಸೇಕಡ ೧೮ರ ಮೇರೆ ಹೆಚ್ಚಾಗಿತ್ತು. ಆದರೆ, ಅಲ್ಲಿ ಸಾಗುವಳಿ ಮಾಡತಕ್ಕವರು ಬೇಕಾದಹಾಗೆ ಸಿಕ್ಕುತ್ತಿದ್ದದ್ದರಿಂದ, ಜಮೀನುದಾರರಿಗೆ ಈ ಹೆಚ್ಚು ಕಂದಾಯದಿಂದ ಬಹಳ ತೊಂದರೆ ಇರಲಿಲ್ಲ. ಮಂಜರಾಬಾದಿನಲ್ಲಿ ಕಂದಾಯವು ಮೂರರಲ್ಲಿ ಒಂದು ಪಾಲಿಗಿಂತ ಸೇಕಡ ಐದೂ, ಕೂಲಿಯ ವರಿಗೆ ತಗಲುವ ವೆಚ್ಚವು ಸೇಕಡ ಎರಡೂ, ಅಂತು ಸೇಕಡ ೩ರ ಮೇರೆ ಹೆಚ್ಚು ವೆಚ್ಚ ಬೀಳುತ್ತಿತ್ತು. ನಗರದಲ್ಲಿ ಇತರ ಪ್ರಾಂತ್ಯಗಳಿಗಿಂತಲೂ ಹೆಚ್ಚು ಬೀಳುತ್ತಿದ್ದ ಕಾರಣ ಕಂದಾಯವನ್ನು ೩ರಲ್ಲಿ ಒಂದು ಭಾಗಕ್ಕಿಂತ ಸೇಕಡ ೩ರಂತೆ ಕಡಮೆ ಹಾಕಿದ್ದರು. ಆದರೂ ಉತ್ಪತ್ತಿಯು ಇತರಸ್ಥಳ ಗಳಿಗಿಂತ ಸೇಕಡ ಒಂಭತ್ತರಷ್ಟು ಕಡಮೆಯಾಗುತ್ತಿತ್ತು.

ಅನೇಕ ದೇಶಗಳಲ್ಲಿ ಹತ್ತುಸಾವಿರ ರೂಪಾಯಿವರಿಗೂ ಕಂದಾಯ ಕೊಡತಕ್ಕ ರೈತರು ಇರುತ್ತಾರೆ. ಈ ದೇಶದಲ್ಲಿ ಕಂದಾಯ ಕೊಡತಕ್ಕವರು ೩,೮೪,೩೦೨ ಮಂದಿ ಇದ್ದಾಗ್ಯೂ, ಇವರಲ್ಲಿ ೩೦೦ ರೂಪಾಯಿಗಿಂತ ಹೆಚ್ಚಾಗಿ ಕಂದಾಯ ಕೊಡುತ್ತಿದ್ದ ರೈತರೇ ಇರಲಿಲ್ಲ.

ಕಂದಾಯಗಳ ವಿವರ:—

ಫೌಜುದಾರಿ.	ಉತ್ತಮ.	ಮಧ್ಯಮ.	ಕನಿಷ್ಠ.
	ರೂ.	ರೂ.	ರೂ.
ಬೆಂಗಳೂರು ಮಧುಗಿರಿ } ..	೫೦	೧೦	೩
ಚಿತ್ರದುರ್ಗ ..	೧೦೦	೫೦	೧
ಅಷ್ಟಗ್ರಾಮ ...	೨೦೦	೧೫೦	೨
ಮಂಜರಾಬಾದು ..	೧೦೦	೫೦	೩
ನಗರ (ಅಡಿಕೆ ಸಹ) ..	೩೦೦	೧೫೦	೧೦

ಕಂದಾಯವು ಈ ದೇಶದ ಬೇರೆಬೇರೆ ಪ್ರದೇಶಗಳಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಇತ್ತು. ಎಲ್ಲಾ ಭೂಮಿಗಳಿಗೂ ಕಂಠೀರಾಯಿ ವರಹಗಳ ಮೇಲೆ ಕಂದಾಯವನ್ನು ನಿಬಂಧನೆ ಮಾಡಿದ್ದರು. ಇದರ ವಿವರ :—

ಪಾಚಿದಾರಿ.	ತರಿ.				ಖುಷ್ಕಿ.				ತೆಂಗು.				ಬಾಗಾಯಿತು.				ಕಬ್ಬು.			
	ತರಹಗಳು.				ತರಹಗಳು.				ತರಹಗಳು.				ತರಹಗಳು.				ತರಹಗಳು.			
	೧	೨	೩	೪	೧	೨	೩	೪	೧	೨	೩	೪	೧	೨	೩	೪	೧	೨	೩	೪
ಬೆಂಗಳೂರು ..	೦		೦	೦	೨೦	೧೬	೧೨	೧೦	೦	೦	೦	೦	೧೬	೧೨	೧೦	೮	೬೦	೫೦	೪೦	೩೦
ಮದ್ದಗಿರಿ ..	೫	೪	೩	೨	೧೬	೧೨	೧೦	೮	೩೦	೨೫	೨೦	೧೬	೦	೦	೦	೦	೧೫	೧೩	೧೦	೮
ಚಿತ್ರದುರ್ಗ ..	೧೨	೯	೭	೬	೨೫	೧೮	೧೩	೧೦	೨೦	೧೫	೧೨	೧೦	೦	೦	೦	೦	೩೨	೨೮	೨೫	೦
ಅಪ್ಪಗ್ರಾಮ ..	೧೫	೧೦	೫	೪	೨೫	೧೦	೮	೩	೫೦	೩೮	೨೫	೧೭	೧೦	೮	೬	೪	೩೮	೨೬	೧೪	೮
ಮಂಜರಾಬಾದು. .	೧೨	೮	೫	೩	೧೦	೬	೩	[illegible]	೨೫	೧೫	೧೦	೦	೦	೦	೦	೦	೬೨	೧೫	೧೦	೦
ನಗರ .	೬	೫	೪	೩--೫	೧೦	೮	೬	೫	೨೦	೧೩	೧೦	೬	೦	೦	೦	೦	೫-೭-೮	೪-೭-೮	೪	೩-೫

ಒಬ್ಬನ ವಶದಲ್ಲಿ ಒಂದು ಗ್ರಾಮಕ್ಕಿಂತಲೂ ಹೆಚ್ಚಾಗಿ ಇರಲಿಲ್ಲ. ಇದಲ್ಲದೆ ಒಬ್ಬ ಜಮೀನುದಾರನ ವಶದಲ್ಲಿ ಒಂದೇವಿಧವಾದ ಭೂಮಿಯೂ ಇರುತ್ತಿರಲಿಲ್ಲ. ಪ್ರತಿಯೊಬ್ಬನ ಬಳಿಯಲ್ಲಿಯೂ ಸ್ವಲ್ಪ ತರಿ ಸ್ವಲ್ಪ ಖುಷ್ಕಿ ಮತ್ತು ಸ್ವಲ್ಪ ಬಾಗಾಯಿತು ಮೇರೆಗೆ ಇರುತ್ತಿದ್ದವು. ಪ್ರತಿಯೊಂದು ಪೌಜುದಾರಿಯಲ್ಲಿಯೂ ಪ್ರತಿಯೊಬ್ಬ ರೈತನ ವಶದಲ್ಲಿ ಇದ್ದ ತರೀ ಮತ್ತು ಖುಷ್ಕೀ ಭೂಮಿಗಳ ವಿವರ:—

ಪೌಜುದಾರಿ.		ಉತ್ತಮ.	ಮಧ್ಯಮ.	ಕನಿಷ್ಠ.
		ಖಂಡಿ.	ಖಂಡಿ.	ಖಂಡಿ
ಬೆಂಗಳೂರು ಮಧುಗಿರಿ	...	೯	೩!	|||
ಚಿತ್ರದುರ್ಗ	...	೨೦	೧೨	॥
ಅಷ್ಟಗ್ರಾಮ	...	೧೨	೫	೧
ಮಂಜರಾಬಾದು	...	೪೦	೧೫	೧
ನಗರ	...	೦	೦	೦

ಕಂದಾಯದ ಭೂಮಿಗಳನ್ನು ಮಾಡುತ್ತಿದ್ದ ರೈತರು ಒಂದು ಕ್ಲಪ್ತವಾದ ಕಂದಾಯವನ್ನು ಕೊಟ್ಟುಕೊಂಡು ಆ ಭೂಮಿಯನ್ನು ಪಾರಂಪರ್ಯವಾಗಿ ಅನುಭವಿಸುತ್ತಿದ್ದರು. ವಾರಕ್ಕೆ ಸಾಗುವಳಿ ಮಾಡುತ್ತಿದ್ದ ರೈತರನ್ನು ಕೂಲಿಯವರಂತೆಯೇ ಭಾವಿಸುತ್ತಿದ್ದರು. ಅವರು ತಾವು ಮಾಡತಕ್ಕ ಕೂಲಿಗಾಗಿ ವಾರಾ ತೆಗೆದುಕೊಳ್ಳುತ್ತಾ ಇದ್ದರು. ಬಹುಕಾಲ ವಾರಮಾಡುತ್ತಿದ್ದ ರೈತರಿಗೆ ಹಿಡುವಳಿಹಕ್ಕು ಎಂದು ಒಂದು ಹಕ್ಕು ಇತ್ತು. ರೈತರು ಸರ್ಕಾರದ ಭೂಮಿಗಳನ್ನು ಸಹ ವಾರಾ ಮಾಡುತ್ತಿದ್ದರು. ಕೆಲವು ಸ್ಥಲಗಳಲ್ಲಿ ಅಮಾನಿ ಕೆರೆಗಳು ಇದ್ದವು. ಈ ಕೆರೆಗಳ ಕೆಳಗಿನ ಭೂಮಿಯನ್ನು ರೈತರು ಸಾಗುವಳಿಮಾಡಿ ವಾರಾ ತೆಗೆದುಕೊಳ್ಳುತ್ತಿದ್ದರು.

ಹೊಸದಾಗಿ ಭೂಮಿಮಾಡಿದವರು ೩—೪ ವರ್ಷಗಳ ವರೆಗೂ ಕಡಮೇ ಕಂಧಾಯ ಕೊಡುತ್ತಾ ಇದ್ದು, ೫ನೇ ವರ್ಷದಿಂದ ಪೂರಾ ಕಂದಾಯ ಕೊಡತಕ್ಕ ಸಂಪ್ರದಾಯವಿತ್ತು. ಧೊರೆಗಳವರು ತಮ್ಮ ಅಭಿಮಾನಕ್ಕೆ ಪಾತ್ರರಾದವರಿಗೆ, ಕ್ಲಪ್ತವಾದ ಕಂದಾಯವನ್ನು ಕೊಟ್ಟುಕೊಂಡು ಕಾಲನಿಯಾಮವಿಲ್ಲದೆ

ಅನುಭವಿಸುತ್ತಾ ಬರಬಹುದೆಂದು ಒಂದು ನಿಬಂಧನೆ ಮಾಡಿದ್ದರು. ಇದಕ್ಕೆ ಖಾಯಂಗುತ್ತಾ ಎಂದು ಹೆಸರು. ಟೀಪೂಸುಲ್ತಾನನ ಕಾಲದವರಿಗೂ ಬ್ರಾಹ್ಮಣರಿಗೂ ಇತರರಿಗೂ ಸರ್ವಮಾನ್ಯ ಭೂಮಿಗಳನ್ನು ಕೊಡತಕ್ಕ ಪದ್ಧತಿಯಿತ್ತು. ಟೀಪೂಸುಲ್ತಾನನು ಮತದ್ವೇಷದಿಂದ ಈ ಜೋಡಿಗಳಿಗೆ ಪೂರಾ ಕಂದಾಯ ಹಾಕಿದನು. ಜೋಡೀದಾರರು ಹಾಗೆಯೇ ಕಂದಾಯ ಕೊಡುತ್ತಾ ಇದ್ದು, ಶ್ರೀಕೃಷ್ಣರಾಜ ಒಡೆಯರವರ ಕಾಲದಲ್ಲಿ, ಪೂರ್ಣಯ್ಯನವರಿಗೆ ತಮ್ಮ ಕಷ್ಟಗಳನ್ನೆಲ್ಲಾ ಅರಿಕೆ ಮಾಡಿಕೊಂಡು, ಕಂದಾಯವನ್ನು ಕಡಮೆ ಮಾಡಿಸಿಕೊಂಡರು.

ಕಂದಾಯದ ಭೂಮಿಗಳನ್ನು ಅನುಭವಿಸತಕ್ಕ ರೈತರಿಗೆ ಅನಾವೃಷ್ಟಿ ಮುಂತಾದ ಕಾರಣಾಂತರಗಳಿಂದ ಕಂದಾಯ ಕಡಮೆ ಬಿದ್ದಿದ್ದರೆ, ಪೂರಾ ಕಂದಾಯವನ್ನು ಕೊಡುತ್ತೇವೆಂದು ಇನ್ನ್ಯಾರಾದರೂ ಹೇಳಿದ ಪಕ್ಷದಲ್ಲಿ, ಅವರು ಹೇಳಿದಷ್ಟು ಕಂದಾಯವನ್ನು ಅನುಭವಿಸುವವನು ಕೊಡುವದಕ್ಕೆ ಸಮ್ಮತಿಸದೆ ಹೋದರೆ, ಅದನ್ನು ಇತರರಿಗೆ ಕೊಡುವ ಸಂಪ್ರದಾಯವಿತ್ತು.

ಅಡಿಕೇ ವ್ಯವಸಾಯ ಮಾಡತಕ್ಕ ರೈತರಿಗೆ ಪಾರಂಪರ್ಯವಾಗಿ ಹಕ್ಕು ಇತ್ತೆಂದು ತಿಳಿಯ ಬರುತ್ತದೆ. ಇದರಿಂದ ಅವರಿಗೆ ತಮ್ಮ ಭೂಮಿಯನ್ನು ಮಾರುವದಕ್ಕಾಗಲೀ ಭೋಗ್ಯಕ್ಕೆ ಕೊಡುವದಕ್ಕಾಗಲೀ ಅಧಿಕಾರ ವಿತ್ತು. ಹಾಗೆ ಅನುಭವಿಸತಕ್ಕವರು ಸರ್ಕಾರಕ್ಕೆ ಕೊಡತಕ್ಕದ್ದರಲ್ಲಿ ತಪ್ಪಿ ಬಾಕಿ ಬೀಳುತ್ತಾ ಬಂದರೆ, ಅವರು ತಮ್ಮ ಭೂಮಿಯನ್ನು ಇತರರಿಗೆ ಮಾರಿ ಸರ್ಕಾರಕ್ಕೆ ಹಣ ಕಟ್ಟುತ್ತಿದ್ದರು. ಇದರಿಂದ ಕೊಟ್ಟವರಿಗಿದ್ದ ಹಕ್ಕುಗಳೆಲ್ಲಾ ಕೊಂಡು ಕೊಂಡವರಿಗೆ ಬರುತ್ತಿದ್ದವು.

ದ್ರವ್ಯವ್ಯಯದಿಂದ ಜಂಗಲುಗಳಲ್ಲಿ ಜಮೀನು ಮಾಡಿಕೊಂಡವರ ವಾರಸುದಾರರಿಗೆ ಅವುಗಳನ್ನು ಕ್ರಯ ಭೋಗ್ಯ ಮುಂತಾದವುಗಳನ್ನು ಮಾಡತಕ್ಕ ಹಕ್ಕು ಇತ್ತು. ಇವರು ಆ ಜಮೀನುಗಳನ್ನು ಪಾರಂಪರ್ಯವಾಗಿ ಅನುಭವಿಸುತ್ತಾ ಇದ್ದರು.

ಧೊರೆಗಳಷರು ಅಥವಾ ಗ್ರಾಮಸ್ಥರು ಒಂದು ಕ್ಲಿಪ್ತವಾದ ಕಂದಾಯವನ್ನು ಗೊತ್ತುಮಾಡಿ ವ್ಯವಸಾಯ ಮಾಡತಕ್ಕ ರೈತರಿಗೆ ಕ್ರಯಕ್ಕೆ ಹಕ್ಕು

ಸಹಿತ ಕೆಲವು ಭೂಮಿಗಳನ್ನು ಕೊಟ್ಟಿದ್ದರು. ಇವುಗಳಿಗೆ ಕೊಡಗಿಗೆ ಳೆಂದು ಹೆಸರು. ಇದಲ್ಲದೆ ಸರ್ಕಾರದವರು ರೈತರಿಂದ ನಜರಾಣೆ ತೆಗೆದು ಕೊಂಡು ಅವರಿಗೆ ಕೊಡಗೀ ಭೂಮಿಗಳನ್ನು ಕೊಡುತ್ತಿದ್ದರು. ಈ ಎರಡು ವಿಧವಾದ ಕೊಡಗಿಗಳಿಗೂ ಕ್ಲಪ್ತವಾದ ಕಂದಾಯವು ಗೊತ್ತಾಗಿತ್ತು. ಈ ಕೊಡಗಿಗಳು ಮಂಜರಾಬಾದು ತಾಲ್ಲೂಕಿನಲ್ಲಿ ವಿಶೇಷವಾಗಿವೆ.

ಶಿವಪ್ಪನಾಯಕನ ಕಾಲದಲ್ಲಿ ಷಿಸ್ತೆಂಬ ಕಂದಾಯ ಎತ್ತುವ ಪದ್ಧತಿಯು ನಿಬಂಧನೆಯಾಯಿತು. ಇದನ್ನು ಕೊಟ್ಟು ಸಾಗುವಳಿ ಮಾಡುತ್ತಿದ್ದ ರೈತರಿಗೆ ಅಂಥಾ ಭೂಮಿಗಳಿಗೆ ಹಕ್ಕುದಾರಿ ಉಂಟೆಂದು ಭಾವಿಸಿದ್ದರು.

ವಿಜಯನಗರದ ಧೊರೆಗಳ ಕಾಲದಲ್ಲಿ ರಾಯರೇಖೆ ಎಂದು ಒಂದು ಕಂದಾಯವನ್ನು ವಸೂಲು ಮಾಡುತ್ತಿದ್ದರು. ಶಿವಪ್ಪ ನಾಯಕನ ಕಾಲದಲ್ಲಿ, ಈ ಕಂದಾಯವನ್ನು ವ್ಯವಸಾಯ ಮಾಡಿದ ಕಾಲದಲ್ಲಿ ವಸೂಲು ಮಾಡುತ್ತಲೂ, ವ್ಯವಸಾಯವಿಲ್ಲದ ಕಾಲದಲ್ಲಿ ವಸೂಲು ಮಾಡದೆಯೂ ಇದ್ದರು.

ನಗರದ ಸೀಮೆಯಲ್ಲಿ ಜೋಡಿ ಅಗ್ರಹಾರದಾರರು ಎಂದು ಕೆಲವರು ಇದ್ದರು. ಇವರು ನೆರೆಹೊರೇ ಗ್ರಾಮಗಳಲ್ಲಿ ಕೊಡತಕ್ಕ ಷಿಸ್ತಿನಲ್ಲಿ ೨—೩—೪—೫ರಲ್ಲಿ ಒಂದೊಂದು ಭಾಗದ ಮೇರೆಗೆ ಕೊಡುತ್ತಾ ಇದ್ದರು. ಈ ಜೋಡಿಗಳೆಲ್ಲಾ ಪೂರ್ವದಲ್ಲಿ ಸರ್ವಮಾನ್ಯಗಳಾಗಿದ್ದರೂ, ಅನಂತರದಲ್ಲಿ ಇವುಗಳಿಗೆ ಕಂದಾಯ ಬಿತ್ತು.

ಇಕ್ಕೇರಿ ಸಾಗರ ಮಂಡಗದ್ದೆ ಕೊಪ್ಪ ಕವಲೇದುರ್ಗವೆಂಬ ಪ್ರಾಂತ್ಯಗಳಲ್ಲಿ ಕಂದಾಯವನ್ನು ಧಾನ್ಯರೂಪವಾಗಿ ಕೊಡುತ್ತಿದ್ದರು. ರೈತರು ತಾವು ಅನುಭವಿಸತಕ್ಕ ಭೂಮಿಗಳ ಕಂದಾಯವನ್ನು ಸರ್ಕಾರಕ್ಕೆ ತಾವೇ ಕೊಡುತ್ತಿರಲಿಲ್ಲ; ಆದರೆ ಗ್ರಾಮದ ಪಟೇಲನ ಮೂಲಕ ಸಲ್ಲಿಸುತ್ತಿದ್ದರು. ಸಾಮಾನ್ಯವಾಗಿ ಅಮಲ್ದಾರರೂ ಶಿರಸ್ತೇದಾರರೂ ಪೈರಿನ ಅಳ್ಳಾದನ್ನು ನೋಡುವದಕ್ಕೋಸ್ಕರ, ಜನವರಿ ಫೆಬ್ರುವರಿ ತಿಂಗಳುಗಳಲ್ಲಿ ಸರ್ಕೀಟು ಹೊರಡುತ್ತಿದ್ದರು. ಶಿರಸ್ತೇದಾರರು, ಶೇಕದಾರರು ಶಾನು ಭೋಗರನ್ನು ಇಟ್ಟುಕೊಂಡು, ನವೆಂಬರು ತಿಂಗಳಲ್ಲಿ ಬೆಳೆಯು ಇಷ್ಟಿ

ಗಬಹುದೆಂದು ಅಂದಾಜ್ ಹಾಕುತ್ತಿದ್ದರು. ಇದೇ ರೀತಿಯಲ್ಲಿ ಮೇ ತಿಂಗಳ ಬೆಳೆಯನ್ನೂ ನಿಷ್ಕರ್ಷೆ ಮಾಡುತ್ತಿದ್ದರು. ಹೀಗೆ ಗೊತ್ತಾದ ಮೇಲೆ ಇಷ್ಟು ಸುವರ್ಣಾದಾಯವನ್ನು ಸರ್ಕಾರಕ್ಕೆ ಸಲ್ಲಿಸಬೇಕೆಂದು ನಿಷ್ಕರ್ಷೆ ಮಾಡಿ, ಕಂದಾಯ ವಸೂಲು ಮಾಡತಕ್ಕ ಭಾರವನ್ನು ಪಟೇಲನಿಗೆ ವಹಿಸುತ್ತಿದ್ದರು. ಅವನು ರೈತರಿಗೆ ಸಲ್ಲತಕ್ಕದ್ದನ್ನು ಅವರಿಗೆ ಕೊಟ್ಟು, ಸರ್ಕಾರದ ಪಾಲನ್ನು ಮಾರಿ, ಕ್ಲಪ್ತವಾದ ಹಣವನ್ನು ಸರ್ಕಾರಕ್ಕೆ ಕಟ್ಟುತ್ತಿದ್ದನು. ರೈತರ ಮರಣಾದಿ ಕಾರಣಗಳಿಂದ ವಸೂಲಿಗೆ ಕುಂದುಕ ಬಂದು, ಕ್ಲಪ್ತವಾದ ಆದಾಯದಲ್ಲಿ ಕಡಮೆಬಿದ್ದರೆ, ಆ ಅಂಶವನ್ನು ಸರ್ಕಾರದವರು ವಿಚಾರಣೆ ಮಾಡಿ, ಯುಕ್ತವಾಗಿ ತೋರಿದರೆ ಅಂಥಾ ಹಣವನ್ನು ಬಿಟ್ಟುಬಿಡುತ್ತಲೂ, ಹಾಗಿಲ್ಲದಿದ್ದರೆ ಪಟೇಲನಿಂದ ವಸೂಲು ಮಾಡುತ್ತಲೂ ಇದ್ದರು. ಈ ಸಂಪ್ರದಾಯವು ಬೆಂಗಳೂರು ಮದ್ದುಗಿರಿ ಚಿತ್ರದುರ್ಗ ಅಷ್ಟಗ್ರಾಮಗಳಲ್ಲಿ ನಡೆಯುತ್ತಿತ್ತು.

ಮಂಜರಾಬಾದಿನ ಗ್ರಾಮಗಳಲ್ಲಿ ಒಂದೊಂದು ಗ್ರಾಮಕ್ಕೆ ಇಬ್ಬರು ಅಥವಾ ಮೂವರು ಆಯಾ ಗ್ರಾಮದ ಹಣವನ್ನು ವಸೂಲು ಮಾಡುವದಕ್ಕೆ ಗುತ್ತಿಗೆ ತೆಗೆದುಕೊಳ್ಳುತ್ತಿದ್ದರು. ರೈತರಿಲ್ಲದೆ ಹೀನ ಸ್ಥಿತಿಯಲ್ಲಿದ್ದ ಗ್ರಾಮಗಳನ್ನು ವೃದ್ಧಿ ಮಾಡಿದವರಿಗೆ, ಮೊದಲನೇ ವರ್ಷದ ಕಂದಾಯವನ್ನು ಧರ್ಮಕ್ಕೆ ಬಿಟ್ಟು, ೨ನೇ ವರ್ಷದಿಂದ ಸ್ವಲ್ಪಸ್ವಲ್ಪವಾಗಿ ಹೆಚ್ಚಿಸುತ್ತಾ, ಕೆಲವು ವರ್ಷಗಳಾದಮೇಲೆ ಪೂರಾ ಕಂದಾಯವನ್ನು ಗೊತ್ತು ಮಾಡುತ್ತಿದ್ದರು.

ನಗರದಲ್ಲಿ ಷಿಸ್ತೆಂಬ ಖಾಯಂ ಕಂದಾಯವು ನಡೆದು ಬರುತ್ತಿತ್ತು. ಜನವರೀ ತಿಂಗಳಲ್ಲಿ ಅಮಲ್ದಾರರು ಸರ್ಕೀಟು ಹೊರಟು, ವ್ಯವಸಾಯ ಸ್ಥಿತಿಯನ್ನೂ ಬೆಳೆಯನ್ನೂ ಸ್ವಂತವಾಗಿ ಪರೀಕ್ಷೆ ಮಾಡಿ, ಆ ಗ್ರಾಮವನ್ನು ಪಟೇಲನಿಗೆ ಗುತ್ತಿಗೆಗೆ ಕೊಡುತ್ತಿದ್ದರು. ರೈತರು ದಾರಿದ್ರ್ಯದಿಂದ ತಮ್ಮ ಭೂಮಿಯಲ್ಲಿ ಸ್ವಲ್ಪವೂ ವ್ಯವಸಾಯ ಮಾಡದೆ ಹೋದರೆ ಅವರಿಗೆ ಕಂದಾಯ ಮಾಫ್ ಮಾಡುತ್ತಲೂ, ಸ್ವಲ್ಪವೇನಾದರೂ ವ್ಯವಸಾಯ ಮಾಡಿದ್ದರೆ ಪೂರಾ ಕಂದಾಯವನ್ನೇ ತೆಗೆದುಕೊಳ್ಳುತ್ತಲೂ ಇದ್ದರು. ವಾರದ

ಸಾಗುವಳೀ ಪದ್ಧತಿಯು ನಗರದಲ್ಲಿ ಇರಲಿಲ್ಲ. ಈ ಪದ್ಧತಿಯು ಆಚರಣೆಗೆ ಬಂದಮೇಲೆ ವಾರದ ಉತ್ಪತ್ತಿಗೂ ಕಂದಾಯ ಹಾಕಿದರು.

ನಾಲ್ವರು ಅಥವಾ ಐವರು ಸೇರಿ ಒಂದು ಗ್ರಾಮದ ಗುತ್ತಿಗೆ ಒಪ್ಪಿಕೊಳ್ಳುವ ಸಂಪ್ರದಾಯವಿತ್ತು. ಇಂಥಾ ಸಂದರ್ಭಗಳಲ್ಲಿ ಅಮಲ್ದಾರರು ಆ ಗುತ್ತಿಗೇದಾರರಿಂದ ಮುಚ್ಚಳಿಕೆ ಬರಿಸಿಕೊಂಡು, ಗುತ್ತಿಗೇ ಹಣಕ್ಕೆ ಜಾಮಿನು ತೆಗೆದುಕೊಳ್ಳುತ್ತಿದ್ದರು. ಕಾರಣಾಂತರಗಳಿಂದ ಗುತ್ತಿಗೇ ಹಣದಲ್ಲಿ ಕಡಮೆ ಬಿದ್ದರೂ, ಅದನ್ನು ಗುತ್ತಿಗೇದಾರರಿಂದ ವಸೂಲು ಮಾಡುವದೇ ಹೊರತು ಬಿಡುತ್ತಿರಲಿಲ್ಲ. ಇದಲ್ಲದೆ ಗುತ್ತಿಗೇದಾರರಿಂದ, ರೈತರಿಗೆ ಯಾವ ವಿಧವಾಗಿಯೂ ಹಿಂಸೆ ಮಾಡುವದಿಲ್ಲವೆಂದು ಬರಿಸಿಕೊಳ್ಳುತ್ತಿದ್ದರು. ಗುತ್ತಿಗೇದಾರರಿಗೂ ರೈತರಿಗೂ ಸರಿಬೀಳದಿದ್ದರೆ, ರೈತರು ಹಣವನ್ನು ತಾವೇ ಸರ್ಕಾರಕ್ಕೆ ಕಟ್ಟುತ್ತಿದ್ದರು. ಇಂಥಾ ಗುತ್ತಿಗೆಗೆ ಒಂಟೀ ಗುತ್ತಾ ಎಂದು ಹೆಸರು.

ಇದಲ್ಲದೆ ಪ್ರಜಾಗುತ್ತಾ ಎಂದು ಒಂದು ಗುತ್ತಿಗೇ ಪದ್ಧತಿಯು ಇತ್ತು. ಅಮಲ್ದಾರರು ಡಿಸೆಂಬರು ಅಥವಾ ಜನವರೀ ತಿಂಗಳಲ್ಲಿ ಈ ಗುತ್ತಿಗೆಯನ್ನು ಮಾಡಿಕೊಳ್ಳಲಪೇಕ್ಷೆಯುಳ್ಳ ಗ್ರಾಮಸ್ಥರ ಬಳಿಗೆ ಹೋಗಿ, ಪೈರನ್ನು ಪರೀಕ್ಷೆ ಮಾಡಿ, ಗುತ್ತಿಗೇ ಹಣವನ್ನು ಗೊತ್ತುಮಾಡಿ, ಅದರ ಪಾವತೀ ಬಗ್ಗೆ ಅವರಿಂದ ಮುಚ್ಚಳಿಕೆ ಬರಿಸಿಕೊಂಡು, ಜಾಮಿನು ತೆಗೆದುಕೊಳ್ಳುತ್ತಿದ್ದರು. ಹೀಗೆ ಒಂದುಸಾರಿ ಮಾಡಿದ ಗುತ್ತಿಗೆಯು ೩—೪ ವರ್ಷದ ವರಿಗೂ ನಡೆಯುತ್ತಿತ್ತು.

ಒಂದು ಗ್ರಾಮದಲ್ಲಿ ೬—೮ ಜನ ಕುಳಗಾರರೂ ೧೫—೨೦—೩೦ ರೈತರೂ ಸೇರಿ ತಮ್ಮ ಕಂದಾಯವನ್ನು ಸರ್ಕಾರಕ್ಕೆ ಸಲ್ಲಿಸುವದಾಗಿ ಒಪ್ಪಿಕೊಳ್ಳುತ್ತಿದ್ದರು. ಇವರು ವ್ಯವಸಾಯವನ್ನು ವೃದ್ಧಿ ಮಾಡುತ್ತೇವೆಂದು ಒಪ್ಪಿಕೊಂಡರೆ ಈ ಗುತ್ತಿಗೆಯನ್ನು ಕೊಡುತ್ತಿದ್ದರು. ಸರ್ಕಾರದವರು ಇವರು ವ್ಯವಸಾಯ ಮಾಡತಕ್ಕ ಭೂಮಿಗಳನ್ನೆಲ್ಲಾ ಪರೀಕ್ಷಿಸಿ ನೋಡಿ, ಭೂಗುಣವನ್ನೂ ರೈತಾಬಾದನ್ನೂ ವಿಚಾರಿಸಿ ಗುತ್ತಿಗೆಯನ್ನು ನಿಷ್ಕರ್ಷೆ ಮಾಡಿ, ಕುಳಗಾರರಿಗೆ ಕೊಡುತ್ತಿದ್ದರು. ಅವರು ಅದನ್ನು ಇತರ ರೈತ

ರಿಗೂ ಸಾಗುವಳಿಗೆ ಕೊಡುತ್ತಿದ್ದರು. ಸಾಗುವಳೀದಾರರ ಅಥವಾ ಕುಳಗಾರರ ಅವಿವೇಕದಿಂದ ವ್ಯವಸಾಯ ಕೆಟ್ಟರೂ, ಗುತ್ತಿಗೇಹಣವನ್ನು ಬಿಟ್ಟುಬಿಡುತ್ತಿರಲಿಲ್ಲ. ಹಾಗೆ ಗುತ್ತಿಗೆಗೆ ತೆಗೆದುಕೊಳ್ಳತಕ್ಕ ಕುಳಗಾರರು ಸಿಕ್ಕದೆ ಹೋದರೆ ಶಾನುಭೋಗರೇ ಗುತ್ತಿಗೆ ತೆಗೆದುಕೊಳ್ಳುತ್ತಿದ್ದರು.

ಒಂದು ಗ್ರಾಮದಲ್ಲಿ ವ್ಯವಸಾಯವಾಗತಕ್ಕ ಭೂಮಿಗಳನ್ನು ೧೬–೧೮ ಭಾಗಗಳಾಗಿ ವಿಂಗಡಿಸುತ್ತಿದ್ದರು. ಈ ಪ್ರತಿಯೊಂದು ಭಾಗಕ್ಕೂ ೫೪ ಸೇರು ಕಾಳಿನ ಬೀಜವರಿ ಇತ್ತು. ಇಂಥಾ ಒಂದೊಂದು ಭಾಗಕ್ಕೆ ೩ ರಿಂದ ೫ ವರಹಗಳವರಿಗೂ ಕಂದಾಯ ಹಾಕುತ್ತಿದ್ದರು. ಈ ಪದ್ಧತಿಗೆ ಚಿಗಾರ್ ಕಟ್ಟಳೆ ಎಂದು ಹೆಸರು. ಈ ಕಟ್ಟಳೆಯು ಮಂಜರಾಬಾದ್ ಫೌಜುದಾರಿಗೆ ಸೇರಿದ ಹಾಸನದ ತಾಲ್ಲೂಕಿನಲ್ಲಿ ಆಚರಣೆಯಲ್ಲಿತ್ತು.

ಸಾಯರು.— ಪ್ರತಿ ತಾಲ್ಲೂಕಿನಲ್ಲಿಯೂ ಸುಂಕದ ವಸೂಲಿಗಾಗಿ ಸಾಯರುಕಟ್ಟೆಗಳನ್ನು ಇಟ್ಟಿದ್ದರು. ಈ ದೇಶದಲ್ಲಿ ಒಟ್ಟು ೭೬೧ ಕಟ್ಟೆಗಳಿದ್ದುವು. ಊರನ್ನು ಪ್ರವೇಶಿಸದೆ ಭಾರಾ ಮಾರ್ಗದಲ್ಲಿ ಗಾಡಿಗಳಲ್ಲಿ ಹೋಗತಕ್ಕ ಧಾನ್ಯದ ಮೇಲಣ ಸುಂಕ ವೆಂತಲೂ, ಊರಿನ ಹೊರಗೆ ಹೋಗತಕ್ಕ ಪದಾರ್ಥಗಳ ಮೇಲಣ ಸುಂಕ ವೆಂತಲೂ, ಊರಿನಲ್ಲಿಯೇ ಖರ್ಚಾಗುತ್ತಿದ್ದವುಗಳ ಮೇಲಣ ಸುಂಕವೆಂತಲೂ ೩ ವಿಧವಾದ ಸುಂಕಗಳು ವಸೂಲಾಗುತ್ತಿದ್ದವು. ಜಿನಸಿಗಳು ಸುಂಕದಕಟ್ಟೆಗೆ ಬಂದಕೂಡಲೆ, ಅವು ಎಲ್ಲಿಗೆ ಹೋಗತಕ್ಕದ್ದೋ ನಿಷ್ಕರ್ಷೆಮಾಡಿ, ಅದಕ್ಕೆ ಕ್ಲಿಪ್ತವಾದ ಸುಂಕವನ್ನು ತೆಗೆದು ಕೊಳ್ಳುತ್ತಿದ್ದರು. ಆದರೆ ಈ ಸುಂಕದ ದರಗಳು ಎಲ್ಲಾ ಕಟ್ಟೆಗಳಲ್ಲಿಯೂ ಒಂದೇ ವಿಧವಾಗಿ ಇರಲಿಲ್ಲ. ಭಂಡಿ ಎತ್ತು ಕತ್ತೆ ಆಳು ಹೊರೆಗಳ ಮೇರೆಗೆ ಹೊರೆಯೊಂದಕ್ಕೆ ಇಷ್ಟಿಷ್ಟೆಂದು ಸುಂಕ ಗೊತ್ತುಮಾಡಿದ್ದರು. ಒಂದೇ ತಾಲ್ಲೂಕಿನಲ್ಲಿ ಒಂದು ಕಟ್ಟೆಯಲ್ಲಿ ತೆಗೆದ ಸುಂಕವು ಕಡಮೆಯೆಂದು ಇನ್ನೊಂದು ಕಟ್ಟೆಯವರಿಗೆ ಗೊತ್ತಾದರೆ, ಕಡಮೆಯಾದ ಸುಂಕವನ್ನು ವಸೂಲು ಮಾಡುತ್ತಿದ್ದರು. ಈ ಹೆಚ್ಚು ತೆರಿಗೆಗೆ ಅಣಪು ಮತ್ತು ಕೊಟ್ಟಮುಗಂ ಎನ್ನುತ್ತಾರೆ.

ಕೆಲವು ತಾಲ್ಲೂಕುಗಳಲ್ಲಿ ಜಿನಸಿಗಳು ಯಾವಯಾವ ಸುಂಕದ ಕಟ್ಟೇ ಮಾರ್ಗವಾಗಿ ಹೋದರೂ, ಅಲ್ಲೆಲ್ಲಾ ಸುಂಕ ವಸೂಲು ಮಾಡುತ್ತಾ ಇದ್ದರು. ಇನ್ನು ಕೆಲವು ತಾಲ್ಲೂಕುಗಳಲ್ಲಿ ಒಂದೊಂದು ಮಾರ್ಗದಲ್ಲಿ ಹೋ ಗತಕ್ಕ ವಸ್ತುವಿಗೆ ಒಂದೊಂದು ವಿಧವಾಗಿ ದರವನ್ನು ಹಾಕಿದ್ದರು. ಇದಲ್ಲದೆ ಜಿನಸಿಗಳಿಗೆ ಒಂದು ವರ್ಷದಲ್ಲಿ ಸುಂಕ ಕೊಟ್ಟು ಮತ್ತೊಂದು ವರ್ಷದಲ್ಲಿ ರವಾನೆ ಮಾಡಿದರೆ, ಅವುಗಳಿಗೆ ಪುನಃ ಸುಂಕ ವಸೂಲು ಮಾಡುತ್ತಿದ್ದರು.

ಅನೇಕ ಡಿಸ್ಟ್ರಿಕ್ಟುಗಳಲ್ಲಿ ವಾರಕ್ಕೆ ಒಂದುಸಾರಿ ಸಂತೆಗಳಾಗುತ್ತಿದ್ದವು. ಈ ಸಂತೆಗಳಲ್ಲಿ ಪ್ರತಿಯೊಂದು ಅಂಗಡಿಯವರಿಂದ ಅದ್ದೀಕಾಸು ಎಂಬ ಒಂದು ತೆರಿಗೆಯನ್ನು ಎತ್ತುತ್ತಿದ್ದರು. ತರಕಾರಿಯ ಅಂಗಡಿಯವರೆಲ್ಲಾ ಫಸ್ಕಿ ಎಂಬದಾಗಿ ಯಾವದಾದರೂ ಒಂದು ತರಕಾರಿಯನ್ನೇ ಕೊಡುತ್ತಿದ್ದರು. ಜವಳೀ ಅಂಗಡಿಯವರು ಉಂಡಿಗೆಯೆಂಬದಾಗಿ ೧ ರಿಂದ ೬ ಕಾಸಿನವರಿಗೂ ಕೊಡುತ್ತಿದ್ದರು. ಇದಲ್ಲದೆ ಬಟ್ಟೆ ಧಾನ್ಯ ಮಾಂಸ ಮುಂತಾದವುಗಳನ್ನು ಮಾರುವ ಅಂಗಡಿಗಳಿಂದ ಪಟ್ಟಡಿ ಬಿಡಗಿ ಎಂಬದಾಗಿ ತೆರಿಗೆಯನ್ನು ವಸೂಲು ಮಾಡುತ್ತಿದ್ದರು. ಮಗ್ಗಗಳು, ವೀಳ್ಯದೆಲೆ, ಬಾಳೇಹಣ್ಣು, ಅಡಿಕೇತೋಟ, ಕಬ್ಬಿನ ಗದ್ದೆ, ನೇಗಲು, ದನಕರಗಳು ಮುಂತಾದ ಅನೇಕ ಪದಾರ್ಥಗಳಮೇಲೆ, ಕೆಲವಕ್ಕೆ ವರ್ಷಗಟ್ಟಲೆ ಯಾಗಿಯೂ ಕೆಲವಕ್ಕೆ ತಿಂಗಳುಗಟ್ಟಲೆ ಯಾಗಿಯೂ ಕೆಲವಕ್ಕೆ ದಿನಗಟ್ಟಲೆಯಾಗಿಯೂ ವಸೂಲು ಮಾಡುತ್ತಿದ್ದರು. ಸ್ವಲ್ಪ ಹೆಚ್ಚುಕಡಮೆಯಾಗಿ ಎಲ್ಲಾ ಪದಾರ್ಥಗಳಮೇಲೂ ಸುಂಕವು ಇತ್ತು.

ಸರ್ಕಾರದವರು ಜಿನಸಿಗಳ ಮೇಲೆ ಸುಂಕವನ್ನು ಇಷ್ಟೇ ಎಂದು ಗೊತ್ತುಮಾಡಿ, ಪ್ರಹಾರಪಟ್ಟಿಗಳೆಂಬದಾಗಿ ಏರ್ಪಾಡುಮಾಡಿ, ಆಪಟ್ಟಿಗಳನ್ನುಎಲ್ಲಾ ಸುಂಕದ ಕಟ್ಟೆಯವರಿಗೂ ಕಳುಹಿಸುತ್ತಿದ್ದರು. ಆದರೆ, ಸರ್ಕಾರದವರೇ ತಮ್ಮ ಅಭಿಮಾನಕ್ಕೆ ಪಾತ್ರರಾದ ಕೆಲವರಿಗೆ ಪೂರ್ಣವಾಗಿಯಾಗಲೀ ಸ್ವಲ್ಪವಾಗಿಯಾಗಲೀ ಮಾಫ್ ಮಾಡುತ್ತಾ ಬಂದದ್ದರಿಂದಲೂ, ಅಂಥಾ ಜನಗಳು ತಮಗೆ ಇಷ್ಟರಾದವರ ಸರಕುಗಳನ್ನು ತಮ್ಮದೆಂಬದಾಗಿ ಮೋಸ ಮಾಡುತ್ತಾ ಬಂದದ್ದರಿಂದಲೂ, ಈ ಪಟ್ಟಿಗಳಿಂದ ಏನೂ

ಪ್ರಯೋಜನವಿಲ್ಲದೆ ಹೋಯಿತು. ಸುಂಕದ ದರಗಳು ಈ ರೀತಿಯಲ್ಲಿ ಅವ್ಯವಸ್ಥೆಗೆ ಬಂದದ್ದರಿಂದ ದರಗಳ ವಿಷಯದಲ್ಲಿ ವಿವಾದ ಹುಟ್ಟಿತು. ಈ ವಿವಾದಗಳನ್ನು ವ್ಯವಸ್ಥೆ ಮಾಡತಕ್ಕ ಕೆಲಸವನ್ನು ಸಾಯರು ಶಾನುಭೋಗರಿಗೆ ಒಪ್ಪಿಸಿದರು. ಆ ಶಾನುಭೋಗರು ತಮಗೆ ಉಪಕಾರ ಮಾಡಿದವರಿಗೆ ತಾವೂ ಉಪಕಾರ ಮಾಡುತ್ತಾ ಬಂದರು. ಇದರಿಂದ ವರ್ತಕರಿಗೆ ಪ್ರತಿಯೊಂದು ಸಾಯರು ಕಟ್ಟೆಯಲ್ಲಿಯೂ ಹಿಂಸೆಗಳು ಹೆಚ್ಚಿ, ವ್ಯಾಪಾರಕ್ಕೆ ಬಹು ಕಂಟಕಗಳು ಉಂಟಾದವು. ಈ ಸುಂಕದ ಕಟ್ಟೇ ಇಜಾರದಾರರು ಕೆಲವು ಮಾರ್ಗಗಳಿಂದ ಕೆಲವು ದಿನಸುಗಳು ಮಾತ್ರ ಹೋಗಬೇಕೆಂದು ಕಟ್ಟಳೆ ಮಾಡಿಕೊಂಡಿದ್ದರು. ಅವುಗಳು ಆ ಮಾರ್ಗಗಳಲ್ಲಲ್ಲದೆ ಮತ್ತೊಂದು ಮಾರ್ಗದಲ್ಲಿ ಹೋದರೆ, ಹೋದ ಮಾರ್ಗದ ಇಜಾರದಾರರು ಮತ್ತೊಂದು ಮಾರ್ಗದ ಇಜಾರದಾರರಿಗೆ ನಷ್ಟವನ್ನು ಕೊಡಬೇಕೆಂದು ಗೊತ್ತಾಗಿತ್ತು. ಇವರೆಲ್ಲರೂ ಆ ನಿಬಂಧನೆಗಳನ್ನು ತಪ್ಪಿ ನಡೆಯುತ್ತಾ ನಾನಾವಿಧವಾದ ಅಕೃತ್ಯಗಳನ್ನು ಮಾಡುತ್ತಿದ್ದರು.

ಸಾಯರು ಅಧಿಕಾರಿಗಳಿಂದ ಜನಗಳಿಗೆ ಉಂಟಾಗುತ್ತಿದ್ದ ಕಷ್ಟಗಳನ್ನೆಲ್ಲಾ ಹೇಳುವದು ಬಹಳ ಅಸಾಧ್ಯ. ಇವರು, ಸುಂಕದ ಜಿನಸಿಯು ಮನೆಯಲ್ಲಿ ಇದೆಯೆಂಬದಾಗಿ ನೆಪ ಮಾಡಿಕೊಂಡು, ತಮಗೆ ಬೇಡದವರಮನೆಗಳನ್ನೆಲ್ಲಾ ಪ್ರವೇಶಿಸಿ, ಬಹು ಹಿಂಸೆ ಮಾಡುತ್ತಿದ್ದರು. ಈ ಹಿಂಸೆಯಿಂದ ವ್ಯಾಪಾರವು ಸರಿಯಾಗಿ ನಡೆಯುತ್ತಿರಲಿಲ್ಲ. ಪರದೇಶದವರು ಈ ಹಿಂಸೆಗಳಿಂದ ಇಲ್ಲಿಗೆ ಬರುತ್ತಲೇ ಇರಲಿಲ್ಲ. ಸಾಯರು-ಅಧಿಕಾರಿಗಳು ಮತ್ತು ಅವರ ಆಪ್ತ ಜನರು ಮಾತ್ರವೇ ವ್ಯಾಪಾರ ಮಾಡುತ್ತಿದ್ದರು. ನಗರ ಅಷ್ಟಗ್ರಾಮ ಬೆಂಗಳೂರು ಚಿತ್ರದುರ್ಗಗಳಲ್ಲಿ ಸಾಯರು ಇಲಾಖೆಯು ಈ ರೀತಿಯಲ್ಲಿ ಇರಲಿಲ್ಲ. ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರವರ ಆಳಿಕೆಯಲ್ಲಿ ಕಾವಲೇದುರ್ಗಕ್ಕೂ ಇಕ್ಕೇರಿಗೂ ಸರ ಸಾಯರು ಎಂಬದಾಗಿ ಏರ್ಪಾಡು ಮಾಡಿದ್ದರು. ಕಾವಲೇದುರ್ಗಕ್ಕೆ, ಚಿಕ್ಕಮಗಳೂರು ಕೊಪ್ಪ ಕವಲೇದುರ್ಗ ಹಳೇಹೊನ್ನೂರು ಲಕ್ಕುವಳ್ಳಿ ಶಿವಮೊಗ್ಗ ಎಂಬಿವುಗಳೂ; ಇಕ್ಕೇರಿಗೆ, ಹೊನ್ನಹಳ್ಳಿ ಸಾಗರ ಸಿಕಾರೀಪುರ ಸೊರಬ ಬೇಲಂದೂರು

ಎಂಬಿವುಗಳೂ ಸೇರಿದ್ದವು. ಇದಲ್ಲದೆ ಹರಿಹರ ಕಡೂರು ತರೀಕೆರೆ ಚನ್ನಗಿರಿ ಎಂಬ ಪ್ರದೇಶಗಳು ಫ್ರೂಟ್ ತಾಲ್ಲೂಕು ಇಜಾರಾ ಎಂಬ ಹೆಸರಿನಿಂದ ಬಿಟ್ಟುಬಿಟ್ಟು ಇಜಾರದಾರನಿಂದ ಗೊತ್ತು ಮಾಡಲ್ಪಟ್ಟಿದ್ದವು. ಜನಗಳಿಗೂ ವರ್ತಕರಿಗೂ ಹಿಂಸೆ ಮಾಡುವದಿಲ್ಲವೆಂಬದಾಗಿ ಇಜಾರದಾರರು ಆಮಲ್‌ದಾರರಿಗೆ ಮುಚ್ಚಳಿಕೆ ಬರೆದು ಕೊಡುತ್ತಿದ್ದರು. ಆದರೆ ಈ ಪ್ರತಿಜ್ಞೆಗಳು ಸರಸ್ವತಿಗೆ ಪ್ರಸನ್ನವಾಗಿದ್ದವೇ ಹೊರತು ಜನಗಳಿಗೆ ಇರಲಿಲ್ಲ. ಇಜಾರದಾರರು ತಾವು ತಿಂದು ಮಿಕ್ಕದ್ದನ್ನು ಅಮಲ್‌ದಾರರಿಗೆ ಕಳುಹಿಸುತ್ತಿದ್ದರು. ಅಮಲ್‌ದಾರರು, ತಮ್ಮ ಪದವಿಯು ಶಾಶ್ವತವಾದದ್ದಲ್ಲವೆಂದು ತಿಳಿದುಕೊಂಡು, "ಬೆಂದ ಮನೆಗೆ ಹಿರಿದದ್ದೇ ಲಾಭ" ಎಂದು ವಸೂಲಾದದ್ದನ್ನೆಲ್ಲಾ ತಿಂದು ಹಾಕುತ್ತಿದ್ದರು. ಇಜಾರದಾರರು ಗುತ್ತಿಗೆಯನ್ನು ಇತರರಿಗೆ ಷಿಕ್ಮಿಗೆ ಕೊಟ್ಟಾಗ, ಆ ಷಿಕ್ಮೀದಾರರು ತಾವು ತಿನ್ನುವದಲ್ಲದೆ ಇಜಾರದಾರರಿಗೂ ಕೊಡಬೇಕಲ್ಲಾ ಎಂಬ ಸಂಕಟದಿಂದ, ಬೇರೇ ಮಾರ್ಗಗಳಲ್ಲಿ ಹೋಗುವ ವರ್ತಕರನ್ನೆಲ್ಲಾ ಮೊದಲು ಆಸೆ ತೋರಿಸಿ ತಮ್ಮ ಕಟ್ಟೆಗೆ ಬರುವಂತೆ ಮಾಡಿಕೊಂಡು, ಅನಂತರದಲ್ಲಿ ಅವರನ್ನು ನಾನಾವಿಧವಾದ ದಂಡಗಳಿಗೆ ಗುರಿ ಮಾಡುತ್ತಿದ್ದರು.

ನಗರದ ಸೀಮೆಯಲ್ಲಿ ಹೊರಗೆ ಹೋಗತಕ್ಕ ಅಡಿಕೆ ಯಾಲಕ್ಕಿ ಮೆಣಸು ಮುಂತಾದವುಗಳ ಮೇಲೂ ಊರಿಗೆ ಬರತಕ್ಕ ಪದಾರ್ಥಗಳ ಮೇಲೂ ಸುಂಕ ತೆಗೆಯುತ್ತಿದ್ದರು. ಇದಲ್ಲದೆ ಕೆಲವರು ಪಂಗಡದವರು ತಮಗೆ ಸಾಯರು ಇಲ್ಲದೆ ಇರಬೇಕೆಂದು ಅಧಿಕಾರಿಗಳಿಗೆ ಗೊತ್ತಾಗಿ ಇಷ್ಟು ಹಣವೆಂದು ಕೊಟ್ಟು ಸುಂಕ ಮಾಫಿಮಾಡಿಸಿ ಕೊಳ್ಳುತ್ತಿದ್ದರು. ಹೀಗೆ ಈ ಮೂರುವಿಧವಾಗಿ ಸಾಯರು ಉತ್ಪತ್ತಿಯಾಗುತ್ತಿತ್ತು. ಈ ಡಿಸ್ಟ್ರಿಕ್ಟಿನಲ್ಲಿ ಸುಮಾರು ೬೦ ಸಾಯರುಕಟ್ಟೆಗಳಿದ್ದವು. ಇವುಗಳಲ್ಲಿ ಕಾವಲೇದುರ್ಗದ ಮತ್ತು ಇಕ್ಕೇರಿಯ ಸಾಯರುನೌಕರರಿಗೆ ಸರ್ಕಾರದವರೇ ಸಂಬಳವನ್ನು ಕೊಡುತ್ತಿದ್ದರು. ಫ್ರೂಟ್ ತಾಲ್ಲೂಕು ಇಜಾರ ನೌಕರರಿಗೆ ಬಿಟ್ಟು ಇಜಾರದಾರರೇ ಸಂಬಳ ಕೊಡುತ್ತಿದ್ದರು. ಅಷ್ಟಗ್ರಾಮದ ಫೌಜದಾರಿಯಲ್ಲಿ ತಾಲ್ಲೂಕುವಾರಾಗಿಯೂ ಕೆಲವು ಕಾಲದಲ್ಲಿ ಬಿಟ್ಟಾಗಿಯೂ ಹರಾಜು ಹಾಕಿ, ಹೆಚ್ಚು ಮೊಬಲಗನ್ನು ಕೊಡತಕ್ಕವರಿಗೆ ಅವರಿಂದ ಮುಚ್ಚಳಿಕೆಯನ್ನೂ

ಜಾಮೀನನ್ನೂ ತೆಗೆದುಕೊಂಡು ಇಜಾರೆಯನ್ನು ಕೊಡುತ್ತಿದ್ದರು. ಈ ಇಜಾರದಾರರು ತಮ್ಮ ಕೈಕೆಳಗಿನ ಷಿಕ್ಮೀದಾರರಿಂದ ಮುಚ್ಚಳಿಕೆಯನ್ನೂ ಜಾಮೀನನ್ನೂ ತೆಗೆದುಕೊಂಡು ಇಜಾರೆಯನ್ನು ವಹಿಸಿ ಕೊಡುತ್ತಿದ್ದರು. ಈ ಗುತ್ತಿಗೇದಾರರೂ ಅವರ ಕೈಕೆಳಗಿನ ಗುತ್ತಿಗೇದಾರರೂ ಅವರ ನೌಕರರೂ ಜನಗಳಿಗೆ ಮಾಡುತ್ತಿದ್ದ ಹಿಂಸೆಗೆ ಕಡೆ ಮೊದಲಿಲ್ಲ.

ಮದುವೆ ಕೊಡುವಳಿ ಜನನಮರಣ ಮುಂತಾದ ಶುಭಾಶುಭ ಕಾರ್ಯಗಳಿಗೆಲ್ಲಾ ತೆರಿಗೆಯಿತ್ತು. ಜಾತಿಗಳ ಕಸಬುಗಳಿಗೂ, ಕಲ್ಲುಪ್ಪು ಮಾಡುವದಕ್ಕೂ, ಮೀನು ಹಿಡಿಯುವದಕ್ಕೂ, ಜೇನನ್ನು ತರುವದಕ್ಕೂ, ಕಾಡು ಮರಗಳನ್ನು ಕಡಿಯುವದಕ್ಕೂ, ತಮ್ಮ ಸ್ವಂತಭೂಮಿಯಲ್ಲಿ ಬೆಳೆದದ್ದನ್ನು ಮಾರುವದಕ್ಕೂ ತೆರಿಗೆ ಕೊಡಬೇಕಾಗಿತ್ತು. ಆಹಾರಕ್ಕೋಸ್ಕರ ಕಾಡಿನಿಂದ ಗೆಜ್ಜಲನ್ನು ತಂದವರಿಗೆ ಸಹ ತೆರಿಗೆ ತಪ್ಪುತ್ತಿರಲಿಲ್ಲ. ಇದಲ್ಲದೆ ಸರ್ಕಾರಕ್ಕೆ ಕೊಡತಕ್ಕ ಕಂದಾಯದ ಮೇಲೆ ವರಹಕ್ಕೆ ೧ರಿಂದ ೫ ಹಣದವರಿಗೂ ವಸೂಲು ಮಾಡುತ್ತಿದ್ದರು.

ಶ್ರೀಮನ್ಮಹಾರಾಜರವರೂ ಸರ್ಕಾರದ ಇತರ ಉದ್ಯೋಗಸ್ಥರೂ ಅಷ್ಟಗ್ರಾಮದಲ್ಲಿ ಇದ್ದದ್ದರಿಂದ, ಇಲ್ಲಿ ಪ್ರಹಾರ ಪಟ್ಟಿಗಳಂತೆ ಜಿನಸಿಗಳ ಮೇಲಣ ಸುಂಕವು ಸ್ವಲ್ಪ ಹೆಚ್ಚು ಕಡಮೆಯಾಗಿ ಸರಿಯಾಗಿ ವಸೂಲಾಗುತ್ತಾ ಇತ್ತು. ರಾಜಧಾನಿಗೆ ದೂರದಲ್ಲಿದ್ದ ಪ್ರದೇಶಗಳಲ್ಲಿ ಇಷ್ಟರ ಮಟ್ಟಿಗೆ ನಡೆಯುತ್ತಿರಲಿಲ್ಲ. ಸಾಯರು ಗುತ್ತಿಗೆ ಕೊಟ್ಟಾಗ, ಆ ಗುತ್ತಿಗೇದಾರರು ಈ ಪಟ್ಟಿಯನ್ನು ಅನುಸರಿಸಿ ನಡೆಯುತ್ತಾ ಇರಲಿಲ್ಲ. ಕೆಲವು ಜಿನಸಿಗಳಿಗೆ ತೂಕದ ಮೇರೆಗೂ, ಕೆಲವಕ್ಕೆ ಅಳತೇಮೇರೆಗೂ, ಮತ್ತು ಕೆಲವಕ್ಕೆ ಸಂಖ್ಯೆಯ ಮೇರೆಗೂ, ಇನ್ನು ಕೆಲವಕ್ಕೆ ಗಾಡಿ ಎತ್ತು ಕತ್ತೆ ಆಳು ಹೊರೆಗಳ ಮೇಲಿಗೂ ಸುಂಕ ವಸೂಲಾಗುತ್ತಿತ್ತು. ಇಂಥಾ ಜಿನಸಿಗಳಿಗೆ ಈ ರೀತಿಯಲ್ಲಿಯೇ ಸುಂಕ ವಸೂಲಾಗಬೇಕೆಂದು ಇರಲಿಲ್ಲ. ಇದರಿಂದ ಆಯಾ ಕಟ್ಟೆಯವರು ಮನಸ್ಸು ಬಂದಂತೆ ಸುಂಕವನ್ನು ವಸೂಲು ಮಾಡುತ್ತಿದ್ದರು. ಇದಲ್ಲದೆ ಒಬ್ಬೊಬ್ಬ ವರ್ತಕನ ಬಳಿ ಬಾದೊಂದು ವಿಧವಾಗಿ ಸುಂಕ ವಸೂಲು ಮಾಡುವ ಪದ್ಧತಿಯಿತ್ತು. ಹ್ಯಾಗಂದರೆ,

ಯಾವನಾದರೂ ಒಬ್ಬ ವರ್ತಕನು ಗುತ್ತಿಗೇದಾರನಿಗೆ ಏನಾದರೂ ಕೊಟ್ಟು ತಾನು ತರತಕ್ಕ ಜಿನಸಿಗಳಿಗೆ ಕಡಮೇ ಸುಂಕ ಬೀಳುವಂತೆ ಮಾಡಿ ಕೊಳ್ಳುತ್ತಿದ್ದನು; ಕೆಲವು ದಿನಗಳಲ್ಲಿ ಅದೇ ಮಾಮೂಲೆಂದು ಕಡಮೆ ಸುಂಕ ಎತ್ತುವದೇ ಪದ್ಧತಿ ಬಿದ್ದುಹೋಯಿತು. ಇದಕ್ಕೆ ದೃಷ್ಟಾಂತವೇ ನೆಂದರೆ, ಮೈಸೂರಿಗೆ ಬಂದು ಪೇಗಡದ ವರ್ತಕರು ಉಪ್ಪಿಗೆ ಸುಂಕ ಕೊಡದೆ ತೆಗೆದುಕೊಂಡು ಬರುತ್ತಿದ್ದರು; ಬೇಲೂರಿನಲ್ಲಿ ಕೊರಮ ರಿಗೂ ಲಂಬಾಣಿಯವರಿಗೂ ಒಡ್ಡರಿಗೂ ಎರಡು ಎತ್ತಿನಹೊರೆಯಷ್ಟು ಅಡಿಕೆಗೆ ಸುಂಕವಿರಲಿಲ್ಲ. ಈ ವಿಧವಾದ ರಾಜದ್ರೋಹವು ಅಷ್ಟಗ್ರಾಮ ದಲ್ಲಿಯೂ ನಗರದಲ್ಲಿಯೂ ಒಂದೇ ವಿಧವಾಗಿತ್ತು.

ನಗರ ಮೊದಲಾದ ಪ್ರದೇಶಗಳು ಸರ್ಕಾರದವರು ಇರುವ ಸ್ಥಳಕ್ಕೆ ದೂರದಲ್ಲಿ ಇದ್ದ ಕಾರಣ, ಅಲ್ಲಿನ ರಾಜ್ಯಭಾರವು ಕ್ರಮವಾಗಿ ನಡೆಯುತ್ತಿರ ಲಿಲ್ಲ. ಅಷ್ಟಗ್ರಾಮ ಮುಂತಾದ ಪ್ರಾಂತ್ಯಗಳು ಸಮೀಪದಲ್ಲಿದ್ದದ್ದರಿಂದ ಅಲ್ಲಿನವರು ಕೆಟ್ಟ ಅಧಿಕಾರಿಗಳ ಸುಲಿಗೆಗೆ ಗುರಿಯಾಗಿ ಬಹು ಹಿಂಸೆ ಪಡುತ್ತಿ ದ್ದರು. ಈ ಡಿವಿಜನ್ ಒಂದಕ್ಕೇ ೩೩೧ ಕಟ್ಟೆಗಳಿದ್ದವು. ಇವುಗಳಿಂದಲೇ ಜನ ಗಳಿಗಿದ್ದ ಹಿಂಸೆಯನ್ನು ಊಹಿಸಿಕೊಳ್ಳಬಹುದು. ಹೊಸದಾಗಿ ಅಭಿಮಾನಕ್ಕೆ ಪಾತ್ರರಾದವರಿಗೆ ಉಪಕಾರ ಮಾಡುವದಕ್ಕೋಸ್ಕರ ಒಂದು ಹೊಸ ಕಟ್ಟೆ ಯನ್ನು ಮಾಡಿ ಆತನಿಗೆ ಅದರಲ್ಲಿ ಬರತಕ್ಕ ಉತ್ಪತ್ತಿಯನ್ನು ಕೊಡುವ ಸಂಪ್ರದಾಯವು ಸಾಧಾರಣವಾಗಿತ್ತು. ಮಹಂತನೆಂಬ ಒಬ್ಬ ಭಿಕ್ಷುಕನಿಗೆ ಉಪಕಾರ ಮಾಡುವದಕ್ಕೋಸ್ಕರ, ಮೈಸೂರಿಗೆ ಒಂದುಕಡೆಯಿಂದ ಪ್ರವೇಶ ಮಾಡತಕ್ಕವರಿಂದಲೆಲ್ಲಾ ತಲೇ ತೆರಿಗೆಯನ್ನು ವಸೂಲು ಮಾಡುತ್ತಿದ್ದರು. ಕೆಲವು ದಿನಗಳ ಮೇಲೆ ಈ ಭಿಕ್ಷುಕನಿಗೆ ಈ ರುಸುಮು ಬರುವದು ತಪ್ಪಿತು. ಆದಾಗ್ಯೂ ಮಹಂತ ರುಸುಮು ಎಂಬದಾಗಿ ಒಂದು ತೆರಿಗೆಯು ವಸೂಲಾಗಿ ಸಾಯರು ಇಲಾಖೆಗೆ ಸೇರುತ್ತಿತ್ತು. ಮೈಸೂರು ಸಮೀಪದಲ್ಲಿ ಯಾವ ರಸ್ತೆಯಲ್ಲಿಯೂ ನಾಲ್ಕು ಕಟ್ಟೆಗಳಿಗಿಂತ ಕಡಮೆಯಾಗಿರಲಿಲ್ಲ. ಒಂದು ಮಜಲಿನಲ್ಲಿ ಕನಿಷ್ಠ ಪಕ್ಷ ನಾಲ್ಕು ಕಡೆಯಲ್ಲಿ ಜಿನಸೀ ಭರ್ತೀಗಾಡಿಗಳಿಂದ ಜಿನಸಿಗಳನ್ನು ಈಚಿಗೆ ತೆಗೆದು ಪರೀಕ್ಷೆ ಮಾಡುತ್ತಿದ್ದರು. ಇದರಿಂದ ಜನಗಳಿಗೆ ಪ್ರಯಾಣಕ್ಕೆ ಬಹಳ ಅಡ್ಡಿಯಾಗಿಯೂ ಹಿಂಸೆಯಾಗಿಯೂ ಇತ್ತು.

ಈ ಹಿಂಸೆಯನ್ನು ತಪ್ಪಿಸಿಕೊಳ್ಳುವದಕ್ಕೋಸ್ಕರ ವರ್ತಕರು ಕಟ್ಟೆಯವರ ಕೈ ಬೆಚ್ಚಗೆ ಮಾಡಿ, ಅವರನ್ನು ಪ್ರಸನ್ನರನ್ನಾಗಿ ಮಾಡಿಕೊಳ್ಳುತ್ತಿದ್ದರು. ಇಷ್ಟುಮಾತ್ರವೇ ಅಲ್ಲದೆ ಮೈಸೂರಲ್ಲಿ ಒಂದು ಸೇತುವೆ ಇತ್ತು. ಈ ಸೇತುವೇಮೇಲೆ ಆದಿ ಮಧ್ಯಾಂತಗಳಲ್ಲಿ ಮೂರು ಕಟ್ಟೆಗಳಿದ್ದವು. ಈ ಮೂರರಲ್ಲಿಯೂ ಸುಂಕವು ವಸೂಲಾಗುತ್ತಿತ್ತು. ಬೆಂಗಳೂರು ಡಿವಿಜನಿನಲ್ಲಿ ಈ ಬಾಧೆಯು ನಗರ ಅಷ್ಟಗ್ರಾಮಗಳಿಗಿಂತಲೂ ಕಡಮೆಯಾಗಿತ್ತು. ಈ ವಿಷಯದಲ್ಲಿ ಪೂರ್ಣಯ್ಯನವರ ಏರ್ಪಾಡಿನ ಪ್ರಕಾರ ಸಾಯರನ್ನು ಗುತ್ತಿಗೆಗೆ ಕೊಡುತ್ತಿದ್ದರು.

ಪಂಚಬಾಬು.—೩೮ ತಾಲ್ಲೂಕುಗಳಲ್ಲಿ ಮಾತ್ರ ಹೊಗೇಸಪ್ಪನ್ನು ಒಟ್ಟುಗುತ್ತಿಗೆಗೆ ಕೊಡುತ್ತಾ ಇದ್ದರು. ಬೆಂಗಳೂರಿನಲ್ಲಿಯೂ ಅದರ ಒಳಗಡಿಯಲ್ಲಿಯೂ ಮಾತ್ರ ಈ ಗುತ್ತಿಗೆಯು ನಡೆಯುತ್ತಿತ್ತು. ಗುತ್ತಿಗೇದಾರರು ೪೯ ಸೇರಿನ ಮಣವನ್ನು ೪ರಿಂದ ೧೦ ಹಣದ ವರಿಗೂ ಕೊಟ್ಟು ತೆಗೆದುಕೊಂಡು, ೪೦ ಸೇರಿನ ಮಣಕ್ಕೆ ೧೦—೨೩ ಹಣದವರಿಗೂ ಬೆಲೆ ಹೆಚ್ಚಿಸಿ ವಿಕ್ರಯಿಸುತ್ತಿದ್ದರು. ವರ್ತಕರು ಅದರ ಮೇಲೆ ಒಂದೆರಡು ಹಣ ಲಾಭವನ್ನು ಇಟ್ಟುಕೊಂಡು ಮಾರುತ್ತಿದ್ದರು.

ವೀಳ್ಯದೆಲೆಯ ಗುತ್ತಿಗೆಯು ಎಲ್ಲಾ ಪ್ರಾಂತ್ಯಗಳಲ್ಲಿಯೂ ಇರಲಿಲ್ಲ. ೧೪ ಡಿಸ್ಟ್ರಿಕ್ಟುಗಳಲ್ಲಿ ಮಾತ್ರ ವೀಳ್ಯದೆಲೆಯು ಬೆಳೆಯುತ್ತಿತ್ತು. ಬೆಂಗಳೂರಿನಲ್ಲಿ ಗುತ್ತಿಗೇದಾರನು ಹಣಕ್ಕೆ ೨೦ ಕಟ್ಟಿನ ಪ್ರಕಾರ ತೆಗೆದುಕೊಂಡು, ಮೈಸೂರು ಸರ್ಕಾರದ ನೌಕರರಿಗೆ ಹಣಕ್ಕೆ ೧೬ ರರಂತೆಯೂ, ಕಂಟ್ರೋಣ್ಮೆಂಟು ಸರ್ಕಾರದವರಿಗೆ ಹಣಕ್ಕೆ ೧೦ ಕಟ್ಟಿನಂತೆಯೂ, ಅಂಗಡಿಯವರಿಗೆ ೮ ರಂತೆಯೂ ಮಾರುತ್ತಿದ್ದನು.

ಗಾಂಜಾ ಗುತ್ತಿಗೆಯು ಬೆಂಗಳೂರು ಪಟ್ಟಣದಲ್ಲಿಯೂ ಮತ್ತು ಕೆಲವು ತಾಲ್ಲೂಕುಗಳಲ್ಲಿಯೂ ಮಾತ್ರ ಇತ್ತು. ಗುತ್ತಿಗೇದಾರರು ಮಣಕ್ಕೆ ೧೨ ರಿಂದ ೨೪॥ ಹಣದ ವರಿಗೂ ಕೊಟ್ಟು, ತೆಗೆದುಕೊಂಡು, ಮಣಕ್ಕೆ ೩ ರಿಂದ ೭ ವರಹದ ವರಿಗೂ ಮಾರುತ್ತಿದ್ದರು. ಈ ಗುತ್ತಿಗೆಯನ್ನು ಹೊಗೇಸೊಪ್ಪಿನ ಕೋರಿಯವರೇ ತೆಗೆದುಕೊಳ್ಳುತ್ತಿದ್ದರು.

ಷರಾಬು ಗುತ್ತಿಗೆಯು ತಾಲ್ಲೂಕು ಮಾರೀಫತ್ತು ನಡೆಯುತ್ತಿತ್ತು. ಗುತ್ತಿಗೇದಾರನು ತನ್ನ ಕೈಕೆಳಗಿನ ಷಿಕ್ಮೀದಾರರಿಂದಲಾಗಲೀ ತಾನೇ ಆಗಲೀ ಷರಾಬು ತಯಾರು ಮಾಡುತ್ತಿದ್ದನು. ಷಿಕ್ಮೀದಾರರವಶಕ್ಕೆ ಕೊಟ್ಟಾಗ ಅವರು ಒಂದು ಗ್ರಾಮಕ್ಕೆ ಅಥವಾ ಒಂದು ಅಂಗಡಿಗೆ ಇಷ್ಟು ಎಂಬದಾಗಿ ಗುತ್ತಿಗೆ ಕೊಡುತ್ತಿದ್ದರು. ಷರಾಬು ಗುತ್ತಿಗೆಯನ್ನು ಅಮಾನಿಯಲ್ಲಿಯೇ ಇಟ್ಟುಕೊಂಡರೆ, ಗುತ್ತಿಗೇದಾರರೇ ಕಾರಖಾನೆಗಳನ್ನು ಮಾಡಿ, ಭಟ್ಟಿಯನ್ನು ಇಟ್ಟು, ಷರಾಬು ಇಳಿಸಿ, ಕ್ಲುಪ್ತವಾದ ದರದ ಪ್ರಕಾರ ಮಾರುತ್ತಿದ್ದರು. ಒಬ್ಬನೇ ಅನೇಕ ತಾಲ್ಲೂಕುಗಳನ್ನು ಗುತ್ತಿಗೆ ತೆಗೆದುಕೊಳ್ಳತಕ್ಕ ಸಂಪ್ರದಾಯವೂ ಅನೇಕರು ಒಂದು ತಾಲ್ಲೂಕನ್ನು ತೆಗೆದುಕೊಳ್ಳತಕ್ಕ ಸಂಪ್ರದಾಯವೂ ಇತ್ತು. ಅನಾದಿಯಾಗಿ ಬೇಡರೂ ಕಾಲಾಲರೂ ಮಾತ್ರವೇ ಷರಾಬನ್ನು ಇಳಿಸುವದೂ ಅದನ್ನು ಗುತ್ತಿಗೆ ತೆಗೆದುಕೊಳ್ಳುವದೂ ಪದ್ಧತಿಯಿತ್ತು. ಸ್ವಲ್ಪದಿನಗಳಾದ ಮೇಲೆ ಎಲ್ಲಾ ಜಾತಿಯ ಜನರೂ ಈ ಗುತ್ತಿಗೆಯನ್ನು ತೆಗೆದು ಕೊಳ್ಳುವದಕ್ಕೆ ಉಪಕ್ರಮಮಾಡಿದರು. ಬೇಡರ ಮತ್ತು ಕಾಲಾಲರುಗಳ ಹೆಂಗಸರು ಜಾರತ್ವಮಾಡಿದರೆ ಅದಕ್ಕೆ ಒಂದು ತೆರಿಗೆಯಿತ್ತು. ಅವರನ್ನು ಮದುವೆಯಾದರೆ ಅದಕ್ಕೂ ಒಂದು ತೆರಿಗೆಯಿತ್ತು. ಈ ತೆರಿಗೆಗಳನ್ನೂ ಗುತ್ತಿಗೆಗೆ ಕೊಡುತ್ತಿದ್ದರು.

ಸೇಂದೀ ಗುತ್ತಿಗೆಯು ಎಲ್ಲಾ ತಾಲ್ಲೂಕುಗಳಲ್ಲಿಯೂ ಇರಲಿಲ್ಲ. ಈಚಲ ತೋಪು ಎಲ್ಲಿ ಹೆಚ್ಚಾಗಿರುತ್ತಿತ್ತೋ ಅಲ್ಲಿ ಮಾತ್ರ ಈ ಗುತ್ತಿಗೆಯಿತ್ತು. ಈ ಗುತ್ತಿಗೆಯನ್ನು ವರ್ಷಕ್ಕೆ ೧ ಸಾರಿ ಕೊಡುತ್ತಿದ್ದರು. ಗುತ್ತಿಗೇದಾರನು ತಿಂಗಳಿಗೆ ಒಂದು ಸಾರಿ ಹಣವನ್ನು ವಸೂಲು ಮಾಡುತ್ತಿದ್ದನು. ಕೆಲವು ತಾಲ್ಲೂಕುಗಳಲ್ಲಿ ಈಚಲ ತೋಪುಗಳಿಲ್ಲದಿದ್ದರೂ ಅಂಗಡಿಗಳು ಮಾತ್ರ ಇರುತ್ತಿದ್ದವು. ಈ ಅಂಗಡಿಗಳನ್ನು ಇಟ್ಟುಕೊಂಡಿದ್ದ ಈಡಿಗರು ಇತರ ತಾಲ್ಲೂಕಿನಿಂದ ಸೇಂದಿ ಭರ್ತಿ ಮಾಡುತ್ತಿದ್ದರು. ಕೆಲವು ತಾಲ್ಲೂಕುಗಳಲ್ಲಿ ಗುತ್ತಿಗೇದಾರನು ಕೂಲಿ ಕೊಟ್ಟು ಸೇಂದಿ ಇಳಿಸಿ ಅದನ್ನು ವಿಕ್ರಯಿಸುತ್ತಿದ್ದನು. ಈ ಗುತ್ತಿಗೇದಾರನು, ಈ ವ್ಯಾಪಾರಕ್ಕೆ ಸೇರಿರುವ ಈಡಿಗರೇ ಮೊದಲಾದವರ ವ್ಯಭಿಚಾರ ಮದುವೆ ಮುಂತಾದವುಗಳಿಂದ ವಸೂಲಾಗುವ ತೆರಿಗೆಗಳಿಗೆ ಗುತ್ತಿಗೆ ತೆಗೆದುಕೊಳ್ಳುತ್ತಿದ್ದನು.

ಸೇಂದಿ ಅಮಾನಿಯಾಗಿ ಇಟ್ಟುಕೊಂಡಿದ್ದ ಕಾಲದಲ್ಲಿ ಸರ್ಕಾರದವರೇ ಶೇಕದಾರನ ಮೂಲಕ ಬೇರೇ ಸಿಬ್ಬಂದಿಯನ್ನು ಇಟ್ಟು ಇದನ್ನು ರೂಢಿಸು ತ್ತಿದ್ದರು. ಅಮಾನಿಯಲ್ಲಿ ನಡೆಯುವಾಗ ಈ ಲೆಕ್ಕಗಳೂ ಸರ್ಕಾರದ ಲೆಕ್ಕಗಳೂ ಮಿಶ್ರವಾಗಿ ಬಹು ಗಲಿಬಿಲಿಯಾಗುತ್ತಿತ್ತು.

ನ್ಯಾಯವಿಮರ್ಶೆ.—ಮಹಾರಾಜರವರ ರಾಜ್ಯಭಾರದಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳು ನಡೆಯುತ್ತಿದ್ದ ವಿಷಯದಲ್ಲಿ ಸರ್ ಮಾರ್ಕ್ ಕಬ್ಬನ್ ಸಾಹೇಬರವರು ಬರೆದಿರುವದೇನೆಂದರೆ:—

ಸಿವಿಲು.—"ಶ್ರೀಮನ್ಮಹಾರಾಜರವರಿಗೆ ಪಟ್ಟಾಭಿಷೇಕವಾದ ಕೂಡಲೆ ಅವರು ರೆಸಿಡೆಂಟರ ಅನುಮತಿಯಿಂದ ವಿಶೇಷವಾದ ಕೆಲವು ವ್ಯತ್ಯಾಸಗಳನ್ನು ಮಾಡಿದರು. ಇಬ್ಬರು ಭಕ್ಷಿಗಳಿರುವ ಒಂದು ಸದರಕೋರ್ಟೂ ಅದರ ಕೈಕೆಳಗೆ ಒಂದೊಂದಕ್ಕೆ ಹಕೀಮರೆಂಬ ಇಬ್ಬರು ನ್ಯಾಯಾಧಿಪತಿಗಳುಳ್ಳ ಮೂರು ಕೆಳಗಿನ ಕೋರ್ಟುಗಳೂ ಏರ್ಪಾಡಾದವು. ೫೦೦ ರೂಪಾ ಯಿನ ಮೇಲಣ ವ್ಯಾಜ್ಯಗಳನ್ನೆಲ್ಲಾ ಸದರ ಕೋರ್ಟಿನವರು ಫೈಸಲು ಮಾಡುವದಲ್ಲದೆ, ಕೆಳಗಿನ ಕೋರ್ಟಿನ ಫೈಸಲುಗಳ ಮೇಲೆ ಅಪ್ಪೀಲು ಹಿಡಿಯುತ್ತಿದ್ದರು. ಅದಕ್ಕೆ ಕೆಳಗಿನ ಮೂರು ಕೋರ್ಟುಗಳಲ್ಲಿ ಒಂದು ಕೋರ್ಟಿನವರು ೧೦೦ ರಿಂದ ೫೦೦ ರೂಪಾಯಿ ವರಿಗೂ ಬರುವ ವ್ಯಾಜ್ಯಗಳನ್ನೂ, ಇನ್ನೊಂದು ಕೋರ್ಟಿನವರು ೧೦೦ ರೂಪಾಯಿನ ಒಳಗಿನ ವ್ಯಾಜ್ಯಗಳನ್ನೂ ಫೈಸಲು ಮಾಡುತ್ತಿದ್ದರು. ಮತ್ತೊಂದು ಕೋರ್ಟಿನವರು ಕ್ರಿಮಿನಲ್ ಮೊಕದ್ದಮೆಗಳನ್ನು ವಿಚಾರಣೆ ಮಾಡು ತ್ತಿದ್ದರು. ಈ ನಾಲ್ಕು ಕೋರ್ಟುಗಳೂ ಒಂದೇಕಡೆ ಇದ್ದರೂ ಇಲಾ ಖೆಯ ಸಿಬ್ಬಂದಿಯು ಪ್ರತ್ಯೇಕವಾಗಿ ಇತ್ತು. ಮದರಾಸು ಸಂಸ್ಥಾನದ ಕಾನೂನುಗಳ ಪ್ರಕಾರ ನ್ಯಾಯವಿಮರ್ಶೆಯು ಆಗುತ್ತಿತ್ತು. ವಾದಿಯು ದಾವಾ ಅರ್ಜಿಯನ್ನು ದಾಖಲು ಮಾಡಿದ ಕೂಡಲೆ ಅವನ ಕೈಫಿಯತ್ತನ್ನು ತೆಗೆದುಕೊಳ್ಳುತ್ತಿದ್ದರು.' ಅದಕ್ಕೆ ಪ್ರತಿವಾದಿಯು ಹೇಳತಕ್ಕದ್ದನ್ನೂ ಅವ ನಿಗೆ ಹಾಕಿದ ಪ್ರಶ್ನೆಗಳಿಗೆ ಕೊಟ್ಟ ಕೈಫಿಯತ್ತನ್ನೂ ರಿಕಾರ್ಡಿಗೆ ದಾಖಲು ಮಾಡುತ್ತಿದ್ದರು. ಈ ದಾವಾದ ಫೀಜಿಗಾಗಿ ವಸೂಲಾದ ಹಣದಲ್ಲಿ ಮೂರ

ರಲ್ಲಿ ಎರಡು ಭಾಗ ಸರ್ಕಾರಕ್ಕೂ ಉಳಿದದ್ದು ವಕೀಲರ ಫೀಜಿಗೂ ಹೋಗು ತ್ತಿತ್ತು. ಸದರಕೋರ್ಟಿನವರ ಫೈಸಲಮೇಲೆ ಧೊರೆಗಳರವರು ಅಪ್ಪೀಲು ಹಿಡಿಯತಕ್ಕ ಪದ್ಧತಿ ಯಿರಲಿಲ್ಲ. ಆದರೂ ಕಕ್ಷಿಗಾರರು ಮಹಾ ರಾಜರವರಿಗೆ ಫಿರ್ಯಾದು ಮಾಡಿಕೊಂಡರೆ, ಖಾವಂದರು ಆ ಸದರ ಕೋರ್ಟಿ ನವರು ಮಾಡಿರತಕ್ಕ ಫೈಸಲಿಗೆ ಕಾರಣವೇನೆಂದು ಆ ಕೋರ್ಟಿನವರನ್ನು ಕೇಳುತ್ತಿದ್ದರು. ಬಾಕರ ಸಾಹೇಬರೂ ಗುಲಾಂಮಹಿಯುದ್ದೀನ ಮುಕ್ರಿ ಯವರೂ ಸದರಕೋರ್ಟಿನ ಮೊದಲಿನ ಛಕ್ಷಿಗಳಾಗಿದ್ದರು. ಮೊದಲು ಒಂದೂವರೆ ವರ್ಷದ ವರೆಗೂ ಇವರು ಚನ್ನಾಗಿ ನ್ಯಾಯವಿಮರ್ಶೆ ಮಾಡು ತ್ತಿದ್ದರು. ಅನಂತರದಲ್ಲಿ ಆಳಿದ ಮಹಸ್ವಾಮಿಯವರ ದರ್ಬಾರಿನ ಅಧಿ ಕಾರಿಗಳು ಈ ನ್ಯಾಯವಿಮರ್ಶೆಯ ವಿಷಯದಲ್ಲಿ ಪ್ರವೇಶಿಸಿ, ಕೋರ್ಟಿನವರ ಅಭಿಪ್ರಾಯದಂತೆ ಫೈಸಲಾಗದಂತೆ, ತಮ್ಮ ಅಧಿಕಾರವನ್ನು ನಡಿಸುವದಕ್ಕೆ ಉಪಕ್ರಮಿಸಿದರು. ಆ ಬಳಿಕ ಬಾಕರ ಸಾಹೇಬರು ಅಧರ್ಮಕ್ಕೆ ಪ್ರವ ರ್ತಿಸುವದಕ್ಕೆ ಇಷ್ಟವಿಲ್ಲದೆ ಕೆಲಸವನ್ನು ಬಿಟ್ಟುಬಿಟ್ಟರು. ೪—೫ ತಿಂಗ ಳಾದ ಮೇಲೆ ರೆಸಿಡೆಂಟರವರು ಶ್ರೀಮನ್ಮಹಾರಾಜರವರಿಗೆ ತಿಳಿಸತಕ್ಕ ವಿಷ ಯಗಳನ್ನೆಲ್ಲಾ ತಿಳಿಸಿ ಬಾಕರಸಾಹೇಬರನ್ನು ಪುನಃ ನ್ಯಾಯಾಧಿಪತಿಗಳಾ ಗುವಂತೆ ಪ್ರೇರೇಪಿಸಿದರು. ಅನಂತರದಲ್ಲಿ ಒಂದು ವರ್ಷದವರೆಗೂ ನ್ಯಾಯವಿಮರ್ಶೆಯು ಚನ್ನಾಗಿ ನಡೆಯುತ್ತಿತ್ತು. ಆ ಬಳಿಕ ತಾವು ಮಾಡತಕ್ಕ ಫೈಸಲುಗಳೆಲ್ಲಾ ದರಬಾರು ಅಧಿಕಾರಿಗಳ ಇಷ್ಟಾನುಸಾರವಾಗಿ ರದ್ದಾಗುತ್ತಾ ಬರುವದನ್ನು ಕಂಡು, ಬಾಕರ್ ಸಾಹೇಬರು ಜುಗುಪ್ಸೆಯಿಂದ ಪುನಃ ಕಲಸ ಬಿಟ್ಟು ಬಿಟ್ಟರು. ಆಗ ಯಾರು ಏನು ಹೇಳಿದರೂ ಅವರು ಪುನಃ ಅಧಿಕಾರಕ್ಕೆ ಬರಲು ಸಮ್ಮತಿಸಲಿಲ್ಲ. ಅನಂತರದಲ್ಲಿ ಗುಲಾಂ ಮಹಿಯು ದ್ದೀನರವರು, ಶ್ರೀಮನ್ಮಹಾರಾಜರವರಿಗೂ ರೆಸಿಡೆಂಟರಿಗೂ ಇಬ್ಬರಿಗೂ ಆಪ್ತ ರಾದ ಸಿದ್ದರಾಜೇ ಅರಸಿನವರ ಸಹಾಯದಿಂದ ಅವರ ಕೆಲಸಕ್ಕೆ ಬಂದರು. ಇವರು ಈ ಬಲದಿಂದ ೭ ವರ್ಷಗಳವರೆಗೂ ಅಧಿಕಾರವನ್ನು ಚನ್ನಾಗಿ ನಡಿಸಿ, ಕೋರ್ಟಿನ ಗೌರವವನ್ನು ಉಳಿಸಿದರು. ಅನಂತರದಲ್ಲಿ ಇವರು ಪಕ್ಷಪಾತ ಮಾಡಿದರೆಂತಲೂ ಲಂಚ ತೆಗೆದು ಕೊಂಡರೆಂತಲೂ ಇವರ ಮೇಲೆ ಒಂಭತ್ತು ತಪ್ಪುಗಳು ಹೊರಿಸಲ್ಪಟ್ಟವು. ಈ ಮೊಕದ್ದಮೆಗಳನ್ನೆಲ್ಲಾ

ರೆಸಿಡೆಂಟರವರೇ ವಿಚಾರಣೆ ಮಾಡುವಲ್ಲಿ, ಒಂದೂ ರುಜುವಾತಾಗಲಿಲ್ಲ. ಗುಲಾಂ ಮಹಿಯುದ್ದೀನರು ತಮ್ಮಮೇಲೆ ಅನ್ಯಾಯವಾಗಿ ತಪ್ಪು ಹೊರಿಸಿದವರನ್ನು ಶಿಕ್ಷಿಸಬೇಕೆಂದು ಧೊರೆಗಳನ್ನು ಬೇಡಿಕೊಂಡರು. ಅದಕ್ಕೆ ಧೊರೆಗಳು ಸಮ್ಮತಿಸದೆ ಹೋದದ್ದರಿಂದ, ಅವರು ತಮ್ಮ ಕೆಲಸವನ್ನು ಬಿಟ್ಟರು. ಇವರ ಕೆಲಸಕ್ಕೆ ಸಯ್ಯದ್ ಅಲ್ಲಿಯವರು ಬಂದರು. ಆದರೆ ಇವರು ಮಾಡಿದ ಫೈಸಲುಗಳೆಲ್ಲಾ, ಅವುಗಳನ್ನು ಧೊರೆಗಳವರ ಸೋದರ ಮಾವಂದಿರಾದ ಬಾಳೇಅರಸಿನವರು ಮಂಜೂರು ಮಾಡಿದ ಹೊರತು, ಜಾರಿಗೆ ಬರುತ್ತಿರಲಿಲ್ಲ. ಸಯ್ಯದ್ ಅಲ್ಲಿಯವರ ಜೊತೆಗೆ ಶ್ರೀನಿವಾಸರಾಯರನ್ನು ಜಡ್ಜಿಗಳಾಗಿ ನೇಮಿಸಿದರು. ಹತ್ತು ತಿಂಗಳಾದ ಮೇಲೆ ಸಯ್ಯದ್ ಅಲ್ಲಿಯವರು ಕಾಲವಾದದ್ದರಿಂದ, ಅನಂತರ ಶ್ರೀನಿವಾಸರಾಯರೇ ಎಲ್ಲಾ ಕೆಲಸಗಳನ್ನೂ ನೋಡುತ್ತಿದ್ದರು. ಕೆಲವು ಮಾಸಗಳು ಕಳೆದಮೇಲೆ ದರ್ಬಾರು ಅಧಿಕಾರಿಗಳು ಶ್ರೀನಿವಾಸರಾಯರನ್ನು ನಿವೃತ್ತಿ ಮಾಡಿಸಿದರು. ಆ ಬಳಿಕ ಈ ಕೆಲಸಕ್ಕೆ ಛೋಟಾ ರಾಜಾಖಾನರನ್ನು ನೇಮಿಸಿದರು. ಇವರು ಮೂರು ವರ್ಷ ಕೆಲಸದಲ್ಲಿದ್ದರು. ಈ ಮೂರು ವರ್ಷಗಳಲ್ಲಿಯೂ ಕೋರ್ಟಿನ ಗೌರವವು ಕ್ಷೀಣವಾಯಿತು. ಕಕ್ಷಿಗಾರರು ನಾನಾ ಉಪಾಯಗಳಿಂದ ತಮ್ಮ ಇಷ್ಟಾನುಸಾರವಾಗಿ ಮೊಕದ್ದಮೆಗಳನ್ನು ಫೈಸಲು ಮಾಡಿಸಿ ಕೊಳ್ಳುತ್ತಾ ಇದ್ದರು. ಧೊರೆಗಳವರು ಆಗಾಗ್ಯೆ ಇವರನ್ನು ದರ್ಬಾರಿಗೆ ಕರೆಸಿ, ಚನ್ನಾಗಿ ಬೈದು ಬುದ್ಧಿ ಹೇಳಿ ಕಳುಹಿಸುತ್ತಿದ್ದದ್ದಲ್ಲದೆ, ಕೋರ್ಟಿನ ವಿಷಯಗಳನ್ನೆಲ್ಲಾ ಅಂತರಂಗವಾಗಿ ಪುತ್ಸದ್ದಿಗಳಿಂದ ತಿಳಿದು ಕೊಳ್ಳುತ್ತಿದ್ದರು. ಈ ಕಾಲದಲ್ಲಿ ದರ್ಬಾರಿನ ಅಧಿಕಾರಿಗಳು ಸೂತ್ರಧಾರಿಗಳಾಗಿಯೂ, ರಾಜಾಖಾನರು ಅವರಕೈಯಲ್ಲಿ ಆಡುವ ಬೊಂಬೆಯಾಗಿಯೂ ಇದ್ದರು. ಕಡೆಗೆ ಕೃಷ್ಣನೆಂಬ ಒಬ್ಬ ಮನುಷ್ಯನು ರೆಸಿಡೆಂಟ್ ಕಚೇರೀ ಶಿರಸ್ತೇದಾರರ ಸಹಾಯದಿಂದ ಬಹಳ ದೊಡ್ಡ ವ್ಯಾಜ್ಯದಲ್ಲಿ ಫೈಸಲನ್ನು ತನ್ನ ಕಡೆಗೆ ಮಾಡಿಕೊಂಡನು. ಆಗ ದಾಸಪ್ಪಾಜಿಯವರು ಅರಿಕೆ ಮಾಡಿಕೊಂಡದ್ದರಿಂದ, ಧೊರೆಗಳವರು ಪಂಚಾಯಿತರ ಮೂಲಕ ಈ ಮೊಕದ್ದಮೆಯನ್ನು ವಿಚಾರಣೆ ಮಾಡಿ, ರಾಜಾಖಾನರನ್ನು ಕೆಲಸದಿಂದ ತೆಗೆದು ಹಾಕಿದರು.

ಅನಂತರದಲ್ಲಿ ಧೊರೆಗಳು ಗುಲಾಂಮಹಿಯುದ್ದೀನ್ ಮಿಕ್ರಿಯವರನ್ನು ಪುನಃ ಅದಾಲತ್ತು ಕೋರ್ಟಿನ ಛಕ್ಷಿಯವರನ್ನಾಗಿ ನೇಮಿಸಿದರು. ಇವರು ೧೮೩೬ನೇ ಇಸವಿಯವರಿಗೂ ಈ ಕೆಲಸದಲ್ಲಿಯೇ ಇದ್ದು, ಅನಂತರದಲ್ಲಿ ಕಮಿಷನ್ ಕೋರ್ಟಿನ ಜಡ್ಜಿಗಳಾದರು. ಈ ಕಮಿಷನ್ ಕೋರ್ಟಿಗೇ ಅದಾಲತ್ತು ಕೋರ್ಟೆಂದು ವ್ಯವಹಾರ ವುಂಟಾಯಿತು. ಧೊರೆಗಳ ದರ್ಬಾರಿನ ಅಧಿಕಾರಿಗಳು ತಮ್ಮ ಇಷ್ಟಕ್ಕೆ ಅನುಸಾರವಾದ ಫೈಸಲುಗಳನ್ನು ನಡಿಸುತ್ತಲೂ, ಮಿಕ್ಕವುಗಳನ್ನು ಧೊರೆಗಳಿಂದ ರದ್ದು ಮಾಡಿಸುತ್ತಲೂ ಇದ್ದರು. ಇದಲ್ಲದೆ ದರ್ಬಾರು ಅಧಿಕಾರಿಗಳಲ್ಲಿ ಪರಸ್ಪರ ವಿರೋಧಿಗಳಾದ ಅಧಿಕಾರಿಗಳು ಒಬ್ಬರಕಾಲದಲ್ಲಿ ಆದ ಫೈಸಲುಗಳನ್ನು ಮತ್ತೊಬ್ಬರು ಹೊಡೆದು ಹಾಕುತ್ತಾ ಇದ್ದರು. ಇದರಿಂದ ಒಂದೇ ಮೊಕದ್ದಮೆಯಲ್ಲಿ ೫–೬ ಫೈಸಲುಗಳು ಆಗುತ್ತಿದ್ದವು. ಭಾರೀಮೊಕದ್ದಮೆಗಳನ್ನು ಸರಮಿಾನರು ಫೈಸಲು ಮಾಡುತ್ತಿದ್ದರು. ರಾಜಾಖಾನರು, ದಾಸಪ್ಪಾಜಿಯವರು ಬಾರ್ ಛಕ್ಷಿಗಳಾಗಿ ಇದ್ದಾಗ, ಸಿವಲ್ ಮೊಕದ್ದಮೆಗಳನ್ನು ಫೈಸಲು ಮಾಡುತ್ತಿದ್ದರು, ಶ್ರೀಮನ್ಮಹಾರಾಜರವರೇ ಸ್ವಂತವಾಗಿ ಮೊಕದ್ದಮೆಗಳನ್ನು ವಿಚಾರಣೆ ಮಾಡಿ ಫೈಸಲು ಹೇಳುತ್ತಿದ್ದರು. ಹಾಗೆ ಖಾವಂದರೇ ವಿಚಾರಣೆ ಮಾಡುವಾಗ ರಿಕಾರ್ಡು ಮುಂತಾದವುಗಳನ್ನು ಇಡುತ್ತಿರಲಿಲ್ಲ.

ಮ್ಯಾಜಿಸ್ಟ್ರೇಟ ಮೊಕದ್ದಮೆಗಳು.—ಕಳವು, ದಾರಿಯಲ್ಲಿ ತಲೆ ಹೊಡೆಯುವದು, ಕೊಲೆ, ಇವುಗಳನ್ನು ದೊಡ್ಡ ಅಪರಾಧಗಳೆಂದು ಗಣಿಸುತ್ತಿದ್ದರು. ದನ, ಬಟ್ಟೆ, ಮನೇಸಾಮಾನು, ದವಸ ಮುಂತಾದವುಗಳನ್ನು ಕದ್ದವರನ್ನು, ಶೇಕದಾರರೂ ಶಾನುಭೋಗರೂ ಗೌಡರೂ ವಿಚಾರಣೆ ಮಾಡಿ, ಕೋಳಕ್ಕೆ ಹಾಕಿ ಡರ್ಜಹೊಡೆದು ಶಿಕ್ಷಿಸುತ್ತಿದ್ದರು.

ರಸ್ತೆಯಲ್ಲಿ ಪ್ರಯಾಣ ಮಾಡತಕ್ಕವರನ್ನು ಸುಲಿಗೆ ಮಾಡುವದು, ಇತರ ವಿಧವಾದ ಚೋರತ್ವ, ಕೊಲೆ ಮುಂತಾದವುಗಳು ನಡೆದರೆ, ಅಂಥಾ ಅಪರಾಧವು ಯಾವಗ್ರಾಮದ ಒಳಯಲ್ಲಿ ನಡೆಯಿತೋ ಅಲ್ಲಿನ ಅಧಿಕಾರಿಗಳು ವಿಚಾರಣೆಮಾಡಿ, ಮೊಕದ್ದಮೆಯನ್ನು ಅಮಿಾಲರ ಕೋರ್ಟಿಗೆ ಕಳುಹಿಸುತ್ತಿದ್ದರು. ಅಮಿಾಲರು ವಿಚಾರಣೆ ಮಾಡಿ, ಅದನ್ನು ಹುಜೂರಿಗೆ ಕಳುಹಿ

ಸುತ್ತಿದ್ದರು. ಹುಜೂರಿಂದ ಆಜ್ಞೆಯಾದಂತೆ ಮರಣ ದಂಡನೆಯಾಗಲೀ ಬಂದೀಖಾನೆಯಾಗಲೀ ಅಥವಾ ಅಂಗಚ್ಛೇದವಾಗಲೀ ನಡೆಯುತ್ತಿತ್ತು. ಈ ವಿಚಾರಣೆಯ ದಾಖಲೆಗಳನ್ನು ಇಡುತ್ತಿರಲಿಲ್ಲ. ಇದಲ್ಲದೆ ಪೂರ್ಣಯ್ಯನವರ ಆಡಳಿತಕ್ಕೆ ಮುಂಚೆ ಪಂಚಾಯಿತರನ್ನು ಇಟ್ಟುಕೊಂಡು ವಿಚಾರಣೆ ಮಾಡುವ ಪದ್ಧತಿಯೂ ಇರಲಿಲ್ಲ. ತುರುಕರ ರಾಜ್ಯಭಾರದಲ್ಲಿ ಪೂರ್ವದಂತೆಯೇ ಬಂದು ಸದರು ಕೋರ್ಟು ಇತ್ತು. ಕೋಲಾರಿನಲ್ಲಿ ಹೇಳಿರುವ ಪ್ರಕಾರ ನ್ಯಾಯವಿಮರ್ಶೆಯು ಆಗುತ್ತಿತ್ತು. ಮೈಸೂರಿನಲ್ಲಿ ಏರ್ಪಾಡಾಗಿದ್ದ ನಾಲ್ಕನೇ ಕೋರ್ಟಿನ ಹಕೀಮರು ಪ್ರತಿತಿಂಗಳಲ್ಲಿಯೂ ೧೫ ದಿನ ಮ್ಯಾಜಿಸ್ಟ್ರೇಟ್ ಮೊಕದ್ದಮೆಗಳನ್ನು ಹಿಡಿಯುತ್ತಲೂ ಆ ಮೇಲೆ ೧೫ ದಿನ ಅವುಗಳಿಗೆ ಫೈಸಲುಗಳನ್ನು ಹೇಳುತ್ತಲೂ ಇದ್ದರು. ಈ ಕೋರ್ಟಿನವರು ವಿಚಾರಣೆಮಾಡಿ, ತಮ್ಮ ಅಭಿಪ್ರಾಯವನ್ನು ಬರೆದು, ಸದರು ಕೋರ್ಟಿಗೆ ಕಳುಹಿಸುತ್ತಿದ್ದರು. ಆ ಬಳಿಕ ಆ ಕೋರ್ಟಿನವರು ಫೈಸಲು ಹೇಳುತ್ತಿದ್ದರು.

ಎಲ್ಲಾ ವಿಧವಾದ ಕಳ್ಳತನಕ್ಕೂ ಉತ್ತಮ ಜಾತಿಯವರಿಗೆ ಜುಲುಮಾನೂ ಇತರರಿಗೆ ಕೊರಡೆಯ ಏಟೂ ಮುಖ್ಯ ದಂಡನೆಗಳಾಗಿದ್ದವು. ಕೊರಡೆಯ ಏಟನ್ನು ತಡೆಯಲಾರದೆ ನೆಲಕ್ಕೆ ಬಿದ್ದವರನ್ನು ಪುನಃ ಚೇತರಿಸಿಕೊಳ್ಳುವದಕ್ಕೋಸ್ಕರ ಬಂದೀಖಾನೆಗೆ ಕಳುಹಿಸಿ, ಪುನಃ ಅವರನ್ನು ಹಿಡಿತರಿಸಿ, ಕಳವಾದ ಪದಾರ್ಥವನ್ನು ಪತ್ತೆ ಮಾಡಿ ಕೊಡುವವರಿಗೂ, ಅವರನ್ನು ಹೊಡೆಯುತ್ತಿದ್ದರು. ನಿರಪರಾಧಿಗಳಾದವರನೇಕರು ಹೀಗೆ ಕಡೆಗೂ ಈ ಏಟನ್ನು ತಿಂದು ಶ್ರಮಪಡುತ್ತಿದ್ದರು. ಈ ಏಟು ಹೊಡೆಯುವದಕ್ಕೆ ಸದರ ಕೋರ್ಟಿನಲ್ಲಿ ೬ ರೂಪಾಯಿ ಸಂಬಳ ಕೊಟ್ಟು ಇಬ್ಬರು ಜೇಲಬ್ದಾರ್ ಎಂಬವರನ್ನು ಇಟ್ಟಿದ್ದರು. ಅನಂತರದಲ್ಲಿ ಈ ಇಬ್ಬರು ಜೇಲಬ್ದಾರರು ಸಾಲದೆ, ಅಂಚೆ ಷಾಗಿರ್ದ್‌ಪೇಷ್ ಮುಂತಾದವುಗಳಲ್ಲಿದ್ದ ಜೇಲಬ್ದಾರರನ್ನೆಲ್ಲಾ ಕರಿಸಿಕೊಳ್ಳುತ್ತಿದ್ದರು. ೧೮೩೩ನೇ ಇಸವಿಯವರಿಗೂ ಅದಾಲತ್ ಕೋರ್ಟಿನಲ್ಲಿ ಕೊರಡೆಯ ಏಟಿನ ಶಬ್ದವು ಕೇಳದ ದಿನವೇ ಇರಲಿಲ್ಲ. ಇಂಥಾ ಅಪರಾಧ ಮಾಡಿದವರಿಗೆ ಇದೇ ಶಿಕ್ಷೆಯೆಂದು ಗೊತ್ತಾಗಿರಲಿಲ್ಲ. ಕಳವಿಗೆ ಮರಣದಂಡನೆ, ಬೆಟ್ಟದಿಂದ ಕೆಳಕ್ಕೆ ನೂಕುವದು,

ಆನೇ ಕೈಯಲ್ಲಿ ತುಳಿಸುವದು, ಕಾರಾಗೃಹ, ಕೈಕಾಲುಗಳನ್ನೂ, ಕಿವಿ ಮೂಗುಗಳನ್ನೂ ಕತ್ತರಿಸುವದು, ಕೊರಡೆಯಿಂದ ಹೊಡೆಯುವದು, ಅವರ ಆಸ್ತಿಯನ್ನು ಮುಟ್ಟುಗೋಲು ಹಾಕಿಬಿಡುವದು, ಜುಲುಮಾನೆ ಮುಂತಾದವುಗಳಲ್ಲಿ ಮನಸ್ಸಿಬಂದ ಶಿಕ್ಷೆಯನ್ನು ಮಾಡುತ್ತಿದ್ದರು. ಪ್ರಾಯಶಃ ಕಳ್ಳನನ್ನು, ಅವನು ಕದ್ದದ್ದನ್ನು ತೋರಿಸುವವರಿಗೂ, ಪ್ರತಿದಿನಲ್ಲಿಯೂ ಕೊರಡೆಯಿಂದ ಹೊಡೆಯುತ್ತಿದ್ದರು. ಕೊಲೆ ಮಾಡಿದವರನ್ನು ತಾವು ಹಾಗೆ ಮಾಡಿದ್ದುಂಟೆಂದು ಒಪ್ಪಿಕೊಳ್ಳುವವರಿಗೂ ಹೊಡೆಯುತ್ತಿದ್ದರು. ಕಳ್ಳನು ತಾನು ಕದ್ದದ್ದನ್ನು ತೋರಿಸಿ ಬಿಟ್ಟರೆ ಅವನನ್ನು ಬಿಟ್ಟು ಬಿಡುತ್ತಲೂ ಇದ್ದರು. ಸ್ವಲ್ಪಕಳ್ಳತನ ಮಾಡಿದವರಿಗೂ ಕಂದಾಯ ಕೊಡದವರಿಗೂ ಸಾಲ ತೀರಿಸದೆ ಇದ್ದವರಿಗೂ ಕೊರಡೆಯ ಏಟು, ಬಂದೀಖಾನೆ, ಜುಲುಮಾನೆ, ತಲೆಯಮೇಲೆ ದೊಡ್ಡಕಲ್ಲು ಹೇರಿ ನಿಲ್ಲಿಸುವದು, ಕೋಳಕ್ಕೆ ಹಾಕುವದು, ಇಕ್ಕಳದಲ್ಲಿ ಕೀಳುವದು ಮುಂತಾದ ಶಿಕ್ಷೆಗಳನ್ನು ವಿಧಿಸುತ್ತಿದ್ದರು. ಮೇಲೆ ಬಿದ್ದು ಹೊಡೆಯುವದು ಬಯ್ಯುವದು ಮುಂತಾದ ಅಪರಾಧಗಳನ್ನು ಮಾಡಿದವರಿಗೆ ೩ರಿಂದ ೧೦ ಹಣದ ವರಿಗೂ ಜುಲುಮಾನೆ ಹಾಕುತ್ತಿದ್ದರು.

"ಪೂರ್ಣಯ್ಯನವರ ಕಾಲದಲ್ಲಿ ಕೊಲೆ ಲೂಟಿಗಳ ವಿನಾ ಇನ್ನಾವ ಅಪರಾಧಕ್ಕೂ ಮರಣದಂಡನೆ ಇರಲಿಲ್ಲ. ಕಳ್ಳರಿಗೆ ಕಠಿನವಾದ ಕೈದನ್ನು ಮಾಡುತ್ತಿದ್ದರು. ಜುಲ್ಮಾನು ಹಾಕುವದನ್ನೂ ಕೊರಡೆಯ ಏಟನ್ನೂ ತಪ್ಪಿಸಿದ್ದರು." ಎಂಬದಾಗಿ ಮೇಜರ್ ವಿಲ್ಕ್ಸ ಸಾಹೇಬರು ಹೇಳಿ ಇದಾರೆ. ಪೂರ್ಣಯ್ಯನವರ ರಾಜ್ಯಭಾರದಲ್ಲೆಲ್ಲಾ ಹೀಗಿರಲಿಲ್ಲ. ಪೂರ್ಣಯ್ಯನವರ ಆಜ್ಞೆಯಿಂದಲೇ ಅನೇಕರಿಗೆ ಕೈಕಾಲುಗಳನ್ನು ಕಡಿಸಿ, ಕಿವಿ ಮೂಗುಗಳನ್ನು ಕುಯಿಸಿ ಇರುತ್ತಾರೆ. ಇವರು ತಮ್ಮ ಅಧಿಕಾರದ ಅಂತ್ಯಭಾಗದಲ್ಲಿ ಪೂರ್ವದಲ್ಲಿ ನಡೆಯುತ್ತಿದ್ದ ಶಿಕ್ಷೆಗಳನ್ನೆಲ್ಲಾ ನಡಿಸುತ್ತಿದ್ದರು. ಗ್ರಾಮದ ಅಧಿಕಾರಿಗಳು ಕಳ್ಳರು ಕದ್ದದ್ದುಂಟೆಂದು ಒಪ್ಪಿಕೊಳ್ಳುವವರಿಗೂ ಅವರಿಗೆ ಕೊರಡೆಯ ಏಟುಗಳನ್ನು ಹೊಡಿಸುತ್ತಿದ್ದರು. ನಿರಪರಾಧಿಗಳನ್ನು ಮಹೀರ್ಜರೆಂದು ತಾಲ್ಲೂಕಿಗೆ ಕಳುಹಿಸುತ್ತಿದ್ದರು. ಆತಾಲ್ಲೂಕಿನವರು ಅವರನ್ನು ಅದೇ ರೀತಿಯಲ್ಲಿ ಹೊಡಿಸುತ್ತಿದ್ದರು. ಮರಣದಂಡನೆಯನ್ನು ಮಾಡುವ ಅಧಿಕಾರವು ಇದ್ದದ್ದು ದಿವಾನರಿಗೆ ಮಾತ್ರವೇ ಅಲ್ಲ; ಈಅಧಿಕಾರವು ಫೌಜದಾರರಿಗೂ

ಇತ್ತು. ಉತ್ತಮವರ್ಣದವರು ಕೊಲೆ ಮಾಡಿದರೆ, ಆ ಅಪರಾಧವನ್ನು ಕ್ಷಮಿಸ ವದೂ ಅಥವಾ ಅವರಿಗೆ ಜುಲುಮಾನೆ ಹಾಕಿಸುವದೂ ಬಂದೀಖಾನೆಗೆ ಕಳು ಹಿಸುವದೂ ವಾಡಿಕೆಯಾಗಿ ಇತ್ತು. ಕೀಳುಜಾತಿಯವರು ಕೊಲೆ ಕಳವು ಗಳನ್ನು ಮಾಡಿದರೆ ಅವರಿಗೆ ಮರಣದಂಡನೆ ಯಾಗುತ್ತಿತ್ತು. ದಾರಿಯಲ್ಲಿ ಪ್ರಯಾಣಮಾಡತಕ್ಕವರ ಮೇಲೆ ಬಿದ್ದು ಕಳವು ಮಾಡಿದವರಿಗೆ, ಪ್ರಯಾಣಿ ಕರಿಗೆ ಯಾವಬಾಧೆಯೂ ಆಗದಿದ್ದರೆ, ಬಂದೀಖಾನೆ ಯಾಗುತ್ತಿತ್ತು. ಸಾಮಾನ್ಯವಾದ ಅಲ್ಪ ಚೋರತ್ವಕ್ಕೆ ೧೦ ರಿಂದ ೧೦೦ ವರಿಗೂ ಕೊರಡೆಯ ಏಟು, ಕೈಕೋಳ, ಜುಲುಮಾನೆ, ಬಂದೀಖಾನೆ ಮುಂತಾದ ಶಿಕ್ಷೆಗಳನ್ನು ವಿಧಿಸುತ್ತಿದ್ದರು. ಕಂದಾಯ ಕೊಡದೆ ಇರತಕ್ಕವರಿಗೆ ಕೋಳ ಬಂದೀ ಖಾನೆ ಜುಲುಮಾನೆಗಳಲ್ಲದೆ, ಬೆಂಕಿಯಿಂದ ಚನ್ನಾಗಿ ಕಾದಿರತಕ್ಕ ನೆಲದ ಮೇಲೆ ನಿಲ್ಲಿಸುತ್ತಿದ್ದರು.

ಪೂರ್ಣಯ್ಯನವರ ಅಧಿಕಾರವು ಮುಗಿದ ಮೇಲೆ ರಾಜ್ಯಭಾರವು ಪೂರ್ವದಂತೆಯೇ ಇತ್ತು. ಇದರಿಂದ ಜನಗಳಿಗೆ ಹಿಂಸೆಯು ಹೆಚ್ಚಿ, ಮೈಸೂರು ಕಮಿಷನ್ ಏರ್ಪಾಡಾಗುವದಕ್ಕೆ ಕಾರಣವಾಯಿತು. ಮಹಾ ರಾಜರವರ ರಾಜ್ಯಭಾರದಲ್ಲಿ ಹುಜೂರು ಅದಾಲತ್ ಕೋರ್ಟಿನಲ್ಲಿಯೂ ಬಾರ್ ಮತ್ತು ಇತರವಾದ ಕಚೇರಿಗಳಲ್ಲಿಯೂ ಸರ್ವಿಸ್ ಕೊರ್ಟಿನಲ್ಲಿಯೂ ಕ್ರಿಮಿನಲ್ ಮೊಕದ್ದಮೆಗಳು ವಿಚಾರಣೆ ಯಾಗುತ್ತಿದ್ದವು. ಸಾಮಾನ್ಯ ವಾದ ಕಳ್ಳತನಕ್ಕೂ ಕೈ ಕಾಲು ಮೂಗು ಕಿವಿಗಳನ್ನು ಕತ್ತರಿಸುತ್ತಿದ್ದರು. ಕೊರಡೆಯ ಏಟು ಕೋಳ ಮುಂತಾದಶಿಕ್ಷೆಗಳನ್ನು ಇದಕ್ಕಿಂತಲೂ ಕಡಮೆ ಯಾದ ಅಪರಾಧಗಳಿಗೆ ವಿಧಿಸುತ್ತಿದ್ದರು. ವ್ಯಭಿಚಾರಿಣಿಯರನ್ನು ಮೂಗನ್ನು ಕತ್ತರಿಸಿ ಬಿಡುತ್ತಿದ್ದರು, ಅಥವಾ ದಾಸಿಗಳಾಗಿ ಮಾರಿ ಬಿಡುತ್ತಿದ್ದರು. ಗ್ರಾಮದ ಅಧಿಕಾರಿಗಳು ಕಂದಾಯವು ವಸೂಲಾಗುವರಿಗೂ ರೈತರನ್ನು ಕೊರಡೆಯಿಂದ ಹೊಡಿಸುತ್ತಿದ್ದರು. ವ್ಯಭಿಚಾರ ಮಾಡಿದ ಸ್ತ್ರೀಯರಿಂದ ಬಂದು ತೆರಿಗೆಯನ್ನು ತೆಗೆದುಕೊಳ್ಳುತ್ತಾ ಇದ್ದದ್ದಲ್ಲದೆ, ಅವರನ್ನು ದನಕರ ಗಳಂತೆ ಮಾರಿ ಬಿಡುವ ಸಂಪ್ರದಾಯವೂ ಇತ್ತು. ತುಂಟರಾದವರು ತಮಗೆ ವಿರೋಧಿಗಳಾದ ಸ್ತ್ರೀಯರಮೇಲೆ ಇಲ್ಲದ ವ್ಯಭಿಚಾರ ದೋಷವನ್ನು ಹೊರಿ ಸುತ್ತಿದ್ದರು. ಸರ್ಕಾರದವರು ಈ ರೀತಿಯಲ್ಲಿ ತೆರಿಗೆಯನ್ನು ವಸೂಲು

ಮಾಡುತ್ತಿದ್ದರು. ಇದರಿಂದ ಸಜ್ಜನರಿಗೆ ಇದ್ದ ಕಷ್ಟವನ್ನು ಹೇಳುವದಕ್ಕಾಗುವದಿಲ್ಲ. ಬ್ರಾಹ್ಮಣರಲ್ಲಿಯೂ ಕೋಮಟಿಗರಲ್ಲಿಯೂ ವ್ಯಭಿಚಾರ ಮಾಡಿದ ಸ್ತ್ರೀಯರನ್ನು ಮಾರುತ್ತಿರಲಿಲ್ಲ. 'ವ್ಯಭಿಚಾರಿಣೀ' ಎಂಬ ಗುರುತುಳ್ಳ ಒಂದು ಮುದ್ರೇ ಕೋಲನ್ನು ಕಾಸಿ, ಆ ವ್ಯಭಿಚಾರಿಣಿಯ ಭುಜದ ಮೇಲೆ ಒತ್ತಿ, ಮನೆಯಿಂದ ಹೊರಕ್ಕೆ ಓಡಿಸುತ್ತಿದ್ದರು. ಇಂಥಾ ಸ್ತ್ರೀಯರು ತಾವು ಬದುಕಿರುವ ವರಿಗೂ ಇಜಾರದಾರರಿಗೆ ಒಂದು ತೆರಿಗೆಯನ್ನು ಕೊಡುತ್ತಿದ್ದರು. ಅವರು ಸತ್ತ ಮೇಲೆ ಅವರ ಆಸ್ತಿಯು ಇಜಾರದಾರರಿಗೇ ಸೇರುತ್ತಿತ್ತು. ಬ್ರಾಹ್ಮಣರೂ ಕೋಮಟಿಗರೂ ಅಲ್ಲದ ಸ್ತ್ರೀಯರು ಜಾರಿಣಿಯರೆಂದು ಗೊತ್ತಾದರೆ, ಇಜಾರದಾರನು ಅವರನ್ನು ಹಿಡಿತರಿಸಿ ಮಾರುತ್ತಿದ್ದನು. ಕಳ್ಳರ ಸಂಸಾರಕ್ಕೆ ಸೇರಿದ ಹೆಂಗಸರನ್ನೂ ಸಹ ಹಿಡಿತರಿಸಿ ಅವರ ಮೇಲೆ ತಪ್ಪು ಹೊತ್ತರೂ ಹೊರದಿದ್ದರೂ ಅವರ ಗಂಡಂದಿರ ಜೊತೆಯಲ್ಲಿ ಬಂದೀಖಾನೆಗೆ ಕಳುಹಿಸುತ್ತಿದ್ದರು. ಈ ಸ್ತ್ರೀಯರ ವಿಕ್ರಯವು ಬಹಿರಂಗವಾಗಿ ನಡೆಯುತ್ತಿತ್ತು. ೧೮೩೩ನೇ ಇಸವಿಯ ವರಿಗೂ ಬೆಂಗಳೂರಿನಲ್ಲಿ ಇಂಥಾ ಸ್ತ್ರೀಯರನ್ನು ಹರಾಜು ಹಾಕುವದಕ್ಕೆ ಒಂದು ಬಂಗಲೆ ಇತ್ತು. ಆ ಸಂವತ್ಸರ ಕಮಿಷನರವರು ಇನ್ನು ಮುಂದೆ ಹಾಗೆ ಮಾಡಕೂಡದೆಂದು ಹೇಳಿ, ಈ ಹೇಯವಾದ ವ್ಯಾಪಾರವನ್ನು ತಪ್ಪಿಸಿದರು.

ಲಂಚ ತೆಗೆದುಕೊಂಡ ಅಥವಾ ಕೆಲಸಮಾಡದೆ ಇರತಕ್ಕ ಅಮಿಲ್ದಾರು ಮುಂತಾದ ಅಧಿಕಾರಿಗಳಿಗೆ, ಕಾಲಿಗೆ ಸರಪಣಿಯನ್ನು ತೊಡಿಸಿ, ಮುಖಕ್ಕೆ ಮಣ್ಣು ಕಲಿಸಿ ಮೆತ್ತಿ, ಕಿವಿಗಳಿಗೆ ಇಕ್ಕಳಗಳನ್ನು ನೇತಹಾಕಿ, ಅರಮನೇ ಮುಂದೆ ನಿಲ್ಲಿಸಿ, ತಮ್ಮ ದ್ರೋಹದಿಂದ ಅಥವಾ ಅಜಾಗರೂಕತೆಯಿಂದ ಆದ ನಷ್ಟವನ್ನು ಕೊಡುತ್ತೇವೆಂದು ಜಾಮೀನು ಕೊಡುವವರಿಗೂ, ೧೦೦ ಏಟಿಗೆ ಕಡಮೆಯಿಲ್ಲದಂತೆ ಕೊರಡೆಯಿಂದ ಹೊಡಿಸುತ್ತಿದ್ದರು. ಇಂಥಾ ಶಿಕ್ಷೆಯನ್ನು ಅನುಭವಿಸಿದ ಜನಗಳೂ ತಾವು ಜಾಮೀನು ಕೊಟ್ಟಕೂಡಲೆ ಅಧಿಕಾರಕ್ಕೆ ಬರುತ್ತಿದ್ದರು. ಈ ಕಾರಣದಿಂದ ಜನಗಳಲ್ಲಿ ಮಾನಾವಮಾನವು ಬಹಳ ಕಡಮೆಯಾಗಿತ್ತು. ರಾಜಧಾನಿಯಲ್ಲಿ ಧೊರೆಗಳ ಆಜ್ಞೆಯಿಲ್ಲದೆ ಮರಣ ದಂಡನೆಯು ನಡೆಯುತ್ತಿರಲಿಲ್ಲ. ಆದರೆ ದೂರಪ್ರದೇಶಗಳಲ್ಲಿ ದರ್ಯಾಫ್ತಿ ಸಹ ಇಲ್ಲದೆ ಈ ಮರಣ ದಂಡನೆಯನ್ನು ವಿಧಿಸುತ್ತಿದ್ದರು. ೧೮೩೪ನೇ ಇಸವಿ

ಯಲ್ಲಿ ಕೆಲವು ಜನ ಕೋರಮರು ಖಜಾನೇ ಅಧಿಕಾರಿಗಳಿಂದ ಸ್ವಲ್ಪ ದ್ರವ್ಯವನ್ನು ಅಪಹರಿಸಿದರು. ಇವರನ್ನು ಪತ್ತೇ ಮಾಡುವದಕ್ಕೋಸ್ಕರ ಬಾರ್ ಇಲಾಖೆಯ ಒಬ್ಬ ಅಧಿಕಾರಿಯನ್ನು ಕಳುಹಿಸಿದರು. ಅಪರಾಧಿಗಳನ್ನು ಗಲ್ಲಿಗೆಹಾಕಿ ಅವರ ಹೆಂಗಸರು ಮಕ್ಕಳನ್ನು ಹಿಡಿದುಕೊಂಡು ಬರಬೇಕೆಂದು ಈತನಿಗೆ ಅಜ್ಞೆಯಾಗಿತ್ತು. ಈತನು ಅವರನ್ನು ಹಿಡಿದು, ೬೪ ಮಂದಿಯನ್ನು ಗಲ್ಲಿಗೆಹಾಕಿ, ೨೦೦ ಜನಗಳ ವರಿಗೂ ಹಿಡಿದುಕೊಂಡು ಬಂದನು. ಇದೇಮನುಷ್ಯನು ಇದೇ ಕೆಲಸಕ್ಕೆ ೧೮೨೩ ರಲ್ಲಿ ಹೋಗಿ, ೧೦೦ ಜನಗಳನ್ನು ಹಿಡಿದು, ಮೂವರನ್ನು ಗಲ್ಲಿಗೆ ಹಾಕಿ, ಉಳಿದವರನ್ನು ತಂದು ಒಪ್ಪಿಸಿದನು. ಹೀಗೆ ತಂದ ಜನಗಳಲ್ಲಿ ಸುಮಾರು ೨೦೦ ಜನಗಳನ್ನು ಮೈಸೂರು ಪೇಟೆಯಲ್ಲಿ ಹರಾಜುಹಾಕಿ, ಮಿಕ್ಕವರನ್ನು ಬಂದೀಖಾನೆಗೆ ಹಾಕಿದರು. ಈ ಅಧಿಕಾರಿಗೆ ಸಂಬಳವು ಹೆಚ್ಚಿದ್ದಲ್ಲದೆ, ಒಂದು ಪಾಲಕ್ಕಿಯು ಇನಾಮು ಸಿಕ್ಕಿತು.

ಧೊರೆಗಳ ರಾಜ್ಯಭಾರದಲ್ಲಿ ದುರ್ಮಾರ್ಗರಾದ ಅಧಿಕಾರಿಗಳು ಬಹಳ ಪ್ರಬಲರಾಗಿ ಲಂಚ ತೆಗೆದುಕೊಳ್ಳುತ್ತಾ, ತಮಗೆ ಪ್ರತಿಕೂಲರಾದ ನಿರಪರಾಧಿಗಳನ್ನು ದಂಡಿಸುತ್ತಾ, ಲಂಚಾತಿಂದು ಬಂದೀಖಾನೆ ಬಿದ್ದ ದುರ್ಜನರನ್ನು ಬಿಡಿಸುತ್ತಾ, ನಿರಪರಾಧಿಗಳನ್ನು ಬಂದೀಖಾನೆಗೆ ಹಾಕಿಸುತ್ತಾ ಬಂದರು. ಕಮಿಷ್ನರವರು ಜೈಲುಗಳನ್ನು ಪರೀಕ್ಷೆ ಮಾಡುವಾಗ ಜೇಲಿನಲ್ಲಿ ಅಪರಾಧಿಗಳೆಂದು ಗೊತ್ತಾದ ಗುಮಾನೀ ಖೈದಿಗಳೂ, ವಿಚಾರಣೆಯಿಲ್ಲದೆ ಬಂದೀಖಾನೆಗೆ ಬಿದ್ದವರೂ ಕುರಿಗಳ ಮಂದೆಗಳಹಾಗೆ ಕೂಡಿದ್ದರು. ಇದಲ್ಲದೆ ಜನಗಳ ಆಸ್ತಿಗೂ ಸ್ವಾತಂತ್ರ್ಯಕ್ಕೂ ಅನೇಕ ಗಂಡಾಂತರಗಳು ಇದ್ದವು. ಎಲ್ಲರೂ ಯಾವಕಾಲದಲ್ಲಿ ತಮ್ಮ ಆಸ್ತಿ ಹೋಗುವದೋ ಯಾವ ಕಾಲದಲ್ಲಿ ತಮಗೆ ಕಾರಾಗೃಹ ಪ್ರಾಪ್ತಿಯಾಗುವದೋ ಎಂದು ಭೀತರಾಗಿದ್ದರು. ಶಿರೋಗ್ರಾಹಿಗಳ ಮತ್ತು ದೇಹ ವಿಕ್ರಯದಿಂದ ಜೀವಿಸತಕ್ಕವರ ಪ್ರಾಬಲ್ಯವೇ ಹೆಚ್ಚಾಗಿತ್ತು. ಸರ್ಕಾರದ ಅಧಿಕಾರಿಗಳು ಇವರನ್ನು ಪ್ರಸನ್ನರನ್ನಾಗಿ ಮಾಡಿಕೊಳ್ಳುವದರಲ್ಲಿಯೇ ನಿರತರಾಗಿದ್ದರು. ಪ್ರಾಯಶಃ ಸಕಲ ಅಧಿಕಾರಿಗಳೂ ಸರ್ಕಾರದ ಅಧಿಕಾರಗಳನ್ನು ವಿಕ್ರಯಿಸಿ ದ್ರವ್ಯವನ್ನು ಸಂಪಾದಿಸಿಕೊಳ್ಳುತ್ತಾ, ಅಪರಾಧಿಗಳಿಂದ ದ್ರವ್ಯವನ್ನು ತೆಗೆದುಕೊಂಡು

ಅವರನ್ನು ಬಿಟ್ಟುಬಿಡುತ್ತಾ ದ್ರವ್ಯಾರ್ಜನೆಯಲ್ಲಿಯೇ ನಿರತರಾಗಿದ್ದರು. ಆ ಕಾಲದಲ್ಲಿ, ದ್ರವ್ಯವಂತರಾದ ತುಂಟರು ಎಂಥಾ ಅಪರಾಧಗಳನ್ನು ಮಾಡಿ ದರೂ ದಕ್ಕಿಸಿ ಕೊಳ್ಳುತ್ತಿದ್ದರು. ಧನಿಕರಾದವರನ್ನು ಗಲ್ಲಿಗೆ ಹಾಕಿದ ರೆಂಬ ಸಮಾಚಾರವು ಆ ಕಾಲದಲ್ಲಿ ಬಹು ಅಪೂರ್ವ. ಸರ್ಕಾರದ ಅಧಿ ಕಾರಿಗಳಿಗೂ ಕಳ್ಳಕೊರಮರ ಯಜಮಾನರಿಗೂ ಸುಲಿಗೆಯ ಪಾಲುಗಳಿಗೋ ಸ್ಕರ ತಕರಾರುಗಳು ಸಹ ನಡೆಯುತ್ತಿದ್ದವು. ಮೈಸೂರು ಕಮಿಷನ್ನ ರ್ ಏರ್ಪಡಾದಮೇಲೂ ಕೂಡ, ಸರ್ಕಾರದ ನೌಕರರು ಹೊಡೆಯುತ್ತಿದ್ದ ಕೊಳ್ಳೆಯು ಸಂಪೂರ್ಣವಾಗಿ ನಿಲ್ಲಲಿಲ್ಲ. ಅಪರಾಧದ ತಾರತಮ್ಯಗಳನ್ನೂ ಗುಮಾನಿ ಕೈದಿಗಳ ಅಪರಾಧ ನಿರಪರಾಧತ್ವಗಳನ್ನೂ ವಿಮರ್ಶೆ ಮಾಡದೆ, ಎಲ್ಲರನ್ನೂ ಬಂದೀಸ್ಥಳದಲ್ಲಿ ಕೂಡಿ, ಅಪರಾಧಿಗಳೆಂದು ನಿಶ್ಚಯವಾಗುವ ದಕ್ಕೆ ಮೊದಲೇ ಅವರಿಂದ ಮಾರ್ಗಗಳಲ್ಲಿ ಕೆಲಸ ಮಾಡಿಸುತ್ತಿದ್ದರು.

ಪೋಲೀಸು:—ಹೈದರಲ್ಲಿ ಟೀಪೂ ಸುಲ್ತಾನ್ ಪೂರ್ಣಯ್ಯನವರು ಮುಂತಾ ದವರ ಅಧಿಕಾರದಲ್ಲಿ ಪೋಲೀಸ್ ಕೆಲಸಗಳನ್ನು ಗ್ರಾಮದ ನೌಕರರಿಂದ ಮಾಡಿಸುತ್ತಿದ್ದರು. ಈ ಗ್ರಾಮಸ್ಥರಿಗೆ ಇನಾಮು ಭೂಮಿಗಳೂ ರೈತರು ಅಥವಾ ಸರ್ಕಾರದವರು ಉತ್ಪತ್ತಿ ಮಾಡುವ ದವಸದಲ್ಲಿ ಒಂದು ಭಾಗವೂ ಸಲ್ಲುತ್ತಿದ್ದವು. ಇವರಿಗೆ ತಳವಾರರು, ತೋಟಿಗಳು, ನೀರ್ಗಂಟಿಗಳು, ಕಾವಲುಗಾರರು ಎಂದು ಹೆಸರು. ಸರ್ಕಾರದ ಸಂಬಳ ತೆಗೆದುಕೊಳ್ಳುತ್ತಿದ್ದ ಕಟ್ಲೇಬೀದಿಯವರಿಗೂ, ಸಾಮಾನ್ಯ ಜವಾನರಾದ ಹಳೇಪೈಕಿ ಎಂಬವರಿಗೂ, ಉಂಬಳಿ ಎಂಬ ಇನಾಮು ಭೂಮಿಗಳನ್ನು ಹೊಂದಿರುವ ಉಂಬಳಿದಾ ರಿಗೂ, ಅವರವರ ಎಲ್ಲೆಯುಳ್ಳಿರುವ ಸಕಲರ ಆಸ್ತಿಸಂರಕ್ಷಣೆಯು ಸೇರಿತ್ತು. ಇನಾಮು ಭೂಮಿಯನ್ನು ಪಡೆದು ಕೆಲಸ ಮಾಡುತ್ತಿದ್ದ ಅಮರಗಾರರೂ, ಬಂಡಾರವನ್ನು ನೋಡಿಕೊಳ್ಳುತ್ತಿದ್ದ ಹಳೇ ಕಾವಲುಗಾರರೂ, ಸಾಮಾನ್ಯ ಕಾವಲುಗಾರರಾದ ಅಂಕಮಾಲರೂ, ಕಳ್ಳರನ್ನು ಹಿಡಿಯುವದಕ್ಕಾಗಿ ನೇಮಿತ ರಾಗಿದ್ದ ಕಳ್ಳಕೊರಮರೂ, ಪಟೇಲರೂ, ಶಾನುಭೋಗರೂ, ಇವರೆಲ್ಲರೂ ಗ್ರಾಮದ ನೌಕರರೆಂದು ಎಣಿಸಲ್ಪಡುತ್ತಿದ್ದರು. ಪಾಳ್ಯಗಾರರ ಕಾಲದಲ್ಲಿ ಊರಲ್ಲಾಗಲೀ ಹೊಲಮುಂತಾದವುಗಳಲ್ಲಾಗಲೀ ಆಗುವ ಎಲ್ಲಾ ಕಳವುಗ ಳಿಗೂ ಈ ನೌಕರರನ್ನೇ ಜವಾಬುದಾರರನ್ನಾಗಿ ಮಾಡಿ, ಕಳವಾದ ಸರ್ಕಾರದ

ಹಣವು ವಸ್ತೆಯಾಗದೆ ಹೋದರೆ, ಅದನ್ನು ಇವರಿಂದಲೇ ವಸೂಲು ಮಾಡು ತ್ತಿದ್ದರು. ಕಂಠೀರವ ನರಸರಾಜ ಒಡೆಯರವರ ಕಾಲದಲ್ಲಿ, ಪಟೇಲರು ಜನ ಗಳಿಗೆ ದುರ್ಬೋಧೆಗಳನ್ನು ಮಾಡುತ್ತಾರೆಂದು ತಿಳಿಯಬಂದದ್ದರಿಂದ, ಕಂಠೀ ರವ ನರಸರಾಜ ಒಡೆಯರವರು ಅವರ ಇನಾಮುಗಳನ್ನೆಲ್ಲಾ ೧೬೫೯ರಲ್ಲಿ ಸರ್ಕಾರಕ್ಕೆ ಸೇರಿಸಿಕೊಂಡರು. ೧೬೭೨ನೇ ಇಸವಿಯಲ್ಲಿ ಚಿಕ್ಕದೇವರಾಜ ಒಡೆಯರವರು ಬಾರಾಬಲೂತಿ ರುಸುಮುಗಳನ್ನು ಏರ್ಪಾಡು ಮಾಡಿದಾಗ ಈ ಜನಗಳಿಗೆ ಅವರ ಮಾನ್ಯಗಳಲ್ಲಿ ಸ್ವಲ್ಪ ಕೊಟ್ಟರು. ಇವರ ಪುತ್ರ ರಾದ ಕಂಠೀರವರಾಜರು ಗ್ರಾಮದ ಇತರ ನೌಕರರಿಗೆ ಅವರ ಇನಾಮು ಗಳನ್ನು ಬಿಟ್ಟುಕೊಟ್ಟು, ಪಟೇಲರ ಇನಾಮುಗಳನ್ನು ಮಾತ್ರ ಸರ್ಕಾರಕ್ಕೆ ಸೇರಿಸಿಕೊಂಡರು. ಹೈದರಲ್ಲಿಯವರ ರಾಜ್ಯಭಾರದಲ್ಲಿ, ತುಂಟರಿಗೂ ಒಳ್ಳೇ ಯವರಿಗೂ ಅವರವರ ಯೋಗ್ಯತಾನುಸಾರವಾಗಿ ಅಧಿಕಾರಗಳನ್ನು ಕೊಟ್ಟ ದ್ದರಿಂದಲೂ, ಅವರ ಬುದ್ಧಿಬಲದಿಂದಲೂ, ಅವರ ಹೆಸರಿನ ಭಯದಿಂ ದಲೂ, ಹಂಗಾಮು ಮಾಡುವವರು ಯಾರೂ ಇರಲಿಲ್ಲ. ಪಟೇಲರಿಗೆ ಇನಾ ಮುಗಳನ್ನು ಪುನಃ ಕೊಡುವದಕ್ಕೆ ಇವರು ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಅವರೆ ಇತರ ಬಾರಾಬಲೂತಿಗಳಿಗೆ ಅವರ ಸರ್ವಮಾನ್ಯ ಗಳನ್ನು ಸಲ್ಲಿಸಿ, ಅವರನ್ನೆಲ್ಲಾ ಅಧೀನದಲ್ಲಿ ಇಟ್ಟುಕೊಂಡಿದ್ದರು. ಇವರ ಕಾಲದಲ್ಲಿ ಎಲ್ಲಾ ಗ್ರಾಮಗಳ ಸುತ್ತಲೂ ಗೋಡೆಗಳನ್ನೂ ಬೇಲಿಗಳನ್ನೂ ಹಾಕಿಸಿ ಭದ್ರಪಡಿಸಿದರು. ಎಲ್ಲೆಲ್ಲಿಯೂ ಬಲವಾದ ಸೈನ್ಯವನ್ನು ಇಡುತ್ತಲೂ, ತಂಟೆ ಮಾಡಿದವರಿಗೆ ಚನ್ನಾಗಿ ಶಿಕ್ಷೆ ಮಾಡುತ್ತಲೂ ಬಂದದ್ದರಿಂದ, ಎಲ್ಲೆ ಲ್ಲಿಯೂ ಸಮಾಧಾನಕ್ಕೆ ಸ್ವಲ್ಪವೂ ಲೋಪವಿಲ್ಲದೆ ಇತ್ತು. ಟೀಪೂಸುಲ್ತಾ ನನ ಕಾಲದಲ್ಲಿ ಅನೇಕ ಪಟೇಲರನ್ನೂ ಉಂಬಳಿದಾರರನ್ನೂ ಅಮರಗಾರ ರನ್ನೂ ತೆಗೆದುಹಾಕಿದ್ದರಿಂದಲೂ, ಅವರ ಇನಾಮುಗಳಿಗೆಲ್ಲಾ ಕಂದಾಯ ಹಾಕಿದ್ದರಿಂದಲೂ, ಪೋಲೀಸ್ ಏರ್ಪಾಡಿನಲ್ಲಿ ಸ್ವಲ್ಪ ತಹಬಂದಿಯು ತಪ್ಪಿತು. ಹೀಗಿದ್ದರೂ ಇವನ ಸೈನ್ಯವನ್ನೂ ಕ್ರೂರ ಸ್ವಭಾವವನ್ನೂ ನೋಡಿ, ಜನ ಗಳು ತಹಬಂದಿಯಲ್ಲಿಯೇ ಇದ್ದರು. ಟೀಪೂಸುಲ್ತಾನನಿಗೆ ನಗರದಲ್ಲಿ ಈ ಅಧಿಕಾರಿಗಳೆಲ್ಲರನ್ನೂ ತೆಗೆದುಹಾಕುವದಕ್ಕೆ ಆಗಲಿಲ್ಲ. ಮಂಜರಾ ಬಾದಿನಲ್ಲಿ ಒಬ್ಬರನ್ನೂ ತೆಗೆಯಲು ಆಗಲಿಲ್ಲ. ಕಡೆಗೆ ಜನಗಳ ಹತೋಟಿ

ತಪ್ಪುವದೆಂಬ ಭಯ ಹುಟ್ಟಿ, ಟೀಪುವು ಪಟೇಲರಿಗೆ ಅವರವರ ಇನಾಮು ಗಳನ್ನು ಕೊಡಬೇಕೆಂದು ಯೋಚಿಸುತ್ತಿದ್ದನು. ಇದಕ್ಕಾಗಿ ಪಟೇಲ ರನ್ನು ಕರೆಯಿಸಿ, ಅವರ ಫಿರ್ಯಾದುಗಳನ್ನು ಕೇಳಿ, ಅವರ ಸರ್ವಮಾನ್ಯ ಗಳನ್ನು ಪುನಃ ಅವರಿಗೆ ಕೊಡುವಂತೆ ಬರಿಸಿ, ತಾಲ್ಲೂಕಿಗೆ ಸಹ ಆ ಹುಕುಮನ್ನು ಕಳುಹಿಸಿದನು. ಆದರೂ, ಆ ಹುಕುಮುಗಳು ಜಾರಿ ಯಾಗಲಿಲ್ಲ. ಪೂರ್ಣಯ್ಯನವರ ಕಾಲದಲ್ಲಿ ಟೀಪುವಿನ ಸೈನ್ಯದಲ್ಲಿ ಆರಿಸಿ ತೆಗೆದ ಕಂದಾಚಾರದವರನ್ನು ಪೋಲೀಸ್ ಕೆಲಸಗಳಿಗಾಗಿ ನೇಮಿಸಿದ್ದರು. ಇವರ ಮತ್ತು ಇಂಗ್ಲಿಷ್ ಸೋಲ್ಜರುಗಳ ಜಾಗರೂಕತೆಯಿಂದ ಈ ದೇಶವು ತಹಬಂದಿಗೆ ಬಂತು. ಪಟೇಲರ ಪೂರ್ವದ ಇನಾಮುಗಳು ಸರ್ಕಾರಕ್ಕೆ ಸೇರಿಹೋಗಿದ್ದರೂ, ಸಿವಾಯಿ ಜಮಾ ಲೆಕ್ಕಗಳಲ್ಲಿ ಇಂತಿಂಥಾ ಇನಾಮುಗಳು ಇಂತಿಂಥಾ ಪಟೇಲರಿಗೆ ಸೇರಿದ್ದೆಂದು ನಿಷ್ಕರ್ಷೆಯಾಗುತ್ತಿತ್ತು. ಪಟೇಲರು ಈ ಲೆಕ್ಕದ ಬಲದಿಂದ ಮುಂದೆ ಯಾವಾಗಲಾದರೂ ಇನಾಮು ಗಳನ್ನು ಪಡೆಯಬಹುದೆಂದು ಆಶೆಯುಳ್ಳವರಾಗಿದ್ದರು. ೧೮೦೦ನೇ ಇಸವಿಯಲ್ಲಿ ಪೂರ್ಣಯ್ಯನವರು ಈ ಸರ್ವಮಾನ್ಯಗಳ ಉತ್ಪತ್ತಿಯ ನ್ನೆಲ್ಲಾ ಸಂಸ್ಥಾನದ ಉತ್ಪತ್ತಿಗೆ ಸೇರಿಸಿದ್ದಲ್ಲದೆ, ಟೀಪುವಿನ ಕಾಲದಲ್ಲಿ ಯಾರಯಾರ ಸರ್ವಮಾನ್ಯಗಳು ಸರ್ಕಾರಕ್ಕೆ ಸೇರಿರಲಿಲ್ಲವೋ ಅವು ಗಳನ್ನೂ ಸೇರಿಸಿದರು ; ೬೩ ಸತ್ರಗಳನ್ನು ಹಾಕಿಸಿ ಅವುಗಳಲ್ಲಿ ಮಾರ್ಗ ಸ್ಥರಿಗೆ ಭೋಜನಾದಿಗಳು ನಡೆಯುವಂತೆ ಏರ್ಪಾಡುಮಾಡಿದರು. ರಾಜ ಧಾನಿಯಲ್ಲಿ ಬಾರ್ ಸಿಪಾಯಿಗಳೇ ಪೋಲೀಸ ಕೆಲಸ ಮಾಡುತ್ತಿದ್ದರು. ಇವರು ಈ ಕೆಲಸವನ್ನು ಸರಿಯಾಗಿ ನೋಡುತ್ತಿರಲಿಲ್ಲ.

ಮೈಸೂರು ಕಮಿಷನ್.—೧೮೩೧ನೇ ಇಸವಿ ಅಕ್ಟೋಬರು ೧೯ನೇ ತಾರೀ ಖಿನಲ್ಲಿ ಬ್ರಿಟಿಷ್ ಸರ್ಕಾರದವರು ಈ ಮೈಸೂರು ರಾಜ್ಯವನ್ನು ಸಮಾಧಾನಕ್ಕೆ ತರುವದಕ್ಕೋಸ್ಕರ ಇಲ್ಲಿನ ರಾಜ್ಯಭಾರವನ್ನು ತಾವೇ ವಹಿಸಿದರು. ಇವರು ರಾಜ್ಯ ಪರಿಪಾಲನೆಗೆ ಪೂರ್ವದಲ್ಲಿ ಧೊರೆಗಳು ಮಾಡಿದ್ದ ನಿಬಂಧನೆಗಳನ್ನೇ ಇಟ್ಟುಕೊಂಡರು. ಆದರೆ ಆ ನಿಬಂಧನೆಗಳಿಂದ ಆಗುತ್ತಿದ್ದ ಕೇಡುಗಳನ್ನು ತಪ್ಪಿಸುವದಕ್ಕೂ, ವ್ಯಾಪಾರವು ವೃದ್ಧಿಯಾಗುವದಕ್ಕೆ ಇದ್ದ ಪ್ರತಿಬಂಧಕ ಗಳನ್ನು ನಿವಾರಣೆಮಾಡುವದಕ್ಕೂ, ವ್ಯವಸಾಯವ್ಯಾಪಾರಾದಿಗಳಿಂದ ಜೀವನ

ಮಾಡತಕ್ಕ ಜನಗಳಿಂದ ದುರ್ಮಾರ್ಗರಾದ ಸರ್ಕಾರದ ಅಧಿಕಾರಿಗಳು ತೆಗೆದು ಕೊಳ್ಳುತ್ತಿದ್ದ ಸುಲಿಗೆಯನ್ನು ತಪ್ಪಿಸುವದಕ್ಕೂ, ನ್ಯಾಯವಿಮರ್ಶೆಯ ವಿಷಯದಲ್ಲಿ ಲಂಚ ತೆಗೆದುಕೊಳ್ಳುವದು ಮೊದಲಾದ ದ್ರೋಹಗಳು ನಡೆಯದಂತೆ ಮಾಡುವವದಕ್ಕೂ, ದೇಶದಲ್ಲಿ ಹುಟ್ಟುವಳಿಯನ್ನು ಹೆಚ್ಚು ಮಾಡುವದಕ್ಕೂ, ತಕ್ಕ ಏರ್ಪಾಡುಗಳನ್ನು ಮಾಡಿದರು. ಆಗ ದೇಶಕ್ಕೆ ಬಹಳ ಸಾಲವಿತ್ತು. ಪೋಗದೀ ಹಣವೂ ಸೈನ್ಯದ ಮತ್ತು ಬೇರೆ ಶಿಬ್ಬಂದೀಜನಗಳ ಸಂಬಳಗಳೂ ಬಾಕಿಯುಲ್ಲಿದ್ದವು. ಆದಕಾರಣ ದೇಶದ ಹುಟ್ಟುವಳಿಯ ವಿಷಯದಲ್ಲಿ ಬಹಳ ಕಟ್ಟುನಿಟ್ಟಾದ ನಿಬಂಧನೆಗಳನ್ನು ಮಾಡಿದ್ದರು.

ಲಾರ್ಡ್ ವಿಲಿಯಮ್ ಬೆಂಟಿಂಕರವರ ಆಜ್ಞೆಯ ಮೇರೆಗೆ ಮೈಸೂರಿನಲ್ಲಿ ಪ್ರತಿಒಬ್ಬ ರೈತನಿಂದಲೂ ಸರ್ಕಾರದವರೇ ಕಂದಾಯ ವಸೂಲು ಮಾಡಿ ಕೊಳ್ಳತಕ್ಕದ್ದೆಂದು ಏರ್ಪಾಡಾಯಿತು. ಸ್ವಲ್ಪ ದಿವಸಗಳಲ್ಲಿಯೇ ಹುಟ್ಟುವಳಿಯು ಪೂರ್ಣಯ್ಯನವರ ಕಾಲದಲ್ಲಾಗುತ್ತಿದ್ದ ಮಟ್ಟಿಗೆ ಬಂತು; ಆದರೆ ಸರ್ಕಾರದ ಅಧಿಕಾರಿಗಳ ಮೇಲೆಲ್ಲಾ ಮೇಲು ವಿಚಾರಣೆಯು ಬಹಳ ಚನ್ನಾಗಿದ್ದದ್ದರಿಂದ, ದೇಶದ ಹುಟ್ಟುವಳಿಯನ್ನು ಮಾಡತಕ್ಕ ಜನಗಳಿಗೆ ಸೌಲಭ್ಯವು ಹೆಚ್ಚಾಗಿಯೂ, ಸುಲಿಗೆಯು ಕಡಮೆಯಾಗಿಯೂ ಇತ್ತು. ಇಂಗ್ಲಿಷಿನವರ ಅಧಿಕಾರದಲ್ಲಿ, ಹೆಚ್ಚು ಕಂದಾಯವಿದ್ದವರಿಗೆಲ್ಲಾ ಕಂದಾಯವು ಕಡಮೆಯಾಯಿತು; ಪೈರು ಕಟಾವಾದ ಮೇಲೆ ಕಂದಾಯ ಕೊಡಬಹುದೆಂದು ಏರ್ಪಾಡು ಮಾಡಿದ್ದರಿಂದಲೂ, ಕಂದಾಯವನ್ನು ಒಂದೇ ಸಾರಿ ಕೊಡುವದಕ್ಕೆ ಬದಲಾಗಿ ೪—೫ ಕಿಸ್ತಾಗಿ ಕೊಡಬಹುದೆಂದು ಏರ್ಪಾಡು ಮಾಡಿದ್ದರಿಂದಲೂ, ರೈತರಿಗೆ ಬಹಳ ಸೌಲಭ್ಯ ವುಂಟಾಯಿತು. ಇದಲ್ಲದೆ, ಕಂದಾಯ ಕೊಡುವದಕ್ಕೋಸ್ಕರ ಮಿತಿ ಯಿಲ್ಲದಷ್ಟು ಬಡ್ಡಿಯನ್ನು ಕೊಟ್ಟು ಸಾಲಾ ತೆಗೆಯುವದು, ಸರ್ಕಾರದ ಉದ್ಯೋಗಸ್ಥರು ಕಂದಾಯವನ್ನು ಕ್ಲುಪ್ತ ಮಾಡುವದಕ್ಕೋಸ್ಕರ ಪೈರನ್ನು ಪರೀಕ್ಷೆ ಮಾಡುತ್ತೇವೆಂದು ಆಗಾಗ್ಯೆ ಬಂದು ಸುಲಿಗೆ ಮಾಡಿಕೊಳ್ಳುವದು, ಮೊದಲಾದ ಅನೇಕ ಕಷ್ಟಗಳು ರೈತರಿಗೆ ತಪ್ಪಿದವು. ಈ ಏರ್ಪಾಡುಗಳಿಂದ ರೈತರಿಗೆ ವಿಶೇಷ ಉಪಕಾರವಾಯಿತು; ಆದರೆ ಇವರಿಗೆ ಸಾಲ ಕೊಟ್ಟು ಇವರು ಮಾಡಿದ ಉತ್ಪತ್ತಿಯಲ್ಲಿ ಜೀವನಕ್ಕಾಗುತ್ತಿದ್ದದನ್ನೆಲ್ಲಾ ಅಸಲಿಗಿಷ್ಟು ಬಡ್ಡಿಗಿಷ್ಟು ಎಂಬದಾಗಿ

ಸುಲಿದುಕೊಳ್ಳುತ್ತಿದ್ದ ಲೇಣೇದಾರರಿಗೂ, ಕಂದಾಯ ಮುಂತಾದವುಗಳನ್ನು ಹಾಕುವದರಲ್ಲಿ ಉಪಕಾರವನ್ನು ಮಾಡುತ್ತೇವೆಂಬದಾಗಿ ಸುಲಿದುಕೊಂಡು ತಿನ್ನುತ್ತಿದ್ದ ಕೆಲವರು ಸರ್ಕಾರದ ನೌಕರರಿಗೂ ಬಹಳ ಸಂಕಟವುಂಟಾಯಿತು.

ಕೆಲವು ಪ್ರದೇಶಗಳಲ್ಲಿ, ಹುಟ್ಟುವಳಿಯಲ್ಲಿ ಸರ್ಕಾರದವರಿಗೆ ಅರ್ಧವೂ ರೈತರಿಗೆ ಅರ್ಧವೂ ಭಾಗವಾಗತಕ್ಕ ಸಂಪ್ರದಾಯವಿತ್ತು. ಇದರಿಂದಲೂ ಸರ್ಕಾರದ ನೌಕರರು ರೈತರಿಂದ ಹಣವನ್ನು ಸುಲಿದುಕೊಳ್ಳುವದಕ್ಕೆ ಬಹಳ ಅವಕಾಶವಿತ್ತು. ಕ್ರಮೇಣ ಕಂದಾಯವು ದವಸರೂಪವಾಗಿ ತೆಗೆದುಕೊಳ್ಳುವ ಪದ್ಧತಿಯು ನಿಂತು, ದ್ರವ್ಯರೂಪವಾಗಿಯೇ ತೆಗೆದುಕೊಳ್ಳತಕ್ಕದ್ದೆಂದು ಏರ್ಪಾಡಾಯಿತು. ಇದರಿಂದ ಸರ್ಕಾರದ ನೌಕರರಿಗೆ ಪೂರ್ವದಂತೆ ವಿಶೇಷವಾಗಿ ಸಂಪಾದನೆಯು ನಡೆಯುವದಕ್ಕಿಲ್ಲದೆ ಹೋಯಿತು. ಒಂದೆರಡು ಕಡೆಯಲ್ಲಿ ಕಂದಾಯವನ್ನು ಧಾನ್ಯರೂಪವಾಗಿ ಕೊಡತಕ್ಕ ಸಂಪ್ರದಾಯವಿದ್ದಾಗ್ಯೂ, ಅಲ್ಲಿಯೂ ಕೂಡ ದವಸವು ರೇಖೆಯಾದ ಕೂಡಲೆ ಅದನ್ನು ಎರಡು ಭಾಗ ಮಾಡಿ, ರೈತನಿಗೆ ಸಲ್ಲಬೇಕಾದದ್ದನ್ನು ಕೊಟ್ಟು, ಉಳಿದದ್ದನ್ನು ಹರಾಜು ಹಾಕುತ್ತಿದ್ದರು. ಹುಲ್ಲನ್ನು ರೈತರಿಗೇ ಬಿಟ್ಟು ಬಿಡುತ್ತಿದ್ದರು. ರೈತರಿಗೆ ಈ ಪ್ರಕಾರ ಸೌಲಭ್ಯವುಂಟಾಗಲು, ತಕ್ಕಾಟಿಯನ್ನು ಸರ್ಕಾರದ ಹಣವು ಸುಲಭವಾಗಿ ವಸೂಲಾಗುತ್ತಾ ಬಂತು. ಸರ್ಕಾರದಿಂದ ಅಪೇಕ್ಷಿಸುವರು ಕೂಡ ಕಡಮೆಯಾಗುತ್ತಾ ಬಂದರು. ಕಂದಾಯವು ಬಾಕಿಬೀಳುತ್ತಿರಲಿಲ್ಲ.

ಭೂಮಿಯ ಕಂದಾಯ.—ದಿವಾನ್ ಪೂರ್ಣಯ್ಯನವರ ಕಾಲದಲ್ಲಿ ಈ ರಾಜ್ಯದ ಭೂಮಿಗಳ ಪೈಮಾಯಿಷಿಯಾಯಿತು. ಆಗ ಈ ರಾಜ್ಯದ ಭೂಮಿಯು ೧೩,೦೬,೮೦೦ ಖಂಡಿಗಳಾಯಿತು. ಇದರಲ್ಲಿ ವ್ಯವಸಾಯಕ್ಕೆ ಯೋಗ್ಯವಾದದ್ದು ೩,೯,೫೪೬ ಖಂಡಿಗಳೆಂಬದಾಗಿಯೂ, ಈಗ ವ್ಯವಸಾಯವಾಗುತ್ತಾ ಇರುವದು ೨,೮೪,೨೩೬ ಖಂಡಿಗಳೆಂಬದಾಗಿಯೂ ಕರ್ನಲ್ ಮ್ಯಾಕಂಜಿಯವರು ಅಂದಾಜು ಮಾಡಿದ್ದಾರೆ. ಈ ಭೂಮಿಗಳೆಲ್ಲಾ ಖುಷ್ಕಿ, ತರಿ, ಬಾಗಾಯತು, ಎಂಬದಾಗಿ ಮೂರು ವಿಧಗಳಾಗಿವೆ. ಖಂಡಗವು

ಬಾವೆಂದು ಸ್ಥಳದಲ್ಲಿ ಒಂದೊಂದು ವಿಧವಾಗಿತ್ತು. ಪೂರ್ಣಯ್ಯನವರ ಕಾಲದಲ್ಲಿ ೧೬೦ ಸೇರಿಗೆ ಒಂದು 'ಕೃಷ್ಣರಾಜಖಂಡಿ' ಎಂಬದಾಗಿ ಗೊತ್ತಾಗಿ, ಸರ್ಕಾರದಲ್ಲೆಲ್ಲಾ ಖಂಡಿ ಅಂದರೆ ೧೬೦ಸೇರಿನ ಖಂಡಿ ಎಂಬದಾಗಿ ಗೊತ್ತಾಯಿತು.

ಪ್ರತಿ ಒಂದು ಗ್ರಾಮದಲ್ಲೂ ಅಲ್ಲಿನ ಆಡಳಿತಗಳನ್ನು ನೋಡುವದಕ್ಕೋಸ್ಕರ, ಪಟೇಲರು ಶಾನುಭೋಗರು ತೋಟಿಗಳು ನೀರುಗಂಟಿಗಳು ಮುಂತಾದ ಅಧಿಕಾರಿಗಳನ್ನು ನೇಮಿಸಿದರು. ಇವರಿಗೆ ಅಲ್ಪಸ್ವಲ್ಪ ಸಂಬಳಗಳನ್ನೂ, ಅಥವಾ ಸರ್ವಮಾನ್ಯದ ಭೂಮಿಗಳನ್ನೂ, ಕೆಲವು ಕಡೆಗಳಲ್ಲಿ ಎರಡನ್ನೂ ಕೊಡುತ್ತಿದ್ದರು. ಇವೆಲ್ಲಾ ಹಕ್ಕುದಾರೀಕೆಲಸಗಳಾಗಿದ್ದವು. ಆದ್ದರಿಂದ ಇವರಲ್ಲಿ ಯಾರಾದರೂ ತಪ್ಪಿತಸ್ಥರಾದರೆ, ಸರ್ಕಾರದವರು ಅವರನ್ನು ತೆಗೆದುಹಾಕಿ, ಆ ಕುಟುಂಬದವರಲ್ಲಿಯೇ ಇನ್ನ್ಯಾರನ್ನಾದರೂ ನೇಮಿಸುತ್ತಾ ಬಂದರು. ಈ ಜನಗಳಿಗೂ ಪಂಚಾಂಗದವರಿಗೂ ಕೂಡ ಒಟ್ಟಾಗಿ ಬಾರಾ ಬಲೂತಿಯವರು ಎಂಬ ಹೆಸರು ಸಲ್ಲುತ್ತಿತ್ತು. ಈ ಸಿಬ್ಬಂದೀ ಖರ್ಚಿಗೆ ೧,೪೭,೫೧೭ ರೂಪಾಯಿ ಮುಟ್ಟುತ್ತಿತ್ತು.

ಈ ರಾಜ್ಯದ ಅನೇಕ ಭಾಗಗಳಲ್ಲಿ ಅನೇಕ ಪಾಳ್ಯಗಾರರಿದ್ದರು. ಇವರು, ಶ್ರೀಕೃಷ್ಣರಾಜ ಒಡೆಯರವರು ಸ್ವಂತವಾಗಿ ರಾಜ್ಯಭಾರ ಮಾಡುವಾಗಲೂ, ಮಂತ್ರಿಗಳಾದ ಪೂರ್ಣಯ್ಯನವರ ಕಾಲದಲ್ಲಿಯೂ, ತಮ್ಮ ಪಾಳ್ಯಗಳಲ್ಲಿ ನಿರಂಕುಶ ಪ್ರಭುತ್ವವನ್ನು ಮಾಡಿಕೊಂಡಿದ್ದರು. ಇವರು ಸರ್ಕಾರದ ಕಂದಾಯವನ್ನೂ ಕೂಡ ಕೊಡುವದಿಲ್ಲ ವೆಂಬದಾಗಿ ಹೇಳಿ, ತಮ್ಮ ಕೈಕೆಳಗಿರತಕ್ಕ ಜನಗಳನ್ನೆಲ್ಲಾ ಗುಂಪು ಕಟ್ಟಿಕೊಂಡು, ನಾನಾವಿಧವಾದ ಹಂಗಾಮುಗಳನ್ನು ಮಾಡುತ್ತಿದ್ದರು. ಸರ್ಕಾರದವರೂ ಸಾಧ್ಯವಾದ ಕಾಲದಲ್ಲಿ ಅವರನ್ನು ಶಿಕ್ಷಿಸಿ ತಮ್ಮ ಸ್ವಾಧೀನಕ್ಕೆ ತೆಗೆದು ಕೊಳ್ಳುತ್ತಲೂ, ಇತರ ಕಾಲದಲ್ಲಿ ಅವರೊಡನೆ ಸಮಾಧಾನ ಮಾಡಿಕೊಳ್ಳುತ್ತಲೂ ಇದ್ದರು.

ಇಂಗ್ಲಿಷ್ ಜನಗಳು ರಾಜ್ಯವನ್ನು ವಹಿಸುವದಕ್ಕೆ ಮುಂಚೆ ಸಾಯೆರು ಬಾಬುಗಳನ್ನು ಗುತ್ತಿಗೆಗೆ ಕೊಡುತ್ತಿದ್ದರು. ಎಲ್ಲಾ ಜಿನಿಸಿಗಳಿಗೂ ಸುಂಕವು ಇತ್ತು. ೧೮೫೪ನೇ ಇಸವಿ ಯೊಳಗಾಗಿ ಈ ಸಾಯರು ಇಲಾಖೆಯನ್ನು ಚನ್ನಾಗಿ ಪರೀಕ್ಷಿಸಿ ಪ್ರಜೆಗಳಿಗೆ ಹಿಂಸಾಕರಗಳಾದ ೭೬೯

ಭಾಬುಗಳಲ್ಲಿ ಸುಂಕವನ್ನು ತೆಗೆದುಹಾಕಿ ಬಿಟ್ಟರು. ಈ ಬಾಬಿನಲ್ಲಿಯೇ ಸುಮಾರು ೧೧ ಲಕ್ಷ ರೂಪಾಯಿ ಕಡಮೆ ಹಾಕಿದರು.

ರಾಜ್ಯಭಾರವನ್ನು ಮಾಡುವದಕ್ಕೋಸ್ಕರ ರಾಜ್ಯವನ್ನು ತೆಗೆದುಕೊಂಡ ಕೂಡಲೆ, ಇಂಗ್ಲಿಷ್‌ಸರ್ಕಾರದವರು, ಒಬ್ಬ ಕಮಿಷನರನ್ನೂ ೪ ಜನ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರನ್ನೂ ಗೊತ್ತು ಮಾಡಿದರು. ಇದಲ್ಲದೆ ನ್ಯಾಯ ವಿಮರ್ಶೆಗೋಸ್ಕರ ಒಂದು ಕಮಿಷನರ್ ಕೋರ್ಟೂ, ಒಂದು ಹುಜೂರು ಅದಾಲತ್ತು ಕೋರ್ಟೂ, ೪ ಸೂಪರಿಂಟೆಂಡೆಂಟ್ ಕೋರ್ಟುಗಳೂ, ೮ ಸದರ ಮುನ್ಸೀಫ್ ಕೋರ್ಟುಗಳೂ, ಎರಡು ಟೌನ್ ಮುನ್ಸೀಫ್ ಕೋರ್ಟುಗಳೂ ಏರ್ಪಾಡಾದವು. ಎಲ್ಲಾ ಕೋರ್ಟುಗಳಲ್ಲಿಯೂ, ಜಡ್ಜಿಯವರು ಯೋಗ್ಯರಾದ ಪಂಚಾಯತರನ್ನು ಇಟ್ಟುಕೊಂಡು, ಅವರಲ್ಲಿ ಹೆಚ್ಚು ಜನರ ಅಭಿಪ್ರಾಯದಂತೆ ಫೈಸಲುಮಾಡುತ್ತಿದ್ದರು. ಆಗ ಈಗಿನಂತೆ ಪ್ಲೀಡರುಗಳೂ ವಕೀಲರೂ ಇರಲಿಲ್ಲ. ವಾದಿ ಪ್ರತಿವಾದಿಗಳು ತಮ್ಮ ಮೊಕದ್ದಮೆಯನ್ನು ನಡಿಸುವದಕ್ಕೆ, ತಮಗೆ ಬೇಕಾದವರನ್ನು ಕರೆದು ಕೊಂಡು ಬರುತ್ತಿದ್ದರು.

೧೮೩೪ನೇ ಇಸವಿಯಲ್ಲಿ ದಾವಾದಾಖಲು ಮಾಡತಕ್ಕದ್ದಕ್ಕೆ ಒಂದು ಫೀಗೊತ್ತಾಯಿತು. ಇದರಿಂದ ನಿಜವಾದ ಮೊಕದ್ದಮೆಗಳು ಮಾತ್ರ ಬರುತ್ತಿದ್ದವು. ಅದೇ ಇಸವಿಯ ಕಡೆಯಲ್ಲಿ ಫೀಯನ್ನು ತೆಗೆದು ಹಾಕಿದರು. ಕೂಡಲೆ ನಾನಾವಿಧವಾದ ಸುಳ್ಳುಮೊಕದ್ದಮೆಗಳು ಬರುವದಕ್ಕೆ ಉಪಕ್ರಮವಾಗಿ, ೧೮೩೬ನೇ ಇಸವಿಯಲ್ಲಿ ಸುಮಾರು ೮,೦೦೦ ಮೊಕದ್ದಮೆಗಳ ವರಿಗೂ ಬಾಕಿಯಲ್ಲಿದ್ದವು. ಹೀಗೆ ಸುಳ್ಳುಮೊಕದ್ದಮೆಗಳು ಬರುವದನ್ನು ತಪ್ಪಿಸುವದಕ್ಕೋಸ್ಕರ, ದಾವಾದಾಖಲು ಮಾಡತಕ್ಕವರು ರೂಪಾಯಿಗೆ ಒಂದಾಣೆಯ ಪ್ರಕಾರ ಫೀಯನ್ನು ಕಟ್ಟಬೇಕೆಂಬುದಾಗಿ ಪುನಃ ನಿಬಂಧನೆ ಮಾಡಿದರು.

ಬೆಂಗಳೂರು ಕಂಟೋನ್ಮೆಂಟಿನ ಪೊಲೀಸ್ ಸೂಪರಿಂಟೆಂಡೆಂಟರವರು ತಮ್ಮ ಸರಹದ್ದಿಗೆ ಒಳಪಟ್ಟ ಪ್ರದೇಶಗಳಲ್ಲಿ ನಡೆದ ಲೇವಾದೇವಿಯ ವಿಷಯದಲ್ಲಿ ೧,೫೦೦ ರೂಪಾಯಿ ನೊಳಗಿರತಕ್ಕ ಮೊಕದ್ದಮೆಗಳನ್ನು ಹಿಡಿದು

ಫೈಸಲು ಮಾಡುತ್ತಿದ್ದರು. ಇವರ ಮೇಲೆ ಅಪೀಲ್ ಹಿಡಿಯತಕ್ಕ ಅಧಿಕಾರವು ಕಮಿಷನರ್ ಕೋರ್ಟಿನವರಿಗಿತ್ತು. ಶ್ರೀಮನ್ಮಹಾರಾಜರವರ ಮೇಲೆ ಆಗತಕ್ಕ ಮೊಕದ್ದಮೆಗಳನ್ನು ಅದಾಲತ್ತು ಕೋರ್ಟಿನವರು ಫೈಸಲು ಮಾಡುತ್ತಿದ್ದರು. ಮೇಜಿಸ್ಟ್ರೇಟು ಮೊಕದ್ದಮೆಗಳನ್ನೆಲ್ಲಾ ಅಮಲ್ದಾರರೇ ಫೈಸಲು ಮಾಡುತ್ತಿದ್ದರು. ಇವರಿಗೆ ರೆವಿನ್ಯೂ ಮತ್ತು ಸಿವಲ್ ಕೆಲಸಗಳೂಕೂಡ ಸೇರಿದ್ದವು. ಇವರ ಕೈ ಕೆಳಗೆ ಪೇಷ್ಕಾರರೂ, ಕಿಲ್ಲೇದಾರರೂ, ಶೇಕದಾರರೂ, ಹೋಬಳೀದಾರರೂ, ದಫೇದಾರರೂ, ಕಂದಾಚಾರದ ಜವಾನರೂ ಇದ್ದರು. ಇವರಿಗೆ ೧೨ ಘಂಟೆ ಹೊತ್ತು ಕೋಳಕ್ಕೆ ಹಾಕುವದಕ್ಕೂ ೧೫ ದಿವಸಗಳು ಕೈದು ಮಾಡುವದಕ್ಕೂ ಅಧಿಕಾರವಿತ್ತು. ಶೇಕದಾರರಿಗೂ ಹೋಬಳೀದಾರರಿಗೂ ೨೪ ಘಂಟೆ ಹೊತ್ತು ಕೈದಿನಲ್ಲಿಡತಕ್ಕ ಅಧಿಕಾರವಿತ್ತು. ಆದರೆ ಎಲ್ಲಾ ಮೊಕದ್ದಮೆಗಳಲ್ಲಿಯೂ ಇವರು ಪಂಚಾಯಿತರನ್ನು ಇಟ್ಟುಕೊಂಡು ಫೈಸಲು ಮಾಡಬೇಕೆಂದು ನಿರ್ಬಂಧವಿತ್ತು.

ಸದರ ಮುನಸೀಫ್‌ರವರು ಸೂಪರಿಂಟೆಂಡೆಂಟರವರಿಗೆ ತಮಗೆ ಕಳುಹಿಸಿದ ಮೊಕದ್ದಮೆಗಳಲ್ಲಿ ೭ ವರ್ಷ ಸಜಾ ವಿಧಿಸತಕ್ಕ ಅಧಿಕಾರವಿತ್ತು. ಸೂಪರಿಂಟೆಂಡೆಂಟರವರಿಗೆ, ಅಮಲ್ದಾರರೂ ತಾಲ್ಲೂಕ್ ಅಧಿಕಾರಿಗಳೂ ಮಾಡತಕ್ಕ ಫೈಸಲಿನಮೇಲೆ ಅಪೀಲ್ ಹಿಡಿಯುವ ಅಧಿಕಾರವೂ, ೭ ವರ್ಷ ಸಜಾ ವಿಧಿಸತಕ್ಕ ಅಧಿಕಾರವೂ ಇತ್ತು. ಕಮಿಷರ್ನ ಕೋರ್ಟಿನವರಿಗೆ ಮರಣಾಂತವಾದ ಎಲ್ಲಾ ದಂಡನೆಗಳನ್ನೂ ವಿಧಿಸತಕ್ಕ ಅಧಿಕಾರವಿತ್ತು. ಆದರೆ ಅವರು ವಿಧಿಸತಕ್ಕ ಮರಣ ದಂಡನೆಯು ಇಂಡಿಯಾ ಗವರ್ನಮೆಂಟಿನವರಿಂದ ಮಂಜೂರಾಗಬೇಕೆಂದು ವಿಧಿಯಿತ್ತು. ಬಂಗಳೂರು ಕಂಟೋನ್ಮೆಂಟ್ ಪೊಲೀಸ್ ಸೂಪರಿಂಟೆಂಡೆಂಟರಿಗೆ ೭ ವರ್ಷ ಸಜಾ ವಿಧಿಸತಕ್ಕ ಅಧಿಕಾರವಿತ್ತು. ಇವರು ಮಾಡಿದ ಫೈಸಲುಗಳ ಮೇಲೆ ಅಪೀಲನ್ನು ಹಿಡಿಯತಕ್ಕ ಅಧಿಕಾರವು ಕಮಿಷನರಿಗೆ ಇತ್ತು. ಆ ಕಾಲದಲ್ಲಿ ಪಂಜಿನ ಕಳ್ಳರೇ ಮುಂತಾದವರು ಬಹಳವಾಗಿದ್ದರು. ಆದ್ದರಿಂದ ಜನಗಳು ತಮ್ಮ ಪ್ರಾಣವನ್ನೂ ಆಸ್ತಿಯನ್ನೂ ಸಂರಕ್ಷಿಸಿಕೊಳ್ಳುವದಕ್ಕೋಸ್ಕರ ಯಾವ ಆಯುಧವನ್ನಾದರೂ ಉಪಯೋಗಿಸುವದಕ್ಕೆ ಲೇಸೆನ್ಸ್ ಮುಂತಾದ ಯಾವ ನಿರ್ಬಂಧಗಳೂ ಇರಲಿಲ್ಲ. ಆ ಕಾಲದಲ್ಲಿ ಲಂಬಾಣಿಗರೂ, ಕೊರಮರೂ, ಒಡ್ಡರೂ,

ಕಳ್ಳತನದಿಂದಲೇ ಜೀವಿಸುತ್ತಿದ್ದರು. ಆದ್ದರಿಂದ ತಾಲ್ಲೂಕು ಅಧಿಕಾರಿಗಳು ಮೊದಲಾದ ಸರ್ಕಾರದ ಎಲ್ಲಾ ಉದ್ಯೋಗಸ್ಥರೂ ಅವರಿಂದ ಒಳ್ಳೇ ನಡತೆಗಳಿಗೆ ಮುಚ್ಚಳಿಕೆಗಳನ್ನು ಬರಿಸಿಕೊಂಡು, ಅವರು ಕಳ್ಳತನದಿಂದ ಜೀವನ ಮಾಡುವದನ್ನು ಬಿಡಿಸುವದಕ್ಕೆ ಸಾಧಕವಾದ ಏರ್ಪಾಡುಗಳನ್ನು ಮಾಡಿದರು.

೧೮೫೫ನೇ ಇಸವಿಯಲ್ಲಿ ಆಗಿನ ಗವರ್ನರ್ ಜನರಲ್‌ರಾಗಿದ್ದ ಲಾರ್ಡ್ ಡಲ್‌ಹೌಸಿಯವರು ನೀಲಗಿರಿಯಿಂದ ಮೈಸೂರು ಮಾರ್ಗವಾಗಿ ಬಂದು, ಈ ದೇಶದ ರಾಜ್ಯಭಾರ ಕ್ರಮಗಳನ್ನೆಲ್ಲಾ ನೋಡಿಕೊಂಡು ಕಲ್ಕತ್ತೆಗೆ ದಯೆ ಮಾಡಿಸಿದರು. ಮೈಸೂರು ಕಮಿಾಷನರಾಗಿದ್ದ ಸರ್ ಮಾರ್ಕ್ ಕಬ್ಬನ್ ರವರು ಈದೇಶದ ಆಡಳಿತಗಳನ್ನು ವಹಿಸಿದ ಕಾಲದಲ್ಲಿ ಪ್ರಜೆಗಳಿಗೆ ಸರ್ಕಾರದವರಿಂದ ಅನೇಕವಾದ ಕಷ್ಟಗಳಿದ್ದವು. ಸಾಯರು ಮುಂತಾದ ಸುಂಕಗಳು ಎಲ್ಲಾ ಬಾಬುಗಳಲ್ಲಿಯೂ ಇದ್ದವು. ದೇಶವು ಬಹಳವಾಗಿ ತಹಬಂದಿ ತಪ್ಪಿತ್ತು. ಆದ್ಯಂತ ಹುಟ್ಟುವಳಿಯು ೪೪ ಲಕ್ಷ ರೂಪಾಯಿ ಆಗುತ್ತಿತ್ತು. ಇವರು ರಾಜ್ಯಭಾರವನ್ನು ವಹಿಸಿದ ೨೫ ವರ್ಷಗಳೊಳಗಾಗಿ ದೇಶವು ಸಂಪೂರ್ಣವಾಗಿ ತಹಬಂದಿಗೆ ಬಂತು. ರೈತರೇ ಮೊದಲಾದ ಎಲ್ಲಾ ಪ್ರಜೆಗಳಿಗೂ ಅನೇಕ ವಿಧವಾದ ಸುಲಿಗೆಗಳು ತಪ್ಪಿ ಪುಷ್ಟರಾಗುತ್ತಾ ಬಂದರು. ನ್ಯಾಯ ವಿಮರ್ಶೆಯು ಧರ್ಮವಾಗಿ ನಡೆಯುತ್ತಾ ಬಂತು. ಕಳ್ಳರು ಮುಂತಾದವರೆಲ್ಲಾ ಬೇರೆಬೇರೆ ಉದ್ಯೋಗಗಳಲ್ಲಿ ಸೇರಿ ತಮ್ಮ ದುರ್ಮಾರ್ಗಗಳನ್ನು ಬಿಡುತ್ತಾ ಬಂದರು. ಎಷ್ಟು ಬಾಬುಗಳಲ್ಲಿ ಸುಂಕ ಮುಂತಾದದ್ದನ್ನು ಕಡಮೆ ಹಾಕಿದರೂ, ವ್ಯವಸಾಯ ವ್ಯಾಪಾರಗಳು ಹೆಚ್ಚಿ ೪೪ ಲಕ್ಷ ರೂಪಾಯಿ ಉತ್ಪತ್ತಿಯಾಗುತ್ತಿದ್ದದ್ದು, ೮೨ ಲಕ್ಷದ ವರೆಗೂ ಉತ್ಪತ್ತಿಯಾಗುವದೇ ಪ್ರಯಾಸವಾಯಿತು. ಇವುಗಳನ್ನೆಲ್ಲಾ ನೋಡಿ ಲಾರ್ಡ್ ಡಲ್‌ಹೌಸಿಯವರು ಸಂತುಷ್ಟರಾಗಿ ಹೊರಟುಹೋದರು.

ಸರ್ ಮಾರ್ಕ್ ಕಬ್ಬನ್ ಸಾಹೇಬರವರ ರಾಜ್ಯಭಾರದಿಂದ ಹೆಚ್ಚು ಉತ್ಪತ್ತಿಯಾಗಿ ದೇಶದ ಸಾಲವೂ ತೀರಿದ್ದಲ್ಲದೆ, ಸರ್ಕಾರದಲ್ಲಿಯೂ ಬಹಳವಾಗಿ ದ್ರವ್ಯವು ಉಳಿಯುತ್ತಾ ಬಂತು. ೧೮೫೫ನೇ ಇಸವಿಯಲ್ಲಿ ಕಮಿಾಷ್ನ

ರವರು ಮಾಡತಕ್ಕ ಕೆಲಸಗಳು ಬಹಳ ಹೆಚ್ಚಿದ್ದರಿಂದ, ಅವರಿಗೆ ಸಹಾಯಾರ್ಥವಾಗಿ ಒಬ್ಬ ಜುಡಿಷಲ್ ಕಮಿಷನರನ್ನು ನೇಮಿಸಿದರು. ಅದೇವರ್ಷ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಎಂಬ ಒಂದು ಮರಾಮತ್ತು ಇಲಾಖೆಯೂ ಒಂದು ವಿದ್ಯಾಭ್ಯಾಸದ ಇಲಾಖೆಯೂ ಏರ್ಪಾಟಾದವು. ೧೮೫೭ನೇ ಇಸವಿಯಲ್ಲಿ ಬೆಂಗಳೂರು ಕಂಟೋನ್‌ಮೆಂಟಿನಲ್ಲಿ ಒಂದು ಸದರದಾಲತ್ ಕೋರ್ಟನ್ನು ಸ್ಥಾಪಿಸಿ, ಅಲ್ಲಿ ಪೋಲೀಸ್ ಸೂಪರಿಂಟೆಂಡೆಂಟರವರು ಫೈಸಲು ಮಾಡುತ್ತಿದ್ದ ಮೊಕದ್ದಮೆಗಳನ್ನು ಈಕೋರ್ಟಿನವರು ವಿಚಾರಣೆಮಾಡುವಂತೆ ವಿಧಿಸಿದರು. ೧೮೬೦ನೇ ಇಸವಿಯಲ್ಲಿ ಯೂರೋಪಿಯನ್ ಅಸಿಸ್ಟೆಂಟರೆಂಬದಾಗಿ ಕೆಲವರನ್ನು ನೇಮಕಮಾಡಿದರು. ೧೮೬೧ನೇ ಇಸವಿಯಲ್ಲಿ ಹೆಡ್‌ಕೊತ್ವಾಲರಿಗೆ, ಸಂಬಳದ ಕೆಲಸವನ್ನೂ ಅಮಲ್ದಾರರಿಗೆ ಸಮವಾದ ಅಧಿಕಾರವನ್ನೂ ಕೊಟ್ಟರು. ಮೊಹತರಫ್ ಮುಂತಾದ ಅನೇಕ ಚಿಲ್ಲರೇ ಬಾಬುಗಳಲ್ಲಿ ಕಂದಾಯವನ್ನು ಕಡಮೆಹಾಕಿ ಜನಗಳಿಗೆ ತೊಂದರೆ ಇಲ್ಲದಂತೆ ಅನೇಕ ಸೌಲಭ್ಯಗಳನ್ನುಂಟುಮಾಡಿದರು. ಈ ರಾಜ್ಯಭಾರವು ಸಾಧಾರಣವಾಗಿ ನೇಟಿವ್ ರಾಜ್ಯಭಾರವಾಗಿರಬೇಕೆಂಬ ತಾತ್ಪರ್ಯದಿಂದಲೇ, ಸರ್ ಮಾರ್ಕ್ ಕಬ್ಬನ್ ಸಾಹೇಬರವರು, ಬಹು ಸ್ವಲ್ಪ ಜನ ಯೂರೋಪಿಯನ್ ಅಧಿಕಾರಿಗಳನ್ನಿಟ್ಟುಕೊಂಡು, ಸಾಧ್ಯವಾದಮಟ್ಟಿಗೂ ಚೆನ್ನಾಗಿ ರಾಜ್ಯಭಾರವನ್ನು ನಡಿಸುತ್ತಿದ್ದರು. ಇವರ ರಾಜ್ಯಭಾರದಲ್ಲಿ ಈ ದೇಶವೂ ಜನಗಳೂ ಹುಟ್ಟುವಳಿಯೂ ವೃದ್ಧಿಯಾಗುತ್ತಾ ಬಂದವು. ಇವರ ರಾಜ್ಯಭಾರದ ಅಂತ್ಯಭಾಗದಲ್ಲೇ ಒಂದು ಕೋಟಿ ರೂಪಾಯಿನವರಿಗೂ ಉತ್ಪತ್ತಿಯಾಗುತ್ತಾ ಬಂತು. ಆದರೆ ಮೈಸೂರು ನಿವಾಸಿಗಳಿಗೆ ಇಷ್ಟು ಕ್ಷೇಮವನ್ನು ಕೋರುತ್ತಿದ್ದ ಸರ್ ಮಾರ್ಕ್ ಕಬ್ಬನ್ ಸಾಹೇಬರವರು ವಿಲಾಯತಿಗೆ ದಯಮಾಡಿಸಿದರು. ಇವರಿಗೆ ಬದಲಾಗಿ ಮಿಸ್ಟರ್ ಬೌರಿಂಗ್ ಸಾಹೇಬರವರು ಕಮಿಷನರಾಗಿ ನೇಮಿಸಲ್ಪಟ್ಟರು. ಇವರ ಕಾಲದಲ್ಲಿ ರಾಜ್ಯವು ನಂದೀದುರ್ಗ, ಅಷ್ಟಗ್ರಾಮ, ನಗರ, ಎಂಬ ಮೂರು ಡಿವಿಜನ್‌ಗಳಾಗಿ ವಿಭಾಗಿಸಲ್ಪಟ್ಟಿತು. ಇವುಗಳಲ್ಲಿ ನಂದಿದುರ್ಗಕ್ಕೆ ಬೆಂಗಳೂರು, ಕೋಲಾರ, ತುಮಕೂರುಗಳೂ; ಅಷ್ಟಗ್ರಾಮಕ್ಕೆ ಮೈಸೂರು ಹಾಸನಗಳೂ; ನಗರಕ್ಕೆ ಕಡೂರು, ಚಿತ್ರದುರ್ಗ ಶಿವಮೊಗ್ಗಗಳೂ ಸೇರಿದ್ದವು. ಇವರ ಕಾಲದಲ್ಲಿ ನ್ಯಾಯವಿಮರ್ಶೆಗೋಸ್ಕರ

ಒಬ್ಬ ಜುಡಿಷಲ್ ಕಮಿಷನರನ್ನೂ, ಮೂರುಜನ ಸೂಪರಿಂಟೆಂಡೆಂಟರನ್ನೂ, ಎಂಟುಜನ ಡಿಪ್ಟೀ ಸೂಪರ್ರಿಂಟೆಂಡೆಂಟರನ್ನೂ, ಇಬ್ಬರು ಸ್ಮಾಲ್‌ಕಾಜು ಕೋರ್ಟು ಜಡ್ಜಿಗಳನ್ನೂ, ಹತ್ತುಜನ ಯೂರೋಪಿಯನ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರನ್ನೂ ೧೫ ಜನ ನೇಟಿವ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರನ್ನೂ ನೇಮಿಸಿದರು. ಈ ಎಲ್ಲಾ ಅಧಿಕಾರಿಗಳಿಗೂ, ಧರ್ಮದೃಷ್ಟಿಯಿಂದ ಕೆಲಸಮಾಡಲೆಂಬದಾಗಿ ಸಂಬಳಗಳನ್ನು ಹೆಚ್ಚಿಸಿದರು. ಸೈನ್ಯ ಕಂದಾಚಾರ ಮುಂತಾದ ಎಲ್ಲಾ ಇಲಾಖೆಗಳಲ್ಲೂ ಜನಗಳಿಗೆ ಸಂಬಳಗಳು ಹೆಚ್ಚಾದವು.

೧೮೩೧ನೇ ಇಸವಿಯಲ್ಲಿ ಇಂಗ್ಲಿಷ್ ಜನಗಳು ಮೈಸೂರು ರಾಜ್ಯವನ್ನು ಸ್ವಾಧೀನಪಡಿಸಿಕೊಂಡಾಗ ಈ ದೇಶದ ರಾಜ್ಯಭಾರವು ತಹಬಂದಿ ತಪ್ಪಿತ್ತು. ಖಜಾನೆಗಳಲ್ಲಿ ದ್ರವ್ಯವು ಇರಲಿಲ್ಲ. ಶಿಪಾಯಿಗಳಿಗೂ ಎಲ್ಲಾ ಇಲಾಖೆಗಳ ಶಿಬ್ಬಂದೀ ಜನಗಳಿಗೂ ಮಹಾರಾಜರವರ ಸಾಲಕೊಟ್ಟೀಸ್ಕರ ಕೊಡುವದಕ್ಕೋಸ್ಕರವೂ, ಬ್ರಿಟಿಷ್ ಕಮಿಷನರವರು ೮೩॥ ಲಕ್ಷ ರೂಪಾಯಿಗಳನ್ನು ಸಾಲಮಾಡಿದರು. ಇಷ್ಟು ಸಾಲಮಾಡಿದರೂ ಶಿಬ್ಬಂದೀ ಜನಗಳ ಬಾಕೀ ಸಂಬಳಗಳು ಪೂರ್ಣವಾಗಿ ಪಾವತಿಯಾಗುವದಕ್ಕಿಲ್ಲದೆ ಹೋಯಿತು. ಧೊರೆಗಳವರ ಸಾಲಗಳು ಇಷ್ಟೇ ಎಂಬದಾಗಿ ನಿಷ್ಕರ್ಷೆ ಮಾಡುವದಕ್ಕೋಸ್ಕರ ಜೆ. ಬಿ. ಗ್ರ್ಯಾಡ್ ಸಾಹೇಬರವರು ನೇಮಿಸಲ್ಪಟ್ಟರು.

ಇಂಗ್ಲೀಷ್ ಸರ್ಕಾರದವರು ೧೮೪೪ರಿಂದ ೧೮೫೦ರ ವರಿಗೂ ಧೊರೆಗಳ ಸಾಲಕ್ಕಾಗಿ ೩,೪೮,೫೦೦ ರೂಪಾಯಿ ಕೊಟ್ಟರು. ಇದಲ್ಲದೆ ಅರಮನೇ ವೆಚ್ಚಕ್ಕಾಗಿ ವರ್ಷಕ್ಕೆ ೩॥ ಲಕ್ಷರೂಪಾಯನ್ನೂ ಪಂಚಮ ಹಿಸ್ಸೇ ಬಾಬಿನಲ್ಲಿ ೭॥ ಲಕ್ಷ ರೂಪಾಯನ್ನೂ ಅಂತು ೧೧ ಲಕ್ಷ ರೂಪಾಯಿ ಕೊಡುತ್ತಿದ್ದರು. ೧೮೬೩ನೇ ಇಸವಿಯಲ್ಲಿ ಧೊರೆಗಳಿಗೆ ಪುನಃ ೫೪॥ ಲಕ್ಷ ರೂಪಾಯಿ ಸಾಲವಾಗಿದೆಯೆಂಬದಾಗಿ ತಿಳಿಯಬಂತು. ಇಂಗ್ಲಿಷ್ ಸರ್ಕಾರದವರು ಇದರ ವಿಚಾರಣೆಗೋಸ್ಕರ ಕರ್ನಲ್ ಎಲಿಯಟ್ ಸಾಹೇಬರವರನ್ನೂ ಡಾಕ್ಟರ್ ಕ್ಯಾಂಬೆಲ್‌ಸಾಹೇಬರವರನ್ನೂ ನೇಮಿಸಿದರು. ಈ ಲೆಕ್ಕಾಚಾರವು ಫೈಸಲಾದಕೂಡಲೆ, ಅದಕ್ಕಾಗಿ ೭೬,೯೦,೦೦೦ರೂಪಾಯಿಗಳನ್ನು ಕೊಟ್ಟರು. ೬೪ನೇ ಇಸವಿಯಿಂದ ೬೮ನೇ ಇಸವಿಯ ವರಿಗೂ ಧೊರೆಗಳು ಪುನಃ ಸಾಲ

ಮಾಡಿದ್ದರು. ಇದಕ್ಕಾಗಿ ಪುನಃ ೧೨,೩೬,೦೦೦ ರೂಪಾಯಿಗಳನ್ನು ಕೊಟ್ಟರು. ಹೀಗೆ ಶಿಬ್ಬಂದೀ ವೆಚ್ಚಗಳಿಗೆ ಸಾಲದೆ ಇದ್ದದ್ದನ್ನು ಕೊಡುವದಕ್ಕೋಸ್ಕರವೂ, ಧೊರೆಗಳ ಸಾಲವನ್ನು ತೀರಿಸುವದಕ್ಕೋಸ್ಕರವೂ, ಕಮಿಷನರವರು ಆಗಾಗ್ಯೆ ಬ್ರಿಟಿಷ್ ಸರ್ಕಾರದಿಂದ ಸಾಲವನ್ನು ತೆಗೆಯುತ್ತಾ ಬಂದರು. ಈಸಾಲವು ೧೮೫೬ನೇ ಇಸವಿಗೆ ೫೧,೭೦,೨೯೫ ರೂಪಾಯಿ ಆಯಿತು.

ಮೈಸೂರು ರೆವಿನ್ಯು ಉತ್ಪತ್ತಿಗೆ ಮುಖ್ಯಾಧಾರಭೂತವಾದದ್ದು ಭೂಮಿಯ ಕಂದಾಯ. ತರೀ ಖುಷ್ಕಿ, ಬಾಗಾಯತು ಮುಂತಾದ ಭೂಮಿಗಳಿಂದಲೂ, ಕಾಫೀ ಭೂಮಿಗಳು, ಗಂಧದ ಮರಗಳು, ತೇಗ ಮುಂತಾದವುಗಳು ಬೆಳೆಯತಕ್ಕ ಕಾಡುಗಳಿಂದಲೂ ಆಗತಕ್ಕ ಹುಟ್ಟುವಳಿಯೇ ಬಹಳ ಮುಖ್ಯವಾದದ್ದು. ಇದಲ್ಲದೆ ಪಂಚಬಾಬು, ಸಾಯರು, ಮೊಹತರ್ಫಾ, ಉಪ್ಪು, ಸ್ಟಾಂಪು, ಅಂಚೆ, ಲೋಕಲ್‌ಫಂಡ್, ಮೂನಿಸಿಪಲ್ ಫಂಡ್, ಮುಂತಾದವುಗಳಿಂದ ಹುಟ್ಟುವಳಿಯಾಗುತ್ತಿತ್ತು. ಎಲ್ಲಾ ಇಲಾಖೆಗಳಲ್ಲೂ ಭೂಮಿಯ ಕಂದಾಯದ ವಿಷಯದಲ್ಲಿ ದ್ರೋಹವು ವಿಶೇಷವಾಗಿ ನಡೆಯುತ್ತಿತ್ತು. ಅನೇಕಜನ ರೈತರು ಶಾನುಭೋಗರನ್ನು ಪ್ರಸನ್ನರನ್ನಾಗಿ ಮಾಡಿಕೊಂಡು, ಖಂಡಿಕ್ಕೆ ೩೦—೪೦ ರೂಪಾಯಿಗಳ ಪ್ರಕಾರವಾಗಿ ೫—೬ ಖಂಡಿ ಜಮೀನಿಗೆ ಕಂದಾಯವನ್ನು ಕೊಟ್ಟುಕೊಂಡು, ೧೦೬ ಖಂಡಿ ಜಮೀನುಗಳನ್ನು ೪—೫ ಖಂಡಿಗಳೆಂಬದಾಗಿ ಸರ್ಕಾರದ ಲೆಕ್ಕದಲ್ಲಿ ಬರಿಸಿ, ಅವುಗಳನ್ನು ತಾವೂ ಅನುಭವಿಸಿಕೊಂಡು, ಶಾನುಭೋಗರಿಗೂ ಸಹಾಯ ಮಾಡಿಕೊಂಡಿದ್ದರು. ಈ ರಾಜದ್ರೋಹವನ್ನು ತಪ್ಪಿಸಬೇಕೆಂದು ಪೂರ್ಣಯ್ಯನವರು ಈ ಸಂಸ್ಥಾನದ ಜಮೀನಿನ ಪೈಮಾಯಿಷಿಯನ್ನು ಮಾಡಿಸಿದರು. ಇದರಿಂದಲೂ ಸರ್ಕಾರಕ್ಕೆ ವಿಶೇಷ ಲಾಭವಾಗಲಿಲ್ಲ. ಅನಂತರದಲ್ಲಿ ಬೌರಿಂಗ್ ಸಾಹೇಬರ ಕಾಲದಲ್ಲಿ ಇಂಡಿಯಾ ಗವರ್ನಮೆಂಟಿನವರ ಆಜ್ಞೆಯಿಂದ ರೆವಿನ್ಯೂ ಸರ್ವೆಯಾಯಿತು. ಈ ಸರ್ವೆಯಿಂದ ಆದ ಲಾಭಕ್ಕೂ ಎಲ್ಲಾ ಇಲಾಖೆಗಳಲ್ಲೂ ಜನಗಳಿಗೆ ಆದ ಹೆಚ್ಚು ಸಂಬಳಗಳಿಗೂ ಸರಿಹೋಯಿತು.

ಶ್ರೀಕೃಷ್ಣರಾಜ ಒಡೆಯರವರು ತಮ್ಮ ದೇಶಕ್ಕೆ ಸೇರಿದ ಅತ್ಯುತ್ತಮವಾದ ಗ್ರಾಮ ಭೂಮಿಗಳನ್ನು ತಮ್ಮ ಅಭಿಮಾನಕ್ಕೆ ಪಾತ್ರರಾದ ಜನಗಳಿಗೆ ದಾನ ಮಾಡುತ್ತಾ ಬಂದರು. ಇದಲ್ಲದೆ ಇವರು ರಾಜ್ಯಭಾರವನ್ನು ಹೊಂದುವದಕ್ಕೆ ಮುಂಚೆ ಪೂರ್ಣಯ್ಯನವರ ಕಾಲದಲ್ಲಿಯೂ ಇದೇ ರೀತಿಯಾಗಿ ದಾನಗಳು ನಡೆದವು. ಇದಲ್ಲದೆ ಧೊರೆಗಳು ಇನ್ನೂ ಅನೇಕ ಗ್ರಾಮಗಳನ್ನು ತಮಗೆ ಬೇಕಾದವರಿಗೆ ಶಾಯಂಗುತ್ತಿಗೆಗೆ ಕೊಡುತ್ತಾ ಬಂದರು. ಈಪ್ರಕಾರ ರಾಜ್ಯದ ಅನೇಕ ಭಾಗಗಳಲ್ಲಿ ರಾಜ್ಯದ ಉತ್ಪತ್ತಿಯು ಕಡಮೆಯಾಗುವದಕ್ಕೆ ಉಪಕ್ರಮವಾಯಿತು. ಆಗಾಗ್ಯೆ ಕಮಿಷನರು ಮುಂತಾದವರು ಈ ವಿಷಯದಲ್ಲಿ ಆಕ್ಷೇಪಣೆ ಮಾಡುತ್ತಿದ್ದರು. ಆದರೂ ನಿಲ್ಲಲಿಲ್ಲ. ೧೮೩೧ನೇ ಇಸವಿಯಿಂದ ಈ ಭಾಗವು ಪ್ರಾಯಶಃ ಕಡಮೆಯಾಯಿತು.

೧೮೬೩ನೇ ಇಸವಿಯಲ್ಲಿ ರೆವಿನ್ಯು ಸರ್ವೆಯವರು ಫೈಸಲಾಯಿಷಿ ಮಾಡುವದಕ್ಕೆ ಉಪಕ್ರಮ ಮಾಡಿದರು, ಅದೇ ವರ್ಷದಲ್ಲಿ ಇನಾಮು ಭೂಮಿಗಳನ್ನು ಫೈಸಲಾಯಿಷಿಯಿಂದ ವ್ಯವಸ್ಥೆ ಮಾಡುವದಕ್ಕೋಸ್ಕರ ಒಬ್ಬ ಇನಾಮು ಕಮಿಷನರನ್ನು ನೇಮಿಸಿದರು. ಇವರು ಮಾಡಿದ ಫೈಸಲಿನ ಮೇಲೆ ಯಾವ ಅಪೀಲನ್ನೂ ಸಿವಿಲ್‌ಕೋರ್ಟಿನವರು ಹಿಡಿಯ ಕೂಡದೆಂಬದಾಗಿ ವಿಧಿಸಿದರು. ಮೈಸೂರು ಇನಾಮು ರೂಲಸು ಕೂಡ ೧೮೬೮ನೇ ಇಸವಿಯಲ್ಲಿ ಇಂಡಿಯಾ ಗವರ್ನಮೆಂಟಿನಿಂದ ಸ್ಯಾಂಕ್ಷನ್ ಆಯಿತು. ಈ ರೂಲುಗಳ ತತ್ವವೇನೆಂದರೆ:—

ಶ್ರೀಮನ್ಮಹಾರಾಜರವರು, ಪಾರಂಪರ್ಯವಾಗಿ ಅನುಭವಿಸಬಹುದೆಂಬದಾಗಿ ಇನಾಮುಗಳನ್ನು ಕೊಟ್ಟು, ಅದರಲ್ಲಿ ಕ್ರಯಭೋಗ್ಯ ಮುಂತಾದವುಗಳಿಗೆಲ್ಲಾ ಅಧಿಕಾರವನ್ನು ಕೊಟ್ಟಿದ್ದರೆ, ಅಂಥಾ ಇನಾಮುಗಳನ್ನು ಪಾರಂಪರ್ಯವಾಗಿ ಅನುಭವಿಸತಕ್ಕದ್ದು. ಇನಾಮುದಾರರು ಕ್ರಯಭೋಗ್ಯಗಳನ್ನು ಕೂಡ ಮಾಡಿಕೊಳ್ಳಬಹುದು. ಸನ್ನದಿನಲ್ಲಿ ಕ್ರಯಭೋಗ್ಯಗಳಿಗೆ ಅಧಿಕಾರವನ್ನು ಕೊಡದಿದ್ದ ಪಕ್ಷದಲ್ಲಿ, ಅಂಥಾ ಇನಾಮುದಾರರು ಇನಾಮಿನಲ್ಲಿ ಆಗಬಹುದಾದ ಕಂದಾಯದಲ್ಲಿ ೮ರಲ್ಲಿ ಒಂದುಭಾಗ

ಕ್ವಿಟರೆಂಟನ್ನು ಕೊಟ್ಟು ಅಂಥಾ ಅಧಿಕಾರವನ್ನು ಹೊಂದಬಹುದು; ಆದರೆ ಸತ್ರ, ದೇವಾಲಯ ಮುಂತಾದ ಧರ್ಮ ಕಾರ್ಯಗಳಿಗೋಸ್ಕರ ಕೊಟ್ಟ ಇನಾಮುಗಳನ್ನು, ಎಂದಿಗೂ ಕ್ರಯಭೋಗ್ಯಗಳು ಮಾಡಕೂಡದು. ಅದರೆ ಇನಾಮುಗಳನ್ನು ಕೊಡುವದಕ್ಕೆ ಅಧಿಕಾರವಿಲ್ಲದವರು ಇನಾಮು ಗಳನ್ನು ಕೊಟ್ಟದ್ದು ಇಂಥಾ ಇನಾಮುಗಳ ಅನುಭವವು ೫೦ ವರ್ಷಗಳೊಳಗಾಗಿದ್ದರೆ ಅರ್ಧ ಕಂದಾಯ ಹಾಕತಕ್ಕದ್ದು. ಐವತ್ತು ವರ್ಷಗಳ ಮೇಲಾಗಿದ್ದರೆ ನಾಲ್ಕರಲ್ಲಿ ಒಂದು ಭಾಗ ಕಂದಾಯವನ್ನು ಕೊಡತಕ್ಕದ್ದು. ಇನಾಮುದಾರರ ವಂಶವು ನಷ್ಟವಾದ ಪಕ್ಷದಲ್ಲಿ ಆ ಇನಾಮುಗಳು ಸರ್ಕಾರಕ್ಕೆ ಸೇರತಕ್ಕದ್ದು.

ಸೇಂದಿ ಸಾರಾಯಿ ಗಾಂಜಾ ಇವುಗಳನ್ನು ೧೮೬೭ನೇ ಇಸವಿಯವರಿಗೂ ಸರ್ಕಾರದವರು ಅಮಾನಿಯಿಂದ ರೂಢಿಸುತ್ತಿದ್ದರು. ಅನಂತರದಲ್ಲಿ ಅದರ ಗುತ್ತಿಗೆಯು ಪ್ರಾರಂಭವಾಯಿತು.

ಸಾಯರ ಸುಂಕವು, ಇಂಗ್ಲಿಷಜನಗಳು ಅಧಿಕಾರಕ್ಕೆ ಬರುವದಕ್ಕೆ ಮುಂಚೆ, ಅನೇಕ ಜಿನಸಿಗಳ ಮೇಲೆ ವಸೂಲಾಗುತ್ತಿತ್ತು. ಇವರು ರಾಜ್ಯಭಾರವನ್ನು ವಹಿಸಿದ ಮೇಲೆ ಇವುಗಳೆಲ್ಲಾ ಕ್ರಮೇಣ ಕಡಮೆಯಾಗುತ್ತಾ ಬಂದು, ೧೮೬೦ನೇ ಇಸವಿಯಲ್ಲಿ ಅಡಿಕೆ, ಹೊಗೇಸೊಪ್ಪು, ಅಫೀಮು ಮುಂತಾದ ೭೪ ಪದಾರ್ಥಗಳಿಗೆ ಮಾತ್ರ ಸುಂಕವು ಏರ್ಪಡಾಗಿ, ಮಿಕ್ಕಾದವುಗಳಿಗೆ ಸುಂಕವು ತಪ್ಪಿತು. ೧೮೬೪ನೇ ಇಸವಿಯಲ್ಲಿ ಈ ೭೪ ಬಾಬುಗಳಲ್ಲಿಯೂ ಅನೇಕ ಬಾಬುಗಳಿಗೆ ಸುಂಕವನ್ನು ತೆಗೆದುಹಾಕಿದರು. ಆದಾಗ್ಯೂ ಅಡಿಕೆ, ಹೊಗೇಸೊಪ್ಪು, ಇವೆರಡರಿಂದಲೇ ೬–೭ ಲಕ್ಷ ರೂಪಾಯಿಗಳು ವಸೂಲಾಗುತ್ತವೆ.

ಮೊಹತರ್ಫಾ ಕಂದಾಯಗಳೆಂಬದಾಗಿ ಮನೆ, ಮಗ್ಗ, ಅಂಗಡಿ, ಗಾಣ, ಬಂಡಿ, ನೇಗಲು, ಮುಂತಾದ ಅನೇಕ ಪದಾರ್ಥಗಳ ಮೇಲೆ ಕಂದಾಯಗಳನ್ನು ಹಾಕಿದರು. ಇವುಗಳಲ್ಲಿ ಅನೇಕ ಕಂದಾಯಗಳನ್ನು ಕಡಮೆ ಮಾಡಿದಾರೆ. ಆದಾಗ್ಯೂ ಕಂದಾಯದಲ್ಲಿ ಇನ್ನೂ ಅನೇಕ ಏರ್ಪಾಡುಗಳು

ಇದ್ದೇ ಇವೆ. ಬ್ರಾಹ್ಮಣರು ಮುಸಲ್ಮಾನರು ಮುಂತಾದ ಅನೇಕ ಜನಗಳಿಗೆ ಈ ಮೊಹತರ್ಫಾ ಇರಲಿಲ್ಲ.

೧೮೩೩ನೇ ಇಸವಿಯಲ್ಲಿ ಸ್ಟಾಂಪುಗಳ ವಿಕ್ರಯವು ಪ್ರಾರಂಭವಾಯಿತು. ಪ್ರಥಮತಃ ಈ ಬಾಬಿನಲ್ಲಿ ೬,೦೦೦ ರೂಪಾಯಿ ಉತ್ಪತ್ತಿಯಾಯಿತು. ೧೮೬೮ನೇ ಇಸವಿಯಲ್ಲಿ ೪| ಲಕ್ಷ ರೂಪಾಯಿ ಉತ್ಪತ್ತಿಯಾಯಿತು.

ಪೂರ್ವದಲ್ಲಿ ಸರ್ಕಾರದ ಕಾಗದಪತ್ರಗಳ ರವಾನೆಗೋಸ್ಕರ ಮಾತ್ರ ಅಂಚೆಯನ್ನು ಇಟ್ಟುಕೊಂಡಿದ್ದರು. ಕ್ರಮೇಣ ಇತರ ಕಾಗದಗಳೂ ಕೂಡ ರವಾನೆಯಾಗುವದಕ್ಕೆ ಉಪಕ್ರಮವಾಯಿತು. ೧೮೩೩ನೇ ಇಸವಿಯಲ್ಲಿ ಈ ಬಾಬಿನಲ್ಲಿ ೨,೦೦೦ ರೂಪಾಯಿ ಉತ್ಪತ್ತಿಯೂ, ೩೩ ಸಾವಿರ ರೂಪಾಯಿ ವೆಚ್ಚವೂ ಇತ್ತು. ಅಂಚೇ ಮಾರ್ಗವಾಗಿ ಬರತಕ್ಕ ಕಾಗದ ಪತ್ರಗಳು ೬೪ನೇ ಇಸವಿಯಲ್ಲಿ ೧| ಲಕ್ಷ ಕಾಗದಗಳೂ, ೫೦೦೦ ವರ್ತಮಾನ ಪತ್ರಿಕೆಗಳೂ, ೯೬೦೧ ಬಾಂಗಿಗಳೂ ಆಗಿದ್ದವು. ಇದಲ್ಲದೆ ಹಾಸಲಿಲ್ಲವೆ ಹೋಗತಕ್ಕ ಸರ್ಕಾರದ ಕಾಗದಪತ್ರಗಳಲ್ಲಿ ೧| ಲಕ್ಷ ಕಾಗದಗಳೂ ೩೦೦೦೦ ಬಾಂಗಿಗಳೂ, ೨೬೦೦೦ ಗೆಜೆಟ್ಟುಗಳೂ ಹೋಗುತ್ತಿದ್ದವು.

೧೮೩೨ನೇ ಇಸವಿಯಲ್ಲಿ ಮೈಸೂರು ಅಂಚೇ ಇಲಾಖೆಯವರಿಗೂ ಇಂಪೀರಿಯಲ್ ಪೋಸ್ಟ್ ಆಫೀಸಿನವರಿಗೂ ಬ್ರಿಟಿಷ ರಾಜ್ಯದಿಂದ ಈ ದೇಶಕ್ಕೂ ಇಲ್ಲಿಂದ ಬ್ರಿಟಿಷ್ ರಾಜ್ಯಕ್ಕೂ ಹೋಗತಕ್ಕ ಕಾಗದಪತ್ರ ವಿಷಯಗಳಲ್ಲಿ ಒಡಂಬಡಿಕೆಯಾಯಿತು. ಮೈಸೂರು ಅಂಚೇ ಇಲಾಖೆಯವರು ಬ್ರಿಟಿಷ ರಾಜ್ಯಗಳಿಂದ (ನಾಪೇಯ್ಡ್) ಅಂದರೆ ಹಾಸಲು ಕೊಡದೆ ಕಳುಹಿಸತಕ್ಕ ಕಾಗದಗಳ ಹಾಸಲನ್ನು ವಸೂಲು ಮಾಡಿಕೊಂಡು, ಅದರಲ್ಲಿ ಅರ್ಧವನ್ನು ಇಂಪೀರಿಯಲ್ ಪೋಸ್ಟು ಆಫೀಸಿನವರಿಗೆ ಕೊಡುವದಾಗಿಯೂ, ಉಳಿದ ಅರ್ಧವನ್ನು ತಾವು ತೆಗೆದುಕೊಂಡು ಆ ಕಾಗದವನ್ನು ರವಾನೆ ಮಾಡಿಸುವದೆಂಬದಾಗಿಯೂ ಒಡಂಬಡಿಕೆಯಾಯಿತು.

೧೮೬೧ನೇ ಇಸವಿಯಲ್ಲಿ ಸರ್ವೆ ಸೆಟಲ್‌ಮೆಂಟಾಗಿರತಕ್ಕ ತಾಲ್ಲೂಕುಗಳಲ್ಲಿ ನೇಗಲು ಕಂದಾಯಕ್ಕೆ ಬದಲಾಗಿ ೧ ರೂಪಾಯಿ ಕಂದಾಯವನ್ನು ಕೊಡತಕ್ಕವರು ೧ ಆಣೆಯ ಮೇರೆ ಲೋಕಲ್‌ಫಂಡ್ ಕೊಡಬೇಕೆಂಬದಾ

ಗಿಯೂ, ಸರ್ವೆ ಸೆಟಲ್‌ಮೆಂಟಾಗದೆ ಇರತಕ್ಕ ಸ್ಥಳಗಳಲ್ಲಿ ೧ ರೂಪಾಯಿಗೆ ಅರ್ಧ ಆಣೆಯ ಪ್ರಕಾರ ಕೊಡಬೇಕೆಂಬದಾಗಿಯೂ ಏರ್ಪಾಡು ಮಾಡಿ, ಹಾಗೆ ವಸೂಲಾದ ಮೊಬಲಗಿನಲ್ಲಿ ನೇಕಡ ೭೫ ರೂಪಾಯಿನ ಪ್ರಕಾರ ಗ್ರಾಮದ ಪಾಠಶಾಲೆಗಳಿಗೂ, ಬಾಕಿ ಉಳಿದನ್ನು ರಸ್ತೆ ಮುಂತಾದವುಗಳನ್ನು ಸರಿಮಾಡುವದಕ್ಕೂ ಕೊಡುವಂತೆ ನಿಬಂಧನೆಯಾಯಿತು. ತರೀ ಜಮೀನುಗಳ ಮೇಲೆ ಇದೇ ರೀತಿಯಲ್ಲಿ ವಸೂಲಾದ ಹಣವನ್ನು ಕೆರೆ ಕಟ್ಟೆ ಕಾಲುವೆ ಮುಂತಾದವುಗಳನ್ನು ವೃದ್ಧಿಗೆ ತರುವದಕ್ಕೋಸ್ಕರ ಆಗುವ ಖರ್ಚಿಗೆ ಕೊಡುತ್ತಾ ಬಂದರು.

೧೮೭೧ನೇ ಇಸವಿಯಲ್ಲಿ ಬೆಂಗಳೂರು ಟೌನ್ ಮತ್ತು ಕಂಟೋನ್ಮೆಂಟಿನಲ್ಲಿ ಮ್ಯುನಿಸಪಲ್ ಕಮಿಷನರುಗಳನ್ನು ಇಟ್ಟರು. ಇವರು ಮ್ಯುನಿಸಪಲ್ ಸರಹದ್ದಿನಲ್ಲಿ ಬಂದಂಥಾ ಸುಂಕದ ಜಿನಸಿಗಳ ಮೇಲೂ ಮನೆಗಳ ಮೇಲೂ ಕಸಬುಗಳ ಮೇಲೂ, ಭಂಡಿಗಳು, ದೋಣಿಗಳು, ಲೈಸೆನ್ಸುಗಳು ಮುಂತಾದ ಬಾಬುಗಳಲ್ಲಿಯೂ ಸುಂಕವನ್ನು ವಸೂಲು ಮಾಡಿಸಿ, ಪೋಲೀಸ್ ಇಲಾಖೆಗಳಿಗೆ ಸಂಬಳಗಳನ್ನೂ ಕೊಟ್ಟು, ಎಲ್ಲಾ ಭಾಗಗಳಲ್ಲಿಯೂ ನಿರ್ಮಲವಾಗಿರುವ ಹಾಗೆ ಏರ್ಪಾಡುಗಳನ್ನು ಮಾಡುವದರಿಂದ ಪ್ರಜೆಗಳ ಆರೋಗ್ಯಕ್ಕೆ ಸಾಧಕವಾಗಿರುವ ಹಾಗೆ ಏರ್ಪಾಡುಗಳನ್ನು ಮಾಡುತ್ತಾ ಬಂದರು. ಇದೇ ರೀತಿಯಲ್ಲಿ ಮ್ಯುನಿಸಿಪಾಲಿಟಿಯು ಎಲ್ಲಾ ಡಿಸ್ಟ್ರಿಕ್ಟುಗಳಲ್ಲಿಯೂ ಎಲ್ಲಾ ತಾಲ್ಲೂಕುಗಳಲ್ಲಿಯೂ ಆಚರಣೆಗೆ ಬಂತು.

ನ್ಯಾಯ ವಿಮರ್ಶೆಯ ವಿಷಯದಲ್ಲಿ ಬ್ರಿಟಿಷ್ ಇಂಡಿಯಾದಲ್ಲಿ ಆಚರಣೆಯಲ್ಲಿರತಕ್ಕ ಅನೇಕ ಕಾನೂನುಗಳನ್ನು ಇಲ್ಲಿಯೂ ಆಚರಿಸುವಂತೆ ವೈಸರಾಯರವರ ಅನುಜ್ಞೆಯನ್ನು ತೆಗೆದುಕೊಂಡರು. ಪೂರ್ವದ ರಾಜ್ಯಭಾರಗಳಲ್ಲಿ ಕೆರೆ, ಕಟ್ಟೆ, ಸೇತುವೆ, ರಸ್ತೆ ಮುಂತಾದವುಗಳನ್ನು ತಾಲ್ಲೂಕು ಅಮಲ್ದಾರರೂ ನೇಟಿವ್ ಮೇಸ್ತ್ರಿಗಳೂ ಮುತ್ಸದ್ದಿಗಳೂ ನಡಿಸುತ್ತಿದ್ದರು.

೧೮೬೪ನೇ ಇಸವಿಯಲ್ಲಿ ಮರಾಮತ್ತು ಸೂಪರಿಂಟೆಂಡೆಂಟೆಂಬದಾಗಿ ಒಬ್ಬ ಅಧಿಕಾರಿಯನ್ನು ನೇಮಿಸಿದರು. ೧೮೬೯ನೇ ಇಸವಿಯಲ್ಲಿ ಇದಕ್ಕಾಗಿ ಬೇರೆ ಇಲಾಖೆಯನ್ನು ನೇಮಿಸಿ, ಒಬ್ಬ ಚೀಫ್ ಇಂಜನೀರನ್ನೂ,

ಒಬ್ಬ ಅಸಿಸ್ಟೆಂಟ ಎಂಜಿನೀರನ್ನೂ ೫ ಜನ ಸೆಕ್ರೆಟರಿ ಎಂಜಿನೀರುಗಳನ್ನೂ ೩೦ ಜನ ಈ ಇಲಾಖೆಯ ಇತರ ಅಧಿಕಾರಿಗಳನ್ನೂ ನೇಮಿಸಿದರು.

೧೮೬೩ನೇ ಇಸವಿಯಲ್ಲಿ ರೆವಿನ್ಯೂ ಅಧಿಕಾರಿಗಳೇ ಕೆರೆ ಕಟ್ಟೆ ಮುಂತಾದವುಗಳನ್ನು ಆಬಾದು ಮಾಡಿಕೊಳ್ಳಬೇಕೆಂಬದಾಗಿ ನಿಬಂಧನೆ ಯಾಯಿತು. ಅನಂತರದಲ್ಲಿ ಕಾಲುವೆ ಮುಂತಾದವುಗಳ ಏರ್ಪಾಡಿಗೋಸ್ಕರ ಚಾನಲ್ ಇಲಾಖೆಯು ಏರ್ಪಾಡಾಯಿತು. ಆ ಮೇಲೆ ಈ ಬಾಬಿಗೋಸ್ಕರ ೧೮೬೦ನೇ ಇಸವಿಯಲ್ಲಿ ಸೂಪರಿಂಟೆಂಡೆಂಟ ಎಂಜನೀರನ್ನು ಏರ್ಪಾಡು ಮಾಡಿದರು.

೧೮೬೩ನೇ ಇಸವಿಯಲ್ಲಿ ಮರಾಮತ್ತು ಇಲಾಖೆಯು ಎರಡು ಭಾಗವಾಯಿತು. ಇವುಗಳಲ್ಲಿ ರಸ್ತೆ ಕಟ್ಟಣ ಮುಂತಾದವುಗಳ ಇಲಾಖೆಯೊಂದು, ನಾಲೆ ನೀರಾವರಿ ಮುಂತಾದವುಗಳ ಇಲಾಖೆಯೊಂದು. ಪೂರ್ವಕಾಲದಲ್ಲಿ ಪಾಳ್ಯಗಾರರ ಕಾಲದಲ್ಲಿ ಈ ಕೆಲಸಗಳನ್ನೆಲ್ಲಾ ರೈತರಿಂದ ಬಿಟ್ಟೀ ಮಾಡಿಸುತ್ತಿದ್ದರು. ಈಚೆಗೆ ಈ ಕೆಲಸಗಳನ್ನೆಲ್ಲಾ ಕೂಲಿ ಕೊಟ್ಟು ಮಾಡಿಸತಕ್ಕದ್ದೆಂದು ನಿಬಂಧನೆಯಾಯಿತು. ೧೮೬೨ನೇ ಇಸವಿಯಿಂದ ಇಂಥಾ ಕೆಲಸಗಳನ್ನೆಲ್ಲಾ ಗುತ್ತಿಗೇದಾರರಿಗೆ ಕೊಡುತ್ತಾ ಬಂದರು.

ದಿವಾನ ಪೂರ್ಣಯ್ಯನವರ ಕಾಲದಲ್ಲಿ ಮರಾಮತ್ತು ಕೆಲಸಗಳಲ್ಲಿ ೩೩ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದರು. ಇದಲ್ಲದೆ 'ಪೂರ್ಣಯ್ಯನವರ ನಾಲೆ' ಎಂಬದಾಗಿ ಕರೆಯಲ್ಪಡುವ ನಾಲೆಗೆ ೧೩॥ ಲಕ್ಷ ರೂಪಾಯಿಗಳನ್ನೂ, ಬೆಂಗಳೂರು ಚನ್ನಪಟ್ಟಣ ಮುಂತಾದ ಕೆಲವು ಕೋಟೆಗಳ ಜೀರ್ಣೋದ್ಧಾರಕ್ಕೆ ೧೫ ಲಕ್ಷ ರೂಪಾಯಿಗಳನ್ನೂ, ಶ್ರೀರಂಗಪಟ್ಟಣದ ವೆಲ್ಲೆಸ್ಲಿ ಸೇತುವೆಗೆ ೫॥ ಲಕ್ಷ ರೂಪಾಯಿಗಳನ್ನೂ, ಪ್ರಯಾಣ ಮಾಡತಕ್ಕವರು ಇಳಿದುಕೊಳ್ಳುವದಕ್ಕೆ ಬಂಗಲೆಗಳನ್ನು ಕಟ್ಟುವದಕ್ಕೆ ೩ ಲಕ್ಷ ರೂಪಾಯಿಗಳನ್ನೂ, ಮಠ ಸತ್ರ ಮುಂತಾದವುಗಳನ್ನು ಕಟ್ಟಿಸುವದಕ್ಕೋಸ್ಕರ ೨ ಲಕ್ಷ ರೂಪಾಯಿಗಳನ್ನೂ, ತಾಲ್ಲೂಕು ಕಚೇರಿ ಮೊದಲಾದ ಕೆಲವು ಕಟ್ಟಣಗಳಿಗೋಸ್ಕರ ೧॥ ಲಕ್ಷ ರೂಪಾಯಿಗಳನ್ನೂ, ಫ್ರೆಂಚ್

ರಾಕ್ಸಿಸಬ್ಲಿ-ವೆಬ್ಸ್ ಗೋರಿಗೋಸ್ಕರ ೧॥ ಲಕ್ಷ ರೂಪಾಯಿಗಳನ್ನೂ ಖರ್ಚು ಮಾಡಿದರು.

೧೮೩೧ನೇ ಇಸವಿಯಲ್ಲಿ ಈ ದೇಶದಲ್ಲೆಲ್ಲಾ ಮೂರು ರಸ್ತೆಗಳಿದ್ದವು: ನಾಯಕನೇರಿಯಿಂದ ಬೆಂಗಳೂರು ಮಾರ್ಗವಾಗಿ ಮೈಸೂರಿಗೆ ಬರತಕ್ಕದ್ದು ಒಂದು ; ಶ್ರೀರಂಗಪಟ್ಟಣದ ಮಾರ್ಗವಾಗಿ ಸೀರ್‍ಯಕಸ್ಕೂ ಬಳ್ಳಾರಿಗೂ ಹೋಗ ತಕ್ಕದ್ದು ಒಂದು ; ಬೆಂಗಳೂರಿಂದ ಹರಿಹರಕ್ಕೆ ಹೋಗತಕ್ಕದ್ದು ಒಂದು. ಈ ರಸ್ತೆಗಳಲ್ಲಿಯೂ ಕೂಡ ಬೇಕಾದ ಕಡೆಯಲ್ಲಿ ಸೇತುವೆಗಳಿದ್ದವು. ಹೊಳೆ ಬಂದ ಕಾಲಗಳಲ್ಲಿ ಒಂದೂರಿನಿಂದ ಮತ್ತೊಂದೂರಿಗೆ ಹೋಗುವದಕ್ಕೆ ಬಹಳ ಕಷ್ಟವಾಗಿತ್ತು.

ಈ ಸಂಸ್ಥಾನವನ್ನು ಬ್ರಿಟಿಷ್ ರಾಜ್ಯದವರು ವಹಿಸಿದಾಗ ಅನೇಕ ಕೆರೆಗಳೂ ಕಟ್ಟೆಗಳೂ ಒಡೆದು ಶಿಥಿಲವಾಗಿದ್ದವು. ಮಹಾರಾಜರವರ ರಾಜ್ಯಭಾರದ ಕಾಲದಲ್ಲಿ ಬಿಟ್ಟೀ ಕೆಲಸಗಳನ್ನು ಮಾಡಿಸುತ್ತಿದ್ದದ್ದರಿಂದಲೂ, ಅನುಭವಸ್ಥರಾದ ಕೆಲಸಗಾರರು ಸಿಕ್ಕದೆ ಇರುತ್ತಿದ್ದದ್ದರಿಂದಲೂ, ಆಗಾಗ್ಯೆ ಕೆರೇಕಟ್ಟೆಗಳು ಒಡೆದು ಹೋಗುತ್ತಿದ್ದವು. ಇಂಗ್ಲಿಷ್ ನವರು ಅಧಿಕಾರವನ್ನು ವಹಿಸಿದ ಮೇಲೆ, ೩೧ರಿಂದ ೫೬ನೇ ಇಸವಿಯೊಳಗಾಗಿ ಕಾಲುವೆ ಮುಂತಾದವುಗಳಿಗೋಸ್ಕರ ೩೦ ಲಕ್ಷ ರೂಪಾಯಿಗಳನ್ನೂ, ರಸ್ತೆಗಳಿಗೋಸ್ಕರ ೨೮॥ ಲಕ್ಷ ರೂಪಾಯಿಗಳನ್ನೂ, ಅನೇಕ ಕಟ್ಟಣಗಳಿಗೋಸ್ಕರ ೬ ಲಕ್ಷ ರೂಪಾಯನ್ನೂ ಖರ್ಚು ಮಾಡಿದರು. ಮೈಸೂರು ಎಲ್ಲಾ ಪ್ರಾಂತ್ಯಗಳಿಂದಲೂ ಬೆಂಗಳೂರಿಗೆ ಬರುವಹಾಗೆ ರಸ್ತೆಗಳನ್ನು ಹಾಕಿದರು. ಮರಾಮತ್ತು ಇಲಾಖೆಯು ಏರ್ಪಾಡಾಗುವದಕ್ಕೆ ಮುಂಚೆಯೇ ಈ ಸಂಸ್ಥಾನದಲ್ಲಿ ೧೫೯೩ ಮೈಲು ರಸ್ತೆಯೂ, ೩೦೯ ದೊಡ್ಡ ಸೇತುವೆಗಳೂ, ೧೯೯೮ ಸಣ್ಣ ಸೇತುವೆಗಳೂ ಆದವು. ೧೮೫೩ನೇ ಇಸವಿಯಲ್ಲಿ ಅತ್ತಿಬೆಲೆಯಿಂದ ರಾಮಪುರದವರಿಗೂ, ಬೆಂಗಳೂರಿಂದ ನೀಲಗಿರಿ ರಸ್ತೆಯಲ್ಲಿ ರತಕ್ಕ ಕಾಂಕನಹಳ್ಳಿದವರಿಗೂ ೧,೦೩,೬೯೯ ರೂಪಾಯಿಗಳನ್ನು ಖರ್ಚು ಮಾಡಿಸಿ, ವರ್ತಮಾನ ತಂತಿಗಳನ್ನು ಹಾಕಿಸಿದರು. ಬೆಂಗಳೂರಲ್ಲಿಯೂ ಮೈಸೂರಿನಲ್ಲಿಯೂ ೮,೨೫೩ ರೂಪಾಯಿ ವೆಚ್ಚ ಮಾಡಿ ಕಚೇರಿಗಳನ್ನು ಕಟ್ಟಿಸಿದರು. ೧೮೫೬ನೇ ಇಸವಿಯಲ್ಲಿ ಮರಾಮತ್ತು ಇಲಾ

ಜೆಯು ಏರ್ಪಾಡಾಯಿತು. ಅದು ಮೊದಲುಗೊಂಡು ೧೮೬೬ನೇ ಇಸವಿಯ ವರಿಗೂ ಕಟ್ಟಣಗಳು, ಕಾಲುವೆ, ರಸ್ತೆ ಮುಂತಾದ ಹೊಸ ಕೆಲಸಗಳಿಗೋಸ್ಕರ ೯೯,೬೦,೦೮೯ ರೂಪಾಯಿಗಳೂ, ಪೂರ್ವದಲ್ಲಿದ್ದ ಕಾಲುವೆ, ರಸ್ತೆ, ಕಟ್ಟಣ ಮುಂತಾದವುಗಳ ಜೀರ್ಣೋದ್ಧಾರ ಮಾಡಿದಕ್ಕೆ ೮೯,೪೯,೧೮೨ ರೂಪಾಯಿಗಳೂ ಖರ್ಚಾದವು. ಮೈಸೂರು ಬಳಿಯಲ್ಲಿ ಸೈನ್ಯವನ್ನಿಡಬೇಕೆಂದು ಸುಮಾರು ೨ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ, ಒಂದು ಕಂಟೋನ್ಮೆಂಟನ್ನು ಕಟ್ಟಿಸಿದರು. ಆ ಪ್ರದೇಶವು ಅನಾರೋಗ್ಯವಾದದ್ದೆಂದು ಗೊತ್ತಾದದ್ದರಿಂದ, ಆ ಮೇಲೆ ಅದನ್ನು ಬಿಟ್ಟುಬಿಟ್ಟರು. ೬೪–೬೮ರ ವರಿಗೂ ಕಟ್ಟಿಸಿದ ಕಟ್ಟಣಗಳಲ್ಲಿ ಎಲ್ಲಾದಕ್ಕಿಂತಲೂ ದೊಡ್ಡದಾದದ್ದು ಬೆಂಗಳೂರಿನಲ್ಲಿ ಪಬ್ಲಿಕ್ ಆಫೀಸುಗಳಿರತಕ್ಕ ಕಟ್ಟಣ. ಇದಕ್ಕೆ ೪,೨೩,೯೮೦ ರೂಪಾಯಿ ಖರ್ಚಾಯಿತು. ೧೮೬೩ನೇ ಇಸವಿಯಲ್ಲಿ ೪೬೦೪೩ ರೂಪಾಯಿ ಖರ್ಚುಮಾಡಿ, ಸೆಂಟ್ರಲ್ ಜೇಲನ್ನೂ, ೨,೧೪,೩೫೪ ರೂಪಾಯಿ ಖರ್ಚು ಮಾಡಿ ಬೌರಿಂಗ್ ಹಾಸ್ಪಿಟ್ಟಲನ್ನೂ ಕಟ್ಟಿಸಿದರು. ಡಿವಿಜನ್ ಕಚೇರಿಯನ್ನೂ, ಸೆಂಟ್ರಲ್ ಕಾಲೇಜ್ ಎಂಬ ಪಾಠಶಾಲೆಯನ್ನೂ ಗವರ್ನಮೆಂಟ್ ಹೌಸ್ ಎಂಬತಕ್ಕ ಕಟ್ಟಣವನ್ನೂ, ಮಹಾರಾಜರವರ ಅರಮನೆಯನ್ನೂ, ೨॥ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಕಟ್ಟಿಸಿದರು. ಈಚೆಗೆ ವಿಶೇಷ ದ್ರವ್ಯವನ್ನು ಖರ್ಚುಮಾಡಿ ಅರಮನೆಯನ್ನು ರಾಜಯೋಗ್ಯವನ್ನಾಗಿ ಮಾಡಿದ್ದಲ್ಲದೆ, ೧ ಲಕ್ಷ ರೂಪಾಯಿ ಮುಟ್ಟಿಸಿ ಬೆಂಗಳೂರು ಸರ್ವವಸ್ತು ಪ್ರದರ್ಶನಶಾಲೆಯನ್ನೂ, ಟಪಾಲ್ ಆಫೀಸನ್ನೂ, ಅಚ್ಚಿನ ಕಾರಖಾನೆಯನ್ನೂ ಕಟ್ಟಿಸಿದರು. ಇದಲ್ಲದೆ ಬಹು ದ್ರವ್ಯವನ್ನು ವ್ಯಯ ಮಾಡಿ, ಎಲ್ಲಾ ಡಿಸ್ಟ್ರಿಕ್ಟುಗಳಲ್ಲಿಯೂ ಕಚೇರಿಗಳನ್ನೂ ಜೇಲುಗಳನ್ನೂ ಪಾಠಶಾಲೆಗಳನ್ನೂ ಎಂಜನೀರು ಆಫೀಸುಗಳನ್ನೂ ಕಟ್ಟಿದಾರೆ. ಇದಲ್ಲದೆ ಶ್ರೀರಂಗಪಟ್ಟಣದ ಬಳಿಯಲ್ಲಿ ಇರತಕ್ಕ ದರಿಯಾದೌಲತ್ತು, ಲಾಲ್‌ಬಾಗ್, ಹಳೇಬೀಡು ದೇವಸ್ಥಾನ ಮುಂತಾದವುಗಳ ಜೀರ್ಣೋದ್ಧಾರಕ್ಕೋಸ್ಕರ ೪೫.ಸಾವಿರ ರೂಪಾಯಿ ಖರ್ಚಾಯಿತು.

ಹೇಮಾವತೀ ನದಿಗೆ ಸೇರಿದ ಶ್ರೀರಾಮದೇವರ ಅಣೇಕಟ್ಟನ್ನೂ ಕಾಲುವೆಗಳನ್ನೂ ಸರಿಮಾಡುವದಕ್ಕೋಸ್ಕರ, ೨,೨೮,೫೦೪ ರೂಪಾಯಿ

ಖರ್ಚಾಯಿತು. ಮದ್ದೂರು, ಮಾರ್ಚಹಳ್ಳಿ, ಲಕ್ಷ್ಮಣಪುರ, ಹಾಲಹಳ್ಳಿ ಇವುಗಳ ಅಣೆಕಟ್ಟೆಗಳಿಗೂ ಲೋಕ ಪಾವನೀ ಅಣೆಕಟ್ಟೆಗೂ ೧,೬೦,೨೩೧ ರೂಪಾಯಿ ಖರ್ಚಾಯಿತು.

೧೮೭೨ನೇ ಇಸವಿಯಲ್ಲಿ ನಾಲಾ ಏರ್ಪಾಡಿಗೋಸ್ಕರ ೪೬ ಲಕ್ಷ ರೂಪಾಯನ್ನೂ, ಕೆರೆಗಳನ್ನು ಜೀರ್ಣೋದ್ಧಾರ ಮಾಡುವದಕ್ಕೋಸ್ಕರ ೨೦ ಲಕ್ಷ ರೂಪಾಯನ್ನೂ ಮುಟ್ಟಿಸಿ, ಅನೇಕ ಕೆರೆಗಳನ್ನೂ ಕಾಲುವೆಗಳನ್ನೂ ಜೀರ್ಣೋದ್ಧಾರ ಮಾಡಿದರು.

೧೮೭೫ನೇ ಇಸವಿಯಲ್ಲಿ ೩ ಲಕ್ಷರೂಪಾಯಿ ವೆಚ್ಚಮುಟ್ಟಿಸಿ, ೧೫,೫೦೦ ಮೈಲು ರಸ್ತೆಗಳನ್ನು ಮಾಡಿಸಿದರು. ಪಶ್ಚಿಮದ ಕಣಿವೆಗಳ ಮಾರ್ಗವಾಗಿ ಮೈಸೂರಿಂದ ಕಣಿವೇಕೆಳಕ್ಕೆ ಹೋಗುವದಕ್ಕೆ ೬ ಘಾಟಿಗಳನ್ನು ಮಾಡಿಸಿದರು. ಹರಿಹರ ಸಕಲೇಶ್ವರ ಬೆಂಕೀಪುರ ಶಿವಮೊಗ್ಗ ಈ ನಾಲ್ಕು ಸ್ಥಳಗಳಲ್ಲಿಯೂ ೨,೫೫,೨೫೩ ರೂಪಾಯಿ ಖರ್ಚುಮಾಡಿ, ತುಂಗಭದ್ರ, ಹೇಮಾವತಿ, ತುಂಗಾ, ಭದ್ರಾ, ಇವುಗಳಿಗೆ ಸೇತುವೆಗಳನ್ನು ಕಟ್ಟಿಸಿದರು. ಇವಲ್ಲದೆ ೨॥ ಲಕ್ಷರೂಪಾಯಿ ಖರ್ಚುಮಾಡಿ ಕಂಟೋನ್ಮೆಂಟ್ ಬಜಾರು ಮಾರ್ಗವಾಗಿ ಹೋಗತಕ್ಕಂಥಾ ಬಚ್ಚಲು ಕಾಲುವೆಯನ್ನು ತೆಗಿಸಿ, ಆ ಬಚ್ಚಲು ನೀರು ಊರಿನಿಂದ ಬಹಳ ದೂರಕ್ಕೆ ಹೋಗಿ ಬೀಳುವಹಾಗೆ ಏರ್ಪಾಡುಗಳನ್ನು ಮಾಡಿದರು. ಇದಲ್ಲದೆ ಬೆಂಗಳೂರಿಗೂ ಮೈಸೂರಿಗೂ ಕುಡಿಯುವನೀರಿನ ಸರಬರಾಜಿಗಾಗಿ ೧೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದರು.

೧೮೬೪ನೇ ಇಸವಿಯಲ್ಲಿ ಮದರಾಸ್ ರೈಲಿನ ಒಂದುಭಾಗವು ಬೆಂಗಳೂರಿಗೆ ಹಾಕಲ್ಪಟ್ಟಿತು. ಇದರಿಂದ ಬೆಂಗಳೂರು ವ್ಯಾಪಾರವು ವೃದ್ಧಿಯಾಗುವದಕ್ಕೆ ಕಾರಣವಾಯಿತು. ೧೮೭೦ನೇ ಇಸವಿಯಲ್ಲಿ ಬೆಂಗಳೂರು, ತುಮಕೂರು, ತಿಪಟೂರು, ಹಾಸನ, ಮೈಸೂರು ಇವುಗಳಿಗೆಲ್ಲಾ ರೈಲ್ ಹಾಕಬೇಕೆಂಬದಾಗಿ ಸರ್ವೆ ಮುಂತಾದವುಗಳನ್ನು ಕೂಡ ಮಾಡಿದರು. ಅನಂತರದಲ್ಲಿ ಅದನ್ನು ನಿಲ್ಲಿಸಿಬಿಟ್ಟರು.

೧೮೫೫ನೇ ಇಸವಿಯಲ್ಲಿ ಒಂದು ವಿದ್ಯಾಭ್ಯಾಸದ ಇಲಾಖೆಯನ್ನು ಏರ್ಪಡಿಸಬೇಕೆಂದು, ಮೈಸೂರು ಗವರ್ನಮೆಂಟಿಗೂ ಇಂಡಿಯಾ ಗವರ್ನಮೆಂಟಿಗೂ ಕಾಗದಪತ್ರಗಳು ನಡೆಯುವದಕ್ಕೆ ಉಪಕ್ರಮ ವಾಯಿತು. ೧೮೫೭ನೇ ಇಸವಿಯಲ್ಲಿ ಈ ಇಲಾಖೆಯು ಏರ್ಪಾಡಾಗತಕ್ಕದ್ದೆಂದು ಇಂಡಿಯಾ ಗವರ್ನಮೆಂಟಿನಿಂದ ಸ್ಯಾಂಕ್ಷನ್ನ ಆಯಿತು. ಪ್ರಥಮತಃ ವೆಸ್ಲಿಯನ್ ಪಾದ್ರಿಗಳು ಸರ್ಕಾರದವರ ಸಹಾಯದಿಂದ ಮುಖ್ಯವಾದ ಡಿಸ್ಟ್ರಿಕ್ಟುಗಳಲ್ಲಿ ಪಾಠಶಾಲೆಗಳನ್ನು ಸ್ಥಾಪಿಸುತ್ತಾ ಬಂದರು. ೧೮೪೦ನೇ ಇಸವಿಯಲ್ಲಿ ತುಮಕೂರಿನಲ್ಲಿ ಒಂದು ಕನ್ನಡದ ಸ್ಕೂಲು ಏರ್ಪಾಡಾಯಿತು. ೧೮೪೬ನೇ ಇಸವಿಯಲ್ಲಿ ಶಿವಮೊಗ್ಗೆಯಲ್ಲಿ ಒಂದು ಸ್ಕೂಲಾಯಿತು. ೧೮೫೧ನೇ ಇಸವಿಯಲ್ಲಿ ಬೆಂಗಳೂರಲ್ಲಿ ಒಂದು ಇಂಗ್ಲಿಷ್ ಸ್ಕೂಲಾಯಿತು. ಈ ಸ್ಕೂಲಿಗೆ ಗವರ್ನಮೆಂಟಿನವರು ತಿಂಗಳಿಗೆ ೮೦೦ ರೂಪಾಯಿ ಕೊಡುತ್ತಾ ಬಂದರು. ೧೮೫೦ನೇ ಇಸವಿಯಲ್ಲಿ ತುಮಕೂರಿನಲ್ಲಿಯೂ, ೧೮೫೪ರಲ್ಲಿ ಹಾಸನದಲ್ಲಿಯೂ ಒಂದೊಂದು ಇಂಗ್ಲಿಷ್ ಸ್ಕೂಲಾಯಿತು. ಇವುಗಳಿಗೂ ಸರ್ಕಾರದಿಂದ ತಿಂಗಳಿಗೆ ೫೦೦ ರೂಪಾಯಿ ಸಲ್ಲುತ್ತಾ ಬಂತು. ಮೈಸೂರಿನಲ್ಲಿ ಮಹಾರಾಜರವರು ಒಂದು ಧರ್ಮದ ಇಂಗ್ಲಿಷ್‌ಸ್ಕೂಲನ್ನು ಇಟ್ಟಿದ್ದರು. ೧೮೫೫ನೇ ಇಸವಿಯಲ್ಲಿ ಈ ಪಾಠಶಾಲೆಗಳಿಗೆಲ್ಲಾ ಕೊಡತಕ್ಕ ಮೊಬಲಗು ೧೬೫೦ ರೂಪಾಯಿಯಾಗಿತ್ತು. ೧೮೫೭ನೇ ಇಸವಿಯಲ್ಲಿ ತಾಲ್ಲೋಕುಗಳಲ್ಲಿ ಒಂದೊಂದು ಕನ್ನಡದ ಪಾಠಶಾಲೆಯನ್ನೂ, ಎಲ್ಲಾ ಡಿವಿಜನ್ನುಗಳಲ್ಲಿಯೂ ಇಂಗ್ಲಿಷನ್ನೂ ಕನ್ನಡವನ್ನೂ ಹೇಳತಕ್ಕ ಒಂದೊಂದು ಪಾಠಶಾಲೆಯನ್ನೂ, ಬೆಂಗಳೂರಿನಲ್ಲಿ ಇಂಗ್ಲಿಷ್ ಪ್ರಾಥವಿದ್ಯಾಭ್ಯಾಸ ಮಾಡಿಸತಕ್ಕ ಒಂದು ಕಾಲೇಜನ್ನೂ ಏರ್ಪಡಿಸಬೇಕೆಂಬದಾಗಿಯೂ, ಈ ಕನ್ನಡದ ಪಾಠಶಾಲೆಗಳಿಗೆ ಉಪಾಧ್ಯಾಯರನ್ನು ತಯಾರು ಮಾಡುವದಕ್ಕೋಸ್ಕರ ಒಂದು ನಾರ್ಮಲ್ ಸ್ಕೂಲನ್ನೂ, ಧರ್ಮಕ್ಕೆ ಯಾರಾದರೂ ಪಾಠಶಾಲೆಗಳನ್ನಿಟ್ಟುಕೊಂಡರೆ ಅವರಿಗೆ ಸರ್ಕಾರದಿಂದ ಮಾಡತಕ್ಕ ಸಹಾಯಕ್ಕೆ ಕಟ್ಟಳೆಗಳನ್ನೂ ಮಾಡಬೇಕೆಂಬದಾಗಿಯೂ, ಈ ಪಾಠಶಾಲೆಗಳ ಮೇಲು ವಿಚಾರಣೆಗೆ ಇಬ್ಬರು ಇನ್ಸ್‌ಪೆಕ್ಟರುಗಳನ್ನೂ, ೪ ಜನ ಡಿಪ್ಟೀ ಇನ್ಸ್‌ಪೆಕ್ಟರುಗಳನ್ನೂ, ೨೦ ಜನ ಸಬ್ ಡಿಪ್ಟೀ ಇನ್ಸ್‌ಪೆಕ್ಟರುಗಳನ್ನೂ ನೇಮಿಸಬೇಕೆಂಬದಾಗಿಯೂ ನಿಷ್ಕರ್ಷೆಯಾಯಿತು. ಇದ

ಕ್ಕಾಗಿ ಸರ್ಕಾರದವರು ೧! ಲಕ್ಷರೂಪಾಯಿಗಳನ್ನು ಮಂಜೂರು ಮಾಡಿದರು. ಮೊದಲಲ್ಲಿ ಡೈರೆಕ್ಟರವರೂ ಒಬ್ಬ ಇನ್ಸ್ಪೆಕ್ಟರವರೂ ನೇಮಿಸಲ್ಪಟ್ಟರು. ಅದುವರಿಗೂ ಎಲ್ಲಾ ಡಿಸ್ಟ್ರಿಕ್ಟುಗಳಲ್ಲಿಯೂ ಇದ್ದ ಪಾಠಶಾಲೆಗಳನ್ನು ಸರ್ಕಾರಕ್ಕೆ ಸೇರಿಸಿಕೊಂಡರು. ೧೮೬೭ನೇ ಇಸವಿಯಲ್ಲಿ ಬೆಂಗಳೂರಲ್ಲಿ ಒಂದು ನಾರ್ಮಲ್ ಸ್ಕೂಲನ್ನೂ, ೧೮೬೨ನೇ ಇಸವಿಯಲ್ಲಿ ಮರಾಮತ್ತು ಇಲಾಖೆಗೆ ಜನಗಳನ್ನು ತಯಾರು ಮಾಡುವದಕ್ಕೋಸ್ಕರ ಒಂದು ಎಂಜನೀಯರ್ ಸ್ಕೂಲನ್ನೂ ಇಟ್ಟರು. ೧೮೬೩ ನೇ ಇಸವಿಯಲ್ಲಿ ಬೆಂಗಳೂರು ಹೈಸ್ಕೂಲಿನಲ್ಲಿ ಒಬ್ಬ ವಿದ್ಯಾರ್ಥಿಯು ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ಕೊಟ್ಟನು. ೧೮೬೪ನೇ ಇಸವಿಯಿಂದ ಪರೀಕ್ಷೇ ಪಾಠಗಳನ್ನು ಹೇಳುವದಕ್ಕೆ ಕ್ರಮವಾಗಿ ಉಪಕ್ರಮವಾಯಿತು. ೧೮೬೮ನೇ ಇಸವಿಯಲ್ಲಿ ಹೋಬಳೀ ಸ್ಕೂಲುಗಳು ಏರ್ಪಾಡಾದವು. ಪ್ರಥಮತಃ ಈ ಸ್ಕೂಲಿನ ಉಪಾಧ್ಯಾಯರಿಗೆ ೫ ರೂಪಾಯಿ ಏರ್ಪಾಡಾಯಿತು. ಈಗ ಬುದ್ಧಿಶಾಲಿಗಳಾಗಿ ಸ್ಕೂಲನ್ನು ಚನ್ನಾಗಿ ಇಟ್ಟುಕೊಂಡಿರುವವರಿಗೆ ೩–೧೦–೧೨ ಈ ಪ್ರಕಾರ ಬಡತಿಯಾಗಿದೆ. ಈ ಸ್ಕೂಲುಗಳ ಪೋಷಣೆಗೋಸ್ಕರ ಲೋಕಲ್ ಫಂಡಿನಲ್ಲಿ ಸೇಕಡ ೨೪ ರೂಪಾಯಿನಂತೆ ಉಪಯೋಗಿಸುವದೆಂದು ಏರ್ಪಾಡಾಗಿದೆ. ಎಲ್ಲಾ ಒಟ್ಟು ೩೫೦ ಸ್ಕೂಲುಗಳು ಇರುವವು. ಇವುಗಳ ವಿಚಾರಣೆಗೋಸ್ಕರ ೧೫ ಜನ ಸಬ್ ಡಿಪ್ಟೀ ಇನ್ಸ್ಪೆಕ್ಟರು ಇದ್ದಾರೆ. ೧೮೭೫ನೇ ಇಸವಿಯಲ್ಲಿ ಬೆಂಗಳೂರು ಹೈ ಸ್ಕೂಲ್ ಸೆಂಟ್ರಲ್ ಕಾಲೇಜಾಯಿತು. ಅನಂತರ ಒಂದು ಎಂಜನೀರ್ ಕಾಲೇಜು ಏರ್ಪಾಡಾಯಿತು. ಇದಲ್ಲದೆ ಅನೇಕ ಜನ ದೊಡ್ಡ ಮನುಷ್ಯರೂ ಪಾದ್ರಿಗಳೂ ಸರ್ಕಾರದಿಂದ ಸಹಾಯವನ್ನು ಹೊಂದಿ, ತಮ್ಮ ಮೂಲದ್ರವ್ಯದಿಂದ ಅಲ್ಲಲ್ಲಿ ಅನೇಕ ಸ್ಕೂಲುಗಳನ್ನು ಇಟ್ಟುಕೊಂಡಿದಾರೆ. ಇವುಗಳೆಲ್ಲಾ ಸುಮಾರು ೨೫೦ ಪಾಠಶಾಲೆಗಳವರಿಗೂ ಆಗಬಹುದು.

೧೮೩೫ನೇ ಇಸವಿಯಲ್ಲಿ ಬೆಂಗಳೂರಿನಲ್ಲಿ ಬೌರಿಂಗ್ ಆಸ್ಪತ್ರೆಯೂ ಮೈಸೂರಲ್ಲಿ ಮಹಾರಾಜರವರ ಆಸ್ಪತ್ರೆಯೂ ಹಾಸನದಲ್ಲಿ ಒಂದು ಸಿವಿಲ್ ಆಸ್ಪತ್ರೆಯೂ ಏರ್ಪಾಡಾದವು. ಇದಲ್ಲದೆ ಬೆಂಗಳೂರಲ್ಲಿ ಹುಚ್ಚರಿಗೂ ಕುಷ್ಟರೋಗಗಳಿಗೂ ಬೇರೆಬೇರೆ ೨ ಆಸ್ಪತ್ರೆಗಳು ಏರ್ಪಾಡಾದವು.

ಇದಲ್ಲದೆ ಕೋಲಾರ, ಹಾಸನ, ಚಿತ್ರದುರ್ಗ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ಹರಿಹರಪುರ, ಶೆಟ್ಟಹಳ್ಳಿ ಇವುಗಳಲ್ಲೆಲ್ಲಾ ವೈದ್ಯಶಾಲೆಗಳನ್ನು ಇಟ್ಟರು. ಸಿಡುಬಿನಿಂದ ಅನೇಕರು ಮೃತರಾಗುವದನ್ನು ನೋಡಿ, ಇದರ ನಿವಾರಣಾರ್ಥವಾಗಿ ೧೮೫೫ನೇ ಇಸವಿಯಲ್ಲಿ ೮—೧೦—೧೦ ರೂಪಾಯಿ ತಲಬು ಮಾಡಿ ೫೪ ಜನ ಸಿಡಬು ಹಾಕತಕ್ಕವರನ್ನು ನೇಮಿಸಿದರು. ಈ ನೌಕರರು ತಮಗೆ ಬರತಕ್ಕ ಸಂಬಳದ ರೂಪಾಯಿಗಳಲ್ಲಿ ರೂಪಾಯಿಗೆ ೩ ಜನಗಳ ಪ್ರಕಾರವಾದರೂ ಸಿಡಬು ಹಾಕಿರದಿದ್ದರೆ, ಅವರಿಗೆ ಜುಲ್ಮಾನಾಗತಕ್ಕದ್ದೆಂದು ವಿಧಿಸಿದ್ದಲ್ಲದೆ, ಬಹಳ ಜಾಗರೂಕರಾಗಿ ಹೆಚ್ಚು ಜನಗಳಿಗೆ ಸಿಡಬು ಹಾಕಿದವರಿಗೆ ಇನಾಮುಗಳನ್ನು ಕೊಡುತ್ತಿದ್ದರು.

೧೮೪೫ನೇ ಇಸವಿಯಲ್ಲಿ ಬೆಂಗಳೂರು ಪೇಟೆಯಲ್ಲಿ ಒಂದು ಕುಷ್ಟರೋಗದವರ ಆಸ್ಪತ್ರೆಯು ಆಯಿತು. ೧೮೫೬ನೇ ಇಸವಿಯಲ್ಲಿ ಈ ಆಸ್ಪತ್ರೆಗಾಗಿ ಒಂದು ಉತ್ತಮವಾದ ಕಟ್ಟಣವನ್ನು ಕಟ್ಟಿಸಿದರು. ೧೮೫೦ನೇ ಇಸವಿಯಲ್ಲಿ ಒಂದು ಹುಚ್ಚರ ಆಸ್ಪತ್ರೆಯು ಆಯಿತು. ಈ ಆಸ್ಪತ್ರೆಯಲ್ಲಿರತಕ್ಕ ಹುಚ್ಚರಿಗೆ ವಿಶೇಷ ನಿರ್ಬಂಧಗಳೇನೂ ಇಲ್ಲ. ತೋಟದಕೆಲಸ, ಹಗ್ಗ ಹೊಸೆಯುವದು, ಮುಂತಾದ ಕೆಲಸಗಳನ್ನು ಬೈಲು ಪ್ರದೇಶದಲ್ಲಿ ಮಾಡಿಸುತ್ತಾರೆ. ಈ ಆಸ್ಪತ್ರೆಗೆ ಬಂದಿರತಕ್ಕ ಹುಚ್ಚರ ಪೈಕಿ ಅರ್ಧಜನಗಳಿಗೆ ಭಂಗಿ, ಅಫೀಮು, ಮುಂತಾದ ನಿಷಾದ್ರವ್ಯಗಳ ಅಮಿತವಾದ ಸೇವನೆಯೇ ಮುಖ್ಯವಾದ ಕಾರಣವೆಂದು ಗೊತ್ತಾಗಿದೆ.

ಮಿಲಿಟರಿ ಇಲಾಖೆ.—೧೭೯೯ನೇ ಇಸವಿಯಲ್ಲಿ ಈಸ್ಟ್ ಇಂಡಿಯಾ ಕಂಪೆನಿಯವರಿಗೂ ಶ್ರೀಮನ್ಮಹಾರಾಜರವರ ಗವರ್ನಮೆಂಟಿಗೂ ಒಂದು ತಹನಾಮೆಯು ನಡೆಯಿತು. ಈಸ್ಟ್ ಇಂಡಿಯಾ ಕಂಪೆನಿಯವರು ಮೈಸೂರ ದೇಶದ ತಹಬಂದಿಗೋಸ್ಕರ ಒಂದು ಬ್ರಿಟಿಷ್ ಸೈನ್ಯವನ್ನು ಇಡುವಂತೆಯೂ, ಅವರ ಸಂಬಳಕ್ಕಾಗಿ ಮೈಸೂರು ಗವರ್ನಮೆಂಟಿನವರು ವರ್ಷಕ್ಕೆ ೨೪॥ ಲಕ್ಷ ರೂಪಾಯಿ ಕೊಡಬೇಕೆಂತಲೂ ನಿಬಂಧನೆಯಾಯಿತು. ಈ ಒಡಂಬಡಿಕೆಗೆ ಅನುಸಾರವಾಗಿ ಮದರಾಸು ಸೈನ್ಯದವರ ಪೈಕಿ ಒಂದು ಭಾಗವನ್ನು ಮೈಸೂರಿಗೆ ಕಳುಹಿಸಿದರು. ಪ್ರಥಮತಃ ಶ್ರೀರಂಗಪಟ್ಟಣದಲ್ಲಿಯೂ

ಬೆಂಗಳೂರಿನಲ್ಲಿಯೂ ಈ ಸೈನ್ಯಗಳನ್ನು ಇಟ್ಟಿದ್ದರು. ಈಗ ಬೆಂಗಳೂರು ಕಂಟೋನ್ಮೆಂಟೇ ಮುಖ್ಯಸ್ಥಾನವಾಗಿದೆ.

೧೮೦೯ನೇ ಇಸವಿಯಲ್ಲಿ ಬ್ರಿಟಿಷ್ ಆಫೀಸರುಗಳಲ್ಲಿ ಒಂದು ದಂಗೆಯಾಯಿತು. ಶ್ರೀರಂಗಪಟ್ಟಣದಲ್ಲಿದ್ದ ಅಧಿಕಾರಿಯು ಕೋಟೆಯನ್ನು ಸ್ವಾಧೀನಪಡಿಸಿಕೊಂಡು, ಸರ್ಕಾರದವರ ಆಜ್ಞೆಯನ್ನು ಉಲ್ಲಂಘಿಸಿ, ಇರಸಾಲು ತೆಗೆದುಕೊಂಡು ಹೋಗತಕ್ಕವರ ಜೊತೆಯಲ್ಲಿ ಬಂದೋಬಸ್ತಿಗಾಗಿ ಸಿಪಾಯಿಗಳನ್ನು ಕಳುಹಿಸುವದಿಲ್ಲವೆಂದು ಹೇಳಿದನು. ಹಾಗೆಯೇ ಚಿತ್ರದುರ್ಗದ ಸೈನ್ಯದವರು ಅಲ್ಲಿನ ಖಜಾನೆಯನ್ನು ಹಿಡಿದುಕೊಂಡು ಶ್ರೀರಂಗಪಟ್ಟಣದ ಕಡೆಗೆ ಹೊರಟರು. ಅಲ್ಲಿನ ಸೈನ್ಯದವರಿಗೂ ಇವರಿಗೂ ಸ್ವಲ್ಪ ಕಲಹವು ನಡೆದು ಸೋತು ಓಡಿಹೋದರು. ಅದೇ ಇಸವಿ ೨೦ನೇ ಆಗಸ್ಟ್ ತಾರೀಖಿನ ಒಳಗಾಗಿ ಇವರೆಲ್ಲರೂ ಸ್ವಾಧೀನಕ್ಕೆ ಬಂದರು. ಮೈಸೂರ ಸೈನ್ಯದಲ್ಲಿ ಸವಾರರೂ ಬಾರು ಸಿಪಾಯಿಗಳೂ ಎಂಬದಾಗಿ ಎರಡು ಭೇದ ಉಂಟು. ೧೭೯೯ನೇ ಇಸವಿಯ ತಹಲುನಾಮೆಯ ಪ್ರಕಾರ ಮೈಸೂರು ಸರ್ಕಾರದವರು ೪ ಸಾವಿರ ಸವಾರರ ಸೈನ್ಯವನ್ನು ಸಿದ್ಧವಾಗಿಟ್ಟುಕೊಂಡಿದ್ದು, ಇಂಗ್ಲಿಷ ಗವರ್ನ್‌ಮೆಂಟಿನವರು ಅಪೇಕ್ಷಿಸಿದಾಗ ಅವರ ಸಹಾಯಕ್ಕೆ ಕೊಡಬೇಕೆಂಬದಾಗಿಯೂ, ಹಾಗೆ ಅವರು ಅಪೇಕ್ಷಿಸಿದ ಪಕ್ಷದಲ್ಲಿ ಸವಾರ್ ಸೈನ್ಯವನ್ನು ಇನ್ನೂ ಹೆಚ್ಚಿಸಬೇಕೆಂಬದಾಗಿಯೂ, ಇವರಿಗೆ ಭತ್ಯ ಮುಂತಾದವುಗಳನ್ನು ಇಂಗ್ಲಿಷಿನವರೇ ಕೊಡತಕ್ಕದ್ದೆಂಬದಾಗಿಯೂ, ೪೦೦೦ ಕ್ಕಿಂತಲೂ ಹೆಚ್ಚಾಗಿ ನೌಕರರೂರು ಮಾಡಲ್ಪಟ್ಟ ಸವಾರರ ಸಂಬಳಕ್ಕಾಗಿಯೂ ಕೂಡ ಇಂಗ್ಲಿಷ್ ಗವರ್ನ್‌ಮೆಂಟಿನವರು ಯುಕ್ತವಾದ ಮೊಬಲಗನ್ನು ಕೊಡಬೇಕೆಂಬದಾಗಿಯೂ ನಿಬಂಧನೆಯಾಗಿತ್ತು. ಈ ಸವಾರರ ಸಂಖ್ಯೆಯು ಕೆಲವು ಕಾಲದಲ್ಲಿ ಸ್ವಲ್ಪ ಹೆಚ್ಚಾಗಿಯೂ ಕೆಲವು ಕಾಲದಲ್ಲಿ ಸ್ವಲ್ಪ ಕಡಮೆಯಾಗಿಯೂ ಇರುತ್ತಿತ್ತು. ಆದರೂ ಖಾಯಂ ಆಗಿ ೨೦೦೦ ಕ್ಕಿಂತಲೂ ಕಡಮೆಯಿಲ್ಲದೆಯೂ ೪೦೦೦ ಕ್ಕಿಂತ ಹೆಚ್ಚಿಲ್ಲದೆಯೂ ಇರುತ್ತಿತ್ತು. ಪ್ರಥಮತಃ ಸವಾರರ ಸಂಬಳವು ಬಹಳ ಕಡಮೆಯಾಗಿತ್ತು. ಈಚೆಗೆ ಅವರಿಗೆ ೨೫—೩೦ರ ವರೆಗೂ ಹೆಚ್ಚಾಯಿತು.

೧೮೦೦ರಲ್ಲಿ ಬಾರ್ ಇಲಾಖೆಯಲ್ಲಿ ೨,೭೮೦ ಜನಗಳಿದ್ದರು. ೧೮೦೩ರಲ್ಲಿ ೮,೦೦೦. ಜನಗಳಿದ್ದರು. ೧೮೧೩ರಲ್ಲಿ ಇದೇ ಸಂಖ್ಯೆಯು ೪,೦೦೦ ಆಯಿತು.

೧೭೯೯ನೇ ಇಸವಿಯಲ್ಲಿ ಟೀಪೂಸುಲ್ತಾನನು ಯುದ್ಧದಲ್ಲಿ ಮಡಿದ ಮೇಲೆ, ಮೈಸೂರು ದೇಶವನ್ನು ೩ ಭಾಗಮಾಡಿ, ಇಂಗ್ಲಿಷಿನವರು ಒಂದು ಭಾಗವನ್ನೂ, ನಿಜಾಮರವರು ಒಂದು ಭಾಗವನ್ನೂ ತೆಗೆದುಕೊಂಡು, ಮತ್ತೊಂದು ಭಾಗವನ್ನು ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರವರಿಗೆ ಕೊಟ್ಟು, ಅನಾದಿಯಾಗಿ ಬಂದಿದ್ದ ನೇಟಿವ್ ರಾಜ್ಯಸ್ಥಾಪನೆಮಾಡಿದ ವಿಷಯವನ್ನೂ ಅಲ್ಲಿಂದ ಈಚೆಗೆ ಪೂರ್ಣಯ್ಯನವರು, ಅನಂತರದಲ್ಲಿ ಶ್ರೀಮನ್ಮಹಾರಾಜರವರು, ಅವರ ದಿವಾನರುಗಳು, ಈಚೆಗೆ ಇಂಗ್ಲಿಷ್ ಜನಗಳು, ಇವರುಗಳ ರಾಜ್ಯಭಾರದಲ್ಲಿ ನಡೆದ ಏರ್ಪಾಡುಗಳನ್ನೂ ಹಿಂದೆ ಹೇಳಿದೆಯಷ್ಟೆ. ಅದು ಮೊದಲುಗೊಂಡು ರಾಜ್ಯಭಾರದಲ್ಲಿ ನಡೆದ ಮುಖ್ಯಾಂಶಗಳು ಸಂಕ್ಷೇಪವಾಗಿ ತಿಳಿಸಲ್ಪಡುವವು.

ಈಸ್ಟ್ ಇಂಡಿಯಾ ಕಂಪೆನಿಯವರು ಟೀಪೂಸುಲ್ತಾನನ ಮರಣಾನಂತರ ಮೂರರಲ್ಲಿ ಒಂದು ಭಾಗವನ್ನು ಶ್ರೀಮನ್ಮಹಾರಾಜರವರಿಗೆ ಕೊಟ್ಟರಷ್ಟೆ. ಆ ಕಾಲದಲ್ಲಿ ಶ್ರೀಮನ್ಮಹಾರಾಜರವರು ಬಹಳ ಚಿಕ್ಕ ವಯಸ್ಸಿನವರಾಗಿದ್ದರು. ೧೮೧೧ನೇ ಇಸವಿಯವರೆಗೂ ಪೂರ್ಣಯ್ಯನವರು ದಿವಾನಗಿರಿಯನ್ನು ಮಾಡುತ್ತಾ, ಸಾಧ್ಯವಾದಮಟ್ಟಿಗೂ ಚೆನ್ನಾಗಿಯೇ ರಾಜ್ಯವನ್ನು ಪರಿಪಾಲಿಸುತ್ತಿದ್ದರು. ಆದರೆ ಪೂರ್ಣಯ್ಯನವರೇ ಆಗಲಿ, ಅಥವಾ ಈಸ್ಟ್ ಇಂಡಿಯಾ ಕಂಪೆನಿಯವರೇ ಆಗಲಿ, ಶ್ರೀಮನ್ಮಹಾರಾಜರವರಿಗೆ ರಾಜ್ಯಭಾರಕ್ಕೆ ಅವಶ್ಯಕವಾದ ವಿದ್ಯಾಭ್ಯಾಸಗಳನ್ನು ಮಾಡಿಸಲಿಲ್ಲ. ರಾಜ್ಯಭಾರದಲ್ಲಿ ಯಾವ ಆಕ್ಷೇಪಣೆಗಳೂ ಇಲ್ಲದೆ ಅಡೆತಗಳನ್ನು ನಡಿಸಿಕೊಂಡು ಬಂದರೆ ತಾವು ಕೃತಕೃತ್ಯರಾದೆವೆಂದು ತಿಳಿದುಕೊಂಡು, ಪೂರ್ಣಯ್ಯನವರು ರಾಜ್ಯಭಾರವನ್ನು ನಡಿಸುತ್ತಿದ್ದರು. ತಮ್ಮ ಪಗದೀ ಹಣವು ಸರಿಯಾಗಿ ಬಂದರೆ ಸಾಕೆಂದು ಈಸ್ಟ್ ಇಂಡಿಯಾ ಕಂಪೆನಿಯವರು ಶ್ರೀಮನ್ಮಹಾರಾಜರವರ ವಿದ್ಯಾಭ್ಯಾಸ ವಿಷಯದಲ್ಲಿ ಉದಾಸೀನರಾಗಿದ್ದರು.

ಅನಂತರದಲ್ಲಿ ಶ್ರೀಮನ್ಮಹಾರಾಜರವರು ರಾಜ್ಯಪರಿಪಾಲನೆ ಮಾಡುವ ಕಾಲದಲ್ಲಿ ಪರಿ[illegible] ಸೇರಿದ ಕೆಲವು ದುಷ್ಟ ಅಧಿಕಾರಿಗಳ ನಾನಾವಿಧವಾದ ಹಿಂಸೆಗಳನ್ನು ತಾಳಲಾರದೆ, ಮಂಜರಾಬಾದು, ನಗರ ಮುಂತಾದ ಪ್ರದೇಶಗಳಲ್ಲಿ ಜನಗಳು ಹಂಗಾಮು ಮಾಡಿದರು. ದೇಶದಲ್ಲಿ ತಪಬಂದಿ ತಪ್ಪುವದಕ್ಕೆ ಕಾರಣವಾಯಿತು. ಈ ಕಾಲದಲ್ಲಿ ದೇಶವನ್ನು ತಪಬಂದಿಗೆ ತಂದು ಶ್ರೀಮನ್ಮಹಾರಾಜರಿಗೆ ಒಪ್ಪಿಸುತ್ತೇವೆಂದು, ಈಸ್ಟ್ ಇಂಡಿಯಾ ಕಂಪೆನಿಯವರು ರಾಜ್ಯವನ್ನು ಆಕ್ರಮಿಸಿಕೊಂಡರು. ರಾಜ್ಯಪರಿಪಾಲನೆ ಮಾಡುವದಕ್ಕೆ ಒಬ್ಬ ಚೀಫ್ ಕಮಿಷನರನ್ನು ನೇಮಿಸಿದರು. ಇಂಗ್ಲಿಷ್ ಜನಗಳು ಮೈಸೂರು ಅಧಿಕಾರವನ್ನು ವಹಿಸತಕ್ಕ ಕಾಲದಲ್ಲಿ, ಕೆಲವು ಜನ ದೊಡ್ಡಮನುಷ್ಯರು ರಾಜ್ಯವನ್ನು ಅವರಿಗೆ ಕೊಡತಕ್ಕ ಕಲಸವಿಲ್ಲವೆಂತಲೂ, ತಾವು ಅವರೊಡನೆ ಯುದ್ಧಮಾಡಿ ಓಡಿಸಿ ಬಿಡುತ್ತೇವೆಂತಲೂ ಧೊರೆಗಳಿಗೆ ಅರಿಕೆ ಮಾಡಿಕೊಂಡರು. ಶ್ರೀಮನ್ಮಹಾರಾಜರವರು ಇದು ಅನುಚಿತವಾದದ್ದೆಂದು ತಿಳಿದುಕೊಂಡು, ವಿನಯಪೂರ್ವಕವಾಗಿಯೇ ರಾಜ್ಯವನ್ನು ಇಂಗ್ಲಿಷರ ಸ್ವಾಧೀನಮಾಡಿದರು. ಸರ್ ಮಾರ್ಕ್ ಕಬ್ಬನ್ ಸಾಹೇಬರವರು ಕಮಿಷನರಾಗಿದ್ದ ಕೆಲವು ವರ್ಷಗಳೊಳಗೆ ರಾಜ್ಯವು ಸಂಪೂರ್ಣವಾಗಿ ತಪಬಂದಿಗೆ ಬಂತು.

ಶ್ರೀಮನ್ಮಹಾರಾಜರವರು ರಾಜ್ಯವನ್ನು ವಾಪಸು ಕೊಡಬೇಕೆಂಬದಾಗಿ ಕೇಳುವದಕ್ಕೂ ಉಪಕ್ರಮ ಮಾಡಿದರು. ಈಸ್ಟ್ ಇಂಡಿಯಾ ಕಂಪೆನಿಯವರು ಕಾಲಹರಣ ಮಾಡುತ್ತಲೇ ಬಂದರು. ಸರ್ ಮಾರ್ಕ್ ಕಬ್ಬನ್ ಸಾಹೇಬರವರು ಮೈಸೂರು ರಾಜ್ಯಭಾರವು ಒಳ್ಳೆ ಧರ್ಮದಿಂದ ನಡೆಯುವಂತೆ ಅನೇಕ ಒಳ್ಳೇ ಏರ್ಪಾಡುಗಳನ್ನು ಮಾಡಿದರು. ಶ್ರೀಮನ್ಮಹಾರಾಜರವರು ರಾಜ್ಯಭಾರವನ್ನು ತಮಗೆ ವಾಪಸು ಕೊಡಬೇಕೆಂದು ೩೫ನೇ ಇಸವಿಯಿಂದ ೬೧ನೇ ಇಸವಿಯವರಿಗೂ ಅನೇಕ ಪತ್ರಿಕೆಗಳನ್ನು ಬರೆದುಕೊಂಡರು. ಈಸ್ಟ್ ಇಂಡಿಯಾ ಕಂಪೆನಿಯವರು ಇವುಗಳಲ್ಲಿ ಯಾವದಕ್ಕೂ ಸದುತ್ತರವನ್ನು ಕೊಡಲಿಲ್ಲ. ೧೮೬೧ನೇ ಇಸವಿಯಲ್ಲಿ ಸರ್ ಮಾರ್ಕ್ ಕಬ್ಬನ್ ಸಾಹೇಬರವರು ವಿಲಾಯಿತಿಗೆಹೋಗುವದಕ್ಕೋಸ್ಕರ ಕಮಿಷನರ್ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟರು. ಇವರು ಇರುವ ವರಿಗೂ ರಾಜ್ಯಭಾರವು

ಇಂಗ್ಲಿಷ್ ಜನಗಳದಾಗಿದ್ದಾಗ್ಯೂ ರಾಜ್ಯಭಾರದ ಖರ್ಚುಗಳು ಕಡಮೆಯಾಗಿದ್ದವು; ರಾಜ್ಯದ ಖಜಾನೆಯು ತುಂಬಿತ್ತು. ಇದರ ಅನಂತರ ಮಿಸ್ಟರ್ ಬೌರಿಂಗ್ ಸಾಹೇಬರವರು ಕಮಿಷನರಾಗಿ ಬಂದರು. ಇವರು ಅನೇಕ ಹೊಸ ಏರ್ಪಾಡುಗಳನ್ನು ಮಾಡಿ, ಅನೇಕ ಇಲಾಖೆಗಳನ್ನು ಕಲ್ಪಿಸಿ, ದೊಡ್ಡ ಅಧಿಕಾರಗಳಿಗೆಲ್ಲಾ ಯೂರೋಪಿಯನರನ್ನು ತಂದಿಟ್ಟು, ಅವರಿಗೆಲ್ಲಾ ದೊಡ್ಡ ಸಂಬಳಗಳನ್ನು ಮಾಡಿ, ಖಜಾನೆ ಬರಿದಾಗುವದಕ್ಕೆ ತಕ್ಕ ಅನೇಕ ಪ್ರಯತ್ನಗಳನ್ನು ಮಾಡಿದರು. ಅದರಿಂದೀಚೆಗೆ ಬಂದ ಮಿಸ್ಟರ್ ಸಾಂಡರ್ಸ್ ಸಾಹೇಬರವರ ಕಾಲದಲ್ಲಿ ಕ್ಷಾಮವು ಬಂತು. ಜನಗಳಿಗೆ ಉಪಕಾರ ಮಾಡುತ್ತೇವೆಂದು ಖಜಾನೆಯಲ್ಲಿದ್ದ ೮೦ ಲಕ್ಷ ರೂಪಾಯಿಗಳ ಜೊತೆಗೆ ಇನ್ನೂ ೮೦ ಲಕ್ಷ ರೂಪಾಯಿಗಳ ಸಾಲವನ್ನು ಮಾಡಿ, ರಿಲೀಫ್ ಕಿಚ್ನ್‌ಗಳನ್ನು ಅಂದರೆ ಕ್ಷಾಮದ ನಿವಾರಣಾರ್ಥವಾದ ಅನ್ನಸತ್ರಗಳನ್ನು ಏರ್ಪಾಡು ಮಾಡಿದರು. ಇವುಗಳಿಗೆ ಹೋದ ಅನಾಥರಲ್ಲಿ ಲಕ್ಷಾಂತರ ಜನಗಳು ಸರಿಯಾದ ಪೋಷಣೆಯಿಲ್ಲದೆ ಮೃತರಾದರು.

ಶ್ರೀಮನ್ಮಹಾರಾಜರವರು ಪುತ್ರ ಸ್ವೀಕಾರ ಮಾಡಿಕೊಳ್ಳದೇ ಇದ್ದರೆ, ಈ ರಾಜ್ಯವು ನಿರುಪಾಧಿಕ ಸರ್ವಮಾನ್ಯವಾಗಿ ಸಿಕ್ಕುವದೆಂದು ಕೆಲವು ಜನ ಯೂರೋಪಿಯನರು ನಿರೀಕ್ಷಿಸಿಕೊಂಡಿದ್ದರು. ಆದರೆ ಶ್ರೀಮನ್ಮಹಾರಾಜರವರು ಪುತ್ರ ಸ್ವೀಕಾರವನ್ನು ಮಾಡಿಕೊಂಡು, ಅನಂತರದಲ್ಲಿ ಇಂಡಿಯಾ ಗವರ್ನ್‌ಮೆಂಟಿಗೆ ತಿಳಿಸಿದರು. ಈ ಸ್ವೀಕಾರವನ್ನು ಮಂಜೂರಾಗದಹಾಗೆ ಮಾಡಬೇಕೆಂದು ಕೆಲವರು ಪ್ರಯತ್ನ ಮಾಡಿದರು. ಆದಾಗ್ಯೂ ನಿಸ್ಪೃಹರಾದ ಅನೇಕ ದೊಡ್ಡ ಮನುಷ್ಯರು ಶ್ರೀಮನ್ಮಹಾರಾಜರವರು ಮಾಡಿಕೊಂಡ ಸ್ವೀಕಾರವು ಸಿದ್ಧವಾದದ್ದೆಂದು ನಿಷ್ಕರ್ಷೆ ಮಾಡಿಸಿದರು. ಶ್ರೀಮನ್ಮಹಾರಾಜರವರಿಗೆ ತಾವು ಬದುಕಿರುವಾಗಲೇ ಪುನಃ ರಾಜ್ಯಭಾರವನ್ನು ಹೊಂದಬೇಕೆಂದು ಬಹಳ ಅಭಿಲಾಷೆಯಿತ್ತು. ಈ ಅಭಿಲಾಷೆಯು ನೆರವೇರತಕ್ಕೆ ಪ್ರಯತ್ನವನ್ನು ಮಾಡುತ್ತೇವೆಂದು ಹೇಳಿ ಕೆಲವು ಜನಗಳು ಬಹಳ ದ್ರವ್ಯವಂತರಾದರು. ರಾಜ್ಯಭಾರವನ್ನು ಪುನಃ ಹೊಂದುವದಕ್ಕೆ ಮಾಡಿದ ಪ್ರಯತ್ನಗಳೆಲ್ಲಾ ಸಾಗುವದಕ್ಕೆ ಮುಂಚೆಯೇ, ಶ್ರೀಮನ್ಮಹಾ

ರಾಜ ಕೃಷ್ಣರಾಜ ಒಡೆಯರವರು ೧೮೬೮ನೇ ಇಸವಿಯಲ್ಲಿ ಭಗ್ನ ಮನೋರಥರಾಗಿ ಸ್ವರ್ಗಸೋಪಾನವನ್ನು ಏರಿದರು. ಆಗ ಇಂಡಿಯಾ ಗವರ್ನ್ಮೆಂಟಿನವರು, ರಾಜ್ಯಭಾರವನ್ನು ಶ್ರೀಕೃಷ್ಣರಾಜ ಒಡೆಯರವರ ಪುತ್ರರಾದ ಚಾಮರಾಜೇಂದ್ರ ಒಡೆಯರವರಿಗೇ ಕೊಡುತ್ತೇವೆಂಬದಾಗಿ ಈ ರಾಜ್ಯದಲ್ಲಿ ಪ್ರಕಟನೆಯನ್ನು ಮಾಡಿಸಿದರು. ಕೂಡಲೆ, ಶ್ರೀಮನ್ಮಹಾರಾಜರವರಿಗೆ ರಾಜ್ಯಭಾರ ಮಾಡುವದಕ್ಕೆ ಅನುಕೂಲವಾದ ವಿದ್ಯಾಭ್ಯಾಸವನ್ನು ಮಾಡಿಸುವದಕ್ಕೋಸ್ಕರ ತಕ್ಕ ಏರ್ಪಾಡುಗಳನ್ನು ಮಾಡಿದರು. ಕರ್ನಲ್ ಮ್ಯಾಲಿರ್ಸ ಸಾಹೇಬರವರು, ಸರ್ ಜೇಮಸ್ ಗಾರ್ಡನ್ ಸಾಹೇಬರವರು, ಮೇಜರ್ ವಿಲಿರ್ಸ ಸಾಹೇಬರವರು, ಮಿಸ್ಟರ್ ಪೋರ್ಟರ್ ಸಾಹೇಬರವರು, ಮ ರಾ॥ ಜಯರಾಮ ರಾಯರವರು, ಮ॥ ರಾ॥ ರಂಗಾಚಾರ್ಯರವರು, ಮ॥ ನರಸಿಂಹ ಅಯ್ಯಂಗಾರ್ಯರವರು, ಇವರೆಲ್ಲರೂ ಶ್ರೀಮನ್ಮಹಾರಾಜರವರಿಗೆ ವಿದ್ಯಾಭ್ಯಾಸ ಮಾಡಿಸುವದರಲ್ಲಿ ಅತ್ಯಂತ ಉತ್ಸಾಹ ಶಾಲಿಗಳಾಗಿದ್ದರು. ರಂಗಾಚಾರ್ಯರವರು ಶ್ರೀಮನ್ಮಹಾರಾಜರವರಿಗೆ ಸದ್ವಿದ್ಯಾಭ್ಯಾಸವನ್ನು ಮಾಡಿಸುತ್ತಾ ಬಂದದ್ದಲ್ಲದೆ ರಾಜನೀತಿ ಮುಂತಾದ ರಾಜ್ಯಪರಿಪಾಲನೆಗೆ ಸಾಧಕಗಳಾದ ವಿದ್ಯೆಗಳನ್ನೂ ಅಭ್ಯಾಸಮಾಡಿಸುವದಕ್ಕೆ ತಕ್ಕ ಏರ್ಪಾಡುಗಳನ್ನೆಲ್ಲಾ ಮಾಡಿ, ಅರಮನೆಯ ಆಡಳಿತಗಳನ್ನೆಲ್ಲಾ ಸ್ವಲ್ಪವೂ ನ್ಯೂನತೆಯಿಲ್ಲದಂತೆ ನೋಡಿಕೊಳ್ಳುತ್ತಿದ್ದರು. ಇವರೇ ಮೊದಲದಿವಾನರಾಗಿ ನೇಮಿಸಲ್ಪಟ್ಟು ಪ್ರಜಾಕ್ಷೇಮಕ್ಕೆ ಅನುಕೂಲವಾದ ಪ್ರಜಾಪ್ರತಿನಿಧಿಸಭೆ ಮುಂತಾದ ಅನೇಕ ಏರ್ಪಾಡುಗಳನ್ನು ಕಲ್ಪಿಸಿ ಬಹು ಕೀರ್ತಿಯನ್ನು ಸಂಪಾದಿಸಿದರು.

ISRT